21, 22
19, 20

SATYANVESHANA TRUST
102, 2nd 'A' Cross,
Near N.E.T. School, Gavipuram Extn,
BANGALORE South - 560 019. Karnataka

4-

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾನ್ತ ರತ್ನಮಾಲಾ
ದ್ವಿತೀಯ ರತ್ನವು—ಹನ್ನೊಂದನೆಯ ಸಂಚಿಕೆಯು

ಶ್ರೀಮನ್ನಿಗಮಾನ್ತ ಮಹಾದೇಶಿಕಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಗತಿಚಿನ್ತನಾಧಿಕಾರ ಏಕವಿಂಶಃ.

ಪರಿಪೂರ್ಣ ಬ್ರಹ್ಮಾನುಭವಾಧಿಕಾರೋ ದ್ವಾವಿಂಶಃ.

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡು ಸರ್ಕಲ್ ಇನ್ಸ್ಪೆಕ್ಟರು
ಸಿ. ಯಮ್. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ
ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ

೧೯೩೫

ಕ್ರಯ ೧೨ ಆಣೆಗಳು

ಶ್ರಿಯೈ ನಮಃ

ಶ್ರೀನಿವಾಸಾಯ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಶ್ರೀಮನ್ನಿಗಮಾನ್ತ ಮಹಾದೇಶಿಕ ವಿರಚಿತ

ಶ್ರೀಮದ್ರಹಸ್ಯತ್ರಯಸಾರೇ

ಗತಿಚಿನ್ತನಾಧಿಕಾರಃ. ೨೧

ಜ್ವಲನ ದಿವಸ ಜ್ಯೋತ್ಸ್ನಾ ಪಕ್ಷೋತ್ತರಾಯಣ ವತ್ಸರಾನ್ ।
ಪವನ ತಪನ ಪ್ರಾಲೇಯಾಂಶೂನ್ಕ್ರಮಾದ ಚಿರದ್ಯುತಿನ್ ॥

ಹಿಂದಿನ ಅಧಿಕಾರದಲ್ಲಿ ಪ್ರಪನ್ನನು ದಿವ್ಯ ವೈಕುಂಠಯಾತ್ರೆಗೆ ಉಪಕ್ರಮದಲ್ಲಿ ಮಾಡಿಕೊಳ್ಳುವ, ದೇಹದೊಳಗೇನೇ ಇರುವಾಗ ನಡೆಯುವ ಏರ್ಪಾಡುಗಳು ತಿಳಿಸಲ್ಪಟ್ಟವು. ಈ ಅಧಿಕಾರದಲ್ಲಿ ಆತನು ತನ್ನ ಸ್ಥೂಲದೇಹವನ್ನು ಬಿಟ್ಟು ಪರಮಪದಕ್ಕೆ ಹೋಗುವ ಮಾರ್ಗವು ಯಾವುದೆಂಬುದೂ, ಆ ಮಾರ್ಗವನ್ನು ತೋರಿಸತಕ್ಕವರು ಯಾರು, ಅವರುಗಳಿಂದ ಉಂಟಾಗುವ ಸತ್ಕಾರಗಳು ಯಾವುವು ಎಂಬುದು ಉಪದೇಶಿಸಲ್ಪಡುತ್ತವೆ. ಈ ಮಾರ್ಗಕ್ಕೆ ಅರ್ಚಿರಾದಿ ಮಾರ್ಗವೆಂದೂ ದೇವಯಾನವೆಂದೂ ಹೆಸರು. ಗೀತೆಯಲ್ಲಿ ಇದಕ್ಕೆ ಶುಕ್ಲಗತಿ ಎಂಬ ಹೆಸರು ಕೊಡಲ್ಪಟ್ಟಿರುತ್ತದೆ. ಈ ಮಾರ್ಗದಲ್ಲಿ ಅಗ್ನಿ ಅಹಸ್ಸು ಮೊದಲಾದ ಹನ್ನೆರಡು ಅಭಿಮಾನ ದೇವತೆಗಳು ಸರ್ವೇಶ್ವರನಿಂದ ನಿಯಮಿಸಲ್ಪಟ್ಟಿರುತ್ತಾರೆ. ಇವರುಗಳಿಗೆ ಆತಿವಾಹಿಕ ದೇವತೆಗಳೆಂದು ಹೆಸರು. ಪ್ರಪನ್ನನಾದವನು ತನಗೆ ಹೀಗೆ ಪ್ರಾಪ್ತವಾಗುವ ಸದ್ಗತಿಯನ್ನೂ, ಆತನು ಹೋಗುವ ಮಾರ್ಗದ ಅನುಸಂಧಾನದುಪಯೋಗವನ್ನೂ, ಈ

ಜಲಧ (ಚ) ರಪತಿಂ ದೇವಾಧೀಶಂ ಪ್ರಜಾಪತಿ ಮಾಗತ ।
ಸ್ತರತಿ ವಿರಜಾಂ ದೂರೇವಾಚ ಸ್ತತಃ ಪರಮದ್ಭುತಂ ॥೪೬॥

ಅಧಿಕಾರದಲ್ಲಿ ಹೇಳುವದರಿಂದ ಇದಕ್ಕೆ ಗತಿಚಿಂತನಾಧಿಕಾರವೆಂಬ ಹೆಸರು. ಆದರೆ ಸಾರಪ್ರಕಾಶಿಕಾ ವ್ಯಾಖ್ಯಾತೃಗಳಾದ ಭಾರದ್ವಾಜ ಶ್ರೀನಿವಾಸಾಚಾರ್ಯರು ಮಾತ್ರ ಗತಿವಿಶೇಷಾಧಿಕಾರವೆಂದು ಹೇಳಿರುತ್ತಾರೆ. ಏಕೆಂದರೆ ನಾಲ್ಕು ವ್ಯಾಖ್ಯಾನಗಳಿಂದ ಶ್ರೀ ಭಾಷ್ಯಂ ಶ್ರೀನಿವಾಸಾಚಾರ್ಯರ ಸಾರದೀಪಿಕೆಯಲ್ಲೂ, ಶ್ರೀಮದ್ಗೋಪಾಲ ಮಹಾದೇಶಿಕರ ಉತ್ತರ ಸಾರಾಸ್ವಾದಿನಿಯಲ್ಲೂ, ಶ್ರೀಶೈಲ ಶ್ರೀನಿವಾಸಾಚಾರ್ಯರ ಸಾರವಿವರಣೆಯಲ್ಲೂ, ಶ್ರೀ ಪರಕಾಲ ಸಂಯಮೀಂದ್ರರ ಸಾರಪ್ರಕಾಶಿಕೆಯಲ್ಲೂ ಗತಿಚಿಂತನಾಧಿಕಾರವೆಂಬ ಪ್ರಯೋಗವೇ ಇದೆ.

ಅರ್ಥ :— ಜ್ವಲನ - ಅಗ್ನಿ, **ದಿವಸ** - ಅಹಸ್ಸು, **ಜ್ಯೋತ್ಸ್ನಾ ಪಕ್ಷ** - ಬೆಳದಿಂಗಳಿರುವ ಪಕ್ಷ ಎಂದರೆ ಶುಕ್ಲಪಕ್ಷ, **ಉತ್ತರಾಯಣ, ವತ್ಸರಾನ್** - ಸಂವತ್ಸರಗಳನ್ನು, **ಪವನ** - ವಾಯು, **ತಪನ** - ಸೂರ್ಯನು, **ಪ್ರಾಲೇಯಾಂಶು** - ಹಿಮಾಂಶವು, ಚಂದ್ರನು, ಇವರುಗಳನ್ನು, **ಕ್ರಮಾತ್** - ಕ್ರಮವಾಗಿ, ಎಂದರೆ ಮೇಲೆ ಹೇಳಿದ ಕ್ರಮದಿಂದ ಎಂಬರ್ಥವು, **ಅಚಿರದ್ಯುತಿಮ್** - ಕ್ಷಣಕಾಲದ ತೇಜಸ್ಸು ಎಂಬುದರಿಂದ ವಿದ್ಯುತ್ತನ್ನು, **ಜಲಧರಪತಿಂ** - ಮೇಘಗಳಿಗೆ ಪತಿಯಾದ ವರುಣನನ್ನು, **ದೇವಾಧೀಶಮ್**- ದೇವತೆಗಳಿಗೆ ಸ್ವಾಮಿಯಾದ ಇಂದ್ರನನ್ನು, **ಪ್ರಜಾಪತಿಂ** - ಬ್ರಹ್ಮನನ್ನೂ ಕುರಿತು, **ಆಗತಃ** - ಬರಮಾಡಿಕೊಳ್ಳಲ್ಪಟ್ಟವನಾಗಿ, **ವಿರಜಾಂ** - ವಿರಜೆಯೆಂಬ ನದಿಯನ್ನು, **ತರತಿ** - ದಾಟುತ್ತಾನೆ, ದಾಟುವನು ಎಂಬರ್ಥವು, **ತತಃಪರಂ**-ಆ ವಿರಜೆಯ ಆಚೆಗೆ ಅಥವಾ ವಿರಜೆಯನ್ನು ಸ್ನಾನಮಾಡಿ ದಾಟಿದ ನಂತರ, **ಅದ್ಭುತಂ**-ಅತ್ಯಾಶ್ಚರ್ಯಕರವಾದುದು ದಿವ್ಯವೈಕುಂಠವು, **ವಾಚಃ** - ವಾಕ್ಕಿಗೆ, **ದೂರೇ** - ದೂರವಾಗಿರತಕ್ಕದ್ದು, ಭವತಿ ಎಂದು ಇಲ್ಲಿ ಕ್ರಿಯಾಪದವನ್ನಿಟ್ಟುಕೊಳ್ಳಬಹುದು. ಅದರ ಮಹಿಮೆಯನ್ನು ವರ್ಣಿಸಲು ವಾಕ್ಕಿಗೂ ಕೂಡ ಸಾಧ್ಯವಲ್ಲವು ಎಂಬರ್ಥವು. ಅಥವಾ **ವಾಚಃ ದೂರೇ** - ವಾಕ್ಕಿಗೂ ಕೂಡ ದೂರವಾಗುವ ಹಾಗೆ, **ಅದ್ಭುತಂ** - ಅತ್ಯಾಶ್ಚರ್ಯರೂಪ ಪದವಾದ ಪರಮಾತ್ಮನನ್ನು. ಇಲ್ಲಿಯೂ ತರತಿ ಎಂಬ ಕ್ರಿಯಾಪದವನ್ನು ಇಟ್ಟುಕೊಂಡು, ಹೊಂದುವನೆಂಬರ್ಥವನ್ನು ಮಾಡಬಹುದು ಇಲ್ಲಿ ಈ ಅಭಿಮಾನ ದೇವತೆಗಳಿಂದ ಮಾರ್ಗ ತೋರಿಸಲ್ಪಟ್ಟವನಾಗಿ ಮತ್ತು ಸತ್ಕರಿಸಲ್ಪಟ್ಟವನಾಗಿ, ವಿರಜೆಯನ್ನು ದಾಟಿ ಅತ್ಯದ್ಭುತವಾದ ವೈಕುಂಠವನ್ನು ಸೇರುವನು ಎಂಬರ್ಥವು.

ತಾತ್ಪರ್ಯ:—ಸುಷುಮ್ನಾ ನಾಡಿಯನ್ನು ಪ್ರವೇಶಿಸಿ ಸ್ಥೂಲ ದೇಹತ್ಯಾಗ ಮಾಡಿದ ನಂತರ ಈ ಪ್ರಪನ್ನನಿಗೆ ಪ್ರಾಪ್ತವಾಗುವ ಅರ್ಚಿರಾದಿ ಗತಿಯ ಮತ್ತು ಆ ಮಾರ್ಗದಲ್ಲಿ ನಿಯಮಿಸಲ್ಪಟ್ಟಿರುವ ಹನ್ನೆರಡು ಜನ ಆತಿವಾಹಿಕರಲ್ಲಿ ಪ್ರತಿಯೊಬ್ಬನೂ ಈತನನ್ನು ಬರಮಾಡಿಕೊಂಡು ಆತನನ್ನು ಸತ್ಕರಿಸಿ ತನ್ನ ಎಲ್ಲೆಯವರೆಗೂ ಕರೆದುಕೊಂಡು ಹೋಗಿ ಬಿಡುವ, ಪ್ರಕಾರವನ್ನು ತಿಳಿಸುತ್ತಾರೆ.

ಈ ಮೇಲಿನ ಮಾರ್ಗವು ಪ್ರಪನ್ನರಿಗೆ ಮಾತ್ರವೇ ವಿನಾ, ಪುನರ್ಜನ್ಮವನ್ನು ಹೊಂದುವವರಿಗಲ್ಲವು ಇವರುಗಳು ಮಿಕ್ಕ ನೂರು ನಾಡಿಗಳಲ್ಲಿ ಯಾವುದಾದರೂ ಒಂದನ್ನು ಸರ್ವೇಶ್ವರ ಸಂಕಲ್ಪಾನುಸಾರ ಪ್ರವೇಶಿಸಿ, ಧೂಮಾದಿ ಮಾರ್ಗವನ್ನು ಹೊಂದಿ ಪುನರ್ಜನ್ಮವನ್ನು ಎತ್ತುವರು ಇದರ ಕ್ರಮವು ಛಾಂದೋಗ್ಯಾದಿ ಶ್ರುತಿಗಳಲ್ಲಿ ಉಪಪಾದಿತವಾಗಿರುತ್ತದೆ ಇದು ಈಗ ಪ್ರಕೃತನಲ್ಲವು.

ಈ ಅರ್ಚಿರಾದಿ ಗತಿ ರೂಪವಾದ ಮಾರ್ಗವೇನು ಎಲ್ಲಾ ಪ್ರಪನ್ನರಿಗೂ ಒಂದೆಯೋ ಅಥವಾ ಅನೇಕವಿದೆಯೋ ಎಂಬ ಚರ್ಚೆಯಲ್ಲಿ, ಅರ್ಚಿರಾದಿನಾ ತತ್ಪ್ರಥಿತೇಃ ಎಂಬ ಸೂತ್ರದಲ್ಲಿ, ವ್ಯಾಸಮಹರ್ಷಿಯು, ಎಲ್ಲಾ ಪ್ರಪನ್ನರಿಗೂ ಅರ್ಚಿರಾದಿ ರೂಪ ರಾಜಮಾರ್ಗವು ಒಂದೇ ಎಂದು ಸಿದ್ಧಾಂತಿಸಿರುತ್ತಾರೆ. ಪುರಾಣಾದಿಗಳಲ್ಲಿ ಬೇರೆ ಮಾರ್ಗಗಳು ಹೇಳಿರಬಹುದು. ಸರ್ವ ಶ್ರುತಿಗಳೂ ಅರ್ಚಿರಾದಿ ಮಾರ್ಗವನ್ನೇ ಬೋಧಿಸುವದರಿಂದ ಪ್ರಪನ್ನರಿಗೆಲ್ಲಾ ಮಾರ್ಗ ಒಂದೇ ಎಂಬಭಿಪ್ರಾಯವು. ಎರಡನೆಯ ವಿಷಯದಲ್ಲಿ ನಾವು ಗ್ರಹಿಸತಕ್ಕದ್ದೇನೆಂದರೆ:—ಈ ಹನ್ನೆರಡು ಅಭಿಮಾನಿ ದೇವತೆಗಳೇನು, ಅವರವರುಗಳ ಸ್ಥಳದಲ್ಲಿ ನಿಂತಿದ್ದು, ದೊಡ್ಡಮನುಷ್ಯನ ಮೋಟಾರ್ ಕಾರ್ ಬಂದಾಗ ಕೈ ತೋರಿಸಿ ಮಾರ್ಗ ತೋರಿಸುವ ಪೋಲೀಸಿನವರ ಹಾಗೆಯೇ ಎಂದರೆ, ಹಾಗಲ್ಲವು. ಈ ದಿವ್ಯ ವೈಕುಂಠ ಯಾತ್ರೆಯನ್ನು ಹೊಂದಲು ಶ್ರಿಯಃಪತಿಯಿಂದಾಜ್ಞಪ್ತರಾಗಿರುವದರಿಂದ, ಇಂತಹ ಪ್ರಪನ್ನರನ್ನು ಎದುರುಗೊಂಡು ಬಂದು ಸತ್ಕರಿಸಿ ತಮ್ಮ ಎಲ್ಲೆಯವರೆಗೂ ಕರೆದುಕೊಂಡುಹೋಗಿ ಬಿಟ್ಟು ಮುಂದಿನ ಆತಿವಾಹಿಕದೇವತೆಯಿಂದ ಬರಮಾಡಿಕೊಳ್ಳಲ್ಪಡುವರೆಂಬ ಭಾವವು. ಈ ಅಭಿಪ್ರಾಯವು "ಆತಿವಾಹಿಕಾಸ್ತಲ್ಲಿಙ್ಗಾತ್" ಎಂಬ ಸೂತ್ರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. "ಆತಿವಾಹಕ" ಶಬ್ದವೇ ಕರೆದುಕೊಂಡು ಹೋಗುವವರೆಂಬರ್ಥವನ್ನು ಸೂಚಿಸುತ್ತದೆ. ಈ ಆತಿವಾಹಕರಲ್ಲಿ ವೈದ್ಯುತನನ್ನೇ ಶ್ರುತಿಯಲ್ಲಿ "ಸ ಏನಾನ್ ಬ್ರಹ್ಮಗಮಯತಿ" ಎಂದು ಹೇಳಿರುವದರಿಂದ ವೈದ್ಯುತ ನೆಂಬ ಅಮಾನವನು ಪರಬ್ರಹ್ಮನಲ್ಲಿಗೆ ಕರೆದುಕೊಂಡು ಹೋಗುವನು. ವೈದ್ಯುತನಾದಮೇಲೆ ಇರುವ ವರುಣ, ಇಂದ್ರ, ಪ್ರಜಾಪತಿಗಳಾದರೋ ಅನುಗ್ರಾಹಕರಾಗಿ ಅವರು ಆತಿವಾಹಕರಲ್ಲೇ ಸೇರಿದವರೆಂದು ತಿಳಿಯತಕ್ಕದ್ದು.

೩. ಮೂರನೆಯ ವಿಷಯವೇನೆಂದರೆ, ಈ ಆತಿವಾಹಿಕರು ಇರುವ ಕ್ರಮ ಹೇಗೆ? ಯಾರಾದ ನಂತರ ಯಾರು? ಎಂಬುದು.'

ಈ ಕ್ರಮವನ್ನು ಬೋಧಿಸುವ ಮುಖ್ಯ ಶ್ರುತಿಗಳು ಯಾವುವೆಂದರೆ :—

೧. ಛಾಂದೋಗ್ಯ (೪. ೧೫. ೫. ೬). "ಅಥ ಯದು ಚಾಸ್ಮಿಂ ಚ್ಛವ್ಯಂ ಕುರ್ವನ್ತಿ, ಯದು ಚ ನ, ಶೇರ್ಚಿಷಮೇವಾಭಿ ಸಮ್ಭವನ್ತಿ, ಅರ್ಚಿಷೋಽಹ ರಹ್ನ ಆಪೂರ್ಯಮಾಣ ಪಕ್ಷ, ಮಾಪೂರ್ಯಮಾಣ ಪಕ್ಷಾದ್ಯಾನ್ ಷಡುದ ಙ್ಙೇತಿ ಮಾಸಾಂಸ್ತಾನ್, ಮಾಸೇಭ್ಯ ಸ್ಸಂವತ್ಸರಂ, ಸಂವತ್ಸರಾದಾದಿತ್ಯ, ಮಾದಿತ್ಯಾಚ್ಚನ್ದ್ರಮಸಂ, ಚನ್ದ್ರಮಸೋ ವಿದ್ಯುತಂ, ತತ್ಪುರುಷೋಽ ಮಾನವ, ಸ್ಸ ಏನಾನ್ ಬ್ರಹ್ಮಗಮಯತ್ಯೇಷದೇವ ಪಥೋ ಬ್ರಹ್ಮಪಥಃ, ಏತೇನ ಪ್ರತಿಪದ್ಯಮಾನಾ ಇಮಂ ಮಾನವ ಮಾವರ್ತಂ ನಾವರ್ತನ್ತೇ ನಾವರ್ತನ್ತೇ" ಇದರ ಅರ್ಥವೇನೆಂದರೆ:— "ಬ್ರಹ್ಮವಿತ್ತಿನ ವಿಷಯದಲ್ಲಿ ಪುತ್ರರು ಪ್ರೇತಕಾರ್ಯವನ್ನು ಮಾಡಿದರೂ ಸರಿಯೇ, ಬಿಟ್ಟರೂ ಸರಿಯೇ, ಅಂತವರು ಮೊದಲು ಅರ್ಚಿ ಎಂದರೆ ಅಗ್ನ್ಯಭಿಮಾನ ದೇವತೆಯಾದ ಆತಿ ವಾಹಕನನ್ನು ಹೊಂದುತ್ತಾರೆ ಆತನು ಬಂದು ಸನ್ಮಾನಿಸಿ ಈತನನ್ನು ಕರೆದು ಕೊಂಡು ಹೋಗುವನು. ಅರ್ಚಿಸ್ಸಿನಿಂದ ಅಹಸ್ಸಿನಭಿಮಾನದೇವತೆಯನ್ನೂ, ಅಹಸ್ಸಿನಿಂದ ಶುಕ್ಲಪಕ್ಷಾಭಿಮಾನ ದೇವತೆಯನ್ನೂ, ಅಲ್ಲಿಂದ ಉತ್ತರಾಯಣಾಭಿ ಮಾನ ದೇವತೆಯನ್ನೂ, ಅಲ್ಲಿಂದ ಸಂವತ್ಸರಾಭಿಮಾನ ದೇವತೆಯನ್ನೂ, ಅಲ್ಲಿಂದ ಆದಿತ್ಯನನ್ನೂ, ಆದಿತ್ಯನಿಂದ ಚಂದ್ರನನ್ನೂ, ಚಂದ್ರನಿಂದ ವಿದ್ಯುತ್ತನ್ನೂ, ಹೀಗೆ ಈ ಅಭಿಮಾನ ದೇವತೆಗಳನ್ನು ಹೊಂದುವನು. ಇಂತಹ ಅಮಾನವನೆಂದು ಹೇಳಿಸಿಕೊಳ್ಳುವ ಆತಿವಾಹಕನು ಬ್ರಹ್ಮವಿತ್ತಿಗೆ ಮಾರ್ಗ ತೋರಿಸಿ ಪರಬ್ರಹ್ಮನ ಹತ್ತಿರಕ್ಕೆ ಕರೆದುಕೊಂಡು ಹೋಗುವನು. ಇದೇ ದೇವಯಾನವು. ಇದೇ ಅವ ರುಗಳು ತಮ್ಮ ತಮ್ಮ ಸರಹದ್ದಿನಲ್ಲಿ ಕರೆದುಕೊಂಡು ಹೋಗುವ ಮಾರ್ಗವು. ಈ ಮಾರ್ಗದಲ್ಲಿ ಬಂದವರು ಘಟೀ ಯಂತ್ರದ ಹಾಗೆ ಸುತ್ತುವ ಜನನ ಮರಣಾದಿ ಗಳಿಗೆ ಕಾರಣಭೂತವಾದ ಮನುಷ್ಯಾದಿ ಶರೀರರೂಪ ಸಂಸಾರಚಕ್ರವನ್ನು ಪುನಃ ಹೊಂದುವದಿಲ್ಲವು." ಇಲ್ಲಿ ಹನ್ನೆರಡರಲ್ಲಿ ಕೆಲವು ಕ್ರಮವಾಗಿ ಹೇಳಲ್ಪಟ್ಟು ಮಿಕ್ಕವು ಹೇಳಲ್ಪಡಲಿಲ್ಲವು.

೨. ಹಾಗೆಯೇ ಕೌಷೀತಕೀಯಲ್ಲಿ "ಸ ಏತಂ ದೇವಯಾನಂ ಪನ್ಥಾನಮಾ ಪದ್ಯಾಗ್ನಿಲೋಕ ಮಾಗಚ್ಛತಿ, ಸವಾಯುಲೋಕಂ, ಸವರುಣಲೋಕಂ, ಸ ಆದಿತ್ಯಲೋಕಂ, ಸ ಇಂದ್ರಲೋಕಂ, ಸ ಪ್ರಜಾಪತಿಲೋಕಂ" (೧.೩.) ಆ ಬ್ರಹ್ಮವಿತ್ತಾದವನು ಈ ದೇವಯಾನ ಮಾರ್ಗವನ್ನವಲಂಬಿಸಿ, ಅಗ್ನಿಲೋಕ, ಹಾಗೆಯೇ ವಾಯುಲೋಕ, ಆದಿತ್ಯಲೋಕ, ಇಂದ್ರಲೋಕ, ಚತುರ್ಮುಖ

ಲೋಕ, ಅನಂತರ ಪರಬ್ರಹ್ಮಲೋಕವಾದ ವೈಕುಂಠವನ್ನು ಹೊಂದುವನು ಎಂದು ಹೇಳಿರುತ್ತದೆ. ಇಲ್ಲಿ ಅರ್ಚಿಯನ್ನು ಹೇಳಿ, ಅಹಸ್ಸು, ಶುಕ್ಲಪಕ್ಷ, ಉತ್ತರಾಯಣಾದಿಗಳನ್ನು ಹೇಳದೆ, ಅನಂತರ ವಾಯು, ವರುಣ, ಆದಿತ್ಯ, ಇಂದ್ರ, ಚತುರ್ಮುಖ ಬ್ರಹ್ಮಲೋಕಗಳನ್ನು ಮಾತ್ರ ಹೇಳಿರುತ್ತದೆ. ಇಲ್ಲಿಂದ ಬದರಿಕಾಶ್ರಮಕ್ಕೆ ಮಾರ್ಗ ಹೇಗೆ ಎಂದರೆ ಮಧ್ಯೆ ಹನ್ನೆರಡು ಪಟ್ಟಣಗಳಿದ್ದರೆ, ಅವುಗಳಲ್ಲಿ ಕೆಲವನ್ನು ಹೇಳಿದಹಾಗೆ ಈ ಉಪನಿಷತ್ತು ತಿಳಿಸುತ್ತದೆ.

೩. ಹಾಗೆಯೇ ಬೃಹದಾರಣ್ಯಕದಲ್ಲಿ "**ಯ ಏವ ಮೇತ ದ್ವಿದುರ್ಯೇಚೇಮೇಽರಣ್ಯೇ ಶ್ರದ್ಧಾಂ ಸತ್ಯಮುಪಾಸತೇ, ತೇಽರ್ಚಿಷಮಭಿಸಂಭವನ್ತಿ, ಅರ್ಚಿಷೋಽಹ, ರಹ್ನ ಆಪೂರ್ಯಮಾಣ ಪಕ್ಷ, ಮಾಪೂರ್ಯಮಾಣ ಪಕ್ಷಾದ್ಯಾನ್ ಷಣ್ಮಾಸಾನುದಙ್ಙಾದಿತ್ಯ ಏತಿ ಮಾಸಾನ್, ಮಾಸೇಭ್ಯೋ ದೇವಲೋಕಂ, ದೇವಲೋಕಾದಾದಿತ್ಯ ಮಾದಿತ್ಯಾದ್ವೈದ್ಯುತಂ ವೈದ್ಯುತಾತ್ಪುರುಷೋಽಮಾನವ ಸ ಏತ್ಯ ಬ್ರಹ್ಮಲೋಕಾನ್ ಗಮಯತಿ**" (ಬೃ. ಅ. ೨. ೧೫) ಇದು ಪಂಚಾಗ್ನಿ ವಿದ್ಯೆಯ ಪ್ರಕರಣವು. **ಯೇ** - ಯಾರು, **ಏವಂ** - ಈ ಪ್ರಕಾರವಾಗಿ ಎಂದರೆ ದ್ಯು, ಪರ್ಜನ್ಯ, ಏತಲ್ಲೋಕ, ಪುರುಷ, ಯೋಷಿತ್, ರೂಪದ ಪಂಚಾಗ್ನಿಗಳಲ್ಲಿ ಶ್ರದ್ಧಾ, ಸೋಮ, ವೃಷ್ಟಿ, ಅನ್ನ, ರೇತಸ್ಸು, ಸಂಬಂಧದಿಂದ ಸಂಚರಿಸುತ್ತಿರುವ ಜೀವಾತ್ಮನು ಪರಬ್ರಹ್ಮನನ್ನೇ ಆತ್ಮಾವಾಗಿ ಉಳ್ಳವನೆಂದು ಯಾವ ಪಂಚಾಗ್ನಿನಿಷ್ಠರು ತಿಳಿಯುವರೋ ಮತ್ತು ಯಾರು ಅರಣ್ಯದಲ್ಲಿರುವವರಾಗಿ ಶ್ರದ್ಧಾಪುರಸ್ಸರವಾಗಿ, ಸತ್ಯಶಬ್ದವಾಚ್ಯನಾದ ಪರಮಾತ್ಮನನ್ನು ಹೀಗೆಂದು ತಿಳಿದು ಉಪಾಸನೆ ಮಾಡುತ್ತಾರೋ, ಇವರಿಬ್ಬರೂ ಕೊನೆಗೆ ಅರ್ಚ್ಯಭಿಮಾನ ದೇವತೆಯನ್ನು ಹೊಂದುವರು, ಅಲ್ಲಿಂದ ಅಹಸ್ಸು, ಶುಕ್ಲಪಕ್ಷ, ಅಲ್ಲಿಂದ ಉತ್ತರಾಯಣ, ಅಲ್ಲಿಂದ ವಾಯುಲೋಕ, ಆದಿತ್ಯ, ಚಂದ್ರದ್ವಾರಾ ವೈದ್ಯುತ, ಹೀಗೆ ಅಮಾನವನಿಂದ ಪರಬ್ರಹ್ಮನನ್ನು ಹೊಂದುವನು" ಇಲ್ಲಿಯೂ ಕೆಲವು ಹೇಳಲ್ಪಟ್ಟು ಕೆಲವು ಹೇಳಲ್ಪಡಲಿಲ್ಲವು.

ಹೀಗಿರುವದರಿಂದ ಕ್ರಮವನ್ನು ನಿರ್ಧರಿಸುವದರಲ್ಲಿ ಅನೇಕ ಪೂರ್ವಪಕ್ಷಗಳುಂಟಾಗುತ್ತವೆ. ಅವುಗಳನ್ನೆಲ್ಲಾ ಖಂಡಿಸಿ, ಶ್ರೀ ಭಾಷ್ಯದ ನಾಲ್ಕನೆಯ ಅಧ್ಯಾಯದ ಮೂರನೆಯ ಪಾದದಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಅದನ್ನನುಸರಿಸಿ ಸ್ವಾಮಿ ನಿಗಮಾಂತ ದೇಶಿಕರವರು ಕ್ರಮವನ್ನು ಈ ಶ್ಲೋಕದಲ್ಲಿ ತೋರಿಸಿರುತ್ತಾರೆ. ಈ ಶ್ಲೋಕವನ್ನು ಜ್ಞಾಪಕದಲ್ಲಿಟ್ಟರೆ ಗತಿಚಿಂತನ ಕ್ರಮವು ತೋರಿಬರುತ್ತವೆ. ಈ ಮಾರ್ಗಕ್ರಮವನ್ನೇ ಶ್ರೀ ವಾತ್ಸ್ಯವರದ ದೇಶಿಕರವರನುಗ್ರಹಿಸಿರುವ ಪರಮಾರ್ಥಸ್ತುತಿಯ ಶ್ಲೋಕದಿಂದಲೂ ತಿಳಿಯಬಹುದು. ಅದು ಯಾವುದೆಂದರೆ:-

ಮುಕ್ತೋಽರ್ಚಿರ್ದಿನ ಪೂರ್ವ ಪಕ್ಷ ಷಡುದಙ್ಮಾಸಾಬ್ದ ವಾತಾಂಶುಮತ್ ।
ಗ್ಲೌವಿದ್ಯುದ್ವರುಣೇಂದ್ರ ಧಾತೃ ಮಹಿತಸ್ಸೀಮಾನ್ತ ಸಿನ್ಧ್ವಾಪ್ಲುತಃ ॥

ಮುಕ್ತನು ಹೋಗುವ ಮಾರ್ಗವು; ಅರ್ಚಿ, ದಿನ ಪೂರ್ವಪಕ್ಷ ಎಂದರೆ ಶುಕ್ಲಪಕ್ಷ, ಷಡುದಙ್ಮಾಸವೆಂಬುದರಿಂದ ಉತ್ತರಾಯಣ, ಅಬ್ದವೆಂಬುವದರಿಂದ ಸಂವತ್ಸರ, ವಾತವೆಂದರೆ ವಾಯು, ಅಂಶುಮತ್ ಸೂರ್ಯನು, ಗ್ಲೌ ಚಂದ್ರನು, ವಿದ್ಯುತ್, ವರುಣ, ಇಂದ್ರ, ಧಾತೃ ಎಂಬುದರಿಂದ ಬ್ರಹ್ಮಾ, ಹೀಗೆ ಹನ್ನೆರಡು ಆತಿವಾಹಿಕರ ಮೂಲಕ ಹೋಗುವನು ಎಂದೂ ಅಲ್ಲಿಂದ ವಿರಜೆಯಲ್ಲಿ ಸ್ನಾನಮಾಡಿ, ಮುಂದೆ,

"ಶ್ರೀ ವೈಕುಂಠ ಮುಪೇತ್ಯ ನಿತ್ಯಮಜಡಂ ತಸ್ಮಿನ್ಪರಬ್ರಹ್ಮಣಃ ।
ಸಾಯುಜ್ಯಂ ಸಮವಾಪ್ಯನನ್ದತಿ ಸಮಂ ತೇನೈವ ಧನ್ಯಃಪುಮಾನ್ ॥"

ಎಂದು ಉತ್ತರಾರ್ಧವಿರುತ್ತದೆ. ಶ್ರೀ ವರದ ಮಿಶ್ರರ ಶ್ಲೋಕವಾದ,

"ಅರ್ಚಿ ರಹಸ್ಸಿತ ಪಕ್ಷಾನುದಗಯನಾಬ್ದ ಮರುದರ್ಕೇನ್ದೂನ್ ।
ಅಪಿವೈದ್ಯುತ ವರುಣೇಂದ್ರ ಪ್ರಜಾಪತೀ ನಾತಿವಾಹಿಕಾನಾಹುಃ ॥"

ಎಂಬುದೂ ಈ ಶ್ಲೋಕವನ್ನೇ ಸಮರ್ಥಿಸುತ್ತದೆ.

ಈ ಪ್ರಪನ್ನನು ಬ್ರಹ್ಮನಾಡಿಯನ್ನು ಪ್ರವೇಶಿಸುವಾಗಲೂ ಇಂದ್ರಿಯಗಳು, ಮನಸ್ಸು, ಪ್ರಾಣ, ಭೂತಸೂಕ್ಷ್ಮ, ಇವುಗಳೊಂದಿಗೆ ಸೂಕ್ಷ್ಮದೇಹದಲ್ಲಿ ಸ್ಥೂಲ ದೇಹವನ್ನು ಬಿಟ್ಟುಬರುವನೆಂದು ಹೇಳಲ್ಪಟ್ಟಿತು. ಈ ಸೂಕ್ಷ್ಮ ಪ್ರಕೃತಿ ದೇಹವನ್ನು ಎಲ್ಲಿ ಬಿಡುವನು ಎಂಬ ಪ್ರಶ್ನೆಗೆ ವಿರಜಾ ನದಿಯಲ್ಲಿ ಅವಗಾಹನೆಯಿಂದ ಈ ಸೂಕ್ಷ್ಮದೇಹ ಪರಿತ್ಯಾಗವೆಂದು ಮುಂದೆ ಅಧಿಕಾರೋಪಪಾದನೆಯಲ್ಲಿ ತಿಳಿಸುತ್ತಾರೆ.

ಅರ್ಚಿರಾದಿಗತಿಯು—೧೨ ಆತಿವಾಹಿಕರು.

ಮುಂದೆ ಈ ದೇವಯಾನ ಅಥವಾ ಅರ್ಚಿರಾದಿ ಗತಿಯನ್ನು ಒಂದು ದೊಡ್ಡ ವಾಕ್ಯದ ಮೂಲಕ ತಿಳಿಸುತ್ತಾರೆ ಮೊದಲು **ಪುರಪ್ಪಟ್ಟು** ಎಂಬುದರವರೆಗೂ ಹಿಂದಿನಧಿಕಾರಾರ್ಥವನ್ನು ಒಂದು ದೃಷ್ಟಾಂತ ಮೂಲಕ ಸಂಗ್ರಹಿಸಿ ತಿಳಿಸುತ್ತಾರೆ ಇಪ್ಪಡಿ - ಹೀಗೆ ಎಂದರೆ ಹಿಂದಿನ ಅಧಿಕಾರದಲ್ಲಿ ತಿಳಿಸಿದ ಹಾಗೆ, **ಮೂರ್ಧನ್ಯ ನಾಡಿಯಿಲೆ** - ಹೃದಯದ ಮಧ್ಯದಲ್ಲಿರುವ ೧೦೧ನೆಯ ನಾಡಿಯಲ್ಲಿ. **ಪ್ರವೇಶಿತ್ತಾನ** - ಪ್ರವೇಶಿಸಲ್ಪಟ್ಟವನಾದ, **ಮುಮುಕ್ಷುವೈ** - ಮೋಕ್ಷಾರ್ಥಿಯನ್ನು ಇಲ್ಲಿ ಪ್ರಪನ್ನನನ್ನು ಎಂಬರ್ಥವು, **ಸೂಲ ಶರೀರಮಾಗಿರ** - ಸ್ಥೂಲಶರೀರವೆಂದೆನಿಸುವ, **ಬ್ರಹ್ಮಪುರತ್ತಿಲ್ ನಿನ್ರು** - ವೇದದಲ್ಲಿ ಬ್ರಹ್ಮಪುರವೆಂದು ಹೇಳಿಸಿಕೊಳ್ಳುವ

ಅರ್ಚಿರಾದಿ ಗತಿಃ, ಆತಿವಾಹಿಕ ನಿರೂಪಣಂಚ.

(೧) ಇಪ್ಪಡಿ ಮೂರ್ಧನ್ಯನಾಡಿಯಿಲೆ ಪ್ರವೇಶಿತನಾನ ಮುಮುಕ್ಷುವೈ ಸ್ಥೂಲಶರೀರಮಾಗಿರ ಬ್ರಹ್ಮಪುರತ್ತಿಲ್ ನಿನ್ರುಮ್ ಬ್ರಹ್ಮನಾಡಿಯಾಗಿರ ತಲೈವಾಶಲಾಲೇ ವತ್ಸಲನಾನ ಹಾರ್ದ್ದ, ವಾರ್ತ್ತೈ ಶೊಲ್ಲಕ್ಕರ್ಕಿರ ಮುಖವಶ್ಯನಾನ (ಮುಗ್ಧನಾನ) ರಾಜಕುಮಾರನೈ ರಾಜಾ ಎಡುತ್ತುಕ್ಕೊಣ್ಡು ಉಲಾವುಮಾಪ್ಪೋಲೆ ಕೊಂಡು ಪುರಪ್ಪಟ್ಟು,

---

ಆತನ ದೇಹದಿಂದ, **ಬ್ರಹ್ಮನಾಡಿಯಾಗಿರ** - ಬ್ರಹ್ಮನಾಡಿ ಎಂದೆನಿಸುವ, **ತಲೈವಾಶಲಾಲೇ**-ಮುಖ್ಯವಾದ ಬಾಗಲು ಮೂಲಕವಾಗಿ, **ವತ್ಸಲನಾನ ಹಾರ್ದ್ದ**-ಅಂತಹ ಪ್ರಪನ್ನನಲ್ಲಿ ವಿಶೇಷ ವಾತ್ಸಲ್ಯವನ್ನು ಹೊಂದಿರುವ ಹೃದಯಗುಹೆಯಲ್ಲಿರುವ ಸರ್ವೇಶ್ವರನು, ಇದು ಮುಂದೆ ಬರುವ ಅನೇಕ ಕೃದ್ವಾಚಿಗಳಿಗೆಲ್ಲಾ ಕರ್ತೃಪದವು, ಇಷ್ಟು ದಿವಸವೂ ತನ್ನನ್ನಗಲಿ ಇದ್ದು, ಈಗ ತನ್ನಲ್ಲಿ ಶರಣಾಗತನಾಗಿ ಪುನಃ ಬಂದು ಸೇರಿದವನಾದುದರಿಂದ ಆತನಲ್ಲಿ ತುಂಬಾ ವಾತ್ಸಲ್ಯವನ್ನು ತೋರಿ ಏನೇನು ಉಪಕಾರಗಳನ್ನು ಮಾಡುತ್ತಾನೆ ಅಥವಾ ಮಾಡಿಸುತ್ತಾನೆಂಬುದನ್ನು ಈ ಕೃದ್ವಾಚಿಗಳ ಮೂಲಕ ಉಪದೇಶಿಸುತ್ತಾರೆ ; ಆದುದರಿಂದ **ಈ ಹಾರ್ದ್ದ** ಎಂಬುವದು, (೧) ಪುರಪ್ಪಟ್ಟು, (೨) ವಳಿಪ್ಪಡುತ್ತಿ, (೩) ನಡತ್ತಿ, (೪) ಅನುಭವಿಪ್ಪಿತ್ತು, (೫) ಪೋಗವಿಡುವಿತ್ತು, (೬) ಅಕ್ಕರೈಪಡುತ್ತಿ, (೭) ಕೊಡುತ್ತು, (೮) ಶೇರ್ತ್ತು, (೯) ಕಿಟ್ಟುವಿತ್ತು, (೧೦) ಎದಿರ್ಕೊಳ್ವಿತ್ತು, (೧೧) ಅಲಂಕರಿಪ್ಪಿತ್ತು, (೧೨) ಪ್ರವೇಶಿಪ್ಪಿತ್ತು, (೧೩) ಕುರುಕುವಿತ್ತು, (೧೪) ಕಿಟ್ಟುವಿತ್ತು, (೧೫) ಪಣ್ಣುವಿತ್ತು, (೧೬) ಪುಕುರವಿಟ್ಟು, (೧೭) ಕಾಟ್ಟಿ; (೧೮) ಕೊಂಡು, (೧೯) ಇರುತ್ತಿ, (೨೦) ಯಿರುಕ್ಕುಮ್, ಎಂಬ ಇವುಗಳಿಗೆಲ್ಲಾ ಕರ್ತೃಪದವು ; **ವಾರ್ತ್ತೈ ಶೊಲ್ಲಕ್ಕರ್ಕಿರ** - ಈಗತಾನೇ ಮಾತುಗಳನ್ನು ಕಲಿಯುತ್ತಾ ಮುದ್ದು ಮಾತುಗಳನ್ನಾಡುವ, **ಮುಖವಶ್ಯನಾನ** - ಸರ್ವಲಾವಣ್ಯಯುಕ್ತ ಮುಖದಿಂದ ತಂದೆಯಾದ ರಾಜನನ್ನೂ ಮತ್ತು ಇತರರನ್ನೂ ಸಹ ವಶ ಮಾಡಿಕೊಳ್ಳುವ ಯೋಗ್ಯತೆಯುಳ್ಳ, **ರಾಜಕುಮಾರನೈ** - ರಾಜಕುಮಾರನನ್ನು, **ರಾಜಾ** - ತಂದೆಯಾದ ರಾಜನು, **ಎಡುತ್ತುಕ್ಕೊಂಡು** - ಎತ್ತಿಕೊಂಡು, **ಉಲಾವುಮಾಪ್ಪೋಲ್** - ಹೇಗೆ ಪ್ರೀತಿಯಿಂದ ಸುತ್ತುತ್ತಾ ಆಡಿಸುವನೋ, **ಕೊಂಡು ಪುರಪ್ಪಟ್ಟು**-ಹಾಗೆ ಆತನನ್ನು ಕರೆದುಕೊಂಡು ಹೊರಟು ಬಂದು ; ಈ ವಾಕ್ಯದಲ್ಲಿ ಮೂರ್ಧನ್ಯ

ನಾಡಿಯೇ ಬೇರೆ, ಬ್ರಹ್ಮನಾಡಿಯೇ ಬೇರೆ, ಎಂದು ಭಾವಿಸತಕ್ಕದ್ದಲ್ಲವು; ಈ ನಾಡಿಗೆ ಮೂರ್ಧನ್ಯ ನಾಡಿ ಎಂಬ ಹೆಸರು ಏತಕ್ಕೆಂಬುದರುಪಪಾದನವಾಗಿ, ಈ ದೇಹವೇ ಬ್ರಹ್ಮಪುರವೆಂದೂ, ಪರಬ್ರಹ್ಮನ ಹತ್ತಿರಕ್ಕೆ ಕರೆದುಕೊಂಡುಹೋಗುವ ಹೆಬ್ಬಾಗಿಲಾಗಿ ಭಾವಿಸತಕ್ಕದ್ದೆಂದೂ ಹೇಳಿರುತ್ತಾರೆ. ಪರಮಭಾಗವತನಾಗಿ, ತನ್ನ ಪಾದ ಕಮಲವನ್ನಾಶ್ರಯಿಸಿದವನಾಗಿರುವ ಚೇತನನು ಇದುವರೆಗೂ ಬರದೆ ಈಗ ಪ್ರಥಮತಃ ತನ್ನ ಪಟ್ಟಣವಾದ ದಿವ್ಯ ವೈಕುಂಠವನ್ನು ಕುರಿತು ಬಂದರೆ ಆತನಿಗೆ ಸುಸ್ವಾಗತವನ್ನು ಕೊಟ್ಟು ಕರೆದುಕೊಂಡು ತನ್ನ ಅರಮನೆಗೆ ಬರಮಾಡಿಕೊಳ್ಳುವದು ಯುಕ್ತವಾದ ಮರ್ಯಾದೆಯಾದುದರಿಂದ ಅದರ ಹೆಬ್ಬಾಗಲಾದ ಬ್ರಹ್ಮನಾಡಿಯಲ್ಲಿದ್ದು ಆತನನ್ನು ತನ್ನ ವೈಕುಂಠಕ್ಕೆ ಕರೆದುಕೊಂಡುಹೋಗುವ ತನ್ನ ಕಡೆಯುವರಾದ ಅತಿವಾಹಕರಿಗೆ ಆಜ್ಞಾಪಿಸಿ ಕರೆದುಕೊಂಡುಹೋಗುವನೆಂದು ಭಾವಿಸಬಹುದು. ಅಥವಾ ಈತನ ಸ್ಥೂಲಶರೀರದ ದಹರಕುಹರದಲ್ಲಿದ್ದನು. ಇನ್ನು ಆ ಸ್ಥೂಲಶರೀರವು ಪ್ರೇತವಾಗುವದರಿಂದ ಇನ್ನು ಅಲ್ಲಿ ಹಾರ್ದನಾಗಿರುವ ಆವಶ್ಯಕತೆಯಿಲ್ಲದುದರಿಂದ ಆತನೊಂದಿಗೆ ತಾನೂ ಹೊರಟು, ತನ್ನ ಪ್ರಿಯನಾಗಿ ಜೊತೆಯಲ್ಲಿಯೇ ಇದ್ದ ಈ ಪ್ರಿಯಮಿತ್ರನಿಗೆ ಮಾರ್ಗ ತೋರಿಸುವವನಾಗಿ ಈ ಬ್ರಹ್ಮನಾಡಿ ಎಂಬ ಹೆಬ್ಬಾಗಲನ್ನು ತೋಜೋಮಯವಾಗಿ ಮಾಡಿ ಪ್ರವೇಶಿಸುವ ಹಾಗೆ ಮಾಡುವನೆಂದಾಗಲಿ ತಲೈವಾಶಲ್ ಎಂದು ಹೇಳಲ್ಪಟ್ಟಿತೆಂದು ಭಾವಿಸಬಹುದು ; ಅಥವಾ ಅರ್ಚಿರಾದಿನಾ ತತ್ಪ್ರಥಿತೇಃ ಎಂಬ ಸೂತ್ರದಲ್ಲಿ ಹೇಳಿರುವ ಹಾಗೆ ಪ್ರಪನ್ನರಿಗೆಲ್ಲಾ ಅರ್ಚಿರಾದಿ ಗತಿಯು ಒಂದೇ ಎಂದೂ ಬೋಧಿಸುವದಕ್ಕಾಗಿಯಾಗಲಿ, ಆ ರಾಜಮಾರ್ಗಪ್ರವೇಶಕ್ಕಾಗಿ ಇದೊಂದೇ ಮುಖ್ಯವಾದ ಬಾಗಲೆಂದು ತಲೈವಾಶಲೆಂದು ಹೇಳಲ್ಪಟ್ಟಿತು. ಇಲ್ಲಿ ಸ್ಥೂಲಶರೀರವನ್ನು ಬ್ರಹ್ಮಪುರವೆಂದು ಹೇಳಿರುವದು ಏತಕ್ಕೆಂದರೆ, ದಹರವಿದ್ಯೋಪಕ್ರಮದಲ್ಲಿ ಶ್ರುತಿಯು, "ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ" ಎಂದು ಹೇಳಿರುವದರಿಂದ ತತ್ಜ್ಞಾಪಕಾರ್ಥವಾಗಿ ಎಂದು ತಿಳಿಯತಕ್ಕದ್ದು. ಅಪ್ಪಗುಣ ವಿಭವೈಶ್ವರ್ಯಾದಿಗಳಿಂದ ಪರತ್ವಮಹತ್ವಗಳನ್ನು ಹೊಂದಿದವನು, ಇಷ್ಟುದಿನವೂ ನಿಕೃಷ್ಟದೆಶೆಯಲ್ಲಿ ಬಿದ್ದವನನ್ನು ಹೀಗೆ ತಾನೇ ಸತ್ಕರಿಸಿ ಕರೆದುಕೊಂಡುಹೋಗುವನೋ ಎಂಬ ಸಂಶಯನಿವೃತ್ತಿಗಾಗಿ ವತ್ಸಲನಾನ ಹಾರ್ದನ್ ಎಂಬ ಪ್ರಯೋಗವು. ದೋಷಯುಕ್ತವಾದ ಶರೀರವನ್ನು ಹೊಂದಿರುವ ವತ್ಸ ಎಂದರೆ ಕರುವಿನಲ್ಲೂ ಕೂಡ ಧೇನುವಿಗೆ ಹೇಗೆ ವಿಶೇಷ ಮಮತೆಯೋ ಹಾಗೆ. ತನ್ನನ್ನಾಶ್ರಯಿಸಿದ ನಂತರ ಆತನಲ್ಲಿ ದೋಷಗಳನ್ನು ಪರಿಗಣಿಸದೆ ಪ್ರೀತಿ ತೋರಿಸಿ ರಕ್ಷಿಸುವ ಗುಣವುಳ್ಳವನು. "ಯಥೈವ ಧೇನುಸ್ಸ್ರವತಿ ಸ್ನೇಹಾದ್ವತ್ಸಸ್ಯ ವತ್ಸಲಾ"

(೨) ೧. "ಮನ್ನವ್ ಕಡುಮ್ ಕತಿರೋನ್ಮಣ್ಡಲತ್ತಿ ನನ್ನಿಡುವುಳ್ ಅನ್ನದೋರಿಲ್ಲಿಯಿನೂಡು ಪೋಯ್" ಎನ್ರುಮ್, ೨. "ತೇರಾರ್ ನಿರೈ

ಕರುವಿನಲ್ಲಿರುವ ಪ್ರೀತಿಯಿಂದ ಧೇನುವು ತನ್ನ ಕರುವಿನಲ್ಲಿ ವಾತ್ಸಲ್ಯವುಳ್ಳದ್ದಾಗಿ ಹೇಗೆ ಹಾಲನ್ನು ಸ್ರವಿಸುತ್ತದೋ, ಹಾಗೆಯೇ ಸರ್ವೇಶ್ವರನು ತನ್ನ ಕುಮಾರನಾದ ಈ ಚೇತನನಲ್ಲಿರುವ ಪರಮವಾತ್ಸಲ್ಯದಿಂದ ಈ ಮುಂದೆ ಹೇಳಿರುವ ೧೯ ವಿಧವಾದ ಉಪಕಾರಗಳನ್ನೆಲ್ಲಾ ಸುರಿಸುವನು. ಧೇನುವು ಹಾಲನ್ನು ಸುರಿಸುವ ಹಾಗೆ ನಮಗೆ ಅಮೃತವನ್ನು ವರ್ಷಿಸುವನು ಎಂಬರ್ಥವು.

ಹೀಗೆ ವಾತ್ಸಲ್ಯವನ್ನು ಪ್ರದರ್ಶಿಸುವದಕ್ಕಾಗಿ, ಹಿಂದೆ ಉಪೋದ್ಘಾತದಲ್ಲಿ ಉಪಪಾದಿಸಲ್ಪಟ್ಟ ನಿದರ್ಶನವನ್ನೇ ಇಲ್ಲಿಯೂ ಉಪಪಾದಿಸುತ್ತಾರೆ. ಅಲ್ಲಿ ರಾಜಕುಮಾರನು ರಾಜನ ವಿಹಾರ ಕಾಲದಲ್ಲಿ ರಾಜನನ್ನು ಇನ್ನು ಮಾತು ಬರುವದಕ್ಕೆ ಮುಂಚೆಯೇ ಬಿಟ್ಟಗಲಿದ್ದನೆಂದು ಹೇಳಲ್ಪಟ್ಟಿತು. ಈಗ ಆ ತನ್ನ ಬಾಲನೇ ಸ್ವಲ್ಪ ಮಾತು ಕಲಿಯುವ ದೆಶೆಯಲ್ಲಿ ದೈವವಶಾತ್ ತನ್ನಲ್ಲಿಗೆ ಪರಮಗುರು ಕೃಪಾ ಪ್ರಭಾವದಿಂದ ಬಂದಿರುತ್ತಾನೆ. ಹಿಂದೆ ಸರ್ವಾತ್ಮನಾ ಜ್ಞಾನವಿಲ್ಲದ ದೆಶೆಯು ಹೇಳಲ್ಪಟ್ಟಿತು. ಈಗ ಗುರುಗಳು ದಾದಿಮಾರುಗಳ ಹಾಗೆ ಸ್ವಲ್ಪ ಜ್ಞಾನಕೊಟ್ಟು ಒಂದೆರಡು ಮಾತನ್ನು ಕಲಿಸಿರುತ್ತಾರೆ. ಅಂತಹ ಸರ್ವಲಾವಣ್ಯಯುಕ್ತ ಮುಗ್ಧ ಬಾಲನಾಗಿಯೂ ತನ್ನ ಹಾಗೆಯೇ ಗುಣಾಷ್ಟಕಗಳಿಂದ ಕಂಗೊಳಿಸುತ್ತಲೂ ಇರುವ ರಾಜಕುಮಾರನನ್ನು ಕಂಡರೆ ರಾಜನು ಮೋಹಗೊಂಡು ಎತ್ತಿ ಲಾಲಿಸುವ ತೆರದಿ, ಸರ್ವೇಶ್ವರನೂ ಈ ಚೇತನನನ್ನು ತಾನೂ ಸತ್ಕರಿಸಿ, ತನ್ನ ಕಡೆಯುವರನ್ನೂ ಸತ್ಕರಿಸಿ ಕರೆದುಕೊಂಡು ಹೋಗುವ ಹಾಗೆ ಆಜ್ಞಾಪಿಸಿ, ತನ್ನ ಅರಮನೆಯಲ್ಲೇ ಅನಂತರ ಸರ್ವಾನಂದವನ್ನು ನಿರಂತರವಾಗಿ ಅನುಭವಿಸುವ ಹಾಗೆ ಮಾಡುವನೆಂಬ ತಾತ್ಪರ್ಯವು.

ಅಲ್ಲಿಂದ ಮುಂದಕ್ಕೆ ಅರ್ಚಿರಾದಿ ಗತಿಯನ್ನು ಹೊಂದುವನೆಂದು ಹೇಳಲು ಹೊರಟು, ಆ ಗತಿಯ ವಿಷಯದಲ್ಲಿ ಆಳ್ವಾರುಗಳ ದಿವ್ಯಸೂಕ್ತಿಗಳನ್ನು ಉದಾಹರಿಸುತ್ತಾರೆ:—"ಮನ್ನವ್ - ಬಹುಕಾಲ ಸ್ಥಾಯಿಯಾಗಿ, ಕಡು - ತೀಕ್ಷ್ಣವಾದ, ಗದಿರೋನ್ - ಕಿರಣಗಳುಳ್ಳ ಸೂರ್ಯನ, ಮಣ್ಡಲತ್ತಿನ್ - ಮಂಡಲದ, ನನ್ನಡುವುಳ್ - ಒಳ್ಳೇ ಮಧ್ಯದಲ್ಲಿ ಎಂದರೆ ಸರಿಯಾದ ಮಧ್ಯದಲ್ಲಿ, ಅನ್ನದು- ಪ್ರಸಿದ್ಧವಾದ, ಶ್ರೇಷ್ಠವಾದ, ಓರ್ - ಅದ್ವಿತೀಯವಾದ, ಇಲ್ಲಿಯರ್—ರಂಧ್ರದ,

---

(೧) ಪೆರಿಯ ತಿರುಮಡಲ್ ೧೬. (೨) ಶಿರಿಯ ತಿರುಮಡಲ್ ೭.

ಕದಿರೋರ್ ಮಂಡಲತ್ತೈ ಕೀಣ್ಡು ಪುಕ್ಕು" ಎನ್ರುವರ್, ೩ "ಶಣ್ಡ ಮಣ್ಡಲತ್ತಿನೂಡು ಶೆನ್ರು" ಎನ್ರುವರ್, ೪. "ಇರಳ ತ್ತು ನೆರಿ ಕದಿರೋರ್

ಊಡು - ಮಧ್ಯದಲ್ಲಿ, ಪೋಯ್ - ಹೋಗಿ," ಎನ್ರುವರ್-ಎಂಬದಾಗಿಯೂ, ಇದರಿಂದ ಅರ್ಚಿರಾದಿ ಗತಿಯಲ್ಲಿ ಹೋಗುವವನು ಸೂರ್ಯಮಂಡಲವನ್ನು ಹೊಂದಿ ಅಲ್ಲಿ ಸೂರ್ಯಾಭಿಮಾನ ದೇವತೆಯಿಂದ ಸತ್ಕರಿಸಲ್ಪಟ್ಟು, ಆತನಿಂದ ತೋರಿಸಲ್ಪಟ್ಟ ಒಂದು ರಂಧ್ರದ ಮೂಲಕ ತೆರಳುವನೆಂಬ ಭಾವವು. "ಸ ಆದಿತ್ಯಮಾಗಚ್ಛತಿ, ತಸ್ಮೈ ಸ ತತ್ರ ವಿಜಿಹೀತೇ ಯಥಾಡಂಬರಸ್ಯಖಂ, ತೇನ ಸ ಊರ್ಧ್ವಮಾಕ್ರಮತೇ" ಎನ್ನುವ ಬೃಹದಾರಣ್ಯಕ ಶ್ರುತ್ಯರ್ಥವು ಇಲ್ಲಿ ಹೇಳಲ್ಪಟ್ಟಿತು, (ಬೃ. ೭. ೧೦. ೧) ಈ ಬ್ರಹ್ಮವಿತ್ತು ವಾಯುಲೋಕವನ್ನು ಬಿಟ್ಟು ಆದಿತ್ಯಲೋಕವನ್ನು ಹೊಂದುವನು, ಆಗ ಬ್ರಹ್ಮವಿತ್ತಿಗೆ ಈ ಆದಿತ್ಯನು, ಆಡಂಬರವೆಂಬ ವಾದ್ಯವಿಶೇಷದಲ್ಲಿರುವ ರಂಧ್ರದಷ್ಟು ಇರುವ ದ್ವಾರವನ್ನು ಮಾಡಿಕೊಡುವನು" ಎಂಬುದು ಇವರರ್ಥವು. (೨) "ತೇರ್ - ರಥವಲ್ಲಿ, ಆರ್ - ಪರಿಪೂರ್ಣನಾದ, ನಿರೈ ಎಂದರೆ ನಿರೈನ್ದು - ತುಂಬಿರುವ, ದಶದಿಕ್ಕುಗಳನ್ನೂ ವ್ಯಾಪಿಸುವ, ಕದಿರೋರ್ - ಕಿರಣಗಳುಳ್ಳ ಸೂರ್ಯನ, ಮಣ್ಡಲತ್ತೈ ಕೀಣ್ಡುಪುಕ್ಕು-ಮಂಡಲವನ್ನು ಭೇದಿಸಿ ಪ್ರವೇಶ ಮಾಡಿ, " ಏಷನೋ ಮಂಡಲಂ ಭಿತ್ವಾ " ಎಂದೂ, "ಆದಿತ್ಯಂ ಭಿನತ್ತಿ" ಎಂದೂ ಹೇಳಿರುವ ಹಾಗೆ ಅರ್ಚಿರಾದಿ ಮಾರ್ಗದಲ್ಲಿ ಹೋಗುವವನು ಸೂರ್ಯಮಂಡಲವನ್ನು ಹೊಂದಿ ಅದನ್ನು ಬೇಧಿಸಿ ಮುಂದಕ್ಕೆ ಹೋಗುವನೆಂದು ಹೇಳಿರುತ್ತದೆ ಬೇಧಿಸಿ ಎಂದರೆ ಆದಿತ್ಯನು ತೋರಿಸುವ ಒಂದು ರಂಧ್ರದ್ವಾರಾ ಹೋಗುವನೆಂಬ ಭಾವವು; (೩) ಶಂಡ ಮಂಡಲತ್ತಿನ-ಚಂಡವಾದ ಎಂದರೆ ಕ್ರೂರವಾದ ರಶ್ಮಿಗಳುಳ್ಳ ಸೂರ್ಯಮಂಡಲದ, ಅಥವಾ ಪ್ರಪನ್ನರಲ್ಲದ ಇತರರಿಂದ ಹೊಂದಲಸಾಧ್ಯವಾದ, ಊಡುಶೆನ್ರು - ಮಧ್ಯಪ್ರದೇಶವನ್ನು ಸೇರಿ," ಎನ್ರುವರ್ - ಎಂದೂ, "ಇರುಳ್ - ಅಂಧಕಾರವನ್ನು, ಅಗುತ್ತುವರ್ - ನಾಶಮಾಡುವದಾಗಿರುವ, ಎರಿಕದಿರೋರ್ - ಉರಿಯುವ ಕಿರಣಗಳುಳ್ಳ ಸೂರ್ಯನ, ಮಂಡಲತ್ತಿನೋಡು - ಮಂಡಲದ ಮಧ್ಯಪ್ರದೇಶ ಮೂಲಕ, ಏತ್ತಿ - ದಿವ್ಯ ವೈಕುಂಠವನ್ನು ಹತ್ತುವ ಎಂದರೆ ಸೇರುವ ಹಾಗೆ ಮಾಡಿ, ವೈತ್ತು - ಅಲ್ಲಿ ಸ್ಥಾಪಿಸಿ, ಏಣಿವಾಙ್ಗಿ - ಅಲ್ಲಿಂದ ಪುನಸ್ಸಂಸಾರಕ್ಕಾಗಿ ಆವರ್ತಿರೂಪ ಏಣಿಯನ್ನು ತೆಗೆದುಹಾಕಿ, ಎಂದರೆ ನಚ ಪುನರಾವರ್ತತೇ ಎಂದು

---

(೩) ತಿರುಚ್ಛಂದವಿರುತ್ತಂ ೬೭. (೪) ಪೆರಿಯ ತಿರುಮೊಳಿ ೪. ೯. ೩.

ನುಣ್ಣುಲತ್ತು ದೇತ್ತಿ ನ್ಮೈತ್ತೀಣಿನಾಜ್ಞ" ಎನ್ನುವರ್, ಶೊಲ್ಲುಗಿರ ದೇವ ಯಾನ ಮಾರ್ಗತ್ತಿಲೆ ವಳಿಪ್ಪಡುತ್ತಿ (೩) "ಅಮರರೋಡುಯರ್ ವಿರ್ ಚೆನ್ರುರುವರ್ ತಮ್ಪಿರವಿಯುಞ್ಚೈರೈಯೇ" ಎಜ್ಞರಪಡಿಯೇ ಅರ್ಚಿಸ್ಸ

ಸೇರಿರುವ ಹಾಗೆ, ಆತನು ಹಿಂತಿರುಗಿಬಾರದ ಹಾಗೆ ಮಾಡಿ,'' ಎಂಬರ್ಥವು. (ಉತ್ತರಕೃತ್ಯಾಧಿಕಾರವಲ್ಲಿ ನೆಯ ಪುಟ ನೋಡಿ) **ಎನ್ನುವರ್** - ಎಂದೂ, **ಶೊಲ್ಲುಗಿರ** - ಹೇಳಿರುವ, **ದೇವಯಾನ ಮಾರ್ಗತ್ತಿಲೆ** - ಅರ್ಚಿರಾದಿ ಮಾರ್ಗವೆಂದೂ, ದೇವಪಥವೆಂದೂ, ಬ್ರಹ್ಮಪಥವೆಂದೂ, ದೇವಯಾನವೆಂದೂ, ಶುಕ್ಲಗತಿಯೆಂದೂ, ಹೀಗೆಲ್ಲಾ ಹೇಳಿರುವ ಮಾರ್ಗದಲ್ಲಿ, **ವಳಿಪ್ಪಡುತ್ತಿ** - ಮಾರ್ಗವನ್ನು ಸೇರುವ ಹಾಗೆ ಮಾಡಿ ; (೫) **ಅಮರರೋಡು** – ಆತಿವಾಹಿಕರೊಂದಿಗೆ, **ಉಯರ್ವಿಲ್ ಶೆನ್ರು** – ವಿರಜಾ ನದಿಯನ್ನು ಸೇರಿ, **ತಮ್ ಪಿರವಿ** - ತನ್ನ ಜನ್ಮವೆಂಬುವ, **ಯುಞ್ಚೈರೈ** - ಕ್ರೂರ ಕಾರಾಗೃಹವನ್ನು, **ಅರುವರ್**-ಭೇದಿಸುವರು ; ಎಂದರೆ ಸೂಕ್ಷ್ಮಶರೀರವನ್ನು ತ್ಯಜಿಸುವರೆಂಬ ಭಾವವು. ಇದು ನಾಲ್ಕನೆಯ ಪಾದವು. ಮೊದಲು ಮೂರು ಪಾದಗಳು :—

ಅಮರರ್ಗಳ್ ತೊಳುತೆಳ ವಲೈಕಡಲ್ ಕಡೈನ್ದವನ್ರನ್ನೈ ।
ಅಮರ್ ಪೊಳಿಲ್ ವಳಙ್ಕುರುಗೂರ್ ಚ್ಚಡಗೋಪನ್ ಕುತ್ತೇವಲ್ಗಳ್
ಅಮರ ಶುವೈ ಯಾಯಿರತ್ತು ವತ್ತಿನುಳಿವೈ ಪತ್ತುಮ್ ವಲ್ಲಾರ್ ॥

''ಬ್ರಹ್ಮಾದಿ ದೇವತೆಗಳು ಆಶ್ರಯಿಸಿ ಕ್ಷೇಮವನ್ನು ಹೊಂದುವ ಹಾಗೆ ಅಲೆಗಳುಳ್ಳ ಕ್ಷೀರಸಮುದ್ರವನ್ನು ಕಡೆದ ಶ್ರಿಯಃಪತಿಯನ್ನು ಕುರಿತು, ಗುಂಪಾಗಿರುವ ತೋಟಸಮೃದ್ಧಿಯುಳ್ಳ ಕುರಕಾಪುರಿಗೆ ಸ್ವಾಮಿಯಾದ ನಮ್ಮಾಳ್ವಾರ್ರವರ ವಾಚಿಕ ಕೈಂಕರ್ಯವಾದ ಶಬ್ದಾರ್ಥ ರಸಗಳು ತುಂಬಿರುವ ಸಾವಿರ ಪಾಶುರಗಳಲ್ಲಿ **ಈ ಹತ್ತು** ಪಾಶುರಗಳನ್ನು ಅಭ್ಯಾಸ ಮಾಡಿರುವವರು ಆತಿವಾಹಿಕರಿಂದ ಸತ್ಕರಿಸಲ್ಪಟ್ಟು, ವಿರಜೆಯಲ್ಲಿ ಜನ್ಮಬಂಧವಾದ ಸೂಕ್ಷ್ಮಶರೀರವನ್ನು ತ್ಯಜಿಸಿ, ಕಾರಾಗೃಹ ಬಂಧವನ್ನು ಭೇದಿಸಿಕೊಳ್ಳುವರು," ಎಂಬುವು ಈ ಪಾಶುರ ತಾತ್ಪರ್ಯವು, **ಎಜ್ಞರಪಡಿಯೇ** - ಎಂದು ಹೇಳಿರುವ ಹಾಗೆ, **ಅರ್ಚಿಸ್ಸೆನ್ನುವರ್** - (೧) ಅರ್ಚಿಸ್ಸು ಅಥವಾ ಅಗ್ನಿಯೆಂದೂ, (೨) ಅಹಸ್ಸೆಂದೂ, (೩) **ಪೂರ್ವಪಕ್ಷ** ವೆಂದರೆ ಶುಕ್ಲ ಪಕ್ಷವೆಂದೂ, (೪) **ಉತ್ತರಾಯಣ** ವೆಂದೂ, (೫) **ಸಂವತ್ಸರ** ವೆಂದೂ, (೬) **ವಾಯು**ವೆಂದೂ, (೭) **ಆದಿತ್ಯ**ನೆಂದರೆ ಸೂರ್ಯನೆಂದೂ, (೮) **ಚಂದ್ರ**ನೆಂದೂ,

---

(೩) ತಿರುವಾಯ್ಮೊಳಿ ೧. ೩. ೧೧.

ನ್ನುಮ್, ಅಹಸ್ಸೆನ್ನುಮ್ ಪೂರ್ವಪಕ್ಷಮೆನ್ನುಮ್, ಉತ್ತರಾಯಣಮೆನ್ನುಮ್ ಸಂವತ್ಸರಮೆನ್ನುಮ್, ವಾಯುವೆನ್ನುಮ್, ಆದಿತ್ಯನೆನ್ನುಮ್, ಚಂದ್ರನೆನ್ನುಮ್, ವೈದ್ಯುತನೆನ್ನುಮ್, ಅಮಾನವ ಸಂಜ್ಞನಾನ ಇವನುಕ್ಕು ಸಹಕಾರಿಗಳಾನ ವರುಣೇಂದ್ರ ಪ್ರಜಾಪತಿಗಳೆನ್ನುಮ್, ಶೊಲ್ಲಪ್ಪಡುಗಿರ ವಳಿನಡತ್ತುಮ್ ಮುದಲಿಗಳೈ ಇಟ್ಟು (೨) "ಅಹಂಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂಗತಿಂ" ಎಙ್ಗಿರಪಡಿಯೇ ತಾನ್ ಪ್ರಧಾನನಾಯ್ ನಡತ್ತಿ (೪) ಅವ್ವೋ ಎಲ್ಲೈಗಳಿಲ್ ಭಗವಚ್ಛಾಸ್ತ್ರತ್ತಿಲೇ ಪರಕ್ಕಪೇಶಿನ ಭೋಗಙ್ಗಳೈಯುಮನುಭವಿಪ್ಪಿತ್ತು,

---

(೯) **ವೈದ್ಯುತನೆಂದೂ, ಅಮಾನವ ಸಂಜ್ಞನಾನ ಇವನುಕ್ಕು** - ಅಮಾನವನೆಂದು ಕರೆಯಲ್ಪಡುವ ಈ ವೈದ್ಯುತನಿಗೆ, **ಸಹಕಾರಿಗಳಾನ**-ಸಹಾಯ ಮಾಡುವ, (೧೦) ವರುಣ (೧೧) ಇಂದ್ರ (೧೨) **ಪ್ರಜಾಪತಿಗಳೆನ್ನು** - ಚತುರ್ಮುಖ ಬ್ರಹ್ಮನೆಂದೂ, **ಶೊಲ್ಲಪ್ಪಡುಗಿರ** - ಹೇಳಲ್ಪಟ್ಟಿರುವ, **ವಳಿನಡತ್ತುಮ್ ಮುದಲಿಗಳೈಯಿಟ್ಟು** - ಮಾರ್ಗ ನಡೆಸುವ ಎಂದರೆ ಜೊತೆಯಲ್ಲಿ ಕರೆದುಕೊಂಡುಹೋಗುವ ಪ್ರಾಜ್ಞರಾದ ಆತಿವಾಹಿಕರ ಮೂಲಕವಾಗಿ "ನಾನು ನನ್ನ ಭಕ್ತನನ್ನು ದೇಹವಿಯೋಗ ಕಾಲದಲ್ಲಿ ಸ್ಮರಿಸುವಂತೆ ಮಾಡುವನಾಗಿ, ಆತನಿಗೆ ಸರ್ವ ಶ್ರೇಷ್ಠವಾದ ಗತಿಯನ್ನು ಹೊಂದಿಸುವೆನು," **ಎಙ್ಗಿರಪಡಿಯೇ** - ಎಂಬ ಶ್ರೀ ವರಾಹಪುರಾಣ ವಾಕ್ಯದ ಹಾಗೆ, **ತಾನ್ ಪ್ರಧಾನನಾಯ್ ನಡತ್ತಿ** - ತಾನೇ ಮುಖ್ಯವಾಗಿ ನಿಂತು ನಡೆಸಿ, (೪) **ಅವ್ವೋ ಎಲ್ಲೈಗಳಿಲ್** - ಈ ೧೨ ದೇವತೆಗಳ ಎಲ್ಲೆಯಲ್ಲೂ, **ಭಗವಚ್ಛಾಸ್ತ್ರತ್ತಿಲೆ** - ಶ್ರೀ ಪಾಂಚರಾತ್ರಾದಿ ಭಗವಚ್ಛಾಸ್ತ್ರಗಳಲ್ಲಿ, **ಪರಕ್ಕಪೇಶಿನ** - ವಿಸ್ತಾರವಾಗಿ ಹೇಳಿರುವ, **ಭೋಗಙ್ಗಳೈಯುಮನುಭವಿಪ್ಪಿತ್ತು** - ಭೋಗಗಳನ್ನೆಲ್ಲಾ ಈ ಪ್ರಪನ್ನನು ಅನುಭವಿಸುವ ಹಾಗೆ ಮಾಡಿ; ಈ ವಾಕ್ಯದಲ್ಲಿ (೧) ಆತಿವಾಹಿಕರು ೧೨ ಮಂದಿ ಎಂದೂ, (೨) ಅವರುಗಳು ಈ ಬಂದ ಪ್ರಪನ್ನನನ್ನು ಒಬ್ಬೊಬ್ಬರು ಕ್ರಮವಾಗಿ ತಮ್ಮ ಗಡಿಯು ಇರುವವರೆಗೂ ಕರೆದುಕೊಂಡು ಹೋಗುವ ಕ್ರಮವು ಯಾವುದು ಎಂಬುದನ್ನೂ, (೩) ಈ ಅರ್ಚಿಸ್ಸು, ಅಹಸ್ಸು, ಶುಕ್ಲಪಕ್ಷಗಳಿಂದ ಬೋಧಿತರಾದವರು, **ವಳಿನಡತ್ತುಮ್ ಮುದಲಿಗಳ್** - ಎದುರುಗೊಂಡು ಮಾರ್ಗ ತೋರಿಸಿ ಕರೆದುಕೊಂಡು ಹೋಗುವ ದೇವತೆಗಳೆಂದೂ ಮತ್ತು ಅವರುಗಳು ತತ್ತದಭಿಮಾನ ದೇವತೆಗಳೆಂದೂ, (೪) ಇದರಲ್ಲಿ ಕಡೆಗೆ ಪರಬ್ರಹ್ಮನ ಹತ್ತಿರ ಕರೆದುಕೊಂಡುಹೋಗುವನು ವೈದ್ಯುತನು ಎಂದೂ,

"ವೈದ್ಯುತೇನೈವ ತತಸ್ತಚ್ಛ್ರುತೇಃ" ಎಂದು ಸೂತ್ರದಲ್ಲಿ ಹೇಳಿರುವ ಹಾಗೆ, "ಸ ಏನಾನ್ ಬ್ರಹ್ಮ ಗಮಯತಿ" ಎಂಬ ಪ್ರಮಾಣವೆಂದೂ, (೫) ಹಾಗಾದರೆ ವರುಣ, ಇಂದ್ರ, ಪ್ರಜಾಪತಿಗಳ ಕೆಲಸವೇನೆಂದರೆ, ಅವರೂ ಅವರವರ ಎಲ್ಲೆಗಳಲ್ಲಿ ವೈದ್ಯುತನ ಜೊತೆಯಲ್ಲಿದ್ದು ಸತ್ಕರಿಸುವದರಿಂದ ಅವರುಗಳು ಈ ವೈದ್ಯುತನಿಗೆ ಸಹಕಾರಿ ಎಂದೂ, (೬) ಹೀಗೆ ವೈದ್ಯುತನು, ಈ ಮೇಲೆ ಹೇಳಿದ ಇತರ ದೇವತೆಗಳಿಗೆಲ್ಲಾ ಸ್ವಲ್ಪ ವಿಲಕ್ಷಣವಾಗಿ ಪರಬ್ರಹ್ಮನವರೆಗೂ ಕರೆದುಕೊಂಡು ಹೋಗುವದರಿಂದ ಆತನು ನಿತ್ಯಸೂರಿಗಳಲ್ಲೊಬ್ಬನೆಂದೂ, (೭) ಈ ಆತಿವಾಹಿಕರು ಬರೀ ಮಾರ್ಗ ತೋರಿಸುವವರೇಯಾಗಲಿ ಮಾರ್ಗ ನಡಿಸುವವರೇಯಾಗಿ ಇಲ್ಲವು, ಇವರುಗಳು ಆ ಬಂದ ಪ್ರಪನ್ನರನ್ನು ಸತ್ಕರಿಸಿ ಆದರಿಸುವವರೆಂದೂ, ಈ ಪ್ರಪನ್ನರಿಗೆ ಮಾರ್ಗದಲ್ಲಿ ಉಪಭೋಗಾನುಭವಗಳುಂಟೆಂದೂ, (೮) ಇವಷ್ಟು ಏರ್ಪಾಡುಗಳನ್ನೆಲ್ಲಾ ಇಟ್ಟು ನಡಿಸುವವನು, ಪ್ರಧಾನನಾಗಿ ಸರ್ವೇಶ್ವರನೇ ಎಂದೂ, ಉಪದೇಶಿಸಲ್ಪಟ್ಟಿತು. ಮಾರ್ಗದಲ್ಲಿ ಹೀಗೆ ಸತ್ಕಾರವೂ ಭೋಗಾನುಭವವೂ ಉಂಟೆಂಬುದು ಭಗವಚ್ಛಾಸ್ತ್ರಪ್ರಮಾಣಗಳಿಂದ ವ್ಯಕ್ತವೆಂಬ ನಿದರ್ಶನಕ್ಕಾಗಿ ವ್ಯಾಖ್ಯಾತೃಗಳು,

"ಅಥೈನ ಮನುರಾಸ್ತತ್ರ ಸಹ ದಿವ್ಯಾಪ್ಸರೋಗಣೈಃ ।
ಸೋಪಹಾರಾಃ ಪ್ರಹರ್ಷೇಣ ಪ್ರತ್ಯುದ್ಗಚ್ಛಂತ್ಯುಪಾಗತಂ ॥
ಅರ್ಚಿರಾದಿ ಕಯಾ ಗತ್ಯಾ ತತ್ರತತ್ರಾರ್ಚಿತ ಸ್ಸುರೈಃ ।।
ಅತೀತ್ಯಲೋಕಾ ನಭ್ಯೇತಿ ವೈಕುಂಠಂ ವೀತಕಲ್ಮಷಃ ॥

ಈ ಮೇಲಿನ ಶ್ಲೋಕಗಳನ್ನು ಉದಾಹರಿಸಿರುತ್ತಾರೆ. "ಈ ವೈಕುಂಠವನ್ನು ಕುರಿತು ಬಂದ ಪ್ರಪನ್ನನನ್ನು ಅರ್ಚಿರಾದಿಗಳ ಅಭಿಮಾನ ದೇವತೆಗಳು ಮಾರ್ಗದಲ್ಲಿ ದಿವ್ಯಾಪ್ಸರಸ್ಸಮೂಹದಿಂದ ಸೇರಿದವರಾಗಿ, ಉಪಹಾರಾದಿಗಳೊಂದಿಗೆ ಬಹು ಸಂತೋಷದಿಂದ ಎದುರುಗೊಂಡು ಸ್ವಾಗತವನ್ನು ಹೇಳಿ, ಹೀಗೆ ಅರ್ಚಿರಾದಿ ಗತಿಯಿಂದ ಅಲ್ಲಲ್ಲಿ ಅಭಿಮಾನ ದೇವತೆಗಳಿಂದ ಪೂಜಿಸಲ್ಪಟ್ಟವನಾಗಿ ಅವರವರುಗಳ ಲೋಕಗಳನ್ನೆಲ್ಲಾ ದಾಟಿ, ಕಲ್ಮಷಗಳಿಂದ ಬಿಡಲ್ಪಟ್ಟವನಾಗಿ ಮಹಾ ಪರಿಶುದ್ಧನಾಗಿ ವೈಕುಂಠಾಭಿಮುಖನಾಗಿ ತೆರಳುವನು" ಎಂದು ಇಲ್ಲಿ ಹೇಳಿಸುತ್ತದೆ

ಶಾಕಟಾಯನ ಸಂಹಿತೆಯಲ್ಲಿ ಅಹಸ್ಸಿಗೂ ಶುಕ್ಲಪಕ್ಷಕ್ಕೂ ಮಧ್ಯೆ ಕೌಮುದೀ ಎಂಬ ಅಭಿಮಾನದೇವತೆಯುಂಟೆಂದು ಹೇಳಲ್ಪಟ್ಟಿರುತ್ತದೆ. ಆದರೆ ಶ್ರುತಿಗಳಲ್ಲಿ ಹೇಳಲ್ಪಟ್ಟಿರುವದು ಮುಖ್ಯವೆಂದು ಭಾವಿಸಿ ಹನ್ನೆರಡು ಆತಿವಾಹಕರು ಮಾತ್ರ ಇಲ್ಲಿ ಹೇಳಲ್ಪಟ್ಟರು. ಧೂಮಾದಿ ಮಾರ್ಗದಲ್ಲೂ ಪ್ರಪನ್ನನಲ್ಲದೇ ಇರುವವರಿಗೂ ಚಂದ್ರಪ್ರಾಪ್ತಿಯು ಹೇಳಲ್ಪಟ್ಟಿರುತ್ತದೆ. ಚಂದ್ರಾಭಿಮಾನ ದೇವತೆಯು ಅವರಿಗೆ

ಸೂಕ್ಷ್ಮ ಶರೀರ ಪರಿತ್ಯಾಗಃ

(೫) "ಲೋಕಂ ವೈಕುಂಠನಾಮಾನಂ ದಿವ್ಯಂ ಷಾಡ್ಗುಣ್ಯ ಸಂಯುತಂ । ಅವೈಷ್ಣವಾನಾಮ ಪ್ರಾಪ್ಯಂ ಗುಣತ್ರಯ ವಿವರ್ಜಿತಂ । ನಿತ್ಯಸಿದ್ಧೈ

ಅರ್ಚಿರಾದಿ ಗತಿಯನ್ನು ತೋರಿಸದೆ ಸ್ವರ್ಗಕ್ಕೆ ಹೋಗುವ ಮಾರ್ಗವನ್ನು ತೋರಿಸುವನೆಂದು ಭಾವಿಸತಕ್ಕದ್ದು. ಪ್ರಪನ್ನನು ದಕ್ಷಿಣಾಯನದಲ್ಲಿ ಮೃತನಾದರೆ ಚಂದ್ರಸಾಯುಜ್ಯವನ್ನು ಹೊಂದಿ, ಅಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ಮುಂದೆ ಹೋಗುವನೆಂದು ತೈತ್ತಿರೀಯದಲ್ಲಿ ಹೇಳಲ್ಪಟ್ಟಿರುತ್ತದೆ. ಸೂರ್ಯನು ತೋರಿಸಿದ ಆಡಂಬರವೆಂಬ ವಾದ್ಯವಿಶೇಷದ ರಂಧ್ರದಷ್ಟು ತನ್ನಲ್ಲಿರುವ ರಂಧ್ರದಲ್ಲಿ ಪ್ರವೇಶ ಮಾಡಿಸಿದ ಒಡನೆಯೇ, ಚಂದ್ರದೇವತೆಯು ಬಂದು ಎದುರುಗೊಂಡು ಕರೆದುಕೊಂಡು ಹೋಗುವನು; ಸತ್ಕಾರವಾದ ನಂತರ ದುಂದುಭಿ ವಾದ್ಯರಂಧ್ರದಹಾಗಿರುವ ರಂಧ್ರದಲ್ಲಿ ಪ್ರವೇಶ ಮಾಡಿಸಿ ಕಳುಹಿಸುವನು. ಒಡನೆಯೇ ವೈದ್ಯುತನು ಬಂದು ಎದುರುಗೊಂಡು ಕರೆದುಕೊಂಡು ಹೋಗುವನು ಇವನಿಗೆ ಅಮಾನವನೆಂದು ಹೆಸರು. ಈತನು ಆ ಪ್ರಪನ್ನನನ್ನು ವರುಣಲೋಕ, ಇಂದ್ರಲೋಕ, ಚತುರ್ಮುಖ ಲೋಕಗಳ ಮಾರ್ಗವಾಗಿ ಪರಬ್ರಹ್ಮನ ಹತ್ತಿರಕ್ಕೆ ಕರೆದುಕೊಂಡು ಹೋಗುವನೆಂದು ಹೇಳಲ್ಪಟ್ಟಿತು; ಆದುದರಿಂದ ಈ ವರುಣ, ಇಂದ್ರ, ಪ್ರಜಾಪತಿಗಳು ತಮ್ಮ ತಮ್ಮ ಎಲ್ಲೆಗಳಲ್ಲಿ ಮಾತ್ರ ಸತ್ಕರಿಸಿ ಮಾರ್ಗ ತೋರಿಸುವರಾದ ಅನುಗ್ರಾಹಕರೆಂದು ನಿರ್ಧರಿಸಲ್ಪಟ್ಟಿರುತ್ತದೆ. ಈ ಅಮಾನವನಿಗೆ ಶ್ರುತ್ಯಂತರಗಳಲ್ಲಿ ಮಾನಸನೆಂದು ಹೆಸರುಂಟು. ಇವರು ಬೇರೆ ಬೇರೆ ಎಂದು ಕೆಲವರಭಿಪ್ರಾಯಪಟ್ಟು ಬೇರೆ ಬೇರೆ ನಿರ್ವಾಹವನ್ನು ಹೇಳುತ್ತಾರೆ. ಇದು ನಮಗೀಗ ಪ್ರಕೃತವಲ್ಲವು. ಸರ್ವೇಶ್ವರನು ಅನೇಕ ಅಂಡಗಳಿಗೆ ಈಶನಲ್ಲಾ, ಅಲ್ಲೆಲ್ಲಾ ಹೇಗೆ ಎಂದರೆ, ಪ್ರತಿಯೊಂದು ಅಂಡದಲ್ಲೂ ಅರ್ಚಿರಾದಿಗತಿಗಳುಂಟೆಂದು ಭಾವಿಸತಕ್ಕದ್ದು. ಈ ವಿಷಯಗಳೆಲ್ಲಾ ಬಹು ವಿಸ್ತರವಾಗಿ ಶ್ರೀ ದೇಶಿಕರವರನುಗ್ರಹಿಸಿರುವ ಪರಮಪದ ಸೋಪಾನದ ಅರ್ಚಿರಾದಿ ಪರ್ವದಲ್ಲಿ ಉಪಪಾದಿತವಾಗಿವೆ.

ಸೂಕ್ಷ್ಮಶರೀರದ ಪರಿತ್ಯಾಗವು.

"ದಿವ್ಯಂ - ಅಪ್ರಾಕೃತವಾದ, ಷಾಡ್ಗುಣ್ಯ ಸಂಯುತಂ - ಜ್ಞಾನ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು, ಶಕ್ತಿ ಎಂಬ ಆರು ಗುಣಗಳಿಂದ ಕೂಡಿದ,

---

(೫) ದ್ವಿತೀಯ ಚೆತನ್ನಾ ೧೮, ೨೧.

ಸ್ವಮಾಕೀರ್ಣಂ ತನ್ಮಯೈಃ ಪಾಂಚಕಾಲಿಕೈಃ । ಸಭಾ ಪ್ರಾಸಾದ ಸಂಯುಕ್ತಂ ವನೈರ್ಉಪವನೈ (ರ್ಯುತಂ) ಶ್ಶುಭಂ । ವಾಪೀಕೂಪ ತಟಾಕೈಶ್ಚ ವೃಕ್ಷಷಂಡೈಶ್ಚ ಮಂಡಿತಂ । ಅಪ್ರಾಕೃತಂ ಸುರೈರ್ವಂದ್ಯ ಮಯುತಾರ್ಕ ಸಮಪ್ರಭಮ್ । ಪ್ರಕೃಷ್ಟ ಸತ್ತ್ವರಾಶಿಂ ತಂ ಕದಾದ್ರಕ್ಷ್ಯಾಮಿ ಚಕ್ಷುಷಾ ।" ಎನ್ರು ನೆಡುಙ್ಗಾಲಮ್ ಕಾಣ ಆಶೈಪ್ಪಟ್ಟ ದೊರು ದೇಶವಿಶೇಷತ್ತಿಲೆ

ಎಂದರೆ ಆ ಗುಣಗಳಿಗೆ ಪ್ರಕಾಶಕವಾದ ಅವೈಷ್ಣವಾನಾಂ ಅಪ್ರಾಪ್ಯಂ - ವಿಷ್ಣುಭಕ್ತರಲ್ಲದೆ ಇತರರುಗಳಿಂದ ಹೊಂದಲಸಾಧ್ಯವಾದ, ಗುಣತ್ರಯ ವಿವರ್ಜಿತಂ - ಸತ್ತ್ವರಜಸ್ತಮೋಗುಣಗಳಿಂದ ಬಿಡಲ್ಪಟ್ಟುದಾಗಿ, ತನ್ಮಯೈಃ - ಭಗವತ್ಕೈಂಕರ್ಯದಲ್ಲೇ ಮಯವಾಗಿಯೇ ಇಡಲ್ಪಟ್ಟ ಮನಸ್ಸುಳ್ಳ, ಪಾಂಚಕಾಲಿಕೈಃ - ಐದು ಕಾಲಗಳಲ್ಲೂ ಕರ್ತವ್ಯವೆಂದು ವಿಧಿಸಿದ ವೈಕೈಂಕರ್ಯಗಳನ್ನುಳ್ಳ, ನಿತ್ಯಸಿದ್ಧೈಃ - ನಿತ್ಯಸೂರಿಗಳಿಂದ, ಸಮಾಕೀರ್ಣಂ - ತುಂಬಿದ, ಸಭಾ ಪ್ರಾಸಾದ ಸಂಯುಕ್ತಮ್ - ಸಭಾ ಮಂಟಪಗಳುಳ್ಳ ಉಪ್ಪರಿಗೆ ಮನೆಗಳಿಂದ ಕೂಡಿರುವ, ವನೈಃ - ವನಗಳಿಂದಲೂ, ಉಪವನೈಃ - ಉದ್ಯಾನವನಗಳಿಂದಲೂ, ಯುತಂ - ಸೇರಿರುವ, ವಾಪೀ ಕೂಪ ತಟಾಕೈಶ್ಚ, ವಾಪೀ - ಇಳಿಯುವ ಭಾವಿಗಳಿಂದಲೂ, ಕೂಪ - ಸೇದುವ ಭಾವಿಗಳಿಂದಲೂ, ತಟಾಕೈಶ್ಚ - ಕೆರೆ, ಪುಷ್ಕರಿಣೀ ಅಥವಾ ಸರಸ್ಸುಗಳಿಂದಲೂ ವೃಕ್ಷ ಷಂಡೈಶ್ಚ - ಮರಗಳ ಸಮೂಹಗಳಿಂದಲೂ, ಮಂಡಿತಂ - ಅಲಂಕರಿಸಲ್ಪಟ್ಟ, ಅಪ್ರಾಕೃತಂ - ಸುಖದುಃಖಗಳಿಗೆ ಆಕರವಾದ ಪ್ರಕೃತಿ ಸಂಬಂಧವಿಲ್ಲದೆ, ಆನಂದಕ್ಕೆ ನಿಲಯವಾದ ಸತ್ತ್ವಮಯವಾದ, ಸುರೈರ್ವಂದ್ಯಂ - ದೇವತೆಗಳಿಂದ ಸ್ತುತಿಸಲ್ಪಟ್ಟುದಾಗಿಯೂ, ಅಯುತಾರ್ಕ ಸಮಪ್ರಭಮ್ - ಕೋಟಿ ಸೂರ್ಯರಿಗೆ ಸಮಾನವಾದ ಕಾಂತಿಯುಳ್ಳ, ಸ್ವಯಂ ಪ್ರಕಾಶವಾದ, ಪ್ರಕೃಷ್ಟ, ಸತ್ತ್ವರಾಶಿಮ್ - ನಿರ್ಮಲವಾದ ಸತ್ತ್ವಗುಣದ ರಾಶೀಭೂತವಾದ, ಎಂದರೆ ಶುದ್ಧಸತ್ತ್ವಮಯವಾದ, ತಂ - ಅಂತಹ ಪ್ರಸಿದ್ಧ ಮಹಿಮೆಯುಳ್ಳ, ವೈಕುಂಠನಾಮಾನಂ - ವೈಕುಂಠವೆಂದು ಹೆಸರುಳ್ಳ, ಲೋಕಂ - ಲೋಕವನ್ನು, ಕದಾ - ಯಾವಾಗ, ಚಕ್ಷುಷಾ - ದಿವ್ಯಚಕ್ಷುಸ್ಸಿನಿಂದ ದ್ರಕ್ಷ್ಯಾಮಿ - ನೋಡುವೆನೋ" ಎನ್ರು - ಎಂಬದಾಗಿ, ನೆಡುಙ್ಗಾಲಮ್ ಕಾಣ - ಬಹು ದೀರ್ಘಕಾಲದಿಂದಲೂ ಕಾಣಬೇಕೆಂದು, ಆಶೈಪಟ್ಟದು - ಅಭಿಲಾಷೆಯುಳ್ಳ. ಒರುದೇಶವಿಶೇಷತ್ತಿಲೇ ಸೇರ್ನ್ದಾರೇ - ಒಂದು ಮಹತ್ತಾದ ದೇಶವನ್ನು ಸೇರಿದ ಒಡನೆಯೇ, ಕರ್ಮಫಲವಿಶೇಷ ಭೋಗಾರ್ಥಮಾಗವುನಿಕ್ಕೇ - ಕರ್ಮ

ಶಿನ್ರವಾರೇ, ಕರ್ಮಫಲವಿಶೇಷಭೋಗಾರ್ಥಮಾಗಮನ್ನಿಕ್ಕೇ, ವಿದ್ಯೈಯಾಲೆ ಸ್ಥಾಪಿತಮಾಯ್ ಗತಿಮಾತ್ರಾರ್ಥಮಾಗ ಅನುವೃತ್ತಮಾನ ಸೂಕ್ಷ್ಮಶರೀರತ್ತೈ ಆರುಕಡಕ್ಕೈಕ್ಕು ಪತ್ತಿನ ತೆಪ್ಪಮ್ ಪೋಗವಿಡುಮಾಪ್ಪೋಲೆ ಪೋಗವಿಡುವಿತ್ತು ; (೬) ವಿರಜೈಕ್ಕಕ್ಕರೈಪ್ಪಡುತ್ತಿ; (೭) ಅಪ್ರಾಕೃತ

ಫಲಾನುಭವಕ್ಕಾಗಿಯಲ್ಲದೆ, ವಿದ್ಯೈಯಾಲೆ ಸ್ಥಾಪಿತಮಾಯ್ - ಬ್ರಹ್ಮವಿದ್ಯೆ ನ್ಯಾಸವಿದ್ಯೆಯಿಂದ ಸ್ಥಿರಪಡಿಸಲ್ಪಟ್ಟ, ಗತಿಮಾತ್ರಾರ್ಥಮಾಗ - ಅರ್ಚಿರಾದಿಗತಿಯಲ್ಲಿಸಂಚಾರ ಮಾತ್ರಕ್ಕಾಗಿ, ಅನುವೃತ್ತಮಾನ ಸೂಕ್ಷ್ಮಶರೀರತ್ತೈ - ಭಗವತ್ಕೃಪೆಯಿಂದ ಅನುಸರಿಸಿ ಬಂದ ಸೂಕ್ಷ್ಮಶರೀರವನ್ನು. ಆರುಕಡಕ್ಕೈಕ್ಕು - ನದಿಯ ಆಚೆ ದಡವನ್ನು ದಾಟುವದಕ್ಕಾಗಿ, ಪತ್ತಿನ ತೆಪ್ಪಂ - ಹತ್ತಿದ ತೆಪ್ಪವನ್ನು, ಪೋಗವಿಡುಮಾಪ್ಪೋಲೆ- ಅದು ಹಿಂತಿರುಗಿ ಹೋಗುವದಕ್ಕಾಗಿ ಬಿಟ್ಟುಬಿಡುವ ಹಾಗೆ, ಪೋಗವಿಡವಿತ್ತು - ಹಿಂತಿರುಗುವ ಹಾಗೆ ತ್ಯಜಿಸಿ; (೬) ವಿರಜೈಕ್ಕು - ವಿರಜಾ ನದಿಗೆ, ಅಕ್ಕರೈಪ್ಪಡುತ್ತಿ - ಆಚೆಯ ದಡವನ್ನು ತಲಪುವ ಹಾಗೆ ಮಾಡಿ ; ಈ ೪, ೫ನೆಯ ವಾಕ್ಯಖಂಡಗಳಿಂದ ಸೂಕ್ಷ್ಮಶರೀರಪರಿತ್ಯಾಗವೂ ಮತ್ತು ವಿರಜಾತರಣವೂ ಬೋಧಿಸಲ್ಪಟ್ಟಿತು ವೈದ್ಯುತ ಅಮಾನವನು ಈತನನ್ನು ಪ್ರಕೃತಿ ಮಂಡಲವನ್ನು ದಾಟಿ, ದಿವ್ಯ ವೈಕುಂಠದ ಎಲ್ಲೆಗೆ ಕರೆದುಕೊಂಡು ಹೋಗುವನು. ಆ ದಿವ್ಯ ವೈಕುಂಠವು ಎಷ್ಟು ನಿರತಿಶಯವಾದುದೆಂಬುದು ದ್ವಿತೀಯ ಜಿತನ್ತಾ ಸ್ತೋತ್ರಗಳ ಮೂಲಕ ವರ್ಣಿಸಲ್ಪಟ್ಟಿತು. ಈ ಎರಡು ಎಲ್ಲೆಗಳ ಮಧ್ಯೆ ವಿರಜಾನದಿ ಇರುತ್ತದೆಂದು ಹೇಳಲ್ಪಟ್ಟಿತು. ಈತನಿಗೆ ಸೂಕ್ಷ್ಮ ಪ್ರಾಕೃತ ಶರೀರ ಪರಿತ್ಯಾಗವೆಲ್ಲಿ ಎಂಬ ಚರ್ಚೆಯಲ್ಲಿ, ಪ್ರಥಮತಃ ಸ್ಥೂಲಶರೀರ ತ್ಯಾಗಾನಂತರ ಸೂಕ್ಷ್ಮಶರೀರ ಪ್ರಾಪ್ತಿ ಏತಕ್ಕೆಂಬುವದನ್ನು ಗ್ರಹಿಸತಕ್ಕದ್ದೆಂದು ಭಾವಿಸಿ ಈ ಸೂಕ್ಷ್ಮಶರೀರವು ಕರ್ಮಫಲ ಭೋಗಕ್ಕಾಗಿಯಲ್ಲವೆಂದು ತಿಳಿಸುತ್ತಾರೆ. ಆದರೆ "ತಸ್ಯ ಪುತ್ರಾ ದಾಯ ಮುಪಯಂತಿ, ಸುಹೃದಸ್ಸಾಧು ಕೃತ್ಯಾಂ, ದ್ವಿಷಂತಃ ಪಾಪಕೃತ್ಯಾಂ" ಎಂಬ ಶ್ರುತಿ ಪ್ರಕಾರ, ಉತ್ಕ್ರಾಂತಿ ಕಾಲದಲ್ಲೇ ಪುಣ್ಯಪಾಪಗಳೆಲ್ಲಾ ಸುಹೃತ್ತು ಮತ್ತು ಶತ್ರುಗಳಲ್ಲೂ ಹೋಗಿ ಸೇರಿಬಿಡುವದರಿಂದ ಕರ್ಮಫಲಗಳೂ ಇಲ್ಲವು, ಅವುಗಳ ಫಲಾನುಭವವೂ ಇಲ್ಲವು. ಆತಿವಾಹಿಕರ ಸತ್ಕಾರದ ಉಪಭೋಗಕ್ಕಾಗಿ ಸೂಕ್ಷ್ಮಶರೀರ ಪ್ರಾಪ್ತಿಯೆಂದರೆ, ನಿತ್ಯವಿಭೂತಿಯಲ್ಲೂ ಸಹ ಅದೇ ಶರೀರದಿಂದಲೇ ಭೋಗ ಏಕೆ ಕೂಡದೆಂಬ ಆಕ್ಷೇಪಣೆ ಉಂಟಾಗುತ್ತದೆ. ಹೀಗೆ ಈ ಸೂಕ್ಷ್ಮಶರೀರವು ಕರ್ಮಫಲೋಪಭೋಗಕ್ಕಾಗಿ ಅಲ್ಲದಿದ್ದರೆ,

ಅವರ ಪ್ರಯೋಜನವೇನೆಂದರೆ :—ಸೂಕ್ಷ್ಮಶರೀರವು ನ್ಯಾಸವಿದ್ಯಾಪ್ರವೃತ್ತಿಯಿಂದ ಸಿದ್ಧವಾದುದಾಗಿ ಅರ್ಚಿರಾದಿ ಗತಿಯಲ್ಲಿ ಪರಮಪದವನ್ನು ಕುರಿತು ಹೋಗಬೇಕಾದುದು ಇರುವದರಿಂದ, ಅದಕ್ಕಾಗಿ ಮಾತ್ರವೇ ಈ ಸೂಕ್ಷ್ಮ ಶರೀರವೆಂದು ಹೇಳಿರುತ್ತಾರೆ. ಅರ್ಚಿರಾದಿ ಗತಿಯು ಪ್ರಕೃತಿ ಮಂಡಲಕ್ಕೆ ಸೇರಿದ ಭಾಗದಲ್ಲಿ ಗಮನಕ್ಕಾಗಿ ಎಂದು ನಿರ್ಧರಿಸಿದ ನಂತರ, ಪ್ರಕೃತಿ ಮಂಡಲವನ್ನು ದಾಟಿ ವಿರಜೆಯನ್ನು ಸೇರಿದ ಒಡನೆಯೇ ಸೂಕ್ಷ್ಮಶರೀರವಿಚ್ಛೇದವೆಂಬದಾಗಿ ತೋರಿಬರುತ್ತದೆ. ಅದು ವಿರಜೆಯೆಂಬ ಅಮೃತ ನದಿಯು ಈಚೆಯ ದಡದಲ್ಲೇ ಪ್ರಾಪ್ತವಾಗುತ್ತದೆಂದು ಭಾವಿಸತಕ್ಕದ್ದಾಗಿರುತ್ತದೆ. ಆದುದರಿಂದಲೇ **"ಒರು ದೇಶವಿಶೇಷತ್ತಿಲೆ ಶೆನ್ನವಾರೇ"** ಎಂಬ ಪ್ರಯೋಗವು. ಈ ನದಿಯು ಎಲ್ಲಿ ಇದೆ ಎಂದರೆ :—ಕೌಷೀತಕೀ ಬ್ರಾಹ್ಮಣವನ್ನನುಸರಿಸಿ ಹೇಳಿದ **"ವೈಕುಂಠಸೀಮ್ನಿ ವಿರಜಾಂ ಸ್ಯಂದಮಾನಾಂ ಮಹಾನದೀಂ"** ಎಂಬ **"ಗತ್ವಾಯೋ ವಿರಜಾಂ ವಿಮುಂಚತಿ ತನುಂ ಸೂಕ್ಷ್ಮಾಂ"** ಎಂಬ ಉಕ್ತಿಗಳಿಂದ ಲೀಲಾವಿಭೂತಿ ನಿತ್ಯವಿಭೂತಿಗಳ ಎಲ್ಲೆಯನ್ನು ನಿರ್ಧರಿಸುವಂಥಾದ್ದೆಂದು ಭಾವಿಸಲ್ಪಟ್ಟಿರುತ್ತದೆ. ನದಿಯನ್ನು ದಾಟುವದಕ್ಕೇ ಒಂದು ತೆಪ್ಪದ ಆವಶ್ಯಕತೆಯು, ಅದು ದಾಟಿದ ನಂತರ ಆ ತೆಪ್ಪದ ಆವಶ್ಯಕತೆ ಹೇಗೆ ಇಲ್ಲವೋ ಹಾಗೆಯೇ ಈ ಅರ್ಚಿರಾದಿ ಮಾರ್ಗವನ್ನು ದಾಟುವದಕ್ಕಾಗಿ ಈ ಸೂಕ್ಷ್ಮಶರೀರವು. ಅದು ದಾಟಿದ ನಂತರ ಇನ್ನು ಈ ಸೂಕ್ಷ್ಮಶರೀರದ ಆವಶ್ಯಕತೆಯು ಇಲ್ಲದುದರಿಂದ, ಅದು ಪ್ರಕೃತಿ ಮಂಡಲಕ್ಕೆ ಹಿಂತಿರುಗಿ ಹೋಗಿ ಸೇರಿಕೊಳ್ಳುತ್ತದೆಂದು ಹೇಳಿರುತ್ತಾರೆ. ಈ ಸೂಕ್ಷ್ಮಶರೀರವೂ ಕೂಡ ಪ್ರಕೃತಿಯ ಕಾರ್ಯರೂಪವಾದುದರಿಂದ ಇದಕ್ಕೆ ನಾಶವಿಲ್ಲವಾಗಿ ಪ್ರಕೃತಿಯನ್ನೇ ಹೋಗಿ ಸೇರುತ್ತದೆಂದು ಭಾವಿಸತಕ್ಕದ್ದು. ಆದುದರಿಂದ **"ಪೋಗವಿಡುವಿತ್ತು"** ಎಂಬ ಪ್ರಯೋಗವು. ಪ್ರಕೃತಿಗೆ ನಾಶವಿಲ್ಲವೆಂದು ಶ್ರುತಿಯೇ **"ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ"** ಎಂದು ಹೇಳಿರುವದರಿಂದ ಯಾವುದಕ್ಕೆ ಉತ್ಪತ್ತಿ ಇಲ್ಲವೋ ಅದಕ್ಕೆ ನಾಶವೂ ಇಲ್ಲವು ಎಂದು ಗ್ರಹಿಸತಕ್ಕದ್ದು. ಹೀಗೆ ಪ್ರಮಾಣವಿದ್ದರೂ ಕೂಡ ಮಿಥ್ಯಾವಾದವು ಹೇಗೆ ಕೂಡುತ್ತದೋ ತಿಳಿಯದು.

ಹೀಗೆ ವಿರಜೆಯ ಈಚೆಯ ದಡದಲ್ಲೇ ಸೂಕ್ಷ್ಮಶರೀರ ಪರಿತ್ಯಾಗವಾದರೆ, ವಿರಜೆಯನ್ನು ದಾಟುವದಕ್ಕೆ ಶರೀರ ಬೇಡವೋ ಎಂದರೆ ಕೌಷೀತಕೀ ಬ್ರಾಹ್ಮಣದಲ್ಲಿ **"ಸ ಆಗಚ್ಛತಿ ವಿರಜಾಂ ನದೀಂ, ತಾಮ್ಮನಸೈವಾತ್ಯೇತಿ"** ಎಂದು ಹೇಳಿರುವ ಪ್ರಕಾರ, ಶರೀರವಿಲ್ಲದೇನೇ ಸಂಕಲ್ಪಮಾತ್ರದಿಂದಲೇ ದಾಟುವ ಶಕ್ತಿಯನ್ನು ಈತನು ಪಡೆಯುವನೆಂಬ ಭಾವವು. ಆದುದರಿಂದಲೇ **ವಿರಜೈಕ್ಕಕ್ಕರೆ ಪಡುತ್ತಿ** ಎಂಬುದರಿಂದ ಸರ್ವೇಶ್ವರನೇ ವಿರಜಾವತರಣವನ್ನು ನಡಿಸಿಕೊಡುವ

ಶರೀರತ್ತೈಕ್ಕೊಡುತ್ತು, (೮) ಐರಂ ಮದೀಯ ಮೆಂಜ್ಙರ ಸರಸ್ಸಿನಳ ವುನ್ ಶೇರ್ತ್ತು, ಸೋಮಸವನ ಮೆಂಜ್ಙರ ಅಶ್ವತ್ಥತ್ತೈ ಕ್ಕಿಟ್ಟುವಿತ್ತು,

---

ನೆಂದು ಹೇಳಲ್ಪಟ್ಟಿರುತ್ತದೆ. ಪರಮಪದಸೋಪಾನದ ದಿವ್ಯದೇಶಪ್ರಾಪ್ತಿ ಪರ್ವ ದಲ್ಲಿ "ವಿಮಲ ಮಧುರ ಸುರಭಿ ಶೀತಳವಾನ ವಿರಜಾ ಪ್ರವಾಹತ್ತೈ ಅವ ಗಾಹಿತ್ತು ಅಳಕ್ಕಿಲ್ಲ ಪವಿತ್ರಪಾಣಿಯಾನ ಅಮಾನವನುಡೈಯ ಕರ ಸ್ಪರ್ಶತ್ತಾಲೆ ವಾಸನಾ ವಿಶೇಷಙ್ಗಳಿಂದರ್ಱ ದಿವ್ಯದೇಶ ಪ್ರಾಪ್ತಿಯಾಲೆ ಸಲೋಕನಾಯ್, ಅಪ್ರಾಕೃತಾಪ್ರಾಕೃತಮಾಯ ವಿಲಕ್ಷಣ ವಿಗ್ರಹಯೋಗ ತ್ತಾಲೆ ಸರೂಪನಾಯ್" ಎಂದು ಹೇಳುವುದರಿಂದ ಅಮಾನವ ಕರಸ್ಪರ್ಶವೂ ದಿವ್ಯಮಂಗಳ ವಿಗ್ರಹ ಪ್ರಾಪ್ತಿಯೂ ಉಂಟಾಗುತ್ತವೆಯೆಂದು ಹೇಳುವುದರಿಂದ ಸಾಲೋಕ್ಯವೂ ಸಾರೂಪ್ಯವೂ ಪ್ರಾಪ್ತವಾಗುತ್ತದೆಂದು ತಿಳಿಸಿದಂತಾಯಿತು. ಮುಂದೆ ಸಾಯುಜ್ಯವೂ ಉಂಟಾಗುತ್ತದೆಂದು ಹೇಳಲ್ಪಡುತ್ತದೆ.

ಇಲ್ಲಿ ಮಾತ್ರ ಅಮಾನವ ಕರಸ್ಪರ್ಶವು ಹೇಳಲ್ಪಡಲಿಲ್ಲವು. ಆದರೆ ಅಪ್ರಾ ಕೃತ ಶರೀರತ್ತೈ ಕೊಡುತ್ತು ಎಂದರೆ ಶುದ್ಧ ಸತ್ವಮಯವಾದ ದಿವ್ಯಮಂಗಳ ವಿಗ್ರಹವನ್ನು ಕೊಟ್ಟು ಎಂದು ಹೇಳಲ್ಪಟ್ಟಿರುತ್ತದೆ. ಆ ಶರೀರವು ಸರ್ವೇಶ್ವರನ ರೂಪಕ್ಕೆ ಸಮಾನವಾದುದು, ಚತುರ್ಭುಜಯುಕ್ತರಾಗಿ ಶಂಖಚಕ್ರಧರರಾಗಿರುವ ರೂಪವು.

ಅಲ್ಲಿಂದ ಮುಂದಕ್ಕೆ ಹೋಗುವ ಮಾರ್ಗದಲ್ಲಿ ಏನೇನು ಇರುತ್ತವೆಂಬುದು ಕೌಷೀತಕೀ ಬ್ರಾಹ್ಮಣದಲ್ಲಿ ಹೇಳಲ್ಪಟ್ಟಿರುತ್ತದೆ. ಅವನ್ನು ವಿಸ್ತರಿಸುತ್ತಾರೆ.

(೮) ಮತ್ತು (೯) ಐರಂ ಮದೀಯ ಮೆಂಜ್ಙರ ಸರಸ್ಸಿನಳವುನ್ ಶೇರ್ತ್ತು - ಐರಂ ಮದೀಯವೆಂದು ಹೆಸರುಳ್ಳ ಸರಸ್ಸಿನವರೆಗೂ ಸೇರಿಸಿ; "ತದೈರಂ ಮದೀಯಂ ಸರಸ್ತದಶ್ವತ್ಥಃ ಸೋಮಸವನ ಸ್ತದಪರಾಜಿತಾ ಪೂರ್ಬ್ರಹ್ಮಣಃ ಪ್ರಭುವಿಮಿತಗ್ಂ ಹಿರಣ್ಮಯಂ" ಎಂದು (ಛಾಂ. ೮. ೫. ೩) ಶ್ರುತಿಯಲ್ಲಿ ಹೇಳಿರುವ ಐರಂಮದೀಯವೆಂದು ಹೆಸರುಳ್ಳ ಸರಸ್ಸನ್ನೂ, ಸೋಮ ಸವನವೆಂಜ್ಙರ ಅಶ್ವತ್ಥತ್ತೈ ಕಿಟ್ಟುವಿತ್ತು - ಸೋಮಸವನವೆಂಬ ಅಶ್ವತ್ಥ ವೃಕ್ಷವನ್ನು ಸೇರುವ ಹಾಗೆ ಮಾಡಿ; ಇವುಗಳು ವಿರಜಾ ನದಿಯನ್ನು ದಾಟಿದ ನಂತರ ಶ್ರಿಯಃಪತಿಯ ಸಭಾಮಂಟಪಕ್ಕೆ ಹೋಗುವ ಮಾರ್ಗದಲ್ಲಿ ಸಿಕ್ಕುತ್ತವೆಂಬ ಭಾವವು. ಇವು ನಿತ್ಯವಿಭೂತಿಗೆ ಸೇರಿದವು. ಐರಂಮದೀಯ ವೆಂದರೆ, ಇರ ಯಾಮಾದ್ಯನ್ತಿ ಯಸ್ಮಿನ್ ತತ್ ಎಂಬ ವ್ಯುತ್ಪತ್ತಿಯಿಂದ ಅಮೃತಮಯವಾದು

(೧೦) ಮಾಲಾಂಜನ ಚೂರ್ಣವಾಸೋ ಭೂಷಣ ಹಸ್ತೈಗಳಾದ ಐನೂರು ದಿವ್ಯಾಪ್ಸರಸ್ಸುಕ್ಕಳೈ ಇಟ್ಟು ಎದಿರ್ ಕೊಳ್ಳವಿತ್ತು (೧೧) ಬ್ರಹ್ಮಾಲಂಕಾರತ್ತಾಲೆ ಅಲಂಕರಿಪ್ಪಿತ್ತು (೧೨) ಬ್ರಹ್ಮಗಂಧ ರಸ ತೇಜಸ್ಸುಕ್ಕಳೈ

ಚೆಂಜ ಭಾವವು; ಸೋಮಸವನವೆಂದು ಈ ಅಶ್ವತ್ಥಕ್ಕೆ ಏಕೆ ಹೆಸರೆಂದರೆ, ಚಂದ್ರನ ಹಾಗೆ ತುಂಬಾ ಆಹ್ಲಾದಕರವಾದುದರಿಂದ; ಅಲ್ಲಿಂದ ಮುಂದಕ್ಕೆ ಶ್ರುತಿಯು ಪ್ರಭು ವಿಮಿತಂ - ಸರ್ವೇಶ್ವರನ ದಿವ್ಯಮಂಗಳ ವಿಗ್ರಹ ವಿಶಿಷ್ಟವಾದ, ಹಿರಣ್ಮಯಂ - ಬಹು ಪ್ರಕಾಶವಾದ ಸಭಾಮಂಟಪವಿದೆ ಎಂದು ಹೇಳಲ್ಪಟ್ಟಿರುತ್ತದೆ. ಇಲ್ಲಿ ಛಾಂದೋಗ್ಯವು ಬ್ರಹ್ಮಚರ್ಯದಲ್ಲಿದ್ದ ಮಹಾಭಾಗವತನು ಸರ್ವೇಶ್ವರನ ಸಭೆಯನ್ನು ಕುರಿತು ಹೋಗುವನೆಂದು ಹೇಳಿ, ಆ ಮಾರ್ಗದಲ್ಲಿ ಈ ಸರಸ್ಸೂ ಅಶ್ವತ್ಥವೂ ಸಹ ಸಿಕ್ಕುತ್ತವೆಂದು ಬೋಧಿಸುತ್ತದೆ. ಛಾಂದೋಗ್ಯದಲ್ಲಿ ಮೂರು ಸರಸ್ಸುಗಳು ಸಿಕ್ಕುತ್ತವೆಂದು ಹೇಳಲ್ಪಟ್ಟಿದೆ:—(೧) ಅರವೆಂದೂ, (೨) ಅರಣ್ಯವೆಂದೂ ಇವೆರಡನ್ನು ಅರ್ಣವಗಳೆಂದು ಹೇಳಿರುತ್ತದೆ, (೩) ಐರಂಮದೀಯಂ. ಶ್ರೀ ದೇಶಿಕರವರು ಇಲ್ಲಿ ಮೂರನೆಯದೊಂದನ್ನು ಮಾತ್ರವೇ ತಿಳಿಸಿರುತ್ತಾರೆ. ಇದು ವಿರಜಾ ಎರಡಕ್ಕೂ ಉಪಲಕ್ಷಣವು, ಮಾರ್ಗದಲ್ಲಿರುವವೆಲ್ಲವನ್ನೂ ಹೇಳದೆ ಮುಖ್ಯವಾದುದನ್ನು ಮಾತ್ರ ಹೇಳುವ ಪದ್ಧತಿಯೂ ಉಂಟು.

(೧೦) ಅಲ್ಲಿಂದ ಮುಂದಕ್ಕೆ ಈತನಿಗುಂಟಾಗುವ ಸತ್ಕಾರವನ್ನು ಕೌಷೀತಕೀ ಬ್ರಾಹ್ಮಣದಲ್ಲಿ ಹೇಳಿರುವ ಪ್ರಕಾರ ಉಪದೇಶಿಸುತ್ತಾರೆ:—ಮಾಲಾಂಜನ ಚೂರ್ಣವಾಸೋ ಭೂಷಣ ಹಸ್ತೈಗಳಾದ ದಿವ್ಯಾಪ್ಸರಸ್ಸುಗಳೈ ಇಟ್ಟು - ಪುಷ್ಪ ಹಾರ, ಧೂಪ, ಗಂಧದ ಸುವಾಸನೆಯ ಹುಡಿ, ಪೀತಾಂಬರ, ದಿವ್ಯಾಭರಣಗಳನ್ನು ಕೈಗಳಲ್ಲಿ ಧರಿಸಿದ ದಿವ್ಯರಾದ ಅಪ್ಸರಸ್ಸುಗಳ ಮೂಲಕ, ಎದಿರ್ ಕೊಳ್ಳವಿತ್ತು - ಎದುರುಗೊಳ್ಳುವ ಹಾಗೆ ಮಾಡಿಸಿ, ಅವರುಗಳ ಮೂಲಕವಾಗಿಯೇ, (೧೧) ಬ್ರಹ್ಮಾಲಂಕಾರತ್ತಾಲೇ ಅಲಂಕರಿಪ್ಪಿತ್ತು - ಪರಬ್ರಹ್ಮವನ್ನು ಹೋಗಿ ಸೇರುವದಕ್ಕೆ ಯೋಗ್ಯವಾದ ಪರಮಾಪುರುಷನಿಗೆ ಸಮುಚಿತ ಅಲಂಕಾರದಿಂದ ಅಲಂಕರಿಸಲ್ಪಡುವ ಹಾಗೆ ಮಾಡಿ ಎಂಬರ್ಥವು ಕೌಷೀತಕಿಯು ಹೇಳಿರುವದೇನೆಂದರೆ:—"ತಂ ಪಞ್ಚ ಶತಾನ್ಯಪ್ಸರಸಾಂ ಪ್ರತಿಧಾವಂತಿ ಶತಂ ಮಾಲಾಹಸ್ತಾ ಶ್ಶತಮಂಜನ ಹಸ್ತಾ ಶ್ಶತಂ ಚೂರ್ಣಹಸ್ತಾ ಶ್ಶತಂ ವಾಸೋಹಸ್ತಾ ಶ್ಶತಂ ಭೂಷಣಹಸ್ತಾ ಸ್ತಂ ಬ್ರಹ್ಮಾಲಂಕಾರೇಣಾಲಂಕುರ್ವಂತಿ," ಐನೂರು ಅಪ್ಸರಸ್ಸುಗಳು ಓಡಿಬರುವ ಸಂಭ್ರಮವನ್ನು ಹೇಳುವರು. ಅವರಲ್ಲಿ ನೂರು

ಪ್ರವೇಶಿಪ್ಪಿತ್ತು, (೧೩) "ಕುಡಿಯುಡಿಯಾರಿವರ್ ಗೋವಿಂದನ್ರನಕ್ಕೆನ್ರು।

ಮಂದಿಯು ಕೈಯಲ್ಲಿ ಹಾರವನ್ನು ಹಿಡಿದಿರುವವರಾಗಿಯೂ, ಇನ್ನು ನೂರು ಮಂದಿಯು ಗಂಧದ ಹುಡಿಯನ್ನೂ, ಇನ್ನು ನೂರು ಮಂದಿಯು ಒಳ್ಳೇ ಒಳ್ಳೇ ಬಟ್ಟೆಗಳನ್ನು ಕೈಯಲ್ಲಿ ಹಿಡಿದವರಾಗಿಯೂ, ಬಾಕಿ ನೂರು ಮಂದಿಯು ಆಭರಣ ಗಳನ್ನು ಕೈಯಲ್ಲಿ ಹಿಡಿದವರಾಗಿಯೂ ಬಂದು ಎದುರುಗೊಳ್ಳುವರು. ಇದೆಲ್ಲಾ ಏತಕ್ಕೆಂದರೆ, ಅಲಂಕಾರಮಾಡಿ ಶ್ರಿಯಃಪತಿಯ ಸಭಾಮಂಟಪ ಪ್ರವೇಶಕ್ಕೆ ಯೋಗ್ಯವಾದ, ಆತನಿಗೆ ಸಮವಾದ ಉಡುಪು ಆಭರಣಗಳಿಂದ ಅಲಂಕರಿಸುವದ ಕ್ಕಾಗಿ ಎಂದು ಹೇಳಲ್ಪಟ್ಟಿರುತ್ತದೆ.

(೧೨) ಬ್ರಹ್ಮಗಂಧ ರಸ ತೇಜಸ್ಸುಕ್ಕಳ್ಳೆ ಪ್ರವೇಶಿಪ್ಪಿತ್ತು - **ಸ ಆಗ ಚ್ಛತಿ ತಿಲ್ಯಂ ವೃಕ್ಷಂ, ತಂ ಬ್ರಹ್ಮಗಂಧಃ ಪ್ರವಿಶತಿ, ಸ ಆಗಚ್ಛತಿ ಸಾಲ ಜ್ಜಂ ಸ್ಥಾನಂತಂ ಬ್ರಹ್ಮರಸಃ ಪ್ರವಿಶತಿ, ಸ ಆಗಚ್ಛತಿ ಅಪರಾಜಿತ ಮಾ ಯತನಂ, ತಂ ಬ್ರಹ್ಮತೇಜಃ ಪ್ರವೇಶತಿ,** ಎಂದು ಕೌಷೀತಕಿಯಲ್ಲಿ ಹೇಳಿರುವ ಹಾಗೆ, ಸರ್ವೇಶ್ವರನ ಸಭೆಯನ್ನಲಂಕರಿಸುವದಕ್ಕೆ ಯೋಗ್ಯವಾದ ಗಂಧ ರಸ ತೇಜಸ್ಸುಗಳನ್ನು ಈತನು ಹೊಂದಿರಬೇಕಾಗಿರುವದರಿಂದ, ಬ್ರಹ್ಮಗಂಧವೂ, ಬ್ರಹ್ಮ ರಸವೂ, ಬ್ರಹ್ಮತೇಜಸ್ಸೂ ಸಹ ಈತನನ್ನು ಪ್ರವೇಶಿಸುತ್ತವೆ ಎಂದು ಇಲ್ಲಿ ಹೇಳ ಲ್ಪಟ್ಟಿರುತ್ತದೆ.

(೧೩) ಮುಂದೆ ಸರ್ವೇಶ್ವರನ ಗೋಪುರ ಬಾಗಲಲ್ಲಾಗುವ ಸತ್ಕಾರವನ್ನು ವರ್ಣಿಸುವರಾಗಿ, ನಮ್ಮಾಳ್ವಾರ್ರವರ ದಿವ್ಯಸೂಕ್ತಿಯಿಂದಲೇ ಆ ಸತ್ಕಾರ ಪ್ರಕಾರ ವನ್ನುಪದೇಶಿಸುತ್ತಾರೆ :—ಇವರ್ - ಈಗ ವೈಕುಂಠವನ್ನು ಕುರಿತು ಬಂದಿರುವ ಭಾಗವತಾಗ್ರೇಸರರು **ಗೋವಿಂದರ್ ತನಕ್ಕು** - ಎಂದರೆ ಸರ್ವೇಶ್ವರನಿಗೆ, **"ಗಾಂ ವಿಂದತೇ"** ಎಂಬ ವ್ಯುತ್ಪತ್ತಿಯಿಂದ ಭೂಮಿಯನ್ನು ಹೊಂದಿದವನು ಎಂದರೆ ತನ್ನ ಸ್ವಾಧೀನವಾಗಿ ವುಳ್ಳವನು, ಅಥವಾ ಅವತಾರ ದೆಶೆಯಲ್ಲಿ ಆಕಳನ್ನು ಹೊಂದಿದವನು ಎಂಬರ್ಥವಾಗುತ್ತವೆ, **ಕುಡಿಯುಡಿಯಾರ್** - ಕುಲಕ್ರಮವಾಗಿ ಬಂದ ದಾಸಭೂತರು, ಅಥವಾ ಶ್ರಿಯಃಪತಿಯು ಹೇಗೆ ಕುಲದೈವತೆಯೋ, ಆದುದ ರಿಂದ ಹಾಗೆ ಇವರು ಕುಲದಾಸರೆಂಬ ಭಾವವು, ಯಾವಾಗ ದಾಸಭೂತರೆಂಬುದು ಆ ಎದುರುಗೊಂಡ ನಿತ್ಯಸೂರಿಗಳಿಗೆ ವೇದ್ಯವಾಯಿತೋ ಆಗ ಅವರುಗಳು ಹೀಗೆ ಶ್ಲಾಘಿಸಿ, ಸತ್ಕರಿಸಿ, ಎದುರುಗೊಳ್ಳಲು ಕಾರಣವು. **ಎನ್ರು** - ಹೀಗೆ ಶ್ಲಾಘಿಸಿ,

(೧೩) ತಿರುವಾಯ್ಮೊಳಿ ೧೦. ೯. ೮.

ಮುಡಿಯುಡೈ ವಾನವರ್ ಮುಱೈ ಮುಱೈ ಯೆದಿರ್‌ಗೊಳ್ಳಕ್ಕೊಡಿಯಣಿ ನೆಡುಮತಿಟ್ಕೋಪುರಙ್ಕುರುಕವಿತ್ತು" (೧೪) ಇಂದ್ರಪ್ರಜಾಪತಿಗಳೆನ್ರು

ಮುಡಿಯುಡೈವಾನವರ್-ಅಭಿಷಿಕ್ತರಾದ ಅಥವಾ ಮಕುಟ ಧರಿಸಿದ ನಿತ್ಯಸೂರಿಗಳೂ, ಮುಕ್ತರೂ, ಸರ್ವೇಶ್ವರನೀಗ ಸಾಮ್ರಾಜ್ಯಪದವಿಯಲ್ಲಿ ಅಭಿಷಿಕ್ತನಾದ ಚಕ್ರವರ್ತಿಯು, ಹೀಗಿರುವಾಗ ಇವರುಗಳು ಹೇಗೆ ಅಭಿಷಿಕ್ತರು ಎಂದರೆ ಕೈಂಕರ್ಯ ಸಾಮ್ರಾಜ್ಯ ಪದವಿಯ ಮಾಹಾತ್ಮ್ಯಯನ್ನರಿತು **"ಅಹಂ ಸರ್ವಂ ಕರಿಷ್ಯಾಮಿ"** ಎಂದು ಹೇಳಿದ ಮಹನೀಯರಾದುದರಿಂದ ಇವರೂ ಅಭಿಷಿಕ್ತರೆಂದು ಹೇಳಲ್ಪಟ್ಟಿತು, ಇವರುಗಳು ಈ ವೈಕುಂಠವನ್ನು ಸೇರಲು ಬಂದವನನ್ನು, **ಮುಱೈ ಮುಱೈ ಎದಿರ್‌ಗೊಳ್ಳ** - ಪ್ರತ್ಯೇಕ ಪ್ರತ್ಯೇಕವಾಗಿ ಬಂದು ಎದುರುಗೊಂಡು ಬರಮಾಡಿಕೊಂಡು, **ಕೊಡಿಯಣಿ** - ಧ್ವಜದಿಂದಲಂಕೃತವಾದ, **ನೆಡುಮದಿಳ್ ಗೋಪುರಂ** - ಎತ್ತರವಾದ ಪ್ರಾಕಾರಗಳುಳ್ಳ ಗೋಪುರವನ್ನು, **ಕುರುಕವಿತ್ತು** - ಸಮೀಪಿಸುವ ಹಾಗೆ ಮಾಡಿ ಎಂಬರ್ಥವು. ಇಲ್ಲಿ ಮೂರು ಪಾದ ಮಾತ್ರ ಉದಾಹರಿಸಲ್ಪಟ್ಟಿತು. ನಾಲ್ಕನೇ ಪಾದವು, **"ಕುರುಗಿನರ್ । ವಡಿವುಡೈ ಮಾತವರ್ ವೈಗುಂದಮ್ ಪುಗವೇ"** ಏತಕ್ಕೆ ಗೋಪುರಸಮೀಪಕ್ಕೆ ಹೋಗಿದ್ದುದು ಎಂದರೆ ಆಳ್ವಾರ್ರು ಹೇಳುತ್ತಾರೆ. **ಅಡಿವುಡೈ** - ಯಾವಾಗಲೂ **ಸಾಕ್ಷಾನ್ಮನ್ಮಥ ಮನ್ಮಥಃ** ಎಂದು ಹೇಳಿರುವ ಹಾಗೆ ಸರ್ವಾಯುಧ ಸರ್ವಭೂಷಣಯುಕ್ತನಾಗಿ ಸರ್ವಲಾವಣ್ಯಮಹೋದಧಿಯಾಗಿರುವ, **ಮಾಧವರ್,** ದ್ವಯದ ಉತ್ತರಖಂಡದ ಶ್ರೀಮಚ್ಛಬ್ದದಲ್ಲಿ ತೋರುವ, ಮತ್ತು **ವೈಕುಂಠೇತು ಪರೇಲೋಕೇ ಶ್ರಿಯಾ ಸಾರ್ಧಂ** ಎಂಬಲ್ಲಿಯೂ ವ್ಯಕ್ತಪಡುವ ಪ್ರಾಪ್ಯನಾದ ಶ್ರಿಯಃಪತಿಯ, **ವೈಗುನ್ದಂ ಪುಗವೇ** - ವೈಕುಂಠವನ್ನು ಪ್ರವೇಶಿಸುವದಕ್ಕಾಗಿ, ಗೋಪುರ ಬಾಗಿಲ ಸಮೀಪವನ್ನು ಸೇರುವ ಹಾಗೆ ಸತ್ಕರಿಸಿ ಕರೆದುಕೊಂಡು ಹೋಗುವರೆಂದು ಹೇಳಲ್ಪಟ್ಟಿತು. ನಿತ್ಯಸೂರಿಗಳು ಧ್ವಜದಿಂದಲಂಕರಿಸಲ್ಪಟ್ಟ ಪ್ರಾಕಾರಗಳುಳ್ಳ ಗೋಪುರದ ಊಚಿಗೇನೇ ಬಂದು ಎದುರುಗೊಂಡು, ಸುಖಾಗಮನವನ್ನು ಬಯಸಿ, ಲೀಲಾವಿಭೂತಿಯಲ್ಲಿ ಅವರು ಮಾಡಿದ ಭಗವದ್ಭಾಗವತ ಕೈಂಕರ್ಯಗಳನ್ನು ಕೊಂಡಾಡಿ, ತಾವು ಯಾರ್ಯಾರೆಂಬುದನ್ನು ಒಬ್ಬೊಬ್ಬರಾಗಿ ತಿಳಿಸಿ, ಅವರನ್ನು ಗೋಪುರದ ಬಾಗಿಲವರೆಗೂ ಕರೆದುಕೊಂಡುಹೋಗಿ ಬಿಟ್ಟ ಎಂಬ ಭಾವವು.

(೧೪) **ಇಂದ್ರ ಪ್ರಜಾಪತಿಗಳೆನ್ರು ಪೇರುಡೈಯ**-ಇಂದ್ರನೆಂದೂ ಪ್ರಜಾಪತಿ ಎಂದೂ ಹೆಸರು ಹೊಂದಿರುವ, **ದ್ವಾರಗೋಪರ್ಕೈ**-ದ್ವಾರಪಾಲಕರನ್ನು ಕಿಟ್ಟ

ಪೇರುಡೈಯ ದ್ವಾರಗೋಪರ್ಕೆ ಕಿಟ್ಟನಿತ್ತು, (೧೫) "ವೈಗುನ್ದಮ್ ಪುಗುತ

ನಿತ್ತು-ಹೊಂದುವ ಹಾಗೆ ಮಾಡಿ, ದೇವೇಂದ್ರನೂ ಚತುರ್ಮುಖನೂ ದ್ವಾರಪಾಲಕರಲ್ಲವು. ಆದುದರಿಂದ, ಈ ಇಂದ್ರಪ್ರಜಾಪತಿಗಳು. ಪೇರುಡೈಯ ಎಂದು ಹೇಳಿರುವದರಿಂದ ಬೇರೆ ಎಂದು ಭಾವಿಸತಕ್ಕದ್ದು. "ಸ ಆಗಚ್ಛತೀಂದ್ರ ಪ್ರಜಾಪತೀ ದ್ವಾರಗೋಪೌ ತಾವಸ್ಮಾದಪಾದ್ರವತ" ಇತಿ ಎಂಬ ಕೌಷೀತಕೀ ವಾಕ್ಯಾನುಸಾರ ಈ ದ್ವಾರಪಾಲಕರನ್ನು ಹೊಂದುವನೆಂದು ಹೇಳಲ್ಪಟ್ಟಿರುತ್ತದೆ.

ಮುಂದೆ ವಿಲಕ್ಷಣಗಳಾದ ರಾಜೋಪಚಾರಗಳು ಈತನಿಗೆ ನಡೆಯುತ್ತವೆ ಎಂಬುವನ್ನು ನಮ್ಮಾಳ್ವಾರ್ರವರ ಪಾಶುರಗಳ ಮೂಲಕ ತಿಳಿಯಪಡಿಸುತ್ತಾರೆ. **"ವೈಗುನ್ದಮ್"** ಎಂಬ ಪಾಶುರವು ಯಾವುದೆಂದರೆ :—

> ವೈಕುನ್ದಮ್ಪುಕುತಲುಮ್ ವಾಶಲಿಲ್ ವಾನವರ್
> ವೈಕುನ್ದನ್ರಮರೆಮರೆ ಮತಿಡಮ್ಪುಕುದೆನ್ರು
> ವೈಕುನ್ದತ್ತಮರರು ಮುನಿವರುಮ್ ವಿಯನ್ದನರ್
> ವೈಕುನ್ದಮ್ಪುಗುವದು ಮಣ್ಣವರ್ ವಿದಿಯೇ ॥

ವೈಕುನ್ದಮ್ ಪುಗುತಲುಮ್-ವೈಕುಂಠವನ್ನು ಪ್ರವೇಶಿಸಿದ ಒಡನೆಯೇ, **ವಾಶಲಿಲ್ ವಾನವರ್** - ಬಾಗಲಲ್ಲಿರುವ ನಿತ್ಯಸೂರಿಗಳು, **ವೈಕುನ್ದನ್ರಮರ್**- ಶ್ರೀ ವೈಕುಂಠನಾಥನಿಗೆ ಆದರಣೀಯರಾದವರು ಎಂದರೆ ಅಂತಹ ನೀವು, **ಎಮರ್** - ನಮಗೆ ತುಂಬಾ ಬೇಕಾದವರು, **ಎಮತಿಡಮ್ ಪುಕುದು ಎನ್ರು** - ನಮ್ಮ ಸ್ಥಾನದಲ್ಲಿ, **ಪುಕುದು** - ನೀವು ಪ್ರವೇಶಿಸತಕ್ಕದ್ದು, ಎಂದರೆ ನಾವು ಅನುಭವಿಸುವ ಕೈಂಕರ್ಯ ಸಂಪತ್ತನ್ನು ತಾವೂ ಅನುಭವಿಸತಕ್ಕದ್ದು, **ಎನ್ರು** - ಎಂಬದಾಗಿ, **ವಿಯಂದನರ್** - ಆಶ್ಚರ್ಯಪಟ್ಟರು. **ವೈಕುಂದತ್ತು** - ಶ್ರೀ ವೈಕುಂಠದಲ್ಲಿರುವ, **ಅಮರರುಮ್ ಮುನಿವರುಮ್** - ಗುಣನಿಷ್ಠರೂ ಕೈಂಕರ್ಯಪರರೂ, **ಮಣ್ಣವರ್** - ಈ ಭೂಮಂಡಲಕ್ಕೆ ಸೇರಿ ಪ್ರಕೃತಿಬದ್ಧರಾಗಿ ಇಂದ್ರಿಯಗಳಿಗೆ ವಶವಾಗಿರುವವರು, **ವೈಗುನ್ದಮ್ ಪುಗುವದು** - ವೈಕುಂಠವನ್ನು ಬಂದು ಪ್ರವೇಶಿಸುವದು, **ವಿದಿಯೇ** - ಒಂದು ಪರಮಭಾಗ್ಯವಲ್ಲವೇ ಎಂದು, **ವಿಯನ್ದನರ್** - ಸಂತೋಷಪಟ್ಟರು ಅಥವಾ ಆಶ್ಚರ್ಯಪಟ್ಟರು. ಈ ನಿತ್ಯಸೂರಿಗಳು ಬಂದು ಗೋಪುರದ್ವಾರದಲ್ಲಿ ಎದುರುಗೊಂಡು ಸತ್ಕರಿಸಿ, ಪ್ರಕೃತಿಯಿಂದ ಕಟ್ಟಲ್ಪಟ್ಟು ಇಂದ್ರಿಯಗಳಿಗೆ ವಶವಾಗಿರುವ ಈ ಭೂಮಂಡಲದವರು ಪರಮಪದಕ್ಕೆ

(೧೫) ತಿರುವಾಯ್‌ಮೊಳಿ ೧೦. ೯. ೯.

ಬರುವವೆಂಬುದು ತುಂಬಾ ಭಾಗ್ಯವಾದ ವಿಷಯವೇ ಎಂದು ಕೊಂಡಾಡಿ, ನಾವು ಅನುಭವಿಸುವ ಕೈಂಕರ್ಯ ಸಾಮ್ರಾಜ್ಯವನ್ನು ನೀವೂ ಅನುಭವಿಸತಕ್ಕದ್ದೆಂದು ಸಂತೋಷಗೊಂಡರೆಂಬಭಿಪ್ರಾಯವು. ಇದರ ಮುಂದಿನ ಪಾಶುರವು: —

ವಿದಿವಗೈ ಪುಗುನ್ದನರೆನ್ರು ನಲ್ ವೇದಿಯರ್ ।
ಪದಿಯಿನಿರ್ಪಾಙ್ಗಿನಿರ್ ಪಾದಙ್ಗಳ್ ಕಳುವಿನರ್ ।
ನಿದಿಯುನರ್ಚ್ಚುಣ್ಣಮುನಿರೈ ಕುಡವಿಳಕ್ಕಮು ।
ಮದಿಮುಕ ಮಡನ್ದೈಯರೇನ್ದಿನರ್ ವನ್ದೇ ॥

ಇದರರ್ಥವು:—**ವಿದಿವಗೈ** - ನಮ್ಮ ಭಾಗ್ಯರೂಪವಾದ ಈಶ್ವರಾಜ್ಞೆಯ ಪ್ರಕಾರ, **ಪುಗನ್ದನರ್** - ಬಂದು ಈ ವೈಕುಂಠ ಲೋಕವನ್ನು ಪ್ರವೇಶಿಸಿದರು, **ಎನ್ರು** - ಎಂದು ಸಂತುಷ್ಟಚಿತ್ತರಾಗಿ, **ನಲ್‌ವೇದಿಯರ್** - **ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸ ಸ್ಸಮಿಂಧತೇ** ಎಂದರೆ ಮೇಧಾವಿಗಳಾಗಿಯೂ ಭಗವದ್ವಿಷಯ ಸ್ತುತಿಪರರಾಗಿಯೂ, ಭಗವದನುಭವೈಕಾಗ್ರೇಸರರಾಗಿಯೂ ಇರುವ ನಿತ್ಯಸೂರಿಗಳು ಪ್ರಕಾಶಿಸುತ್ತಿದ್ದಾರೆ ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ ಚನ್ನಾಗಿ ಶ್ರುತಿಪ್ರತಿಪಾದ್ಯರಾದ ನಿತ್ಯಸೂರಿಗಳು **ಪದಿಯಿನಿಲ್** - ತಮ್ಮ ತಮ್ಮ ಸ್ಥಳಗಳಲ್ಲಿ, **ಪಾಙ್ಗಿನಿಲ್** - ಸೋಪಚಾರವಾಗಿ, **ಪಾದಙ್ಗಳ್ ಕಳುವಿನರ್** - ಪಾದ್ಯವನ್ನು ಸಮರ್ಪಿಸಿದರು, ಪಾದಗಳನ್ನು ತೊಳೆದರು. **ನಿಧಿಯುಮ್** - **"ಧನಂ ಮದೀಯಂ ತವ ಪಾದ ಪಙ್ಕಜಂ"** ಎಂದು ಹೇಳಿರುವ ಹಾಗೆ ಆಶ್ರಿತರಿಗೆ ನಿಧಿರೂಪವಾದ **ಶ್ರೀ** ಶಠಗೋಪವನ್ನೂ, **ನರ್ಚುಣ್ಣಮುಮ್** - **ಒಳ್ಳೇ** ಶ್ರೀ ಚೂರ್ಣವನ್ನೂ, **ನಿರೈಕುಡ** - **ಪೂರ್ಣ** ಕುಂಭವನ್ನೂ, **ವಿಳಕ್ಕುಮು** - ದೀಪವನ್ನೂ ಸಹ, **ಮದಿಮುಕಮ್** - ಚಂದ್ರನ ಹಾಗೆ ಮುಖವುಳ್ಳ, **ಮಡನ್ದೈಯರ್** - ಸ್ತ್ರೀಪುರುಗಳು ಅಪ್ಸರಸ್ತ್ರೀಯರು, **ಏನ್ದಿನರೇ** ಎದುರುಗೊಂಡು ಬಂದು ಧರಿಸಿದರಲ್ಲವೇ? ಎಂದರೆ ವೇದಪ್ರತಿಪಾದ್ಯರಾದ ನಿತ್ಯಸೂರಿಗಳು ಎದುರಿಗೆ ಬಂದು ತಾವುಗಳು ಲೀಲಾವಿಭೂತಿಯನ್ನು ಬಿಟ್ಟು ಇಲ್ಲಿಗೆ ನಮ್ಮೊಂದಿಗೆ ಇರಲು ಬಂದಿದ್ದು ತಮ್ಮ ಭಾಗ್ಯೋದಯ ವೆಂದು ಶ್ಲಾಘಿಸಿ ತಾವು **ಅಸ್ಪೃಷ್ಟ ಸಂಸಾರ ಗಂಧರ್**, ಇವರುಗಳಾದರೋ ಒಹು ಕಾಲಕ್ಕೀಗ ಮುಕ್ತರುಬಂಧರು ಎಂಬ ಅಹಂಕಾರ ಒಂದೂ ಇಲ್ಲದೆ ಅವರ ತಿರುವಡಿಗಳನ್ನು ತೊಳೆದು ಅವರಿಗೆ ಮರ್ಯಾದಾರ್ಥವಾಗಿ ಪದ್ಧತಿ ಪ್ರಕಾರ ಅತಿ ಸುಂದರವಾದ ಹೆಂಗಸರಿಂದ ತರಲ್ಪಟ್ಟ, ಶ್ರೀ ಚೂರ್ಣ, ಪೂರ್ಣಕುಂಭ, ದೀಪಗಳ ಮೂಲಕ ಶ್ರೀಶಠಾರಿಯನ್ನು ಸಮರ್ಪಿಸಿ ಇವರಿಗ ನಮ್ಮ ಮುಖ್ಯ ಧನವೆಂದು ನಿರೂಪಿಸಿದರೆಂಬ ಭಾವವು. ಈಗಲೂ ಮಹನೀಯರುಗಳು ದೇವಾಲಯಕ್ಕೆ ಬಂದರೆ ಈ ಮರ್ಯಾದೆಗಳು ನಡೆಯುತ್ತವೆ.

ಲುಮ್" ಎನ್ರು ತುಡಙ್ಗಿ ಮೇಲ್‌ಮೂನ್ರು ಪಾಟ್ಟಿಲುಮ್ ಶೊಲ್ಲುಗಿರ ಪಡಿಯೇ ಅಪ್ರಾಕೃತಙ್ಗಳಾನ ರಾಜೋಪಚಾರಙ್ಗಳೈಯೈಪ್ಪಣ್ಣಿವಿತ್ತು (೧೬) ಆನಂದಮಯಮಾನ ಮಣ್ಡಪತ್ತಿಲ್ ಅಳಗೋಲಕ್ಕತ್ತಿಲೆ ಪುಕು

ವನ್ದವರೆದಿರ್ ಕೊಳ್ಳಮಾ ಮಣಿಪಣ್ಡಪತ್ತು ।
ಅನ್ದಮಿಲ್ ಪೇರಿನ್ಬತ್ತಡಿಯರೋಡಿರುನ್ದಮೈ ।
ಕೊನ್ದಲರ್ ಪೊಳಿಲ್ ಕುರುಗೂಡಚ್ಚಡ ಗೋಪನ್ ಶೊ ।
ಲ್ಚನ್ದಙ್ಗಳಾಯಿರ ತ್ತಿವೈ ವಲ್ಲಾರ್ ಮುನಿವರೇ ॥

ಈ ಪಾಶುರದ ಪೂರ್ವಾರ್ಧದಿಂದ, ಈತನು ಸರ್ವೇಶ್ವರ ಸಭಾಮಂಟಪಕ್ಕೆ ಕರೆದುಕೊಂಡು ಹೋದ ಒಡನೆಯೇ, ತನಗೆ ಪರಮಪ್ರಿಯನಾಗಿದ್ದು, ಇದುವರೆಗೂ ಮಾರ್ಗ ತಪ್ಪಿಹೋದವನು ಪುನಃ ಸರಿಯಾದ ಮಾರ್ಗಕ್ಕೆ ಬಂದು ಸೇರಿದನೇ ಎಂಬ ಪ್ರೀತ್ಯತಿಶಯದಿಂದ ಸಂತುಷ್ಟನಾದ ಸರ್ವೇಶ್ವರನೇ ಬಂದು ಎದುರುಗೊಂಡು ಹೋಗಿ ಪರಮಾನಂದವನ್ನು ಹೊಂದುವನು ಎಂದು ಹೇಳಿ ಉತ್ತರಾರ್ಧದಿಂದ ಈ ಹತ್ತು ಪಾಶುರಗಳನ್ನು ಪಠನಾದಿಗಳಿಂದ ತಿಳಿದವರು ಭಗವದ್ಗುಣ ಮನನ ಶೀಲರಾಗುವರೆಂದು ಹೇಳುತ್ತಾರೆ.

ಹೀಗೆ ಈ ಮೂನ್ರು ಪಾಟ್ಟಿಲುಮ್ ಶೊಲ್ಲುಗಿರ ಪಡಿಯೇ - ಹೀಗೆ ಮೂರು ಪಾಶುರಗಳಿಂದಲೂ ಶ್ರೀ ನಮ್ಮಾಳ್ವಾರ್‌ರವರು ಉಪದೇಶಿಸಿರುವ ಹಾಗೆ, ಅಪ್ರಾಕೃತಙ್ಗಳಾನ ರಾಜೋಪಚಾರಙ್ಗಳೈ ಪ್ಪಣ್ಣಿವಿತ್ತು - ನಿರುಪಾಧಿಕಗಳಾದ ರಾಜೋಪಚಾರಗಳು ಈತನಿಗೆ ಉಂಟಾಗುವ ಹಾಗೆ ಮಾಡಿ, ಪ್ರಾಕೃತ ರಾಜಭೋಗಗಳು ಅನಿತ್ಯಗಳು ಮತ್ತು ಭಯಯುಕ್ತವಾದವು, ಹಾಗಲ್ಲದೆ ನಿರುಪಾಧಿಕಗಳಾದವು ಎಂಬ ಭಾವವು; ಅದೂ ಅಲ್ಲದೆ ಪ್ರಾಕೃತ ರಾಜೋಪಚಾರಗಳು ಭಯಾನುಸಾರ ನಡೆಯತಕ್ಕವು ಮಾತ್ರವೇ ವಿನಾ ನಿರ್ಹೇತುಕ ಪ್ರೀತಿಪುರಸ್ಸರವಾದವಲ್ಲವು; ಹಾಗಲ್ಲದೆ ಇವು ನಿರ್ಹೇತುಕ ಪ್ರೀತಿಪುರಸ್ಸರವಾದವಾದುದರಿಂದ ಅಪ್ರಾಕೃತಗಳೆಂದು ಹೇಳಲ್ಪಟ್ಟವು. ಅಥವಾ, ಇಲ್ಲಿನ ಉಪಚಾರ ದ್ರವ್ಯಗಳಲ್ಲಿ ತ್ರಿಗುಣಾತ್ಮಕವಾದ ಪ್ರಕೃತಿ ಸಂಬಂಧವೇ ಇಲ್ಲದಿರುವುದರಿಂದಾಗಲಿ ಅಪ್ರಾಕೃತವಾದವೆಂದು ಹೇಳಲ್ಪಟ್ಟಿತು.

(೧೬) ಆನಂದ ಮಯಮಾನ - ನಿರುಪಾಧಿಕ ನಿರತಿಶಯ ಆನಂದದ ಪ್ರಾಚುರ್ಯವುಳ್ಳ, ಮಣ್ಡಪತ್ತಿಲ್-ಮಂಟಪದಲ್ಲಿ, ಅಳಗೋಲಕ್ಕತ್ತಿಲೆ - ದಿವ್ಯ ಸುಂದರಿವಾದ ಶ್ರಿಯಃಪತಿಯ ಒಡ್ಡೋಲಗದಲ್ಲಿ, ಪುಕುರವಿಟ್ಟು - ಪ್ರವೇಶ

(೮) ತ ವಿಟ್ಟ್ವ (೧೭) "ಅನಯಾಹಂ ವಶೀಭೂತಃ ಕಾಲಮೇತನ್ನ ಬುದ್ಧ್ವಾನ್ । ಉಚ್ಚಮಧ್ಯಮ ನೀಚಾನಾಂ ತಾಮಹಂ ಕಥಮಾವಸೇ । ಅಪೇತ್ಯಾಹಮಿಮಾಂಹಿ(ಭಿ)ತ್ವಾ ಸಂಶ್ರಯಿಷ್ಯೇನಿರಾಮಯಂ । ಅನೇನಸಾಮ್ಯಂ ಯಾಸ್ಯಾಮಿ ನಾನಯಾಹ ಮಚೇತಸಾ । ಕ್ಷಮಂ ಮಮ ಸಹಾನೇನ

ಉಂಟಾಗುವ ಹಾಗೆ ಮಾಡಿ; ಸರ್ವೇಶ್ವರನೇ ಹೀಗೆಲ್ಲಾ ಮಾಡುವನೆಂಬಭಿಪ್ರಾಯವು.

(೧೭) **ಅಹಂ** - ನಾನು, **ಅನಯಾ** - ಈ ಪ್ರಕೃತಿಯಿಂದ, **ವಶೀಭೂತಃ** - ವಶ ಮಾಡಿಕೊಳ್ಳಲ್ಪಟ್ಟವನಾಗಿ, ಎಂದರೆ ಪ್ರಕೃತಿಗೆ ವಶನಾಗಿ, **ಏತತ್ ಕಾಲಂ** - ಇಷ್ಟು ಕಾಲದವರೆಗೂ, **ನ ಬುದ್ಧವಾನ್** - ನಾನು ತಿಳಿಯದೆ ಹೋದೆನು, ನನಗೆ ಬುದ್ಧಿ ಬರಲಿಲ್ಲವು ಎನ್ನುವದರಿಂದ ಇಷ್ಟು ಕಾಲವೂ ಬುದ್ಧಿಯಿಲ್ಲದೆ ವ್ಯರ್ಥವಾಗಿ ಕಳೆದೆನು ಎಂಬ ತಾತ್ಪರ್ಯವು. **ಉಚ್ಚ ಮಧ್ಯಮ ನೀಚಾನಾಂ, ಉಚ್ಚ** - ಉತ್ಕೃಷ್ಟವಾದ ದೇವಶರೀರವೇನು, **ಮಧ್ಯಮ** - ಉತ್ಕೃಷ್ಟವೂ ನೀಚವೂ ಅಲ್ಲದ ಮನುಷ್ಯ ಶರೀರವೇನು, **ನೀಚಾನಾಂ** - ಇವೆರಡೂ ಅಲ್ಲದೆ ಮಿಕ್ಕ ಎಲ್ಲಾ ಪಶು ಪಕ್ಷಿ ಸರೀಸೃಪಾದಿ ನೀಚಶರೀರಗಳೇ ಕೊನೆಯಾಗಿ ವುಳ್ಳ, **ತಾಂ** - ಆ ಪ್ರಕೃತಿಯನ್ನು, **ಕಥಂ** - ಹೇಗೆ, **ಆವಸೇ** - ಪ್ರವೇಶಿಸಿ ವಸಿಸುವೆನು? **ಅಹಂ** - ನಾನು, **ಇಮಾಂ** - ಈ ಪ್ರಕೃತಿಯನ್ನು, **ಹಿತ್ವಾ** - ತ್ಯಜಿಸಿ, **ಅಪೇತ್ಯ** - ದೂರವಾಗಿ ಬಂದು, **ನಿರಾಮಯಂ** - ದೋಷಗಂಧವಿಲ್ಲದೆ ಆನಂದಮಯನಾದ ಸರ್ವೇಶ್ವರನನ್ನು, **ಸಂಶ್ರಯಿಷ್ಯೇ** - ಚನ್ನಾಗಿ ಆಶ್ರಯಿಸುವೆನು, **ಅನೇನ** - ಈ ಆನಂದಮಯನಾದ ಪರಬ್ರಹ್ಮನೊಂದಿಗೆ, **ಸಾಮ್ಯಂ** - "ನಿರಂಜನಃ ಪರಮಂ ಸಾಮ್ಯಮುಪೈತಿ" ಎಂಬ ಶ್ರುತಿಯಲ್ಲಿ ಹೇಳಿರುವ ಹಾಗೆ ಸಾಮ್ಯವನ್ನು, **ಯಾಸ್ಯಾಮಿ** - ಹೊಂದುವೆನು, **ಅಹಂ**-ನಾನು, **ಅಚೇತಸಾ** - ಜ್ಞಾನಶೂನ್ಯವಾಗಿ ಜಡವಾದ, **ಅನಯಾ** - ಈ ಪ್ರಕೃತಿಯೊಂದಿಗೆ, **ಸಾಮ್ಯಂ** - ಸಾಮ್ಯವನ್ನು, **ನ ಯಾಸ್ಯಾಮಿ** - ಹೊಂದುವದಿಲ್ಲವು, **ಮಮ** - ನನಗೆ, **ಅನೇನ ಸಹ** - ಈ ಪರಮಾತ್ಮನೊಂದಿಗೆ, **ಏಕತ್ವಂ** - ಸೇರಿ ಒಂದಾಗಿ ಒಟ್ಟಿಗಿರುವದು, **ಕ್ಷಮಂ** - ಯೋಗ್ಯವಾದುದು, **ಅನಯಾ ಸಹ** - ಈ ಪ್ರಕೃತಿಯೊಂದಿಗೆ, **ಮಮ** - ನನಗೆ, **ಏಕತ್ವಂ** - ಒಟ್ಟಿಗೆ ಒಂದಾಗಿರುವದು, **ನಕ್ಷಮಂ**- ಯೋಗ್ಯವಾದುದಲ್ಲವು. ಪ್ರಕೃತಿಗೆ ವಶನಾಗಿ, ದೇಹದೊಂದಿಗೆ ಏಕೀಕರಿಸಿ,

(೧೭) ಭಾರತ, ಶಾಂತಿ. ೩೧೨. ೩೦, ೩೮, ೩೯.

ನೈಕತ್ವ ಮನಯಾ ಸಹ" (೧) "ಕ್ರೀಡಂತಂ ರಮಯಾ ಸಾರ್ಧಂ ಲೀಲಾ ಭೂಮಿಷು ಕೇಶವಂ । ಮೇಘಶ್ಯಾಮಂ ವಿಶಾಲಾಕ್ಷಂ ಕದಾ ದ್ರಕ್ಷ್ಯಾಮಿ

ಭ್ರಮಯುಕ್ತನಾಗಿರುವದು ತನಗೆ ಉಚಿತವಾದುದಲ್ಲವು. ಇಷ್ಟು ದಿನಗಳೂ ಇದು ತಿಳಿಯದೆ ಅಜ್ಞಾನದಿಂದ ದೇಹವೇ ಆತ್ಮಾ ಎಂದು ಭ್ರಮಿಸಿ ವ್ಯರ್ಥವಾಗಿ ಕಾಲಗಳನ್ನು ಕಳೆದುಬಿಟ್ಟೆನು. ಆದುದರಿಂದ ದೇಹಕ್ಕಿಂತ ನಾನು ವಿಲಕ್ಷಣನೆಂಬ ಜ್ಞಾನ ಉಂಟಾಗಿರುವದರಿಂದ ಅದನ್ನು ತ್ಯಜಿಸಿ ಸರ್ವೇಶ್ವರನನ್ನೇ ಆಶ್ರಯಿಸುತ್ತೇನೆ. ಇದರಿಂದ ನಾನು ಕಾಲಾನಂತರ ಪರಬ್ರಹ್ಮನೊಂದಿಗೆ ಸಾಮ್ಯವನ್ನು ಮುಕ್ತಿದೆಸೆಯಲ್ಲಿ ಹೊಂದುವೆನು. ಈ ಅಚೇತನವಾದ ಪ್ರಕೃತಿಯೊಂದಿಗೆ ಏಕೀಭವಿಸಿ ಸಾಮ್ಯವನ್ನು ಹೊಂದಿರುವದು ನನಗೆ ಸುತರಾಂ ಸ್ವರೂಪವಲ್ಲವೆಂಬಭಿಪ್ರಾಯವು. ಇದು ವಸಿಷ್ಠಕರಾಳಜನಕ ಸಂವಾದದಲ್ಲಿ ವಸಿಷ್ಠರ ಉಕ್ತಿಯು. "ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ ಬಹ್ವೀಂ ಪ್ರಜಾಂ ಜನಯಂತೀಂ ಸರೂಪಾಂ । ಅಜೋಹ್ಯೇಕೋ ಜುಷಮಾಣೋನುಶೇತೇ ಜಹಾತ್ಯೇನಾಂ ಭುಕ್ತಭೋಗಾಮಜೋನ್ಯಃ" ಎಂಬ ಶ್ರುತಿಯೂ ಅನುಸಂಧೇಯವು. "ರಮಯಾಸಾರ್ಧಂ - ಲಕ್ಷ್ಮಿಯೊಂದಿಗೆ, ಲೀಲಾಭೂಮಿಷು - ಲೀಲೋದ್ಯಾನಗಳಲ್ಲಿ, ಕ್ರೀಡಂತಂ - ವಿಹರಿಸುತ್ತಿರುವ, ಕೇಶವಂ - ಬ್ರಹ್ಮರುದ್ರಾದಿಗಳಿಗೂ ಸ್ವಾಮಿಯಾದ ಭಗವಂತನನ್ನು, ಕದಾ-ಯಾವಾಗ, ಮೇಘಶ್ಯಾಮಂ ವಿಶಾಲಾಕ್ಷಂ - ಮೇಘದ ಹಾಗೆ ಕಪ್ಪಗಿರುವ, ವಿಶಾಲಗಳಾದ ಕಣ್ಣುಗಳುಳ್ಳ, ಇದರಿಂದ ಸ್ವಾಮಿಯನ್ನು ನೋಡುವ ಮಾತ್ರದಿಂದಲೇ ಉಂಟಾಗುವ ದುಃಖಸಂಬಂಧವಿಲ್ಲದ ಆನಂದತ್ವವೂ, ಕೃಪಾಪರಿಪೂರ್ಣತೆಯೂ ಬೋಧಿಸಲ್ಪಟ್ಟವು, ಚಕ್ಷುಷಾ-ಅಪ್ರಾಕೃತವಾದ ದಿವ್ಯ ಚಕ್ಷುಸ್ಸಿನಿಂದ, ದ್ರಕ್ಷ್ಯಾಮಿ-ನೋಡುವೆನೋ, ಈ ಶ್ಲೋಕದಿಂದ ಪರಿಪೂರ್ಣ ಬ್ರಹ್ಮಾನುಭವದಲ್ಲಿರುವ ಉತ್ಕಟೇಚ್ಛೆಯು ಪ್ರದರ್ಶಿಸಲ್ಪಟ್ಟಿತು. ಭರತನನ್ನು ಹಿಂಬಾಲಿಸಿ ಬಂದ ನಾಗರಿಕರಿಗೆ ಹೇಗೆ ಶ್ರೀರಾಮನನ್ನು ನೋಡಬೇಕೆಂಬ ಉತ್ಕಟ ಮನೋರಥವಿತ್ತೋ ಹಾಗೆಯೇ ವೈಕುಂಠವನ್ನು ಕುರಿತು ಹೋಗುವ ಪ್ರಪನ್ನನಿಗೂ ಉಂಟೆಂದು ತೋರ್ಪಡಿಸುತ್ತಾರೆ:—ಮೇಘಶ್ಯಾಮಂ ಎಂಬುವದರಿಂದ ದರ್ಶನ ಮಾತ್ರದಿಂದಲೇ ಸರ್ವ ಸಂತಾಪವನ್ನೂ ಹೋಗಲಾಡಿಸುವವನು ಎಂಬರ್ಥವು, ಮಹಾಬಾಹುಂ - ಆಜಾನುವಾಗಿಯೂ ದುಂಡಗೂ ಸುಂದರವಾಗಿಯೂ ಇರುವ ತೋಳುಗಳುಳ್ಳವನಾದುದರಿಂದ ಆಶ್ರಿತನಿ

---

(೧) ದ್ವಿತೀಯ ಜಿತನ್ತಾ. ೨೧.

ಚಕ್ಷುಷಾ" (೨) "ಮೇಘಶ್ಯಾಮಂ ಮಹಾಬಾಹುಂ ಸ್ಥಿರಸತ್ವಂ ದೃಢವ್ರತಮ್ । ಕದಾದ್ರಕ್ಷ್ಯಾಮಹೇರಾಮಂ ಜಗತಶ್ಶೋಕನಾಶನಂ । ದೃಷ್ಟ ಏವಹಿ ನಶ್ಶೋಕ ಮಪನೇಷ್ಯತಿ ರಾಘವಃ । ತಮಸ್ಸರ್ವಸ್ಯ ಲೋಕಸ್ಯ ಸಮುದ್ಯನ್ನಿವ ಭಾಸ್ಕರಃ" ಇತ್ಯಾದಿಗಳಿಲ್ ಕಟ್ಟಳೈಯಿಲೇ ಇವರ್ ಮನೋರಥಿತ್ತಪಡಿಯೇ ಇಳನ್ದ ಏಳನೆಲ್ಲಾಮ್ ತೀರ ನಿರತಿಶಯಭೋಗ್ಯನಾನ

ಗಿರುವ ಸರ್ವ ವಿಧ ಆಪತ್ತುಗಳನ್ನು ಪರಿಹರಿಸುವ, ಸ್ಥಿರಸತ್ವಂ ಆಶ್ರಿತ ಸಂರಕ್ಷಣೆಯಲ್ಲಿ ಸ್ಥಿರವಾದ ವ್ಯವಸಾಯಗಳುಳ್ಳ, ದೃಢವ್ರತಂ-ಸುಗ್ರೀವಾದಿ ಅಂತರಂಗರಾದವರಿಂದಲೂ ಕೂಡ ವಿಭೀಷಣನಂತಹ ಶರಣಾಗತನನ್ನು ರಕ್ಷಿಸುವೆನೆಂಬ ವ್ರತದಿಂದ ಕದಲಿಸಲಾಗದಷ್ಟು ಸ್ಥಿರಪ್ರತಿಜ್ಞೆಯುಳ್ಳ, ಜಗತಶ್ಶೋಕನಾಶನಂ - ಜಗತ್ತಿನ ಶೋಕಗಳನ್ನು ನಾಶಮಾಡುವ, ಶ್ರೀರಾಮನನ್ನು, ಕದಾ - ಯಾವಾಗ, ದ್ರಕ್ಷ್ಯಾಮಹೇ - ನೋಡುವೆವೋ? ದೃಷ್ಟ ಏವಹಿ - ನಮಗೆ ಆತನು ಕಣ್ಣಿಗೆ ಬಿದ್ದರೆ, ಎಂದರೆ ನಾವು ಆತನನ್ನು ಆಶ್ರಯಿಸಿ ಆತನು ನಮ್ಮನ್ನು ಕೃಪಾಕಟಾಕ್ಷದಿಂದ ನೋಡಿದರೆ, ಆತನನ್ನು ನಾವು ನೋಡಿದರೇನೇ ಆತನು ನಮ್ಮನ್ನು ನೋಡುವನು ಎಂಬ ಭಾವವು, ಸಃ ರಾಘವಃ - ಅಂತಹ ಶ್ಲಾಘ್ಯಗುಣಗಳುಳ್ಳ ಶ್ರೀರಾಮನು, ನಃ - ನಮ್ಮಗಳ, ಶೋಕಂ - ಶೋಕ ಸಮುದಾಯವನ್ನು, ಅಪನೇಷ್ಯತಿ - ಹೋಗಲಾಡಿಸುವನು. ಹೇಗೆಂದರೆ:—ಸಮುದ್ಯನ್ ಭಾಸ್ಕರಃ-ಉದಯಿಸುವ ಸೂರ್ಯನು, ಸರ್ವಸ್ಯ ಲೋಕಸ್ಯ - ಸಮಸ್ತ ಲೋಕದ, ತಮ ಇವ-ಅಂಧಕಾರವನ್ನು ಹೇಗೆ ಹೋಗಲಾಡಿಸುವನೋ ಹಾಗೆ, ಎಂಬ ಭಾವವು. ಈ ಶ್ಲೋಕಗಳಲ್ಲಿ ದ್ರಕ್ಷ್ಯಾಮಿ, ದ್ರಕ್ಷ್ಯಾಮಹೇ ಎಂಬುದರಿಂದ ಬರೀ ನೋಡುವದರಲ್ಲಿ ಮಾತ್ರವೇ ತಾತ್ಪರ್ಯವಲ್ಲವು, ತತ್ಫಲವಾದ ಕೈಂಕರ್ಯಪ್ರಾಪ್ತಿಯಲ್ಲಿ ಅಭಿಪ್ರಾಯವು ಎಂದು ಭಾವಿಸತಕ್ಕದ್ದು; ಇತ್ಯಾದಿಗಳಿಲ್ - ಇವೇ ಮೊದಲಾದ ಅವತಾರ ಸಂದರ್ಭಗಳಲ್ಲಿ ತೋರಿಬರುವ, ಕಟ್ಟಳೈಯಿಲೆ - ರೀತಿಯಲ್ಲಿ, ಇವರ್ ಮನೋರಥಿತ್ತಪಡಿಯೇ - ಈತನು ತುಂಬಾ ಆಶೆಪಟ್ಟದಕ್ಕೆ ಸರಿಯಾಗಿ, ಇಳನ್ದ ಇಳವೆಲ್ಲಾಮ್ - ಇದುವರೆಗೂ ಅನುಭವಿಸಲಿಲ್ಲವೇ ಎಂಬ ಕೊರತೆಯೆಲ್ಲಾ, ತೀರ - ಹೋಗುವ ಹಾಗೆ, ನಿರತಿಶಯ ಭೋಗ್ಯನಾನ - ನಿತ್ಯಮುಕ್ತರಿಗೆ ಪರಮ ಭೋಗ್ಯನಾದ, ತನ್ನೈ ತಾನ್ ಕಾಟ್ಟಿ - ತನ್ನನ್ನು ಪರಮಪದವಾಸಿಯಾಗಿ ಶ್ರಿಯಃಪತಿಯಾಗಿರುವ, ಹಾರ್ದನಾದ ತಾನೇ ತೋರಿಸಿದವನಾಗಿ, (೧೫) ತನ್ನೈ -

---

(೨) ರಾಮಾ. ಅಯೋಧ್ಯಾ. ೮೩. ೮-೯.

ತನ್ನೈತ್ತಾ ಕಾಟ್ಟಿ, (೧೮) ತನ್ನೈ ಪೆರುತ್ತಿತ್ತ ತಾಳಿಣೈಕ್ಕೀಳ್ ಕ್ಕೊಣ್ಡು (೧೯) ತನ್ನೋಡು ಸಮಾನಭೋಗತ್ವ ಲಕ್ಷಣಮಾನ ಸಾಯುಜ್ಯತ್ತಾಲೆ

ಸ್ವರೂಪವನ್ನು, ಪೆರುತ್ತಿ - ಉಂಟುಮಾಡಿ, ಎಂದರೆ **ಸ್ವೇನರೂಪೇಣಾಭಿ ನಿಷ್ಪದ್ಯತೇ** ಎಂದು ಹೇಳಿರುವ ಹಾಗೆ ಸ್ವಸ್ವರೂಪಾವಿರ್ಭಾವವನ್ನುಂಟುಮಾಡಿ ಮತ್ತು **"ಅಪಹತ ಪಾಪ್ಮಾ ವಿಜರೋ ವಿಮೃತ್ಯು ರ್ವಿಶೋಕೋ ವಿಜಿಘತ್ಸೋಽಪಿಪಾಸಸ್ಸತ್ಯಕಾಮ ಸ್ಸತ್ಯಸಂಕಲ್ಪಃ"** ಎಂದು ಹೇಳಿರುವ ಗುಣಾಷ್ಟಕಗಳನ್ನುಂಟು ಮಾಡಿ, **ತ ತಾಳಿಣೈಕ್ಕೀಳ್ ಕೊಂಡು**-ತನ್ನ ಪಾದಾರವಿಂದದ ಕೆಳಗೆ ಸ್ವೀಕರಿಸಿ, ಎಂದರೆ ತನ್ನ ಪಾದಕಮಲಗಳಿಗೆ ಒಂದು ದಿಂಬಾಗಿ ಮಾಡಿಕೊಂಡು ಎಂದು ಸಾರಾಸ್ವಾದಿನಿ ಸಾರವಿವರಣಿಯವರು ವ್ಯಾಖ್ಯಾನ ಮಾಡಿರುತ್ತಾರೆ; ಸಾರಪ್ರಕಾಶಿಕಾಯವರು ಚರಣಾರವಿಂದದ ಕಿಂಕರನಾಗಿ ಮಾಡಿಕೊಂಡು ಎಂದು ವ್ಯಾಖ್ಯಾನ ಮಾಡಿರುತ್ತಾರೆ. (೧೯) **ತನ್ನೋಡು** - ತನ್ನೊಂದಿಗೆ, **ಸಮಾನ ಭೋಗತ್ವ ಲಕ್ಷಣಮಾನ**-ಸಮಾನಭೋಗತ್ವವೇ ಲಕ್ಷಣವಾಗಿಯುಳ್ಳ, **ಸಾಯುಜ್ಯತ್ತಾಲೆ**-ಸಾಯುಜ್ಯದಿಂದ, ನಾವುಗಳು ಪರಮಾತ್ಮನೊಂದಿಗೆ ಸೇರಿದರೂ ಪ್ರತ್ಯೇಕವಾಗಿರುವ ಸ್ಥಿತಿಗೇನೇ ಸಾಯುಜ್ಯವೆಂದು ಹೆಸರು, **ಇವನುಕ್ಕು**- ಈ ಹೊಸದಾಗಿ ವೈಕುಂಠಕ್ಕೆ ಬಂದಿರುವ ಪ್ರಪನ್ನನಿಗೆ, **ಸಜಾತೀಯರಾನ** - ತನ್ನ ಜಾತೀಯರಾದ, **ಅನ್ದಮಿಲ್ ಪೇರ್** - ಅಂತವಿಲ್ಲದೇ ಇರುವ ಕಾಲಸ್ವರೂಪಗಳ ಪರಿಚ್ಛೇದವಿಲ್ಲದ, **ಇನ್ಬತ್ತು** - ಆನಂದವನ್ನು ಹೊಂದಿರುವ, **ಅಡಿಯರೋಡು** - ದಾಸಭೂತರಾದ ನಿತ್ಯಸೂರಿಗಳೊಂದಿಗೆ, **ಇರುತ್ತಿ**-ನಿಲ್ಲಿಸಿ; ಭೋಗತ್ವವು ಸರ್ವೇಶ್ವರನಿಗೂ ತನಗೂ ನಿತ್ಯಸೂರಿಗಳಿಗೂ ಎಲ್ಲರಿಗೂ ಸಮಾನವಾದುದರಿಂದ, ಸಮಾನಭೋಗತ್ವ ಲಕ್ಷಣ ಉಳ್ಳದ್ದೆಂದು ಹೇಳಲ್ಪಟ್ಟಿರುತ್ತದೆ. **ಪರಮಂ ಸಾಮ್ಯಮುಪೈತಿ** ಎಂಬ ಶ್ರುತಿಯು ಇಲ್ಲಿ ಉಪಪಾದಿಸಲ್ಪಟ್ಟಿತು. ಈ ಅಭಿಪ್ರಾಯವೇ, **"ಭೋಗ ಮಾತ್ರ ಸಾಮ್ಯ ಲಿಂಗಾಚ್ಚ"** (೪. ೪. ೨೧) ಎಂಬ **ಸೂತ್ರದಲ್ಲೂ** ಭೋಗದಲ್ಲಿ ಮಾತ್ರ ಸಾಮ್ಯವೇ ವಿನಾ, ಜಗದ್ವ್ಯಾಪಾರಗಳಾದ ಸೃಷ್ಟಿ ಸ್ಥಿತಿ ಪಾಲನ ಲಯಗಳಲ್ಲಿಲ್ಲವೆಂದು ಉಪದೇಶಿಸಲ್ಪಟ್ಟಿರುತ್ತದೆ. ಹಾಲು ತನ್ನಲ್ಲಿಗೆ ಬಂದ ನೀರಿಗೆ ತನ್ನ ಸರ್ವಸ್ವವನ್ನೂ ಕೊಟ್ಟು, **"ಕ್ಷೀರೇಣಾತ್ಮಗತೋದಕಾಯಹಿಗುಣಾ ದತ್ತಾಃ ಪುರಾತೇಖಿಲಾಃ"** ಎಂದು ಕವಿಯು ಹೇಳಿರುವ ಹಾಗೆ, ಸಮ ಮಾಡಿಕೊಳ್ಳುವ ಶಕ್ತಿಯಿರುವಾಗ ಗುಣಾಷ್ಟಕಾವಿರ್ಭಾವ ಮೂಲಕವಾಗಿ ತನಗೆ ಸಮನಾಗಿ ಮಾಡಿಕೊಂಡು, ಪಿತಾವಾದವನು ತನ್ನ ಊಟ ವಸನಾದಿ ಭೋಗಗಳನ್ನೇ ಮಗನಿಗೂ ಉಂಟು

ಇವನುಕ್ಕು ಸಜಾತೀಯರಾನ ಅನ್ಬರ್ಗಳ್ ಪೇರಿನ್ಬತ್ತಡಿಯರೋಡಿರುತ್ತಿ
(೨೦) ಇಪ್ಪಡಿ ಸಮಸ್ತ ಪ್ರತಿಬಂಧಕ ನಿವೃತ್ತಿ ಪೂರ್ವಕಮಾಗವುಮ್,

ಮಾಡುವ ತೆರದಿ, ಲೋಕಪಿತಾವಾದ ಸರ್ವೇಶ್ವರನೂ ಇಷ್ಟು ಕಾಲ ಮಾರ್ಗ ತಪ್ಪಿ ಹೋಗಿದ್ದು ಬಂದ ಪುತ್ರನಿಗೆ ತನಗೆ ಸಮವಾದ ಆನಂದವನ್ನುಂಟುಮಾಡುವನು ಎಂಬುವದರಲ್ಲಿ ಏಕೆ ಕೆಲವರು ಸಂದೇಹಪಡುವರೋ ತಿಳಿಯದು. **"ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ"** ಎಂಬ ಶ್ರುತಿಯಲ್ಲಿ ಮೋಕ್ಷದೆಶೆಯಲ್ಲಿ ಈತನು ಆ ಪರಬ್ರಹ್ಮನ ಕಲ್ಯಾಣಗುಣಗಳನ್ನು ಪರಬ್ರಹ್ಮನೊಂದಿಗೆ ಅನುಭವಿಸುವನು ಎಂದರೆ ಆ ಪರಬ್ರಹ್ಮನ ಕಲ್ಯಾಣಗುಣಗಳ ಅನುಭವವು ಯಾವಾಗ ಆಯಿತೋ, ತನ್ಮೂಲಕ ಪರಬ್ರಹ್ಮಾನುಭವವು ಈತನಿಗೆ ಉಂಟಾಗುತ್ತದೆಂದು ಹೇಳಿರುವದರಿಂದ, **ಸಃ, ಬ್ರಹ್ಮಣಾ ಸಹ** ಎಂದು ಪೃಥಕ್ಕಾಗಿ ಶ್ರುತಿಯು ಹೇಳಿರುವದರಿಂದ ಅಭೇದಾರ್ಥವು ಇಲ್ಲಿ ಸಾಮ್ಯ ಪದಕ್ಕೆ ಎಂದಿಗೂ ಸರಿಹೋಗುವದಿಲ್ಲವೆಂದು ಗ್ರಹಿಸತಕ್ಕದ್ದಾಗಿರುತ್ತದೆ. ಆದುದರಿಂದಲೇ ಮಹಾನುಭಾವರು **ಸಮಾನ ಭೋಗತ್ವ ಲಕ್ಷಣಮಾನ ಸಾಯುಜ್ಯಮ್** ಎಂದು ಪ್ರಯೋಗಿಸಿರುತ್ತಾರೆ. ಸ್ವರೂಪೈಕ್ಯಕ್ಕೆ ಸಮಾನತ್ವವೆಲ್ಲಿಯದು ? ಸಮಾನಭೋಗತ್ವವನ್ನು ಶ್ರುತಿಯು ಬೋಧಿಸಿದರೆ ಆನಂದ ತಾರತಮ್ಯವು ತಾನೇ ಎಲ್ಲಿಯದು ? ಇವೆರಡಭಿಪ್ರಾಯವೂ ಸರಿಯಲ್ಲವೆಂದು ತೋರಿಸುವದಕ್ಕಾಗಿ **ದ್ವಾಸುಪರ್ಣಾ ಸಯುಜಾ** ಎಂಬ ಶ್ರುತಿಯಲ್ಲಿ ತೋರಿಬರುವ ಸಾಯುಜ್ಯವೇ ಸರಿಯಾದಭಿಪ್ರಾಯವೆಂದು ಈ ವಾಕ್ಯ ಖಂಡದಿಂದ ತೋರಿಸಿರುತ್ತಾರೆ. ಲೀಲಾವಿಭೂತಿಯಲ್ಲಿರುವಾಗಲೂ ಸರ್ವೇಶ್ವರನು ಹಾರ್ದನಾಗಿರುವದರಿಂದ ಈತನು **ಸಯುಕ್**, ಹಾಗೆಯೇ ಪರಮಪದದಲ್ಲಿಯೂ ಕೂಡ ಈತನು ಸಯುಕ್ ಎಂಬ ಭಾವವು. ಇಲ್ಲಿ ಪರಿಚ್ಛಿನ್ನವಾದ ದುಃಖಮಿಶ್ರತ್ವಾದಿ ದೋಷಯುಕ್ತವಾದ ಆನಂದವು, ಉಪಾಸಕನಾದರೆ ಇನ್ನೂ ಹೆಚ್ಚಿನ ಆನಂದವು, ಆದರೆ ಅದೂ ಪರಿಚ್ಛಿನ್ನವಾದುದು ; ವೈಕುಂಠದಲ್ಲಾದರೋ ನಿರತಿಶಯವಾದ ಅಪರಿಚ್ಛಿನ್ನವಾದ ಸರ್ವೇಶ್ವರಾನಂದಕ್ಕೆ ಸಮವಾದ ಆನಂದವೆಂಬ ಭಾವವು ಯಾವಾಗ ಸರ್ವೇಶ್ವರಾನಂದಕ್ಕೆ ಸಮವೆಂದು ಶ್ರುತಿಯು ಹೇಳಿತೋ ಆಗ ನಿತ್ಯಸೂರಿಗಳಾನಂದಕ್ಕೆ ಸಮವೆಂಬುದು ಕೈಮುತಿಕ ನ್ಯಾಯಸಿದ್ಧವು. ಆದುದರಿಂದಲೇ **ಪೇರಿನ್ಬತ್ತಡಿಯರೋಡೆ ಇರುತ್ತಿ** ಎಂಬ ಪ್ರಯೋಗವು. (೨೦) ಹಿಂದೆ ಸರ್ವೇಶ್ವರನು ನಡೆಸಿದ ಹತ್ತೊಂಭತ್ತು ವಾಕ್ಯಖಂಡಗಳಲ್ಲಿ ಉಪಪಾದಿತಗಳಾದ ಮಹತ್ತಾದ ಉಪಕಾರಗಳನ್ನೆಲ್ಲಾ ಸಂಗ್ರಹಿಸಿ ಹೇಳುತ್ತಾರೆ:— **ಇಪ್ಪಡಿ** - ಈ

ಸ್ವಸ್ವರೂಪಾವಿರ್ಭಾವಪೂರ್ವಕಮಾಗವುಮ್, ದೇಶಕಾಲಾವಸ್ಥಾ ಸಙ್ಕೋಚ ಮಿಲ್ಲಾದ ಪಡಿಯಾಗವುಮ್, ತನ್ ಮನೋರಥತ್ತುಕ್ಕು ಅನುರೂಪ

ಮೇಲೆ ಉಪಪಾದಿಸಿದ ರೀತಿಯಲ್ಲಿ, **ಸಮಸ್ತ ಪ್ರತಿಬಂಧಕ ನಿವೃತ್ತಿಪೂರ್ವಕಮಾಗವುಮ್** - ಈತನಿಗೆ ಪುಣ್ಯಪಾಪರೂಪ ಕರ್ಮಗಳೇ ಪ್ರತಿಬಂಧಕಗಳು, ಅವುಗಳು ಯಾವಾಗ ಎಲ್ಲವೂ ನಾಶವಾದವೋ ಆಗ ಸಮಸ್ತ ಪ್ರತಿಬಂಧಕಗಳೂ ನಿವೃತ್ತಿಯಾದವೆಂದು ಭಾವವು; ಹೀಗೆ ಎಲ್ಲಾ ಪ್ರತಿಬಂಧಕಗಳ ನಿವೃತ್ತಿಪೂರ್ವಕವಾಗಿಯೂ, **ಸ್ವಸ್ವರೂಪಾವಿರ್ಭಾವ ಪೂರ್ವಕಮಾಗವುಮ್** - ಪ್ರಕೃತಿಯೊಂದಿಗೆ ಇದುವರೆಗೂ ಈತನು ಇದ್ದುದರಿಂದ ಈತನ ಸ್ವರೂಪವನ್ನು ಅದು ಮರೆಸಿದ್ದಿತು, ಈಗ ಪ್ರಕೃತಿ ಸಂಬಂಧವು ನಿಶ್ಶೇಷವಾಗಿ ತೊಲಗಿದುದರಿಂದ. ತನ್ನ ಮೊದಲಿನ ಶ್ರೇಷ್ಠವಾದ ಸ್ವರೂಪದ ಪುನಃ ಆವಿರ್ಭವಿಸುವಿಕೆಯ ಮೂಲಕವಾಗಿಯೂ, **ದೇಶಕಾಲಾವಸ್ಥಾ ಸಙ್ಕೋಚ ಮಿಲ್ಲಾದಪಡಿಯಾಗವುಮ್** - ಈ ದೇಶ ಈ ಕಾಲ ಈ ಅವಸ್ಥೆಗಳಲ್ಲಿ ಉಂಟು, ಇನ್ನೊಂದು ದೇಶ, ಕಾಲ, ಅವಸ್ಥೆಗಳಲ್ಲಿ ಇಲ್ಲವೆಂಬ ಹಾಗೆ ಇಲ್ಲದೆ ಅನಂತವಾದುದಾಗಿಯೂ, **ತನ್ ಮನೋರಥತ್ತುಕ್ಕು** - ಪರಮಾತ್ಮನಾದ ತನ್ನ ಇಷ್ಟಕ್ಕೆ, **ಅನುರೂಪಮಾಗ** - ಅನುಸಾರವಾದ, **ಇವನ್ ಮನೋರಥಿತ್ತ ಕೈಙ್ಕರ್ಯ ವರ್ಗಂಗಳೈ ಯೆಲ್ಲಾಮ್** - ಈ ಮುಕ್ತನು ಅಪೇಕ್ಷಿಸಿದ ಕೈಂಕರ್ಯ ಸಮೂಹವನ್ನೆಲ್ಲಾ, **ಯಾವದಾತ್ಮಭಾವಿಯಾಗ** - ಆತ್ಮಸ್ವರೂಪವಿರುವವರೆಗೂ ಎಂಬುವರಿಂದ ನಿರಂತರವಾಗಿ ನಿತ್ಯದಲ್ಲೂ, **ಕೊಣ್ಡರುಳಿ** - ಸ್ವೀಕರಿಸುವವರ ಮೂಲಕ ಕೃಪೆಗೈಯ್ದು; ಹಿಂದಿನ ವಾಕ್ಯಖಂಡದಿಂದ ನಿತ್ಯಸೂರಿಗಳೊಂದಿಗೆ ಆತನಿಗೂ ಪರಿಪೂರ್ಣ ಬ್ರಹ್ಮಾನುಭವ ಉಂಟೆಂದು ಹೇಳಲ್ಪಟ್ಟಿತು. ಈ ಪರಿಪೂರ್ಣ ಬ್ರಹ್ಮಾನುಭವವು ಎಂಥಾದ್ದೆಂಬುದು ಈಗ ವಿಶದೀಕರಿಸಲ್ಪಡುತ್ತದೆ. ಕರ್ಮರೂಪವಾದ ಪ್ರತಿಬಂಧಕಗಳೊಂದೂ ಇಲ್ಲದೆ ಸ್ವಸ್ವರೂಪಾವಿರ್ಭಾವ ಉಂಟಾಗಿ ಗುಣಾಷ್ಟಕಪ್ರಾಪ್ತಿಯುಂಟಾಗಿರುವದರಿಂದ ವಿಕಸಿತವಾದ ಜ್ಞಾನ ಉಂಟಾಗಿ, ಶೇಷಿಯಾದವನಿಗೆ "ಅಹಂ ಸರ್ವಂ ಕರಿಷ್ಯಾಮಿ" (ರಾ. ಅಯೋಧ್ಯಾ ೩೧. ೨೫) ಎಂದು ಹೇಳಿರುವ ಹಾಗೆ ನಿತ್ಯಕೈಂಕರ್ಯವನ್ನು ಮಾಡುವದೇ ಶೇಷನಾದವನಿಗೆ, ಸ್ವರೂಪವೆಂದು ಭಾವಿಸಿ, ಶ್ರಿಯಃಪತಿಗೆ ಯಾವ ಕೈಂಕರ್ಯಗಳು ಭೋಗ್ಯವಾದವೋ, ಉಚಿತವೋ ಅಂಥಾದ್ದನ್ನು ಶ್ರಿಯಃಪತಿಯು ಕೃಪೆಯಿಂದಲೇ ತಿಳಿದು ಮಾಡಿಸಿ, ಅವುಗಳನ್ನೆಲ್ಲಾ ಸರ್ವೇಶ್ವರನು ಪರಮ ಕೃಪೆಯಾ ಸ್ವೀಕರಿಸುವನೆಂಬ ಭಾವವು. ಆತನಿಗೆ ಇಷ್ಟವಿಲ್ಲದುದನ್ನು ಈ ಮುಕ್ತನು ಎಂದಿಗೂ

ಮಾಗ ಇರ್ವ ಮನೋರಥಿತ್ತ ಕೈಙ್ಕರ್ಯವರ್ಗಙ್ಗಳೈ ಯೆಲ್ಲಾಮ್ ಯಾವದಾತ್ಮಭಾವಿಯಾಗ ಕೊಣ್ಡುಗುಳಿ (೧) "ಸಮಯಸಇಮಯೇ ನಿತ್ಯನಿರ್ದೋಷಗಂಧಾಃ"

ಮಾಡುವದಿಲ್ಲವು. ಪರಸ್ಪರ ಇಂಗಿತಗಳನ್ನರಿತವರಾದುದರಿಂದ ಸರ್ವೇಶ್ವರನಿಗೆ, ಭೋಗ್ಯವಾಗಿ, ಯೋಗ್ಯವಾದವುಗಳನ್ನೇ ಸರ್ವೇಶ್ವರನು ಇವನ ಮೂಲಕ ಮಾಡಿಸುವಹಾಗೆ ಮಾಡಿ ಅದರಿಂದ ಆನಂದಿಸುವನೆಂದು ಹೇಳಲ್ಪಟ್ಟಿತು. ಇಂತಹ ಆನಂದಕ್ಕೆ ಯಾವಾಗಲಾದರೂ ಚ್ಯುತಿಯುಂಟೋ ಎಂದರೆ ಎಂದಿಗೂ ಅದು ಪರಿಚ್ಛಿನ್ನವಾದುದಲ್ಲವೆಂದು ತಿಳಿಸುವದಕ್ಕಾಗಿ "**ದೇಶಕಾಲಾವಸ್ಥಾ ಸಙ್ಕೋಚಮಿಲ್ಲಾದ ಪಡಿಯಾಗವುಮ್**" ಎಂದು ಪ್ರಯೋಗಿಸಿರುತ್ತಾರೆ. ಯಾವುದೋ ಒಂದು ಕಾಲದಲ್ಲಿ ಪರಸ್ಪರ ವಿರಸ ಉಂಟಾಗಿ, ಸರ್ವೇಶ್ವರನು ಈಗ ಮುಕ್ತನಾಗಿರುವವನನ್ನು ಪುನಃ ಲೀಲಾವಿಭೂತಿಗೆ ಏಕೆ ದಬ್ಬಿಡಕೂಡದು ಎಂಬ ಸಂದೇಹದಲ್ಲಿ ಶ್ರುತಿಯೂ ಸೂತ್ರವೂ ಸಹ "**ನ ಚ ಪುನರಾವರ್ತತೇ, ನ ಚ ಪುನರಾವರ್ತತೇ**" ಎಂದು ಹೇಳಿ ಸಂದೇಹ ವಿಚ್ಛೇದವನ್ನು ಮಾಡಿರುತ್ತವೆ. ದಯಾವಾತ್ಸಲ್ಯಾದಿ ಕಲ್ಯಾಣಗುಣಾಕರನು, ಇಂತಹ ಪ್ರಿಯನಾದ ಜ್ಞಾನಿಯಾದವನಿಗೆ ಅಭಯಪ್ರದಾನವನ್ನು ಮಾಡಿ ತನ್ನ ಸತ್ಯಸಂಕಲ್ಪತೆಯನ್ನು ಎಂದಿಗಾದರೂ ನಾಶಪಡಿಸಿಕೊಳ್ಳುವನೇ ಎಂದು ಶ್ರೀ ಭಾಷ್ಯಕಾರರು ಪ್ರಶ್ನಿಸಿರುತ್ತಾರೆ; ಮತ್ತು ಸ್ಮೃತಿಯೂ ಈ ಅಭಿಪ್ರಾಯವನ್ನೇ ಬೋಧಿಸುತ್ತದೆಂದು ಹೇಳಿ ಉದಾಹರಿಸಿರುತ್ತಾರೆ:—**ಮಾಮುಪೇತ್ಯ ಪುನರ್ಜನ್ಮ ದುಃಖಾಲಯ ಮಶಾಶ್ವತಂ । ನಾಪ್ನುವನ್ತಿ ಮಹಾತ್ಮಾನಸ್ಸಂಸಿದ್ಧಿಂ ಪರಮಾಂಗತಾಃ**" (ಗೀ) ಎಂದರೆ ಹೀಗೆ ಕರ್ಮಬಂಧಗಳನ್ನೆಲ್ಲಾ ನೀಗಿಕೊಂಡು, ಜ್ಞಾನಸಂಕೋಚವಿಲ್ಲದವರಾಗಿ, ಪರಬ್ರಹ್ಮಾನುಭವವನ್ನು ಹೊಂದಿದವರಾಗಿ ಆತನಿಗೆ ಸರ್ವವಿಧ ಕೈಂಕರ್ಯಗಳನ್ನೆಸಗುವದೇ ತನಗೆ ಸ್ವರೂಪವೆಂದು ಚೆನ್ನಾಗಿ ತಿಳಿದವರಾಗಿ, ಪರಮ ನಿಶ್ರೇಯಸ್ಸನ್ನು ಪಡೆದ ಈ ಮಹಾತ್ಮರು ದುಃಖಗಳಿಗೆ ತಾವುಮನೆಯಾಗಿರುವ ಅಶಾಶ್ವತವಾದ ಭೂಲೋಕವನ್ನು ಪುನಃ ಎಂದಿಗೂ ಹೊಂದಲಾರರು ಎಂದು ಸರ್ವೇಶ್ವರನೇ ಹೇಳಿರುವದರಿಂದ ಅಂತಹ ಸಂಶಯಕ್ಕೆ ಕಾರಣವೇ ಇಲ್ಲವೆಂದು ಹೇಳುವದಕ್ಕಾಗಿಯೇ, **ದೇಶಕಾಲಾವಸ್ಥಾ ಸಂಕೋಚವಿಲ್ಲವೆಂದೂ, ಯಾವದಾತ್ಮಭಾವಿಯೆಂದೂ** ಹೇಳಲ್ಪಟ್ಟಿತು. ಅನಂತ ಗರುಡ ವಿಷ್ವಕ್ಸೇನಾದಿಗಳು ನಿಯತ ಕೈಂಕರ್ಯಪರರಾಗಿದ್ದಾರೆ. ಅಂತಹ ಕೈಂಕರ್ಯಗಳು

---

(೧) ಶ್ರೀಗುಣ ರತ್ನಕೋಶ ೨೨.

ಭಗವಾನ್ ಕಥಮ್ ನಿರತಿಶಯಾನಂದಃ

ಎಙ್ಗಿರಪಡಿಯೇ ತನುಕ್ಕು ಮನ್ಯೋನ್ಯಮು ಮೊರು ವಯಸ್ಸಿಲ್ ತೋೞರ್ ಮಾರ್ಪ್ಪೋಲೆ ಇರುಕ್ಕಿರ ನಿತ್ಯಸೂರಿಗಳೋಡುಮ್ ಇನ್ರುವನ್ದ ಇವನೋಡುಮ್ ವಾಶಿಯರಪ್ಪುರೈಯರಪ್ಪರಿಮಾರಿ, ಸ್ತೋತ್ರತ್ತಿಲುಮ್

ಈತನಿಗೆ ಇಲ್ಲವಲ್ಲಾ, ಆದುದರಿಂದ ಕೈಂಕರ್ಯಕ್ಕೆ ಸಂಕೋಚವುಂಟಾಯಿತಲ್ಲವೇ ಎಂದರೆ ದಾಸಭೂತನಾದ ಈ ಚೇತನನಿಗೆ ಸರ್ವೇಶ್ವರನ ಇಷ್ಟಾನುಸಾರ ಕೈಂಕರ್ಯ ಮಾಡುವದೇ ಸ್ವರೂಪವಾದುದರಿಂದ, ಸ್ವಾಮಿ ಮನೋರಥಕ್ಕೆ ವಿರುದ್ಧವಾಗಿ ಕೈಂಕರ್ಯೇಚ್ಛೆಯುಂಟಾಗಲಾರದಾದುದರಿಂದ, "ತನ್ ಮನೋರಥತ್ತುಕ್ಕು ಅನುರೂಪಮಾಗ ಇವನ್ ಮನೋರಥಿತ್ತ ಕೈಙ್ಕರ್ಯವರ್ಗಙ್ಗಳೆಲ್ಲಾಮ್" ಎಂಬ ಪ್ರಯೋಗವು. ಕೈಙ್ಕರ್ಯವರ್ಗಮೆಲ್ಲಾಮ್ ಕೊಂಡರುಳಿ - ಸ್ವಾಮಿ ಇಷ್ಟಾನುಸಾರ ನಡೆಸಿದ ಕೆಲವು ಕೈಂಕರ್ಯಗಳಿಂದ ಸರ್ವ ಕೈಂಕರ್ಯಗಳನ್ನೂ ನಡೆಸಿದಂತೆ ಸರ್ವೇಶ್ವರನು ಪರಿಗ್ರಹಿಸುವನೆಂಬ ಭಾವಕ್ಕಾಗಿ ಕೊಂಡರುಳಿ - ಎಂದು ಪ್ರಯೋಗಿಸಿರುತ್ತಾರೆ.

ಪರಮಾತ್ಮನು ಹೇಗೆ ನಿರತಿಶಯಾನಂದನು.

ಸವಯಸ ಇವ - ಸಮಾನರಾದ ಒಂದೇ ವಯಸ್ಸಿನ ಸ್ನೇಹಿತರುಗಳ ಹಾಗೆ ಇರುವ, ನಿತ್ಯನಿರ್ದೋಷ ಗಂಧಾಃ - ನಿತ್ಯದಲ್ಲೂ ಸ್ವಲ್ಪವಾಗಲಿ ದೋಷಗಂಧವಿಲ್ಲದವರಾಗಿ, ಮುಕ್ತರಿಗಾದರೋ ಬದ್ಧದೆಶೆಯಲ್ಲಿ ದೋಷಗಂಧ ಸಂಬಂಧವುಂಟು, ಇವರಾದರೋ ನಿರಂತರವಾಗಿಯೂ ದೋಷಗಂಧವಿಲ್ಲದವರೆಂಬ ಭಾವವು, ಇದು ನಿತ್ಯಸೂರಿಗಳಿಗೆ ವಿಶೇಷಣವು, ಈ "ಸವಯಸ ಇವ" ಎಂಬ ಶ್ಲೋಕಾರ್ಧವನ್ನು ತಾವೇ ಉಪಪಾದಿಸುತ್ತಾರೆ, ಎಙ್ಗಿರಪಡಿಯೇ - ಎಂದು ಹೇಳಿರುವ ಹಾಗೆ, ತನುಕ್ಕುಂ - ಸರ್ವೇಶ್ವರನಾದ ತನಗೆ, ಅನ್ಯೋನ್ಯಂ - ಪರಸ್ಪರಾನುರಾಗಯುಕ್ತರಾಗಿರುವ, ಒರು ವಯಸ್ಸಿಲ್ - ಒಂದೇ ವಯಸ್ಸಿನಲ್ಲಿರುವ, ತೋೞರ್ ಮಾರ್ಪ್ಪೋಲೆ-ಸ್ನೇಹಿತರ ಹಾಗೆ, ಇರುಕ್ಕಿರ - ಇರುವ, ನಿತ್ಯಸೂರಿಗಳೋಡುಮ್ - ಅನಾದಿಯಾಗಿ ಕೈಂಕರ್ಯಗಳನ್ನು ಮಾಡುತ್ತಿರುವ ಅನಂತ ಗರುಡ ವಿಷ್ವಕ್ಸೇನಾದಿಗಳಿಗೂ, ಇನ್ರುವನ್ದ ಇವನೋಡುಮ್- ಈವತ್ತು ಬಂದು ಕೈಂಕರ್ಯಮಾಡುವ ಈ ಮುಕ್ತನಿಗೂ, ವಾಶಿಯರ - ಏನೊಂದೂ ವ್ಯತ್ಯಾಸವಿಲ್ಲದ ಹಾಗೆ, ಪುರೈಯರ-

ಸ್ವಲ್ಪವೂ ಭೇದವಿಲ್ಲದ ಹಾಗೆ, **ಪರಿಮಾರಿ** - ಸಂಶ್ಲೇಷವನ್ನು ಹೊಂದಿ; ಸರ್ವೇಶ್ವರನಿಗೆ ವೈಷಮ್ಯನೈರ್ಘೃಣ್ಯಗಳ್ಯಾವವೂ ಇಲ್ಲವು; ಅನಂತ ಗರುಡ ವಿಷ್ವಕ್ಸೇನಾದಿಗಳೆಲ್ಲರೂ ಸಮಾನ ವಯಸ್ಕರಾದ ಸ್ನೇಹಿತರ ಹಾಗೆ ಅನ್ಯೋನ್ಯಪ್ರೀತಿಯಿಂದಿದ್ದುಕೊಂಡು ಅನಾದಿಯಾಗಿ ಕೈಂಕರ್ಯ ಮಾಡುತ್ತಿರುವರು, ಆದುದರಿಂದ ಅವರುಗಳಲ್ಲಿ ಸರ್ವೇಶ್ವರನಿಗೆ ಹೆಚ್ಚು ಪ್ರೀತಿಯೂ, ಈ ಮುಕ್ತನು ಈವತ್ತು ಬಂದು ಕೈಂಕರ್ಯ ಮಾಡುವವನಾಗಿ ಅದಕ್ಕಾಗಿ ಅಷ್ಟು ವಿಶೇಷ ಪ್ರೀತಿಯಿಲ್ಲದೆಯೂ ಇರುತ್ತಾನೋ ಎಂದರೆ, ಹಾಗೆ ಎಂದಿಗೂ ಇಲ್ಲವು ಎಂದು ತಿಳಿಸುವದಕ್ಕಾಗಿ ಶ್ರೀ ಪರಾಶರ ಭಟ್ಟರ ದಿವ್ಯಸೂಕ್ತಿಯನ್ನು ಉದಾಹರಿಸಿರುತ್ತಾರೆ. ಆ ಪೂರಾ ಶ್ಲೋಕ ಯಾವುದೆಂದರೆ :—

ತೇ ಸಾಧ್ಯಾಸ್ಸಂತಿ ದೇವಾ ಜನನಿ ಗುಣವಪುರ್ವೇಷವೃತ್ತಸ್ವರೂಪೈ ।
ರ್ಭೋಗೈರ್ವಾ ನಿರ್ವಿಶೇಷಾ ಸ್ಸವಯಸ ಇವ ಯೇ ನಿತ್ಯ ನಿರ್ದೋಷಗಂಧಾಃ॥
ಹೇ ಶ್ರೀಃ ಶ್ರೀರಙ್ಗಭರ್ತುಸ್ತವ ಚ ಪದ ಪರೀಚಾರ ವೃತ್ತ್ಯೈ ಸದಾಪಿ ।
ಪ್ರೇಮ ಪ್ರದ್ರಾಣ ಭಾವಾ ವಿಲಹೃದಯ ಹಠಾತ್ಕಾರ ಕೈಙ್ಕರ್ಯಭೋಗಾಃ॥

ಇದು ಲಕ್ಷ್ಮೀ ಸ್ತೋತ್ರವು, "**ಹೇ ಜನನಿ** – ಓ ತಾಯಿಯೇ, **ಶ್ರೀಃ** - ಲಕ್ಷ್ಮಿಯೇ, **ಗುಣ**..........**ಸ್ವರೂಪೈಃ** - **ಗುಣ** - ಗುಣಾಷ್ಟಕಗಳಿಂದಲೂ, **ವಪುಃ**- ಶಂಖ ಚಕ್ರಾದಿಯುತ ಚತುರ್ಭುಜಗಳಿಂದ ಕೂಡಿದ ದಿವ್ಯಮಂಗಳ ವಿಗ್ರಹದಿಂದಲೂ, **ಸ್ವರೂಪೈಃ**-ಜ್ಞಾನಾನಂದಾಮಲತ್ವಾದ್ಯಾತ್ಮಸ್ವರೂಪಗಳಿಂದಲೂ, **ಭೋಗೈರ್ವಾ**-ಭೋಗಗಳಿಂದಲೂ ಕೂಡ, **ಸವಯಸ ಇವ** - ಸ್ನೇಹಿತರ ಹಾಗೆ, **ನಿರ್ವಿಶೇಷಾಃ** - ಏನೊಂದೂ ವ್ಯತ್ಯಾಸವಿಲ್ಲದೆ, **ನಿತ್ಯ ನಿರ್ದೋಷಗಂಧಾಃ** - ಯಾವಾಗಲೂ ಸಂಸಾರಸಂಬಂಧಾದಿಗಳೊಂದೂ ಇಲ್ಲದೆ ದೋಷರಹಿತರಾಗಿ, **ಸಾಧ್ಯಾಃ** - ಸಾಧ್ಯರೆಂದು ಹೇಳಿಸಿಕೊಳ್ಳುವ, **ದೇವಾಃ** - ನಿತ್ಯಸೂರಿಗಳು, **ಯೇ** - ಯಾರು, **ಸಂತಿ** – ಇರುತ್ತಾರೋ, ಅಂತಹ, **ತೇ** – ಆ ನಿತ್ಯಸೂರಿಗಳು (ಮುಕ್ತರೂ ಹೇಳಲ್ಪಟ್ಟರು), **ಶ್ರೀರಙ್ಗಭರ್ತುಃ ತವ ಚ**. ಶ್ರೀರಂಗನಾಥನಿಗೂ ಮತ್ತು ಆತನ ಪ್ರಿಯಪತ್ನಿಯಾದ ನಿನಗೂ ಸಹ, **ಪದಪರೀಚಾರವೃತ್ತ್ಯೈ**-ಪಾದಾರವಿಂದಗಳಲ್ಲಿ ಕೈಂಕರ್ಯ ಮಾಡುವದಕ್ಕಾಗಿ, **ಸದಾಪಿ** - ಯಾವಾಗಲೂ, **ಪ್ರೇಮ**..............**ಭೋಗಾಃ** - ಪ್ರೀತಿಯಿಂದ ಕರಗಿದ ಮನಸ್ಸಿನಿಂದ ಕೈಂಕರ್ಯಕ್ಕೆ ತ್ವರೆ ಮಾಡುವ ಪ್ರವೃತ್ತಿಯೇ ತಮಗೆ ಸುಖದಾಯಕವೆಂದು ತಿಳಿದವರಾಗಿದ್ದರು" ಎಂಬುದು ಈ ಶ್ಲೋಕಾರ್ಥವು.

"**ನಿತ್ಯಸೂರಿಗಳೋಡುಮ್, ಇನ್ರು ವನ್ದ ಎನನೋಡುಮ್ ವಾಶಿಯಱ**" ಎಂದು ಹೇಳಿರುವದರಿಂದ ನಿತ್ಯಸೂರಿಗಳಿಗೂ ಮತ್ತು ಮುಕ್ತರಿಗೂ ಇರುವ ಆನಂದದಲ್ಲಿ ವ್ಯತ್ಯಾಸವಿಲ್ಲವೆಂದು ಹೇಳಿದ ನಂತರ, ಮುಕ್ತರಲ್ಲೇ ಆನಂದ ತಾರತಮ್ಯವಿಲ್ಲ

ಶ್ರೀ ವೈಕುಂಠ ಗದ್ಯತ್ತಿಲುಮ್ ಅರುಳಿಚ್ಚೆಯ್‌ದ ಮನೋರಥತ್ತಿಱ್ಪಡಿಯೇ ಐಕಾಂತಿಕಾತ್ಯನ್ತಿಕ ನಿತ್ಯಕಿಂಕರನಾನ ಇವನುಕಪ್ಪಾಲೇ: ತಾನ್ ನಿರತಿಶಯಾನಂದನಾಯಿರುಕ್ಕುಮ್.

ವೆಂದು ಇನ್ನು ಬೇರೆ ಹೇಳಬೇಕಾದದಿಲ್ಲವು. ಹೀಗೆ "**ನಿರಂಜನಃ ಪರಮಂ ಸಾಮ್ಯಮುಪೈತಿ**" ಎಂಬ ಶ್ರುತಿಯು ಉದ್ಘೋಷಿಸುತ್ತಿದ್ದರೂ ಅದಕ್ಕೆ ವಿರೋಧವಾಗಿ ಆನಂದದಲ್ಲಿ ತಾರತಮ್ಯ ಉಂಟೆಂದು ಹೇಳಲು ಹೇಗೆ ಸಾಧ್ಯವು?

ಹೀಗೆ ನಿತ್ಯರೊಂದಿಗೆ ಹೇಗೋ ಹಾಗೆಯೇ ಈ ಹೊಸದಾಗಿ ಬಂದ ಮುಕ್ತರೊಂದಿಗೂ ಸಂಶ್ಲೇಷಿಸಿ, **ಸರ್ವೇಶ್ವರನು ನಿರತಿಶಯಾನಂದನಾಯಿರುಕ್ಕುಮ್** ಎಂದು ಮುಂದೆ ಹೇಳುತ್ತಾರೆ; **ಸ್ತೋತ್ರತ್ತಿಲುಮ್** - ಸ್ತೋತ್ರರತ್ನವೆಂದೆನಿಸಿ ಪ್ರಸಿದ್ಧವಾಗಿರುವದರಿಂದ ಸ್ತೋತ್ರವೆಂದರೆ ಯಾಮುನೇಯರ ಸ್ತೋತ್ರದಲ್ಲೂ ಮತ್ತು **ಶ್ರೀ ವೈಕುಂಠ ಗದ್ಯತ್ತಿಲುಮ್** - ಶ್ರೀ ಯತಿವರ್ಯರು ರಚಿಸಿರುವ ಶ್ರೀ ವೈಕುಂಠ ಗದ್ಯದಲ್ಲೂ, **ಅರುಳಿಚ್ಚೆಯ್‌ದ** – ಕೃಪೆಮಾಡಿ ಹೇಳಿರುವ, **ಮನೋರಥತ್ತಿಱ್ಪಡಿಯೇ**-ಪುರುಷಾರ್ಥದ ಹಾಗೆಯೇ, **ಐಕಾಂತಿಕಾತ್ಯಂತಿಕ ನಿತ್ಯಕಿಂಕರನಾನ, ಐಕಾಂತಿಕ** - ಪ್ರಯೋಜನಾಂತರಶೂನ್ಯನಾದುದರಿಂದ ಆ ಒಂದು ಪ್ರಯೋಜನದಲ್ಲೇ ನಿಯತನಾದ, **ಆತ್ಯಂತಿಕ** - ಅದುದರಿಂದ ನಿತ್ಯವೂ ಅನುವೃತ್ತನಾದ, **ನಿತ್ಯಕಿಂಕರನಾನ** - ಸದಾ ಕೈಂಕರ್ಯನಿರತನಾದ, **ಇವನ್** - ಈ ಹೊಸದಾಗಿ ಪ್ರಾಪ್ತನಾದ ಮುಕ್ತನ, **ಉಗಪ್ಪಾಲೇ** - ಭೋಗ್ಯಭಾವದಿಂದ ಎಂದರೆ ಆತನಿಗೆ ಈ ಪರಮ ಮನೋರಥರೂಪ ಕೈಂಕರ್ಯವನ್ನು ಒದಗಿಸಿಕೊಟ್ಟು ಹೀಗೆ ಆತನಿಗೆ ತಾನು ಪರಮಭೋಗ್ಯನಾಗುವದರಿಂದ, **ತಾನ್** - ತಾನೂ ಕೂಡ, **ನಿರತಿಶಯಾನಂದನಾಯಿರುಕ್ಕುಮ್** – ಹೀಗೆ ತುಂಬಾ ಆನಂದದಾಯಕನಾಗುವದರಿಂದ ಪರಮಸಂತೋಷ ಹೊಂದುವನಾಗಿರುವನು ಎಂಬ ತಾತ್ಪರ್ಯವು. ಈ ವಾಕ್ಯದಲ್ಲಿ "**ರಸೋವೈ ಸಃ, ರಸಗ್ ಹ್ಯೇವಾಯಂ ಲಬ್ಧ್ವಾನಂದೀ ಭವತಿ। ಕೋಹ್ಯೇವಾನ್ಯಾತ್ಕಃ ಪ್ರಾಣ್ಯಾತ್। ಯದೇಷ ಆಕಾಶ ಆನಂದೋನಸ್ಯಾತ್। ಏಷಹ್ಯೇವಾನನ್ದಯಾತಿ**" ಎಂಬ ಶ್ರುತ್ಯರ್ಥವು ಉಪಪಾದಿಸಲ್ಪಟ್ಟಿತು. ಪರಮಾತ್ಮನು ಆನಂದಸ್ವರೂಪನು, ಈತನು ಅವನ್ನೇ ಹೊಂದುವದರಿಂದ ಈತನಿಗೂ ಆನಂದತ್ವವು; ಹೀಗೆ ಈ ಪರಮಾತ್ಮನು ಅಪರಿಚ್ಛಿನ್ನವಾದ ಆನಂದಸ್ವರೂಪನಲ್ಲದೇ ಇದ್ದರೆ ಸಾಂಸಾರಿಕವಾದುದೇ ಆಗಲಿ ಅಥವಾ ಆಮುಷ್ಮಿಕರೂಪವಾದುದೇ ಆಗಲಿ ಇರುವ ಸುಖವನ್ನು ಯಾವನು ತಾನೇ ಹೊಂದು

ವನು, ಈತನೇ ಸಕಲ ಪ್ರಧಾನ ಆನಂದಕ್ಕೂ ಕಾರಣಭೂತನಾಗಿರುವದರಿಂದಲೇ ಆತನಿಗೆ ಪ್ರಾಪ್ಯತ್ವ ಉಂಟು, ಆತನು ಎಲ್ಲರಿಗೂ ಆನಂದವನ್ನುಂಟುಮಾಡುವನು ಎಂಬುದು ಈ ಶ್ರುತ್ಯಭಿಪ್ರಾಯವು. (ತೈ. ಆನಂದ. ೭ನೆಯ. ಅನುವಾಕ)

ಶ್ರೀ ಯಾಮುನೇಯರು ತಮ್ಮ ಸ್ತೋತ್ರರತ್ನದಲ್ಲಿ ಏನನ್ನು ಅಪೇಕ್ಷಿಸಿರುತ್ತಾರೆಂದರೆ :—

“ಭವಂತಮೇವಾನುಚರನ್ನಿರಂತರ
ಪ್ರಶಾಂತ ನಿಶ್ಶೇಷ ಮನೋರಥಾಂತರಃ ।
ಕದಾಹ ಮೈಕಾಂತಿಕ ನಿತ್ಯಕಿಂಕರಃ
ಪ್ರಹರ್ಷಯಿಷ್ಯಾಮಿ ಸನಾಥ ಜೀವಿತಃ” ॥ ೪೬ ॥

ಪರಮ ಪುರುಷಾರ್ಥ ಕಾಷ್ಠಾಭೂತವಾದುದು ಸರ್ವೇಶ್ವರನ ನಿರುಪಾಧಿಕ ಕೈಂಕರ್ಯವು. ಅದನ್ನು ಪ್ರಾರ್ಥಿಸುವ ಈ ಶ್ಲೋಕವನ್ನೇ ಮನಸ್ಸಿನಲ್ಲಿಟ್ಟು ಈ ಶ್ಲೋಕಾಭಿಪ್ರಾಯವನ್ನೇ ಸ್ವಾಮಿಯವರು ಉಪಪಾದಿಸಿರುತ್ತಾರೆ. **ಭವಂತಂ** - “ಕದಾಪುನಶ್ಶಂಖ” ಎಂಬ ಶ್ಲೋಕ ಮೊದಲುಗೊಂಡು ಇದುವರೆಗೂ ಈ ೧೫ ಶ್ಲೋಕಗಳಲ್ಲಿ ಹೇಳಿದ ಹಾಗೆ ಸರ್ವವಿಧದಲ್ಲೂ ಪೂರ್ಣತೆಯನ್ನು ಹೊಂದಿದ ನಿನ್ನನ್ನೇ, ತನಗೆ ಸೇವ್ಯಾಂತರವಿಲ್ಲವೆಂದು ತಿಳಿಸುವದಕ್ಕಾಗಿ ಏವ ಕಾರವು. ಅಥವಾ ಒಂದುವೇಳೆ ಭಾಗವತರಿಗೆ ಶುಶ್ರೂಷಾ ರೂಪದಲ್ಲಿ ಕೈಂಕರ್ಯ ಮಾಡಿದರೂ ಅದೂ ಕೂಡ ನಿನಗೇನೇ ಸಲ್ಲುತ್ತದೆ ಎಂಬ ಭಾವನೆಯಿಂದಾಗಲಿ **ಭವಂತಮೇವ** ಎಂಬ ಪ್ರಯೋಗವು. **ಅನುಚರನ್** - ಶುಶ್ರೂಷೆ ಮಾಡುವನಾಗಿ, ಇದಕ್ಕಾಗಿ ಪರಮಕೃಪಾಳುವಾದ ನೀನು ಏನು ಮಾಡತಕ್ಕದ್ದೆಂದರೆ, **ಪ್ರಶಾಂತ ನಿಶ್ಶೇಷ ಮನೋರಥಾಂತರಃ** - ನಿನ್ನ ಕೃಪೆಯಿಂದಲೇ ಇತರ ತುಚ್ಛ ಮನೋರಥಗಳಲ್ಲಪೇಕ್ಷೆಯು ನಿಶ್ಶೇಷವಾಗಿ ಚೆನ್ನಾಗಿ ಶಾಂತವಾಗತಕ್ಕದ್ದು, ಸ್ವಲ್ಪವೂ ಇಲ್ಲದ ಹಾಗೆ ಶಾಂತವಾಗತಕ್ಕದ್ದು, ಅದೂ ಅಲ್ಲದೆ ಇಂತಹ ಇಚ್ಛೆಯ ಶಮನವು ಸಾರ್ವಕಾಲಿಕವಾಗಿರಬೇಕು, ಆದುದರಿಂದ ನಿರಂತರ ಪ್ರಶಾಂತವೆಂದು ಹೇಳಲ್ಪಟ್ಟಿತು. ಹೀಗೆ ಬೇರೆ ಮನೋರಥಗಳೊಂದೂ ಇಲ್ಲದವನಾಗಿ, ಆದುದರಿಂದಲೇ, **ಐಕಾಂತಿಕಃ** - ನಿನ್ನ ನಿರಂತರ ಒಬ್ಬರಲ್ಲೇ ನಿಯತನಾಗಿ, **ನಿತ್ಯಕಿಂಕರಃ** ಯಾವಾಗಲೂ ನಿತ್ಯನಾದ ಎಂದರೆ ಅನ್ಯದೇವತಾಸಂಬಂಧವಿಲ್ಲದ, **ಕಿಂಕರಃ** - ಕೈಂಕರ್ಯಗಳನ್ನೆಸಗುವ ದಾಸನಾಗಿ. ನಿನ್ನನ್ನು, **ಪ್ರಹರ್ಷಯಿಷ್ಯಾಮಿ** - ಪ್ರೀತಿಗೊಳಿಸುವೆನು. ಹೀಗೆ ದಾಸಭೂತನಾದ ನಿನಗೆ ಸಂತೋಷವನ್ನುಂಟುಮಾಡುವದೇ ನನಗೆ ಪ್ರಧಾನ ಪ್ರಯೋಜನವೇ ವಿನಾ ಮಿಕ್ಕ ಯಾವುದೂ ಪ್ರಯೋಜನವಿಲ್ಲವೆಂಬ ಭಾವವು. ಇದರಿಂದ ತನಗೆ ಅಧೀನವಾದುದು ಮತ್ತು ತನಗೆ ಪ್ರಯೋಜನವಾದುದು ಎಂಬ

ಘ್ರವೇ ಇಲ್ಲದೆ ಕೈಂಕರ್ಯವನ್ನು ಸರ್ವೇಶ್ವರನಿಗೆ ಎಸಗುವದೇ ಈತನಿಗೆ ಪರಮಾನಂದವು, ಹೀಗೆ ಆನಂದವನ್ನುಂಟುಮಾಡುವದರಿಂದ ಸರ್ವೇಶ್ವರನು ನಿರತಿಶಯಾನಂದವನ್ನು ಹೊಂದುವನು. ಮುಕ್ತನಿಗೆ ಹೀಗೆ ಆನಂದವನ್ನುಂಟುಮಾಡುವ ದ್ವಾರಾ ತಾನೂ ಆನಂದಿಸುವನು ಎಂಬ ತಾತ್ಪರ್ಯವು ಹೀಗೆ ಮಾಡುವದರಿಂದ ತಾನು ಈಗ **ಸನಾಥಜೀವಿತಃ** - ನಿನ್ನನ್ನು ನಾಥನನ್ನಾಗಿ ವರಿಸಿ ಜೀವಸಾರ್ಥಕ್ಯವನ್ನು ಹೊಂದಿದವನಾದೆನು. ಹಿಂದೆ ಉಪೇಕ್ಷೆ ಮಾಡಿ ಜೀವಚ್ಛವದ ಹಾಗೆ ಇದ್ದೆನು ಎಂಬ ಭಾವವು.

ಶ್ರೀ ಭಾಷ್ಯಕಾರರ ವೈಕುಂಠ ಗದ್ಯವಾಕ್ಯಗಳು ಯಾವುವೆಂದರೆ :— ಎರಡು ಮೂರು ಕಡೆಯಲ್ಲಿ ಇದನ್ನೇ ಉಪಪಾದಿಸಿರುತ್ತಾರೆ:—(೧) **ಕಲ್ಯಾಣಗುಣೌಘ ಮಹಾರ್ಣವಂ ಪರಮ ಪುರುಷಂ ಭಗವಂತಂ ಶ್ರೀಮನ್ನಾರಾಯಣಂ ಸ್ವಾಮಿತ್ವೇನ ಸುಹೃತ್ವೇನ ಗುರುತ್ವೇನ ಚ ಪರಿಗೃಹ್ಯ, ಐಕಾಂತಿಕಾತ್ಯಂತಿಕ ತತ್ಪಾದಾಮ್ಬುಜದ್ವಯ ಪರಿಚರ್ಯೈಕ ಮನೋರಥಃ**" "ಇಂತಹ ಸರ್ವೇಶ್ವರನನ್ನು ಸ್ವಾಮಿಯೆಂದೂ, ಸರ್ವಸುಹೃತ್ತೆಂದೂ, ಪರಮಗುರುವೆಂದೂ ಭಾವಿಸಿ, ಐಕಾಂತಿಕವಾದ ಆತ್ಯಂತಿಕವಾದ, ಆತನ ಪಾದಕಮಲಗಳಲ್ಲಿ ಕೈಂಕರ್ಯ ಮಾಡಬೇಕೆಂಬ ಮುಖ್ಯ ಮನೋರಥವುಳ್ಳವನಾಗಿ" ಎಂದು ಹೇಳಿರುತ್ತದೆ. ಇನ್ನೊಂದು ಕಡೆಯಲ್ಲಿ "**ಕದಾಹಂ ಭಗವತ್ಪಾದಾಂಬುಜದ್ವಯ ಪರಿಚರ್ಯಾ ಕರಣಯೋಗ್ಯಸ್ತದೇಕ ಭೋಗಸ್ತತ್ಪಾದೌ ಪರಿಚರಿಷ್ಯಾಮಿ**" "ಯಾವಾಗ ನಾನು ಆ ಭಗವಂತನ ಪಾದಕಮಲಗಳಲ್ಲಿ ಪರಿಚರ್ಯೆ ಮಾಡಲು ಯೋಗ್ಯನಾಗಿ, ಅದನ್ನೇ ಮುಖ್ಯ ಭೋಗವುಳ್ಳವನಾಗಿ, ಆತನ ಪಾದಕಮಲಗಳಲ್ಲಿ ಪರಿಚರ್ಯೆ ಮಾಡುವೆನೋ !" ಎಂದು ಹೇಳಲ್ಪಟ್ಟಿರುತ್ತದೆ. ಇನ್ನೂ ಒಂದು ಕಡೆಯಲ್ಲಿ "**ಮಾಮೈಕಾನ್ತಿಕಾತ್ಯಂತಿಕ ಪರಿಚರ್ಯಾಕರಣಾಯ ಪರಿಗೃಹ್ಣೀಷ್ವ**" "ಇಂತಹ ಐಕಾಂತಿಕಾತ್ಯಂತಿಕ ಕೈಂಕರ್ಯವನ್ನು ಮಾಡುವದಕ್ಕಾಗಿ ನನ್ನನ್ನು ಅಂಗೀಕರಿಸು" ಎಂದು ಹೇಳಲ್ಪಟ್ಟಿರುತ್ತದೆ.

ಇತರ ಗತಿಗಳ ವಿಷಯವು ಬೇಕಿಲ್ಲವು.

ಈ ಅರ್ಚಿರಾದಿ ಗತಿಯಲ್ಲದೆ ಇತರ ಬೇರೇ ಗತಿಗಳ ಮೂಲಕವಾಗಿಯೂ ಮೋಕ್ಷವುಂಟೆಂದು ಕೆಲವು ಭಾರತ ವಚನಗಳಲ್ಲೂ, ಜಯತ್ಸಂಹಿತೆಯಲ್ಲೂ, ಬ್ರಹ್ಮಸೂತ್ರದ ಪಾಂಚರಾತ್ರಾಧಿಕರಣದಲ್ಲೂ ಹೇಳಿದೆಯಲ್ಲಾ, ಇವುಗಳೂ ಪ್ರಮಾಣಗಳಲ್ಲವೇ ಎಂದರೆ, ಅವುಗಳು ಕೆಲವು ಅಧಿಕಾರಿವಿಶೇಷರನ್ನು ಕುರಿತು ಹೇಳುವದರಿಂದ, ಅವು ನಮಗೀಗ ಬೇಕಿಲ್ಲವೆಂದು ಹೇಳುತ್ತಾರೆ.

ಗತ್ಯಂತರಾಣಾ ಮನಪೇಕ್ಷಿತತ್ವಮ್

(೧) ವಸ್ವಾದಿ ಪದಪ್ರಾಪ್ತಿ ಪೂರ್ವಕ ಮೋಕ್ಷಸಾಧನಮಾನ ಮಧು

ವಸ್ವಾದಿ ಪದಪ್ರಾಪ್ತಿ ಪೂರ್ವಕ - ವಸ್ವಾದಿಗಳ ಲೋಕಪ್ರಾಪ್ತಿ ಪೂರ್ವಕ, ಮೋಕ್ಷಸಾಧನಮಾನ - ಮೋಕ್ಷವನ್ನು ಸಾಧಿಸಿಕೊಡುವ, ಮಧು ವಿದ್ಯಾದಿಗಳಿಲುಮ್ - ಮಧುವಿದ್ಯನೇ ಮೊದಲಾದವುಗಳಲ್ಲೂ, ಇಲ್ಲಿ ಆದಿಪದ ದಿಂದ ಪಂಚಾಗ್ನಿ ವಿದ್ಯೆಯೂ ಹೇಳಲ್ಪಟ್ಟಿತು, ಮಧುವಿದ್ಯಾನಿಷ್ಠನಿಗೆ ವಸ್ವಾದಿ ಪ್ರಾಪ್ತಿಯೇ ಹೇಳಿರುವದರಿಂದ, ತನ್ನನ್ನು ತಾನೇ ಉಪಾಸ್ಯವಾಗಿ ಭಾವಿಸುವದು ಅಯುಕ್ತವೆಂದು ಜೈಮಿನ್ಯಾಚಾರ್ಯರು ಭಾವಿಸಿದರು. ಅದೂ ಅಲ್ಲದೆ ವಸ್ವಾದಿ ತ್ರರುಗಳಿಗೆ "ತಂ ದೇವಾ ಜ್ಯೋತಿಷಾಂ ಜ್ಯೋತಿಃ" ಎಂಬಲ್ಲಿ ಪರಂಜ್ಯೋತಿ ಸ್ಸಾದ ಪರಬ್ರಹ್ಮವೇ ಉಪಾಸ್ಯವೆಂದೂ ಹೇಳಿರುವದರಿಂದ ಮಧುವಿದ್ಯೆಯಲ್ಲಿ ಅಧಿ ಕಾರವಿಲ್ಲವೆಂಬಭಿಪ್ರಾಯವು. ಮಧುವಿದ್ಯೆಯಲ್ಲಿ ಆದಿತ್ಯನ ಪೂರ್ವ ದಕ್ಷಿಣ ಪಶ್ಚಿಮೋ ತ್ತರ ಊರ್ಧ್ವಭಾಗಗಳು, ಕ್ರಮವಾಗಿ ವಸು, ರುದ್ರ, ಆದಿತ್ಯ, ಮರುತ್, ಸಾಧ್ಯರು ಗಳಿಗೆ ಮಧುವಿನ ಹಾಗೆ ಭೋಗ್ಯಗಳೆಂದು ಹೇಳಲ್ಪಟ್ಟ, ಇವುಗಳೇ ಉಪಾಸ್ಯ ಗಳು, ಇವುಗಳೇ ಪ್ರಾಪ್ಯಗಳು ಎಂದು ಉಪದೇಶಿಸಲ್ಪಟ್ಟಿರುತ್ತದೆ. ವ್ಯಾಸರಭಿ ಪ್ರಾಯವು ಜೈಮಿನ್ಯಾಚಾರ್ಯರಭಿಪ್ರಾಯಕ್ಕೆ ವಿರುದ್ಧವಾಗಿ, ವಸುರುದ್ರಾದಿತ್ಯಾದಿ ಗಳಿಗೂ ಮಧುವಿದ್ಯೆಯಲ್ಲಿ ಅಧಿಕಾರ ಉಂಟೆಂದೂ ಕಲ್ಪಾಂತದಲ್ಲಿ ವಸ್ವಾದಿಪ್ರಾಪ್ತಿ ಯುಂಟಾಗಿ. ಅಲ್ಲಿಂದ ಮುಂದಕ್ಕೆ ಮೋಕ್ಷಪ್ರಾಪ್ತಿಯುಂಟಾಗಬಹುದು ಎಂಬುದು. ಅವರೆ ತನಗೆ ತಾನೇ ಉಪಾಸ್ಯ ಹೇಗೆ ಎಂದರೆ ವಸ್ವಾದಿತ್ಯ ಶರೀರಕ ಪರಬ್ರಹ್ಮ ವೆಂದು ಭಾವಿಸತಕ್ಕದ್ದು. ಇದು ಮಧುವಿದ್ಯಾನಿಷ್ಠನಾದ ಉಪಾಸಕನಿಗೆ ಹೇಳಿರುವ ಬೇರೆ ಗತಿಯಾದುದರಿಂದ ನಮಗೆ ಬೇಕಾದುದಲ್ಲವೆಂಬ ಭಾವವು. ಹಾಗೆಯೇ ಪಂಚಾಗ್ನಿ ವಿದ್ಯಾನಿಷ್ಠನಿಗೆ, ಕೈವಲ್ಯಪ್ರಾಪ್ತಿಯುಂಟಾಗಿ ಅನಂತರ ಮೋಕ್ಷವೆಂದು ಹೇಳಲ್ಪಟ್ಟಿರುತ್ತದೆ. (ನೆಯ ಪುಟ ನೋಡಿ). ಪಂಚಾಗ್ನಿ ವಿದ್ಯಾನಿಷ್ಠನೆಂದರೆ:— ಪ್ರಕೃತಿವಿಲಕ್ಷಣವಾದ ಪರಿಶುದ್ಧವಾದ ತನ್ನ ಆತ್ಮಸ್ವರೂಪವು ಬ್ರಹ್ಮಾತ್ಮಕವೆಂದು ಉಪಾಸಿಸುವವನು. ಇವನಿಗೆ ಫಲವು ಮಧುವಿದ್ಯಾನಿಷ್ಠನಿಗೆ ಹೇಗೆ ವಸ್ವಾದಿಲೋಕ ಪ್ರಾಪ್ತಿ ಮಧ್ಯೇ ಅವಾಂತರಫಲವೋ, ಹಾಗೆಯೇ ಇವನಿಗೂ ಕೈವಲ್ಯದಲ್ಲಿ ಸ್ವಾತ್ಮಾನುಭವವು ಅವಾಂತರ ಫಲವು, ಅಲ್ಲಿಂದ ಮುಂದಕ್ಕೆ ಮೋಕ್ಷಫಲವು. ಹೀಗೆ ಇಂತಹ ಉಪಾಸಕರುಗಳಿಗೆ ಬೇರೇ ಗತಿಯು ಹೇಳಿರುತ್ತದೆ ಇದು

ವಿದ್ಯಾದಿಗಳಿಲ್ಲವು (೨) "ಸತ್ತ್ವಂ ವಹತಿ ಶುದ್ಧಾತ್ಮಾ ದೇವಂ ನಾರಾಯಣಮ್ (ಪ್ರಭುಮ್) ಹರಿಮ್ । ಪ್ರಭುರ್ವಹತಿ ಶುದ್ಧಾತ್ಮಾ ಪರಮಾತ್ಮಾನಮಾತ್ಮನಾ" (೩) "ಯೇ ತು ದಗ್ಧೇಂಧನಾ ಲೋಕೇ ಪುಣ್ಯಪಾಪವಿವರ್ಜಿ

ಉಪಾಸಕ ವಿಷಯವಾದುದರಿಂದ ನಮಗೆ ಬೇಕಿಲ್ಲವೆಂದು ಉಪದೇಶಿಸುತ್ತಾರೆ. ಇಲ್ಲಿಯೂ ಕೂಡ ಅರ್ಚಿರಾದಿ ಗತಿಯಿಂದಲೇ ಹೋಗಿ, ಅಲ್ಲಲ್ಲಿ ನಿಂತು ಹೋಗುತ್ತಾರೆಂದು ಏಕೆ ಹೇಳಕೂಡದೆಂದರೆ, ಅರ್ಚಿರಾದಿ ಗತಿಯಲ್ಲಿ ಆದಿತ್ಯನನ್ನು ಭೇದಿಸಿಕೊಂಡು ಹೋಗುತ್ತಾನೆಂದು ಹೇಳಿರುವದರಿಂದ, ಅದೇ ಪ್ರಾಪ್ಯವೆಂದು ಹೇಳುವದು ವಿರುದ್ಧವಾಗುವದರಿಂದ ಅರ್ಚಿರಾದಿ ಗತಿಗಿಂತಲೂ ಬೇರೆಯಾದುದೆಂದೇ ಭಾವಿಸತಕ್ಕದ್ದು.

(೨) ಮುಂದೆ ಶಾಂತಿಪರ್ವ ೩೦೭ನೆಯ ಅಧ್ಯಾಯದಲ್ಲಿ ಹೇಳಿರುವ ಮಾರ್ಗಾಂತರವನ್ನು ಕುರಿತು ಹೇಳುತ್ತಾರೆ:—ಶುದ್ಧಾತ್ಮಾ - ಪರಿಶುದ್ಧವಾದ ಸ್ವರೂಪವುಳ್ಳ, **ಸತ್ತ್ವಂ** - ಸತ್ತ್ವವು, **ಪ್ರಭುಮ್** - ಸಮರ್ಥನಾಗಿಯೂ, **ದೇವಂ** - ಪ್ರಕಾಶಿಸುವನಾಗಿಯೂ, ಇರುವ, **ನಾರಾಯಣಂ** - ಸಂಕರ್ಷಣಾವತಾರಿಯಾದ ನಾರಾಯಣನನ್ನು, **ವಹತಿ** - ಸೇರಿಸುತ್ತದೆ. ಶುದ್ಧಾತ್ಮನಾದ, ಪ್ರಭುವಾದ ಈ ಅನಿರುದ್ಧರೂಪೀ ನಾರಾಯಣನು, **ಆತ್ಮನಾ** - ತಾನೇ, **ಪರಮಾತ್ಮಾನಂ** - ಪರವಾಸುದೇವನನ್ನು, **ವಹತಿ** - ಸೇರಿಸುವನು" ಎಂದು ಹೇಳಲ್ಪಟ್ಟಿರುತ್ತದೆ. ಇಲ್ಲಿ ಭೀಷ್ಮರು ಸಾಂಖ್ಯರ ವಿಷಯವಾಗಿ ಯುಧಿಷ್ಠಿರನಿಗೆ ಉಪದೇಶಿಸುವ ಪ್ರಕರಣವು. ಇವರನ್ನು ಸೂರ್ಯನು ತನ್ನ ರಶ್ಮಿಗಳ ಮೂಲಕ ನಭಸ್ಸನ್ನೂ, ನಭಸ್ಸು ತಮಸ್ಸನ್ನೂ, ತಮಸ್ಸು ರಜಸ್ಸನ್ನೂ, ರಜಸ್ಸು ಸತ್ತ್ವವನ್ನೂ ಸೇರಿಸುತ್ತವೆಂದು ಹೇಳಿ, ಸತ್ತ್ವವು ಅನಿರುದ್ಧನನ್ನೂ, ಅನಿರುದ್ಧನು ವಾಸುದೇವನನ್ನೂ ಸೇರಿಸುವನೆಂದು ಹೇಳಲ್ಪಟ್ಟಿರುತ್ತದೆ. ಇವರು ಜ್ಞಾನಯೋಗಿಗಳಾದ ಸಿದ್ಧರ ವಿಷಯವಾದುದರಿಂದ ನಮಗೆ ಬೇಕಾದುವಲ್ಲವೆಂಬ ಭಾವವು. ಇಲ್ಲಿ ನಾರಾಯಣನು ಪರಮಾತ್ಮನನ್ನು ಸೇರಿಸುವನು ಎಂದು ಹೇಳಿರುವದರಿಂದ ಸಂಕರ್ಷಣರೂಪಿಯಾದ ನಾರಾಯಣನು ವಾಸುದೇವರೂಪಿಯಾದ ಪರಮಾತ್ಮನನ್ನು ಸೇರಿಸುವನೆಂದು ಅರ್ಥ ಮಾಡಬೇಕು. ಏಕೆಂದರೆ ಮುಂದೆ ೩೫೪ನೆಯ ಅಧ್ಯಾಯದಲ್ಲಿ ಹಾಗೆಯೇ ಪುನಃ ಸಾಂಖ್ಯರ ವಿಷಯದಲ್ಲಿ ಹೇಳಲ್ಪಟ್ಟಿರುವದರಿಂದ, ಸಂಕರ್ಷಣ ವಾಸುದೇವರೂಪಿಗಳೆಂದು ಅರ್ಥ ಮಾಡತಕ್ಕದ್ದು. ಶ್ರೀಮಾನ್ ಶೆಟ್ಟಿಲೂರು ನರಸಿಂಹಾಚಾರ್ಯರು

---

(೨) ಭಾರತ, ಶಾಂತಿಪರ್ವ ೩೦೭. ೨೨. (೩) ಭಾರತ, ಶಾಂತಿ. ೩೫೪. ೧೩. ೨೦.

ತಾಃ । ತೇಷಾಂ ವೈ (ಕ್ಷೇಮಮಧ್ವಾನಂ ಷ್ಣವ ಮಧ್ವಾನಂ ಗಚ್ಛತಾಂ ದ್ವಿಜಸತ್ತಮ । ಸರ್ವಲೋಕ ತಮೋಹಂತಾ ಆದಿತ್ಯೋ ದ್ವಾರಮುಚ್ಯತೇ । ಜ್ವಾಲಾಮಾಲೀ ಮಹಾತೇಜಾ ಯೇನೇದಂ ಧಾರ್ಯತೇ ಜಗತ್ ಆದಿತ್ಯ

ನಾರಾಯಣನೆಂದರೆ ಅನಿರುದ್ಧರೂಪಿ ಎಂದು ಅರ್ಥ ಮಾಡಿರುತ್ತಾರೆ. ಇಲ್ಲಿಯೂ ವ್ಯೂಹಾವತಾರಿಯನ್ನು ಹೇಳಿದಂತಾಯಿತು.

(೨) "ಯೇತು-ಯಾರಾದರೆ, ಲೋಕೇ-ಈ ಲೋಕದಲ್ಲಿ, ದಗ್ಧೇಂಧನಾಃ ಸುಡಲ್ಪಟ್ಟ ಕಟ್ಟಿಗೆಯ ರೂಪವಾದ ಪಾಪವುಳ್ಳವರಾಗಿ, ಎಂದರೆ ಉಪಾಸನಾದಿಗಳಿಂದ ಕರ್ಮಗಳ ನಾಶವುಳ್ಳವರಾಗಿ, ಆ ಕಾರಣದಿಂದ, ಪುಣ್ಯಪಾಪ ವಿವರ್ಜಿತಾಃ-ಪುಣ್ಯ ಪಾಪಗಳಿಲ್ಲದವರಾಗಿ ಕ್ಷೇಮಮಧ್ವಾನಂ ಗಚ್ಛತಾಂ-ಎಲ್ಲಿ ಪೂರ್ಣಕ್ಷೇಮವುಂಟೋ ಅಂತಹ ಮಾರ್ಗವನ್ನು ಕುರಿತು ಹೋಗುತ್ತಿರುವ, ತೇಷಾಂ - ಅಂತಹ ಯೋಗಿಗಳಾದ ಸಾಂಖ್ಯರುಗಳಿಗೆ, ಹೇ ದ್ವಿಜಸತ್ತಮ ಓ ಬ್ರಾಹ್ಮಣಶ್ರೇಷ್ಠರಾದ ನಾರದರೇ, ಇದು ನಾರದರಿಗೆ ನರನಾರಾಯಣ ಋಷಿಗಳು ಮಾಡುವ ಉಪದೇಶವು; ಸರ್ವಲೋಕ ತಮೋಹಂತಾ - ಸಮಸ್ತ ಲೋಕದ ಅಂಧಕಾರವನ್ನು ನಾಶ ಮಾಡುವ, ಆದಿತ್ಯಃ - ಸೂರ್ಯನು, ದ್ವಾರಂ - ಮಾರ್ಗವಾಗಿ, ಉಚ್ಯತೇ - ಹೇಳಲ್ಪಡುವನು ಎಂದರೆ ಅಂಥಾವರು ಸೂರ್ಯನ ಮೂಲಕವಾಗಿ, ಕ್ಷೇಮವುಂಟಾಗುವ ಸ್ಥಳವಾದ ವೈಕುಂಠಕ್ಕೆ ಹೋಗತಕ್ಕದ್ದೆಂಬ ಭಾವವು; ಆ ಸೂರ್ಯನು ಎಂಥಾವನೆಂದರೆ, ಜ್ವಾಲಾಮಾಲೀ - ಜ್ವಾಲೆಗಳನ್ನೇ ಮಾಲೆಯಾಗಿ ಉಳ್ಳವನು, ಮಹಾತೇಜಾಃ - ಮಹಾ ತೇಜಸ್ಸುಳ್ಳವನು, ಯೇನ- ಯಾವ ಸೂರ್ಯನಿಂದಲೇ, ಇದಂ ಜಗತ್- ಈ ಜಗತ್ತು, ಧಾರ್ಯತೇ - ಧರಿಸಲ್ಪಟ್ಟಿರುತ್ತದೋ, ಸೂರ್ಯನಿಂದಲೇ ಈ ಜಗತ್ತಿನಲ್ಲಿ ಪ್ರಾಣಿಗಳ ವಾಸವಾದುದರಿಂದ ಧಾರ್ಯತೇ ಎಂದು ಪ್ರಯೋಗಿಸಲ್ಪಟ್ಟಿರುತ್ತದೆ; ಹೀಗೆ ಆದಿತ್ಯದಗ್ಧ ಸರ್ವಾಂಗಾಃ - ಸೂರ್ಯನಿಂದ ಸುಡಲ್ಪಟ್ಟ ಸರ್ವಾವಯವವುಳ್ಳವರಾಗಿ, ಕೇನಚಿತ್-ಯಾರಿಂದಲೂ, ಕ್ವಚಿತ್ - ಯಾವದೊಂದು ಪ್ರದೇಶದಲ್ಲಾಗಲಿ, ಅದೃಶ್ಯಾಃ - ಕಾಣಿಸದವರಾಗಿ, ಪರಮಾಣ್ವಾತ್ಮ ಭೂತಾಶ್ಚ - ಅತಿ ಸೂಕ್ಷ್ಮವಾದ ಶರೀರವುಳ್ಳವರಾಗಿ, ತಂ ದೇವಂ - ಆ ಅನಿರುದ್ಧನಾದ ದೇವನನ್ನು, ಪ್ರವಿಶಂತಿ - ಹೊಂದುವರು, ಅನಿರುದ್ಧ ತನೌ ಸ್ಥಿತಾಃ - ಆ ಅನಿರುದ್ಧ ಶರೀರದಲ್ಲಿರುವವರಾಗಿ, ತಸ್ಮಾದಪಿ ವಿನಿರ್ಮುಕ್ತಾಃ - ಅಲ್ಲಿಂದಲೂ ಬಿಡಲ್ಪಟ್ಟವರಾಗಿ, ಮನೋಭೂತಾಃ - ಮನಸ್ಸನ್ನೇ ಶರೀರವಾಗಿ ಉಳ್ಳವರಾಗಿ, ತತಃ - ಅಲ್ಲಿಂದ ಮುಂದಕ್ಕೆ, ಭೂಯಃ ಪುನಃ, ಪ್ರದ್ಯುಮ್ನಂ -

ದಗ್ಧ ಸರ್ವಾಂಗಾ ಅದೃಶ್ಯಾಃ ಕೇನ ಚಿತ್ಕ್ವಚಿತ್ । ಪರಮಾಣ್ವಾತ್ಮಭೂತಾಶ್ಚ ತಂ ದೇವಂ ಪ್ರವಿಶನ್ತ್ಯುತ । ತಸ್ಮಾದಪಿ ವಿನಿರ್ಮುಕ್ತಾ ಅನಿರುದ್ಧ ತನೌ ಸ್ಥಿತಾಃ । ಮನೋಭೂತಾಸ್ತತೋ ಭೂಯಃ ಪ್ರದ್ಯುಮ್ನಂ ಪ್ರವಿಶನ್ತ್ಯುತ । ಪ್ರದ್ಯುಮ್ನಾಚ್ಚ ವಿನಿರ್ಮುಕ್ತಾ ಜೀವಂ ಸಂಕರ್ಷಣಂತತಃ । ವಿಶನ್ತಿ ವಿಪ್ರಪ್ರವರಾ ಸಾಂಖ್ಯಾ ಯೋಗಾಶ್ಚ ತೈಸ್ಸಹ । ತತಸ್ತ್ರೈಗುಣ್ಯ ಹೀನಾಸ್ತೇ ಪರಮಾತ್ಮಾನ ಮಂಜಸಾ । ಪ್ರವಿಶನ್ತಿ ದ್ವಿಜಶ್ರೇಷ್ಠಾಃ ಕ್ಷೇತ್ರಜ್ಞಂ ನಿರ್ಗುಣಾತ್ಮಕಂ । ಸರ್ವಾವಾಸಂ ವಾಸುದೇವಂ ಕ್ಷೇತ್ರಜ್ಞಂ ವಿದ್ಧಿತತ್ತ್ವತಃ । ಸಮಾಹಿತಮನಸ್ಕಾಸ್ತು ನಿಯತಾ ಸ್ಸಂಯತೇಂದ್ರಿಯಾಃ । ಐಕಾಂತ್ಯ ಭಾವೋಪಗತಾ ವಾಸುದೇವಂ ವಿಶಂತಿ ತೇ ॥" ಇತ್ಯಾದಿಗಳಾನ ಮಹಾ

ಪ್ರದ್ಯುಮ್ನನನ್ನು, ಪ್ರವಿಶಂತಿ - ಪ್ರವೇಶಿಸುವರು, ಎಂದರೆ ಆ ವ್ಯೂಹಲೋಕವನ್ನು ಸೇರುವರು ಎಂಬರ್ಥವು; ಪ್ರದ್ಯುಮ್ನಾಚ್ಚ ವಿನಿರ್ಮುಕ್ತಾಃ - ಆ ಪ್ರದ್ಯುಮ್ನನಿಂದ ಬಿಡಲ್ಪಟ್ಟವರಾಗಿ, ಜೀವಂ ಸಂಕರ್ಷಣಂ ತತಃವಿಶಂತಿ - ಅನಂತರ ಜೀವಾಭಿಮಾನಿಯಾದ ಸಂಕರ್ಷಣ ಲೋಕವನ್ನು ಪ್ರವೇಶಿಸುವರು, ತೈಸ್ಸಹ - ಅವರುಗಳೊಂದಿಗೆ, ವಿಪ್ರಪ್ರವರಾಃ - ಬ್ರಾಹ್ಮಣಶ್ರೇಷ್ಠರಾದ, ಸಾಂಖ್ಯಾ ಯೋಗಾಶ್ಚ - ಜ್ಞಾನಯೋಗ ಕರ್ಮಯೋಗ ನಿಷ್ಠರೂ ಸಹ. ತತಃ - ಆ ಸಂಕರ್ಷಣನನ್ನು ಬಿಟ್ಟು, ತ್ರೈಗುಣ್ಯ ಹೀನಾಃ - ಮೂರು ಗುಣಗಳಾದ ಸತ್ತ್ವರಜಸ್ತಮೋಗುಣಗಳಿಂದ ಬಿಡಲ್ಪಟ್ಟವರಾಗಿ, ತೇ - ಆ, ದ್ವಿಜಶ್ರೇಷ್ಠಾಃ - ಬ್ರಾಹ್ಮಣಶ್ರೇಷ್ಠರು, ಅಂಜಸಾ - ಶೀಘ್ರದಲ್ಲಿ, ಕ್ಷೇತ್ರಜ್ಞಂ - ಕ್ಷೇತ್ರಜ್ಞನೆಂದು ಹೇಳಿಸಿಕೊಳ್ಳುವ, ನಿರ್ಗುಣಾತ್ಮಕಂ -- ಈ ಹೇಯವಾದ ಪ್ರಕೃತಿಗುಣಗಳೊಂದೂ ಇಲ್ಲದಿರುವ, ಪರಮಾತ್ಮಾನಂ - ಪರಮಾತ್ಮನಾದ ವಾಸುದೇವನನ್ನು, ವಿಶಂತಿ - ಹೊಂದುತ್ತಾರೆ. ಕ್ಷೇತ್ರಜ್ಞಂ ಆ ಕ್ಷೇತ್ರಜ್ಞನನ್ನು, ಸರ್ವಾವಾಸಂ - ಸಮಸ್ತಕ್ಕೂ ಆವಾಸಭೂತನಾದ, ವಾಸುದೇವಂ - ವಾಸುದೇವನನ್ನಾಗಿ, ವಿದ್ಧಿ ತತ್ತ್ವತಃ- ಯಥಾರ್ಥವಾಗಿ ತಿಳಿ, ತೇ - ಅವರು, ಸಮಾಹಿತಮನಸ್ಕಾಸ್ತು - ಶಾಂತಮನಸ್ಕರಾಗಿ, ನಿಯತಾಃ - ಶಾಸ್ತ್ರನಿಯಮದಿಂದಿರುವವರಾಗಿ, ಸಂಯತೇಂದ್ರಿಯಾಃ - ಅಡಗಿಸಲ್ಪಟ್ಟ ಇಂದ್ರಿಯಗಳುಳ್ಳವರು, ಎಂದರೆ ಇಂದ್ರಿಯನಿಗ್ರಹ ಮಾಡಿದವರೂ, ಐಕಾಂತ್ಯಭಾವೋಪಗತಾಶ್ಚ - ಅನನ್ಯ ಪ್ರಯೋಜನರಾದವರು, ಸರ್ವೇಶ್ವರನೊಬ್ಬನಲ್ಲೇ ಮನಸ್ಸಿಟ್ಟ, ತೇ - ಅವರೂ, ವಾಸುದೇವಂ ವಿಶಂತಿ - ವಾಸುದೇವನನ್ನು ಹೊಂದುವರು. ಹೀಗೆ ಸಾಂಖ್ಯರಿಗೆ ಆದಿತ್ಯ, ಅನಿರುದ್ಧ, ಪ್ರದ್ಯುಮ್ನ,

ಭಾರತಾದಿ ವಚನಂಗಳಿಲುಮ್ (೪) "ಶ್ವೇತದ್ವೀಪ ಮಿತಃ ಪ್ರಾಪ್ಯ ವಿಶ್ವ ರೂಪಧರಂ ಹರಿಮ್ । ತತೋಽನಿರುದ್ಧ ಮಾಸಾದ್ಯ ಶ್ರೀಮತ್ ಕ್ಷೀರೋದಧೌ ಹರಿಮ್ । ತತಃ ಪ್ರದ್ಯುಮ್ನ ಮಾಸಾದ್ಯದೇವಂ ಸರ್ವೇಶ್ವರೇಶ್ವರಮ್ । ತತಸ್ಸಂಕರ್ಷಣಂ ದಿವ್ಯಂ ಭಗವಂತಂ ಸನಾತನಮ್ । ಅಯಮಪ್ಯಪರೋ ಮಾರ್ಗಸ್ಸದಾ ಬ್ರಹ್ಮಸುಖೈಷಿಣಾಮ್ । ಪರಮೈಕಾನ್ತಿ ಸಿದ್ಧಾನಾಂ ಪಂಚಕಾಲ ರತಾತ್ಮನಾಮ್ ।" ಎನ್ರಿಪ್ಪಡ್ಯೆಗಳಿಲೇ ಜಯತ್ಸಂಹಿತಾದಿಗಳಿಲುಮ್, (೫) "ವಿಭವಾರ್ಚನಾದ್ವ್ಯೂಹಂ ಪ್ರಾಪ್ಯ ವ್ಯೂಹಾರ್ಚನಾ

ಸಂಕರ್ಷಣನ ಮೂಲಕವಾಗಿ ವಾಸುದೇವನನ್ನು ಹೊಂದುವರೆಂದು ಬೇರೇ ಮಾರ್ಗವು ಇಲ್ಲಿ ಹೇಳಲ್ಪಟ್ಟಿರುತ್ತದೆ." ಇವೇ ಮೊದಲಾದವುಗಳಾದ, ಮಹಾಭಾರತವೇ ಮೊದಲಾದ ವಚನಗಳಲ್ಲೂ ; ಇಲ್ಲಿಯೂ ಕೆಲವು ವಿಧ ಯೋಗಿಗಳಿಗೆ ಈ ಗತಿಯು ಹೇಳಲ್ಪಟ್ಟಿರುವವರಿಂದ ನಮಗೆ ಬೇಕಾದುದಲ್ಲವೆಂಬ ಭಾವವು.

(೫) ಮುಂದೆ ಜಯತ್ಸಂಹಿತಾ ವಾಕ್ಯಗಳನ್ನುದಾಹರಿಸುತ್ತಾರೆ :— **ಇತಃ**- ಈ ಲೋಕದಿಂದ, **ಶ್ವೇತದ್ವೀಪಂ** - ಶ್ವೇತದ್ವೀಪವನ್ನು ಹೊಂದಿ ಅಲ್ಲಿರುವ, **ವಿಶ್ವರೂಪಧರಂ ಹರಿಮ್** - ವಿಶ್ವರೂಪವನ್ನು ಧರಿಸಿರುವ ಶ್ರೀಹರಿಯನ್ನೂ, **ಪ್ರಾಪ್ಯ**- ಹೊಂದಿ, **ತತಃ** - ಅಲ್ಲಿಂದ, **ಶ್ರೀಮತ್ ಕ್ಷೀರೋದಧೌ** - ಕ್ಷೀರಸಮುದ್ರದಲ್ಲಿರುವ, **ಹರಿಮ್** - ಶ್ರೀಹರಿಯನ್ನು, **ಪ್ರಾಪ್ಯ** - ಹೊಂದಿ, **ತತಃ** - ಅಲ್ಲಿಂದ, **ಸರ್ವೇಶ್ವರೇಶ್ವರಂ** - ಬ್ರಹ್ಮಾದಿ ಸಮಸ್ತ ದೇವತೆಗಳಿಗೂ ಈಶ್ವರನಾದ, **ದೇವಂ**- ಲೀಲಾಸಕ್ತನಾದ ಪ್ರದ್ಯುಮ್ನನನ್ನು ಆಸಾದ್ಯ - ಹೊಂದಿ, **ತತಃ** - ಅಲ್ಲಿಂದ ಮುಂದಕ್ಕೆ, **ಸಂಕರ್ಷಣಂ** - ಸಂಕರ್ಷಣನನ್ನು, **ಆಸಾದ್ಯ** - ಹೊಂದಿ, ಎಂದು ಇಟ್ಟುಕೊಳ್ಳಬೇಕು ; **ತತಃ** - ಅಲ್ಲಿಂದ, **ಸನಾತನಂ** - ಅನಾದಿಯಾದ, **ಭಗವಂತಂ** - ಭಗವಂತನನ್ನು ಹೊಂದುತ್ತಾರೆ ಎಂದು ಇಟ್ಟುಕೊಳ್ಳತಕ್ಕದ್ದು, **ಸದಾ** - ಯಾವಾಗಲೂ, **ಬ್ರಹ್ಮಸುಖೈಷಿಣಾಮ್** - ಬ್ರಹ್ಮಾನುಭವಾನಂದವನ್ನು ಅಪೇಕ್ಷಿಸುವ, **ಪರಮೈಕಾನ್ತಿ ಸಿದ್ಧಾನಾಂ** - ಪರಮಾತ್ಮನನ್ನು ಏಕಾಗ್ರಚಿತ್ತತೆಯಿಂದ ಧ್ಯಾನಿಸುವವರಿಂದ ಸಿದ್ಧಿಯನ್ನು ಹೊಂದಿರುವ, **ಪಂಚಕಾಲರತಾತ್ಮನಾಂ**- ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ, ಯೋಗವೆಂಬ ಐದು ಕಾಲವಲ್ಲೂ ಭಗವಂತನ ಆರಾಧನೆಯಲ್ಲಿ ಮನಸ್ಸುಳ್ಳವರಿಗೆ, **ಅಯಮಪಿ** - ಇದೂ ಕೂಡ, ಈ ಮೇಲೆ ಹೇಳಿದುದೂ ಕೂಡ, **ಅಪರೋ ಮಾರ್ಗಃ** - ಇನ್ನೊಂದು ಮಾರ್ಗವು.

---

(೪) **ಶ್ರೀಭಾಷ್ಯ. ೨. ೨. ೪೧.**

ತ್ಪರಂ ಬ್ರಹ್ಮ ವಾಸುದೇವಾಖ್ಯಂ ಸೂಕ್ಷ್ಮಂ ಪ್ರಾಪ್ಯತ ಇತಿ ವದಂತಿ” ಎನ್ನು ಶ್ರೀ ಪಾಂಚರಾತ್ರಾಧಿಕರಣತ್ತಿಲುಮ್, ಶಿಲವಧಿಕಾರ ವಿಶೇಷಙ್ಗಳೈ ಪ್ಪತ್ತಚ್ಚೊಲ್ಲುಗಿರ ಕ್ರಮಮುಕ್ತಿ ಪಕ್ಷತ್ತಿಲುಮ್, ಸತ್ಯಲೋಕಾದಿಗಳಿಲಿ

ಎನ್ರಿಪ್ಪುಡೈಗಳಿಲೇ - ಈ ರೀತಿಗಳಲ್ಲಿ, **ಜಯಾತ್ಸಂಹಿತಾದಿಗಳಿಲುಮ್** - ಜಯಾತ್ಸಂಹಿತೆಯೇ ಮೊದಲಾದವುಗಳಲ್ಲಿ; ಇಲ್ಲಿ ಹೇಳಿರುವ ಮಾರ್ಗವು ಕೆಲವು ಅಧಿಕಾರಿ ವಿಶೇಷವನ್ನು ಕುರಿತು ಹೇಳಿರುವುದರಿಂದ ನಮಗೆ ಪ್ರಕೃತವಾದುದಲ್ಲವೆಂಬ ಭಾವವು.

(ಆ) **ವಿಭವಾರ್ಚನಾತ್** - ರಾಮಕೃಷ್ಣಾದಿ ಅವತಾರ ರೂಪಿಯ ಅರ್ಚನೆಯಿಂದ ಎಂದರೆ ಧ್ಯಾನದಿಂದ, **ವ್ಯೂಹಂ ಪ್ರಾಪ್ಯ** - ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ರೂಪಿಯಾದ ಭಗವಂತನನ್ನು ಹೊಂದಿ, ಎಂದರೆ ಕ್ರಮವಾಗಿ ಅವರನ್ನು ಹೊಂದಿ, **ವ್ಯೂಹಾರ್ಚನಾತ್** - ಆ ವ್ಯೂಹಗಳ ಅರ್ಚನೆಯಿಂದ, **ವಾಸುದೇವಾಖ್ಯಂ** - ವಾಸುದೇವನೆಂಬ ಹೆಸರುಳ್ಳ, **ಸೂಕ್ಷ್ಮಂ** - ಕೇವಲ ಸೂಕ್ಷ್ಮವಾದ ಷಾಡ್ಗುಣ್ಯವಿಗ್ರಹವಾದ ಪರಬ್ರಹ್ಮವು, **ಪ್ರಾಪ್ಯತೇ** - ಹೊಂದಲ್ಪಡುತ್ತದೆ, **ಇತಿ** - ಎಂಬದಾಗಿ **ವದಂತಿ** - ಹೇಳುತ್ತಾರೆ” ಇದು ಶ್ರೀ ಭಾಷ್ಯಕಾರರ ಉಕ್ತಿಯು, **ಎನ್ರು** - ಎಂಬದಾಗಿ, **ಶ್ರೀ ಪಾಂಚರಾತ್ರಾಧಿಕರಣತ್ತಿಲುಮ್** - ಪಾಂಚರಾತ್ರ ಶಾಸ್ತ್ರವನ್ನು ಕುರಿತ ಅಧಿಕರಣದಲ್ಲೂ, (ಇದಕ್ಕೆ ಉತ್ಪತ್ತ್ಯಸಂಭವಾಧಿಕರಣವೆಂದು ಹೆಸರು) ಇಲ್ಲಿಯೂ ವಿಭವ ವ್ಯೂಹಾವತಾರಗಳನ್ನು ಉಪಾಸನೆ ಮಾಡುವವರನ್ನು ಕುರಿತು ಹೇಳಿರುವುದರಿಂದ ನಮಗೆ ಸಂಬಂಧಿಸಿದುದಲ್ಲವೆಂಬ ತಾತ್ಪರ್ಯವು. ಹೀಗೆ **ಶಿಲ ಅಧಿಕಾರ ವಿಶೇಷಙ್ಗಳೈ** - ಕೆಲವು ಉಪಾಸನಾದಿ ಅಧಿಕಾರ ವಿಶೇಷಗಳನ್ನು, **ಪತ್ತ** - ಕುರಿತು, **ಶೊಲ್ಲುಗಿರ** - ಹೇಳುವ, **ಕ್ರಮಮುಕ್ತಿ ಪಕ್ಷತ್ತಿಲುಮ್** - ಕ್ರಮವಾಗಿ ಮುಕ್ತಿ ಉಂಟಾಗುವ ಪಕ್ಷದಲ್ಲಿ, ಎಂದರೆ ವಿಭವದಿಂದ ವ್ಯೂಹವೂ, ಆ ವ್ಯೂಹದಲ್ಲಿ ಅನಿರುದ್ಧ, ಅನಂತರ ಪ್ರದ್ಯುಮ್ನ, ಆಮೇಲೆ ಸಂಕರ್ಷಣ, ಅನಂತರ ವಾಸುದೇವ, ಹೀಗೆ ಕ್ರಮವಾಗಿ ಮುಕ್ತಿಯುಂಟಾಗುವ ಪಕ್ಷದಲ್ಲಿ ಎಂಬರ್ಥವು. **ಸತ್ಯಲೋಕಾದಿಗಳಿಲಿರುನ್ದು** - ಚತುರ್ಮುಖನ ಲೋಕವಾದ ಸತ್ಯಲೋಕವೇ ಮೊದಲಾದವುಗಳಲ್ಲಿದ್ದು, ಕೂರ್ಮಪುರಾಣ ಪೂರ್ವಖಂಡದಲ್ಲಿ “**ಬ್ರಹ್ಮಣಾ ಸಹ ತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ । ಪರಸ್ಯಾನ್ತೇ ಕೃತಾತ್ಮಾನಃ ಪ್ರವಿಶನ್ತಿ ಪರಂಪದಮ್**” ಎಂದು ಹೇಳಿರುತ್ತದೆ. ಇದರರ್ಥವೇನೆಂದರೆ:—**ಸಂಪ್ರಾಪ್ತೇ ಪ್ರತಿಸಂಚರೇ** - ಪ್ರಳಯವು ಪ್ರಾಪ್ತವಾಗಲಾಗಿ, **ಪರಸ್ಯಾನ್ತೇ** - ಈ ಚತುರ್ಮುಖನ ಆಯುಸ್ಸು ಕಳೆದ ನಂತರ, **ತೇ ಸರ್ವೇ** - ಅವರೆಲ್ಲರೂ, **ಕೃತಾ**

ದುನ್ಪು ಮುಕ್ತರಾಮವರ್ಗಳುಕ್ಕು ಮುಳ್ಳ ಗತಿವಿಶೇಷಾದಿಗಳಿರುಕ್ಕುಮ್ ಕಟ್ಟಳೈಗಳವ್ವೋ ಅಧಿಕಾರಿಗಳುಕ್ಕೇ ಜ್ಞಾತವ್ಯಙ್ಗಳಾಗೈಯಾಲಿಙ್ಗನ್ಪೈ ವಗುತ್ತು ಚೊಲ್ಲುಗೈಯಪೇಕ್ಷಿತಮನ್ರು.

ತ್ಮಾನಃ - ಕೃತಕೃತ್ಯರಾಗಿ, ಬ್ರಹ್ಮಣಾ ಸಹ - ಚತುರ್ಮುಖನೊಂದಿಗೆ, ಪ್ರವಿಶನ್ತಿ ಪರಂಪದಂ - ಪರಮಪದವನ್ನು ಪ್ರವೇಶಿಸುತ್ತಾರೆ." ಇದರ ಪ್ರಕಾರ ಈಗ ಮುಕ್ತಿಯೇ ಇಲ್ಲವೆಂದೂ, ಸತ್ಯಲೋಕದಲ್ಲಿ ಚತುರ್ಮುಖ ಸಾಯುಜ್ಯವನ್ನು ಹೊಂದಿದ್ದು, ಕಲ್ಪಾಂತದಲ್ಲಿ ಚತುರ್ಮುಖನೊಂದಿಗೇ ಮುಕ್ತಿಯು ಎಂದು ಕೆಲವರಭಿಪ್ರಾಯಪಡುತ್ತಾರೆ. ಇದು ಬಾದರಿಯಣರಭಿಪ್ರಾಯವು ಜೈಮಿನ್ಯಾಚಾರ್ಯರೂ ವ್ಯಾಸಮಹರ್ಷಿಗಳೂ ಈ ಅಭಿಪ್ರಾಯವನ್ನು ಖಂಡಿಸಿರುತ್ತಾರೆ. (ಬ್ರಹ್ಮಸೂತ್ರ ೪ ೩. ೧೦—೧೪) ಹಾಗಾದರೆ ಬ್ರಹ್ಮಣಾ ಸಹತೇ ಸರ್ವೇ - ಎಂಬುದಕ್ಕೆ ಅರ್ಥ ಹೇಗೆ ಎಂದರೆ ಸತ್ಯಲೋಕವಾಸಿಗಳಾಗಿರುವವರಿಗೆ ಚತುರ್ಮುಖನೊಂದಿಗೆ ಮುಕ್ತಿಯು ಎಂದು ಹೇಳಲ್ಪಟ್ಟಿರುತ್ತದೆ ಇಲ್ಲಿ ಆದಿ ಶಬ್ದದಿಂದ ತಪೋಲೋಕ (ಇಲ್ಲಿ ಸನಕಾದಿಗಳಿದ್ದಾರೆಂಬ ಪ್ರಸಿದ್ಧಿಯು), ಸಾಂತಾನಿಕ ಲೋಕಗಳು (ಅಯೋಧ್ಯೆಯಲ್ಲಿದ್ದವರು ಶ್ರೀರಾಮನೊಂದಿಗೆ ಸರಯೂ ನದಿ ಪ್ರವೇಶ ಮಾಡಿ ಇಲ್ಲಿದ್ದಾರೆಂಬ ಪ್ರಸಿದ್ಧಿಯು) ಹೇಳಲ್ಪಟ್ಟವು, ಮುಕ್ತರಾಮವರ್ಗಳುಕ್ಕು - ಮುಕ್ತಿಯನ್ನು ಹೊಂದುವವರಿಗೂ, ಉಳ್ಳ ಗತಿವಿಶೇಷಾದಿಗಳ್ - ಪ್ರಾಪ್ತವಾದ ಗತಿವಿಶೇಷಗಳು, ಇರುಕ್ಕುಮ್ ಕಟ್ಟಳೈಗಳ್ - ಹೇಳಲ್ಪಟ್ಟ ಕ್ರಮಗಳು, ಅವ್ವೋ ಅಧಿಕಾರಿಗಳುಕ್ಕೇ - ಆಯಾ ಅಧಿಕಾರಿಗಳಿಗೇನೆ, ಜ್ಞಾತವ್ಯಮಾಗೈಯಾಲೇ - ತಿಳಿಯತಕ್ಕದ್ದಾದುದರಿಂದ, ಇಙ್ಗು – ಈ ಸ್ಥಳದಲ್ಲಿ, ಈ ಸಂದರ್ಭದಲ್ಲಿ, ಅನ್ಪೈ - ಆ ಗತಿವಿಶೇಷಗಳನ್ನೆಲ್ಲಾ, ವಗುತ್ತುಚ್ಚೊಲ್ಲುಗೈ - ವಿಸ್ತರಿಸಿ ಹೇಳಬೇಕಾದುದು, ಅಪೇಕ್ಷಿತಮನ್ರು - ಬೇಕಾಗಿಲ್ಲವು. ಸತ್ಯಲೋಕದಲ್ಲೂ ತಪೋಲೋಕದಲ್ಲೂ ಸಾಂತಾನಿಕ ಲೋಕದಲ್ಲೂ ಇರುವವರಿಗೇನೇ ತಮಗೆ ಯಾವಾಗ ಮೋಕ್ಷವೆಂಬುವದು ತಿಳಿಯುವದು ; ಈಗ ಈ ಲೋಕದಲ್ಲಿರುವಂಥಾ ನಮಗೆ ಅದು ಬೇಕಾದುದಲ್ಲವೆಂಬ ಭಾವವು ; ಅಪ್ರಸ್ತುತ ಪ್ರಶಂಸೆಯು ಅನಾವಶ್ಯಕವೆಂಬ ಭಾವವು.

ಇನ್ನೆಲ್ಲಾ ತಿಳಿದುಕೊಳ್ಳತಕ್ಕದ್ದು ನಮಗೆ ಅನಾವಶ್ಯಕವೆಂದು ಹೇಳಿದಂತಾಯಿತು. ನಮ್ಮಂತಹ ಸ್ವತಂತ್ರಪ್ರಪತ್ತಿನಿಷ್ಠರಿಗಾದರೋ ಇಂತಹ ವಿಳಂಬಗಳೊಂದೂ ಇಲ್ಲದೆ ಅರ್ಚಿರಾದಿ ಗತಿಯೇ ಮಾರ್ಗವೆಂದು ಸ್ಥಾಪಿಸಲ್ಪಟ್ಟಿತು. ಆದರೆ ಈ ಅರ್ಚಿರಾದಿ ಗತಿಯನುಸಂಧಾನವು ಭಕ್ತಿಯೋಗನಿಷ್ಠನಿಗೆ ನಿತ್ಯವೂ

ಮುಮುಕ್ಷೋಃ ಭರನ್ಯಾಸಪೂರ್ವೋತ್ತರಕಾಲಯೋಃ ಗತಿಚಿಂತನಸ್ಯ ಪ್ರಯೋಜನಮ್

ಇಗ್ಗತ್ಯನುಸಂಧಾನಾದಿಗಳ್ ಸ್ವತಂತ್ರ ಪ್ರಪತ್ತಿನಿಷ್ಠನಾನ ಇವನುಕ್ಕು ಸದ್ವಾರಕ ಪ್ರಪತ್ತಿನಿಷ್ಠನುಕ್ಕುಪ್ಪೋಲೆ ಉಪಾಯಾಂಗಮಾಗ ನಾಳ್

ಮಾಡತಕ್ಕದ್ದೇನೋ ಕರ್ತವ್ಯವು ಈ ಭರಸಮರ್ಪಣೆ ಮಾಡುವವನಿಗಾಗಲಿ ಅಥವಾ ಮಾಡಿದವನಿಗಾಗಲಿ ನಿತ್ಯದಲ್ಲೂ ಈ ಗತ್ಯನುಸಂಧಾನವು ಅವಶ್ಯಕವೇ? ಭರನ್ಯಾಸ ಮಾಡುವವನಿಗೂ ಆವಶ್ಯಕವೆಂದರೆ ಇದೇನೂ ಅಂಗವಾಗಿ ಹೇಳಲ್ಪಡಲಿಲ್ಲವಲ್ಲಾ? ಭರನ್ಯಾಸ ಮಾಡಿದವನಿಗೆ ಆವಶ್ಯಕವೇ ಎಂದರೆ ಇದೂ ಒಂದು ಅಂಗವೇ ಎಂಬಾಕ್ಷೇಪಣೆಗೆ ಒಳಗಾಗುತ್ತದೆ. ಹೀಗಿರುವಲ್ಲಿ ಈ ಗತ್ಯನುಸಂಧಾನವು ಉಪಾಯಾನುಷ್ಠಾನಕ್ಕೆ ಮುಂಚೆಯಾಗಲಿ, ಅನಂತರವಾಗಲಿ ಆವಶ್ಯಕವಾಗಿ ತೋರುವದಿಲ್ಲವಲ್ಲಾ ಎಂದರೆ, ಹಾಗಲ್ಲವೆಂದು, ಈ ಗತ್ಯನುಸಂಧಾನವು ಎರಡು ಸಂದರ್ಭದಲ್ಲೂ ಉಪಯೋಗವಾದುದರಿಂದ ಆವಶ್ಯಕವೆಂದುಪದೇಶಿಸುತ್ತಾರೆ:—

ಮುಮುಕ್ಷುವಿಗೆ ಭರನ್ಯಾಸಕ್ಕೆ ಮೊದಲೂ ಅನಂತರವೂ ಈ ಗತಿಯು ಚಿಂತನದಿಂದುಂಟಾಗುವ ಪ್ರಯೋಜನವು.

ಇಗ್ಗತ್ಯನುಸಂಧಾನಾದಿಗಳ್ - ಈ ಅರ್ಚಿರಾದಿ ಗತಿಯನ್ನು ನಿತ್ಯದಲ್ಲೂ ಸ್ಮರಣೆಗೆ ತಂದುಕೊಳ್ಳುವದೇ ಮೊದಲಾದವುಗಳು, ಇಲ್ಲಿ ಆವಿಷದದಿಂದ ಅಲ್ಲಲ್ಲಿ ಉಂಟಾಗುವ ಸತ್ಕಾರ, ಕೊನೆಗೆ ಪರಮಫಲಪ್ರಾಪ್ತಿ ಇವೆಲ್ಲವೂ ಬೋಧಿಸಲ್ಪಟ್ಟವು, **ಸ್ವತಂತ್ರ ಪ್ರಪತ್ತಿ ನಿಷ್ಠನಾನ ಇವನುಕ್ಕು** - ಭರನ್ಯಾಸವನ್ನನುಷ್ಠಿಸಿದ ಈ ಪ್ರಪನ್ನನಿಗೆ, **ಸದ್ವಾರಕ ಪ್ರಪತ್ತಿನಿಷ್ಠನುಕ್ಕುಪ್ಪೋಲೆ** - ಭಕ್ತ್ಯುಪಾಯನಿಷ್ಠನಾದ ಯೋಗಿಯು ಹಾಗೆ, **ನಾಳ್ ತೋರುಮ್** - ಪ್ರತಿನಿತ್ಯವಲ್ಲೂ, **ಕರ್ತವ್ಯಙ್ಗಳಲ್ಲೇಯಾಗಿಲುಮ್** - ಮಾಡಲೇಬೇಕೆಂಬ ನಿಯಮವಿಲ್ಲದಿದ್ದರೂ, ಎಂದರೆ ನಿರ್ಯಾಣ, ಗತಿಚಿಂತನ, ಪರಿಪೂರ್ಣಾನುಭವ ಇವುಗಳನುಸಂಧಾನವು ಭಕ್ತಿಮಾರ್ಗನಿಷ್ಠನಿಗೆ ಹೇಗೆ ನಿತ್ಯವಲ್ಲೂ ಆವಶ್ಯಕವೋ ಹಾಗೆ ಈ ಭರನ್ಯಾಸ ನಿಷ್ಠನಿಗೆ ಆವಶ್ಯಕವಿಲ್ಲವೆಂಬುದು ತಾತ್ಪರ್ಯವು. ಭಕ್ತಿಮಾರ್ಗದಲ್ಲಿರುವವನಿಗೆ ಇವೆಲ್ಲಾ ಆವಶ್ಯಕ

ತೋಱುವ್ ಕರ್ತವ್ಯಙ್ಗಳನ್ರೇಯಾಗಿಲುಮ್ ಇವ್ವುಪಾಯತ್ತಿಲಿೞಿಯು ನ್ಪೋದು ಅಧಿಕಾರತ್ವ ಸಿದ್ಧಿಕ್ಕಾಗ ಫಲಾರ್ಥಿತ್ವಂ ಅಪೇಕ್ಷಿತಮಾಗೈಯಾ ಲೇ ಫಲಪರ್ವವಿಶೇಷಾನಸಂಧಾನಮಾಯ್ ಪ್ಪುಕಿರಕ್ಕಡವನ.

ಪಿನ್ಬು ವರಪ್ಪುಗುಗಿರ ಕಣ್ಣಾಲತ್ತುಕ್ಕು ನಾಳಿಣ್ಣಿ ಯಿರುಕ್ಕುಮಾ ಪ್ಪೋಲೆ ಪೂರ್ವಪ್ರಾರ್ಥಿತ ಪುರುಷಾರ್ಥ ಸ್ಮರಣಮಾತ್ರಮಾಯ್ ಇಪ್ಪುರು ಷಾರ್ಥ ಪೆರಪ್ಪು ಕುಕಿರೋಮೆಙ್ಗ್ಗರ ಪ್ರೀತ್ಯತಿಶಯತ್ತಿೖ ವಿಳೈಪ್ಪಿತ್ತು ಕ್ಕೊಣ್ಡು ಸ್ವಯಂಪ್ರಯೋಜನಮಾಯಿರುಕ್ಕುಮ್.

ವೆಂದು ಶ್ರೀ ಭಾಷ್ಯದಲ್ಲಿ ಹೇಳಲ್ಪಟ್ಟಿರುತ್ತದೆ; **ಇವ್ವುಪಾಯತ್ತಿಲ್ ಇೞಿಯು ನ್ಪೋದು** - ಈ ಭರನ್ಯಾಸವನ್ನು ಅನುಷ್ಠಿಸುವ ಕಾಲದಲ್ಲಿ, **ಅಧಿಕಾರತ್ವ ಸಿದ್ಧಿ ಕ್ಕಾಕ** - ಅಧಿಕಾರವು ಸಿದ್ಧಿಸುವದಕ್ಕಾಗಿ, **ಫಲಾರ್ಥಿತ್ವಂ** - ಫಲಾಪೇಕ್ಷೆಯು, **ಅಪೇಕ್ಷಿತಮಾಗೈಯಾಲೆ** - ಅಪೇಕ್ಷಿತವಾದುದರಿಂದ ಎಂದರೆ ಆವಶ್ಯಕವಾದುದ ರಿಂದ, **ಫಲಪರ್ವ ವಿಶೇಷಾನುಸಂಧಾನಮಾಯ್** - ಫಲಕಾಲ ವಿಶೇಷದ ಚಿಂತ ನೆಯಾಗಿ, **ಪುಗಿರಕ್ಕಡವನ** - ಅದರಲ್ಲೇ ಅಂತರ್ಗತವು ಎಂದರೆ ಫಲದಲ್ಲೇ ಅಂತರ್ಗತವು. ಅಧಿಕಾರತ್ವವು ಸಿದ್ಧಿಸುವದಕ್ಕೆ ಫಲಾರ್ಥಿತ್ವವು ಆವಶ್ಯಕವು; ಆದುದರಿಂದ ಮೋಕ್ಷಫಲಾಪೇಕ್ಷೆಯು ಯಾವಾಗ ಅಧಿಕಾರಸಿದ್ಧಿಗೆ ಆವಶ್ಯಕವಾ ಯಿತೋ, ಆವಾಗ ಮೋಕ್ಷಕ್ಕೆ ಹೋಗುವ ದಾರಿ ಯಾವುದು ಎಂಬುದರನುಸಂಧಾ ನವು ಆ ಫಲದಲ್ಲೇ ಅಂತರ್ಗತವೆಂಬ ಭಾವವು. ಆದುದರಿಂದ ಮೋಕ್ಷಾರ್ಥಿಗೆ ಈ ಗತಿಚಿಂತನವು ಭರನ್ಯಾಸಕ್ಕೆ ಪೂರ್ವಭಾವಿಯಾಗಿ ಅಧಿಕಾರಸಿದ್ಧಿಗೆ ಅಪೇಕ್ಷಿತ ವಾದುದು ಎಂಬ ತಾತ್ಪರ್ಯವು. ಭರನ್ಯಾಸಾನಂತರ ಹೇಗೆ ಪ್ರಯೋಜನವೆಂಬು ದನ್ನು ಮುಂದಿನ ವಾಕ್ಯದಿಂದುಪದೇಶಿಸುತ್ತಾರೆ:—

ಪಿನ್ಬು - ಉಪಾಯಾನುಷ್ಠಾನಾನಂತರವೂ, **ವರಪ್ಪುಗುಗಿರ ಕಣ್ಣಾಲ ತ್ತುಕ್ಕು** - ಮುಂದೆ ಬರುವ ಮದುವೆಗೆ, **ನಾಳಿಣ್ಣಿ ಯಿರುಕ್ಕುಮಾಪ್ಪೋಲೆ** - ಈವತ್ತಿಗೆ ಹತ್ತುದಿನವಿದೆ, ಈವತ್ತಿಗೆ ಒಂಬತ್ತು ದಿನ, ಈವತ್ತಿಗೆ ಎಂಟುದಿನವಿದೆ, ಹೀಗೆ ದಿನಗಳನ್ನು ಎಣಿಸಿಕೊಂಡಿರುವವರ ಹಾಗೆ, **ಪೂರ್ವಪ್ರಾರ್ಥಿತ ಪುರುಷಾ ರ್ಥ ಸ್ಮರಣಮಾತ್ರಮಾಯ್** - ಭರನ್ಯಾಸಕಾಲದಲ್ಲಿ ಪ್ರಾರ್ಥಿಸಿದ ಪುರುಷಾರ್ಥದ ಸ್ಮರಣೆಯು ರೂಪವಾದುದಾಗಿ, **ಇಪ್ಪುರುಷಾರ್ಥಂ ಪೆರಪ್ಪುಗಿಗರೋಮ್** - ಈ ಮಹತ್ತಾದ ಪರಿಪೂರ್ಣ ಬ್ರಹ್ಮಾನುಭವ ರೂಪವಾದ ಪುರುಷಾರ್ಥವನ್ನು ನಾವು ಮುಂದೆ ಹೊಂದುವೆವು, **ಎಙ್ಗ್ಗರ ಪ್ರೀತ್ಯತಿಶಯತ್ತೈ** - ಎನ್ನುವ ಹೆಚ್ಚಾದ

ಗತ್ಯನುಸಂಧಾನ ವಿಷಯೇ ನಿದರ್ಶನಂ

ಆಗ್ನೈಯಾಲಿಙ್ಗ ಸಮುದಾಯಜ್ಞಾನಮಾತ್ರತ್ತಾಲುಮ್ ಇವನುಕ್ಕು

ಪ್ರೀತಿಯುನ್ನ್, ವಿಳ್ಳೈಪ್ಪಿತ್ತುಕ್ಕೊಂಡು - ಅಭಿವೃದ್ಧಿಪಡಿಸಿಕೊಂಡು; **ಸ್ವಯಂ ಪ್ರಯೋಜನಮಾಯಿರುಕ್ಕೈಯಾಲ್** - ಸ್ವತಃ ಪ್ರಯೋಜನವಾಗುತ್ತದೆ. ಒಬ್ಬನಿಗೆ ವಿವಾಹಕ್ಕೆ ಲಗ್ನ ನಿಶ್ಚಯಿಸಿದ್ದರೆ, ಇನ್ನು ಎಷ್ಟು ದಿನಗಳಿವೆ ವಿವಾಹಕ್ಕೆ ಎಂದು ಪ್ರತಿಯೊಂದು ದಿವಸವೂ ದಿನಗಳನ್ನು ಎಣಿಸುತ್ತಲೇ ಇರಲಿ, ಎಣಿಸದೇ ಇರಲಿ, ಅಂತೂ ವಿವಾಹವೇನೋ ನಡೆಯುತ್ತದೆ. ಆದರೆ ಈ ದಿವಸಗಳನ್ನೆಣಿಸುವುದರಲ್ಲಿ ಆ ವಿವಾಹೋತ್ಸವ ವಿಷಯದಲ್ಲಿ ಪ್ರೀತ್ಯತಿಶಯವು ಹೇಗೆ ಹೆಚ್ಚುತ್ತದೋ, ಹಾಗೆಯೇ ಈ ಗತಿಚಿಂತನದಿಂದ ಇಂತಹ ನಿರುಪಮವಾದ ಪುರುಷಾರ್ಥವನ್ನು ಸದ್ಯದಲ್ಲೇ ಹೀಗೆ ಹೊಂದುವೆವು ಎಂದು ತೋರಿಬರುವದರಿಂದ, ಪುರುಷಾರ್ಥ ಪ್ರಾಪ್ತಿಯಲ್ಲಿ ಪ್ರೀತ್ಯತಿಶಯವು ಅಭಿವೃದ್ಧಿಯನ್ನು ಹೊಂದುತ್ತದೆ. ನಿರುಪಾಧಿಕ ಸಹಜ ಶೇಷಭೂತನಾದ ಈ ಪ್ರಪನ್ನನಿಗೆ ಅತ್ಯರ್ಥಪ್ರಿಯನಾದ ಸರ್ವೇಶ್ವರನಲ್ಲಿಗೆ ಹೋಗುವದು ತುಂಬಾ ಅಪೇಕ್ಷಿತವಾದುದರಿಂದ, ಅಂತಹ ಅಪೇಕ್ಷೆಯನ್ನು ವೃದ್ಧಿ ಹೊಂದಿಸುವದರಲ್ಲಿ ಉಪಯೋಗವಾದುದರಿಂದ, ಸ್ವಯಂ ಪ್ರಯೋಜನವಾದದೆಂದು ಹೇಳಲ್ಪಟ್ಟಿತು. ಆದುದರಿಂದ ನಿತ್ಯದಲ್ಲೂ ಗತ್ಯನುಸಂಧಾನವು ಆವಶ್ಯಕವೆಂದು ಉಪದೇಶಿಸಲ್ಪಟ್ಟಿತು. ಅರ್ಚಿರಾದಿ ಮಾರ್ಗದಲ್ಲಿ ತನಗುಂಟಾಗುವ ಸತ್ಕಾರಗಳೇನು, ಸ್ವಾಮಿ ಸನ್ನಿಧಿಯು ದೊರೆತ ನಂತರ ತನಗುಂಟಾಗುವ ಭೋಗಗಳೇನು ಇವುಗಳು ತನಗೆ ತಿಳಿಯತಕ್ಕದ್ದು ಆವಶ್ಯಕವೆಂದು ಸ್ಥಾಪಿಸಲ್ಪಟ್ಟಿತು. ಇಷ್ಟೆಲ್ಲಾ ವಿಶದವಾಗಿ ಗತಿವಿಶೇಷವನ್ನೆಲ್ಲಾ ಸಮಗ್ರವಾಗಿ ಎಲ್ಲಿ ಎಲ್ಲಾ ಭರನ್ಯಾಸ ಮಾಡಿದವರು ತಿಳಿದಿರುತ್ತಾರೆ? ಎಂದು ಪ್ರಶ್ನಿಸಿದರೆ ಅಷ್ಟು ಸಂಪೂರ್ಣ ಜ್ಞಾನವಿಲ್ಲದಿದ್ದರೂ ಸಮುದಾಯ ಜ್ಞಾನವಿದ್ದರೂ ಸಾಕು, ಅದರಿಂದಲೂ ಸಿದ್ಧಿಯುಂಟೆಂದು ತಿಳಿಸುತ್ತಾರೆ. ಹೀಗೆ ಒಂದು ವಿಶೇಷಗತಿಯು ಪರಮಾತ್ಮನ ಕೃಪೆಯಿಂದ ಪ್ರಾಪ್ತವಾಗುತ್ತದೆಂದೂ, ಅಲ್ಲಿ ಆತಿವಾಹಿಕರು ಸತ್ಕರಿಸಿ ತನ್ನನ್ನು ಮುಂದಕ್ಕೆ ಕರೆದುಕೊಂಡು ಹೋಗುವರೆಂದೂ, ಅಲ್ಲಿ ಬ್ರಹ್ಮಾಲಂಕಾರಾದಿಗಳು ಪ್ರಾಪ್ತವಾಗುತ್ತದೆಂದೂ, ಅಲ್ಲಿಂದ ಪರಿಪೂರ್ಣ ಬ್ರಹ್ಮಾನುಭವ ಉಂಟೆಂದೂ, ಇಷ್ಟು ಮಾತ್ರ ಸಮುದಾಯ ಜ್ಞಾನದಿಂದಲೂ ಅಪೇಕ್ಷಿತ ಸಿದ್ಧಿಯುಂಟೆಂದು ತಿಳಿಸುತ್ತಾರೆ. ಆದುದರಿಂದ ಇದು ಸ್ವಯಂ ಪ್ರಯೋಜನವಾದುದಾಗುತ್ತದೆಂದು ಹೇಳಲ್ಪಟ್ಟಿರುತ್ತದೆ.

ಅಪೇಕ್ಷಿತಸಿದ್ಧಿರ್ಯುಣ್ಯ. (೧) "ಸಮೀಪಂ ರಾಜಸಿಂಹಸ್ಯ ರಾಮಸ್ಯ ವಿದಿತಾತ್ಮನಃ । ಸಙ್ಕಲ್ಪ ಹಯಸಂಯುಕ್ತೈರ್ಯಾಂತೀಮಿವ ಮನೋರಥೈಃ",

ಗತ್ಯನುಸಂಧಾನದ ವಿಷಯದಲ್ಲಿ ಒಂದು ನಿದರ್ಶನವು.

ಆಗ್ನೈಯಾಲ್ - ಹೀಗೆ ಗತ್ಯನುಸಂಧಾನವು ಭರನ್ಯಾಸಕ್ಕೆ ಪೂರ್ವಭಾವಿಯಾಗಿ ಅಧಿಕಾರಸಿದ್ಧಿಗೆ ಉಪಕಾರಕವೆಂದೂ, ಉತ್ತರ ಕಾಲದಲ್ಲಿ ಮೋಕ್ಷಪ್ರಾಪ್ತಿಯಲ್ಲಿ ಪ್ರೀತ್ಯತಿಶಯವನ್ನುಂಟುಮಾಡಿ ಆ ಉತ್ಸವಕಾಲ ಪ್ರತೀಕ್ಷೆಯನ್ನು ಮಾಡುವ ಹಾಗೆ ಉಪಕಾರಕವೆಂದೂ ಒಪ್ಪಿಕೊಂಡ ನಂತರ, ಇಜ್ಯ - ಈ ಅರ್ಚಿರಾದಿ ಗತಿ ವಿಶೇಷ ಚಿಂತನೆಯಲ್ಲಿ, ಸಮುದಾಯ ಜ್ಞಾನತಾಲುವ್ - ವಿಶದವಾದ ಗತಿ ಕ್ರಮದ ಜ್ಞಾನವಿಲ್ಲದೆ ಒಟ್ಟಿನಲ್ಲಿ ಸ್ವಲ್ಪ ಜ್ಞಾನವಿರುವದರಿಂದಲೂ, ಇವನುಕ್ಕು - ಈ ಮುಮುಕ್ಷುವಿಗೆ, ಅಪೇಕ್ಷಿತ ಸಿದ್ಧಿಯುಂಡು-ಅಪೇಕ್ಷಿತವಾದುದು ಪ್ರಾಪ್ತವಾಗುತ್ತದೆ. ಅಪೇಕ್ಷಿತವು ಯಾವುದೆಂದರೆ:–ಭರನ್ಯಾಸಾನುಷ್ಠಾನ ಕಾಲದಲ್ಲಿ ಫಲಾಪೇಕ್ಷೆಯ ಮೂಲಕ ಅಧಿಕಾರಸಿದ್ಧಿಗೂ, ಅನಂತರದಲ್ಲಿ ಪುರುಷಾರ್ಥಪ್ರಾಪ್ತಿಯಲ್ಲಿ ಪ್ರೀತ್ಯತಿಶಯವೂ, ಕೊನೆಗೆ ಪರಿಪೂರ್ಣ ಬ್ರಹ್ಮಾನುಭವವೂ ಸಹ. "ರಾಜಸಿಂಹಸ್ಯ- ರಾಜಶ್ರೇಷ್ಠನಾದ, ವಿದಿತಾತ್ಮನಃ- ಸರ್ವವನ್ನೂ ತಿಳಿದ ಮನಸ್ಸುಳ್ಳ, ರಾಮಸ್ಯ - ತನ್ನ ಪತಿಯಾದ ಶ್ರೀರಾಮನ, ಸಮೀಪಮ್- ಸಮೀಪವನ್ನು, ಸಙ್ಕಲ್ಪ ಹಯ ಸಂಯುಕ್ತೈಃ - ಸಂಕಲ್ಪವೆಂಬ ಕುದುರೆಗಳಿಂದ ಕಟ್ಟಲ್ಪಟ್ಟ, ಮನೋರಥೈಃ- ಮನೋರಥಗಳಿಗೆ ಆಶ್ರಯವಾದ ಮನಸ್ಸೆಂಬ ರಥಗಳಿಂದ, ಯಾಂತೀಮಿವ - ಹೋಗುತ್ತಿರುವಳೋ ಎಂಬ ಹಾಗಿರುವ, ಸೀತಾಂದದರ್ಶ - ಸೀತೆಯನ್ನು ರಾವಣನು ಕಂಡನು ಎಂಬುದರೊಂದಿಗೆ ಅನ್ವಯವು. ಸಙ್ಕಲ್ಪವು ಮನಸ್ಸಿಗೆ ಸಂಬಂಧಿಸಿದುದು, ಆದುದರಿಂದ ಸಂಕಲ್ಪಗಳೇ ಕುದುರೆಗಳಾದರೆ, ಮನಸ್ಸೆಂಬುದೇ ರಥವೆಂದು ಭಾವಿಸತಕ್ಕದ್ದಾಗಿರುತ್ತದೆ; ಎಂದರೆ ರಾವಣನು ಎದುರಿಗೆ ಬಂದಿದ್ದರೂ ಮನಸ್ಸಿನಿಂದ ತನ್ನ ಪತಿಯನ್ನೇ ಧ್ಯಾನಿಸುತ್ತಾ, ಹೇಗಾದರೂ ಮಾಡಿ ಆತನ ಸನ್ನಿಧಿಗೆ ಹೋಗಿ ಸೇರತಕ್ಕದ್ದೆಂಬುದೇ ಸಂಕಲ್ಪವು, ಇದು ಸಿದ್ಧಿಸುವ ಕ್ರಮ ಹೇಗೆ ಎಂದು ಗತಿ ಚಿಂತನ ಮಾಡುತ್ತಿದ್ದಳೆಂಬ ಭಾವವು. ಆ ಗತಿ ಹೇಗೆಂದರೆ ಹನುಮಂತನಿಗೆ ತಾನೇ ಹೇಳುತ್ತಾಳೆ. ಬಲೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ । ಮಾಂ ನಯೇದ್ಯದಿಕಾಕುತ್ಸ್ಥಃ ತತ್ತಸ್ಯ ಸದೃಶಂ ಭವೇತ್ ॥

(೧) ರಾ. ಸುಂದರ. ೧೯. ೭.

ಎನ್ನುಮ್‌ಪಡಿ ಪಿರಾಟ್ಟಿ ಇರುನ್ದ ಇರುಪ್ಪು ಇವನುಡೈಯ ಗತ್ಯನುಸಂಧಾನತ್ತುಕ್ಕು ನಿದರ್ಶನಮ್.

ಹೀಗೀಗ ಸಂಕಲ್ಪಿಸಿ, ತನ್ನ ಮನೋರಥವು ಪೂರ್ಣವಾಗಿ ಶ್ರೀರಾಮನ ಸಮೀಪವನ್ನು ಹೊಂದುವೆನೆಂದು ಗತಿಚಿಂತನವನ್ನು ಮಾಡುತ್ತಿದ್ದಾಳೆಂಬ ಭಾವವು. ಆದರೆ ರಥೈಃ ಎಂಬ ಬಹುವಚನ ಹೇಗೆ ಎಂದರೆ, ಅಪೇಕ್ಷೆಯು ಪುನಃ ಪುನಃ ಉಂಟಾಗುವದರಿಂದಲಾಗಲಿ, ಅಥವಾ "ಅದಿತಿಃ ಪಾಶಾನ್" ಎಂಬಲ್ಲಿ ಒಂದು ಪಾಶಕ್ಕೇನೇ ಬಹುವಚನ ಹೇಗೋ ಹಾಗೆ ಎಂದಾಗಲಿ ಭಾವಿಸಬಹುದು. ಮನೋರಥೈಃ ಎಂಬ ಪ್ರಯೋಗವಿಲ್ಲಿರುವದರಿಂದ ಶ್ರೀರಾಮನನ್ನು ಯಾವಾಗ ಹೊಂದುವೆನೋ ಎಂಬ ಮನೋರಥವೇ ಪುನಃ ಪುನಃ ಇವಳಿಗೆ ಉಂಟಾಗುತ್ತಿತ್ತೆಂಬ ಭಾವವು ತೋರಿಬರುತ್ತದೆ. ಹೀಗೆ ಸೀತಾ ಮನಸ್ಸು ಶ್ರೀರಾಮ ಸಮೀಪವನ್ನು ಹೊಂದಿದುದರಿಂದ, ದುಷ್ಯಂತನಲ್ಲೇ ಸಕ್ತವಾದ ಶಕುಂತಲಾ ಮನಸ್ಸು ಹೇಗೆ ದುರ್ವಾಸಾಗಮನವನ್ನು ಹೇಗೆ ಅರಿಯದೇ ಹೋಯಿತೋ ಹಾಗೆ ರಾವಣಾಗಮನವನ್ನು ತಿಳಿಯಲಿಲ್ಲವೆಂಬ ಭಾವವೂ ತೋರಿಬರುತ್ತದೆ. ಶ್ರೀಸರ್ವ ಸಾರವಿವರಣೆ ವ್ಯಾಖ್ಯಾತೃವೂ ಶ್ರೀಸರ್ವ ಶೆಟ್ಟಿಲೂರು ನರಸಿಂಹಾಚಾರ್ಯರವರೂ ಸಹ, ಯಾಂತೀಮಿವ ಮನೋರಥೈಃ ಎಂಬುದಕ್ಕೆ ಮನೋರಥಗಳೆಂಬ ರಥಗಳಿಂದ ಎಂದು ಅರ್ಥ ಮಾಡಿರುತ್ತಾರೆ. ಎನ್ನುಮ್‌ಪಡಿ - ಎಂದು ಹೇಳಿರುವ ಹಾಗೆ, ಪಿರಾಟ್ಟಿ - ಸೀತಾದೇವಿಯು, ಇರುನ್ದ ಇರುಪ್ಪು - ಅಶೋಕ ವನದಲ್ಲಿದ್ದ ಸ್ಥಿತಿಯು, ಇವನುಡೈಯ ಗತ್ಯನುಸಂಧಾನತ್ತುಕ್ಕು - ಈ ಪ್ರಪನ್ನನ ಅರ್ಚಿರಾದಿ ಗತಿಯ ಅನುಸಂಧಾನಕ್ಕೆ, ನಿದರ್ಶನಮ್ - ಉದಾಹರಣೆಯು. ಸೀತಾದೇವಿಯು ಹೇಗೆ ಅನವರತ ತನ್ನ ಪತಿಯನ್ನು ಧ್ಯಾನಿಸುತ್ತಾ ಇನ್ನೆರಡು ತಿಂಗಳಲ್ಲೇ ಹೋಗಿ ಸೇರಲುಳ್ಳವಳೆಂದು ನಿಷ್ಕರ್ಷೆ ಮಾಡಿಕೊಂಡು ಆ ಪತಿಯು ಬಂದು ಎಂದಿಗೂ ಕರೆದುಕೊಂಡು ಹೋಗದೆ ಇರನೆಂದು ಅದರಲ್ಲೇ ತ್ವರಾತಿಶಯವನ್ನೂ ಪ್ರೀತ್ಯತಿಶಯವನ್ನೂ ಹೇಗೆ ಹೊಂದಿದ್ದಳೋ, ಹಾಗೆಯೇ ಈ ಪ್ರಪನ್ನನೂ ತನಗೂ ಪತಿಯಾದ ಶ್ರಿಯಃಪತಿಯು ಕೃಪೆಗೈಯ್ದು ಸೀತೆಯ ಹಾಗೆ ದುರವಸ್ಥೆಯಲ್ಲಿರುವ ತನ್ನನ್ನು ಈ ದೇಹವೆಂಬ ಲಂಕೆಯಲ್ಲಿ ಮನೋರೂಪ ರಾವಣನ ಬಂಧಕ್ಕೆ ಸಿಲುಕಿರುವ ತನ್ನ ನಿಗಳವನ್ನು ಛೇದಿಸಿ ಅರ್ಚಿರಾದಿ ಗತಿಯನ್ನುಂಟುಮಾಡಿ ತನ್ನ ಪಟ್ಟಣಕ್ಕೆ ಯಾವಾಗ ಕರೆದುಕೊಂಡು ಹೋಗುವನೋ ಎಂದು ನಿತ್ಯವೂ ಚಿಂತಿಸತಕ್ಕದ್ದೆಂಬ ಭಾವವು.

ನಡೈಪೆರ ವಙ್ಗಿ ಪ್ಪಗಲೊಳಿನಾಳುತ್ತರಾಯಣ ಮಾ
ಣ್ಡೈವರು ಕಾತ್ತಿರವಿ ಯಿರವಿೞ್ಪತಿ ಮಿೞ್ ವರುಣರ್
ಕುಡೈಯುಡೈವಾ(ನವರ್) ನೋರ್ ಕೋಮಾರ್ ಪಿರಶಾಪತಿಯೆನ್ರಿವರಾಲ್
ಇಡೈ ಇಡೈ ಪೋಗಙ್ಗಳೆಯ್ದಿ ಯೆಳಿರ್ಪದಮೇರುವರೇ ॥೨೮॥

ಮೇಲೆ ಹೇಳಿದ ಅರ್ಚಿರಾದಿ ಗತಿ ಪ್ರಕಾರವನ್ನು ಒಂದು ಅಧಿಕಾರ ಸಂಗ್ರಹ ಪಾಶುರದಿಂದ ಉಪದೇಶಿಸುತ್ತಾರೆ:—**ನಡೈಪೆರ** - ದೇಹಾವಸಾನದಲ್ಲಿ ಸ್ಥೂಲ ಶರೀರವನ್ನು ತ್ಯಜಿಸಿದ ನಂತರ ಗಮನವು ಪ್ರಾಪ್ತವಾಗಲಾಗಿ, **ಅಂಗಿ**-ಅಗ್ನಿಯು, **ಪಗಲ್** - ದಿನವು, **ಒಳಿನಾಳ್** - ಪ್ರಕಾಶವಿರುವ ದಿನಗಳೆಂಬುವದರಿಂದ ಶುಕ್ಲ ಪಕ್ಷವು, ಉತ್ತರಾಯಣವು, **ಆಣ್ಡು** - ಸಂವತ್ಸರವು, **ಇಡೈವರುಕಾತ್ತು** - **ಸಂವತ್ಸರಾದಾದಿತ್ಯಂ** ಎಂದು ಹೇಳಿದ್ದರೂ, ಸಂವತ್ಸರಕ್ಕೂ **ಆದಿತ್ಯನಿಗೂ** ಮಧ್ಯೆ ವಾಯುವಿದ್ದಾನೆಂದು ನಿಷ್ಕರ್ಷಿಸಲ್ಪಟ್ಟ ಹಾಗೆ, ಮಧ್ಯೆ ಇರುವ ವಾಯುವು, **ಇರವಿ** - ಆದಿತ್ಯನು, **ಇರವಿೞ್ಪತಿ** - ರಾತ್ರಿಗೆ ಪತಿಯಾದ **ನಿಶಾಪತಿ** ಎನಿಸುವ ಚಂದ್ರನು, **ಮಿೞ್** - ವೈದ್ಯುತರ್, ವರುಣನೂ, **ಕುಡೈಯುಡೈ** - ಏಕಚ್ಛತ್ರಾಧಿಪತಿಯಾದ, **ವಾನೋರ್ ಕೋಮಾರ್** - ದೇವತೆಗಳಿಗೆ ಸ್ವಾಮಿಯಾದ ಇಂದ್ರನು, **ಪಿರಶಾಪತಿ** - ಪ್ರಜಾಪತಿ, ಚತುರ್ಮುಖ ಬ್ರಹ್ಮನು, **ಯೆನ್ರಿವರಾಲ್** - ಎಂಬುವೀ ಅತಿವಾಹಕರುಗಳಿಂದ, **ಇಡೈ ಇಡೈ ಭೋಗಙ್ಗಳೆಯ್ದಿ** - ಮಧ್ಯೇ ಮಧ್ಯೇ ಇವರುಗಳು ಮಾಡುವ ಸತ್ಕಾರರೂಪ ಭೋಗಗಳನ್ನು ಹೊಂದಿ. **ಎಳಿಲ್ ಪದಂ** - ಹೀಗೆ ಒಂದಕ್ಕೊಂದಕ್ಕೆ ಉತ್ಕೃಷ್ಟವಾದ ಗಮನದಲ್ಲಿ ಸಿಕ್ಕುವ ಸ್ಥಾನಗಳನ್ನು ಅಥವಾ "**ಅತ್ಯರ್ಕಾನಿಲದೀಪ್ತಮ್ ತತ್ಸ್ಥಾನಂ ವಿಷ್ಣೋರ್ಮಹಾತ್ಮನಃ**" ಎಂದು ಹೇಳಿರುವ ಹಾಗೆ ದೇದೀಪ್ಯಮಾನವಾಗಿ ಇವೆಲ್ಲಕ್ಕೂ ಸರ್ವೋತ್ಕೃಷ್ಟಪದವಾದ ದಿವ್ಯವೈಕುಂಠವನ್ನು, **ಏರುವರೇ** - ಆರೋಹಣ ಮಾಡುವರು, ಹತ್ತುವರು.

ತಾತ್ಪರ್ಯ. ಇಲ್ಲಿ **ನಡೈಪೆರ** ಎಂಬುದರಿಂದ ವಾಗಿಂದ್ರಿಯವು, ಸೂಕ್ಷ್ಮದೆಶೆಯಲ್ಲಿ ಮನಸ್ಸಿನಲ್ಲೂ. ಮನಸ್ಸು ಪ್ರಾಣದಲ್ಲೂ ಇತ್ಯಾದಿ ಗಮನಗಳೂ, ಅನಂತರ ಪರಮಾತ್ಮನನ್ನು ಬಿಟ್ಟು ಮೂರ್ಧನ್ಯ ನಾಡಿಯ ಮೂಲಕ ದೇಹದಿಂದ ಹೊರಗೆ ಬಂದು, ಗತಿಯು ಪ್ರಾಪ್ತವಾದಾಗ ಎಂಬರ್ಥವು.

ಇಡೈ ವರುಕಾತ್ತು - ಮಧ್ಯೆ ಬರುವ ವಾಯುವು ಎಂದು ಏಕೆ ಹೇಳಲ್ಪಟ್ಟಿತೆಂದರೆ, ಛಾಂದೋಗ್ಯದಲ್ಲಿ "**ಸಂವತ್ಸರಾದಾದಿತ್ಯಂ**" ಸಂವತ್ಸರವಾದ ನಂತರ

ಪಿತೃ ಪಥ ಘಟೀಯಂತ್ರಾ ರೋಹಾವರೋಹ ಪರಿಭ್ರಮ್ಯೈ
ರ್ನಿರಯಪದವೀ ಯಾತಾಯಾತ ಕ್ರಮೈಶ್ಚ ನಿರಂತರೈಃ ।

ಆದಿತ್ಯನೆಂದು ಹೇಳಲ್ಪಟ್ಟಿರುತ್ತದೆ. ಬೃಹದಾರಣ್ಯಕದಲ್ಲಿ "ದೇವಲೋಕಾದಾದಿತ್ಯಂ" ದೇವಲೋಕವಾದ ನಂತರ ಆದಿತ್ಯನೆಂದು ಹೇಳಿರುತ್ತದೆ. ಇನ್ನೊಂದು ಕಡೆಯಲ್ಲಿ ವಾಯುಲೋಕದಿಂದ ಆದಿತ್ಯನೆಂದು ಹೇಳಿರುತ್ತದೆ. ಇವು ಮೂರು ಶ್ರುತಿಗಳಿಗೂ ಸಮನ್ವಯ ಮಾಡಿ ಹೇಳುವದಕ್ಕಾಗಿ "ವಾಯುಮಬ್ದಾದ ವಿಶೇಷ ವಿಶೇಷಾಭ್ಯಾಮ್" ಎಂಬ ಸೂತ್ರದ ಮೂಲಕ ವ್ಯಾಸ ಮಹರ್ಷಿಯು ದೇವ ಲೋಕ, ವಾಯುಶಬ್ದಗಳು ಸಮಾನಾರ್ಥ ಉಳ್ಳವುಗಳಾದುದರಿಂದ, ಸಂವತ್ಸರ ವಾದ ನಂತರ ವಾಯುವನ್ನಿಡತಕ್ಕದ್ದೆಂದು ಹೇಳಿರುತ್ತಾರೆ. ಇಲ್ಲಿ ಭೋಗಜ್ಞ ಳಿರ್ದಿ ಎಂದು ಹೇಳಿರುವದು ಅತಿಮಾನುಷ ಅಪ್ಸರ ಸ್ತ್ರೀಯರುಗಳ ಸತ್ಕಾರಾ ಲಂಕಾರಾದಿಗಳನುಭವವೂ ಭೋಗವಾಗಿ ತೋರುತ್ತದೆ. ಆದರೆ ಈ ಅನುಭವವು ಯಾವುದೂ ಶ್ರೀ ಪರವಾಸುದೇವ ಸನ್ನಿಧಿಯಲ್ಲಿ ಉಂಟಾಗುವ ಭೋಗಕ್ಕೆ ಸಮಾ ನವಾಗದು. ಆದುದರಿಂದ ಅದನ್ನು, ಎಳಿಲ್ ಪದಮ್ - ಸರ್ವಸಮೃದ್ಧಿಯುಳ್ಳ ಪದವೆಂದು ಹೇಳಿರುತ್ತದೆ. ಈ ಎಳಿಲ್‌ಪದಮ್ ಇರುವರೇ ಎಂದು ಹೇಳಿ ರುವದರಿಂದ ಮುಂದೆ ಅನುಗ್ರಹಿಸುವ ಪರಿಪೂರ್ಣ ಬ್ರಹ್ಮಾನುಭವಾಧಿಕಾರವನ್ನು ಸೂಚಿಸಿದ ಹಾಗಾಯಿತು.

ಪ್ರಪನ್ನನಿಗೇನೋ ಅರ್ಚಿರಾದಿ ಮಾರ್ಗವೆಂದು ಹೇಳಲ್ಪಟ್ಟಿತು. ಹಾಗಾದರೆ ಪ್ರಪನ್ನನಲ್ಲದವನಿಗೆ ಯಾವ ಮಾರ್ಗವೆಂಬುವ ಪ್ರಶ್ನೆಯು ನ್ಯಾಯವಾಗಿ ತೋರಿ ಬರುವದರಿಂದ ಆ ಮಾರ್ಗ ಯಾವುದೆಂಬುದನ್ನು ತಿಳಿಸಿ, ಈ ಎರಡು ಮಾರ್ಗ ಗಳಿಗೂ ಇರುವ ವೈಲಕ್ಷಣ್ಯವನ್ನು ಈ ಶ್ಲೋಕದ ಮೂಲಕ ತೋರಿಸಿ ಅಧಿಕಾರ ಸಮಾಪ್ತಿಯನ್ನು ಮಾಡುತ್ತಾರೆ:—ಈತನೇನೋ ಈಗ ಪ್ರಪನ್ನನು; "ಬಹೂನಾಂ ಜನ್ಮನಾಮನ್ತೇ" ಎಂಬಲ್ಲಿ ಹೇಳಿರುವ ಹಾಗೆ ಸೃಷ್ಟಿ ಮೊದಲ್ಗೊಂಡು ಇದುವರೆಗೂ ಅನೇಕ ಜನ್ಮಸಂತತಿಗಳು ಈತನಿಗೆ ಕಳೆದುಹೋದವು. ಹೀಗೆ ಅನೇಕ ಸಾರಿ ಮರಣಪ್ರಾಪ್ತಿಯಾದಾಗೆಲ್ಲಾ ಯಾವ ಮಾರ್ಗದಲ್ಲಿ ಹೋಗಿ ಪುನಃ ಪುನಃ ಜನ್ಮವನ್ನು ಎತ್ತಿದ್ದಾಯಿತೆಂದರೆ ತಿಳಿಸುತ್ತಾರೆ:—ಪಿತೃ ಪಥ ಘಟೀ ಯಂತ್ರಾರೋಹಾವರೋಹ ಪರಿಭ್ರಮ್ಯೈಃ, ಪಿತೃಪಥ - ಪುನಃಪುನಃ ಜನನ ಮರಣಾದಿಗಳನ್ನು ಕೊಡುವ ಮಾರ್ಗಕ್ಕೆ ಪಿತೃಪಥ ಎಂದರೆ ಪಿತೃಯಾಣ ಅಥವಾ ಧೂಮಾದಿ ಮಾರ್ಗವೆಂದು ಹೆಸರು, ಆ ಮಾರ್ಗವೆಂಬ, ಘಟೀ ಯಂತ್ರ -

ಅಧಿಗತ ಪರಿಶ್ರಾನ್ತೀ ನಾಜ್ಞಾಧರ್ರೈರತಿವಾಹ್ಯ ನ
ಸ್ಸುಖಯತಿ ನಿಜಚ್ಛಾಯಾದಾಯೀ ಸ್ವಯಂ ಹರಿಚಂದನಃ ॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ ಶ್ರೀಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಗತಿಚಿನ್ತನಾಧಿಕಾರ ಏಕವಿಂಶಃ.

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ.

ನೀರೆತ್ತುವ ಯಾತದ, **ಆರೋಹಾವರೋಹ** - ಭಾವಿಯ ಮೇಲಕ್ಕೆ ಹತ್ತುವದು ಇಳಿಯುವದು, ಇವುಗಳ, **ಪರಿಭ್ರಮೈಃ** - ಸುತ್ತೋಣದಿಂದಲೂ, ಎಂದರೆ ಸ್ವರ್ಗಾರೋಹಣ ಮಾಡುವದು, ಅನಂತರ ಈ ಲೋಕಕ್ಕೇ ಪುನಃ ಇಳಿಯುವದು ಹೀಗೆ ಸುಮ್ಮನೆ ಅಲೆಯುವದರಿಂದಲೂ. ಮತ್ತು, **ನಿರಯ ಪದವೀ ಯಾತಾ ಯಾತ ಕ್ರಮೈಶ್ಚ** - ನರಕಲೋಕಕ್ಕೆ ಹೋಗುವದೇನು, ಪುನಃ ಬರುವದೇನು, ಈ ಕ್ರಮಗಳಿಂದಲೂ ಕೂಡ, **ಅಧಿಗತ ಪರಿಶ್ರಾನ್ತೀ** - ಹೊಂದಿದ ಅತ್ಯಾಯಾಸ ವುಳ್ಳ, **ನಃ** - ನಮ್ಮನ್ನು, **ಆಜ್ಞಾಧರೈಃ** - ಸತ್ಕರಿಸಿ ಮಾರ್ಗ ತೋರಿಸತಕ್ಕದ್ದೆಂಬ ಶ್ರೀ ಹರಿಯ ಆಜ್ಞೆಯನ್ನು ವಹಿಸಿರುವ, ಅರ್ಚಿಯೇ ಮೊದಲಾದ ಆತಿವಾಹಿಕರ ಮೂಲಕವಾಗಿ, **ಅತಿವಾಹ್ಯ** - ಸತ್ಕಾರಪೂರ್ವಕವಾಗಿ ಲೀಲಾವಿಭೂತಿಯನ್ನು ದಾಟಿಸುವ ಹಾಗೆ ಮಾಡಿ, **ಹರಿಚಂದನಃ** - ಶ್ರೀಹರಿ ಎಂಬ ಚಂದನವೃಕ್ಷವು, **ಸ್ವಯಂ** - ತಾನೇ, **ನಿಜಚ್ಛಾಯಾದಾಯೀ** - ಸ್ವಕೀಯವಾದ ನೆರಳನ್ನು ಕೊಟ್ಟು, ತನಗೆ ಇವರು ಛಾಯೆಯೋ ಎಂದು ತೋರುವ ಹಾಗೆ ತನ್ನ ಸಾಮ್ಯ ವನ್ನೂ ಕೊಟ್ಟು ಎಂದು ಇನ್ನೊಂದರ್ಥವು, **ಸುಖಯತಿ** - ಕೈಂಕರ್ಯ ಪ್ರಾಪ್ತಿ ಪರಿ ಪೂರ್ಣ ಬ್ರಹ್ಮಾನುಭವರೂಪ ಪರಮಾನಂದವನ್ನು ಕೊಟ್ಟು ಭೋಗಪಡಿಸುವನು.

ತಾತ್ಪರ್ಯ :— ಈ ಪ್ರಪನ್ನರ ಅರ್ಚಿರಾದಿ ಮಾರ್ಗಕ್ಕೆ ದೇವಯಾನವೆಂಬುದು ಇನ್ನೊಂದು ಹೆಸರು. ಹಾಗೆಯೇ ಪ್ರಪನ್ನರಲ್ಲದವರ ಇನ್ನೊಂದಾದ ಧೂಮಾದಿ ಮಾರ್ಗಕ್ಕೆ ಪಿತೃಯಾಣವೆಂದೂ ಹೆಸರು. ಈ ಪಿತೃಯಾಣ ಕ್ರಮದಲ್ಲಿ ಆವರ್ತಿ ಯುಂಟು, ದೇವಯಾನದಲ್ಲಿ ಆವರ್ತಿಯಿಲ್ಲವು. ಪಿತೃಯಾಣಕ್ರಮವು ಛಾಂದೋಗ್ಯ ೫ ೧೦. ೩, ೪. ೫. ೬ ಗಳಲ್ಲಿ ಹೇಳಲ್ಪಟ್ಟಿರುತ್ತದೆ. ಯಾರು ಅಗ್ನಿಹೋತ್ರಾದಿ ಕರ್ಮವನ್ನಾಗಲಿ, ವಾಪೀ ಕೂಪ ತಟಾಕದ ನಿರ್ಮಾಣವನ್ನಾಗಲಿ, ಪಾತ್ರವರಿತು ದಾನಾದಿಗಳನ್ನಾಗಲಿ ಆಚರಿಸುವರೋ ಅವರು ಧೂಮಾದಿ ಆತಿವಾಹಕರನ್ನು ಹೊಂದುವರು ; ಅವರು ಯಾರೆಂದರೆ :—ಧೂಮ, ರಾತ್ರಿ, ಕೃಷ್ಣಪಕ್ಷ, ದಕ್ಷಿಣಾ ಯನ ಮಾಸ, ಅಲ್ಲಿಂದ ಸಂವತ್ಸರಾಭಿಮಾನ ದೇವತೆಯನ್ನು ಹೊಂದುವದಿಲ್ಲವು, ದಕ್ಷಿಣಾಯನ ಮಾಸಗಳಿಂದ ಪಿತೃಲೋಕ, ಅಲ್ಲಿಂದ ಕ್ರಮವಾಗಿ, ಆಕಾಶ, ಚಂದ್ರನು, ಇವರುಗಳಿಂದ ಸತ್ಕರಿಸಲ್ಪಟ್ಟು, ಸ್ವರ್ಗಭೋಗಕ್ಕೆ ಯೋಗ್ಯವಾದ

ದಿವ್ಯದೇಹವನ್ನು ಹೊಂದುವನು, ಅಲ್ಲಿದ್ದು ಅಲ್ಲಿಂದ ಅನಂತರ ಕರ್ಮಶೇಷವಿರುವದರಿಂದ ಪುನಃ ಅದೇ ಮಾರ್ಗದಲ್ಲೇ ಹಿಂತಿರುಗಿ ಬರುವನು. ಚಂದ್ರನಿಂದ ಆಕಾಶವೂ, ಆಕಾಶದಿಂದ ವಾಯುವೂ, ವಾಯುವಿನಿಂದ ಧೂಮದ ಹಾಗೂ, ಅಭ್ರದ ಹಾಗೂ, ಮೇಘದ ಹಾಗೂ ಆಗಿ, ಅನಂತರ ವರ್ಷಿಸುವ ಹಾಗೆ ಆಗಿ, ಇದರಿಂದ ಭೂತಸೂಕ್ಷ್ಮಯುಕ್ತನಾಗಿ ಭೂಮಿಯಲ್ಲಿ ಬಿದ್ದು, ನೆಲ್ಲೋ, ಗೋಧಿಯೋ, ಸಸ್ಯವೋ, ಎಳ್ಳೋ, ಉದ್ದೋ ಯಾವುದರಲ್ಲೋ ಸೇರುತ್ತಾನೆ. ಅದರ ಸೇವನೆಯಿಂದ ಪಿತಾವಿನ ರೇತಸ್ಸನ್ನು ಹೊಂದಿ, ತಾಯಿಯಾದ ಯೋಷಿದ್ಗರ್ಭದಲ್ಲಿ ಸ್ಥೂಲಶರೀರಕನಾಗುತ್ತಾನೆ. ಒಳ್ಳೇ ಕರ್ಮಶೇಷವಿದ್ದರೆ ಬ್ರಾಹ್ಮಣಾದಿ ಒಳ್ಳೇ ಯೋನಿಗಳಲ್ಲಿ ಹುಟ್ಟುವನು. ಕೆಟ್ಟ ಕರ್ಮಶೇಷವಿದ್ದರೆ ನಾಯಿ ಯೋನಿಯನ್ನೋ, ಸೂಕರ ಯೋನಿಯನ್ನೋ, ಚಂಡಾಲ ಯೋನಿಯನ್ನೋ, ಹೊಂದುವನೆಂದು ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಹೀಗೆ ಯಜ್ಞಾದಿ ಧರ್ಮ ಕೆಲಸಗಳನ್ನು ಮಾಡಿದವರು ಸ್ವರ್ಗಾರೋಹಣ ಮಾಡಿ, ಅದು ತೀರಿದ ನಂತರ ಪುನಃ ಇಲ್ಲಿಗೇನೇ "**ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ**" ಎಂದು ಹೇಳಿಯುವ ಹಾಗೆ ಅವರೋಹಣ ಮಾಡಿ ಬರುವದರಿಂದ, **ಪಿತೃಪಥದ ಆರೋಹಾವರೋಹ ಪರಿಭ್ರಮೈಃ** ಎಂದು ಪ್ರಯೋಗಿಸಲ್ಪಟ್ಟಿತು; ಹತ್ತುವದು ಇಳಿಯುವದು ಹೀಗೆ ಪರಿಭ್ರಮವಿರುವದರಿಂದ ಈ ಪಿತೃಪಥವನ್ನು ಘಟೀಯಂತ್ರದ ಹತ್ತುವಿಕೆ ಇಳಿಯುವಿಕೆಗೆ ಹೋಲಿಸಿರುತ್ತಾರೆ. ಶ್ರೀ ಶಂಕರ ಭಾಷ್ಯದಲ್ಲೂ ಆನಂದಗಿರಿ ಟೀಕಿನಲ್ಲೂ ಸಹ ಈ ದೇವಯಾನದ ಆರೋಹಾವರೋಹಗಳನ್ನು ಘಟೀಯಂತ್ರದ ಆರೋಹಾವರೋಹಗಳಿಗೆ ಹೋಲಿಸಿರುತ್ತಾರೆ. ಶರಣಾಗತಿಯನ್ನನುಷ್ಠಿಸಿದರೆ ಅಥವಾ ಯೋಗದಿಂದ ಪರಬ್ರಹ್ಮ ಸಾಕ್ಷಾತ್ಕಾರವಾದರೆ ಅರ್ಚಿರಾದಿ ಗತಿಯೂ, ಪುಣ್ಯ ಮಾಡಿದರೆ ಧೂಮಾದಿ ಗತಿಯೂ ಎಂದು ಹೇಳಲ್ಪಟ್ಟಿತು. ಆದರೆ ಇಲ್ಲಿ ಒಂದು ಸಂಶಯವು ಪ್ರಾಪ್ತವಾಗಬಹುದು. ಏನೆಂದರೆ, ಪುಣ್ಯ ಮಾಡಿದವನಿಗೆ ಧೂಮಾದಿ ಗತಿಯು ಪ್ರಾಪ್ತವಾಗಿ ದ್ಯುಲೋಕ ಪ್ರಾಪ್ತಿಯುಂಟಾಗುವದರಿಂದ ಪ್ರಪನ್ನನು ಪುಣ್ಯವನ್ನು ಮಾಡಕೂಡದು ಎಂಬ ಶಙ್ಕಾ ಉಂಟಾಗಬಹುದು. ಫಲಾಪೇಕ್ಷೆಯಿಂದ ಪುಣ್ಯ ಮಾಡಿದವನಿಗೇ ಈ ಮಾರ್ಗವು. ಫಲಸಙ್ಗತ್ಯಾಗ, ಕರ್ತೃತ್ವ ತ್ಯಾಗಾದಿಗಳಿಂದ ಪ್ರಪನ್ನನು ಪುಣ್ಯ ಕರ್ಮಗಳನ್ನು ಮಾಡಿದರೆ ಪ್ರತ್ಯವಾಯವಿಲ್ಲವು. ಈ ತತ್ವವು ಹಿಂದೆಯೇ ಅಪರಾಧ ಪರಿಹಾರಾಧಿಕಾರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. ಇನ್ನು ಪಾಪ ಮಾಡಿದರೆ ಯಾವಗತಿ ಎಂದರೆ ಮೂರನೇ ಗತಿ ಎಂದು ಅದೇ ಛಾಂದೋಗ್ಯದ ೫, ೧೦, ೮ ರಲ್ಲಿ ಹೇಳಲ್ಪಟ್ಟಿರುತ್ತದೆ. ಇದರಿಂದ ದಂಶ ಮಶಕ ಕೀಟಾದಿ ಕ್ಷುದ್ರ ಜನ್ಮಗಳು ಪ್ರಾಪ್ತವಾಗಿ ಪುನಃ ಪುನಃ "**ಜಾಯಸ್ವ ಮ್ರಿಯಸ್ವ**" ಎಂದು ಹೇಳಿರುವ ಹಾಗೆ ಜನನ ಮರಣಾದಿಗಳು ಉಂಟಾಗುತ್ತವೆ.

ಅನಂತರ ೯ನೆಯ ವಾಕ್ಯದಲ್ಲಿ ಚಿನ್ನವನ್ನು ಕದಿಯುವವನು, ಹೆಂಡವನ್ನು

ಕುಡಿಯುವವನು, ಗುರುತಲ್ಪಗಾಮಿಯು, ಬ್ರಹ್ಮಘಾತುಕನು ಇಂತಹ ಪಾಪ ಮಾಡಿದವರು ನರಕವನ್ನು ಹೊಂದುವರು ಎಂದು ಹೇಳಿರುತ್ತದೆ. ಹಾಗೆಯೇ ಇನ್ನು ಮಿಕ್ಕ ಕಡೆಗಳಲ್ಲಿ ಶಾಸ್ತ್ರದಲ್ಲಿ ನರಕಪತನವು ಹೇಳಲ್ಪಟ್ಟಿರುತ್ತದೆ. ಇದನ್ನು ಮನಸ್ಸಿನಲ್ಲಿಟ್ಟೇ **ನಿರಯ ಪದವೀ ಯಾತಾ ಯಾತ ಕ್ರನ್ಯೈ ರ್ನಿರಂತರೈಃ** ಎಂದು ಪ್ರಯೋಗಿಸಿರುತ್ತಾರೆ.

ಸೃಷ್ಟಿ ಮೊದಲು ಇದುವರೆಗೂ ನಾವುಗಳು ಲೆಖ್ಖವಿಲ್ಲದೆ ಜನ್ಮಗಳನ್ನೆತ್ತುತ್ತಿರುವವರಿಂದ ಅರ್ಚಿರಾದಿ ಗತಿಯನ್ನು ಇನ್ನೂ ಹೊಂದಿಲ್ಲವೆಂಬುದು ಸುವ್ಯಕ್ತವು. ಏತಕ್ಕೆಂದರೆ ಆ ಮಾರ್ಗದಲ್ಲಿ ಹೋಗಿದ್ದರೆ ಪುನರಾವರ್ತಿಯು ಇಲ್ಲವು. ಎರಡನೆಯ ಪಿತೃಯಾಣದಲ್ಲಿ ಹೋಗಿ ಸ್ವರ್ಗಲೋಕದಲ್ಲಿದ್ದು ಹಿಂತಿರುಗಿ ಕೆಳಗಿಳಿದು ಬಂದಿದ್ದರೂ ಬಂದಿರಬಹುದು. ಘಟೀ ಯಂತ್ರವು ಮೇಲಕ್ಕೂ ಕೆಳಕ್ಕೂ ಓಡಾಡುವ ಹಾಗೆ, ಹತ್ತಿ ಇಳಿದು ಹೀಗೆ ಆಯಾಸವನ್ನು ಹೊಂದಿರಬಹುದು. ಅಥವಾ ಅನೇಕ ಘೋರಪಾಪಗಳನ್ನು ಮಾಡಿ ನರಕದಲ್ಲಿ ಬಿದ್ದು, ಯಾತನೆಗಳನ್ನನುಭವಿಸಿ ಬಂದಿರಬಹುದು. ಈ ಅಭಿಪ್ರಾಯಗಳನ್ನೇ ಪರಾಶರರು "**ಅನೇಕ ಜನ್ಮ ಸಾಹಸ್ರೀಂ ಸಂಸಾರ ಪದವೀಂ ವ್ರಜ್ । ಮೋಹಾಛ್ರಮಂ ಪ್ರಯಾತಾಸೌ ವಾಸನಾ ರೇಣು ಕುಂಠಿತಃ ॥**" ಎಂಬ ಶ್ಲೋಕದಲ್ಲಿ ಬಹು ಚೆನ್ನಾಗಿ ಹೇಳಿರುತ್ತಾರೆ. (ವಿ. ಪು. ೬. ೭. ೧೯) ಇದರರ್ಥ ಮತ್ತು ಉಪಪಾದನೆಗೆ ಉಪೋದ್ಘಾತಾಧಿಕಾರದ ೧೫೩—೪ನೆಯ ಪುಟಗಳನ್ನು ನೋಡಿ. ಹೀಗೆ ಅಧಿಗತ ಪರಿಶ್ರಾನ್ತರಾಗಿ, ಬಹಳ ಆಯಾಸಪಟ್ಟು ಬೆಂದು ಬಳಲಿರಬಹುದು. ಇದನ್ನೆಲ್ಲಾ ಆ ಕೃಪಾಸಾಗರನು ಮನಸ್ಸಿನಲ್ಲಿಟ್ಟು ಯಾವಾಗ ನಾವು ನಿಮ್ಮವರು ಎಂದು ಯಾಚಿಸಿ ಶರಣಾಗತಿಯನ್ನು ಅನುಷ್ಠಿಸಿದೆವೋ, ಆಗ ಸಂತೋಷಯುಕ್ತನಾಗಿ "**ಲೋಚನಾಭ್ಯಾಂ ಪಿಬನ್ನಿವ**" (ರಾ. ಯುದ್ಧಕಾಂಡ ೧೮) ಎಂದು ಹೇಳಿರುವ ಹಾಗೆ ಕೃಪಾಕಟಾಕ್ಷದಿಂದವಲೋಕಿಸಿ, ಅಂತಿಮ ಸ್ಮರಣೆ, ಸುಖನಿರ್ಯಾಣ, ಮೂರ್ಧನ್ಯ ನಾಡಿ ಪ್ರವೇಶ, ಅರ್ಚಿರಾದಿ ಗತಿಗಳನ್ನುಂಟುಮಾಡಿ, ಆಜ್ಞಾಧರೈಃ ಆತಿವಾಹ್ಯ, ಸರ್ವೇಶ್ವರಾಜ್ಞೆಯನ್ನು ಶಿರಸಾ ವಹಿಸಿರುವ ಹನ್ನೆರಡು ಆತಿವಾಹಿಕರಿಂದಲೂ ಸತ್ಕರಿಸಲ್ಪಟ್ಟವರಾಗಿ, ಸ್ವಸ್ವರೂಪಾವಿರ್ಭಾವ ಉಂಟಾಗುವದರ ಮೂಲಕವಾಗಿ, **ನಿಜಚ್ಛಾಯಾದಾಯಿಪಾ** ಎಂಬಲ್ಲಿ ಹೇಳಿರುವ ಹಾಗೆ ಶ್ರಿಯಃಪತಿಗೆ ಸಮಾನಭಾವವನ್ನು ಹೊಂದುತ್ತಾರೆ. "**ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ**" ಎಂದು ಶ್ರುತಿಯು ಹೇಳುತ್ತದೆ. ಬಹುದೂರ ನಡೆದು ಆಯಾಸದಿಂದ ಬಳಲಿದವರಿಗೆ ಶೈತ್ಯೋಪಚಾರವೂ ವೃಕ್ಷದ ನೆರಳಿನಲ್ಲಿರೋಣವೂ ಆಪ್ಯಾಯನವು. ಹೀಗೆ ಆಯಾಸಪಟ್ಟವರಿಗೆ ಶೈತ್ಯೋಪಚಾರಗಳನ್ನು ಮಾಡುವದಕ್ಕಾಗಿ ಆತಿವಾಹಿಕರನ್ನೂ ಅಪ್ಸರಸ್ಸುಗಳನ್ನೂ ಶ್ರಿಯಃಪತಿಯು ನೇಮಿಸಿರುವದಲ್ಲದೆ, ತಾನೇ "**ಬ್ರಹ್ಮತರು**" ವಾಗಿ ಆಶ್ರಿತರಿಗೆ ನೆರಳನ್ನು ಕೊಟ್ಟು ಕಾಪಾಡುವನೆಂದು ಹೇಳಲ್ಪಟ್ಟಿರು

ತ್ತದೆ. ಹಾಗೆಯೇ ತಾರೆಯು "**ನಿವಾಸವೃಕ್ಷಸ್ಸಾಧೂನಾಂ ಆಪನ್ನಾನಾಂ ಪರಾಗತಿಃ**" ಎಂದು ಹೇಳಿರುತ್ತಾಳೆ. ಆದರೆ ಶ್ರೀ ದೇಶಿಕರವರು ಶ್ರೀ ಹರಿಯನ್ನು ಸಾಮಾನ್ಯವೃಕ್ಷಕ್ಕೆ ಹೋಲಿಸಲಿಲ್ಲವು **ನಿಜಚ್ಛಾಯೆಯುಸ್ಸೀಯುವ** ಶ್ರೀ ಹರಿ ಎಂಬ ಚಂದನವೃಕ್ಷವೆಂದು ಹೇಳುತ್ತಾರೆ. ಈ ವೃಕ್ಷವು, ತಾಪತ್ರಯಗಳು ಇನ್ನು ಮುಂದಕ್ಕೆ ಇಲ್ಲದಹಾಗೆ ಮಾಡುವದಲ್ಲದೆ, **ಸರ್ವಗಂಧಸ್ಸರ್ವರಸಃ** (ಛಾಂ ೩ ೧೪ ೪) ಶ್ರೀಯಃಪತಿಯಲ್ಲಿ ಅಪ್ರಾಕೃತವಾದ ಸ್ವಾಸಾಧಾರಣವಾದ ನಿರವದ್ಯವಾದ ನಿರತಿಶಯವಾದ ಕಲ್ಯಾಣತಮವಾದ ಭೋಗ್ಯಭೂತವಾದ ಸರ್ವವಿಧಗನ್ಧರಸಗಳು ಇವೆ ಎಂದ ಶ್ರುತಿಸ್ಮೃತಿವಾಕ್ಯವಾದುದರಿಂದ, ಆತನು ಸರ್ವವಿಧಭೋಗಾನಂದಗಳನ್ನು ಕಲ್ಪಿಸುವನೆಂಬರ್ಥವು. "**ರಸೋವೈಸಃ ಆನಂದಯಾತಿ**" ಎಂದು ಮೇಲೆ ಉದಾಹರಿಸಿರುವ ತೈತ್ತರೀಯವಾಕ್ಯವು ನಿರತಿಶಯಾನಂದವನ್ನು ಕಲ್ಪಿಸುವನೆಂದು ಹೇಳುವದರಿಂದ ಚಂದನವೃಕ್ಷರೂಪಕವು ತುಂಬಾ ಸಮಂಜಸವಾದುದು. "**ವಾಸುದೇವತರುಚ್ಛಾಯಾ ನಾತಿಶೀತಾ ನಘರ್ಮದಾ। ನರಕಾಂಗಾರ ಶಮನೀ ಸಾಕಿಮರ್ಥಂ ನಸೇವ್ಯತೇ**" ಹೀಗೆ ಸರ್ವತಾಪನಿವಾರಕವಾಗಿಯೂ, ಪರಮ ಸುಖದಾಯಕವಾಗಿಯೂ ಭೋಗ್ಯಭೂತವಾಗಿಯೂ, ನರಕತಾಪಭಯವಿಲ್ಲದುದಾಗಿಯೂ ಇರುವ ಈ ವಾಸುದೇವನೆಂಬ ವೃಕ್ಷದ ನೆರಳನ್ನು ಈ ಮೂಢ ಮನುಜರು ಏಕೆ ಸೇವಿಸುವದಿಲ್ಲವೋ ? ಎಂದು ಹೇಳಲ್ಪಟ್ಟಿರುವದು ಇಲ್ಲಿ ಅನುಸಂಧೇಯವು.

ಹೀಗೆ ತನ್ನ ನಿರ್ಹೇತುಕ ಕೃಪೆಯಿಂದ ಪ್ರಪನ್ನನಿಗೆ ಆತಿವಾಹಿಕರ ಮೂಲಕ ಸತ್ಕಾರಗಳನ್ನುಂಟುಮಾಡಿ, ಬ್ರಹ್ಮಾಲಂಕಾರಮಾಡಿಸಿ, ಸ್ವಸ್ವರೂಪಾವಿರ್ಭಾವ ಮೂಲಕ ತನಗೆ ಸಮವಾದ ಭಾವವನ್ನುಂಟು ಮಾಡಿ, ಪರಮ ಭೋಗ್ಯನಾಗಿ ಪರಿಪೂರ್ಣ ಬ್ರಹ್ಮಾನುಭವ ರೂಪಾನಂದವನ್ನು ಕೊಟ್ಟು ಆತನು ಮಾಡುವ ಕೈಂಕರ್ಯಗಳನ್ನು ತಾನೂ ಸ್ವೀಕರಿಸಿ, ಹೀಗೆ ಸುಖಯತಿ, ಸುಖ ಪಡಿಸುವನೆಂದು ಹೇಳಿರುತ್ತಾರೆ. ಈ ಸುಖವೇ ಸುಖವು, ಮಿಕ್ಕಿದ್ದೆಲ್ಲವೂ ನರಕತುಲ್ಯವೆಂದೂ, ಇವಕ್ಕೆ ಹೋಲಿಸಿದರೆ, "**ಏತೇವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ**" ಎಂದು ಹೇಳಿರುವ ಹಾಗೆ ಭಯನಿದಾನವೆಂದೂ, ಇದೊಂದೇ ಅಭಯರೂಪವೆಂದೂ ತಿಳಿಸುವದಕ್ಕಾಗಿ **ಸುಖಯತಿ** ಎಂಬ ಪ್ರಯೋಗವು. ಆ ಸುಖವು ಎಂಥಾದ್ದೆಂದು ವಿಶದವಾಗಿ ತಿಳಿಸುವದಕ್ಕಾಗಿ ಮುಂದಿನ ಪರಿಪೂರ್ಣಬ್ರಹ್ಮಾನುಭವಾಧಿಕಾರವನ್ನು ಪರಮಕೃಪಯಾ ಉಪದೇಶಿಸುತ್ತಾರೆ.

ಇಂತು ಶ್ರೀಮದ್ರಹಸ್ಯತ್ರಯಸಾರದ ಇಪ್ಪತ್ತೊಂದನೆಯ ಗತಿಚಿನ್ತನಾಧಿಕಾರಕ್ಕೆ ತಿರುನಾರಾಯಣಪುರಂ ವಿಜಯರಾಘವಶರ್ಮನ ಆಚಾರ್ಯ ಹೃದಯಾನ್ವೇಷಣೀ ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದವು

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ.

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ



ಶ್ರೀಮನ್ನಿಗಮಾನ್ತ ಮಹಾದೇಶಿಕ ವಿರಚಿತ

ಶ್ರೀಮದ್ರಹಸ್ಯತ್ರಯಸಾರೇ

ಪರಿಪೂರ್ಣ ಬ್ರಹ್ಮಾನುಭವಾಧಿಕಾರಃ. ೨೨

ವಿತಮಸಿ ಪದೇ ಲಕ್ಷ್ಮೀಕಾಂತಂ ವಿಚಿತ್ರ ವಿಭೂತಿಕಂ ।
ಸಚಿನ ಗಮಿತ ಸ್ಸಂಪದ್ಯಾವಿರ್ಭವತ್ಸಹಜಾಕೃತಿಃ ।

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಈ ಅಧಿಕಾರದಲ್ಲಿ ಅರ್ಚಿರಾದಿಗತಿಯ ಮೂಲಕ ಆತಿವಾಹಿಕ ಸತ್ಕಾರವೂ, ಅಪ್ಸರಸ್ಸಿನಿಂದ ಬ್ರಹ್ಮಾಲಂಕಾರವೂ ಉಂಟಾಗಿ ವೈದ್ಯುತನ ಮೂಲಕ ಪರವಾಸುದೇವ ಪ್ರಾಪ್ತಿಯುಂಟಾದ ಮುಕ್ತನಿಗೆ ಲಭಿಸುವ ಪರಿಪೂರ್ಣ ಬ್ರಹ್ಮಾನುಭವದ ಸ್ವರೂಪವೆಂಥಾದ್ದೆಂಬುದನ್ನು ತಿಳಿಸುತ್ತಾರೆ ಈ ಅಧಿಕಾರಕ್ಕೆ ಹೀಗೆ ಏಕೆ ಹೆಸರೆಂಬುವದನ್ನು ಉಪಪಾದನೆಯ ಪ್ರಥಮ ವಾಕ್ಯದಲ್ಲೇ ತಿಳಿಸುವವರಿಂದ ಇಲ್ಲಿ ಹೇಳುವದು ಅನಾವಶ್ಯಕವು.

ಅರ್ಥ—ವಿತಮಸಿಪದೇ-ತಮೋಗುಣಕ್ಕೆ ಆಕರವಿಲ್ಲದ ದಿವ್ಯ ವೈಕುಂಠದಲ್ಲಿ ಯಾವಾಗ ತಮೋಗುಣ ಹೇಳಲ್ಪಟ್ಟಿತೋ, ಆವಾಗ ರಜೋಗುಣವೂ, ಇವುಗಳಿಂದ ಕೂಡಿದ ಸತ್ವಗುಣವೂ ಸಹ ಇಲ್ಲವೆಂದು ಹೇಳಿದಂತಾಯಿತು. ಇದು ಹಾಗಾದರೆ ಎಂಥಾದ್ದೆಂದರೆ ಶುದ್ಧ ಸತ್ವಮಯವಾದುದೆಂಬ ಭಾವವು ಅಂಧಕಾರವೆಂಬುದೇ ಇಲ್ಲದೆ ಸದಾ ಸ್ವಯಂ ಪ್ರಕಾಶವಾದ ದಿವ್ಯ ವೈಕುಂಠದಲ್ಲಿ, ವಿಚಿತ್ರವಿಭೂತಿಕಂ-

ಸ್ಫುಟತದಪೃಥಕ್ಸಿದ್ಧಿ ಸ್ಸಿದ್ಧ್ಯತ್ಗುಣಾಷ್ಟಕ ತತ್ಫಲೋ
ಭಜತಿ ಪರಮಂ ಸಾಮ್ಯಂ ಭೋಗೇ ನಿವೃತ್ತಿ ಕಥೋಜ್ಝಿತಮ್ ॥೪೭॥

ಅಪ್ರಾಕೃತವಾದ ದಿವ್ಯಾಭರಣಗಳನ್ನು ಹೊಂದಿರುವ, **ಲಕ್ಷ್ಮೀ ಕಾಂತಂ** - ಶ್ರಿಯಃಪತಿಯನ್ನು ಸಚಿವ ಗಮಿತಃ- ಹಿಂದಿನ ಅಧಿಕಾರದಲ್ಲಿ ಹೇಳಿದಹಾಗೆ ಆತನ ಆಜ್ಞಾಧಾರಿಗಳಾದ ಅತಿವಾಹಿಕರಿಂದ ಹೊಂದಿಸಲ್ಪಟ್ಟವನಾಗಿ, **ಸಂಪದ್ಯ** - ಆತನನ್ನು ಹೊಂದಿ. ಆವಿರ್ಭವತ್ ಸಹಜಾಕೃತಿಃ, **ಆವಿರ್ಭವತ್** - ಇದುವರೆಗೂ ಅಪ್ರಕಾಶವಾಗಿದ್ದು ಈಗ ಪ್ರಕಾಶವಾಗಿರುವ, **ಸಹಜ** - ತನಗೆ ಸಹಜವಾದ ಎಂದರೆ ಸ್ವಕೀಯವಾದ, **ಆಕೃತಿಃ** – ಸ್ವರೂಪ ಸ್ವಭಾವಗಳುಳ್ಳವನಾಗಿ, **ಸ್ಫುಟತದಪೃಥಕ್ಸಿದ್ಧಿಃ, ಸ್ಫುಟ** - ಪ್ರತ್ಯಕ್ಷೀಕರಿಸಲ್ಪಟ್ಟ, **ತದಪೃಥಕ್ಸಿದ್ಧಿಃ** – ಆ ಪರಮಾತ್ಮನನ್ನು ಬಿಡದೆ ಸೇರಿರುವ ಸಿದ್ಧಿಯುಳ್ಳವನಾಗಿ, ಎಂದರೆ ತಾನು ಪರಮಾತ್ಮನಿಗೆ ಶರೀರವು, ಆತನು ತನಗೆ ಆತ್ಮ ಎಂಬ ಭಾವವನ್ನು ಚನ್ನಾಗಿ ತಿಳಿದವನಾಗಿ, ಎಂದರೆ ಆತನೊಂದಿಗೆ ಸಾಯುಜ್ಯವನ್ನು ಹೊಂದಿ ಎಂಬರ್ಥವು; **ಸಿದ್ಧ್ಯದ್ಗುಣಾಷ್ಟಕ ತತ್ಫಲಃ, ಸಿದ್ಧ್ಯತ್** - ಅಭಿವ್ಯಕ್ತವಾದ, **ಗುಣಾಷ್ಟಕ ತತ್ಫಲಃ** - ಗುಣಗಳ ಎಂಟೇನು, ಅವು ಯಾವುವೆಂದರೆ, ಅಪಹತ ಪಾಪತ್ವ, ವಿಜರತ್ವ, ವಿಮೃತ್ಯುತ್ವ, ವಿಶೋಕತ್ವ, ವಿಜಿಘತ್ಸತ್ವ, ಅಪಿಪಾಸತ್ವ, ಸತ್ಯಕಾಮತ್ವ, ಸತ್ಯಸಂಕಲ್ಪಗಳು, **ತತ್ಫಲಃ** - ಆ ಗುಣಾಷ್ಟಕಗಳಿಂದ ಉಂಟಾಗುವ ಫಲವೇನು, ಇದು ಯಾವುದೆಂದರೆ, ಆತನಿಗೆ ಇಷ್ಟಗಳಾಗಿ ಮಾಡುವ, ಕೈಂಕರ್ಯಪರ್ಯಂತವಾದ ಪರಿಪೂರ್ಣಾನುಭವವುಳ್ಳವನಾಗಿ. **ಭೋಗೇ** - ಜಗತ್ತಿನ ಸೃಷ್ಟಿ ಸ್ಥಿತಿ ಲಯಾದಿಗಳೇ ಮೊದಲಾದವುಗಳಿಲ್ಲದೆ, ಆನಂದಾನುಭವದಲ್ಲಿ ಮಾತ್ರ, **ಪರಮಂ ಸಾಮ್ಯಂ** - ಅತ್ಯಂತ ಸಮಭಾವವನ್ನು, **ನಿವೃತ್ತಿ ಕಥೋಜ್ಝಿತಂ** - ಪುನರಾವೃತ್ತಿಯ ಪ್ರಸಂಗವೇ ಇಲ್ಲದೇ ಇರುವಂಥಾದ್ದನ್ನಾಗಿ, **ಭಜತಿ** - ಹೊಂದುವನು.

ತಾತ್ಪರ್ಯವು:—ಇವನು ಅತಿವಾಹಿಕರಿಂದ ಸತ್ಕರಿಸಲ್ಪಟ್ಟು ಹೋದ ಸ್ಥಳವೆಂತಾದ್ದೆಂದರೆ, ಈ ಪ್ರಕೃತಿಮಂಡಲದ ಹಾಗಲ್ಲದೆ ವಿಲಕ್ಷಣವಾದುದು, ಅದು ತಮಶ್ಶಬ್ದವಾಚ್ಯವಾದ ಪ್ರಕೃತಿ ಸಂಬಂಧವಿಲ್ಲದೆ, ಅಪ್ರಾಕೃತವಾದುದು. ಶ್ರುತಿಯು "ತಮಸಃ ಪರಸ್ತಾತ್" ಎಂದೂ, "ತಮಸಸ್ತು ಪಾರೇ" ಎಂದೂ ಈ ದಿವ್ಯ ವೈಕುಂಠವನ್ನು ಕುರಿತು ಹೇಳಿರುತ್ತದೆ. ತಮಶ್ಶಬ್ದವು ಬದ್ಧರಾದ ಚಿದ್ವಿಶಿಷ್ಟವಾದ ಪ್ರಕೃತಿಯನ್ನು ಬೋಧಿಸುತ್ತದೆ. ಅಂತಹಾದ್ದರಿಂದ ವಿವರ್ಜಿತವಾದುದೆಂಬ ಭಾವವು. ಅದು ಪ್ರಕೃತಿಗಿಂತ ಹೇಗೆ ವಿಲಕ್ಷಣವೆಂಬುವದು ತತ್ತ್ವತ್ರಯಾಧಿಕಾರ

ದಲ್ಲಿ ಉಪಪಾದಿತವಾಗಿದೆ (೪೯೮, ೧೫೮---೯ ಪುಟಗಳನ್ನು ಪರಾಂಬರಿಸಿ). ಇದು ಸ್ವಯಂಪ್ರಕಾಶವಾಗಿ, ರಜಸ್ತಮೋಗುಣಗಳಿಂದ ಸೇರದ ಶುದ್ಧಸತ್ವವಾಗಿ, ಸರ್ವೇಶ್ವರನಿಗೆ ಭೋಗೋಪಕರಣವಾಗಿ, ಈ ಚೇತನನಿಗೆ ದಿವ್ಯಮಙ್ಗಳವಿಗ್ರಹಪ್ರಾಪ್ತಿಗೂ ಶ್ರಿಯಃಪತಿಯ ಕೈಙ್ಕರ್ಯಗಳಿಗೆ ಉಪಯುಕ್ತವಾದ ಉಪಕರಣಗಳಾಗಿಯೂ ಆಗುವಂಥಾದ್ದು. ಆ ದಿವ್ಯವೈಕುಂಠದಲ್ಲಿರುವ ಸ್ವಾಮಿಯು ನಿತ್ಯಾನಪಾಯಿನಿಯಾದ ಲಕ್ಷ್ಮೀಯುಕ್ತನಾಗಿ ಲಕ್ಷ್ಮಿಗೂ ಇತರರಿಗೂ ಅತಿ ಮನೋಹರನಾಗಿಯೂ ಇರುತ್ತಾನೆಂದು ಹೇಳುವದಕ್ಕಾಗಿ **ಲಕ್ಷ್ಮೀಕಾಂತಂ** ಎಂಬ ಪ್ರಯೋಗವು. ದ್ವಯವು **ಪೂರ್ವ ಖಂಡ**ದಿಂದ ಉಪಾಯಸ್ಥಿತಿಯಲ್ಲೂ, **ಉತ್ತರಖಂಡ**ದಿಂದ ಉಪೇಯ (ಪ್ರಾಪ್ಯ) ಸ್ಥಿತಿಯಲ್ಲೂ ಹೀಗೆ ಯಾವಾಗಲೂ ಲಕ್ಷ್ಮೀವಿಶಿಷ್ಟವಾದ ರೂಪ ಉಳ್ಳವನೆಂದು ತಿಳಿಸುತ್ತದೆ. ಪ್ರಾಪ್ಯದಲ್ಲಿ ಲಕ್ಷ್ಮೀವಿಶಿಷ್ಟನೆಂಬಭಿಪ್ರಾಯವನ್ನು ನಮ್ಮ ಪಂಗಡದವರೆಲ್ಲಾ ಒಪ್ಪಿರುತ್ತಾರೆಯಾದುದರಿಂದ ಇದು ನಿರ್ವಿವಾದ ವಿಷಯವು. ಈ ಶ್ರಿಯಃಪತಿಯೆಂತವನೆಂದರೆ **ವಿಚಿತ್ರವಿಭೂತಿಕಂ** ಎಂದು ಹೇಳಲ್ಪಟ್ಟಿರುತ್ತದೆ. ವಿಭೂತಿ ಎಂದರೆ ನಿಯಾಮ್ಯವರ್ಗವು ಒಬ್ಬ ಸಾಧಾರಣನಾದ ರಾಜನೇ ಅನೇಕ ವಿಚಿತ್ರನಿಯಾಮ್ಯವರ್ಗವುಳ್ಳವನಾಗಿರುವಾಗ ರಾಜಾಧಿರಾಜನನ್ನು ಇನ್ನು ಕೇಳಬೇಕೇ? ಈ ಲೀಲಾವಿಭೂತಿಯೇ ಬಹು ವಿಚಿತ್ರವು ಆ ನಿತ್ಯವಿಭೂತಿಯು ಇನ್ನೂ ವಿಚಿತ್ರತೆಯುಳ್ಳದ್ದಾಗಿರುವದರಲ್ಲಿ ಸಂದೇಹವಿಲ್ಲವು. ಹೀಗೆ ಆತನು ಉಭಯವಿಭೂತಿನಾಥನು. ಇದನ್ನು ಜ್ಞಾನಿಗಳಾದ ಮಹಾಭಾಗವತರು ಬಹುವಾಗಿ ಪುರಾಣೇತಿಹಾಸಗಳಲ್ಲಿ ವರ್ಣಿಸಿರುತ್ತಾರೆ. ಈ ದಿವ್ಯವೈಕುಂಠವನ್ನು ಶ್ರೀಭಾಷ್ಯಕಾರರು ಶ್ರೀ ವೈಕುಂಠಗದ್ಯದಲ್ಲಿ ಸಂಗ್ರಹವಾಗಿ ವರ್ಣಿಸಿರುತ್ತಾರೆ. ಸಾವಿರ ಕಂಭಗಳುಳ್ಳ ಈ ಆನಂದಮಯವೆಂಬ ಹೆಸರುಳ್ಳ ಮಹಾಮಂಟಪದಲ್ಲಿ ಶ್ರೀ ಪರವಾಸುದೇವನು ಲಕ್ಷ್ಮೀಯುಕ್ತನಾಗಿ ಹೇಗೆ ಅನಂತ ಗರುಡಾದಿ ನಿತ್ಯರುಗಳಿಂದಲೂ ಸೇವಿತನಾಗಿರುತ್ತಾನೆಂಬುದು ಆ ಶ್ರೀ ವೈಕುಂಠಗದ್ಯಪಠನದಿಂದ ವ್ಯಕ್ತಪಡುತ್ತದೆ. ಈ ಮುಕ್ತಿಯನ್ನು ಹೊಂದುವವನು ಪ್ರಾಪ್ಯವನ್ನು ಕಡೆಗೆ ಹೋಗಿ ಸೇರುವನು; ಹಾಗೆ ಸೇರಲು ಮಾರ್ಗವನ್ನು ತೋರಿಸಿದವರು ಯಾರು ಎಂದರೆ, **ಸಚಿವ ಗವಿತಃ**, ಸರ್ವೇಶ್ವರನ ಆಜ್ಞಾಧಾರಕರಾದ ಅತಿವಾಹಿಕರಿಂದ ಸತ್ಕರಿಸಲ್ಪಟ್ಟು ಮುಖ್ಯವಾಗಿ ಅಮಾನವನಿಂದ ಕರೆದುಕೊಂಡು ಹೋಗಲ್ಪಟ್ಟವನಾಗಿ ಪ್ರಾಪ್ಯವನ್ನು ಹೊಂದುವನೆಂದು ಹೇಳಲ್ಪಟ್ಟಿತು. ಈ ಮುಕ್ತಾತ್ಮನ ಐಶ್ವರ್ಯವೆಂಥಾದ್ದೆಂಬುವದನ್ನು ಮುಂದೆ ಸಙ್ಗ್ರಹವಾಗಿ ತಿಳಿಸುತ್ತಾರೆ. ಪ್ರಥಮತಃ ಈತನಿಗೆ ಹೊಸದಾಗಿ ಏನಾದರೂ ಸ್ವರೂಪಪ್ರಾಪ್ತಿಯುಂಟಾಗುತ್ತದೆಯೇ ಅಥವಾ ಮೊದಲು ಇದ್ದುದೇ ಈಗ ಚೆನ್ನಾಗಿ ಪ್ರಕಾಶಿಸುತ್ತದೆಯೋ ಎಂಬ ಚರ್ಚೆಯಲ್ಲಿ, ಹೊಸದಾಗಿ ಏನೂ

ಉಂಟಾಗುವದಿಲ್ಲವು. ಈತನಿಗೆ ಸಹಜವಾಗಿ ಇದ್ದ ಸ್ವರೂಪವು ಪ್ರಕೃತಿ ಸಂಬಂಧ ದಿಂದ ಇದುವರಿವಿಗೂ ತಿರೋಹಿತವಾಗಿದ್ದುದು, ಈಗ ಪ್ರಕೃತಿ ಸಂಬಂಧವೂ ಕರ್ಮವೂ ತೊಲಗಿದುವರಿಂದ, ಹಿಂದಿನ ಸ್ವಸ್ವರೂಪವೇ ಆವಿರ್ಭವಿಸುತ್ತದೇ ವಿನಾ ಹೊಸದಾಗಿ ಏನೂ ಉತ್ಪತ್ತಿಯಾಗುವದಿಲ್ಲವು. ಈ ಅಭಿಪ್ರಾಯವು "**ಏವ ಮೇವೈಷ ಸಂಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿರುಪ ಸಂಪದ್ಯ ಸ್ವೇನರೂಪೇಣಾಭಿ ನಿಷ್ಪದ್ಯತೇ**" ಎಂದರೆ "ಹಾಗೆಯೇ ಈ ಜೀವಾತ್ಮನು ಈ ಶರೀರವನ್ನು ಬಿಟ್ಟು ಹೊರಟವನಾಗಿ, ಪರಂಜ್ಯೋತಿಸ್ಸಾದ ಪರಮ ಪುರುಷನನ್ನು ಸೇರಿ, ತನ್ನ ಸ್ವಕೀಯವಾದ ಸ್ವರೂಪದ ಆವಿರ್ಭಾವವನ್ನು ಹೊಂದುತ್ತಾನೆ" ಎಂದು ಛಾಂದೋಗ್ಯ (೮-೧೨-೩) ದಲ್ಲಿ ಹೇಳಲ್ಪಟ್ಟಿರುತ್ತದೆ. ಅದನ್ನೇ "**ಸಂಪದ್ಯಾವಿರ್ಭಾವ ಸ್ಸ್ವೇನ ಶಬ್ದಾತ್**" ಎಂಬ ವ್ಯಾಸ ಸೂತ್ರವು ಉಪಪಾದಿಸುತ್ತದೆ. ಈ ಅಭಿಪ್ರಾಯಗಳಿಗನುಸಾರವಾಗಿ ಇಲ್ಲಿಯೂ "**ಸಂಪದ್ಯಾವಿರ್ಭವತ್ಸಹಜಾಕೃತಿಃ**" ಹಿಂದೆ ಪ್ರಕಾಶಿಸದೇ ಇದ್ದ ಸ್ವರೂಪವು, ಈಗ ಪರಮಾತ್ಮನೊಂದಿಗೆ ಸೇರುವದರಿಂದ, ತನಗೆ ಮೊದಲು ಸಹಜವಾಗಿದ್ದ ಸ್ವರೂಪವು ಈಗ ಆವಿರ್ಭವಿಸುತ್ತದೆ, ಎಂದರೆ ಆತ್ಮಾವಿನ ಧರ್ಮಭೂತಜ್ಞಾನವು ಏನೊಂದು ತಡೆಯೂ ಇಲ್ಲದೆ, ಸ್ವಯಂ ಪ್ರಕಾಶವಾಗಿ ಕಂಗೊಳಿಸುತ್ತದೆ. ಎಂಬ ಭಾವವು. ಹೀಗೆ ಹೇಳಲು ಸಾಧನವೇನೆಂದರೆ ಶ್ರುತಿಯಲ್ಲಿ **ಸ್ವೇನರೂಪೇಣ** ಎಂಬಲ್ಲಿ **ಸ್ವೇನ** ಎಂಬ ಶಬ್ದವಿರುವದರಿಂದ; ಆದುದರಿಂದಲೇ ಇಲ್ಲಿ **ಸಹಜಾಕೃತಿಃ** ಎಂಬ ಪ್ರಯೋಗವು.

ಎರಡನೆಯ ವಿಷಯ ವೇನೆಂದರೆ—**ಸ್ಫುಟತದಪೃಥಕ್ಸಿದ್ಧಿಃ** ಈ ಮುಕ್ತನು ಯಾವಾಗಲೂ ಸರ್ವೇಶ್ವರನಿಗೊಂದಿಗೇನೇ ಇರುವ ಸ್ಥಿತಿಯುಳ್ಳವನಾಗುವನು. ಈ ಅಭಿಪ್ರಾಯವು ವ್ಯಾಸಸೂತ್ರದ **ಅವಿಭಾಗೇನ ದೃಷ್ಟತ್ವಾತ್** ಎಂಬಧಿಕರಣದಲ್ಲಿ ಉಪಪಾದಿತವಾಗಿರುತ್ತದೆ. ಈ ಆವಿರ್ಭೂತ ನಿಜಸ್ವರೂಪನಾದ ಮುಕ್ತನೇನು ಪರಮಾತ್ಮನಿಗಿಂತ ತಾನು ಬೇರೆಯೇ ಎಂದೆನಿಸಿ ಬ್ರಹ್ಮಾನುಭವವನ್ನು ಮಾಡುತ್ತಾನೆಯೇ, ಅಥವಾ ತಾನು ಪರಮಾತ್ಮನಿಗೆ ಆತ್ಮಾವಾಗಿರುವದರಿಂದ ಅವಿಭಾಗದಿಂದ ವಿಭಾಗವಿಲ್ಲದ ಹಾಗೆ ಅಪೃಥಕ್ಸಿದ್ಧ ವಿಶೇಷಣವು ತಾನು ಎಂದು ಭಾವಿಸಿ, **ಅಹಂಬ್ರಹ್ಮಾಸ್ಮಿ** ಎಂದು ಪರಬ್ರಹ್ಮಾನುಭವವನ್ನು ಮಾಡುತ್ತಾನೆಯೋ ಎಂಬ ಸಂದೇಹದಲ್ಲಿ, ಈ ಎರಡನೇ ಅಭಿಪ್ರಾಯವೇ ಸಮಂಜಸವಾದುದೆಂದೂ, "**ಅಹಂ ಬ್ರಹ್ಮಾಸ್ಮಿ**" ಎಂದೇ ಅನುಭವಿಸುವನು. **ಮನುಷ್ಯೋಹಂ** ಎಂಬಲ್ಲಿ ಶರೀರವಾದ ಮನುಷ್ಯದೇಹಕ್ಕೂ, ಶರೀರಿಯಾದ ಆತ್ಮಾವಾದ ಅಹಂ ಎಂಬುವದಕ್ಕೂ ಹೇಗೆ ಸಾಮಾನಾಧಿಕರಣ್ಯವೋ ಹಾಗೆಯೇ, **ಅಹಂಬ್ರಹ್ಮಾಸ್ಮಿ** ಎಂಬಲ್ಲಿಯೂ ಶರೀರವಾದ **ಅಹಂ** ಎಂಬುವದರಿಂದ ಹೇಳಲ್ಪಟ್ಟ ಜೀವಾತ್ಮನಿಗೂ, ಬ್ರಹ್ಮ

ಶಬ್ದದಿಂದ ಹೇಳಲ್ಪಟ್ಟ ಶರೀರಿ ಎಂದರೆ ಆತ್ಮನಾದ ಪರಬ್ರಹ್ಮಕ್ಕೂ ಸಾಮಾನಾಧಿಕರಣ್ಯವು. ಅಹಂ ಬ್ರಹ್ಮಾಸ್ಮಿ ಎಂಬುದರರ್ಥವು ಅಹಂ ಬ್ರಹ್ಮಾತ್ಮಕಃ ಎಂಬವಾಗಿ ಎಂದು ತಿಳಿಯತಕ್ಕದ್ದು. ಶ್ರೀಮಚ್ಛಂಕರಾಚಾರ್ಯರು ಹೇಳುವ ಹಾಗೆ ಜೀವಾತ್ಮನೇ ಪರಮಾತ್ಮನಲ್ಲವು; ಸ್ವರೂಪೈಕ್ಯ ಅರ್ಥವಲ್ಲವು. "ಇದಂ ಜ್ಞಾನಮುಪಾಶ್ರಿತ್ಯ ಮಮಸಾಧರ್ಮ್ಯಮಾಗತಾಃ" (ಗೀ. ೧೪ ೨) ಎಂಬ ಗೀತಾವಾಕ್ಯವು ಜೀವಾತ್ಮನಿಗೆ ಸ್ವಸ್ವರೂಪಾವಿರ್ಭಾವ ಮೂಲಕ ಗುಣಾಷ್ಟಕ ಉಂಟಾಗುವದರಿಂದ, ಆತನಿಗೆ ಪರಬ್ರಹ್ಮನೊಂದಿಗೆ ಸಮಾನ ಭಾವವನ್ನು ಬೋಧಿಸುತ್ತದೆ. ಹಾಗೆಯೇ "**ಯದಾಪಶ್ಯಃ ಪಶ್ಯತೇ ರುಕ್ಮವರ್ಣಮ್ ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಂ । ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ**" (ಮುಂಡಕ ೩. ೨ ೩) "ಯಾವಾಗ ಬ್ರಹ್ಮದರ್ಶಿಯಾದ ಉಪಾಸಕನು, ಆದಿತ್ಯವರ್ಣಂ ಎಂದು ಹೇಳಿರುವ ಹಾಗೆ ದೇದೀಪ್ಯಮಾನವಾದ ದಿವ್ಯಮಂಗಳವಿಗ್ರಹಯುಕ್ತನಾದ, ಜಗತ್ಕರ್ತಾರನಾದ, ಜಗನ್ನಿಯಾಮಕನಾದ ಪರಮಪುರುಷನಾದ, ಬ್ರಹ್ಮಶಬ್ದವಾಚ್ಯನಾದ, ಪ್ರಕೃತಿಗೆ ಕಾರಣಭೂತನಾದ ಪರಬ್ರಹ್ಮನನ್ನು ಸಾಕ್ಷಾತ್ಕರಿಸುವನೋ, ಆಗ ಪುಣ್ಯಪಾಪಗಳೆರಡನ್ನೂ ಕಳೆದುಕೊಂಡು ಪ್ರಕೃತಿಸಂಬಂಧವಿಲ್ಲದೆ ಪರಿಶುದ್ಧನಾಗಿ, ಅಪಹತಪಾಪ್ಮತ್ವಾದಿ ಗುಣಾಷ್ಟಕಗಳುಳ್ಳವನಾಗಿ, ಪರಬ್ರಹ್ಮನೊಂದಿಗೆ ಸಮಾನಭಾವವನ್ನು ಹೊಂದುವನು ಎಂದು ಹೇಳಲ್ಪಟ್ಟಿರುತ್ತದೆ. ತೈತ್ತಿರೀಯ ಆನಂದವಲ್ಲಿಯಲ್ಲೂ "**ಸೋಽಶ್ನುತೇ ಸರ್ವಾನ್ ಕಾಮಾನ್ ಬ್ರಹ್ಮಣಾಸಹ ವಿಪಶ್ಚಿತೇತಿ**" "ಕಲ್ಯಾಣಗುಣವಿಶಿಷ್ಟನಾದ ಪರಬ್ರಹ್ಮನನ್ನು ಆತನೊಂದಿಗೆ ಅನುಭವಿಸುತ್ತಾನೆ" ಎಂದು ಹೇಳುತ್ತದೆ. ಇದರಿಂದ ಅಪೃಥಕ್ಸಿದ್ಧವಿಶೇಷಣನಾದ ಜೀವಾತ್ಮನು ವಿಶೇಷ್ಯವಾದ ಶ್ರಿಯಃಪತಿಯೊಂದಿಗೆ ಸಮಾನಾನಂದವನ್ನನುಭವಿಸುವನೆಂದು ಹೇಳಲ್ಪಟ್ಟಿತು.

ಮೂರನೆಯ ವಿಷಯವೇನೆಂದರೆ:—**ಸಿದ್ಧ್ಯದ್ಗುಣಾಷ್ಟಕ ತತ್ಫಲಃ** - ಈತನಿಗೆ ಪರಬ್ರಹ್ಮಸಂಪತ್ತಿಯುಂಟಾದರೆ ಸ್ವಸ್ವರೂಪಾವಿರ್ಭಾವ ಉಂಟಾಗುತ್ತದೆಂದು ಹೇಳಲ್ಪಟ್ಟಿತು. ಆತನಿಗೆ ನೈಜವಾದ ಸ್ವರೂಪಾವಿರ್ಭಾವವು ಮೇಲೆ ಹೇಳಿದ ಛಾಂದೋಗ್ಯ ೮. ೭. ೧ ರಲ್ಲಿ ಹೇಳಲ್ಪಟ್ಟ ಎಂಟು ಗುಣಗಳ ಆವಿರ್ಭಾವವೇ ಅಥವಾ (೨) ಜ್ಞಾನಸ್ವರೂಪಾವಿರ್ಭಾವ ಮಾತ್ರವೇ (೩) ಇಲ್ಲವೇ ಇವೆರಡರ ಆವಿರ್ಭಾವವೇ ಎಂಬ ಸಂದೇಹದಲ್ಲಿ, ವ್ಯಾಸಶಿಷ್ಯರಾದ ಜೈಮಿನ್ಯಾಚಾರ್ಯರು ಮೊದಲಿನ ಅಭಿಪ್ರಾಯವನ್ನೂ, ಔಡುಲೋಮ್ಯಾಚಾರ್ಯರು ಎರಡನೇ ಅಭಿಪ್ರಾಯವನ್ನೂ ಅವಲಂಬಿಸಿದರು. ಶ್ರೀ ವ್ಯಾಸಮಹರ್ಷಿಯು ಇವರಿಬ್ಬರಭಿಪ್ರಾಯವೂ ಸರಿಯಲ್ಲವೆಂದು ಹೇಳಿ, ಈ ಮೂರನೆಯ ಅಭಿಪ್ರಾಯವನ್ನು ತಿಳಿಸಿ ಸ್ವಸ್ವರೂಪಾವಿ

ರ್ಭಾವದಲ್ಲಿ ಇವೆರಡೂ ಸೇರಿದವೆಂದು ಉಪಪಾದಿಸಿರುತ್ತಾರೆ. ಈ ಅಭಿಪ್ರಾಯವನ್ನು ತಿಳಿಸುವದಕ್ಕಾಗಿ ಸಿದ್ಧ್ಯದ್ಗುಣಾಷ್ಟಕನು ಈ ಮುಕ್ತನು ಎಂದು ಹೇಳಿದರು. ಇಷ್ಟು ಮಾತ್ರವೇ ಅಲ್ಲದೆ ಆ ಆವಿರ್ಭವಿಸಿದ ಈ ಎಲ್ಲಾ ಗುಣಗಳಿಂದ ಯುಕ್ತವಾದ ಸ್ವರೂಪದಿಂದುಂಟಾಗುವ ಫಲವುಳ್ಳವನೂ ಆಗುತ್ತಾನೆಂದು **ತತ್ಫಲಃ** ಎಂದು ಪ್ರಯೋಗಮಾಡಿರುತ್ತಾರೆ. ಆ ಫಲಗಳು ಯಾವುವೆಂದರೆ :— ಈ ಮುಕ್ತನೂ ಸತ್ಯಸಂಕಲ್ಪನಾಗುವದರಿಂದ, "**ಸಙ್ಕಲ್ಪಾದೇವ ತಚ್ಛ್ರುತೇಃ**" ಎಂಬ ವ್ಯಾಸಸೂತ್ರದಲ್ಲಿ ಹೇಳಿರುವ ಹಾಗೆ, ಈ ಸತ್ಯಸಂಕಲ್ಪ ಮಹಿಮೆಯಿಂದಲೇ ಇನ್ನಾವುದರಪೇಕ್ಷೆಯೂ ಇಲ್ಲದೆ, "**ಸಙ್ಕಲ್ಪಾದೇವಾಸ್ಯ ಪಿತರಸ್ಸಮುತ್ತಿಷ್ಠನ್ತಿ**" (ಛಾಂ. ೮. ೨ ೧) "ಆ ಮುಕ್ತನ ಸಂಕಲ್ಪಮಾತ್ರದಿಂದಲೇ ಆತನ ಪಿತೃಗಳು ಉಂಟಾಗುವರು" ಎಂದು ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಮತ್ತೇನೆಂದರೆ, ಈತನ ಧರ್ಮಭೂತಜ್ಞಾನವು ಬಹು ಪ್ರಕಾಶವಾದುದಾಗಿ ವಿಭುವಾಗುವದರಿಂದ **ಸ ಏಕಧಾ ಭವತಿ, ತ್ರಿಧಾಭವತಿ** (ಛಾಂ. ೨೬. ೨) ಎಂದು ಹೇಳಿರುವ ಹಾಗೆ ಅನೇಕ ದೇಹಗಳನ್ನು ಪಡೆದು ಧರ್ಮಭೂತಜ್ಞಾನದ ವ್ಯಾಪ್ತಿಯಿಂದ ಅವುಗಳೆಲ್ಲಾ ಸತ್ತೆಯನ್ನು ಹೊಂದುವ ಹಾಗೆ ಮಾಡಿಕೊಳ್ಳಬಹುದು. ಈ ದೇಹಗಳೂ ಕೂಡ ಶುದ್ಧಸತ್ವಮಯವಾದರೂ ಅನಿತ್ಯವಾಗಿರಲಿ ಎಂಬ ಸಂಕಲ್ಪದಿಂದುಂಟಾದುವಾದುದರಿಂದ ಅನಿತ್ಯಗಳಾಗುವವು. ಸರ್ವೇಶ್ವರನು ಮಾಡುವ ಅವತಾರ ಪರಿಸಮಾಪ್ತಿ ಕಾಲದಲ್ಲಿ ಆತನ ದಿವ್ಯಮಂಗಳವಿಗ್ರಹವೇನಾಗುತ್ತದೆ ಎಂಬ ಪ್ರಶ್ನೆಗೆ ಉತ್ತರವು ಇದರಿಂದ ದೊರೆಕಬಹುದು. ಸರ್ವೇಶ್ವರನು ಅವುಗಳು ಅನಿತ್ಯವಾಗಿರಲೆಂದು ಸಂಕಲ್ಪಿಸಿದುದರಿಂದ ಅವುಗಳಿಗೂ ವಿಕಾರತ್ವವೂ ಅಂತ್ಯವೂ ಉಂಟು. ಜನನ ಉಂಟೆಂದು ಭಾವಿಸಿದ ನಂತರ ಅಂತ್ಯ ಉಂಟೆಂದು ಭಾವಿಸಲು ಏನೊಂದೂ ತೊಂದರೆಯಿಲ್ಲವು ಸೌಭರಿ ಮೊದಲಾದ ಋಷಿಗಳಿಗೆ ಧರ್ಮಭೂತಜ್ಞಾನವು ತುಂಬಾ ವಿಕಾಸವನ್ನು ಹೊಂದಿದುದರಿಂದಲೇ ಅವರು ಆ ಜ್ಞಾನದ ವ್ಯಾಪ್ತಿ ಮೂಲಕ ಐವತ್ತು ಶರೀರಗಳನ್ನು ಧರಿಸಿ, ಮಾಂಧಾತರಾಯನ ಐವತ್ತು ರಾಜಕನ್ನಿಕೆಗಳನ್ನೂ ಮದುವೆ ಮಾಡಿಕೊಂಡು ಅವರುಗಳೊಂದಿಗೆ ರಮಿಸಿದರೆಂಬ ಇತಿಹಾಸ ಉಂಟು. ಹಾಗೆಯೇ ಮುಕ್ತನಿಗೂ ತನ್ನ ಸತ್ಯಸಂಕಲ್ಪತೆಯಿಂದ ಅನೇಕ ಶರೀರಪರಿಗ್ರಹಣ ಮಾಡುವ ಫಲವುಂಟಾಗುತ್ತದೆಂದು ಹೇಳಲ್ಪಟ್ಟಿತು. ಮತ್ತು ಇಂತಹ ಸಂಕಲ್ಪದಿಂದಲೇ ಈ ಮುಕ್ತನು "**ಜಕ್ಷತ್ ಕ್ರೀಡನ್ ರಮಮಾಣಃ**" (ಛಾಂ. ೮. ೧೨. ೩) ಎಂದು ಹೇಳಿರುವ ಹಾಗೆ ಸರ್ವವಿಧ ಭೋಗವನ್ನೂ ಹೊಂದಬಹುದು. ಹೀಗೆ ಗುಣಾಷ್ಟಕ ಫಲವನ್ನೆಲ್ಲಾ ಈ ಮುಕ್ತನು ಹೊಂದುವನು ಎಂದು ಹೇಳಲ್ಪಟ್ಟಿತು.

ಹೀಗೆ ಈ ಮುಕ್ತನ ಸಂಕಲ್ಪದಿಂದಲೇ ಇವುಗಳು ಪ್ರಾಪ್ತವಾಗುತ್ತವೆಂದರೆ

ಕೆಲವು ಪೂರ್ವಪಕ್ಷಗಳು ತಲೆದೋರುತ್ತವೆ. ೧. ಈತನಿಗೆ ಸಂಕಲ್ಪದಿಂದಲೇ ಇವುಗಳು ಉಂಟಾಗುತ್ತವೆಯೋ, ಇತರ ಸಹಾಯವೇನೂ ಬೇಡವೋ, ಎಂದರೆ ಇತರೆ ಸಹಾಯವೇನೂ ಬೇಡವೆಂದು ಸಂಕಲ್ಪಾದೇವ, ಸಂಕಲ್ಪಮಾತ್ರದಿಂದಲೇ ಉಂಟಾಗುತ್ತದೆಂದು ಹೇಳಿ, ಶ್ರುತಿಯು ಸಸ್ವರಾಡ್ಭವತಿ - ಈತನು ಯಾವುದಕ್ಕೂ, ಕರ್ಮಕ್ಕೂ ಕೂಡ ವಶ್ಯನಲ್ಲವೆಂದು ಹೇಳಲ್ಪಟ್ಟಿತು. ಆಗಲಿ ಹೀಗೆ ಸರ್ವ ಸ್ವಾತಂತ್ರ್ಯ ಹೇಳಿತಲ್ಲಾ ಶಾಸ್ತ್ರವಶ್ಯತೆಯೂ ಇಲ್ಲವೋ ಎಂದರೆ ಅದೂ ಇಲ್ಲವೆಂದು ಹೇಳಲ್ಪಟ್ಟಿತು. ಹಾಗಾದರೆ ಸ್ವೇಚ್ಛಾಪ್ರವೃತ್ತಿ, ಅಧರ್ಮಪ್ರವೃತ್ತಿಯೋ ಎಂದರೆ ಈತನಿಗೆ ಸ್ವರೂಪಾವಿರ್ಭಾವ ಉಂಟಾಗುವದರಿಂದ ಪ್ರತಿಕೂಲ ಪ್ರವೃತ್ತಿಯೇ ಇಲ್ಲವು. ಪ್ರತಿಕೂಲ ಪ್ರವೃತ್ತಿ ಇದ್ದರೆ ತಾನೇ, ಶಾಸ್ತ್ರಾವಾದಶಾಸ್ತ್ರದ ಆವಶ್ಯಕ ತೆಯು ; ಅಂತಹ ಪ್ರತಿಕೂಲತೆಯೇ ಇಲ್ಲದುದರಿಂದ ಶಾಸ್ತ್ರವಶ್ಯತೆಯಿಲ್ಲವು ಆದುದ ರಿಂದ ಸಸ್ವರಾಡ್ಭವತಿ - ಅಕರ್ಮವಶ್ಯನಾಗಿ ಸ್ವತಂತ್ರನಾಗಿರುವನು ಎಂಬ ಭಾವವು. ಆದರೆ ಸ್ವತಂತ್ರನೆಂದರೆ ಪರಮಾತ್ಮನಿಗೂ ಅಧೀನವಲ್ಲವೋ ಎಂದರೆ ಭಗವಂತನಿಗೆ ಮಾತ್ರ ಪಾರತಂತ್ರ್ಯವೇ ವಿನಾ ಇನ್ಯಾರಿಗಾಗಲಿ ಯಾವುದಕ್ಕಾಗಲಿ ಅಧೀನನಲ್ಲವು. "ಅತ ಏವಚಾನನ್ಯಾಧಿಪತಿಃ" ಎಂಬ ಸೂತ್ರದಲ್ಲಿ ಇದು ಉಪ ಪಾದಿಸಲ್ಪಟ್ಟಿರುತ್ತದೆ.

(೨) ಈ ಮುಕ್ತನು ಅನೇಕ ಶರೀರಗಳನ್ನು ಸಂಕಲ್ಪದಿಂದೆತ್ತಬಹುದು ಎಂದು ಹೇಳಿದನಂತರ, ಮುಕ್ತದೆಶೆಯಲ್ಲಿ ಈ ಆತ್ಮನಿಗೆ ಶರೀರ ಉಂಟೇ ಇಲ್ಲವೇ ಎಂಬ ಸಂದೇಹದಲ್ಲಿ ಬಾದರಿ ಎಂಬುವರು ಶರೀರವಿಲ್ಲವೆಂದೂ, ಜೈಮಿನಿಯವರು "ಏಕಧಾ ಭವತಿ ತ್ರಿಧಾಭವತಿ" ಎಂದಿರುವದರಿಂದ ಉಂಟೇ ಉಂಟೆಂದೂ ಹೇಳುವ ಪಕ್ಷ ಗಳನ್ನೂ ಶ್ರೀ ವ್ಯಾಸಮಹರ್ಷಿಯು ಚರ್ಚಿಸಿ, ಮುಕ್ತನು ತನ್ನ ಸಂಕಲ್ಪಾನುಸಾರ ಅಶರೀರನೂ ಆಗಬಹುದು, ಸಶರೀರನೂ ಆಗಬಹುದೆಂದು ತೀರ್ಮಾನ ಮಾಡಿ ರುತ್ತಾರೆ.

ಹೀಗೆ ತನ್ನ ಸಂಕಲ್ಪಾನುಸಾರ ಎತ್ತಿದ ಶರೀರದಿಂದಲೂ ಮತ್ತು ಪರಮಾತ್ಮ ನನುಗ್ರಹಿಸಿದ ಶರೀರದಿಂದಲೂ ಇವನು ಪರಿಪೂರ್ಣ ಪರಬ್ರಹ್ಮಾನುಭವ ರೂಪ ಭೋಗವನ್ನೂ ಹೊಂದುವನು ಎಂದು ಹೇಳಿದಂತಾಯಿತು. ಈ ಭೋಗವು ಎಂದರೆ ಆನಂದವು ಎಂಥಾದ್ದೆಂದರೆ ಭೋಗೇ ಪರಮಂ ಸಾಮ್ಯಂ ಎಂದು ಹೇಳಿರುತ್ತಾರೆ ಮೇಲೆ ಉದಾಹರಿಸಿರುವ "ನಿರಂಜನಃ ಪರಮಂ ಸಾಮ್ಯಮುಪೈತಿ" ಎಂಬ ಛಾಂದೋಗ್ಯ ಶ್ರುತಿಯು ಇದಕ್ಕೆ ಆಧಾರವು. "ಸಾಮ್ಯಮುಪೈತಿ" ಎಂದು ಹೇಳಿ ರುವಾಗ ಅದ್ವೈತಿಗಳ ಸ್ವರೂಪೈಕ್ಯವೆಂಬ ಭಾವವೂ ಅಸಮಂಜಸವೆಂಬುದೂ, ಹಾಗೆಯೇ ದ್ವೈತಸಿದ್ಧಾಂತಿಗಳ ಆನಂದ ತಾರತಮ್ಯವೂ ಅಸಮಂಜಸವೆಂಬುದೂ

ತೋರಿಬರುತ್ತದೆ. ಈ ಸಾಮ್ಯವು ಯಾವ ಸಂದರ್ಭಗಳಲ್ಲಿ ಎಂದರೆ **ಭೋಗೇ** ಭೋಗದಲ್ಲಿ ಮಾತ್ರ, ಆನಂದದಲ್ಲಿ ಮಾತ್ರ ಸಾಮ್ಯವೇ ವಿನಾ ಮಿಕ್ಕ ವ್ಯಾಪಾರಗಳಲ್ಲಿ ಇಲ್ಲವೆಂದು ಹೇಳಲ್ಪಟ್ಟಿರುತ್ತದೆ. ಬ್ರಹ್ಮಸೂತ್ರದ ಜಗದ್ವ್ಯಾಪಾರವರ್ಜ್ಯಾಧಿಕರಣದಲ್ಲಿ ಶ್ರೀ ವ್ಯಾಸರು ಮುಕ್ತನಿಗೆ ಜಗತ್ಸೃಷ್ಟಿ ಸ್ಥಿತಿ ನಿಯಮನ ಲಯಾದಿಗಳಲ್ಲಿ ಸಂಬಂಧವಿಲ್ಲವೆಂದು ಸ್ಥಾಪಿಸಿರುತ್ತಾರೆ, ಏಕೆಂದರೆ "**ಯತೋ ವಾ ಇಮಾನಿ ಭೂತಾನಿ ಜಾಯನ್ತೇ**" ಇತ್ಯಾದಿ ಸೃಷ್ಟಿ ಕ್ರಮವನ್ನು ಹೇಳುವ ಶ್ರುತಿಗಳಲ್ಲಿ ಪರಮಪುರುಷನಿಗೆ ಮಾತ್ರವೇ ಸಂಬಂಧ ಹೇಳಿರುವದರಿಂದ ಆ ಪ್ರಕರಣಗಳಲ್ಲಿ ಮುಕ್ತನ ಹೆಸರು ಅಲ್ಲಿಲ್ಲುವದರಿಂದಲೂ ಈ ಸಾಮ್ಯರೂಪ ಮುಕ್ತೈಶ್ವರ್ಯವು ಜಗದ್ವ್ಯಾಪಾರ ವರ್ಜ್ಯವಾದುದು. ಹೀಗೆಯೇ ಅನೇಕ ಶ್ರುತಿ ಸ್ಮೃತಿಗಳು ಉಪಪಾದಿಸುತ್ತವೆ ಹಾಗಾದರೆ ಇನ್ನು ಏತರಲ್ಲಿ ಸಾಮ್ಯವೆಂದರೆ, "**ಭೋಗಮಾತ್ರಸಾಮ್ಯ ಲಿಙ್ಗಾಚ್ಚ**" (೪. ೪. ೨೧.) ಎಂಬ ಸೂತ್ರದಲ್ಲಿ "**ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ**" (ತೈ ಆನಂದ ೨ ೧. ೨) ಎಂಬ ತೈತ್ತಿರೀಯ ವಾಕ್ಯವನ್ನನುಸರಿಸಿ ಪರಿಪೂರ್ಣ ಪರಬ್ರಹ್ಮಾನುಭವರೂಪ ಆನಂದವೂ ಪರಬ್ರಹ್ಮಾನಂದವೂ ಸಮವೆಂದು ಗ್ರಹಿಸತಕ್ಕದ್ದು; ಆದುದರಿಂದ ಮುಕ್ತನಿಗೆ ಪರಮ ಪುರುಷ ಸಾಮ್ಯವನ್ನು ಹೇಳುವದರಲ್ಲಿಯೂ, ಸತ್ಯಸಙ್ಕಲ್ಪತ್ವದಲ್ಲಿ ಇಬ್ಬರೂ ಸಮವೆಂದು ಹೇಳುವದರಲ್ಲೂ ಪರಮಪುರುಷನಿಗೆ ಸೃಷ್ಟಿ ಸ್ಥಿತಿ ನಿಯಮನಲಯಾದಿಗಳನ್ನು ಬೋಧಿಸುವ ಶ್ರುತಿಗಳಿಗೆ ವಿರೋಧವಿಲ್ಲದಂತೆ ಅನ್ವಯಿಸುವದು ಯುಕ್ತವು. ಶ್ರುತಿಗಳಿಗೆ ಪರಸ್ಪರ ವಿರೋಧವನ್ನು ಕಲ್ಪಿಸುವದು ಅನ್ಯಾಯವು. ಆದುದರಿಂದ ಸ್ವಾಮಿ ದೇಶಿಕರವರು, ಮುಕ್ತನು **ಪರಮಂ ಸಾಮ್ಯಂ ಭೋಗೇ ಭಜತಿ** ಎಂದು ಹೇಳಿದರೇ ವಿನಾ ಸುಮ್ಮನೆ **ಪರಮಂ ಸಾಮ್ಯಂ ಭಜತಿ** ಎಂದು ಹೇಳಲಿಲ್ಲವು. ಯಾವಾಗ ಭೋಗಮಾತ್ರದಲ್ಲಿ ಸಾಮ್ಯವೆಂದಾಯಿತೋ, ಮಿಕ್ಕ ಜಗದ್ವ್ಯಾಪಾರಾದಿಗಳಿಲ್ಲನೆಂಬುವದು ಸುಸ್ಪಷ್ಟವು. ಹೀಗೆ ಮುಕ್ತೈಶ್ವರ್ಯವನ್ನೇನೋ ಮುಕ್ತನು ಹೊಂದಬಹುದು. ಯಾವುದಾದರೂ ಒಂದು ಕಾರಣದಿಂದ ದಿವ್ಯ ವೈಕುಂಠವಾಸವು ತಪ್ಪಿ ಪುನಃ ಇಲ್ಲಿಗೇನಾದರೂ ಬರುವ ಹಾಗೆ ಆದೀತೋ ಎಂಬ ಸಂದೇಹದಲ್ಲಿ ಶ್ರೀ ನಿಗಮಾಂತದೇಶಿಕರವರು ಹೇಳುತ್ತಾರೇನೆಂದರೆ:— ಈ ಭಗವತ್ಸಾಮ್ಯರೂಪಭೋಗವು, "**ನಿವೃತ್ತಿ ಕಥೋಜ್ಝಿತಮ್**" ಪುನರಾವೃತ್ತಿ ಪ್ರಸಂಗವೇ ಇಲ್ಲದುದೆಂದುಪದೇಶಿಸಿರುತ್ತಾರೆ. ಈ ಮುಕ್ತನೇ ಒಂದು ವೇಳೆ ಅಪೇಕ್ಷಿಸಿ ಈ ಲೀಲಾವಿಭೂತಿಗೇನೆ ಏಕೆ ಬರಕೂಡದು ಎಂಬ ಶಂಕಾ ಉಂಟಾದರೆ ಈ ಚೇತನನು ತಾನು ಹಿಂದೆ ಅನುಭವಿಸಿದ ನಾನಾವಿಧ ದುಃಖಗಳನ್ನೆಲ್ಲಾ ತಿಳಿದವನಾಗಿ, ದುಃಖಲೇಶಕ್ಕೂ ಕೂಡ ಅವಕಾಶವಿಲ್ಲದ,

ಅನನಧಿಕವಾದ ನಿರತಿಶಯ ಪರಿಪೂರ್ಣ ಬ್ರಹ್ಮಾನುಭವವನ್ನು ಹೊಂದಿದ ನಂತರವೂ ಆ ನರಕರೂಪವ ಅವಸ್ಥೆಯನ್ನು ಎಂದಿಗಾದರೂ ಅಪೇಕ್ಷಿಸುವನೇ? ಈ ಅಭಿಪ್ರಾಯನನ್ನು ಸರ್ವೇಶ್ವರನೇ ಅರ್ಜುನನಿಗೆ ಉಪದೇಶಿಸಿರುತ್ತಾನೆ. "ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಂ। ನಾಪ್ನುವಂತಿ ಮಹಾತ್ಮಾನಸ್ಸಂಸಿದ್ಧಿಂ ಪರಮಾಂಗತಾಃ । ಆಬ್ರಹ್ಮ ಭುವನಾಲ್ಲೋಕಾಃ ಪುನರಾವರ್ತಿನೋರ್ಜುನ । ಮಾಮುಪೇತ್ಯತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥" (ಗೀ ೮. ೧೫-೧೬) ನನ್ನನ್ನು ಮಹಾ ಕಷ್ಟದಿಂದಲೂ ಪ್ರಯಾಸದಿಂದಲೂ ಶ್ರದ್ಧೆಯಿಂದಲೂ ಐಕಾಂತ್ಯದಿಂದಲೂ ಭಜಿಸಿ ಉಪಾಯಾನುಷ್ಠಾನ ಮಾಡಿ ನನ್ನನ್ನು ಪಡೆದು, ನನ್ನ ಸ್ವರೂಪ ಜ್ಞಾನಾದಿಗಳನ್ನು ಯಥಾವತ್ತಾಗಿ ತಿಳಿದು, ನನ್ನನ್ನೇ ಪರಮಪ್ರಿಯನಾಗಿ ಭೋಗ್ಯವೆಂದು ಭಾವಿಸಿ, ನನ್ನನ್ನು ಬಿಟ್ಟರೆ ತನಗೆ ಸತ್ತೆಯೇ ಇಲ್ಲವೆಂದು ಚನ್ನಾಗಿ ಅರಿತ ಮಹಾತ್ಮರು, ಪರಮೈಶ್ವರ್ಯ ರೂಪ ಸಿದ್ಧಿಯನ್ನು ಹೊಂದಿದ ನಂತರ ಪುನಃ ಪುನಃ ಜನ್ಮ ಮರಣಾದಿಗಳಿಗಾಕರವಾಗಿರುವ, ದುಃಖಕ್ಕೆ ತೌರುಮನೆಯಾಗಿರುವ, ಅಸ್ಥಿರವಾದ, ಈ ಲೀಲಾವಿಭೂತಿಯನ್ನು ಎಂದಿಗೂ ಅಪೇಕ್ಷಿಸುವದಿಲ್ಲವು, ಹೊಂದುವದೂ ಇಲ್ಲವು. ಚತುರ್ಮುಖ ಬ್ರಹ್ಮನ ಲೋಕವಾದ ಸತ್ಯಲೋಕ ಮೊದಲುಗೊಂಡು ಎಲ್ಲಾ ಲೋಕಗಳಲ್ಲೂ ಆವರ್ತಿಯುಂಟು. ಅವುಗಳೆಲ್ಲಾ ಅಸ್ಥಿರವಾದ ಐಶ್ವರ್ಯವನ್ನು ಕೊಟ್ಟು ಅದು ಮುಗಿದ ನಂತರ ಅವು ಆವರ್ತಿಗೆ ಹೇತುಭೂತವಾದವುಗಳಾಗುತ್ತವೆ. ಈ ನಿತ್ಯವಿಭೂತಿಯಲ್ಲಿರುವ ತನ್ನನ್ನು ಹೊಂದಿದವರು, ತಾನು ಸರ್ವಜ್ಞನಾಗಿ, ಸತ್ಯಸಂಕಲ್ಪನಾಗಿ, ಪರಮಕಾರುಣಿಕನಾಗಿರುವದರಿಂದ ಪುನರ್ಜನ್ಮವನ್ನು ಎಂದಿಗೂ ಹೊಂದುವದಿಲ್ಲವೆಂದು ಹೇಳಿಕೊಂಡಿರುತ್ತಾನೆ. ಹೀಗೆ ಸರ್ವೇಶ್ವರನೇ ಹೇಳಿರುವದರಿಂದ, ಕಾರಣಾಂತರದಿಂದ ಸರ್ವೇಶ್ವರನೇ ಏನಾದರೂ ಈ ಮುಕ್ತನಿಗೆ ಆವೃತ್ತಿಯನ್ನುಂಟು ಮಾಡಿಬಿಡುವನೋ ಎಂಬ ಶಂಕೆಯು ದೂರೀಕೃತವಾದುದು. ಹೀಗೆ "ನಿವೃತ್ತಿ ಕಥೋಜ್ಝಿತಂ" ಎಂಬುದರಿಂದ, ಛಾಂದೋಗ್ಯದ ಉಪಸಂಹಾರವಾಕ್ಯವಾದ "ಸಖಲ್ವೇವಂ ವರ್ತಯನ್ ಯಾವದಾಯುಷಂ ಬ್ರಹ್ಮಲೋಕ ಮಭಿಸಂಪದ್ಯತೇ ನ ಚ ಪುನರಾವರ್ತತೇ" ಎಂಬುದರಭಿಪ್ರಾಯವನ್ನೂ ಬ್ರಹ್ಮಸೂತ್ರಗಳ ಕೊನೇ ಸೂತ್ರದ ಅಭಿಪ್ರಾಯವನ್ನೂ ಉಪದೇಶಿಸಿರುತ್ತಾರೆ. ಈ ಶ್ರುತ್ಯರ್ಥವೇನೆಂದರೆ, ಪ್ರಾಣವಿರುವ ತನಕ ಹೀಗೆ ಪರಮಪುರುಷೋಪಾಸಕನಾಗಿದ್ದವನು ದಿವ್ಯವೈಕುಂಠವನ್ನು ಹೊಂದುವನು, ಅವನಿಗೆ ಪುನರಾವರ್ತಿ ಇಲ್ಲವೆಂದು ಹೇಳಿರುತ್ತದೆ. ಆವೃತ್ತಿಗೆ ಮುಕ್ತನಿಗೇನೇ ಇಚ್ಛೆಯೆಂದಿಗೂ ಉಂಟಾಗುವದಿಲ್ಲವು. ಪರಮ ಕೃಪಾಳುವಾದ ಸರ್ವೇಶ್ವರನಿಗೆ "ಜ್ಞಾನೀತ್ವಾತ್ಮೈವ ಮೇಮತಂ" ಎಂದು

ಪರಿಪೂರ್ಣ ಬ್ರಹ್ಮಾನುಭವ ಸ್ಥಿತಿಃ ಕೀದೃಶೀ?

ಇಗ್ಗತಿ ವಿಶೇಷತ್ತಾಲೇ ಶೆನ್ರವನುಡೈಯ ಪರಿಪೂರ್ಣಾನುಭವಮ್ ಇರುಕ್ಕುಮ್ಪಡಿ ಎಙ್ಗನೇ ಯೆನ್ನಿಲ್—(೧) "ಅನೈತ್ತುಲಕು ಮುಡೈಯ

ಹೇಳಿದವನಿಗೆ ಇಚ್ಛೆಯು ಎಂದಿಗೂ ಉಂಟಾಗಲಾರದು. ಕರ್ಮವಶದಿಂದೇನಾದರೂ ಉಂಟಾದೀತೋ ಎಂದರೆ ಸಂಪೂರ್ಣವಾಗಿ ಉಚ್ಛಿನ್ನ ಕರ್ಮಬಂಧವಾದುದರಿಂದ ಆವರ್ತಿ ಶಂಕಾ ಇಲ್ಲವೇ ಇಲ್ಲವೆಂಬಭಿಪ್ರಾಯವು.

ಹೀಗೆ ಮುಕ್ತನು ದಿವ್ಯ ವೈಕುಂಠದಲ್ಲಿ ದಿವ್ಯಾಲಂಕಾರಗಳಿಂದ ಕೂಡಿದ ಆನಂದಮಯ ಸಭೆಯಲ್ಲಿ ಪ್ರಾಪ್ಯರಾದ ದಿವ್ಯಲೋಕ ದಂಪತಿಗಳನ್ನು ಹೊಂದಿ, ತನಗೆ ಅವರುಗಳು ಅತ್ಮಾವೆಂದು ತಿಳಿದವನಾಗಿ ಗುಣಾಷ್ಟಕಗಳೊಂದಿಗೆ ಕೂಡಿದ ಸ್ವಸ್ವರೂಪಾವಿರ್ಭಾವವನ್ನೂ ಅವುಗಳಿಂದ ಪ್ರಾಪ್ತವಾಗುವ ಫಲಗಳನ್ನೂ ಹೊಂದಿದವನಾಗಿ, ಪುನರಾವೃತ್ತಿ ಶಂಕಾವಿಗೆ ಕಾರಣವಿಲ್ಲದವನಾಗಿ, ತನ್ನ ಸಂಕಲ್ಪಾನುಸಾರವೂ ಸರ್ವೇಶ್ವರ ಸಂಕಲ್ಪಾನುಸಾರವೂ ಶರೀರಗಳನ್ನು ಧರಿಸುವನಾಗಿ ತನ್ನ ಇಷ್ಟಾನುಸಾರ ಭೋಗಗಳನ್ನು ಅನುಭವಿಸುವನಾಗಿ ಭೋಗಮಾತ್ರದಲ್ಲಿ ಸರ್ವೇಶ್ವರನಿಗೆ ಸಮಾನವಾದ ಆನಂದವನ್ನು ಹೊಂದಿದವನಾಗಿ ಲೋಕದಂಪತಿಗಳಿಗೆ ಕೈಂಕರ್ಯ ಮಾಡುವ ಸಾಮ್ರಾಜ್ಯ ಪದವಿಯನ್ನು ಪಡೆದವನಾಗಿ ಪರಿಪೂರ್ಣ ಬ್ರಹ್ಮಾನುಭವ ರೂಪ ಮುಕ್ತೈಶ್ವರ್ಯವನ್ನು ಹೊಂದುವನು ಎಂಬುದು ಈ ಶ್ಲೋಕ ತಾತ್ಪರ್ಯವು,

ಪರಿಪೂರ್ಣ ಬ್ರಹ್ಮಾನುಭವದ ಪ್ರಕಾರವೆಂಥಾದ್ದು?

ಸಂಗ್ರಹ ಶ್ಲೋಕದಲ್ಲಿ ಹೇಳಿದುದನ್ನೇ ಸವಿಸ್ತರವಾಗಿ ಹೇಳಲುಪಕ್ರಮಿಸಿ ಪ್ರಥಮತಃ ಪರಿಪೂರ್ಣ ಬ್ರಹ್ಮಾನುಭವವು ಎಂಥಾದ್ದೆಂದು ತಿಳಿಸುವರಾಗಿ ಪರಿಪೂರ್ಣ ಬ್ರಹ್ಮಾನುಭವ ಶಬ್ದದರ್ಥವನ್ನು ತಿಳಿಸಿ ಈ ಅಧಿಕಾರದ ಹೆಸರಿನ ಸಾರ್ಥಕ್ಯವನ್ನು ತೋರಿಸುತ್ತಾರೆ:—ಇಗ್ಗತಿ ವಿಶೇಷತ್ತಾಲೆ – ಈ ಅರ್ಚಿರಾದಿ ಗತಿ ವಿಶೇಷ ಮೂಲಕವಾಗಿ, ಶೆನ್ರವನುಡೈಯ .. ಪ್ರಾಪ್ಯವನ್ನು ಹೊಂದಿದ ಮುಕ್ತನ, ಪರಿಪೂರ್ಣ ಬ್ರಹ್ಮಾನುಭವವು, ಇರುಕ್ಕುಮ್ಪಡಿ – ಇರುವ ಸ್ಥಿತಿಯು, ಎಙ್ಗನೇ ಯೆನ್ನಿಲ್ – ಎಂಥಾದ್ದೆಂದರೆ:—"ಅನೈತ್ತುಲಕು ಮುಡೈಯ – ಈ ಎಲ್ಲಾ ಲೋಕಗಳಿಗೂ ನಿಯಾಮಕನಾಗಿ ಸ್ವಾಮಿಯಾಗಿರುವ, ಎಂದರೆ ಉಭಯ ವಿಭೂತಿ

ಅರವಿನ್ದ ಲೋಶನನ್ನೈತ್ತಿನೈತ್ತನೆಯುಮ್ ವಿಡಾಳ್" ಇತ್ಯಾದಿಗಳಿರ್ಪ್ಪಡಿಯೇ ಸರ್ವದೇಶ ಸರ್ವಕಾಲ ಸರ್ವಾವಸ್ಥೈಗಳಿಲುಮ್ ಸರ್ವೇಶ್ವರನೈ ಅನಂತಙ್ಗಳಾನ ವಿಗ್ರಹ ಗುಣವಿಭೂತಿ ಚೇಷ್ಟಿತಙ್ಗಳಿಲೊನ್ರುಮ್ ಕುರೈಯಾಮಲ್ ನಿರತಿಶಯ ಭೋಗ್ಯಮಾಗ ವಿಷಯೀಕರಿತ್ತುಕ್ಕೊಂಡಿರುಕ್ಕುಮ್.

ನಾಯಕನಾಗಿರುವ, **ಅರವಿಂದ ಲೋಶನನ್ನೈ**-ಪುಂಡರೀಕಾಕ್ಷನನ್ನು, ಇದರಿಂದ ಸರ್ವರನ್ನೂ ತನ್ನ ಕಣ್ಣಿನ ಸೌಂದರ್ಯದಿಂದ ಆಕರ್ಷಿಸುವ ಶ್ರಿಯಃಪತಿಯು ಎಂಬ ಭಾವವು, ಈ ಕಣ್ಣು ಉಪಲಕ್ಷಣವಾಗಿ **ಸಾಕ್ಷಾನ್ಮನ್ಮಥಮನ್ಮಥಃ** ಎಂದು ಹೇಳಿರುವ ಹಾಗೆ ಎಲ್ಲರನ್ನೂ ಆಕರ್ಷಿಸುವ ರೂಪಲಾವಣ್ಯಗಳಿಂದ ಒಪ್ಪಿರುವವನೆಂಬ ಭಾವವು, **ತಿನತ್ತನೈಯುಮ್ ವಿಡಾಳ್, ತಿನ** - ಬಹಳ ಸೂಕ್ಷ್ಮವಾಗಿರುವ ಧಾನ್ಯ, ಇದರಿಂದ **ತಿನತ್ತನೈಯುಮ್**-ಸ್ವಲ್ಪವಾದರೂ, ಅಥವಾ ಒಂದು ಕ್ಷಣಕಾಲವಾದರೂ, **ವಿಡಾಳ್** - ಶ್ರಿಯಃಪತಿಯನ್ನನುಭವಿಸದೇ ಬಿಟ್ಟಿರಲಾರಳು. ಈಶ್ವರನಿಗೂ ಜೀವನಿಗೂ ಭರ್ತೃ ಭಾರ್ಯಾ ಸಂಬಂಧವಿರುವದರಿಂದ, ಮಹಾಪತಿವ್ರತೆಯಾದ ಸ್ತ್ರೀಯು ಹೇಗೆ ಪತಿಯನ್ನು ಒಂದು ಕ್ಷಣ ಕೂಡ ಅಗಲದೆ, ಆತನ ಲಾವಣ್ಯ, ಗುಣ, ವಿಭೂತಿ ವ್ಯಾಪಾರಗಳೊಂದಿಗಿರುವ ಆ ತನ್ನ ಸ್ವಾಮಿಯೊಂದಿಗೆ ಅನುಭವಿಸುತ್ತಾ ಆನಂದಿಸಿಕೊಂಡಿರುವಳೋ ಹಾಗೆ ಎಂಬಭಿಪ್ರಾಯವು. ಮುಂದಕ್ಕೆ "**ಅರ್ವ ಶೇರ್ ತಿರುಕ್ಕೋಳೂರ್ಕ್ಕೇಮನ್ನೈಕ್ಕು ವಾನ್ಪಳಿಯು ನಿನ್ನೈಯಾಳ್ ಶೆಲ್ಲವೈತ್ತನಳೇ**" ಎಂದಿರುತ್ತದೆ. **ಅರ್ವ ಶೇರ್** - ಅಂತಹ ಶ್ರಿಯಃಪತಿಯನ್ನು ಹೋಗಿ ಸೇರಬೇಕೆಂದು, ತಿರುಕ್ಕೋಳೂರಿಗೆ, **ಶೆಲ್ಲವೈತ್ತನಳೇ**-ಹೋಗಿ ಸೇರಿದಳಲ್ಲವೇ. **ಮನ್ನೈಕ್ಕು** - ಅದರಿಂದ ತನ್ನ ಮನತನಕ್ಕೆ ಉಂಟಾಗುವ, **ವಾನ್ ಪಳಿನಿನ್ನೈಯಾಳ್** - ದೊಡ್ಡ ಅಪರಾಧವನ್ನು ಎಣಿಸಳು ಎಂಬರ್ಥವು" **ಇತ್ಯಾದಿಗಳಿರ್ಪ್ಪಡಿಯೇ** - ಇವೇ ಮೊದಲಾದವುಗಳ ಹಾಗೆ, ಸಮಸ್ತ ದೇಶ ಕಾಲ ಅವಸ್ಥೆಗಳಲ್ಲೂ, **ಸರ್ವೇಶ್ವರನೈ** - ಸರ್ವೇಶ್ವರನನ್ನು, **ಅನಂತಙ್ಗಳಾನ** - ಕೊನೆ ಇಲ್ಲದೇ ಇರುವ, ದಿವ್ಯಮಂಗಳ ವಿಗ್ರಹಗಳೇನು, ಗುಣಗಳೇನು, **ಚೇಷ್ಟಿತಙ್ಗಳಿಲ್**-ವ್ಯಾಪಾರಗಳೇನು, ಇವುಗಳಲ್ಲಿ, **ಒನ್ರುಂ** - ಯಾವುದೊಂದೂ, **ಕುರೈಯಾಮಲ್** - ನ್ಯೂನತೆಯಿಲ್ಲದೆ, **ನಿರತಿಶಯ ಭೋಗ್ಯಮಾಗ** - ಅತಿಶಯವಾದುದೇ ಇಲ್ಲದಿರುವ ಸರ್ವಶ್ರೇಷ್ಠ ಭೋಗ್ಯವಾಗಿ, **ವಿಷಯೀಕರಿತ್ತು** - ಸಾಕ್ಷಾತ್ಕರಿಸಿ **ಕೊಂಡು, ಇರುಕ್ಕುಮ್** - ಇರುವಂತಹ ಸ್ಥಿತಿಯಾಗಿರುತ್ತದೆ. ಕೆಲವು ಕೋಶಗಳಲ್ಲಿ "**ಸರ್ವೇಶ್ವರನೈ ಅನಂತಙ್ಗಳಾನ ವಿಗ್ರಹಗುಣ ಚೇಷ್ಟಿತಙ್ಗಳಿಲೊನ್ರು**

ಕುರ್ರೈಯಾನ್ಮೈ ನಿರತಿಶಯ ಭೋಗ್ಯಮಾಗ ವಿಷಯೀಕರಿತ್ತುಕ್ಕೊಣ್ಡು ನಿರ್ಕೈಯಾ" ಎಂಬ ಪಾಠಾಂತರ ಉಂಟೆಂದು ಸಾರವಿವರಣೆಯವರು ಅಪ್ಪಣೆ ಕೊಡಿಸಿರುತ್ತಾರೆ; ಆ ಸರ್ವೇಶ್ವರನ ಅನಂತಗಳಾದ ದಿವ್ಯಮಂಗಳ ವಿಗ್ರಹಗಳು, ಕಲ್ಯಾಣಗುಣ, ದಿವ್ಯಚೇಷ್ಟಿತಗಳು ಇವುಗಳಲ್ಲಿ ಯಾವುದೊಂದರಲ್ಲೂ ನ್ಯೂನತೆಯಿಲ್ಲದಿರುವಿಕೆಯನ್ನು ನಿರತಿಶಯ ಭೋಗ್ಯಭೂತವಾಗಿ ಸಾಕ್ಷಾತ್ಕರಿಸಿಕೊಂಡು ನಿಲ್ಲುವದು." ಈ ವಾಕ್ಯದಿಂದ **ಪರಿಪೂರ್ಣ ಬ್ರಹ್ಮಾನುಭವ**ವೆಂದರೇನೆಂದು ಹೇಳಲ್ಪಟ್ಟಿತು. ಇಲ್ಲಿ ಸಾಕ್ಷಾತ್ಕಾರವು ಪರಿಪೂರ್ಣನಾದ ಪರಬ್ರಹ್ಮನ ವಿಷಯವಾದುದು. ಆತನು ಅನಂತಗಳಾದ ವಿಗ್ರಹ, ಗುಣ, ವಿಭೂತಿ ಚೇಷ್ಟಿತಗಳಿಂದ ಯುಕ್ತನಾಗಿ ಪರಿಪೂರ್ಣನು. ಅಂತಹ ಪರಬ್ರಹ್ಮನನ್ನು ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲೂ ಹೀಗೆ ಪರಿಪೂರ್ಣವಾಗಿ ಭೋಗ್ಯವಾದುದಾಗಿ ಸಾಕ್ಷಾತ್ಕರಿಸುವುದೇ, ಪರಿಪೂರ್ಣ ಬ್ರಹ್ಮಾನುಭವವೆಂದು ಹೇಳಲ್ಪಟ್ಟಿತು. ಇಲ್ಲಿನ ಭೋಗಾನುಭವವು ಅಲ್ಲಿಯ ಅನುಭವದ ಹಾಗಲ್ಲವು. ಇಲ್ಲಿ, ಈ ಕಾಲದಲ್ಲಿ, ಅಥವಾ ಈ ಅವಸ್ಥೆಯಲ್ಲಿ ಸುಖವಿರಬಹುದು. ಇನ್ನೊಂದು ಪ್ರದೇಶದಲ್ಲಿ, ಇನ್ನೊಂದು ಕಾಲದಲ್ಲಿ ಅಥವಾ ಇನ್ನೊಂದವಸ್ಥೆಯಲ್ಲಿ ಸುಖವು ಬಯಲಾಗಬಹುದು, ದುಃಖಪ್ರಾಪ್ತಿಯಾಗಬಹುದು. ಇಲ್ಲಿ "**ಸುಖಸ್ಯಾನಂತರಂ ದುಃಖಂ, ದುಃಖಸ್ಯಾನಂತರಂ ಸುಖಂ**"; ಪರಮಪದದಲ್ಲಿ ಹೀಗಲ್ಲವು, ಅವಿಚ್ಛಿನ್ನವಾಗಿ ಸರ್ವದೇಶ ಸರ್ವಕಾಲ ಸರ್ವಾವಸ್ಥೆಯಲ್ಲಿಯೂ ಪರಿಪೂರ್ಣಬ್ರಹ್ಮನ ಅನುಭವವು, ಪರಿಪೂರ್ಣವಾಗಿ ಭೋಗ್ಯವಾಗಿರುವದು. **ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಿಲುಮ್ ಭೋಗ್ಯಮಾಗ** ಎಂದು ಹೇಳಿರುವದು **ಅನಂತ ಭೋಗ್ಯ**ವೆಂದೂ ಎಂದರೆ ಪರಿಪೂರ್ಣವಾಗಿ ಭೋಗ್ಯವೆಂದು ಹೇಳುವವರ ವ್ಯಾಖ್ಯಾನವು. ಆದುದರಿಂದ **ಪರಿಪೂರ್ಣ ಬ್ರಹ್ಮಾನುಭವ**ವೆಂಬುವದರಲ್ಲಿ ಪರಬ್ರಹ್ಮನೂ ಅನಂತಗಳಾದ ವಿಗ್ರಹ ಗುಣ ವಿಭೂತಿಚೇಷ್ಟಿತಗಳುಳ್ಳವನಾದುದರಿಂದ ಪರಿಪೂರ್ಣನೂ, ಭೋಗ್ಯವೂ ಸರ್ವದೇಶ ಸರ್ವಕಾಲ ಸರ್ವಾವಸ್ಥೆಯಲ್ಲೂ ಇರುವದರಿಂದ ಪರಿಪೂರ್ಣವಾದುದೆಂಬಭಿಪ್ರಾಯವೂ ಶ್ರೀ ಯತಿವರ್ಯರು ಅನುಗ್ರಹಿಸಿರುವ ಶ್ರೀ ವೈಕುಂಠ ಗದ್ಯದಲ್ಲಿ ಶ್ರಿಯಃಪತಿಯು ವಿಗ್ರಹ ಗುಣ ವಿಭೂತಿ ಚೇಷ್ಟಿತಗಳಲ್ಲಿ **ಪರಿಪೂರ್ಣ**ನೆಂಬ ಭಾವವನ್ನೂ, "**ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತಾತ್ಯಂತ ಶೇಷಭಾವಾಯ ಸ್ವೀಕೃತೋನುಜ್ಞಾತಶ್ಚ**" ಎಂಬ ಪ್ರಯೋಗವನ್ನೂ ಸಹ ಕಾಣಬಹುದು.

ಹೀಗೆ ಮುಕ್ತನಿಗೆ ಪರಿಪೂರ್ಣ ಬ್ರಹ್ಮಾನುಭವ ಉಂಟಾದರೆ, ಛಾಂದೋಗ್ಯ ಶ್ರುತಿಯು "**ನಿರಂಜನಃ ಪರಮಂ ಸಾಮ್ಯಮುಪೈತಿ**" ಎಂಬಲ್ಲಿ ಈಶ್ವರನೊಂದಿಗೆ

ಪರಮ ಸಾಮ್ಯ ಶ್ರುತ್ಯಭಿಪ್ರಾಯಃ ; ಭಗವತ್ಸ್ವರೂಪಂ ಭೋಗ್ಯಮ್.

ಇನ್ನನುಭವಮ್ ಈಶ್ವರನುಕ್ಕುಮ್ ಇವನುಕ್ಕುಮ್ ಅತ್ಯಂತ ತುಲ್ಯಮಾಗೈಯಾಲೇ ಪರಮಸಾಮ್ಯಮ್ ಶೊಲ್ಲುಗಿರದು. (೧) "ಉಣರ್

ಪರಮಸಾಮ್ಯವನ್ನು ಬೋಧಿಸುವದರಿಂದ, **"ತಥಾವಿಧ ಭಗವದನುಭವ ಜನಿತಾನವಧಿಕಾತಿಶಯ ಪ್ರೀತಿಕಾರಿತಾಶೇಷಾವಸ್ಥೋಚಿತಾಶೇಷ ಶೇಷತೈಕರತಿ ರೂಪ ನಿತ್ಯಕಿಂಕರೋ ಭವಾನಿ"** ಎಂದು ಹೇಳಿದುದು ಹೇಗೆ? ತಾನೇ **ಪರಮಾತ್ಮನಿಗೆ ಸಮಾನವಾಗುವಾಗ** ಪರಿಪೂರ್ಣ ಬ್ರಹ್ಮಾನುಭವವೆಂದರೇನು? ಎಂಬ ಶಂಕಾವಿಗೆ ಮುಂದಿನ ವಾಕ್ಯದಿಂದ ಸಮಾಧಾನ ಹೇಳುವವರಾಗಿ ಪರಮ ಸಾಮ್ಯವನ್ನು ಹೇಳುವ ಶ್ರುತ್ಯಭಿಪ್ರಾಯವನ್ನು ತಿಳಿಸುತ್ತಾರೆ.

ಪರಮಸಾಮ್ಯವನ್ನು ಹೇಳುವ ಶ್ರುತಿಯಭಿಪ್ರಾಯವು, ಭಗವತ್ಸ್ವರೂಪವು ಭೋಗ್ಯವಾದುದು.

ಇನ್ನನುಭವಮ್ - ಈ ಭೋಗವೂ ಅದರಿಂದುಂಟಾಗುವ ಆನಂದವೂ ಸಹ ಇಲ್ಲಿ ಅಭಿಪ್ರಾಯವು, **ಇವನುಕ್ಕುಮ್** - ಈ ಮುಕ್ತನಿಗೂ, **ಈಶ್ವರನುಕ್ಕುಮ್** - ಸರ್ವೇಶ್ವರನಿಗೂ, **ಅತ್ಯಂತ ತುಲ್ಯಮಾಗೈಯಾಲೇ** - ಹೆಚ್ಚಾಗಿ ಸಮವಾದುದರಿಂದ, **ಪರಮಸಾಮ್ಯ** ವೆಂದು, **ಶೊಲ್ಲುಗಿರದು** - ಹೇಳುವಂಥಾದ್ದಾಗಿರುತ್ತದೆ. ಯಾವುದು ಎಂದರೆ **"ನಿರಂಜನಃ ಪರಮಂ ಸಾಮ್ಯ ಮುಪೈತಿ"** ಎಂಬ ಶ್ರುತಿಯಲ್ಲೂ, **"ಮಮ ಸಾಧರ್ಮ್ಯಮಾಗತಾಃ"** ಇತ್ಯಾದಿ ಸ್ಮೃತಿಯಲ್ಲೂ ತೋರಿಬರುವ ಪ್ರಮಾಣವು ಎಂದು ಇಟ್ಟುಕೊಳ್ಳತಕ್ಕದ್ದು. ಸರ್ವಜ್ಞತೆಯೂ ಉಭಯತ್ರ ಸಾಧಾರಣವಾದುದರಿಂದಲೂ, ಆ ಸಾರ್ವಜ್ಞತೆಯು ಅನುಭವಕ್ಕೆ ಕಾರಣವಾಗಿ, ತನ್ಮೂಲಕ ಆನಂದವೂ ಉಂಟಾಗುವದು ಇಬ್ಬರಿಗೂ ಸಾಧಾರಣವಾದುದರಿಂದಲೂ, ಆನಂದದಲ್ಲಿ ಸಾಮ್ಯವೆಂಬ ಭಾವವು. ಈ ಪರಮಸಾಮ್ಯವೇನು ಇಬ್ಬರಿಗೂ ಎಲ್ಲಾ ವಿಧದಲ್ಲೂ ಸಮವೇ ಎಂದರೆ ಭೋಗ—ಆನಂದ ಮಾತ್ರದಲ್ಲೇ ವಿನಾ ಇತರ ವಿಷಯಗಳಲ್ಲಿಲ್ಲವು ; ಭಗವಂತನಿಗೆ ಈ ಸರ್ವವೂ ತನ್ನದಾಗಿ ಅದರಲ್ಲಿ ಈ ಮುಕ್ತರೂ ಸೇರಿರುವದರಿಂದ ಆನಂದವು; ಈ ದಾಸನಾದ ಮುಕ್ತನಿಗಾದರೋ ಎಲ್ಲವೂ ತನ್ನ ಸ್ವಾಮಿಯಾದ ಸರ್ವೇಶ್ವರನದೇ ಎಂಬ

---

(೧) ತಿರುವಾಯ್ಮೊಳಿ ೧. ೧. ೨.

ಮುಳುನಲಮ್" ಎನ್ರುಮ್. (೨) "ನಿರಸ್ತಾತಿಶಯಾಹ್ಲಾದ ಸುಖಭಾ

ಆನಂದವು. ಇವೆರಡೂ ಅತ್ಯಂತ ತುಲ್ಯವೆಂಬ ಭಾವವು. ಅತ್ಯಂತ ತುಲ್ಯನಾ ಗೈಯಾಲೇ ಎಂದು ಹೇಳಿದುದರಿಂದಲೇ ಸರ್ವವಿಷಯದಲ್ಲೂ ತುಲ್ಯವಲ್ಲವೆಂಬುದು ತೋರಿಬರುತ್ತದೆ. ಈ ಇಬ್ಬರ ಆನಂದವು ಸಮವಾದುದರಿಂದ, ಅತ್ಯಂತ ತುಲ್ಯ ವೆಂದೂ ಪರಮಸಾಮ್ಯ ವೆಂದೂ ಹೇಳಲ್ಪಟ್ಟಿತು. ವ್ಯತ್ಯಾಸ ಯಾವ ಸಂದರ್ಭ ಗಳಲ್ಲೆಂಬುದು ಮುಂದೆ ಹೇಳಲ್ಪಡುತ್ತದೆ. ಭಗವತ್ಸ್ವರೂಪವು ತುಂಬಾ ಭೋಗ್ಯ ವಾದುದೆಂಬುದಕ್ಕೆ ನಮ್ಮಾಳ್ವಾರ್ರವರ ಪಾಶುರವನ್ನೂ ವಿಷ್ಣುಪುರಾಣ ಶ್ಲೋಕ ವನ್ನೂ ಉದಾಹರಿಸಿರುತ್ತಾರೆ. ನಮ್ಮಾಳ್ವಾರ್ರವರ ತಿರುವಾಯ್‌ಮೊಳಿಯ ಎರಡ ನೆಯ ಪಾಶುರವು:—

ಮನನಕ ಮಲಮರ ಮಲರ್ಮಿಶೈ ಯೆಳುದರು ।
ಮನನುಣರ್ವಳವಿಲನ್ ಪೊರಿಯುಣರ್ವವೈಯಿಲ ।
ನಿನನುಣರ್ ಮುಳುನಲ ಮೆದಿರ್ನಿಗಳ್ ವಿನು ।
ಮಿನನಿಲ ನೆನನುಯಿರ್ ಮಿಗುನರೈ ಯಿಲನೇ ॥

ಇದರರ್ಥವೇನೆಂದರೆ:—ಮನಸ್ಸಿನ ಮಲಗಳಾದ ಕಾಮ, ಕ್ರೋಧ, ಲೋಭ, ಹರ್ಷ, ಮಾನ, ಮದ, ಅಗುಣ, ವಿಷಾದವೆಂಬ ಎಂಟನ್ನೂ ಕಳೆದು ಕೊಂಡು, ಹಾಗೆ ಮಲಗಳು ನಾಶವಾಗುವದರಿಂದ ಪ್ರಕಾಶಿಸಿ ವೃದ್ಧಿ ಹೊಂದುವ, ಮಾನಸ ಜ್ಞಾನವಾದ ಯೋಗಬಲದಿಂದ ಪರಿಚ್ಛೇದಿಸುವ ಹಾಗೆ ತೋರುವನಾಗಿ, ಬಾಹ್ಯೇಂದ್ರಿಯ ಗೋಚರವಾದ ಪ್ರಕೃತಿಗಿಂತಲೂ ವಿಲಕ್ಷಣನಾಗಿ, ಹಾಗೆಯೇ ಈ ಅಣುತ್ವಾದಿ ಧರ್ಮಗಳುಳ್ಳ ಚೇತನನಿಗಿಂತಲೂ ವಿಲಕ್ಷಣನಾಗಿ, "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ಹೇಳಿರುವ ಹಾಗೆ ಸಂಪೂರ್ಣ ಜ್ಞಾನಸ್ವರೂ ಪನೂ, ಸಂಪೂರ್ಣಾನಂದಸ್ವರೂಪನೂ ಆದ, ಭೂತ ಭವಿಷ್ಯದ್ವರ್ತಮಾನ ಕಾಲ ಗಳಲ್ಲೂ ನಿಸ್ಸಮಾಭ್ಯಧಿಕನಾದ, ಸರ್ವೇಶ್ವರನೀಗ ನನಗೆ ಧಾರಕನು. ಇಲ್ಲಿ ಮುಳು ಎಂಬುದು ಮಧ್ಯೆ ಇರುವದರಿಂದ, ಮುಳು ಉಣರ್ ಮುಳುನಲಮ್ ಎಂದು ಇಟ್ಟುಕೊಳ್ಳತಕ್ಕದ್ದು. ಇದರಭಿಪ್ರಾಯವೇನೆಂದರೆ, ಸರ್ವದೇಶ ಸರ್ವ ಕಾಲ ಸರ್ವಾವಸ್ಥೆಯಲ್ಲೂ ಅಪ್ರಕಾಶ ಸ್ವರೂಪವೇಯಾಗಲಿ, ತನಗೆ ಅನುಕೂಲ ವಲ್ಲದೇ ಇರುವ ಸ್ವರೂಪವಾಗಲಿ ಇಲ್ಲವೆಂಬ ಭಾವವು. ಈ ಅಭಿಪ್ರಾಯಗಳನ್ನು "ಯಥಾ ಸೈನ್ಧವ ಘನಃ" "ಒಂದು ಹರಳು ಉಪ್ಪಿನಲ್ಲಿ ಎಲ್ಲವೂ ಹೇಗೆ ಉಪ್ಪೋ

(೨) ವಿ. ಪು. ೬. ೫. ೫೯.

ವೈಕಲಕ್ಷಣಾ । ಭೇಷಜಂ ಭಗವತ್ಪ್ರಾಪ್ತಿ ರೇಕಾನ್ತಾತ್ಯಂತಿಕೀಮತಾ" ಎನ್ರುಮ್, ಶೊಲ್ಲುಗಿರಪಡಿಯೇ ಭಗವತ್ಸ್ವರೂಪಮ್ ಭೋಗ್ಯಮಾಗ

ಹಾಗೆಯೇ" "ಆನನ್ದೋ ಬ್ರಹ್ಮೇತಿ ವ್ಯಜಾನಾತ್" "ಪರಮಾತ್ಮ ಸ್ವರೂಪವೇ ಆನಂದವೆಂದು ತಿಳಿಯತಕ್ಕದ್ದು" ಇತ್ಯಾದಿ ಶ್ರುತಿಗಳು ಹೇಳುತ್ತವೆ.

ವಿಷ್ಣುಪುರಾಣ ಶ್ಲೋಕಾರ್ಥವು :—"ನಿರಸ್ತಾತಿಶಯ - ಯಾವುದರಿಂದ ಬೇರೇ ಸುಖದ ಅತಿಶಯವು ನಿರಸ್ತವಾಯಿತೋ, ತಡೆಯಲ್ಪಟ್ಟಿತೋ, ಎಂದರೆ ನಿರತಿಶಯವಾದ ಎಂಬರ್ಥವು, ಅಂತಹ, ಆಹ್ಲಾದಸುಖ - ಆಹ್ಲಾದರೂಪ ಸುಖ, ಆಹ್ಲಾದವೆಂದರೆ ಇನ್ನು ಬೇರೆ ಸುಖಾನುಭವ ತನಗೆ ಬೇಕಿಲ್ಲದ ಹಾಗೆ ಉತ್ಕರ್ಷ ವನ್ನು ಹೊಂದಿರುವ ಸುಖವು. ಇಂತಹ ಸುಖದ ಭಾನ ವೆಂದರೆ ಆಹ್ಲಾದ ಮಾತ್ರ ವೇ ಇರುವದೇ ವಿನಾ ಇಲ್ಲಿನ ಸುಖದ ಹಾಗೆ ದುಃಖನಿವೃತ್ತಿ ರೂಪವಾದುದಲ್ಲವೆಂಬ ತಾತ್ಪರ್ಯವು. ಇಲ್ಲಿಯ ಸುಖವಾದರೋ "ದುಃಖಾನ್ತಪ್ರಭವಂ ಸುಖಂ" ಎಂದೂ, "ದುಃಖಸ್ಯಾನಂತರಂ ಸುಖಂ" ಎಂದೂ ಮಹರ್ಷಿಯು ಹೇಳಿರುತ್ತಾರೆ. (ಮೋಕ್ಷ ೧೮೩) ಹಾಗಲ್ಲವು. ಆಹ್ಲಾದ ಸುಖಭಾವವೇ, ಆದುದರಿಂದಲೇ ಏಕಲಕ್ಷಣಾ - ಇದೊಂದೇ ಲಕ್ಷಣವಾಗಿ ಉಳ್ಳದ್ದು, ವಿಷಯಾನುಭವ ಮಾಡಿದಹಾಗೆಲ್ಲಾ, ಇನ್ನೂ ಬೇಕು ಇನ್ನೂ ಬೇಕೆಂಬಭಿಲಾಷೆಯನ್ನು ಹೇಗೆ ವೃದ್ಧಿಗೊಳಿಸುತ್ತದೋ, ಹಾಗೆ ಈ ಪರಬ್ರಹ್ಮಪ್ರಾಪ್ತಿಯಿಂದುಂಟಾಗುವ ಆಹ್ಲಾದವು ಅನುಭವದಿಂದ ವೃದ್ಧಿ ಹೊಂದುತ್ತದೆಂಬ ಭಾವವು. ಈ ಭಗವತ್ಪ್ರಾಪ್ತಿ ಎಂಬ ಭೇಷಜಂ - ಔಷಧವು, ಯಾರಿಗೆ ಔಷಧವೆಂದರೆ ಶ್ರೀ ಪರಾಶರರು ಹೇಳುತ್ತಾರೆ :—ಸಂಸಾರ ದುಃಖಾರ್ಕ ತಾಪತಾಪಿತ ಚೇತಸಾಂ - ಸಂಸಾರದ ದುಃಖವೆಂಬ ಸೂರ್ಯನ ತಾಪದಿಂದ ಬೆಂದುಹೋದ ಮನಸ್ಸುಳ್ಳವರಿಗೆ ಇದು ತಾಪಶಮನರೂಪವಾದ ಪರಮೌಷಧ ವೆಂಬ ಭಾವವು. ಆ ಪ್ರಾಪ್ತಿ ಎಂಥಾದ್ದೆಂದರೆ, ಏಕಾಂತಾ - ಪ್ರಯೋಜನಾಂತರದ ಗಂಧ ಕೂಡ ಇಲ್ಲದಿರುವಂಥಾದ್ದು ಮತ್ತು, ಆತ್ಯಂತಕೀ - ಅಂತ್ಯವಿಲ್ಲದ ಹಾಗೆ ಇರುವಂಥಾದ್ದು ಎಂದರೆ ನಿತ್ಯವಾಗಿರುವಂಥಾದ್ದು. ಇಂತಹ ಭಗವತ್ಪ್ರಾಪ್ತಿಯು ಪರಮೌಷಧವೆಂಬುವದು, ಮತಾ - ನನ್ನಭಿಪ್ರಾಯವು. ಆ ಭಗವತ್ಪ್ರಾಪ್ತಿ, ಅದರಿಂದುಂಟಾಗುವ ಆಹ್ಲಾದಕ್ಕೆ ಎಂದಿಗೂ ಚ್ಯುತಿಯಿಲ್ಲವೆಂಬ ಭಾವವು ತೋರಿಬರುತ್ತದೆ" ಎನ್ರುಮ್ - ಎಂದು, ಶೊಲ್ಲುಗಿರಪಡಿಯೇ - ಹೇಳಿರುವ ಹಾಗೆ, ಭಗವತ್ಸ್ವರೂಪವು ಭೋಗ್ಯವಾದುದಾಗುತ್ತದೆ. ಇಂತಹ ಭಗವತ್ಸ್ವರೂಪಾನುಭವದಲ್ಲಿ ಮುಕ್ತನ ಆನಂದವು ಭಗವಂತನಾನಂದಕ್ಕೆ ಸಮಾನವಾದುದು ಎಂಬ ತಾತ್ಪರ್ಯವು.

ಪ್ರಾಪ್ತಮ್. ಮತ್ತುಳ್ಳವೈ ಭೋಗ್ಯಮಾವ್ಪಡಿ ಯೆಙ್ಙನೇ ಎನ್ನಿಲ್ ? ರಾಜಮಹಿಷಿಕ್ಕು ರಾಜಾ ಭೋಗ್ಯನಾನಾಲ್ ಅವನುಕ್ಕು ಅಭಿಮತಙ್ಗಳಾಯ್ ಅವನುಡೈಯ ಭೋಗತ್ತುಕ್ಕುರುಪ್ಪಾನ ಭೋಗೋಪಕರಣ ಭೋಗಸ್ಥಾನಾದಿಗಳುಮ್ ಇವಳುಕ್ಕು ಅನುಕೂಲಮಾಯಿರುಕ್ಕೆ ಮಾಪ್ಪೋಲೆ, ಇಙ್ಙುಮ್ ಭಗವತ್ಸ್ವರೂಪಾನುಬಂಧಿಗಳಾನವೈಯೆಲ್ಲಾಮ್

ಹೀಗೆ ಈ ವಾಕ್ಯದಿಂದ ಭಗವತ್ಸ್ವರೂಪವು ಮುಕ್ತನಿಗೆ ಭೋಗ್ಯವೆಂದು ಹೇಳಲ್ಪಟ್ಟಿತು. ಆದರೆ ಇದರ ಹಿಂದಿನ ವಾಕ್ಯದಲ್ಲಿ ಅನಂತಗಳಾದ ಗುಣವಿಭೂತಿ ಚೇಷ್ಟಿತಗಳೊಂದರಲ್ಲೂ ನ್ಯೂನತೆಯಿಲ್ಲದ ಹಾಗೆ ಭೋಗ್ಯವಾಗಿರುತ್ತದೆಂದು ಹೇಳಲ್ಪಟ್ಟಿತಲ್ಲಾ ; ಈ ಮಿಕ್ಕ ಗುಣವಿಭೂತಿ ಚೇಷ್ಟಿತಗಳೂ ಕೂಡ ಹೇಗೆ ಭೋಗ್ಯವು ಎಂದು ಕೇಳಬಹುದು. ಆದಕ್ಕೆ ಒಂದು ಲೋಕದೃಷ್ಟಾಂತ ಮೂಲಕ ಉತ್ತರವನ್ನೀಯುತ್ತಾರೆ.

ಮತ್ತುಳ್ಳವೈ - ಭಗವತ್ಸ್ವರೂಪವಲ್ಲದೆ ಮಿಕ್ಕ ವಿಶೇಷಣಗಳಾಗಿರುವ ಗುಣವಿಭೂತಿ ಚೇಷ್ಟಿತಗಳೆಲ್ಲಾ, **ಭೋಗ್ಯಮಾವ್ಪಡಿ ಎಙ್ಙನೇ ಎನ್ನಿಲ್** - ಹೇಗೆ ಭೋಗ್ಯವಾಗುತ್ತವೆ ? ಎಂದರೆ, **ರಾಜಮಹಿಷಿಕ್ಕು** - ರಾಜನ ಪಟ್ಟಮಹಿಷಿಗೆ, **ರಾಜಾ** - ರಾಜನು, **ಭೋಗ್ಯನಾದರೆ, ಅವನುಕ್ಕು** - ಆ ರಾಜನಿಗೆ, **ಅಭಿಮತಙ್ಗಳಾಯ್**-ಇಷ್ಟವಾದವುಗಳಾಗಿ, **ಅವನುಡೈಯ ಭೋಗತ್ತುಕ್ಕು**-ಆ ರಾಜನ ಭೋಗಕ್ಕೆ, **ಉರುಪ್ಪಾನ** - ಉಪಯುಕ್ತಗಳಾದ, **ಭೋಗೋಪಕರಣ** - ಭೋಗಸಾಮಗ್ರಿಗಳು, ವಾಹನ, ಧ್ವಜ, ಛತ್ರ, ಚಾಮರ, ಸಿಂಹಾಸನಾದಿಗಳು, **ಭೋಗಸ್ಥಾನಾದಿಗಳುಮ್** - ಉದ್ಯಾನವನ, ಪ್ರಾಸಾದ ಮೊದಲಾದವುಗಳು, **ಇವಳುಕ್ಕು**-ಈ ಮಹಾಪತಿವ್ರತೆಯಾದ ಪಟ್ಟಮಹಿಷಿಗೆ, **ಅನುಕೂಲಮಾಯಿರುಕ್ಕೆಮಾಪ್ಪೋಲೆ** - ಅನುಕೂಲವಾಗಿರುವ ಹಾಗೆ ಎಂದರೆ ಸುಖಕರವಾಗಿರುವ ಹಾಗೆ, **ಇಙ್ಙುಮ್** - ಈ ಸಂದರ್ಭದಲ್ಲೂ, **ಭಗವತ್ಸ್ವರೂಪಾನುಬಂಧಿಗಳಾನವೈ** - ಭಗವಂತನ ಸ್ವರೂಪಕ್ಕೆ ಸಂಬಂಧಪಟ್ಟ ವಿಶೇಷಣಗಳಾದ ಗುಣವಿಭೂತಿ ಚೇಷ್ಟಿತಗಳೆಲ್ಲಾ, **ಭೋಗ್ಯಮಾಗಕ್ಕುರೈಯಿಲ್ಲೈ** - ಈ ಮುಕ್ತನಿಗೆ ಭೋಗ್ಯವಾಗಿರಲು ಏನೊಂದೂ ಕುಂದಕವಿರುವದಿಲ್ಲವು. ಒಬ್ಬ ರಾಜನ ಪಟ್ಟಮಹಿಷಿಗೆ ರಾಜನು ತುಂಬಾ ಭೋಗ್ಯವಾಗಿದ್ದರೆ, ರಾಜನ ಭೋಗಕ್ಕೆ ಬೇಕಾದ ಭೋಗೋಪಕರಣ ಭೋಗಸ್ಥಾನಗಳೆಲ್ಲಾ ಹೇಗೆ ಆಕೆಗೂ ಅನುಕೂಲವಾಗಿ, ಸುಖರೂಪವಾಗಿ, ಭೋಗರೂಪವಾಗಿರುತ್ತವೆಯೋ ಹಾಗೆಯೇ ಸರ್ವೇಶ್ವರನ

ಭೋಗ್ಯವಾಗಕ್ಕುರೈ ಇಲ್ಲೈ. ಇಪ್ಪಡಿ ಸರ್ವಪ್ರಕಾರ ವಿಶಿಷ್ಟನಾಯ್
ಕ್ಕೊಂಡು ಸರ್ವೇಶ್ವರನ್ ಭೋಗ್ಯನೆನ್ರು ಮಿಡಮ್ ಶ್ರುತಿ ಸ್ಮೃತ್ಯಾದಿ

ಸ್ವರೂಪಕ್ಕೆ ಸೇರಿದ ಸಕಲ ವಿಶೇಷಣಗಳೂ ಕೂಡ ಭಗವತ್ಸ್ವರೂಪದೊಂದಿಗೆ ಭೋಗ್ಯಭೂತವಾದವುಗಳೇ ಎಂಬ ಭಾವವು. ರಾಜಭೋಗಗಳೂ ಭೋಗೋಪಕರಣಗಳೂ, ಭೋಗಸ್ಥಾನಗಳೂ ಕೂಡ ಪತಿವ್ರತೆಯಾದ ಪತ್ನಿಗೆ ಅನುಕೂಲವಾಗುತ್ತದೇ ವಿನಾ ದುಷ್ಟ ಸ್ತ್ರೀಯಾದ ಪತ್ನಿಯಲ್ಲಿ ವಿಪರೀತವಾದವುಗಳೇ ಆಗುತ್ತವೆ. ಮುಕ್ತನಿಗೂ ಪರಮೇಶ್ವರನಿಗೂ, ಪತಿಪತಿ ಸಂಬಂಧವಿರುವದರಿಂದ ದೃಷ್ಟಾಂತವು ಉಪಪನ್ನವು. ಇಲ್ಲಿ ಅನುಕೂಲವಾಗಿರುವಿಕೆಯೇ ಸುಖವೆಂದೂ ಭೋಗವೆಂದೂ ಹೇಳಿಸಿಕೊಳ್ಳಲ್ಪಡುತ್ತದೆ. ರಾಜಪತ್ನಿಗೆ ರಾಜನೂ ರಾಜನಿಗೆ ಸಂಬಂಧಪಟ್ಟ ಭೋಗೋಪಕರಣ ಭೋಗಸ್ಥಾನಾದಿಗಳೇನೋ ಒಂದು ಕಾಲದಲ್ಲಿ ಭೋಗ್ಯವಾಗಿರಬಹುದು. ಅನಂತರ ವೃದ್ಧತೆಯುಂಟಾಗಿ ಬೇಸರ ಅಥವಾ ವ್ಯಾಧಿಯು ಪ್ರಾಪ್ತವಾದರೆ ಆಗ ಭೋಗ್ಯವಿಲ್ಲದೆ ಹೋಗಬಹುದು. ಹಾಗೆ ಎಂದಿಗೂ ಇಲ್ಲವು ಎಂಬಭಿಪ್ರಾಯವು. ಪತಿವ್ರತಾ ಶಿರೋಮಣಿಯೂ ಕೂಡ ಹಾಗೆ ಎಂದಿಗೂ ಬೆಹಾಸೆಯನ್ನು ತೋರುವದಿಲ್ಲವು. ಪತಿವ್ರತಾ ಧರ್ಮಕ್ಕೆ ಪ್ರಥಮೋದಾಹರಣೆಯಾದ ಸೀತೆಯೇ ಹಾಗೆ ಹೇಳಿಕೊಂಡಿರುತ್ತಾಳೆ. ಕೌಸಲ್ಯೆಯು ಸೊಸೆಯನ್ನು ಕುರಿತು ಹೇಳುತ್ತಾಳೆ. ಓ ಸೀತೆಯೇ ನಿನ್ನ ಪತಿಯು ರಾಜಕುಮಾರನೆಂದೆಣಿಸಿ ಸಮಸ್ತ ರಾಜಭೋಗಗಳನ್ನೂ ಅನುಭವಿಸುತ್ತಿರುವಾಗ ನೀನು ಆತನಿಗೆ ಶುಶ್ರೂಷಾದಿಗಳನ್ನು ಮಾಡುತ್ತಿದ್ದುದು ದೊಡ್ಡದಲ್ಲವು. ಈಗ ವನಚಾರಿಯಾಗಿ ನಾರುಮಡಿಯನ್ನುಟ್ಟು ಕಂದಮೂಲಾದಿಗಳನ್ನು ತಿನ್ನುತ್ತಾ ಪೃಥ್ವೀಶಯ್ಯನಾಗಿರುವಾಗಲೂ ಪತಿಯನ್ನು ತುಚ್ಛವಾಗಿ ಕಾಣದೆ ಶುಶ್ರೂಷಾದಿಗಳನ್ನು ಮಾಡುವದು ಯುಕ್ತವು, ಎನ್ನಲು, ಅದಕ್ಕೆ ಸೀತೆಯು ಹೇಳುತ್ತಾಳೆ :—

ಮಿತಂದದಾತಿ ಹಿ ಪಿತಾ ಮಿತಂ ಮಾತಾ ಮಿತಂ ಸುತಃ ।
ಅಮಿತಸ್ಯ ಚ ದಾತಾರಂ ಭರ್ತಾರಂ ಕಾನಪೂಜಯೇತ್ ॥

ಅಮಿತವಾಗಿ ಕೊಡುವ ದಾತೃವು ಭರ್ತಾ. ಅಂತವನನ್ನು ಯಾರೇ ಆಗಲಿ ಪೂಜಿಸದೇ ಇರುವರೇ? ಎಂದು ಉತ್ತರ ಹೇಳಿದ್ದಲ್ಲದೆ, ಶ್ರೀರಾಮನೊಂದಿಗೆ "ಯಸ್ತ್ವಯಾ ಸಹ ಸಸ್ವರ್ಗೋ ನಿರಯೋಯಂ ತ್ವಯಾ ವಿನಾ" ಎಂದು ಹೇಳಿರುವ ಹಾಗೆ ಇರುವ ಭೋಗಸ್ಥಾನವೇ ಸ್ವರ್ಗವು, ಆತನೊಂದಿಗಿಲ್ಲದಿರುವ ಸ್ಥಳವೇ ತನಗೆ ನರಕವು. ಇದು ಕಾಲ ಅವಸ್ಥೆಗಳಿಗೂ ಉಪಲಕ್ಷಣವು.

ಹೀಗೆ ಸರ್ವವಿಶೇಷಣಗಳೊಂದಿಗೆ ಯುಕ್ತನಾಗಿ ಸದಾ ಸರ್ವೇಶ್ವರನು ಭೋಗಭೂತನೆಂಬುದಕ್ಕೆ ಶಾಸ್ತ್ರಪ್ರಮಾಣಗಳುಂಟೆಂದು ಮುಂದೆ ತಿಳಿಸುತ್ತಾರೆ. **ಇಪ್ಪಡಿ**-ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಸರ್ವಪ್ರಕಾರ ವಿಶಿಷ್ಟನಾಯ್‌ಕ್ಕೊಂಡು**-ಸಮಸ್ತ ರೂಪಗುಣ ವಿಭವೈಶ್ವರ್ಯಾದಿ ವಿಶೇಷಗಳಿಂದ ಯುಕ್ತನಾಗಿ, ಲಕ್ಷ್ಮೀ ವಿಶಿಷ್ಟತೆಯೂ ಕೂಡ ಇದರಿಂದ ಹೇಳಿದಂತಾಯಿತು, **ಸರ್ವೇಶ್ವರನ್** - ಶ್ರೀ ವಾಸುದೇವನು, **ಭೋಗ್ಯನು**, **ಎನ್ನುಮಿಡಂ** – ಎನ್ನುವ ಪ್ರಮಾಣವು, ಶ್ರುತಿ ಸ್ಮೃತಿ ಮೊದಲಾದವುಗಳು, ಇಲ್ಲಿ ಆದಿಶಬ್ದದಿಂದ ಇತಿಹಾಸ ಪುರಾಣಗಳೂ ಹೇಳಲ್ಪಟ್ಟವು, **ಪ್ರಸಿದ್ಧಮ್** - ಪ್ರಸಿದ್ಧವಾದುದು, ನಿರ್ವಿವಾದವಾಗಿ ಸ್ಥಾಪಿತವಾದುದು ಎಂಬ ಭಾವವು. ಈ ವಿಷಯದಲ್ಲಿ ಕೆಲವರು ಸಂದೇಹಪಟ್ಟು ಆತನು ನಿರ್ವಿಶೇಷನೆಂದು ಹೇಳುವದು ಸುತರಾಂ ಸರಿಯಲ್ಲವೆಂಬಭಿಪ್ರಾಯವು. ಶ್ರುತಿ ಪ್ರಮಾಣಗಳು ಯಾವುವೆಂದರೆ :—

೧. **"ಸೋಽಶ್ನುತೇ ಸರ್ವಾ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ"** (ತೈ. ಆನಂದ. ೧) ಮುಕ್ತಾತ್ಮನು, ಸರ್ವವಿಧವಾಗಿ ನೋಡುವ ಎಂದರೆ ಸಙ್ಕಲ್ಪಿಸುವ ಪರಬ್ರಹ್ಮನೊಂದಿಗೆ ಆತನ ಕಲ್ಯಾಣಗುಣಗಳೇ ಮೊದಲಾದವುಗಳನ್ನು ಭೋಗ್ಯವಾದುವಾಗಿ ಅನುಭವಿಸುವನು.

೨. **"ರಸಗ್ಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ"** (ತೈ. ಆನಂದ. ೭. ೧) ಈ ಮುಕ್ತನು ಆನಂದಸ್ವರೂಪನನ್ನು ಮತ್ತು ಆನಂದಗುಣಕನನ್ನು ಪ್ರಾಪ್ಯವಾಗಿ ಹೊಂದಿ, ನಿರತಿಶಯಾನಂದ ಹೊಂದಿದವನಾಗುವನು.

೩. **"ನಪಶ್ಯೋ ಮೃತ್ಯುಂ ಪಶ್ಯತಿ ನರೋಗನ್ನೋತ ದುಃಖತಾಂ ಸರ್ವಂ ಹ ಪಶ್ಯಃ ಪಶ್ಯತಿ ಸರ್ವಮಾಪ್ನೋತಿ ಸರ್ವಶಃ"** (ಛಾಂ. ೭. ೨೬. ೨) ಬ್ರಹ್ಮವಿತ್ತಾದ ಮುಕ್ತನು ಮರಣವನ್ನೇಯಾಗಲಿ, ರೋಗವನ್ನೇಯಾಗಲಿ, ಈ ಜಗತ್ತಿನಲ್ಲಿ ಕಾಣಬರುವ ಕ್ಲೇಶಗಳನ್ನೇಯಾಗಲಿ ಕಾಣುವದಿಲ್ಲವು; ಎಂದರೆ ಸಂಕಲ್ಪಮಾತ್ರದಿಂದಲೇ ಸಂಕಲ್ಪಿಸಿದುದನ್ನೆಲ್ಲಾ ಅನುಭವಿಸುವನು. ಜಗತ್ತೂ ಕೂಡ ಬದ್ಧನ ಹಾಗೆ ಈತನಿಗೆ ಪ್ರತಿಕೂಲವಲ್ಲವು. ಪಿತ್ತರೋಗಿಗೆ ಹಾಲು ಕಹಿ, ಆ ರೋಗವಿಲ್ಲದವನಿಗೆ ಹಾಲು ಹೇಗೆ ಭೋಗ್ಯವೋ ಹಾಗೆ ಎಂಬಭಿಪ್ರಾಯವು.

ಸ್ಮೃತಿಗಳು :—

೧. **"ಇದಂ ಜ್ಞಾನ ಮುಪಾಶ್ರಿತ್ಯ ಮಮಸಾಧರ್ಮ್ಯಮಾಗತಾಃ । ಸರ್ಗೇಪಿ ನೋಪಜಾಯನ್ತೇ ಪ್ರಳಯೇ ನವ್ಯಥನ್ತಿ ಚ"** ಈ ಮುಂದೆ ನಾನು ಉಪಪಾದಿಸಿ ಹೇಳುವ ಜ್ಞಾನವನ್ನಾಶ್ರಯಿಸಿ ಗುಣಾಷ್ಟಕ ಆವಿರ್ಭಾವ ಸ್ವಸ್ವರೂಪಾವಿರ್ಭಾವ ಇವುಗಳು ಉಂಟಾಗುವದರಿಂದ ನನ್ನೊಂದಿಗೆ ಸಮಾನವಾದ

ಗಳಿಲೇ ಪ್ರಸಿದ್ಧಮ್. ಇವ್ವರ್ಥತ್ತೈ ಭೂಮಾಧಿಕರಣತ್ತಿಲೇ ಸಾಧಿತ್ತರುಳಿನಾರ್.

ಭೋಗ, ಆನಂದವನ್ನು ಹೊಂದಿದವರು ಸೃಷ್ಟಿಯಲ್ಲಿ ಪುನಃ ಹುಟ್ಟುವದಿಲ್ಲವು, ಪ್ರಳಯಕ್ಕೆ ಸಿಕ್ಕಿ ಕ್ಲೇಶಪಡುವದಿಲ್ಲವು.

ಹೀಗೆ ಸರ್ವವಿಶೇಷಣಗಳಿಂದಲೂ ಯುಕ್ತನಾದ ಸರ್ವೇಶ್ವರನು ಮುಕ್ತನಿಗೆ ಪರಮಭೋಗ್ಯನಾಗಿರುವನು ಎಂದು ಹೇಳಿದುದಕ್ಕೆ ಶ್ರುತಿ ಸ್ಮೃತಿ ಪ್ರಮಾಣಗಳೇನೋ ಉಂಟು ಎಂದು ಒಪ್ಪತಕ್ಕದ್ದೇ. ಆದರೆ ಶ್ರೀ ಯತಿವರ್ಯರೂ ಹೀಗೆಯೇ ಅಭಿಪ್ರಾಯಪಟ್ಟಿದ್ದಾರೋ? ಎಂದರೆ, ಅವರೂ ಶ್ರೀ ಭಾಷ್ಯದಲ್ಲಿ ಭೂಮಾಧಿಕರಣದಲ್ಲಿ ಹಾಗೆಯೇ ಉಪಪಾದಿಸಿರುತ್ತಾರೆಂದು ತಿಳಿಸುತ್ತಾರೆ.

ಇವ್ವರ್ಥತ್ತೈ - ಹೀಗೆ ಸರ್ವಪ್ರಕಾರ ವಿಶಿಷ್ಟನಾದ ಸರ್ವೇಶ್ವರನೇ ಭೋಗ್ಯಭೂತನೆಂಬಭಿಪ್ರಾಯವನ್ನು, **ಭೂಮಾಧಿಕರಣತ್ತಿಲೆ**-ವ್ಯಾಸಸೂತ್ರದ ಭೂಮಾಧಿಕರಣದ ಭಾಷ್ಯದಲ್ಲಿ, **ಸಾಧಿತ್ತು ಅರುಳಿನಾರ್** - ಸ್ಥಾಪಿಸಿ ಕೃಪೆಗೈದಿರುತ್ತಾರೆ. ಈ ಭೂಮಾಧಿಕರಣದ ಸೂತ್ರವು ಯಾವುದೆಂದರೆ:—**ಭೂಮಾ ಸಂಪ್ರಸಾದಾದಧ್ಯುಪದೇಶಾತ್** - ಭೂಮ ಶಬ್ದವಾಚ್ಯನು ಅಥವಾ ಭೂಮಗುಣ ವಿಶಿಷ್ಟನು ಪರಮಾತ್ಮನು ಜೀವಾತ್ಮನಲ್ಲವು; ಏಕೆಂದರೆ ಈತನು, **ಸಂಪ್ರಸಾದಾಧಿ** - ಈ ಜೀವಾತ್ಮನಿಗಿಂತ ಅಧಿಕನೆಂದು, **ಉಪದೇಶಾತ್** - ಶ್ರುತಿಯಲ್ಲಿ ಉಪದೇಶಿಸಿರುವದರಿಂದ **ಭೂಮಾ** ಶಬ್ದಕ್ಕೆ ಅರ್ಥವೇನೆಂದರೆ:—"**ಯತ್ರ ನಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ ಸಭೂಮಾ**" "**ಯತ್ರ** - ಯಾವ ಪ್ರಸಿದ್ಧನಾದ ಪರಮಾತ್ಮನೆಂಬ ವಸ್ತುವು, **ಅನುಭೂಯಮಾನೇಸತಿ**-ಅನುಭವಿಸಲ್ಪಡಲಾಗಿ, ಆತನಿಗಿಂತ ಬೇರೆಯಾವುದೂ ನೋಡಲ್ಪಡುವದೂ ಇಲ್ಲವೋ, ಕೇಳಲ್ಪಡುವದೂ ಇಲ್ಲವೋ, ತಿಳಿಯಲ್ಪಡುವದೂ ಇಲ್ಲವೋ, ಅಂತಹ ವಸ್ತುವು **ಭೂಮಾ** ಎಂದು ಹೇಳಿಸಿಕೊಳ್ಳುತ್ತದೆ." ಮತ್ತು "**ಅಥ ಯತ್ರಾನ್ಯತ್ಪಶ್ಯತಿ ಅನ್ಯಚ್ಛೃಣೋತಿ ಅನ್ಯದ್ವಿಜಾನಾತಿ ತದಲ್ಪಂ**" "ಯಾವ ವಸ್ತುವನ್ನನುಭವಿಸಿದ ನಂತರ ಅದಕ್ಕಿಂತಲೂ ಬೇರೆಯಾದುದು ಕಾಣಬೇಕು, ಕೇಳಬೇಕು, ತಿಳಿಯಬೇಕೆಂದಾಗುತ್ತದೋ ಆ ವಸ್ತುವು ಅಲ್ಪವಾದುದು" (ಛಾಂ. ೭. ೨೪ ೧) ಎಂದು ಉಪನಿಷತ್ತು ಹೇಳುತ್ತದೆ. ಅನವಧಿಕಾತಿಶಯ ಸುಖರೂಪನಾದ ಪರಬ್ರಹ್ಮನನ್ನನುಭವಿಸಿದ ನಂತರ, ಇನ್ನ್ಯಾವದನ್ನೂ ಕೂಡ ಕಣ್ಣೆತ್ತಿ ಮುಕ್ತನು ನೋಡನು. ಆದುದರಿಂದ ಈ ಮುಕ್ತನೂ ಆತನ ವಿಭೂತಿಗೆ ಸೇರಿದವನಾಗಿ ಆತನ ಸ್ವರೂಪ

ದೊಂದಿಗೆ ಗುಣವಿಭೂತಿ ಐಶ್ವರ್ಯಗಳನ್ನೂ ಅನುಭವಿಸುವನಾಗಿ, ತದ್ವ್ಯತಿರಿಕ್ತವಾದವುಗಳೊಂದನ್ನೂ ಕೂಡ ಕಣ್ಣೆತ್ತಿ ನೋಡನು. ಏಕೆಂದರೆ ಮಿಕ್ಕಿದ್ದೆಲ್ಲವೂ ಅತಿ ತುಚ್ಛವಾದವು. ಈ ಮುಕ್ತ ದೆಶೆಯಲ್ಲಿ ಅನುಭವಿಸುವದೆಲ್ಲಾ ಅನುಕೂಲವಾದವುಗಳಾಗಿ ನಿರತಿಶಯ ಸುಖರೂಪವಾದವು, ಪ್ರತಿಕೂಲವೇ ಇಲ್ಲದುದರಿಂದ ದುಃಖ ಗಂಧವೂ ಇಲ್ಲವು.

ಆದರೆ ಈ ಜಗತ್ತೂ ಪರಮಾತ್ಮನ ವಿಭೂತಿಯಲ್ಲೇ ಅಂತರ್ಗತವಾದರೂ ಪರಮಾತ್ಮನಿಗಿಂತಲೂ ಬೇರೆಯಾದುದೇ. ಇದರನುಭವವು ಪರಿಮಿತ ಸುಖರೂಪವಾಗಿಯೂ ದುಃಖಮಿಶ್ರವಾಗಿಯೂ ಇರುವಂಥಾದ್ದು, ಹೀಗಿರುವಂಥಾದ್ದೂ ಕೂಡ ಮುಕ್ತನಿಗೆ ಸುಖರೂಪವಾದುದು ಹೇಗೆ ಎಂಬಾಕ್ಷೇಪವು ತೋರಬಹುದು. ಇದಕ್ಕೆ ಹಿಂದೆ ಉದಾಹರಿಸಿರುವ ಶ್ರುತಿಯೇ ಸಮಾಧಾನವನ್ನು ಹೇಳುತ್ತದೆ. ಕರ್ಮವಶ್ಯನಾದವನು ಈ ಜಗತ್ತು ಪರಮಾತ್ಮನಿಗಿಂತ ಸಂಪೂರ್ಣವಾಗಿ ಬೇರೆಯಾದುದೆಂದು ಭಾವಿಸಿ ಅನುಭವಿಸುವದರಿಂದ, ಕರ್ಮಾನುರೂಪವಾಗಿ ಪರಿಮಿತ ಸುಖರೂಪವಾದುದಾಗಲಿ, ದುಃಖರೂಪವಾದುದಾಗಲಿ ಆಗುತ್ತದೆ. ಮುಕ್ತದೆಶೆಯಲ್ಲಿ ಈ ಕರ್ಮವೆಂಬ ವ್ಯಾಧಿಯು ತೊಲಗುವದರಿಂದ ಸರ್ವೇಶ್ವರನ ವಿಭೂತಿಯನ್ನೆಲ್ಲಾ ಸರ್ವೇಶ್ವರನೊಂದಿಗೆ ಸಾಕ್ಷಾತ್ಕರಿಸುವದರಿಂದ ನಿರತಿಶಯ ಸುಖವೇ ವಿನಾ ದುಃಖರೂಪವಲ್ಲವು. ಇದಕ್ಕೆ ಶ್ರೀ ಭಾಷ್ಯಕಾರರು ಕೊಟ್ಟ ದೃಷ್ಟಾಂತವು ಮೇಲೆ ಹೇಳಲ್ಪಟ್ಟಿತು. ಪಿತ್ತವ್ಯಾಧಿಪೀಡಿತನಿಗೆ ಹಾಲು ಕಹಿಯಾಗಿ ತೋರುತ್ತದೆ. ಆ ವ್ಯಾಧಿಯಿಂದ ನಿವೃತ್ತನಾದವನಿಗೆ ಹೇಗೆ ಅದೇ ಸ್ವಾದುವಾಗುತ್ತದೋ ಹಾಗೆ ಎಂಬ ಭಾವವು. ಈ ಸಂದರ್ಭದಲ್ಲೇ ಈ ಆಕ್ಷೇಪವು ತೋರಬಹುದಾದುದರಿಂದ ವಿವರಿಸಿರುತ್ತದೆ. ಸ್ವಾಮಿ ದೇಶಿಕರವರೇ ಮುಂದೆ ಚೆನ್ನಾಗಿ ಉಪಪಾದನೆ ಮಾಡುತ್ತಾರೆ.

ಇಂತಹ ನಿರತಿಶಯ ಭೋಗ್ಯತ್ವವು ಭಗವತ್ಸ್ವರೂಪ ಗುಣವಿಭೂತಿಗಳುಳ್ಳ ಭೋಗೋಪಕರಣ ಭೋಗಸ್ಥಾನಗಳನ್ನೂ ಉಳ್ಳ ದಿವ್ಯ ವೈಕುಂಠದಲ್ಲಿರುವದರಿಂದ ಇದಕ್ಕೆ ಪರಮಪದವೆಂಬ ಹೆಸರೆಂದು ತಿಳಿಸುವವರಾಗಿ, ಅಂತಹ ಭೋಗ್ಯತ್ವವಿರುವದರಿಂದ ಪರಮಪದಕ್ಕೆ ರೂಢಿಯಿಂದಲೂ ವ್ಯುತ್ಪತ್ತಿ ಮೂಲಕವಾಗಿಯೂ ಮೂರು ಅರ್ಥಗಳೆಂದು ತಿಳಿಸುತ್ತಾರೆ. (೧) ನಿರತಿಶಯಾನಂದ ರೂಪವಾದ ಪ್ರಾಪ್ಯವಾದ ಭಗವತ್ಸ್ವರೂಪಕ್ಕೂ, (೨) ನಿರತಿಶಯಾನಂದ ಸ್ಥಾನವಾದ ದಿವ್ಯ ವೈಕುಂಠಕ್ಕೂ, (೩) ಅಂತಹ ಸ್ಥಳವನ್ನು ಸೇರಿ ಅಂತಹ ಪ್ರಾಪ್ಯವನ್ನು ಹೊಂದಿ ನಿರತಿಶಯಾನಂದವನ್ನು ಹೊಂದುವ ಮುಕ್ತನಿಗೂ ಪರಮಪದ ಶಬ್ದವು ಅನ್ವಯಿಸುತ್ತದೆಂದು ಉಪದೇಶಿಸುತ್ತಾರೆ.

ಪರಮುಪದ ಶಬ್ದಸ್ಯ ತ್ರಯಃ ಅರ್ಥಾಃ

ಇವತ್ತಿಲ್ ನಿರತಿಶಯಾನುಕೂಲತ್ತಾಲೆ ಪರಮು ಪ್ರಾಪ್ಯಮಾಗ್ಯೆಯಾಲೆ ಭಗವತ್ಸ್ವರೂಪತ್ತೈ ಪರಮುಪದಮೆಜ್ಗಿರದು. ಇಬ್ಭಗವತ್ಸ್ವರೂಪತ್ತಿನುಡೈಯ ಪರಿಪೂರ್ಣಾನುಭವಮ್ ಪೆರುವದು, ಭೋಗ್ಯತಮಮಾಯ್ ಸರ್ವೋತ್ತರಮಾಯ್ ಇರುಪ್ಪದೊರುಸ್ಥಾನ ವಿಶೇಷತ್ತಿಲೆ ಶೆನ್ರಾಲಾಗೈಯಾಲೇ, ಅನ್ದ ಸ್ಥಾನವಿಶೇಷತ್ತೈಯುಮ್ ಪರಮುಪದಮ್

ಪರಮುಪದ ಶಬ್ದದ ಮೂರು ವಿಧವಾದ ಅರ್ಥಗಳು.

೧. ಇವತ್ತಿಲ್-ಈ ಪರಬ್ರಹ್ಮನ ದಿವ್ಯಾತ್ಮಸ್ವರೂಪ ವಿಗ್ರಹಗುಣ ವಿಭೂತ್ಯಾದಿಗಳ, ನಿರತಿಶಯಾನುಕೂಲತ್ತಾಲೆ - ಸರ್ವೋತ್ಕೃಷ್ಟ ಅನುಕೂಲ ಮೂಲಕವಾಗಿ, ಪರಮುಪ್ರಾಪ್ಯಮಾಗ್ಯೆಯಾಲೆ ಪರಮಪ್ರಾಪ್ಯವಾಗುವದರಿಂದ, ಯಾವದಕ್ಕಿಂತ ಉತ್ಕೃಷ್ಟವಾದುದಿಲ್ಲವೋ ಅದು ಪರಮ ವೆಂದು ಹೇಳಿಸಿಕೊಳ್ಳುತ್ತದೆ, ಭಗವತ್ಸ್ವರೂಪತ್ತೈ-ಭಗವಂತನ ಸ್ವರೂಪವನ್ನು, ಪರಮುಪದಮೆಜ್ಗಿರದು - ಪರಮಪದವೆಂದು ಹೇಳುವದು. ಶ್ರಿಯಃಪತಿಗೂ ಪರಮಪದವೆಂಬ ಹೆಸರು. ಎಲ್ಲವೂ ಅನುಕೂಲವಾಗಿ ತನ್ಮೂಲಕ ನಿರತಿಶಯ ಸುಖರೂಪವಾಗಿ ಪರಮಪ್ರಾಪ್ಯವಾಗಿರುವದರಿಂದ ಪರಮಪದ ವೆಂದು ಆತನು ಹೇಳಲ್ಪಡುವನು. ಪದ್ಯತೇ ಎಂದರೆ ಗಮ್ಯತೇ - ಚೇತನನಿಂದ ಪ್ರಾಪ್ಯವಾಗಿ ಹೊಂದಲ್ಪಡುವನು, ಆದುದರಿಂದ ಪರಮಪದವೆಂಬ ಪ್ರಯೋಗವು.

೨. ಇಬ್ಭಗವತ್ಸ್ವರೂಪತ್ತಿನುಡೈಯ - ಈ ಭಗವತ್ಸ್ವರೂಪದ, ಪರಿಪೂರ್ಣಾನುಭವವನ್ನು, ಪೆರುವದು - ಹೊಂದುವದು, ಭೋಗ್ಯತಮವಾಗಿ, ಸರ್ವೋತ್ತರಮಾಯ್ - ಸರ್ವೋತ್ಕೃಷ್ಟವಾಗಿ, ಇರುಪ್ಪದು - ಇರಬೇಕಾದುದು, ಒರು ಸ್ಥಾನವಿಶೇಷತ್ತಿಲ್-ಒಂದು ಪ್ರಸಿದ್ಧವಾದ ಸ್ಥಾನದಲ್ಲಿ, ಶೆನ್ರಾಲ್ ಆಗೈಯಾಲೇ - ಸೇರಿದರೇನೆ ಪ್ರಾಪ್ತವಾಗುವದರಿಂದ, ಅನ್ದ ಸ್ಥಾನವಿಶೇಷತ್ತೈಯುಮ್ - ಅಂತಹ ಸ್ಥಾನವಿಶೇಷವನ್ನೂ, ಪರಮುಪದ ವೆಂದು, ಎಜ್ಗಿರದು - ಹೇಳುವದು. ಒಂದು ದೇಶವಿಶೇಷವು ಪ್ರಾಪ್ಯವಾದರೇನೇ ಭಗವಂತನ ಪರಿಪೂರ್ಣಾನುಭವವು ದೊರೆತು ಅದು ಪರಮ ಭೋಗ್ಯವಾಗುತ್ತದೆ. ಅಂತಹ ಸ್ಥಳವು ದಿವ್ಯ ವೈಕುಂಠವು, ಇದಕ್ಕೂ ಪರಮಪದವೆಂದು ಹೆಸರು.

ಎಜ್ಗ್ರದು. ಇವ್ವನುಭವತ್ತುಕ್ಕು ಆಶ್ರಯಮಾಯ್‌ಕ್ಕೊಣ್ಡು ಅನುಭಾವ್ಯಮಾಗೈಯಾಲೇ ಭಗವದ್ವಿಭೂತಿ ಭೂತಮಾಯ್ ಜ್ಞಾನಾನಂದ ಲಕ್ಷಣಮಾನ ತರ್ಸ್ವರೂಪತ್ತೈಯುಂ ಪರಮಪದಮ್ ಎಜ್ಗ್ರದು. ಇವ್ವೈಮೂನ್ರುಕ್ಕುಂ ಮತ್ತುಮುಳ್ಳವತ್ತುಕ್ಕುಮ್ ಪ್ರಾಪ್ಯತ್ವಮಾತ್ರ ಮವಿಶಿಷ್ಟಮ್,

---

ಪದ್ಯತೇ ಅಸ್ಮಿನ್ ಎಂಬ **ವ್ಯುತ್ಪತ್ತಿ**ಮೂಲಕ, ಎಲ್ಲಿ ಪ್ರಾಪ್ಯದ ಪ್ರಾಪ್ತಿಯುಂಟೋ ಅದು ಪರಮಪದವು.

೩. ಮೂರನೆಯ ಅರ್ಥವನ್ನು ಬೋಧಿಸುತ್ತಾರೆ. **ಇವ್ವನುಭವತ್ತುಕ್ಕು**- ಈ ಪರಿಪೂರ್ಣ ಬ್ರಹ್ಮಾನುಭವಕ್ಕೆ, **ಆಶ್ರಯಮಾಯ್‌ಕ್ಕೊಂಡು** - ಆಶ್ರಯವಾಗಿ, **ಅನುಭಾವ್ಯಮಾಗೈಯಾಲೇ** - ಅನುಭವಿಸಲು ಯೋಗ್ಯವಾದುದರಿಂದ, **ಭಗವದ್ವಿಭೂತಿ ಭೂತಮಾಯ್** - ಭಗವಂತನ ನಿಯಾಮ್ಯವರ್ಗಕ್ಕೆ ಸೇರಿದುದಾಗಿ, **ಜ್ಞಾನಾನಂದ ಲಕ್ಷಣಮಾನ** - ಜ್ಞಾನತ್ವ ಆನಂದತ್ವಗಳೇ ಲಕ್ಷಣವಾಗಿಯುಳ್ಳ (ಸ್ವರೂಪವನ್ನು ನಿರ್ಧರಿಸುವ ಲಕ್ಷಣಗಳು ಇವು ಎಂಬ ಭಾವವು), **ತರ್ಸ್ವರೂಪತ್ತೈಯುಮ್** - ಮುಕ್ತನಾದ ತನ್ನ ಸ್ವರೂಪವನ್ನೂ ಸಹ, **ಪರಮಪದಮ್ ಎಜ್ಗ್ರದು** - ಪರಮಪದವೆಂದು ಹೇಳತಕ್ಕದ್ದಾಗಿದೆ. ಗುಣಾಷ್ಟಕಾವಿರ್ಭಾವ ಸ್ವಸ್ವರೂಪಾವಿರ್ಭಾವಗಳುಳ್ಳ ಮುಕ್ತದೆಶೆಯಲ್ಲಿನ ತನ್ನ ಸ್ವರೂಪವು ಈಗ ಚನ್ನಾಗಿ ಪ್ರಕಾಶಿಸುವ ಸ್ಥಿತಿಯಲ್ಲಿದ್ದು, ಪರಿಪೂರ್ಣ ಬ್ರಹ್ಮಾನುಭವಕ್ಕೆ ಆಶ್ರಯವಾಗಿರುವದು, ತನ್ನ ಸ್ವರೂಪವೂ ಸಹ ಪರಮಪ್ರಾಪ್ಯವಾಗಿ ಅನುಭಾವ್ಯವಾದುದರಿಂದ ಪರಮಪದವೆಂಬ ಶಬ್ದವು ಇದಕ್ಕೂ ಅನ್ವಯಿಸುತ್ತದೆಂಬ ತಾತ್ಪರ್ಯವು.

ಇವ್ವೈ ಮೂನ್ರುಕ್ಕುಮ್ - ಭಗವತ್ಸ್ವರೂಪ, ದಿವ್ಯವೈಕುಂಠ, ಮುಕ್ತಾತ್ಮಸ್ವರೂಪ, ಹೀಗೆ ಈ ಮೂರಕ್ಕೂ, **ಮತ್ತುಮುಳ್ಳವತುಕ್ಕುಮ್** - ಮತ್ತೂ ಮಿಕ್ಕವುಗಳಾದ ಕಲ್ಯಾಣಗುಣ, ವಿಭೂತಿ ಚೇಷ್ಟಿತಗಳಿಗೂ ಕೂಡ, **ಪ್ರಾಪ್ಯತ್ವಮಾತ್ರವೇ, ಅವಿಶಿಷ್ಟಮ್** - ವಿಶೇಷವಿಲ್ಲದುದು ಎಂದರೆ ಎಲ್ಲಕ್ಕೂ ಸಾಧಾರಣವಾದುದು ಈ ಮೂರರಲ್ಲೂ ಇರುವ ಭೋಗ್ಯಭಾವವು ಮಾತ್ರ ಭಗವತ್ಸ್ವರೂಪಕ್ಕೂ ಅದಕ್ಕೆ ಸಂಬಂಧಿಸಿದ ವಿಗ್ರಹಗುಣ ವಿಭೂತಿಗಳಿಗೂ ಸಮವೆಂದು ಹೇಳಲ್ಪಟ್ಟಿತು.

ನಿತ್ಯವಿಭೂತಿಯೇನೋ ನಿರತಿಶಯ ಸುಖರೂಪವಾಗಿ ಭೋಗ್ಯವಾದುದೆಂಬುದನ್ನು ಒಪ್ಪತಕ್ಕದ್ದು. ಲೀಲಾವಿಭೂತಿಯು ಅನಿತ್ಯವಾದ ಅಲ್ಪಸುಖರೂಪವಾಗಿಯೂ ದುಃಖಬಾಹುಳ್ಯವುಳ್ಳದ್ದಾಗಿಯೂ ಇರುವದೆಂಬುದು ಪ್ರತ್ಯಕ್ಷಸಿದ್ಧವಾಗಿರು

ಮುಕ್ತಸ್ಯ ಲೀಲಾವಿಭೂತಿರಪ್ಯನುಕೂಲಾ

ಇಪ್ಪಡಿ ಭಗವತ್ಸ್ವರೂಪ ಗುಣವಿಗ್ರಹಾದಿಗಳುಮ್, ಶುದ್ಧ ಸತ್ವಾಶ್ರಯಮಾನ ನಿತ್ಯವಿಭೂತಿಯುಮ್, ಸ್ವಸ್ವರೂಪಮುಮ್ ಭೋಗ್ಯಮಾನಾಲುಮ್, ಪ್ರತಿಕೂಲಮಾಗ ಪ್ರತ್ಯಕ್ಷಾದಿ ಪ್ರಮಾಣ ಸಿದ್ಧಮಾಯ್ ಮುಮುಕ್ಷುವುಕ್ಕು ತ್ಯಾಜ್ಯಮಾಕ ಶಾಸ್ತ್ರಙ್ಗಳಿಲ್ ಶೊಲ್ಲಪ್ಪಟ್ಟ ಲೀಲಾವಿಭೂತಿಯಿಲ್ ಪದಾರ್ಥಙ್ಗಳ್ ಮುಕ್ತನುಕ್ಕು ಭೋಗ್ಯಮಾಗಕ್ಕೂಡುಮೋ ವೆನ್ನಿಲ್, ಅದಿಲುಮ್ ಕುರೈಯಿಲ್ಲೈ. ೧. ಪಿತ್ತೋಪಹತನಕ್ಕು ಪ್ರತಿ

ವಾಗ, ಮತ್ತು ಐಹಿಕವೆಲ್ಲಾ ತುಚ್ಛವಾಗಿ ಪ್ರಪನ್ನನಿಗೆ ತ್ಯಾಜ್ಯವೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವಾಗ ಮುಕ್ತನಿಗೆ ಅದೂ ಕೂಡ ಅನುಕೂಲವಾದುದು ಹೇಗೆ ಎಂಬಾಕ್ಷೇಪಣೆಯು ಯುಕ್ತವಾದುದೇ. ಅದಕ್ಕೆ ಸಮಾಧಾನವನ್ನು "ಇಪ್ಪಡಿ" ಎಂದಾರಂಭಿಸಿದ ವಾಕ್ಯದ ಮೂಲಕ ಸದೃಷ್ಟಾಂತವಾಗಿ ಮೂರು ನಿದರ್ಶನಗಳ ಮೂಲಕ ತಿಳಿಯಪಡಿಸುತ್ತಾರೆ.

ಮುಕ್ತನಿಗೆ ಲೀಲಾವಿಭೂತಿಯೂ ಕೂಡ ಅನುಕೂಲ ರೂಪವಾದುದು.

ಇಪ್ಪಡಿ - ಹೀಗೆ, ಎಂದರೆ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಭಗವತ್ಸ್ವರೂಪಗುಣ ವಿಗ್ರಹಾದಿಗಳುಮ್** - ಭಗವಂತನ ಸ್ವರೂಪ ದಿವ್ಯಮಂಗಳವಿಗ್ರಹ ಆತನ ಕಲ್ಯಾಣಗುಣಗಳು, ಆದಿ ಪದದಿಂದ ಐಶ್ವರ್ಯ ಚೇಷ್ಟಿತಗಳೂ ಸಂಗ್ರಹಿಸಲ್ಪಟ್ಟವು, ಮತ್ತು **ಶುದ್ಧ ಸತ್ವಾಶ್ರಯಮಾನ ನಿತ್ಯವಿಭೂತಿಯುಮ್** - ಶುದ್ಧ ಸತ್ವಕ್ಕೆ ಆಶ್ರಯವಾದ ನಿತ್ಯವಿಭೂತಿಯೂ, **ಸ್ವಸ್ವರೂಪಮುಮ್** - ಮುಕ್ತನಾದ ತನ್ನ ಸ್ವರೂಪವೂ ಸಹ, **ಭೋಗ್ಯಮಾನಾಲುಮ್** - ಭೋಗ್ಯವಾದುವು ಆದರೂ, **ಪ್ರತಿಕೂಲಮಾಗ** - ಅನಿತ್ಯ ಅಲ್ಪ ಸುಖ ಮತ್ತು ಬಹು ದುಃಖಯುಕ್ತವಾಗಿ ಹೀಗೆ ಪ್ರತಿಕೂಲವಾದುದೆಂದು, **ಪ್ರತ್ಯಕ್ಷಾದಿ ಪ್ರಮಾಣಸಿದ್ಧಮಾಯ್** - ಪ್ರತ್ಯಕ್ಷ ಮತ್ತು ಶಾಸ್ತ್ರಪ್ರಮಾಣಗಳಿಂದ ಸ್ಥಾಪಿತವಾಗಿ, **ತ್ಯಾಜ್ಯಮಾಗ** - ಹೀಗೆ ಬದ್ಧದೆಶೆಯಲ್ಲಿ ಐಹಿಕವೆಲ್ಲಾ ತ್ಯಾಜ್ಯವೆಂದು, **ಶೊಲ್ಲಪ್ಪಟ್ಟ**- ಹೇಳಲ್ಪಟ್ಟ, ಲೀಲಾವಿಭೂತಿಯಲ್ಲಿ ಪದಾರ್ಥಗಳು ಮುಕ್ತನಿಗೂ ಕೂಡ, **ಭೋಗ್ಯಮಾಗಕ್ಕೂಡುಮೋ ವೆನ್ನಿಲ್** - ಭೋಗ್ಯವಾದುವು ಆಗುವುವೋ ಎಂದರೆ, **ಅದಿಲುಮ್ ಕುರೈಯಿಲ್ಲೈ** - ಹಾಗೆ ಭೋಗ್ಯವಾದುವಾಗುವದಕ್ಕೇನೂ ನ್ಯೂನತೆಯಿಲ್ಲವು, ಎಂದರೆ

ಅವುಗಳೂ ಭೋಗ್ಯವಾದವುಗಳೇ ಎಂಬರ್ಥವು. ಐಹಿಕವೆಲ್ಲಾ ದುಃಖಮಯವಾದುದೆಂಬುದಕ್ಕೆ ಬೇರೆ ಪ್ರಮಾಣ ಬೇಕಿಲ್ಲವು ಪ್ರತ್ಯಕ್ಷದಿಂದಲೇ ಸಿದ್ಧವು. ಅನೇಕ ದುಃಖಸಂತತಿಗಳನ್ನು ಒಬ್ಬನು ತನ್ನ ಜೀವಮಾನದಲ್ಲಿ ಅನುಭವಿಸಿರಬಹುದು. ಆದರೆ ಐಹಿಕದಲ್ಲಿರುವ ಅಲ್ಪಸುಖದಿಂದ ಭ್ರಾಂತನಾಗಿ ಈ ಎಲ್ಲಾ ದುಃಖಗಳನ್ನೂ ಮರೆತುಹೋಗುವನು. ಸಂಸಾರದುಃಖವೆಂಬ ಸೂರ್ಯನ ತಾಪದಿಂದ ತಪಿಸಿ ಹೋಗಿದ್ದರೂ ಈ ಅಲ್ಪಸುಖರೂಪ ಶೈತ್ಯೋಪಚಾರದಿಂದ ಮರೆಯುವನು ಆದುದರಿಂದ ಶಾಸ್ತ್ರಪ್ರಮಾಣದಿಂದಲೂ ಅದು ದುಃಖಮಯವಾದುದೆಂದು ತಿಳಿಯಬಹುದು. ಶಾಸ್ತ್ರವೇನು ಹೇಳುತ್ತದೆ ಎಂದರೆ :—

"ಯಾವಜ್ಜೀವತಿ ತಾವಚ್ಚ ದುಃಖೈರ್ನಾನಾವಿಧೈಃ ಪ್ಲುತಃ ।
ತಂತುಕಾರಣ ಪಕ್ಷ್ಮೌಘೈರಾಸ್ತೇ ಕಾರ್ಪಾಸ ಬೀಜವತ್ ॥
ದ್ರವ್ಯನಾಶೇ ತಥೋತ್ಪತ್ತೌ ಪಾಲನೇಚ ಸದಾನೃಣಾಂ ।
ಭವಂತ್ಯನೇಕ ದುಃಖಾನಿ ತಥೈವೇಷ್ಟ ವಿಪತ್ತಿಷು ॥
ಯದ್ಯತ್ಪ್ರೀತಿಕರಂ ಪುಂಸಾಂವಸ್ತು ಮೈತ್ರೇಯ ಜಾಯತೇ ।
ತದೇವದುಃಖ ವೃಕ್ಷಸ್ಯ ಬೀಜತ್ವ ಮುಪಗಚ್ಛತಿ ॥"

(ವಿ. ಪು. ೬. ೫. ೫೩-೫೫) ಹತ್ತಿಯ ಬೀಜವು ಹೇಗೆ ಬಿಡಿಸಲು ಕಷ್ಟವಾಗಿರುವದೋ ಹಾಗೆ ಜೀವವಿರುವವರೆಗೂ ನಾನಾವಿಧವಾದ ಕ್ಲೇಶಗಳಲ್ಲಿ ಮುಳುಗಿರುವನು. ದ್ರವ್ಯನಾಶದಲ್ಲೂ, ದ್ರವ್ಯವನ್ನು ಗಳಿಸುವದರಲ್ಲೂ, ಅದನ್ನು ರಕ್ಷಿಸುವದರಲ್ಲೂ ಮನುಷ್ಯರು ನಾನಾವಿಧ ದುಃಖಗಳನ್ನನುಭವಿಸುವರು. ಹಾಗೆಯೇ ಇತರ ಇಷ್ಟವಾದವುಗಳ ವಿಘಾತದಲ್ಲೂ ಅನೇಕ ಕ್ಲೇಶಗಳುಂಟು. ಮನುಷ್ಯರಿಗೆ ಯಾವುದು ಪ್ರೀತಿಕರವಾಗಿ ತೋರುವ ವಸ್ತು ಉಂಟೋ, ಓ ಮೈತ್ರೇಯನೇ, ಅದೇ ಮುಂದೆ ದುಃಖವೆಂಬ ವೃಕ್ಷಕ್ಕೆ ಬೀಜವಾಗಿ ಪರಿಣಮಿಸುತ್ತದೆ ಎಂದು ಹೇಳಿರುತ್ತದೆ. ಹಾಗೆಯೇ ಗೀತೆಯಲ್ಲೂ,

"ಯೇಹಿ ಸಂಸ್ಪರ್ಶಜಾ ಭೋಗಾ ದುಃಖಯೋ ನಯ ಏವತೇ ।
ಆದ್ಯಂತವಂತಃ ಕೌಂತೇಯ ನತೇಷು ರಮತೇ ಬುಧಃ ।" (೫. ೨೨)

ವಿಷಯ ಸುಖಗಳೆಲ್ಲಾ ಕಾಲಾಂತರದಲ್ಲಿ ದುಃಖರೂಪ ಫಲವನ್ನೇ ಕೊಡತಕ್ಕವುಗಳೇ, ಮತ್ತು ಅವುಗಳಿಗೆ ಆದಿ, ಅಂತ್ಯಗಳಿರುವದರಿಂದ ಅಸ್ಥಿರವಾದವು. ತತ್ತ್ವವನ್ನು ತಿಳಿದ ಪಂಡಿತನು ಅವುಗಳಲ್ಲಿ ರಮಿಸುವದಿಲ್ಲವು. ಹೀಗೆ ಅನೇಕ ಶಾಸ್ತ್ರಪ್ರಮಾಣಗಳೂ ಉಂಟೆಂಬ ಭಾವವು. ಹೀಗೆ ಪ್ರತ್ಯಕ್ಷಸಿದ್ಧವಾಗಿಯೂ ಶಾಸ್ತ್ರಗಳಿಂದ ವೇದ್ಯವಾಗಿಯೂ ಇವೆ ಎಂಬ ತಾತ್ಪರ್ಯವು. ಹೀಗಿದ್ದರೂ ಇವೆಲ್ಲವೂ ಮುಕ್ತನಿಗೆ ಮಾತ್ರ ಅನುಕೂಲವಾಗಿವೆ ಎಂದು ಹೇಳಲು ಏನೊಂದೂ ಅಭ್ಯಂತರ

**ಕೂಲಮಾನ ಪಾಲ್, ಪಿತ್ತಮ್ ಶಮಿತ್ತಾಲ್ ಅನುಕೂಲಮಾಪ್ಪೋಲು
ವುಮ್. ೨. ಸಾರ್ವಭೌಮನಾನ ಪಿತಾವಿನುಡೈಯ ಶಿರೈಕ್ಕೂಡಮ್,
ಶಿರೈಕ್ಕಿಡಕ್ಕಿರ ರಾಜಕುಮಾರನುಕ್ಕು ಅಪ್ಪೋದು ಪ್ರತಿಕೂಲಮಾಯ್,
ರಾಜಾ ಶಿರೈ ಕೂಡತ್ತಿಲ್ ನಿನ್ರುಮ್ ಪುರಪ್ಪಡವಿಟ್ಟುಗನ್ನು ತುಲ್ಯಭೋಗ
ನಾಗ ವೈತ್ತವಳವಿಲ್ ಶಿರೈಕ್ಕೂಡಮಾನ ಕೋಪ್ಪುಕ್ಕಟ್ಟೈಯಾದಿರುಕ್ಕ**

ವಿಲ್ಲವು. ಅದು ಹೇಗೆ ಎಂದರೆ ಎರಡು ದೃಷ್ಟಾಂತಗಳ ಮೂಲಕ ತಿಳಿಸುತ್ತಾರೆ

೧. **ಪಿತ್ತೋಪಹತನುಕ್ಕು** - ಪಿತ್ತಾಧಿಕ್ಯ ಜಾಡ್ಯದಿಂದ ಪೀಡಿತನಾದ
ವನಿಗೆ, **ಪ್ರತಿಕೂಲಮಾನ ಪಾಲ್** - ಕಹಿಯಾಗಿ ತೋರುವದರಿಂದ ಸೇರದ
ಹಾಲು, **ಪಿತ್ತಂ ಶಮಿತ್ತಾಲ್** - ಪಿತ್ತವು ಶಮನವಾದರೆ, **ಅನುಕೂಲಮಾ
ಪ್ಪೋಲುವುಮ್** - ರುಚಿಯಾಗಿ ಸೇರುವ ಹಾಗೂ; ಹಾಲು ಪಿತ್ತಜಾಡ್ಯವುಳ್ಳವ
ನಿಗೆ ಕಹಿಯಾಗಿ ತೋರುತ್ತದೆ. ಹಾಲು ಕಹಿಯೋ? ಅಲ್ಲವು. ಜಾಡ್ಯವಿರು
ವದರಿಂದ ಹಾಗೆ ತೋರುತ್ತದೆ. ಆ ರೀತಿಯಲ್ಲೇ ಈ ಲೀಲಾವಿಭೂತಿಯ ವಸ್ತು
ಗಳು ವಾಸ್ತವವಾಗಿಯೂ ಪ್ರತಿಕೂಲವಾದವುಗಳಾಗಿ ದುಃಖಪ್ರದಗಳಲ್ಲವು, ಕರ್ಮ
ವೆಂಬ ವ್ಯಾಧಿಯಿಂದ ಹಾಗೆ ತೋರುತ್ತವೆ. ಕರ್ಮವು ನಶಿಸಿಹೋದರೆ, ಅವುಗಳು
ಪ್ರತಿಕೂಲಗಳಲ್ಲವು; ಅವುಗಳಿಗೆ ಸಹಜವಾದ ಅನುಕೂಲತ್ವದಿಂದ ಯುಕ್ತವಾಗಿಯೇ
ತೋರುವವು. ಆದುದರಿಂದ ಸಂಸಾರದೆಶೆಯಲ್ಲಿ ಪ್ರತಿಕೂಲಗಳೇ ವಿನಾ ಮುಕ್ತ
ದೆಶೆಯಲ್ಲಿ ಅನುಕೂಲವಾದವುಗಳೇ ಎಂಬ ತಾತ್ಪರ್ಯವು. ಈ ಹಾಲಿನ ದೃಷ್ಟಾಂ
ತದಲ್ಲಿ ಪದಾರ್ಥವೇನೋ ಅನುಕೂಲವಾದುದು, ಉಪಾಧಿ ಇರುವ ತನಕ ಪ್ರತಿ
ಕೂಲ, ಉಪಾಧಿ ತೊಲಗಿದರೆ ಅನುಕೂಲವಾಗುತ್ತದೆ. ಈ ದೃಷ್ಟಾಂತವೇನೋ
ಒಪ್ಪತಕ್ಕದ್ದೇ. ಆದರೆ ಕೆಲವು ಪದಾರ್ಥಗಳು ಪ್ರತಿಕೂಲವಾಗಿಯೇ ತೋರು
ತ್ತವಲ್ಲಾ, ಈ ಕಾರಾಗೃಹವು ಪ್ರತಿಕೂಲವಾದುದೆಂದು ಎಲ್ಲರೂ ಒಪ್ಪತಕ್ಕ
ದ್ದಾಗಿರುತ್ತದೆ. ಅದು ಹೇಗೆ ಅನುಕೂಲವೆಂದಾಕ್ಷೇಪಿಸಿದರೆ, ಅದೂ ಕೂಡ ಅನು
ಕೂಲವಾಗುತ್ತದೆಂದು ಈ ಎರಡನೆಯ ದೃಷ್ಟಾಂತವನ್ನುಪಪಾದಿಸುತ್ತಾರೆ.

೨. **ಸಾರ್ವಭೌಮನಾನ ಪಿತಾವಿನುಡೈಯ** - ಚಕ್ರವರ್ತಿಯಾದ ತನ್ನ
ತಂದೆಯ, **ಶಿರೈಕ್ಕೂಡಮ್** - ವಿಭೂತಿಗೆ ಸೇರಿದ ಕಾರಾಗೃಹವು. **ಶಿರೈಕಿಡಕ್ಕಿರ**-
ಸಜಾ ಅನುಭವಿಸುತ್ತಿರುವ, ರಾಜಕುಮಾರನಿಗೆ, **ಅಪ್ಪೋದು** - ಆ ಶಿಕ್ಷಾನುಭವ
ಸಮಯದಲ್ಲಿ, **ಪ್ರತಿಕೂಲಮಾಯ್** - ಪ್ರತಿಕೂಲವಾದುದಾಗಿ, **ರಾಜಾ** - ಚಕ್ರ
ವರ್ತಿಯು, **ಶಿರೈಕೂಡತ್ತಿಲ್ ನಿನ್ರುಮ್**-ಕಾರಾಗೃಹದಿಂದ, **ಪುರಪ್ಪಡವಿಟ್ಟು**-

ಚೆಯ್‌ದೇ ಪಿತಾವಿರ್ ವಿಭೂತಿ ಎನ್ರು ಅನುಕೂಲಮಾಪ್ಪೋಲವುಮ್,
(೧) "ಯಸ್ತ್ವಯಾ ಸಹಸಸ್ವರ್ಗೋ ನಿರಯೋಯಸ್ತ್ವಯಾವಿನಾ" ಎನ್ರು

ಹೊರಕ್ಕೆ ಬಿಡಿಸಿ, **ಉಗನ್ದು** - ಸಂತೋಷಿಸಿ, **ತುಲ್ಯಭೋಗನಾಗ** - ಚಕ್ರವರ್ತಿಯಾದ ತನಗೆ ಸಮಾನವಾದ ಭೋಗವುಳ್ಳವನಾಗಿ, **ವೈತ್ತವಳವಿಲ್** - ಆತನನ್ನು ಯುವರಾಜ ಪದವಿಯಲ್ಲಿಟ್ಟ ಸಂದರ್ಭದಲ್ಲಿ, **ಕೋಪ್ಪುಕುಲೈಯಾದಿರುಕ್ಕ ಚೆಯ್‌ದೇ** - ಕಾರಾಗೃಹವಿರುವ ಪ್ರಕಾರವು ನಷ್ಟವಾಗದೇ ಇದ್ದ ಪಕ್ಷದಲ್ಲಿ, **ಪಿತಾವಿರ್ ವಿಭೂತಿ ಎನ್ರು** - ರಾಜನಾದ ತನ್ನ ತಂದೆಯ ನಿಯಾಮ್ಯವರ್ಗಕ್ಕೆ ಸೇರಿದುದೆಂದು, **ಅನುಕೂಲಮಾಪ್ಪೋಲವುಮ್** - ಅನುಕೂಲವಾಗಿ ತೋರುವ ಹಾಗೂ, (ಇದಕ್ಕೆ ಮುಂದೆ ಭೋಗ್ಯವರ್ಗತ್ತಿಲೆ ಶೇರುಗೈ **ಉಪಪನ್ನಮ್** ಎಂಬುದರೊಂದಿಗೆ ಅನ್ವಯವು) ಬದ್ಧದೆಶೆಯಲ್ಲಿ ಕರ್ಮಾನುರೂಪವಾಗಿ ಭಗವದ್ವಿಶ್ಲೇಷವಿರುವವರಿಂದ ಪ್ರತಿಕೂಲವೇ ವಿನಾ, ಮುಕ್ತದೆಶೆಯಲ್ಲಿ ಕರ್ಮವು ತೊಲಗಿ ಭಗವತ್ಸಂಶ್ಲೇಷವುಂಟಾದಾಗ ಅನುಕೂಲವಾಗುವದರಲ್ಲಿ ಸಂದೇಹವಿಲ್ಲವೆಂದು ಸೀತಾವೃತ್ತಾಂತಮೂಲಕವಾಗಿ ಉಪದೇಶಿಸುತ್ತಾರೆ; **ತ್ವಯಾ ಸಹ** - ನಿನ್ನೊಂದಿಗೆ, **ಯಃ** - ಯಾವ, ವಾಸವೋ ಎಂದು ಇಟ್ಟುಕೊಳ್ಳತಕ್ಕದ್ದು, **ಸಃ** - ಅದು, **ಸ್ವರ್ಗಃ** - ಮೋಕ್ಷಸುಖವು, **ತ್ವಯಾ ವಿನಾ** - ನೀನಿಲ್ಲದೆ ಇರುವ, **ಯಃ** - ಯಾವ ವಾಸವೋ ಅದು, **ನಿರಯಃ**-ನರಕವು ಇದು ಸೀತಾವಾಕ್ಯವು. ವನದಲ್ಲಿ ತುಂಬಾ ಕಷ್ಟವೆಂದು ಶ್ರೀರಾಮನು ಜೊತೆಯಲ್ಲಿ ಸೀತೆಯನ್ನು ಕರೆದುಕೊಂಡು ಹೋಗಲು ಸಮ್ಮತಿಸದಿರುವ ವೇಳೆಯಲ್ಲಿ, ತುಂಬಾ ದೈನ್ಯದಿಂದ ಕರೆದುಕೊಂಡು ಹೋಗಬೇಕೆಂದು ಬೇಡಿ ಮಹಾ ಪತಿವ್ರತಾ ಶಿರೋಮಣಿಯಾದ ತನ್ನ ಸಿದ್ಧಾಂತವೇನೆಂಬುದನ್ನು ತಿಳಿಸುತ್ತಾಳೆ. ಪತಿಯಾದ ನಿನ್ನೊಂದಿಗೆ ಇರುವದೇ ನನಗೆ ಮೋಕ್ಷಸುಖಕ್ಕೆ ಸಮಾನವಾದುದಾಗಿ ಸರ್ವಾನುಕೂಲವಾದುದು, ನಿನ್ನನ್ನು ಬಿಟ್ಟಿರುವದೇ ನನಗೆ ಎಲ್ಲಾ ವಿಧದಲ್ಲೂ ಪ್ರತಿಕೂಲವಾದುದಾಗಿ ನರಕವಾಸ ಸಮಾನವಾದುದು ಎಂದು ಹೇಳುತ್ತಾಳೆ. ಈ ಶ್ಲೋಕದ ಉತ್ತರಾರ್ಧವು "ಇತಿ ಜಾನನ್ ಪರಾಂ ಪ್ರೀತಿಂ ಗಚ್ಛ ರಾಮ ಮಯಾ ಸಹ" ಹೀಗೆ ನಿನ್ನನ್ನು ಒಂದು ಕ್ಷಣವಾಗಲಿ ಅಗಲಿರಲು ನನಗೆ ಸಾಧ್ಯವೇ ಇಲ್ಲವೆಂಬುದನ್ನೂ ಅಂತಹ ಉತ್ಕೃಷ್ಟವಾದ ಪ್ರೀತಿಯು ನನಗುಂಟು ಎಂಬುವನ್ನು ಚನ್ನಾಗಿ ಅರಿತಿರುವೆಯಾದುದರಿಂದ ನನ್ನನ್ನು ಕರೆದುಕೊಂಡೇ ವನಪ್ರವೇಶ ಮಾಡತಕ್ಕದ್ದೆಂಬ

(೧) ರಾಮಾ. ಅಯೋಧ್ಯಾ. ೩೦. ೧೮.

ವಮ್ (೨) "ನಹಿಮೇ ಜೀವಿತೇ ನಾರ್ಥೋ ನೈವಾರ್ಥೈರ್ನಚಭೂಷಣೈಃ । ವಸಂತ್ಯಾರಾಕ್ಷಸೀ ಮಧ್ಯೇ ವಿನಾರಾಮಂ ಮಹಾರಥಮ್ ಎನ್ರುಮ್ (೧) "ಏರೇಳು ಮಿರ್ರೈ ಯೋನಿ" ಲುಮ್ ಶೊಲ್ಲುಗಿರಪಡಿಯೇ,

ಭಾವವು, ಎನ್ರುಮ್ - ಎಂದೂ, ಮುಂದಿನ ಉದಾಹರಣೆಯಲ್ಲಿ ಸೀತೆಯು ತನಗೆ ಎರಡು ವಿಧವಾದ ನರಕವು ಪ್ರಾಪ್ತವಾಗಿದೆಯೆಂದು ಹೇಳುತ್ತಾಳೆ. ಪ್ರತಿಕೂಲ ಗಳ ಮಧ್ಯೆಯಿರುವದೊಂದು ನರಕವು, ಪತಿಯನ್ನಗಲಿರುವದು ಒಂದು ನರಕವು, ಇಂತಹ ದುಸ್ಥಿತಿಯಲ್ಲಿ ತಾನಿರಬಹುದೇ? ಆದುದರಿಂದ ತನಗೀಗ ಭೇಷಜವು ಪ್ರಾಣತ್ಯಾಗವೇ ವಿನಾ ಬೇರೆ ಯಾವುದೂ ತೋರುವದಿಲ್ಲವೆಂಬ ದೈನ್ಯಾವಸ್ಥೆಯಲ್ಲಿ ದ್ದಾಳೆ ಮುಖ್ಯ ತಾತ್ಪರ್ಯವು ಸರ್ವೇಶ್ವರನ ಸಾನ್ನಿಧ್ಯದಲ್ಲಿ ಪ್ರತಿಕೂಲವಾಗಿ ತೋರುವದೂ ಕೂಡ ಅನುಕೂಲವೇ ಎಂಬ ಭಾವವು. ಮಹಾರಥಂ ರಾಮಂ ವಿನಾ - ರಣದಲ್ಲಿ ಸಮರ್ಥನಾದ ರಾಮನನ್ನಗಲಿ, ಯುದ್ಧದಲ್ಲಿ ತನ್ನನ್ನೂ ಸಾರಥಿ ಯನ್ನೂ ರಥವನ್ನೂ ಕಾಪಾಡಿಕೊಂಡು ಯುದ್ಧಮಾಡುವ ಮಹಾವೀರನಿಗೆ ಮಹಾ ರಥನೆಂಬ ಹೆಸರು. ಮೇ - ನನಗೆ, ಜೀವಿತೇನ-ಬದುಕಿರುವದರಿಂದ, ಅರ್ಥಃ - ಪ್ರಯೋಜನವು ಇಲ್ಲವಷ್ಟೆ, ಆಕೆಗೆ ಪ್ರಯೋಜನವೇನೆಂದರೆ ಪತಿಯೊಂದಿಗಿದ್ದು ಪತಿಗೆ ಸಂತೋಷವುಂಟಾಗುವ ಹಾಗೆ ಕೈಂಕರ್ಯವನ್ನೆಸಗುವದೇ, ಅದು ಇಲ್ಲದು ದರಿಂದ ಬದುಕಿ ಏನು ಪ್ರಯೋಜನವೆಂಬ ಭಾವವು. ಆಗಲಿ, ದ್ರವ್ಯವೂ ಭೂಷಣಾ ದಿಗಳೂ ಪ್ರಾಪ್ತವಾದರೆ ಒಂದು ವೇಳೆ ಜೀವಿಸಿರೋಣವೆಂಬಾಶೆ ಉಂಟಾಗಬಹು ದೇನೋ ಎಂಬ ಶಂಕೆಯುಂಟಾಗಬಹುದು. ನೈವಾರ್ಥೈಃ - ದ್ರವ್ಯದ ಆಧಿಕ್ಯ ದಿಂದಲೂ ನನಗೆ ಜೀವಿಸಿರಬೇಕೆಂಬ ಆಶೆಯಿಲ್ಲವು. ಹೆಂಗಸಿಗೆ ಬರೀ ದುಡ್ಡಿಗಿಂತ ಭೂಷಣಗಳಲ್ಲಿ ಆಶೆ ಹೆಚ್ಚು, ಅದರಿಂದ ಜೀವಿಸಿರುವ ಆಶೆಯುಂಟಾಗಬಹುದು ಎನ್ನುತ್ತೀಯೋ, ನ ಚ ಭೂಷಣೈಃ - ಅಂತಹ ಭೂಷಣಗಳಿಂದಲೂ ಜೀವಿಸಬೇ ಕೆಂಬ ಆಶೆಯುಂಟಾಗುವದಿಲ್ಲವು" ಎನ್ರುಮ್ - ಎಂದೂ, ಶ್ರೀರಾಮನಿಲ್ಲದೆ ಅರ್ಥ ಭೂಷಣಾದಿಗಳು ಪ್ರತ್ಯುತ ಪ್ರತಿಕೂಲಗಳೇ, ಆತನ ಸಾನ್ನಿಧ್ಯ ಉಂಟಾ ದರೆ ಪ್ರತಿಕೂಲಗಳೂ ಕೂಡ ಅನುಕೂಲಗಳೇ ಎಂಬ ಭಾವವು; ಮತ್ತು "ಏರಾ ಳು ಮಿರ್ರೈಯೋನುಮ್" ಎಂದು ಪ್ರಾರಂಭಿಸಿ ಹೇಳುವ ನಮ್ಮಾಳ್ವಾರ್‌ರವರ ತಿರುವಾಯ್‌ಮೊಳಿ ನಾಲ್ಕನೆಯ ಪತ್ತು ಎಂಟನೆಯ ತಿರುವಾಯ್‌ಮೊಳಿಯಲ್ಲೂ, ಶೊಲ್ಲುಗಿರಪಡಿಯೇ - ಹೇಳಿರುವ ಮೇರಿಗೆ, ಅಲ್ಲಿ ಏನು ಹೇಳಿರುತ್ತದೆ ಎಂದರೆ,

(೨) ರಾಮಾ. ಸುಂದರ. ೨೬. ೫. (೧) ತಿರು. ೪. ೮.

ನಮ್ಮಾಳ್ವಾರ್ರವರು ತಮ್ಮನ್ನು ಒಬ್ಬ ನಾಯಿಕೆಯ ಹಾಗೆ ಭಾವಿಸಿಕೊಂಡು ನಾಯಕನಾದ ಸರ್ವೇಶ್ವರನು ತನಗೆ ಮುಖ ತೋರಿಸಿ ಒಲಿಯದ ಬಳಿಕ "ವಾರಾರ್ಳ್ ಕವರಾದ ಮಣಿವಾಮ್ಮೈಕುರ ವಿಲವೋ" ತನ್ನ ಸೊಗಸಾದ ದೇಹಕಾಂತಿಯಿಂದ ತನಗೇನು ಪ್ರಯೋಜನವೆಂದು ಪ್ರಥಮಪಾಶುರದಲ್ಲೂ, ಎರಡನೆಯ ಪಾಶುರದಲ್ಲಿ "ಮಣಿನಾರ್ಯ್ ಕವರಾದ ಮಡನೆಂಜಾರ್ಕ್ಕುರೈ ವಿಲವೋ" ವಿಧೇಯವಾದ ನನ್ನ ಮನಸ್ಸಿನಿಂದ ತನಗೇನು ಪ್ರಯೋಜನವೆಂದೂ, ಮೂರನೆಯ ಪಾಶುರದಲ್ಲಿ "ನೆಡುಮಾರ್ಯ್ ಕವರಾದ ನಿರ್ರೈವಿನಾರ್ಕ್ಕುರೈ ವಿಲವೋ" ತನ್ನ ಸ್ತ್ರೀತ್ವ ಪೂರ್ತಿಯಿಂದ ತನಗೇನು ಪ್ರಯೋಜನವೆಂದೂ, ನಾಲ್ಕನೆಯ ಪಾಶುರದಲ್ಲಿ "ಶರ್ರೈಯಿನಾರ್ ಕವರಾದ ತಳಿರ್ ನಿರತ್ತಾರ್ಕ್ಕುರೈ ವಿಲವೋ" ಚಿಗುರಿನ ಹಾಗೆ ಮನೋಹರವಾದ ತನ್ನ ಕಾಂತಿಯಿಂದ ತನಗೇನು ಪ್ರಯೋಜನವೆಂದೂ, ಐದನೆಯದರಲ್ಲಿ "ಅಳಿವಿಕ್ಕಾರ್ಳ್ ಕವರಾದ ವರಿವಿನಾರ್ಕ್ಕುರೈ ವಿಲವೋ" ತನ್ನ ಜ್ಞಾನದಿಂದ ತನಗೇನು ಪ್ರಯೋಜನವೆಂದೂ, ಆರನೆಯದರಲ್ಲಿ "ಕಿರಿಯಮ್ಮಾರ್ಳ್ ಕವರಾದ ಕಿಳರೊಳಿಯಾರ್ಕ್ಕುರೈ ವಿಲವೋ" ತನ್ನ ಲಾವಣ್ಯದಿಂದೇನು ಪ್ರಯೋಜನವೆಂದೂ, ಏಳನೆಯದರಲ್ಲಿ "ವಳರೊಳಿಯಾರ್ಳ್ ಕವರಾದ ವರಿವಳೈಯಾರ್ಕ್ಕುರೈ ವಿಲವೋ" ತನಗೆ ಬಳೆ ಮೊದಲಾದ ಆಭರಣಗಳಿಂದೇನು ಪ್ರಯೋಜನವೆಂದೂ, ಎಂಟನೆಯದರಲ್ಲಿ "ವಿರಿಪ್ಪುಕುಳಾರ್ಳ್ ಕವರಾದ ಮೇಕಲೈಯಾರ್ಕ್ಕುರೈ ವಿಲವೋ" ತನಗೆ ಒಳ್ಳೇ ವಸ್ತ್ರಗಳಿಂದೇನು ಪ್ರಯೋಜನವೆಂದೂ, ಒಂಭತ್ತನೆಯದರಲ್ಲಿ ಹಾಗೆಯೇ ತನಗೆ ದೇಹದಿಂದೇನು ಪ್ರಯೋಜನವೆಂದೂ, ಹತ್ತನೆಯದರಲ್ಲಿ ಈ ಆತ್ಮನಿಂದ ತಾನೇ ಏನು ಪ್ರಯೋಜನವೆಂದೂ, ಹೇಳಿಕೊಂಡಿರುತ್ತಾರೆ. ಇದರಿಂದ ಸರ್ವೇಶ್ವರ ಸಾನ್ನಿಧ್ಯದಿಂದ ಇವೆಲ್ಲಾ ಅನುಕೂಲವೆಂದೂ, ಇಲ್ಲದಿದ್ದರೆ ಇವೆಲ್ಲಾ ಪ್ರತಿಕೂಲವೆಂಬ ಭಾವವು. ಜ್ಞಾನನಿಧಿಗಳಾದ ಯಾಮುನೇಯರೂ ಈ ಅಭಿಪ್ರಾಯವನ್ನೆಲ್ಲಾ

ನದೇಹಂ ನಪ್ರಾಣಾ ನ್ನಚ ಸುಖ ಮಶೇಷಾಭಿಲಷಿತಂ ।
ನ ಚಾತ್ಮಾನಂ ನಾನ್ಯತ್ಕಿಮಪಿ ತವಶೇಷತ್ವ ವಿಭವಾತ್ ।
ಬಹಿರ್ಭೂತಂ ನಾಥಕ್ಷಣಮಪಿ ಸಹೇಯಾತು ಶತಧಾ ।
ವಿನಾಶಂ ತತ್ಸತ್ಯಂ ಮಧುಮಥನ ವಿಜ್ಞಾಪನ ಮಿದಮ್ ॥೫೭॥

ಎಂಬದಾಗಿ ಒಂದೇ ಶ್ಲೋಕದಲ್ಲೇ ಸಂಗ್ರಹಿಸಿರುತ್ತಾರೆ. ಇದರರ್ಥವೇನೆಂದರೆ :-

ಹೇ ನಾಥ - ಓ ಸ್ವಾಮಿಯೇ, ತವ - ಭಕ್ತನಾದ ದಾಸನಲ್ಲಿ ಪರಮ ಕರುಣೆಯುಳ್ಳ ನಿನ್ನ, ಶೇಷತ್ವ ವಿಭವಾತ್ - ಕಿಂಕರಭಾವದ ಫಲಭೂತವಾದ ಕೈಂಕರ್ಯವೆಂಬ ಸಮೃದ್ಧಿಗಿಂತಲೂ, ಬಹಿರ್ಭೂತಂ - ಹೊರಗಾದ, ಎಂದರೆ ನಿನ್ನ

ಕೈಂಕರ್ಯಕ್ಕನುಪಯುಕ್ತವಾದ, ಯಾವಾಗ ನೀನು ಎಲ್ಲರಿಗೂ ಸ್ವಾಮಿಯೋ, ಆದುದರಿಂದ ದಾಸನಾದ ನನಗೂ ನೀನು ಸ್ವಾಮಿಯು; ಈ ದಾಸತ್ವಕ್ಕೆ ಕೈಂಕರ್ಯ ಮಾತ್ರವದೇ ಫಲವು, ಅಂತಹ ಕೈಂಕರ್ಯಕ್ಕೆ ಉಪಯೋಗವಾಗದ **ಅಶೇಷಾಭಿಲಷಿತಂ** ಸಾರ್ವತ್ರಿಕವಾಗಿ ಎಲ್ಲರಿಂದಲೂ ಅಪೇಕ್ಷಿಸಲ್ಪಡುವ ಅಥವಾ ನಿನ್ನ ಶೇಷತ್ವದ ಮಹಿಮೆಯನ್ನರಿಯದವರಿಂದ ಅಪೇಕ್ಷಿಸಲ್ಪಡುವ, **ದೇಹಂ** - ನನ್ನ ದೇಹವನ್ನೂ, **ಕ್ಷಣಮಪಿ** - ಒಂದು ಕ್ಷಣವಾಗಲಿ, **ನಸಹೇ** - ನಾನು ಸಹಿಸಲಾರೆನು. ಎಂದರೆ ಅಂತಹ ಶರೀರವು ನನಗೆ ಬೇಕಾಗಿಲ್ಲವೆಂಬ ಭಾವವು; ಆದರೆ ಪ್ರಾಣವಿರುವದಕ್ಕಾಗಿಯಲ್ಲವೇ ದೇಹವು, ಪ್ರಾಣವಿರುವದಕ್ಕಾಗಿಯಾದರೂ ದೇಹ ಬೇಡವೇ ಎಂದರೆ ಅನುಪಯೋಗವಾದ ಪ್ರಾಣವೂ ಬೇಕಿಲ್ಲವೆಂದು ಹೇಳುತ್ತಾರೆ; ಹಾಗೆಯೇ, **ಪ್ರಾಣಾನ್ ನ ಸಹೇ** - ಪ್ರಾಣಗಳನ್ನೂ ಸಹಿಸಲಾರೆನು ಎಂದರೆ ಪ್ರಾಣಗಳೂ ಬೇಕಿಲ್ಲವು ಎಂದು ಹೇಳಿಬಿಟ್ಟರು. ಆಗಲಿ, ಪ್ರಾಣಗಳು ಮುಖ್ಯವಾಗಿ ಸುಖಾನುಭವಕ್ಕಾಗಿ ಬೇಕಾದವು; ಸುಖಕ್ಕಾಗಿಯಾಗಲಿ ಬೇಡವೋ ಎಂದರೆ, ಸರ್ವೇಶ್ವರನಿಗೆ ಅನುಪಯುಕ್ತವಾದ ಸುಖವನ್ನು ಸುಡಬೇಕು ಎಂದು ಹೇಳುತ್ತಾರೆ; **ನಚ ಸುಖಂ ಸಹೇ** - ಅಂತಹ ಸುಖವನ್ನೂ ಕೂಡ ಸಹಿಸಲಾರೆನು, ಮತ್ತು **ನಚಾತ್ಮಾನಂ ಸಹೇ** - ನನ್ನ ಆತ್ಮಸ್ವರೂಪವನ್ನು ಕೂಡ ಸಹಿಸಲಾರೆನು. **ಅನ್ಯತ್ಕಿಮಪಿ** - ಈ ಮೇಲೆ ಹೇಳಿದ ದೇಹಾದಿಗಳಿಗಿಂತಲೂ ಬೇರೆಯಾದ ಪತ್ನೀ ಪುತ್ರಾದಿಗಳೇನು, ಗೃಹಾರಾಮಾದಿಗಳೇನು ಇವುಗಳು ಯಾವುದೊಂದನ್ನೂ, **ನ ಸಹೇ** - ಸಹಿಸಲಾರೆನು. ಹೀಗೆ ಇವುಗಳು ನಿನ್ನ ಕೈಂಕರ್ಯಕ್ಕೆ ಅನುಪಯೋಗವಾದವುಗಳಾದರೆ, **ಶತಧಾ ವಿನಾಶಂ ಯಾತು** - ನೂರು ಭಾಗವಾಗಿ ನಾಶವನ್ನು ಹೊಂದಲಿ, **ತತ್ಸತ್ಯಂ** - ಅದು ನಾಲಿಗೆಯ ತುದಿಯ ಮಾತಲ್ಲವು, ಸತ್ಯವಾದ ಹೇಳಿಕೆಯು, ಹೇ ಮಧುಸೂದನನೇ, **ಇದಂ ವಿಜ್ಞಾಪನಂ** - ಇದೀಗ ನನ್ನ ವಿಜ್ಞಾಪನೆಯು; ಅಥವಾ **ತದಿದಂ ವಿಜ್ಞಾಪನಂ** ಅಂತಹ ಈ ವಿಜ್ಞಾಪನೆಯು, **ಸತ್ಯಂ** - ಸತ್ಯವಾದುದು ಎಂಬಭಿಪ್ರಾಯವು.

ಆದುದರಿಂದ ಲೀಲಾವಿಭೂತಿಯಲ್ಲಿರುವ ಸರ್ವ ವಸ್ತುಗಳೂ ಮುಕ್ತನಿಗೆ ಅನುಕೂಲವಾಗಿಯೇ ತೋರುವದರಿಂದ ಭೋಗ್ಯವಾದವುಗಳೇ. ಆದರೆ ಅಲ್ಲಾನುಕೂಲವಾಗಿಯೂ ಪ್ರತಿಕೂಲವಾಗಿಯೂ ತೋರುತ್ತವಲ್ಲಾ ಎಂದರೆ ಹಾಗೆ ತೋರುವದು ಕರ್ಮ ಪ್ರತಿಬಂಧದಿಂದ ಎಂದರಿಯತಕ್ಕದ್ದು ಎಂಬ ತಾತ್ಪರ್ಯವು

ಆದರೆ ಒಂದೇ ಪದಾರ್ಥವು ಬದ್ಧರಿಗೆ ಪ್ರತಿಕೂಲವಾಗಿಯೂ, ಮುಕ್ತರಿಗೆ ಅನುಕೂಲವಾಗಿಯೂ ಇರುವದೆಲ್ಲಾದರೂ ಉಂಟೇ ಎಂದರೆ ಅದು ಭಗವದಿಚ್ಛಾಸಿದ್ಧವೆಂದು ಹೇಳುತ್ತಾರೆ. ಒಬ್ಬನಿಗೆ ದೇಹವು ಅನುಕೂಲವಾಗಿಯೂ, ಇನ್ನೊಬ್ಬ

ಭಗವತ್ ಸಂಶ್ಲೇಷವಿನಿರ್ಮುಕ್ತೇ ತಾನ್ ನಿನ್ಱಪೋದು ಕರ್ಮಾನುರೂಪನಾಗ ತನಕ್ಕು ಪ್ರತಿಕೂಲಮಾಯುಂ ಅಲ್ಪಾನುಕೂಲಮಾಯುಮ್ ತೋಱ್ಱಿನ ಲೀಲಾವಿಭೂತಿಯಿಲ್ ಪದಾರ್ಥಂಗಳ್ ಮುಕ್ತನಾಯ್ ನಿರನ್ತರ ಭಗವದನುಭವಮ್ ಪಣ್ಣುಗಿರವನುಕ್ಕು ನಿರತಿಶಯ ಭೋಗ್ಯವರ್ಗ

ನಿಗೆ ಪ್ರತಿಕೂಲವಾಗಿಯೂ ಆಗಬಹುದು. ಪ್ರಪಂಚದಲ್ಲಿ ಯೌವನಸ್ಥನಿಗೆ ಬಹು ಭೋಗ್ಯವಾಗಿಯೂ, ಇನ್ನಾವ ಕಾಲದಿಂದ ಪೀಡಿತನಿಗೂ, ಪಿತ್ತರೋಗಿಗೂ ಅದು ವಿಷಪ್ರಾಯವಾಗಿಯೂ ಪರಿಣಮಿಸಬಹುದು. ಪ್ರಪಂಚದ ಒಬ್ಬನಿಗೆ ಭಗವದ್ಭಾಗವತ ಕೈಂಕರ್ಯದ್ವಾರಾ ವಿಶೇಷ ಶ್ರೇಯಸ್ಸಿಗೂ, ಹೆಂಗಸು, ದ್ರವ್ಯ, ಪಾಪಾದಿಗಳ ದ್ವಾರಾ ಅನೇಕ ದುಃಖಗಳಿಗೂ ಕಾರಣವಾಗಬಹುದು. ಇದಕ್ಕೆ ಶ್ರುತಿ ಪ್ರಮಾಣವು ಹೇಗೆಂದರೆ:—"ನವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ, ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ" "ಗಂಡನು ತಾನು ಹೆಂಡತಿಗೆ ಪ್ರಿಯನಾಗಬೇಕೆಂಬ ಸಂಕಲ್ಪದಿಂದ ಪ್ರಿಯನಾಗುವದಿಲ್ಲ, ಆದರೆ ಪರಮಾತ್ಮನ ಸಂಕಲ್ಪದಿಂದ ಗಂಡನು ಹೆಂಡತಿಗೆ ಪ್ರಿಯನಾಗುವವನಾಗುತ್ತಾನೆ" ಎಂದು ಪ್ರಾರಂಭಿಸಿ, "ನವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ, ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ" "ಎಲ್ಲವೂ ಓ ಮೈತ್ರೇಯಿಯೇ, ಸಂಕಲ್ಪಮಾತ್ರದಿಂದ ಪ್ರಿಯವಾದವುಗಳಾಗುವದಿಲ್ಲ, ಪರಮಾತ್ಮನ ಸಂಕಲ್ಪದಿಂದಲೇ ಅವೆಲ್ಲಾ ಪ್ರಿಯವಾದವುಗಳಾಗುವವು" ಎಂದು ಶ್ರುತಿಯು ವರ್ಣಿಸುತ್ತದೆ. ಇವೆಲ್ಲಾ ಭಗವತ್ಸಂಕಲ್ಪಾಧೀನವಾದುದರಿಂದ, ಬದ್ಧನಿಗೆ ಅಲ್ಪಾನುಕೂಲವಾಗಿರುವದು ಅಥವಾ ಪ್ರತಿಕೂಲವಾಗಿರುವದು, ಮುಕ್ತನಿಗೆ ಪೂರ್ಣಾನುಕೂಲವಾಗಿರಬಹುದೆಂಬುದು ನಿಸ್ಸಂದೇಹವೆಂದು ಹೇಳುತ್ತಾರೆ

ಭಗವತ್ಸಂಶ್ಲೇಷ ವಿನಿರ್ಮುಕ್ತೇ - ಭಗವಂತನೊಂದಿಗೆ ಸಾಯುಜ್ಯವಿಲ್ಲದೇ ಎಂದರೆ ಭಗವತ್ಪ್ರಾಪ್ತಿಯಿಲ್ಲದೆ, ತಾನ್ ನಿನ್ಱಪೋದು - ತಾನು ಬದ್ಧನಾಗಿ ಎಂದರೆ ಬದ್ಧದೆಶೆಯಲ್ಲಿ ಲೀಲಾವಿಭೂತಿಯಲ್ಲಿರುವಾಗ, ಕರ್ಮಾನುರೂಪನಾಗ - ತನ್ನ ಕರ್ಮಾನುಗುಣವಾಗಿ, ತನಕ್ಕು - ತನಗೆ, ಪ್ರತಿಕೂಲವಾಗಿಯೂ, ಅಲ್ಪಾನುಕೂಲವಾಗಿಯೂ, ತೋಱ್ಱಿನ - ತೋರುವ, ಲೀಲಾವಿಭೂತಿಯಲ್ಲಿನ ಪದಾರ್ಥಗಳು, ಭಗವದನುಭವಮ್ ಪಣ್ಣುಗಿರವನುಕ್ಕು - ಮುಕ್ತದೆಶೆಯಲ್ಲಿ ಪರಿಪೂರ್ಣ ಬ್ರಹ್ಮಾನುಭವವನ್ನು ಮಾಡಿಕೊಂಡಿರುವ ಇವನಿಗೆ, ನಿರತಿಶಯ ಭೋಗ್ಯವರ್ಗತ್ತಿಲೇ - ನಿರತಿಶಯವಾಗಿ ಭೋಗ್ಯವಾಗಿರುವವುಗಳ ಕೋಟಿಯಲ್ಲಿ,

ತ್ತಿಲೆ ಶೇರುಗೈ (ಶೊರುಗೈ) ಯುಪಪನ್ನಮ್.

ಇಪ್ಪಡಿ ಬದ್ಧರುಕ್ಕು ಪ್ರತಿಕೂಲಮಾಯುಮ್ ಅಲ್ಪಾನುಕೂಲಮಾಯುಮ್, ಕರ್ಮಬಂಧಮಿಲ್ಲಾದಾರ್ಕ್ಕು ಅನುಕೂಲ ಸ್ವಭಾವಮಾಯುಮ್ ಇರುಕ್ಕೈ, ಅಪ್ಪದಾರ್ಥಙ್ಗಳುಕ್ಕು ಭಗವದಿಚ್ಛಾಸಿದ್ಧಮ್.

ಸರ್ವಪ್ರಕಾರಯುಕ್ತಃ ಶ್ರೀಮನ್ನಾರಾಯಣ ಏವ ಪ್ರಾಪ್ಯಃ

ಇಪ್ಪಡಿ ಸ್ವೇಚ್ಛಾಸಿದ್ಧಮಾನ ಅನುಕೂಲ್ಯತ್ತೈಯುಡೈತ್ತಾನ ಸರ್ವ ಪ್ರಕಾರಙ್ಗಳೆಲ್ಲಾತ್ತೋಡುಮ್ ಕೂಡಿನ ಶ್ರೀಮಾನಾನ ನಾರಾಯಣನ್

ಶೇರುಗೈ - ಸೇರುವದು, ಉಪಪನ್ನಮ್ - ಸಮಂಜಸವಾದುದೇ; ಶೊರುಗೈ ಎಂದು ಪಾಠವಾದರೂ, ಸೇರಿಸಿಬಿಡುವದು ಎಂಬುದೇ ಅರ್ಥವು. ಲೀಲಾವಿಭೂತಿ ಪದಾರ್ಥಗಳೆಲ್ಲಾ ಮುಕ್ತನಿಗೆ ಭೋಗ್ಯವರ್ಗದಲ್ಲಿ ಸೇರಿದ ಹಾಗೆಯೇ ತೋರುತ್ತವೆಂಬ ಭಾವವು.

ಇಪ್ಪಡಿ - ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, ಬದ್ಧರಿಗೆ ಪ್ರತಿಕೂಲವಾಗಿಯೂ, ಕೊಂಚ ಅನುಕೂಲವಾಗಿಯೂ ಇರುವಂಥಾದ್ದು, ಕರ್ಮಬಂಧಮಿಲ್ಲಾದಾರ್ಕ್ಕು - ಕರ್ಮಬಂಧವಿಲ್ಲದ ಮುಕ್ತರಿಗೆ, ಅನುಕೂಲ ಸ್ವಭಾವವುಳ್ಳವುಗಳಾಗಿ, ಅಪ್ಪದಾರ್ಥಙ್ಗಳುಕ್ಕು ಇರುಕ್ಕೈ - ಆ ಪದಾರ್ಥಗಳಿಗೆ ಅಂತಹ ಸ್ಥಿತಿಯು ಅಥವಾ ಇರೋಣವು, ಭಗವದಿಚ್ಛಾಸಿದ್ಧಮ್ - ಭಗವಂತನ ಸಂಕಲ್ಪದಿಂದ ಉಂಟಾಗತಕ್ಕದ್ದಾಗಿರುತ್ತದೆ ಪದಾರ್ಥಗಳೆಲ್ಲಾ ಸ್ವಾಮಿಸಂಕಲ್ಪದಿಂದ ಅನುಕೂಲವಾದವುಗಳೇ; ಆದರೆ ಕರ್ಮಬಲದಿಂದ ಬಾಧಕಗಳು ಎಂಬ ತಾತ್ಪರ್ಯವು.

ನಿರ್ವಿಶೇಷ ಬ್ರಹ್ಮವಲ್ಲದೆ ಸವಿಶೇಷವಾದ ಸ್ವರೂಪ ರೂಪಗುಣ ವಿಭೂತಿ ಮೊದಲಾದವುಗಳಿಂದ ಯುಕ್ತನಾದ ಶ್ರಿಯಃಪತಿಯೇ ಪ್ರಾಪ್ಯನೆಂದು ಈ ರಹಸ್ಯಗಳಲ್ಲಿ ಎಲ್ಲಿಯಾದರೂ ತೋರಿಬರುತ್ತದೋ ಎಂದರೆ ಹಾಗೆ ತೋರಿಬರುತ್ತದೆಂದು ಉಪದೇಶಿಸುತ್ತಾರೆ.

ಸರ್ವಪ್ರಕಾರಗಳಿಂದಲೂ ಯುಕ್ತನಾದ ಶ್ರೀಮನ್ನಾರಾಯಣನೇ ಪ್ರಾಪ್ಯನು.

ಇಪ್ಪಡಿ - ಮೇಲೆ ಹೇಳಿದ ರೀತಿಯಲ್ಲಿ, ಸ್ವೇಚ್ಛಾಸಿದ್ಧಮಾನ - ತನ್ನ ಸಂಕಲ್ಪ ಮೂಲಕ ಪ್ರಾಪ್ತವಾದ, ಅನುಕೂಲ್ಯತ್ತೈಯುಡೈತ್ತಾನ - ಅನುಕೂ

ಪ್ರಾಪ್ಯನೆನ್ನು ಮಿಡಮ್ ತಿರುಮನ್ತ್ರತ್ತಿಲುಮ್ ದ್ವಯತ್ತಿಲುಮ್ ಚತುರ್ಥ್ಯನ್ತ ಪದಙ್ಗಳಿಲೆ ಅಭಿಪ್ರೇತಮ್. ಮುನ್ಬುಶೊನ್ನ ಕೈಙ್ಕರ್ಯಮ್

ಲ್ಯತೆಯನ್ನು ಹೊಂದಿದ, ಶ್ರೀಮಾನಾದ ನಾರಾಯಣನ - ಲಕ್ಷ್ಮೀಯುಕ್ತನಾದ ನಾರಾಯಣನು, ಪ್ರಾಪ್ಯನೆನ್ನುಮಿಡಮ್ - ಪ್ರಾಪ್ಯನು ಎನ್ನುವ ಸಂದರ್ಭದಲ್ಲಿ ಪ್ರಮಾಣವು, ತಿರುಮನ್ತ್ರತ್ತಿಲುಮ್- ಮೂಲಮಂತ್ರದಲ್ಲೂ, ದ್ವಯತ್ತಿಲುಮ್- ದ್ವಯಮಂತ್ರದಲ್ಲೂ, ಇವುಗಳ, ಚತುರ್ಥ್ಯಂತ ಪದಙ್ಗಳಿಲೇ - ಚತುರ್ಥಿಯು ಕೊನೆಯಲ್ಲಿರುವ ಪದಗಳಾದ ನಾರಾಯಣಾಯ ಎಂಬ ಶಬ್ದಗಳಲ್ಲಿ. ಎಂದರೆ ಮೂಲಮಂತ್ರದ ನಾರಾಯಣಾಯ ಎಂಬ ಪದದಲ್ಲೂ, ದ್ವಯಮಂತ್ರದ ಶ್ರೀಮತೇ ನಾರಾಯಣಾಯ ಎಂಬ ಪದದಲ್ಲೂ. ಅಭಿಪ್ರೇತಮ್ - ತೋರಿಬರುತ್ತದೆ. ಇಲ್ಲಿ ಸ್ವೇಚ್ಛಾಸಿದ್ಧಮಾನ ಎಂದು ಏಕೆ ಹೇಳಲ್ಪಟ್ಟಿತು ಎಂದರೆ ಪರೇಚ್ಛಾಸಿದ್ಧವಾದುದಾದರೆ ಸ್ವೇಚ್ಛಾನಿಯಂತಲೂ ಉತ್ಕೃಷ್ಟವಾದುದು ಇನ್ನೊಂದು ವಸ್ತು ಉಂಟೆಂದಾಗುತ್ತದೆ. ಅದು ಅಸಂಗತವಾದುದೆಂದು ತಿಳಿಸುವದಕ್ಕಾಗಿ ಸ್ವೇಚ್ಛಾಸಿದ್ಧಮಾನ ವೆಂಬ ಪ್ರಯೋಗವು ನಾರಾಯಣ ಶಬ್ದದಲ್ಲಿರುವ ನಾರ ಶಬ್ದವು ನಿತ್ಯವಾಗಿರುವ ಸಮಸ್ತ ಚಿದಚಿತ್ತನ್ನು ಬೋಧಿಸುತ್ತದೆ. ಇವುಗಳಿಗೆಲ್ಲಾ ಆಧಾರನಾಗಿಯೂ, ಮತ್ತು ಅವುಗಳನ್ನೆಲ್ಲಾ ಶರೀರವಾಗ ಹೊಂದಿ ಅವುಗಳಿಗೆ ಆತ್ಮನಾಗಿರುವದರಿಂದ, ನಾರಾಯಣಶಬ್ದದಿಂದ ಸರ್ವಪ್ರಕಾರ ಯುಕ್ತನೆಂಬ ಭಾವವು ತೋರಿಬರುತ್ತದೆ. ಈ ನಾರಾಯಣ ಶಬ್ದವು ಚತುರ್ಥ್ಯಂತ ಪದವಾದುದರಿಂದ ಈ ಮುಕ್ತನು ಮಾಡುವ ಸರ್ವ ವಿಧ ಕೈಂಕರ್ಯವೂ ಶ್ರೀಮನ್ನಾರಾಯಣನಿಗೇನೇ ಎಂಬಭಿಪ್ರಾಯವು ತೋರಿಬರುತ್ತದೆ. ಇದರಿಂದ ಸರ್ವಪ್ರಕಾರ ಯುಕ್ತನಾದ ಶ್ರೀಮನ್ನಾರಾಯಣನಿಗೆ ಮಾಡುವ ಸರ್ವ ವಿಧ ಕೈಂಕರ್ಯಗಳೂ ಕಾರ್ಯರೂಪವಾಗುವದಕ್ಕೆ, ಕಾರಣವು ಪರಿಪೂರ್ಣಬ್ರಹ್ಮಾನುಭವವಾದುದರಿಂದ, ಈ ಚತುರ್ಥ್ಯಂತ ನಾರಾಯಣ ಶಬ್ದಗಳು ಪರಿಪೂರ್ಣ ಬ್ರಹ್ಮಾನುಭವವನ್ನು ಬೋಧಿಸುತ್ತವೆ ಎಂದು ತಿಳಿಯತಕ್ಕದ್ದು.

ಆದರೆ ಶ್ರೀ ಯತಿವರ್ಯರು ದ್ವಯವಿವರಣರೂಪವಾದ ಶ್ರೀ ವೈಕುಂಠ ಗದ್ಯದಲ್ಲಿ ಪ್ರಾಪ್ಯದ ಫಲವು ಶ್ರೀಮನ್ನಾರಾಯಣನಿಗೆ ಕೈಂಕರ್ಯ ಮಾಡುವದೇ ಎಂದು ಹೇಳಿರುತ್ತಾರೆ. ಹಾಗೆಯೇ ಶರಣಾಗತಿ ಗದ್ಯದಲ್ಲಿ ಈ ಕೈಂಕರ್ಯವು ಪ್ರೀತಿಕಾರಿತವೆಂದು ಹೇಳಿರುತ್ತಾರೆ. ಇವುಗಳಲ್ಲಿ ಪರಿಪೂರ್ಣಾನುಭವ ವಿಷಯವು ಏಕೆ ಹೇಳಲಿಲ್ಲವೆಂದರೆ, ಯಾವಾಗ ಪರಿಪೂರ್ಣಾನುಭವದಿಂದುಂಟಾಗುವ ಪ್ರೀತಿವಿಶೇಷವೂ

ಇಪ್ಪಡಿ ಪರಿಪೂರ್ಣಾನುಭವತ್ತಾಲೆ ಪಿರನ್ದ ಪ್ರೀತಿವಿಶೇಷತ್ತುಕ್ಕು ಪರೀವಾಹಮೆನ್ನುಮಿಡತ್ತೈ ಗದ್ಯತ್ತಿಲೆ ಪಲಕಾಲನ್ ಅರುಳಿಚ್ಚೆಯ್‌ದಾರ್.

ಅದರ ಪರೀವಾಹವಾದ ಕೈಂಕರ್ಯಗಳೂ ಹೇಳಲ್ಪಟ್ಟಪ್ರೊ, ಆಗ ಪರಿಪೂರ್ಣಾನುಭವವೂ ಸಹ ಹೇಳಲ್ಪಟ್ಟಿತೆಂಬದಾಗಿ ಭಾವಿಸತಕ್ಕದ್ದೆಂದು ಹೇಳುತ್ತಾರೆ. ಹೀಗೆ ಪರಬ್ರಹ್ಮನಿಗೆ ಮಾಡುವ ಸರ್ವವಿಧ ಕೈಂಕರ್ಯಗಳಿಗೂ ಕಾರಣವು ಪರಿಪೂರ್ಣ ಬ್ರಹ್ಮಾನುಭವದಿಂದ ಉಂಟಾದ ಪರಮಪ್ರೀತಿಯೆಂದು ಶ್ರೀ ಭಾಷ್ಯಕಾರರವರು ಉಪಪಾದಿಸಿರುತ್ತಾರೆಂಬದಾಗಿ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಮುನ್ಪು ಶೊನ್ನ - ಹಿಂದೆ **ಉತ್ತರಕೃತ್ಯಾಧಿಕಾರದಲ್ಲಿ** ಪುರುಷಾರ್ಥವಾಗಿ ಹೇಳಲ್ಪಟ್ಟ, **ಕೈಙ್ಕರ್ಯಮ್**-ಸರ್ವೇಶ್ವರನಿಗೆ ಮಾಡುವ ಕೈಂಕರ್ಯವು, ಪರಿಪೂರ್ಣ ಪರಬ್ರಹ್ಮಾನುಭವದಿಂದ, **ಪಿರನ್ದ**-ಹುಟ್ಟಿದ, **ಪ್ರೀತಿವಿಶೇಷತ್ತುಕ್ಕು**-ಪ್ರೀತಿವಿಶೇಷಕ್ಕೆ, **ಪರೀವಾಹಮ್**-ಕೋಡಿಯಹಾಗೆ ಉಕ್ಕಿಬರುವ ಪ್ರವಾಹವು, **ಎನ್ನುಮಿಡತ್ತೈ** - ಎನ್ನುವ ಪ್ರಕರಣವನ್ನು, **ಗದ್ಯತ್ತಿಲೇ** - ಶರಣಾಗತಿ ಗದ್ಯದಲ್ಲಿ, **ಪಲಕಾಲನ್** - ಸ್ವಲ್ಪ ಕಾಲ, **ಅರುಳಿಚ್ಚೆಯ್‌ದಾರ್** - ಕೃಪಯಾ ಉಪದೇಶಿಸಿರುತ್ತಾರೆ. ಅಲ್ಲಿ ಹೇಳಿರುವವೇನೆಂದರೆ:—"**ತಥಾವಿಧ ಭಗವದನುಭವ ಜನಿತಾನವಧಿಕಾತಿಶಯ ಪ್ರೀತಿಕಾರಿತಾಶೇಷಾವಸ್ಥೋಚಿತಾಶೇಷ ಶೇಷತೈಕ ರತಿರೂಪ ನಿತ್ಯಕಿಙ್ಕರೋ ಭವಾನಿ**" ಹಿಂದಿನ ವಾಕ್ಯದಲ್ಲಿ ಉಪಪಾದಿಸಲ್ಪಟ್ಟಂಥಾ ಪರಿಪೂರ್ಣ ಭಗವದನುಭವದಿಂದುಂಟಾದ, ಅವಧಿಯಿಲ್ಲದ ಅತಿಶಯವಾದ ಪ್ರೀತಿಯಿಂದ ಎಂದರೆ ಭಕ್ತಿಯಿಂದ ಮಾಡಲ್ಪಟ್ಟ, ಭಗವಂತನ ಸಮಸ್ತ ಅವಸ್ಥಾವಿಶೇಷಗಳಿಗೂ ಯೋಗ್ಯವಾದ ತನ್ನ ದಾಸತ್ವದಲ್ಲೇ ಮುಖ್ಯಾಸಕ್ತಿಯುಳ್ಳ, ಕೈಂಕರ್ಯವನ್ನು ಮಾಡುವವನಾಗುವೆನು ಎಂಬರ್ಥವು. ಇದರ ತಾತ್ಪರ್ಯವೇನೆಂದರೆ, ನಿನ್ನ ಪರಿಪೂರ್ಣಾನುಭವದಿಂದ ನಿನ್ನಲ್ಲಿ ಅವಧಿಯಿಲ್ಲದಿರುವ ವಿಶ್ವಾಸಾತಿಶಯವು ಉಂಟಾಗಿ, ಆ ಪ್ರೀತ್ಯತಿಶಯವು ನಿನಗೆ ಸದಾ ದಾಸಭೂತನಾಗಿರುವ ನನ್ನಲ್ಲಿ, ನಿನಗೆ ಸರ್ವಾವಸ್ಥೆಯಲ್ಲಿಯೂ ತತ್ತದವಸ್ಥೆಗೆ ಉಚಿತವಾದ ಸರ್ವವಿಧ ಕೈಂಕರ್ಯಗಳನ್ನೂ ಎಸಗುವ ಹಾಗೆ ನಿನ್ನ ಅನುಗ್ರಹ ಉಂಟಾಗಲಿ ಎಂಬುದು. ಹೀಗೆ ಕೈಂಕರ್ಯವು ಭಗವದನುಭವದಿಂದುತ್ಪನ್ನವಾದುದರಿಂದ, ನಾರಾಯಣಾಯ ಎಂಬ ಪದದ ಚತುರ್ಥಿಯಲ್ಲಿ ತೋರುವ ಕೈಂಕರ್ಯದಿಂದ ಪರಿಪೂರ್ಣಬ್ರಹ್ಮಾನುಭವವು ಅಭಿಪ್ರೇತವು ಎಂದು ಹೇಳಲ್ಪಟ್ಟಿತು.

ಆದರೆ ಭಗವದಭಿಮತಾನುಗುಣವಾದ ಕೈಙ್ಕರ್ಯಪರ್ಯಂತವಾದುದು ಈ ಪರಿ

ಮುಕ್ತಸ್ಯ ಜಕ್ಷಣ ಕ್ರೀಡನಾದೀನಾಂ ಕೈಙ್ಕರ್ಯಾನ್ತರ್ಭಾವ ಕಥನಮ್

ಮು (ಕ್ತಿ) ಕ್ತ ದಶೆಯಿಲೇ ಶ್ರುತಿಸಿದ್ಧವಾನ ಜಕ್ಷಣಾದಿಗಳುಮ್

ಪೂರ್ಣ ಬ್ರಹ್ಮಾನುಭವವು, ಎಂದು ಹೀಗೆ ಹೇಳಿದ್ದಾದರೆ ಸ ತತ್ರ ಪರ್ಯೇತಿ ಜಕ್ಷತ್ಕ್ರೀಡನ್ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾ" (ಛಾಂ. ೮. ೧೨. ೩) ಎಂದರೆ ಆ ಪ್ರಾಪ್ಯನಾದ ಪರಮಾತ್ಮನ ಸ್ವರೂಪವನ್ನು ಹೊಂದಿ ಅತನ ಸ್ವತ್ರೀಯ ಅನುಸಂಧಾನದಿಂದ ಅತನನ್ನನುಭವಿಸುವನು. ಸ್ತ್ರೀಯರಿಂದಲೂ ವಾಹನಗಳಿಂದಲೂ, ಜ್ಞಾತಿಗಳಿಂದಲೂ ಕೂಡಿದವನಾಗಿ ರಮಿಸುವನು ಎಂದರೆ ಸರ್ವೇಶ್ವರನ ಸಙ್ಕಲ್ಪಾಧೀನನಾಗಿ ತನ್ನ ಇಚ್ಛಾನುಸಾರ ಸರ್ವ ವಿಧ ಭೋಗಗಳನ್ನು ಅನುಭವಿಸುವನೆಂದು ಶ್ರುತಿಯು ಹೇಳುತ್ತದೆಯಲ್ಲವೆ ಮತ್ತು ದಹರೋಪಾಸನೆಯಲ್ಲೂ ಅದೇ ಉಪನಿಷತ್ತು "ಸ ಯದಿ ಪಿತೃಲೋಕಕಾಮೋ ಭವತಿ, ಸಙ್ಕಲ್ಪಾದೇವಾಸ್ಯ ಪಿತರಸ್ಸಮುತ್ತಿಷ್ಠನ್ತಿ" "ಅವನಾಗ ಮುಕ್ತನಾಗುವನೋ ಆಗ ತನ್ನ ಹಿಂದಿನ ಜನ್ಮ ಸಂಬಂಧಿಗಳ ಪಿತೃವರ್ಗವನ್ನೆಲ್ಲಾ ನೋಡಬೇಕೆಂಬ ಅಪೇಕ್ಷೆಯುಂಟಾದರೆ, ಆ ಪಿತೃವರ್ಗವೆಲ್ಲಾ ಅತನ ಸಙ್ಕಲ್ಪದಿಂದಲೇ ಪ್ರಾಪ್ತರಾಗುವರು, ಅವರಿಂದ ಯುಕ್ತನಾಗಿ ಪೂಜಿಸಲ್ಪಡುವನೆಂದೂ ಪ್ರಾರಂಭಿಸಿ ಹೇಳಿ, ಕೊನೆಗೆ "ಯಂ ಯಮನ್ತಮಭಿಕಾಮೋ ಭವತಿ, ಯಂ ಕಾಮಯತೇ, ಸೋಽಸ್ಯ ಸಙ್ಕಲ್ಪಾದೇವ ಸಮುತ್ತಿಷ್ಠತಿ" "ಈ ಮುಕ್ತನಿಗೆ ಯಾವ ಯಾವ ಅನ್ತರ್ ಎಂದರೆ ಭೋಗದಲ್ಲಿ ಅಭಿರುಚಿಯೋ, ಯಾವುದು ಅಪೇಕ್ಷಿತವೋ ಅವೆಲ್ಲಾ ಅತನ ಸಙ್ಕಲ್ಪಮಾತ್ರದಿಂದಲೇ ಪ್ರಾಪ್ತವಾಗುತ್ತದೆ" ಎಂದು ಹೇಳುತ್ತದೆ. ಹೀಗೆ ಸರ್ವ ವಿಧ ಭೋಗಗಳೂ ಅನುಭವಗಳೂ ಹೇಳಲ್ಪಟ್ಟಿರುವಾಗ, ಕೈಂಕರ್ಯಪರ್ಯಂತವಾದ ಭಗವದನುಭವವೇ ಪ್ರಾಪ್ತಿ ಹೇಗಾಗುತ್ತದೆಂದು ಪ್ರಶ್ನಿಸಿದರೆ ಅದಕ್ಕೆ ಸಮಾಧಾನವನ್ನು ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಮುಕ್ತನಿಗುಂಟಾಗುವ ಜಕ್ಷಣ ಕ್ರೀಡನಾದಿಗಳೆಲ್ಲಾ ಭಗವತ್ಕೈಙ್ಕರ್ಯದಲ್ಲೇ ಅಂತರ್ಭೂತಗಳು.

ಮುಕ್ತದಶೆಯಿಲೇ - ಮುಕ್ತನಾಗಿರುವ ಅವಸ್ಥೆಯಲ್ಲಿ, ಮುಕ್ತಿದಶೆಯಿಲೇ ಎಂಬ ಪಾಠವಾದರೆ, ಮುಕ್ತಿಯನ್ನು ಹೊಂದಿರುವ ಅವಸ್ಥೆಯಲ್ಲಿ ಎಂಬ ಅರ್ಥವು, ಶ್ರುತಿಸಿದ್ಧವಾನ - ಛಾಂದೋಗ್ಯದ ಅಷ್ಟಮ ಪ್ರಪಾಠಕ ಮೂರನೆಯ

ಜ್ಞಾತ್ಯಾದಿ ಸಂಪಾದನಙ್ಗಳುಂ ಎಲ್ಲಾಮ್ ಪುಣ್ಯಪಾಪರೂಪ ಕರ್ಮ ನಿರಪೇಕ್ಷ ಭಗವದಿಚ್ಛಾನುಗುಣ ಸ್ವೇಚ್ಛಾಮೂಲಙ್ಗಳಾಗೈಯಾಲೇ ಕರ್ಮಫಲ ಮನ್ರಿಕ್ಕೇ ಅನುಭವ ಪರೀವಾಹಮಾನ ಕೇವಲ ಕೈಙ್ಕರ್ಯತ್ತಿಲೇ ಅಂತರ್ಭೂತಙ್ಗಳ್.

ಖಂಡದಲ್ಲಿ "ಜಕ್ಷತ್ಕ್ರೀಡನ್ ರಮಮಾಣಃ" ಎಂದು ಮೇಲೆ ಉದಾಹರಿಸಿರುವ ಶ್ರುತಿಪ್ರಮಾಣವುಳ್ಳ ಜಕ್ಷಣಾದಿಗಳುಮ್ - ಊಟ ಮೊದಲಾದವುಗಳೂ, ಆದಿ ಶಬ್ದದಿಂದ ಆಟ ಮೊದಲಾದವು ಸಂಗ್ರಹಿಸಲ್ಪಟ್ಟವು. ಜ್ಞಾತ್ಯಾದಿ ಸಂಪಾದನಙ್ಗಳುಂ ಎಲ್ಲಾಮ್ - ಆ ಶ್ರುತಿ ವಾಕ್ಯದಲ್ಲೇ "ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾ" ಎಂದು ಹೇಳಿರುವ ಹಾಗೆ, ಜ್ಞಾತಿಗಳೊಂದಿಗೆ ಸಮಾಗಮ ಮೊದಲಾದವುಗಳೆಲ್ಲಾ, ಇಲ್ಲಿ ಆದಿ ಪದದಿಂದ, ಸ್ತ್ರೀಗಳ, ವಾಹನಗಳ ಪ್ರಾಪ್ತಿಯು ಹೇಳಲ್ಪಟ್ಟಿತು, ಎಲ್ಲಾಮ್ ಎಂಬುವದರಿಂದ ಮಾತಾ, ಭಾರ್ಯಾ, ಭ್ರಾತಾ, ಗೀತವಾದಿತ್ರ ಮೊದಲಾದವುಗಳ ಪ್ರಾಪ್ತಿಯು ಸೂಚಿಸಲ್ಪಟ್ಟಿತು, ಹೀಗೆ ಇವೆಲ್ಲವೂ ಪುಣ್ಯಪಾಪಮೆಂಬ ಎರಡು ವಿಧವಾದ ಕರ್ಮಗಳ, ನಿರಪೇಕ್ಷ-ಮೂಲಕವಲ್ಲದ, ಭಗವದಿಚ್ಛಾನುಗುಣ - ಭಗವಂತನ ಇಷ್ಟಾನುಸಾರವಾದ, ಸ್ವೇಚ್ಛಾ ಮೂಲಙ್ಗಳಾಗೈಯಾಲೇ - ತನ್ನ ಇಷ್ಟವೇ ಮೂಲಕಾರಣವಾಗಿ ಉಳ್ಳವುಗಳಾದುದರಿಂದ, ಈ ಭೋಗಗಳೆಲ್ಲಾ. ಕರ್ಮಫಲಮನ್ರಿಕ್ಕೇ - ಕರ್ಮಫಲಗಳಲ್ಲದೇ, ಅನುಭವ ಪರೀವಾಹಮಾನ - ಪರಿಪೂರ್ಣ ಬ್ರಹ್ಮಾನುಭವದ ಪ್ರವಾಹರೂಪವಾದ, ಕೇವಲ ಕೈಙ್ಕರ್ಯತ್ತಿಲೇ - ಕೇವಲ ಕೈಂಕರ್ಯದಲ್ಲೇ, ಅಂತರ್ಭೂತಙ್ಗಳ್ - ಅಡಗಿದವು, ಸೇರಿದವು. ಆ ಊಟ ಆಟಗಳೂ, ಇತರ ಭೋಗಗಳೂ, ತಾಯಿ, ತಂದೆ, ಭಾರ್ಯಾ, ಭ್ರಾತಾ, ಮುಂತಾದವರುಗಳ ಸಮಾಗಮವೂ, ಅವರಿಂದುಂಟಾಗುವ ಹರ್ಷವೂ, ಇವೆಲ್ಲವೂ ಭಗವದನುಭವದಿಂದುಂಟಾದ ಕೈಂಕರ್ಯದಲ್ಲೇ ಪರ್ಯವಸಾನವೆಂದು ಹೇಳಲ್ಪಟ್ಟಿತು. ಹೇಗೆಂದರೆ ಮುಕ್ತದೆಶೆಯಲ್ಲಿ ಈತನಿಗೆ ಪುಣ್ಯಪಾಪರೂಪ ಕರ್ಮ ಸಂಬಂಧಕ್ಕೆ ಕಾರಣವೇ ಇರುವದಿಲ್ಲವು. "ಯಥೇಷೀಕಾ ತೂಲಮಗ್ನೌ ಪ್ರೋತಂ ಪ್ರದೂಯೇತ, ಏವಂ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ" ಎಂದು ಹೇಳಿರುವ ಹಾಗೆ ಪುಣ್ಯಪಾಪಗಳೆಲ್ಲವೂ ಬೆಂಕಿಯಲ್ಲಿ ಬಿದ್ದ ಜೂಬಿನ ಹತ್ತಿಯಂತೆ ದಗ್ಧವಾಗಿ ಹೋಗಿಬಿಡುತ್ತವೆ. ಹೀಗಿರುವಾಗ ಈತನಿಗೆ ಪ್ರಾಪ್ತವಾಗುವ, ಶ್ರುತಿಯು ಹೇಳಿರುವ, ಸರ್ವ ವಿಧ ಭೋಗಗಳೂ ಕರ್ಮಫಲವಲ್ಲವು. ಸಸ್ವರಾಡ್ಭವತಿ ಎಂದು ಹೇಳಿರುವ ಹಾಗೆ ಕರ್ಮವಶ್ಯನಲ್ಲದೆ, ಸರ್ವೇಶ್ವರನ ಇಷ್ಟಾ

ಪರಬ್ರಹ್ಮಪ್ರಾಪ್ತೇಃ ಸಿದ್ಧಾನ್ತೇಷು ನಿರ್ಣೀತೋಽರ್ಥಃ.

ಆಗೈಯಾಲ್ ಪ್ರಾಪ್ತಿಯಾಯಿತ್ತದು ಯಥಾಭಿಮತ ಕೈಙ್ಕರ್ಯ ಪರ್ಯಂತ ಪರಿಪೂರ್ಣಬ್ರಹ್ಮಾನುಭವ (ಮೆನ್ರದಾಯಿತ್ತು) ಮ್.

ಪರಿಪೂರ್ಣಬ್ರಹ್ಮಾನುಭವಸ್ಯ ನಿತ್ಯತ್ವಂ ಪ್ರಮಾಣಾನಿಚ.

ಇವ್ವನುಭವಮುಣ್ಡಾನಾಲ್ ಪಿನ್ಬೊರುಕಾಲತ್ತಿಲುಮ್ ಅಳಿಯಾದೆ

ನುಸಾರವಾಗಿ ತಾನೂ ತನ್ನ ಸಂಕಲ್ಪದಿಂದ ತನಗೆ ಇಷ್ಟವಾದ ಭೋಗಗಳನ್ನು ಅನುಭವಿಸುವನು. ಸರ್ವೇಶ್ವರನು ಹೇಗೆ ತನ್ನ ಇಷ್ಟಾನುಸಾರ ಭೋಗಗಳನ್ನನು ಭವಿಸಿ ಪ್ರೀತನಾಗುವನೋ, ಹಾಗೆಯೇ ತನ್ನ ಪ್ರಿಯಭಕ್ತನಾದ ಮುಕ್ತನೂ ಕೂಡ ಈ ಮೇಲೆ ಹೇಳಿದ ಭೋಗಗಳನ್ನನುಭವಿಸುವದರಿಂದ ಶ್ರಿಯಃಪತಿಯು ಸುಪ್ರೀತ ನಾಗುವನು. ಹೀಗೆ ಭಗವದಭಿಮತಾನುವರ್ತಿಯಾಗಿದ್ದುಕೊಂಡು ಮಾಡುವ ಈತನ ಸರ್ವವಿಧ ವ್ಯಾಪಾರ ಭೋಗಾದಿಗಳಿಂದ ಭಗವಂತನು ಸುಪ್ರೀತನಾಗಿ ಆನಂದಿಸುವದರಿಂದ ಭಗವತ್ಕೈಂಕರ್ಯದಲ್ಲೇ ಇವೂ ಅಂತರ್ಭೂತಗಳೆಂದು ಹೇಳು ವದರಲ್ಲೇನೂ ವಿರೋಧವಿಲ್ಲವೆಂಬ ಭಾವವು.

ಪರಬ್ರಹ್ಮಪ್ರಾಪ್ತಿ ಎಂಬುವದಕ್ಕೆ ಸಿದ್ಧಾನ್ತದಲ್ಲಿ ನಿರ್ಣಯಿಸಲ್ಪಟ್ಟ ಅರ್ಥವು.

ಅರ್ಥಪಂಚಕ ವಿವರಣೆಯಲ್ಲಿ ಪರಬ್ರಹ್ಮ ಪ್ರಾಪ್ತಿರೂಪ ಫಲವು ಅವುಗಳಲ್ಲಿ ಒಂದೆಂದೂ, ಆ ಫಲದ ಸ್ವರೂಪವು ಮುಂದೆ ಪ್ರಾಪ್ತ ಸ್ಥಳದಲ್ಲಿ ತಿಳಿಸಲ್ಪಡುವ ದೆಂದೂ, ಹೇಳಲ್ಪಟ್ಟಿತ್ತು. ಆ ಪರಬ್ರಹ್ಮಪ್ರಾಪ್ತಿ ಎಂಬುದು ಎಂಥಾದ್ದೆಂದು ಈಗ ತಿಳಿಸುತ್ತಾರೆ. ಈಗ ಪರಿಪೂರ್ಣ ಬ್ರಹ್ಮಾನುಭವದಿಂದುಂಟಾದ ಪ್ರೀತ್ಯತಿ ಶಯವು ಕೈಂಕರ್ಯರೂಪವಾಗಿ ಪರಿಣಮಿಸುತ್ತದೆಂದು ಹೇಳಿದುದರಿಂದ ಈ ಕೈಂಕರ್ಯಪರ್ಯಂತವಾದ ಪರಿಪೂರ್ಣಬ್ರಹ್ಮಾನುಭವವೇ ಪರಬ್ರಹ್ಮಪ್ರಾಪ್ತಿ ಎಂದು ಹೇಳಿಸಿಕೊಳ್ಳುತ್ತದೆಂದುಪದೇಶಿಸುತ್ತಾರೆ.

ಆಗೈಯಾಲ್ - ಆದುದರಿಂದ, **ಪ್ರಾಪ್ತಿಯಾಯಿತ್ತದು** - ಪರಬ್ರಹ್ಮ ಪ್ರಾಪ್ತಿ ಎಂದು ಹೇಳಿಸಿಕೊಳ್ಳುವದು, ಯಾವುದೆಂದರೆ:—**ಯಥಾಭಿಮತ** - ಭಗ ವಂತನ ಇಷ್ಟಕ್ಕನುಸಾರವಾದ, ಕೈಂಕರ್ಯಪರ್ಯಂತವಾದ, ಪರಿಪೂರ್ಣ ಬ್ರಹ್ಮಾ ನುಭವವು.

ನ್ನುಮಿಡಮ್, (೧) "ಪ್ರಾಕೃತೇಃ ಪರಮಂ ಧಾಮ ಯತೋ ನಾವರ್ತತೇ ಯತಿಃ", (೨) "ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವ

ಪರಿಪೂರ್ಣಬ್ರಹ್ಮಾನುಭವದ ನಿತ್ಯತ್ವವೂ, ಪ್ರಮಾಣಗಳೂ ಸಹ.

ಸರ್ವೇಶ್ವರ ಕೃಪೆಯಿಂದ ಒಂದಾನೊಂದು ಕಾಲದಲ್ಲಿ ಪರಿಪೂರ್ಣ ಬ್ರಹ್ಮಾನುಭವವು ಲಭಿಸಿದುದಾದರೆ, ತದನಂತರ ಅದಕ್ಕೆ ಎಂದಿಗೂ ಚ್ಯುತಿ ಇಲ್ಲವೆಂದು ಹೇಳಲುದ್ಯುಕ್ತರಾಗಿ ಕೆಲವು ಪ್ರಮಾಣಗಳನ್ನು ಉದಾಹರಿಸುತ್ತಾರೆ. ಇವ್ವನುಭವಮುಣ್ಡಾನಾಲ್ ಈ ಪರಿಪೂರ್ಣ ಬ್ರಹ್ಮಾನುಭವವು ಭಗವದನುಗ್ರಹದಿಂದ ಲಭಿಸಿದುದಾದರೆ, ಪಿನ್ನೊರುಕಾಲತ್ತಿಲುಮ್ - ಅನಂತರ ಯಾವುದೊಂದು ಕಾಲದಲ್ಲೂ, ಅಳಿಯಾದು - ನಾಶವಾಗುವದಿಲ್ಲವು, ಎನ್ನುಮಿಡಮ್ - ಎನ್ನುವ ಸಂದರ್ಭವು, (೧) "ಯತಿಃ - ಬ್ರಹ್ಮನಿಷ್ಠನಾದ ಸನ್ಯಾಸಿಯು, ಯತಃ - ಯಾವ ದಿವ್ಯ ವೈಕುಂಠದಿಂದ, ನಾವರ್ತತೇ - ಪುನಃ ಈ ಪ್ರಾಕೃತ ಲೋಕಕ್ಕೆ ಬರುವದಿಲ್ಲವೋ, ಅಂತಹ, ಪರಮಂಧಾಮ - ಸರ್ವೋತ್ಕೃಷ್ಟವಾದುದರಿಂದ ಪರಮಪದವೆಂದು ಹೇಳಿಸಿಕೊಳ್ಳುವ ಸ್ಥಾನವು, ಹೊಂದಲ್ಪಡುತ್ತದೆ." (೨) "ಮಹಾತ್ಮಾನಃ - ಸರ್ವೋತ್ಕೃಷ್ಟವಾದ ಮನಸ್ಸುಳ್ಳವರು, ಎಂದರೆ ಯಥಾವಸ್ಥಿತವಾದ ನನ್ನ ಸ್ವರೂಪದ ಜ್ಞಾನವುಳ್ಳವರಾಗಿ, ನನ್ನಲ್ಲೇ ಅತ್ಯಂತ ಭಕ್ತಿವಿಶ್ವಾಸಗಳನ್ನುಳ್ಳವರಾಗಿ, ನಾನಿಲ್ಲದೆ ಆತ್ಮಧಾರಣೆಯನ್ನು ಮಾಡಲಶಕ್ತರಾದವರಾಗಿ, ನನ್ನಲ್ಲೇ ಸೇರಿದ ಮನಸ್ಸುಳ್ಳವರು ಎಂಬರ್ಥವು. ಇಂತಹ, ಪರಮಾಂ ಸಂಸಿದ್ಧಿಂಗತಾಃ - ಸರ್ವೋತ್ಕೃಷ್ಟವಾದ ಶ್ರೇಯೋರೂಪವಾದ ನನ್ನ ಪ್ರಾಪ್ತಿಯನ್ನು ಹೊಂದಿದವರು, ಮಾಂ ಉಪೇತ್ಯ - ನನ್ನನ್ನು ಹೊಂದಿದ ನಂತರ, ದುಃಖಾಲಯಂ - ಸರ್ವವಿಧ ದುಃಖಗಳಿಗೂ ತೌರುಮನೆಯಾದ, ಅಶಾಶ್ವತಂ - ಅಸ್ಥಿರವಾದ, ಪುನರ್ಜನ್ಮವನ್ನು, ನಾಪ್ನುವಂತಿ-ಹೊಂದುವದಿಲ್ಲವು. ಆಬ್ರಹ್ಮಭುವನಾಲ್ಲೋಕಾಃ- ಬ್ರಹ್ಮಾಂಡೋದರದಲ್ಲಿರುವ ಬ್ರಹ್ಮಲೋಕಪರ್ಯಂತವಾದ ಸಮಸ್ತ ಲೋಕದ ಜನರೂ ಹೇ ಅರ್ಜುನನೇ, ಪುನರಾವರ್ತಿನಃ - ಪುನಃ ಹಿಂತಿರುಗಿ ಬರತಕ್ಕವರು ಎಂದರೆ ಅಲ್ಲಿಂದ ಪುನಃ ಈ ಲೋಕಕ್ಕೇ ಬರಬೇಕಾಗುತ್ತದೆ ಎಂಬ ಭಾವವು, ಓ ಕುಂತೀ ಪುತ್ರನೇ, ಮಾಮುಪೇತ್ಯತು - ನನ್ನನ್ನಾಶ್ರಯಿಸಿ ನನ್ನನ್ನು ಹೊಂದಿದವರಾದರೋ, ನಾನು ಸರ್ವಜ್ಞನಾಗಿ, ಸತ್ಯಸಂಕಲ್ಪನಾಗಿ, ಸಮಸ್ತ ಜಗತ್ತುಗಳ

(೧) ಅಹಿ. ೩೭. ೨೬. (೨) ಗೀ. ೮-೧೫. ೧೬.

ತಮ್ । ನಾಪ್ನುವಂತಿ ಮಹಾತ್ಮಾನಸ್ಸಂಸಿದ್ಧಿಂ ಪರಮಾಂಗತಾಃ ॥ ಆಬ್ರಹ್ಮ ಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ । ಮಾಮುಪೇತ್ಯತು ಕೌನ್ತೇಯ ಪುನರ್ಜನ್ಮ ನವಿದ್ಯತೇ ॥", (೩) "ಯದಾ ಸ ಕೇವಲೀ ಭೂತ ಷ್ಷಡ್ವಿಂಶ ಮನುಪಶ್ಯತಿತದಾ ಸಸರ್ವಸಿದ್ಧತ್ವಾ ತ್ಪುನರ್ಜನ್ಮ ನವಿಂದತಿ॥" (೪) "ಗತ್ವಾಗತ್ವಾ ನಿವರ್ತಂತೇ ಚಂದ್ರಸೂರ್ಯಾದಯೋಗ್ರಹಾಃ ।

ಉತ್ಪತ್ತಿ ಸ್ಥಿತಿಲಯಗಳನ್ನೇ ಲೀಲೆಯಾಗುಳ್ಳವನಾಗಿ, ಪರಮ ಕಾರುಣಿಕನಾಗಿ, ಯಾವಾಗಲೂ ಒಂದೇ ವಿಧವಾಗಿರುವವನಾದುದರಿಂದಲೇ, ನನ್ನನ್ನು ಹೊಂದಿದವರಿಗೆ, ಪುನರ್ಜನ್ಮ ನ ವಿದ್ಯತೇ - ಪುನರ್ಜನ್ಮವಿಲ್ಲವು," ಈ ಸಂದರ್ಭದಲ್ಲಿ "ನ ಚ ಪರಮ ಪುರುಷ ಸ್ಸತ್ಯಸಂಕಲ್ಪೋಽತ್ಯರ್ಥ ಪ್ರಿಯಂ ಜ್ಞಾನಿನಂ ಲಬ್ಧ್ವಾ ಕದಾಚಿದಾವರ್ತಯಿಷ್ಯತಿ" ಎಂದರೆ ಸತ್ಯಸಂಕಲ್ಪನಾದ ಪರಮಪುರುಷನು ತನಗೆ ಅತ್ಯಂತ ಪ್ರಿಯನಾದ ಜ್ಞಾನಿಯನ್ನು ಹೊಂದಿದವನಾಗಿ ಎಂದಿಗೂ ಆತನಿಗೆ ಆವರ್ತಿಯನ್ನುಂಟುಮಾಡುವದಿಲ್ಲವೆಂದು, ಶ್ರೀ ಯತಿವರ್ಯರು ಅಪ್ಪಣೆ ಕೊಡಿಸಿರುತ್ತಾರೆ. (೩) "ಯದಾ - ಯಾವಾಗ, ಸಃ - ಆ ಮುಕ್ತನು, ಕೇವಲೀ ಭೂತಃ - ಪ್ರಕೃತಿಸಂಬಂಧವಿಲ್ಲದವನಾಗಿ, ಷಡ್ವಿಂಶಂ - ೨೬ನೆಯ ತತ್ವವಾದ ಪರಮಾತ್ಮನನ್ನು, ಸಾಂಖ್ಯರ ವಿಭಾಗ ಪ್ರಕಾರ ೨೪ ಅಚಿತ್ತತ್ವಗಳು, ೨೫ನೆಯ ತತ್ವವು ಜೀವಾತ್ಮನು, ೨೬ನೆಯ ತತ್ವವು ಪರಮಾತ್ಮನು, ಅನುಪಶ್ಯತಿ - ಸಾಕ್ಷಾತ್ಕರಿಸಿ ಅನುಭವಿಸುವನೋ, ತದಾ - ಆಗ, ಸಃ - ಆ ಆತ್ಮನು, ಸರ್ವಸಿದ್ಧತ್ವಾತ್ - ಪರಿಪೂರ್ಣ ಬ್ರಹ್ಮಾನುಭವದಿಂದ ಸರ್ವವಿಧ ಭೋಗವೂ ಉಂಟಾಗುವದರಿಂದ, ಪುನರ್ಜನ್ಮ ನ ವಿಂದತಿ - ಪುನರ್ಜನ್ಮವನ್ನು ಹೊಂದುವದಿಲ್ಲವು. ಇದು ಶ್ರೀ ಭೀಷ್ಮರು ಹೇಳುವ ಜನಕ ಯಾಜ್ಞವಲ್ಕ್ಯ ಸಂವಾದದಲ್ಲಿ, ಮಿಥಿಲಾಧಿಪನಿಗೆ ಯಾಜ್ಞವಲ್ಕ್ಯರುಪದೇಶವು." ಈ ಸಂದರ್ಭದಲ್ಲಿ "ನ ಚ ಪರಬ್ರಹ್ಮಾನುಭವೈಕ ಸ್ವಭಾವಸ್ಯ ತದೇಕ ಪ್ರಿಯಸ್ಯ ಅನವಧಿಕಾನನ್ದಂ ಬ್ರಹ್ಮಾನುಭವತೋಽನ್ಯಾಪೇಕ್ಷಾ" "ಪರಿಪೂರ್ಣ ಬ್ರಹ್ಮಾನುಭವವನ್ನೇ ಸದಾ ಮಾಡಿಕೊಂಡು, ಆ ಪರಮಾತ್ಮನೊಬ್ಬನಲ್ಲೇ ಪರಿಪೂರ್ಣ ಪ್ರೀತಿ ಇರುವವನಿಗೆ ಅನವಧಿಕಾನಂದ ಸ್ವರೂಪನಾದ ಪರಬ್ರಹ್ಮನ ಅನುಭವಕ್ಕಿಂತ ಬೇರೆ ಯಾವುದರಲ್ಲೂ ಅಪೇಕ್ಷೆಯಿರುವದಿಲ್ಲವು" ಎಂದು ಶ್ರೀ ಯತಿವರ್ಯರು ಹೇಳಿರುತ್ತಾರೆ. (೪) "ಚಂದ್ರಸೂರ್ಯಾದಯೋ ಗ್ರಹಾಃ - ಚಂದ್ರಸೂರ್ಯರೇ ಮೊದಲಾದ ಗ್ರಹ

---

(೩) ಭಾರತ ಶಾನ್ತಿ ೩೦೮—೫೧. (೪) ವಿ. ಪು ೧. ೬. ೪೦.

ಅದ್ಯಾಪಿ ನನಿವರ್ತನ್ತೇ ದ್ವಾದಶಾಕ್ಷರ ಚಿನ್ತಕಾಃ॥" (೫) "ವಾಯಿನಾಲ್ ನಮೋನಾರಣಾವೆನ್ರು ಮತ್ತಕತ್ತಿಡೈಕ್ಕೈಗಳ್ಕೈಕ್ಕೂಪ್ಪಿ ಪ್ಪೋಯಿನಾಲ್ ಪಿನ್ನೈ ಇತ್ತಿಶೈಕ್ಕೆನ್ರುಮ್ ಪುಹೈಕೊಡುಕ್ಕಿಲುಮ್ ಪೋಗವಿಟ್ಟಾರೇ" ಇತ್ಯಾದಿಗಳಿಲೇ ಪ್ರಸಿದ್ಧಮ್.

ಗಳು, **ಗತ್ವಾ ಗತ್ವಾ** - ತಮ್ಮ ತಮ್ಮ ಅಧಿಕಾರಗಳನ್ನು ಹೊಂದಿದವರಾಗಿ, ಕೊನೆಗೆ ಪ್ರಳಯಕಾಲದಲ್ಲಿ, **ನಿವರ್ತನ್ತೇ** - ತಮ್ಮ ಸ್ಥಾನದಿಂದ ಹಿಂತಿರುಗುವರು, ಸ್ಥಾನ ಭ್ರಷ್ಟರಾಗುವರು, ಇಲ್ಲಿ ಚಂದ್ರಸೂರ್ಯರನ್ನು ಮುಖ್ಯವಾಗಿ ಹೇಳಿರುವದು, ಅವರು ಕಾಲನಿಯಾಮಕರಾಗಿರುವದರಿಂದ; ಹಾಗೆ ಹೇಳಿರುವದು ಚತುರ್ಮುಖ ಬ್ರಹ್ಮ ಮೊದಲಾದವರಿಗೂ ಕೂಡ ಉಪಲಕ್ಷಣವು; ಹೀಗೆ ಅನೇಕರಿಗೆ ಜನ್ಮ ಸಂತತಿಗಳುಂಟು; ಇನ್ನು ಯಾರಿಗೆ ಪುನರಾವರ್ತಿಯಿಲ್ಲವೆಂದರೆ ಹೇಳುತ್ತಾರೆ, **ದ್ವಾದಶಾಕ್ಷರ ಚಿನ್ತಕಾಃ** – ದ್ವಾದಶಾಕ್ಷರ ಮಂತ್ರವನ್ನು ಜಪಿಸುವವರು, **ಅದ್ಯಾಪಿ** - ಈಗಲೂ ಕೂಡ, **ನ ನಿವರ್ತನ್ತೇ** - ಹಿಂತಿರುಗಿ ಈ ಲೋಕಕ್ಕೆ ಬಂದು ಜನ್ಮವನ್ನೆತ್ತುವದಿಲ್ಲವು, ಎಂದರೆ ದಿವ್ಯವೈಕುಂಠದಲ್ಲೇ ಸದಾ ಇರುವರೆಂಬ ಭಾವವು, ದ್ವಾದಶಾಕ್ಷರ ಮಂತ್ರವು ಓಂ ವಾಸುದೇವ ಮಂತ್ರವು, ಹನ್ನೆರಡು ಅಕ್ಷರಗಳುಳ್ಳ ಮಂತ್ರವು; ಇದನ್ನೇ ನಾರದರು ಪ್ರಹ್ಲಾದರಿಗೆ ಬೋಧಿಸಿದುದು; ದ್ವಾದಶಾಕ್ಷರವೆಂದು ಹೇಳಿದುದು ಇತರ ಮಂತ್ರಗಳಾದ ಅಷ್ಟಾಕ್ಷರ ಮಂತ್ರ ಮತ್ತು ವಿಷ್ಣು ಷಡಕ್ಷರ ಮಂತ್ರಗಳಿಗೂ ಉಪಲಕ್ಷಣವು ಇಲ್ಲಿ ಅದ್ಯಾಪಿ ಎಂದು ಹೇಳಿರುವದರಿಂದ ಸೃಷ್ಟಿ ಮೊದಲುಗೊಂಡು ಇಂದಿನವರೆಗೂ ಅವರಿಗೆ ಪುನರಾವೃತ್ತಿ ಇಲ್ಲವೆಂದು ಹೇಳಿದುದರಿಂದ ಎಂದಿಗೂ ಅವರಿಗೆ ಪುನರಾವರ್ತಿ ಇಲ್ಲವೆಂಬ ಭಾವವು. (೫) "**ವಾಯಿನಾಲ್ ನಮೋನಾರಣಾವೆನ್ರು** - ಬಾಯಿಗೆ ಸಾರ್ಥಕ್ಯವಾಗಿ, ಬಾಯಿಯಿಂದ ನಮೋ ನಾರಾಯಣಾ ಎಂದು ಮೂಲ ಮಂತ್ರವನ್ನು ಜಪಿಸಿ, ಇದು ವಾಚಕ ಕೈಙ್ಕರ್ಯವು, **ಮತ್ತಕತ್ತಿಡೈಕ್ಕೈಗಳ್ಕೈಕ್ಕೂಪ್ಪಿ** - ತಲೆಗೂ ಕೈಗಳಿಗೂ ಸಾರ್ಥಕ್ಯವಾಗಿ, ಮಸ್ತಕದ ಮಧ್ಯದಲ್ಲಿ ಎಂದರೆ ತಲೆಯ ಮೇಲುಭಾಗದಲ್ಲಿ ಕೈಗಳನ್ನು ಜೋಡಿಸಿ ಅಂಜಲಿ ರೂಪದಲ್ಲಿ ನಮಸ್ಕಾರ ಮಾಡಿ, ಇದು ಕಾಯಿಕ ಕೈಙ್ಕರ್ಯವು, **ಪೋಯಿನಾಲ್**-ಹೀಗೆ ಕಾಲಯಾಪನೆಯನ್ನು ಮಾಡಿ ದೇಹತ್ಯಾಗ ಮಾಡಿದರೆ, ನಿತ್ಯವಿಭೂತಿಯ ಪ್ರಾಪ್ತಿಯುಂಟಾಗುವದರಿಂದ, **ಪಿನ್ನೈ**-ಪುನಃ, **ಇದ್ದಿಶೈಕ್ಕು** - ಈ ಲೀಲಾವಿಭೂತಿಯ ಕಡೆಗೆ, **ಎನ್ರುಮ್** - ಎಂದಿಗೂ, ಯಾವ

---

(೫) ಪೆರಿಯ ತಿರುಮೊಳಿ ೪. ೫. ೨.

ಗಲೂ, ಪಿನ್ನೈ ಕೊಡುಕ್ಕಿಲುಮ್ - ಬೇರೆ ಜಾಮೀನನ್ನು ಕೊಟ್ಟರೂ, ಪೋಗ ವೊಟ್ಟಾರ್ - ಹೋಗಲು ಸಮ್ಮತಿಸುವದಿಲ್ಲವು; ಬಾಯಿಯಲ್ಲಿ ಮೂಲ ಮಂತ್ರವನ್ನುಚ್ಚರಿಸಿ ಸಕೃತ್ ಶರಣಾಗತಿಯನ್ನು ಮಾಡಿದವರಿಗೆ ದಿವ್ಯವೈಕುಂಠ ಪ್ರಾಪ್ತಿಯುಂಟಾಗುತ್ತದೆ. ಅವರಿಗೆ ಆಮೇಲೆ ಏನು ಸಮಾಧಾನವನ್ನು ಹೇಳಿ, ಯಾವ ಜಾಮೀನನ್ನು ಕೊಟ್ಟು ನೀವು ಲೀಲಾವಿಭೂತಿಗೆ ಸ್ವಲ್ಪಕಾಲ ಹೋಗಿ ಬನ್ನಿ, ಪುನಃ ಇಲ್ಲಿಗೆ ಕರೆದುಕೊಳ್ಳುವೆವು, ಇದರಲ್ಲಿ ಸಂದೇಹ ಬೇಡವೆಂದು ಹೇಳಿದರೂ ಅವರು ಎಂದಿಗೂ ಸಮ್ಮತಿಸರು, ಅಲ್ಪಕಾಲೀನವಾದ ಈ ಶರಣಾಗತ್ಯನುಷ್ಠಾನದಿಂದ ನಿರಂತರ ದಿವ್ಯವೈಕುಂಠ ಪ್ರಾಪ್ತಿಯುಂಟಾಗ ಪುನರಾವರ್ತಿಯನ್ನು ಎಂದಿಗೂ ಅಪೇಕ್ಷಿಸುವದಿಲ್ಲವೆಂಬ ಭಾವವು ಈ ಪಾಶುರದ ಉತ್ತರಾರ್ಧವು. ಪೂರ್ವಾರ್ಧವೇನೆಂದರೆ :—

"ಶೀಯಿನಾರ್ ಚಿರನ್ದೆರಿಯು ಪುಣ್ ಮೇಲ್
ಚೆನ್ನ ಲೆರಿಕ್ಕೊಳ್ ಮ್ಮರುನ್ದು ಬುಗಲ್ ।
ಈಯಿನಾಲರಿಪ್ಪುಣ್ಣ ಮಯಙ್ಗಿ
ಯೆಲ್ಲೈವಾಯ್ ಚ್ಚೆನ್ರು ಚೇರ್ವದನ್ಮುನ್ನಮ್ ॥"

ಒಂದು ಹುಣ್ಣು ಎದ್ದು ಕೀತುಕೊಂಡು, ಬಾತು, ಆದರ ಮೇಲೆ ನೊಣ ಕೂತು, ಆದರ ಬಾಧೆ ಉರಿ ಸಹಿಸುವದಕ್ಕಾಗದೆ ಮೂರ್ಛೆ ಹೊಂದಿ ಚರಮದೆಶೆಯು ಪ್ರಾಪ್ತವಾಗಿ ದೇಹಾವಸಾನ ಪ್ರಾಪ್ತವಾಗುವದಕ್ಕೆ ಮುಂಚಿತವಾಗಿ, ನಾವು ನಮೋ ನಾರಾಯಣ ಎಂದು ಹೇಳಿ ಶರಣಾಗತಿಯನ್ನನುಷ್ಠಿಸಿ ಪರಮಪದವನ್ನು ಹೊಂದುವದು ಲೇಸು. ಅಂತಹ ದಿವ್ಯ ವೈಕುಂಠವು ದೊರೆತ ನಂತರ ಈ ತುಚ್ಛವಾದ ಲೀಲಾವಿಭೂತಿಗೆ ಹಿಂತಿರುಗಿ ಬರಲು ಎಂದಿಗೂ ನಾವು ಸಮ್ಮತಿಸಲಾರೆವು ಎಂಬುದು ಈ ಪಾಶುರಾರ್ಥವು." ಇತ್ಯಾದಿಗಳಲ್ಲಿ - ಇವೇ ಮೊದಲಾದ ಪ್ರಮಾಣಗಳಲ್ಲಿ ಪ್ರಸಿದ್ಧವು. ಹೀಗೆ ಮುಕ್ತನಿಗೆ ಶ್ರುತಿಯು, "ನ ಚ ಪುನರಾವರ್ತತೇ" ಎಂದುಪದೇಶಿಸಿದ ರೀತಿಯಲ್ಲಿ ಪುನರಾವೃತ್ತಿಗೆ ಅವಕಾಶವೇ ಇಲ್ಲವೆಂದು ಹೇಳಿರುತ್ತಾನೆ. ಈ "ದುಃಖಾಲಯಮಶಾಶ್ವತಮ್" ಎಂಬವಾಗಿ ಹೇಳಿರುವ ಈ ಮರ್ತ್ಯಲೋಕವನ್ನು ಮುಕ್ತನು ಎಂದಿಗೂ ಅಪೇಕ್ಷಿಸುವದಿಲ್ಲವು. ಸರ್ವೇಶ್ವರೇನಾದರೂ ಕಾರಣದಿಂದ ಅಲ್ಲಿಂದ ಕಳುಹಿಸಿಬಿಡುವನೋ ಎಂದರೆ, ಭಕ್ತನ ವಿಷಯದಲ್ಲಿ ಅಪಾರ ಕಾರುಣ್ಯ ಮಹೋದಧಿಯಾದವನು, ಭಕ್ತನು ಪರಮಪದಕ್ಕೆ ಬಂದಾನೇ ಎಂಬ ಅವಸರ ಪ್ರತೀಕ್ಷೆಯಲ್ಲಿದ್ದವನು, ಆ ಭಕ್ತನಿಗೆ ಮುಕ್ತಿಯನ್ನಿತ್ತು, ಅವನಿಗೆ ಪುನಃ ಅತಿ ದುಸ್ಸಹವಾದ ದುಃಖವನ್ನುಂಟುಮಾಡಿ ಅಲ್ಲಿಂದ ಓಡಿಸಿಬಿಡುವನೇ? ಆದುದರಿಂದ ಪುನರಾವೃತ್ತಿ ಶಂಕ್ಯೆಗೆ ಕಾರಣವೇ ಇರುವದಿಲ್ಲವೆಂದು

ಮುಕ್ತಸ್ಯ ಪ್ರಾಕೃತಲೋಕೇ ಸಂಚಾರೋ ನಪುನರಾವೃತ್ತಿಃ.

ಭಗವತ್ಕೈಂಕರ್ಯಾಂತರ್ಭೂತಮಾನ ಸ್ವಚ್ಛಂದ ವಿಹಾರತ್ವಾತ್

ಹೇಳಿ, ಸಪ್ತಮ ಶ್ಲೋಕದಲ್ಲಿರುವ "ನಿವೃತ್ತಿಕಥೋಚ್ಛಿತ್ತಿಂ" ಎಂಬುವದರ ಉಪಪಾದನವನ್ನು ಪ್ರಾರ್ಥಿಸಿರುತ್ತಾರೆ. ಈ ಲೀಲಾ ವಿಭೂತಿಯಲ್ಲೇ ಇರುವ ಕಾರ್ಯರೂಪವಾದ ಲೋಕಗಳಿಂದ ಪುನರಾವರ್ತಿ ಇದ್ದರೂ, ಈ ಲೀಲಾವಿಭೂತಿಯನ್ನತಿಕ್ರಮಿಸಿ ಪ್ರಕೃತಿಸಂಬಂಧವಿಲ್ಲದ ತ್ರಿಪಾದ್ವಿಭೂತಿಯಿಂದ ಪುನರಾವರ್ತಿಯಿಲ್ಲವೆಂಬ ತಾತ್ಪರ್ಯವು.

ಆದರೆ, "ಸಸ್ವರಾಡ್ಭವತಿ ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ" (ಛಾಂ ೭. ೨೫. ೨) "ಆ ಮುಕ್ತನು ಅಕರ್ಮವಶ್ಯನಾಗುವನು, ಆತನಿಗೆ ಎಲ್ಲಾ ಲೋಕದಲ್ಲೂ ಇಷ್ಟಾನುಸಾರ ಸಂಚಾರ ಉಂಟಾಗಬಹುದು" ಎಂದು ಹೇಳುವದರಿಂದ ಈ ಲೀಲಾವಿಭೂತಿಗೂ ಕೂಡ ಬಂದು ಸಂಚರಿಸಬಹುದು ಎಂದು ಶ್ರುತಿಯು ಹೇಳುತ್ತದೆ. ಹಾಗೆಯೇ ತೈತ್ತಿರೀಯ ಭೃಗುವಲ್ಲಿಯಲ್ಲೂ, (೧೦.೫) "ಇಮಾನ್ ಲೋಕಾನ್ ಕಾಮಾನ್ನೀಕಾಮರೂಪ್ಯನುಸಂಚರನ್" ಎಂದರೆ "ಈ ಮುಕ್ತನು ವಿಕಾರಗಳಿಗೆ ಒಳಪಟ್ಟ ಈ ಲೋಕವೇ ಮೊದಲಾದ ಬ್ರಹ್ಮೇಂದ್ರಾದಿ ಅಧಿಕಾರಿಗಳ ಮಂಡಲಗಳಾಗಿರುವ ಲೋಕಗಳಲ್ಲಿ ಸಂಚರಿಸಿ, ಅಲ್ಲಿನ ಸಮಸ್ತ ಭೋಗಗಳನ್ನೂ ಅನುಭವಿಸುವನು" ಎಂದು ಹೀಗೆಲ್ಲಾ ಹೇಳಿರುವದರಿಂದ ಈ ಲೋಕದ ಉಪಭೋಗಗಳೂ ಕೂಡ ಆ ಮುಕ್ತನ ಇಷ್ಟಾನುಸಾರ ಈತನಿಗೆ ಲಭಿಸಬಹುದೆಂದು ಹೇಳಿರುತ್ತದೆಯಲ್ಲಾ ಎಂದರೆ, ಅದಕ್ಕೆ ಮುಂದಿನ ವಾಕ್ಯದಿಂದ ಸಮಾಧಾನ ಹೇಳುವವರಾಗಿ ಅಂತಹ ಸಂದರ್ಭದಲ್ಲಿ ಈತನು ಕರ್ಮವಶ್ಯನಲ್ಲದುದರಿಂದ ಸರ್ವವೂ ಈತನಿಗೆ ಅನುಕೂಲವಾಗಿಯೇ ಆದವುಗಳಾಗಿ ಬಂಧವಿಲ್ಲದೆ ತನ್ನಿಷ್ಟಾನುಸಾರ ಸಮಸ್ತ ಭೋಗಾನುಭವವಾಗುವದರಿಂದ, ಆಗಲೂ ಪುನರಾವರ್ತಿಯಿಲ್ಲವೆಂದೇ ತಿಳಿಯತಕ್ಕದ್ದೆಂದುಪದೇಶಿಸುತ್ತಾರೆ.

ಮುಕ್ತನ ಲೀಲಾವಿಭೂತಿಯ ಸಂಚಾರವು ಪುನರಾವೃತ್ತಿಯಾಗುವದಿಲ್ಲವು.

ಭಗವತ್ಕೈಂಕರ್ಯಾಂತರ್ಭೂತಮಾನ - ಭಗವಂತನ ಕೈಂಕರ್ಯದಲ್ಲೇ ಅಡಗಿರುವ, ಸ್ವಚ್ಛಂದ ವಿಹಾರತ್ವಾತ್ - ತನ್ನಿಷ್ಟಾನುಸಾರವಾದ ವಿಹಾರದಲ್ಲಿ, ಭೋಗದಲ್ಲಿ, ಲೀಲಾವಿಭೂತಿಯಲ್ಲಿ, ಪ್ರಸಕ್ತಾಯಾಮ್ - ಪ್ರವೇಶಿಸಿದರೂ, ಇಷ್ಟ

ಲೀಲಾವಿಭೂತಿಯಿಲೆ ಪುಕನ್ದಾಲುಮ್ ಇನ್ನನುಭವ ಸಙ್ಕೋಚಾದಿಗಳ್ ಶಿರವಾಮೈಯಾಲೇ ಪುನರಾವರ್ತ್ತಿಯಿಲ್ಲೈ ಎಙ್ಗಿರದು.

ಅಪಕೃಷ್ಟ ಶರೀರಾದಪಿ ಮುಕ್ತಿಸ್ಸಾಧ್ಯಾ. ನಮುಕ್ತೌ ತಾರತಮ್ಯ ಪ್ರಸಂಗಃ.

ಇಪ್ಪಡಿ ಉತ್ತರಾವಧಿಯಿಲ್ಲಾದ ಯಿವ್ವನುಭವಮ್ ಪೆರುವಾರ್ಕ್ಕು

ನುಭವ ಸಙ್ಕೋಚಾದಿಗಳ್ - ಈ ಪರಿಪೂರ್ಣ ಬ್ರಹ್ಮಾನುಭವದಲ್ಲಿ, ನ್ಯೂನತೆಗಳು, **ಶಿರಾಮೈಯಾಲೇ** - ಉಂಟಾಗದೇ ಇರುವದರಿಂದ, **ಪುನರಾವರ್ತಿಯು** ಆಗಲೂ ಇಲ್ಲವು, **ಎಙ್ಗಿರದು** - ಎಂದು ಹೇಳತಕ್ಕದ್ದಾಗಿರುತ್ತದೆ. ಹಿಂದೆ ಭಗವತ್ಪ್ರೀಣನವನ್ನುಂಟುಮಾಡುವ ಈತನ ಸರ್ವ ಭೋಗಗಳೂ ಭಗವತ್ಕೈಂಕರ್ಯದಲ್ಲೇ ಅಂತರ್ಭೂತಗಳೆಂದು ಹೇಳಲ್ಪಟ್ಟಿತು. ಅದನ್ನನುಸರಿಸಿ ಇಲ್ಲಿಯೂ ಕೂಡ ಭಗವತ್ಕೈಂಕರ್ಯಾಂತರ್ಭೂತವಾದ ಸ್ವಚ್ಛಂದವಿಹಾರವೆಂದು ಹೇಳಲ್ಪಟ್ಟಿತು. ಇಂತಹ ಉಪಭೋಗಗಳೆಲ್ಲಾ **ಸ್ವಚ್ಛಂದ**ವೆಂದು ಹೇಳಿದುದರಭಿಪ್ರಾಯವು, ಕರ್ಮಮೂಲಕವಾಗಿ ಅಲ್ಲವೆಂದು ಹೇಳುವದಕ್ಕಾಗಿ ಎಂದು ತಿಳಿಯತಕ್ಕದ್ದು. ಇವು ಸ್ವಚ್ಛಂದವಾದರೂ, ಭಗವಂತನ ಇಷ್ಟಕ್ಕೆ ವಿರೋಧವಾದುದಲ್ಲವೆಂಬ ತಾತ್ಪರ್ಯವು. **ಲೀಲಾವಿಭೂತಿಯಿಲೆ ಪುಕನ್ದಾಲುಮ್** - ಎಂದು ಹೇಳುವದರಲ್ಲಿ ಮೇಲೆ ಉದಾಹರಿಸಿರುವ "**ಇಮಾನ್ ಲೋಕಾನ್**" ಎಂಬ ಮತ್ತು "**ಕಾಮಚಾರೋ ಭವತಿ**" ಎಂಬ ಶ್ರುತ್ಯರ್ಥಗಳು ಅನುಸಂಧೇಯಗಳು, ಇಲ್ಲಿ **ಸಙ್ಕೋಚಾದಿ** ಎಂಬಲ್ಲಿ **ಆದಿ** ಶಬ್ದದಿಂದ ಅನುಭವದ ಅಭಾವ ತನ್ಮೂಲಕ ಭಗವತ್ಕೈಂಕರ್ಯ ವಿಚ್ಛೇದಗಳು ಗ್ರಹಿಸಲ್ಪಟ್ಟವು.

ಹೀನ ಜನ್ಮದಿಂದಲೂ ಕೂಡ ಮುಕ್ತಿ ಸಾಧ್ಯವು. ಆದರೆ ಮುಕ್ತಿಯಲ್ಲಿ ತಾರತಮ್ಯವಿಲ್ಲವು.

ಇಪ್ಪಡಿ - ಮೇಲೆ ಉಪಪಾದಿಸಿದ ಸ್ವರೂಪವುಳ್ಳ, **ಉತ್ತರಾವಧಿಯಿಲ್ಲದ**- ಉತ್ತರಕಾಲಾವಧಿಯಿಲ್ಲದ ಎಂದರೆ ನಿತ್ಯವಾದ, **ಯಿವ್ವನುಭವಮ್** - ಈ ಕೈಂಕರ್ಯಪರ್ಯಂತವಾದ ಪರಿಪೂರ್ಣ ಬ್ರಹ್ಮಾನುಭವವನ್ನು, **ಪೆರುವಾರ್ಕ್ಕು** - ಹೊಂದುವವರಿಗೆ, **ಅನ್ತಿಮ ಶರೀರಮ್** - ಕೊನೆಯ ಪ್ರಾಕೃತ ಶರೀರವು, **ದೇವಮನುಷ್ಯಾದಿಗಳಿಲ್** - ದೇವತೆಯ ಶರೀರವೋ, ಮನುಷ್ಯಶರೀರವೋ, ಆದಿ

ಅನ್ತಿಮ ಶರೀರಮ್ ದೇವ ಮನುಷ್ಯಾದಿಗಳಿಲ್ ಇನ್ನದಿಲೆ ಎನ್ರು ತೆರಿ

ಶಬ್ದದಿಂದ, ಪಕ್ಷಿ ಮೃಗಾದಿ ಶರೀರಗಳಲ್ಲಿ, **ಇನ್ನದಿಲೆ** - ಇಂತಹುದ್ದರಲ್ಲೇ, **ಎನ್ರು**-ಎಂಬದಾಗಿ, **ತೆರಿಯಾದು** - ಗೊತ್ತಾಗುವದಿಲ್ಲವು ; ಎಂದರೆ ಇಂತಹ ಶರೀರದಿಂದಲೇ ಮುಕ್ತಿಯು, ದೇವತೆಗಳಿಗೆ ಮನುಷ್ಯರಿಗೆ ಮಾತ್ರವೇ ಮುಕ್ತಿಯು, ಇತರ ಜಂತುಗಳಿಗಿಲ್ಲವೆಂಬುದಿಲ್ಲವು. ಸರ್ವೇಶ್ವರನಿಗೆ ಕೃಪೆ ಬಂದರೆ ಯಾವ ಶರೀರದಿಂದಲೇಯಾಗಲಿ ಮುಕ್ತಿಯು ಪ್ರಾಪ್ತವಾಗಬಹುದು ಎಂಬ ತಾತ್ಪರ್ಯವು. ಮೋಕ್ಷವು ಮನುಷ್ಯಶರೀರದಿಂದಲಾಗಲಿ, ದೇವಶರೀರದಿಂದಲಾಗಲಿ ಅಥವಾ ತಿರಕ್ಕುಗಳ ಶರೀರಗಳಿಂದಲಾಗಲಿ ಪ್ರಾಪ್ತವಾಗಬಹುದು ಗಜೇಂದ್ರನಿಗೂ, ಜಟಾಯುವಿಗೂ, ಜಾಂಬವಾನನಿಗೂ ತಿರ್ಯಗ್ಜಂತು ಶರೀರಗಳೇ ಅಂತಿಮ ಶರೀರಗಳಾದವು. ವಿದುರನಿಗೆ ಶೂದ್ರದೇಹವೇ ಅಂತಿಮಶರೀರವಾಯಿತು. ಹಾಗೆಯೇ ಶ್ರೀ ಭಾಗವತದಲ್ಲಿ (೨. ೭. ೪೬)

"ತೇವೈ ವಿದನ್ತ್ಯತಿತರನ್ತಿ ಚ ದೇವಮಾಯಾಂ
ಸ್ತ್ರೀ ಶೂದ್ರ ಹೂಣ ಶಬರಾ ಅಪಿ ಪಾಪ ಜೀವಾಃ ।
ಯದ್ಯದ್ಭುತ ಕ್ರಮ ಪರಾಯಣ ಶೀಲಶಿಕ್ಷಾ
ಸ್ತಿರ್ಯಗ್ಗಣಾ ಅಪಿಕಿಮುಶ್ರುತ ಧಾರಣಾಯೇ ॥"

ಸ್ತ್ರೀಯರೂ, ಶೂದ್ರರೂ, ಹೂಣರೂ, ಪಾಪಕೃತ್ಯಗಳಿಂದ ಜೀವಿಸುವ ಶಬರರೂ ಸಹ ಈ ಪ್ರಾಕೃತ ಶರೀರವನ್ನು ತ್ಯಜಿಸಿ ಸರ್ವೇಶ್ವರನನ್ನು ಹೊಂದಬಹುದು. ಹೇಗೆ ಹೊಂದಬಹುದು ಎಂದರೆ, ಅದ್ಭುತಕ್ರಮನಾದ ತ್ರಿವಿಕ್ರಮಾವತಾರಿಯನ್ನೇ ಪರಾಯಣವೆಂದರೆ ಉತ್ಕೃಷ್ಟವಾದ ಪ್ರಾಪ್ಯ ಪ್ರಾಪಕ ಆಧಾರವಾಗಿವುಳ್ಳ ಮಹಾಭಾಗವತರ ಶೀಲದಲ್ಲಿ ಶಿಕ್ಷೆಯುಳ್ಳವರಾದರೆ ಎಂದರೆ ಭಾಗವತರನ್ನು ಇವರುಗಳು ಆಶ್ರಯಿಸಿದರೆ ಆಗ ಮುಕ್ತಿಯನ್ನು ಹೊಂದಬಹುದು. ಮತ್ತು ಅಂತಹ ಭಾಗವತ ಸಂಶ್ರಯಣವುಳ್ಳ ತಿರ್ಯಗ್ಗಣಗಳೂ ಕೂಡ ಮುಕ್ತಿ ಹೊಂದಬಹುದು. ಹೀಗಿರುವಲ್ಲಿ **ಕಿಮುಶ್ರುತಧಾರಣಾಯೇ** - ಈ ತಿರ್ಯಕ್ಕುಗಳಿಗಾದರೋ ಶ್ರುತವಾದ ಅರ್ಥವನ್ನು ಧರಿಸುವ ಶಕ್ತಿಯಿಲ್ಲವು, ಅಂತಹ ಶಕ್ತಿಯುಳ್ಳ ಬ್ರಾಹ್ಮಣ ಮೊದಲಾದ ಮನುಷ್ಯರ ವಿಷಯದಲ್ಲಿ ಹೇಳತಕ್ಕದ್ದೇನಿರುತ್ತದೆ. ಹೀಗೆ ಅಂತಿಮ ಶರೀರವು ತಿರ್ಯಗಾದಿ ಶರೀರವಾದರೂ ಆಗಬಹುದೆಂದು ಹೇಳಲ್ಪಟ್ಟಿರುತ್ತದೆ. **"ಪಶುರ್ಮನುಷ್ಯಃ ಪಕ್ಷೀವಾ ಯೇಚ ವೈಷ್ಣವ ಸಂಶ್ರಯಾಃ । ತೇನೈವ ತೇ ಪ್ರಯಾಸ್ಯಂತಿ ತದ್ವಿಷ್ಣೋಃ ಪರಮಂ ಪದಮ್ ॥"** ಎಂದೂ ಹೇಳಿರುವದರಿಂದ, ಮಹಾ

ಯಾದು. ಬ್ರಹ್ಮಾದಿಗಳುಕ್ಕುಮ್ ಮೋಕ್ಷಮುಣ್ಡು. ಅಪ್ಪಡಿಯೇ

ಭಾಗವತೋತ್ತಮನನ್ನು ಆಶ್ರಯಿಸಿದ ಪಶುವಾಗಲಿ, ಮನುಷ್ಯನಾಗಲಿ, ಪಕ್ಷಿಯಾಗಲಿ ಪರಮಪದವನ್ನು ಹೊಂದುತ್ತಾರೆಂದು ಹೇಳುವದರಿಂದ, ಈ ಶರೀರಗಳೆಲ್ಲಾ ಅಂತಿಮ ಶರೀರಗಳಾಗಬಹುದೆಂಬ ತಾತ್ಪರ್ಯವು.

ಪ್ರಪತ್ತ್ಯುಪಾಯಕ್ಕೆ ಹೇಗೆ ಉತ್ಕೃಷ್ಟಾಪಕೃಷ್ಟ ದೇಹದ ನಿಯಮವಿಲ್ಲವೋ ಭಕ್ತ್ಯುಪಾಯಕ್ಕೂ ಕೂಡ ಹಾಗೆಯೇ ಎಂದು ತಿಳಿಯತಕ್ಕದ್ದು. ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆಲ್ಲಾ ಉಪಾಸನಕ್ಕೆ ಯೋಗ್ಯತೆಯಿರುವದರಿಂದ ಪ್ರಾರಬ್ಧ ಕಳೆದ ನಂತರ ಮುಕ್ತಿಯುಂಟು. ಇನ್ನು ದೇವತೆಯ ಶರೀರದಿಂದಲೂ ಮುಕ್ತಿಯುಂಟೋ ಎಂದರೆ, ತದುಪರ್ಯಪಿ ಬಾದರಾಯಣಃ ಸಂಭವಾತ್ (೧. ೩. ೨೬) ಎಂಬ ಸೂತ್ರದಲ್ಲಿ, ತತ್ - ಆ ಪರಬ್ರಹ್ಮೋಪಾಸನವು, ಉಪರ್ಯಪಿ ಸಂಭವತಿ - ದೇವಾದಿಗಳಲ್ಲೂ ಉಂಟು; ಏಕೆಂದರೆ ಅವರಿಗೂ ಕೂಡ ಅರ್ಥಿತ್ವ ಸಾಮರ್ಥ್ಯಗಳು ಇರುವದರಿಂದ ಅವರಿಗೂ ಉಂಟೆಂದು ಬಾದರಾಯಣರು ಅಂಗೀಕರಿಸುತ್ತಾರೆಂದು ಹೇಳಿರುವದರಿಂದ ದೇವತೆಗಳಿಗೂ ಮುಕ್ತಿಯುಂಟಾದುದರಿಂದ ದೇವಶರೀರವೂ ಅಂತಿಮ ಶರೀರವಾಗಬಹುದು. ಈ ಕಾರಣಗಳಿಂದ ಯಾವ ಶರೀರದಿಂದ ಮುಕ್ತಿ ಎಂದು ಗೊತ್ತಾಗಿ ಹೇಳಲು ಸಾಧ್ಯವಿಲ್ಲವೆಂಬ ಭಾವವು. ಮನುಷ್ಯ ಶರೀರದಿಂದಲೇ ಮುಕ್ತಿ ಎಂದು ಕೆಲವರು ಭಾವಿಸಬಹುದು, ಏಕೆಂದರೆ ಉಪಾಸನೆಗೆ ಅಧಿಕಾರಿಯು ಮನುಷ್ಯನೇ ವಿನಾ ಇತರರಲ್ಲವೆಂಬಭಿಪ್ರಾಯದಿಂದ ಹಾಗೆ ಹೇಳುತ್ತಾರೆ. ದೇವತೆಗಳೂ ಅಧಿಕಾರಿಗಳೆಂದು ಹೇಳುವದಕ್ಕಾಗಿ, ಬ್ರಹ್ಮಾದಿಗಳುಕ್ಕುಮ್ ಮೋಕ್ಷಮುಂಡು ಎಂದು ಹೇಳಿದರು. ಆದರೆ ಉಪಾಸನ ಮಾತ್ರವೇ ಮೋಕ್ಷಕ್ಕೆ ಕಾರಣವಲ್ಲವಾದುದರಿಂದ, ತಿರ್ಯಗ್ಗಣ ಮೊದಲಾದವೂ ಕೂಡ ಮೋಕ್ಷವನ್ನು ಹೊಂದಬಹುದೆಂದು ಹಿಂದೆ ಹೇಳಲ್ಪಟ್ಟಿತು. ಹೀಗೆ ಮೋಕ್ಷಕ್ಕೆ ಅಂತಿಮ ಶರೀರ ನಿಯಮವಿಲ್ಲವೆಂದು ಹೇಳಿದ ನಂತರ ಚತುರ್ಮುಖ ಬ್ರಹ್ಮಾದಿ ದೇವತೆಗಳಿಗೂ ಮೋಕ್ಷ ಉಂಟೆಂದು ತಿಳಿಸುತ್ತಾರೆ:—ಬ್ರಹ್ಮಾದಿಗಳುಕ್ಕುಮ್ - ಚತುರ್ಮುಖ ಬ್ರಹ್ಮ ಮೊದಲಾದ ದೇವತೆಗಳಿಗೂ, ಆದಿ ಶಬ್ದದಿಂದ ರುದ್ರೇಂದ್ರಾದಿ ದೇವತೆಗಳೆಲ್ಲಾ ಹೇಳಲ್ಪಟ್ಟರು. ಉಪಾಸನವು ಮೋಕ್ಷವನ್ನು ಹೊಂದುವದಕ್ಕೆ ಒಂದು ಒಳ್ಳೇ ಉಪಾಯವೆಂದು ಹೇಳಲ್ಪಟ್ಟು, ದೇವತೆಗಳೂ, ಮನುಷ್ಯರಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರಾದ ಉತ್ಕೃಷ್ಟ ಮನುಷ್ಯರೇ ಯೋಗ್ಯರಾಗಿರುವಲ್ಲಿ ಯಾವ ದೇಹದಿಂದಲಾಗಲಿ ಮೋಕ್ಷವು ಸಿದ್ಧಿಸುತ್ತದೆಯೋ ಎಂಬ ಸಂದೇಹದಲ್ಲಿ ಯಾವ ಶರೀರದಿಂದಲೇ

(೧) "ಧರ್ಮವ್ಯಾಧಾದಯೋಽಪ್ಯನ್ಯೇ ಪೂರ್ವಾಭ್ಯಾಸಾಜ್ಜುಗುಪ್ಸಿತೇ । ವರ್ಣಾವರತ್ವೇ ಸಂಪ್ರಾಪ್ತಾಸ್ಸಂಸಿದ್ಧಿಂ ಶ್ರಮಣೀಯಥಾ" ಎನ್ರು ಮಹರ್ಷಿಗಳ್ ಶೊನ್ನಾರ್ಗಳ್.

ಆಗಲಿ ಉತ್ಕೃಷ್ಟಾಪಕೃಷ್ಟ ನಿಯಮವಿಲ್ಲದೆ ಆಗಬಹುದೆಂದು ಹೇಳಲ್ಪಟ್ಟಿತು. ಹೀಗೆಲ್ಲಾದರೂ ಉಂಟೇ ಎಂದರೆ ಅದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ. **ಅನ್ಯೇ ಧರ್ಮವ್ಯಾಧಾದಯೋಽಪಿ** - ಇತರರಾದ ಧರ್ಮವ್ಯಾಧರೇ ಮೊದಲಾದವರೂ ಕೂಡ, ಜುಗುಪ್ಸಿತೇ - ಮನಸ್ಸಿಗೆ ಅಸಹ್ಯವಾದ, ವರ್ಣಾವರತ್ವೇ - ನೀಚವರ್ಣದಲ್ಲಿ ಹುಟ್ಟಿರುವನು, ಸಂಭವಿಸಿರುವಾಗ ಎಂದು ಇಟ್ಟುಕೊಳ್ಳತಕ್ಕದ್ದು, ಪೂರ್ವಾಭ್ಯಾಸಾತ್ - ಹಿಂದಿನ ಜನ್ಮದಲ್ಲಿ ಮಾಡಿದ ಉಪಾಸನ ಫಲದಿಂದ, **ಸಂಸಿದ್ಧಿಮ್** - ಮೋಕ್ಷಫಲವನ್ನು, ಶ್ರಮಣೀಯಥಾ - ಶಬರಿಯು ಹೇಗೆ ಹೊಂದಿದಳೋ ಹಾಗೆ, ಸಂಪ್ರಾಪ್ತಾಃ - ಹೊಂದುತ್ತಾರೆ." ಎನ್ರು - ಎಂಬದಾಗಿ. **ಮಹರ್ಷಿಗಳ್** - ಮಹರ್ಷಿಗಳು, ಶೊನ್ನಾರ್ಗಳ್ - ಹೇಳಿರುತ್ತಾರೆ. ನೀಚಶರೀರದಿಂದ ಮೋಕ್ಷವು ಯುಕ್ತವೋ ಎಂದರೆ, ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ; ಅಂತವರಿಗೆ ಅವರು ಮಾಡಿರುವ ಭಕ್ತಿಯೋಗ ಉಪಾಸನಗಳಿಂದ ಮೋಕ್ಷವು ಸಿದ್ಧಿಸಿರಬೇಕು; ಆದರೆ ಅವರಿಗೆ ಇನ್ನೂ ಪ್ರಾರಬ್ಧವು ಕಳೆಯಲಿಲ್ಲವಾದುದರಿಂದ ಈ ಹೀನಜನ್ಮವನ್ನು ಎತ್ತಬೇಕಾಗಿ ಬಂತು; ಈ ಪ್ರಾರಬ್ಧವು ಕಳೆದ ಒಡನೆಯೇ ಪೂರ್ವಾಭ್ಯಾಸದ ಫಲವಾಗಿ ಮೋಕ್ಷವುಂಟಾಗುವದರಲ್ಲೇನೂ ವಿರೋಧವಿಲ್ಲವು. ಹಾಗೆಯೇ ಪ್ರಪತ್ತ್ಯನುಷ್ಠಾನ ಮಾಡಿದ ಮಹಾಭಾಗವತನ ಸಂಬಂಧವು ಪರಮಸುಕೃತಪರಿಪಾಕದಿಂದ ಹೀನಜನ್ಮವುಂಟಾದ ಮನುಷ್ಯನಿಗಾಗಲಿ ತಿರ್ಯಗ್ಜಂತುವಿಗಾಗಲಿ ಪ್ರಾಪ್ತವಾಗಬಹುದು; ಅದರಿಂದ ಮೋಕ್ಷಪ್ರಾಪ್ತಿಯುಂಟಾಗಬಹುದು. ಆದುದರಿಂದಲೇ ಶ್ರೀ ಯಾಮುನೇಯರು "ತವದಾಸ್ಯ ಸುಖೈಕಸಙ್ಗಿನಾಂ ಭವನೇಷ್ವಸ್ತ್ವಪಿ ಕೀಟಜನ್ಮಮೇ" ಎಂಬುದರಿಂದ ಮಹಾಭಾಗವತನ ಮನೆಯಲ್ಲಿ ಕೀಟಜನ್ಮವೂ ಕೂಡ ಉತ್ತಾರಕವೆಂದುಪದೇಶಿಸಿದರು. ಧರ್ಮವ್ಯಾಧನ ವೃತ್ತಾಂತವೇನೆಂದರೆ:—ಒಬ್ಬ ಬ್ರಾಹ್ಮಣನು ವೃದ್ಧ ಮಾತಾಪಿತೃಗಳಿದ್ದರೂ, ಅವರ ಶುಶ್ರೂಷೆಯಲ್ಲಿ ನಿರತನಾಗದೆ ಕರ್ಮನಿಷ್ಠಾದಿಗಳಿಂದ ಯುಕ್ತನಾಗಿ ಮಹಾತೇಜಸ್ವಿಯಾಗಿದ್ದನು. ಒಂದು ದಿನ ಭಿಕ್ಷಾರ್ಥಿಯಾಗಿ ಪಕ್ಕದ ಗ್ರಾಮಕ್ಕಾಗಿ ತೆರಳಿ ಮಾರ್ಗಾಯಾಸದಿಂದ ಒಂದು ಮರದ ಕೆಳಗೆ ವಿಶ್ರಮಿಸಿಕೊಂಡನು. ಒಂದು

(೧) ವಿ. ಧ. ೧೦೨. ೨೯.

ಪಕ್ಷಿಯು ಆತನ ಮೇಲೆ ಹಿಕ್ಕೆ ಹಾಕುವದರಿಂದ, ಬ್ರಾಹ್ಮಣನು ಕೋಪದಿಂದ ಪಕ್ಷಿಯನ್ನು ನೋಡಲು ಅದು ದಗ್ಧವಾಗಿ ಕೆಳಗೆ ಬಿದ್ದು ಸತ್ತಿತು. ಅನಂತರ ಆ ಗ್ರಾಮದಲ್ಲಿ ಒಂದು ಮನೆಗೆ ಭಿಕ್ಷೆಗಾಗಿ ಹೋಗಲು, ಮನೆಯಲ್ಲಿನ ಮಹಾಪತಿವ್ರತೆಯು, ಪತಿ ಶುಶ್ರೂಷೆಯನ್ನು ಮೊದಲು ಮುಗಿಸಿ, ಸ್ವಲ್ಪ ಕಾಲವಿಳಂಬದಿಂದ ಭಿಕ್ಷೆಯನ್ನು ನೀಡಲು, ಅದಕ್ಕೆ ಬ್ರಾಹ್ಮಣನು ಕುಪಿತನಾಗಿ ಪಕ್ಷಿಯನ್ನು ನೋಡಿದಂತೆ ಆವಳನ್ನೂ ನೋಡಲು, ಆಗ ಆ ಸಾಧ್ವಿಯು 'ನಿನ್ನ ಕೋಪಾಗ್ನಿಯು ನನ್ನನ್ನು ಸುಡಲು ನಾನು ಪಕ್ಷಿಯಲ್ಲ' ಎಂದು ಹೇಳಲು, ಅದಕ್ಕೆ ಬ್ರಾಹ್ಮಣನು ಆಶ್ಚರ್ಯಚಕಿತನಾಗಿ ಇದು ನಿನಗೆ ಹೇಗೆ ತಿಳಿಯಿತು, ನೀನು ಮಹಾಪತಿವ್ರತೆಯಾಗಿರಬೇಕು, ತಿಳಿಸೆಂದು ಪ್ರಾರ್ಥಿಸಲು, ಮಿಥಿಲಾನಗರದಲ್ಲಿ ಧರ್ಮವ್ಯಾಧನಿರುವನು, ಅವನಿಂದ ನೀನು ತಿಳಿಯಬಹುದೆಂದು ಹೇಳಲು, ಆಗ ಬ್ರಾಹ್ಮಣನು ಅವನಲ್ಲಿಗೆ ಹೋಗಲು, ವ್ಯಾಧನು 'ತಮ್ಮನ್ನು ಬ್ರಾಹ್ಮಣಪತ್ನಿಯು ನನ್ನಲ್ಲಿಗೆ ಕಳುಹಿಸಿದಳೇ' ಎಂದು ಪ್ರಶ್ನಿಸಲು ಇನ್ನೂ ಆಶ್ಚರ್ಯಚಕಿತನಾಗಿ, ಇದು ನಿನಗೆ ಹೇಗೆ ತಿಳಿಯಿತು ಎನ್ನಲು, ಮಾತೃ**ದೇವೋಭವ,** ಪಿತೃದೇವೋಭವ ಎಂದು ಹೇಳುವ ಹಾಗೆ ಮಾತಾಪಿತೃಗಳನ್ನೇ ಲೋಕದಂಪತಿಗಳನ್ನಾಗಿ ಭಾವಿಸಿ ಆರಾಧಿಸುವದರಿಂದ ನನಗೆ ತಿಳಿಯಿತು, ಹಾಗೆಯೇ ಆ ಬ್ರಾಹ್ಮಣಪತ್ನಿಯೂ ಪತಿಯೇ ಪರದೇವತೆ ಎಂದು ನಂಬಿರುವದರಿಂದ ಆಕೆಗೂ ತಿಳಿಯುವದೆಂದು ಹೇಳಿದುದರಿಂದ, ಹಿಂತಿರುಗಿ ಬಂದು ಮಾತಾಪಿತೃಶುಶ್ರೂಷೆಯಲ್ಲಿ ನಿರತನಾಗಿದ್ದನು.

ಶಬರಿಯು ಮತಂಗ ಶಿಷ್ಯರಿಂದ ಉಪದಿಷ್ಟಳಾದ ಒಬ್ಬ ತಾಪಸಿಯು; ಶ್ರೀರಾಮಾಗಮನವನ್ನು ನಿರೀಕ್ಷಿಸುತ್ತಿದ್ದು, ಆತನಿಗೆ ಹಲವಿಧ ಸತ್ಕಾರಗಳನ್ನೆಸಗಿ, ಪಂಪಾತೀರದಲ್ಲಿ ಬೆಳೆದ ಬಹು ರುಚಿಕರವಾದ ಫಲಗಳನ್ನರ್ಪಿಸಿ, ಶ್ರೀರಾಮಾಜ್ಞೆಯಂ ಪಡೆದು ದೇಹತ್ಯಾಗವನ್ನು ಮಾಡಿ ಮುಕ್ತಿಯನ್ನು ಹೊಂದಿದಳೆಂಬ ವೃತ್ತಾಂತವು ಅರಣ್ಯಕಾಂಡದ ೭೪ನೆಯ ಅಧ್ಯಾಯದಲ್ಲಿ ಬರುತ್ತದೆ. ಈ ಸ್ಥಳದಲ್ಲಿ ಆಕೆಯು ಫಲಗಳನ್ನು ರುಚಿ ನೋಡಿ ತಿಂದು ರುಚಿಕರವಾದುವನ್ನು ಆರಿಸಿ ಇಟ್ಟಿದ್ದಳೆಂದೂ, ಶ್ರೀರಾಮನು ಶಬರಿಯ ಎಂಜಲು ಹಣ್ಣನ್ನು ತಿಂದನೆಂದೂ, ಹೇಳಿಲ್ಲ. ಪಾದ್ಮಪುರಾಣದಲ್ಲಿ "ಫಲಾನಿ ಚ ಸುಪಕ್ವಾನಿ ಮೂ**ಲಾನಿ ಮಧುರಾಣಿ ಚ । ಸ್ವಯಮಾಸ್ವಾದ್ಯ ಮಾಧುರ್ಯಂ ಪರೀಕ್ಷ್ಯ ಪರಿಭಕ್ಷ್ಯ ಚ । ಪಶ್ಚಾನ್ನಿವೇದಯಾಮಾಸ ರಾಘವಾಭ್ಯಾಂ ದೃಢವ್ರತಾ ॥** ಎಂಬದಾಗಿ ಹೇಳಿರುತ್ತದೆ. ಇತರ ಸಮಾನ ಫಲಗಳ ರುಚಿ ನೋಡಿ, ಉತ್ತಮ ಫಲಗಳನ್ನಾರಿಸಿಟ್ಟಿರಬಹುದು. ವಿದುರನು ಶೂದ್ರನಾಗಿದ್ದರೂ ಹೇಗೆ ಉಪಾಸನಾಧಿಕಾರಿಯಾದನೋ, ಹಾಗೆಯೇ ಈ ಶಬರಿಯು ಸ್ತ್ರೀಯಾಗಿದ್ದರೂ ಉಪಾ

ಮುಕ್ತೌ ಆನಂದ ತಾರತಮ್ಯಂ ನಾಸ್ತಿ. ಮಾಧ್ವಮತ ನಿರಾಸಃ

ಆಕ್ಕೈಯಿನಾಲ್ ಮುಮುಕ್ಷು ದಶೈಯಿಲ್ ಔಪಾಧಿಕಙ್ಗಳಾನ ಉತ್ಕ ರ್ಷಾಪಕರ್ಷಙ್ಗಳೈಕೊಣ್ಡು ಮುಕ್ತದಶೈಯಿಲುಮ್ ಅನುಭವ ತಾರತಮ್ಯ ಮುಣ್ಡೆನ್ಱು ಆನಂದ ತಿೞ್ಮೈಯರ್ ಮುಕ್ತರುಕ್ಕೆಲ್ಲಾಮ್ ಸರ್ವೇಶ್ವರನೋ

ಸಕಳು. ಇಂತಹ ಪರಮ ಜ್ಞಾನಿಯಾದವಳು ತಾನು ತಿಂದು ನೋಡಿ ಎಂಜಲು ಮಾಡಿದ್ದನ್ನು ಶ್ರೀರಾಮನಿಗೆ ಅರ್ಪಿಸಿದಳೆಂಬುದ ಹೇಳಿಕೆಯು ಶಬರಿಯ ಮಾಹಾತ್ಮ್ಯಕ್ಕೆ ಕುಂದಕವು. ಇದಕ್ಕೆ ಆಧಾರವೇನೆಂದು ತಿಳಿಯಲಿಲ್ಲವು.

ಹಿಂದಿನ ವಾಕ್ಯದಲ್ಲಿ ಉತ್ಕೃಷ್ಟಾಪಕೃಷ್ಟ ಶರೀರತಾರತಮ್ಯವಿಲ್ಲದೆ ಈ ಚೇತನನಿಗೆ ಮುಕ್ತಿಯುಂಟು, ಎಂದು ಹೇಳಿದ ನಂತರ ಈ ಉತ್ಕೃಷ್ಟಾಪಕೃಷ್ಟ ಶರೀರಾನುಗುಣವಾಗಿ ಆನಂದವೇ ಅಥವಾ ಎಲ್ಲರಿಗೂ ಒಂದೇ ವಿಧವಾದ ಭೋಗವೇ ಎಂಬ ಪ್ರಶ್ನೆಯು ಉಂಟಾಗುತ್ತದೆ. ದ್ವೈತಸಿದ್ಧಾಂತಿಗಳಾದ ಮಾಧ್ವರು ಎಲ್ಲರಿಗೂ ಒಂದೇ ವಿಧವಾದ ಆನಂದವು ಮುಕ್ತಿದೆಶೆಯಲ್ಲಿಲ್ಲವೆಂದೂ, ಆಯಾಯಾ ಶರೀರಿಗಳಿಗೆ ಅನುಗುಣವಾದ ಭೋಗವೆಂದೂ ಹೇಳುವದಲ್ಲದೆ ಕೆಲವರಿಗೆ ಎಂದಿಗೂ ಮುಕ್ತಿಯೂ ಇಲ್ಲವೆಂದಭಿಪ್ರಾಯಪಡುವರು. ಇದು ಸರಿಯಲ್ಲವೆಂದೂ, ಎಲ್ಲಾ ಆತ್ಮಗಳೂ ಜ್ಞಾನೈಕಾಕಾರತೆಯಿಂದ ಸಮರಾದುದರಿಂದ ಎಲ್ಲರಿಗೂ ಆನಂದವು ಸಮವೆಂದು ಸಿದ್ಧಾಂತಿಗಳು ಹೇಳುತ್ತಾರೆ. ಮುಕ್ತಿದೆಶೆಯಲ್ಲಿ ಸ್ವೇನರೂಪೇಣಾಭಿನಿಷ್ಪದ್ಯತೇ ಎಂದು ಹೇಳಿರುವದರಿಂದ, ಗುಣಾಷ್ಟಕಗಳೊಂದಿಗೆ ಸ್ವಸ್ವರೂಪಾವಿರ್ಭಾವವು ಬೋಧಿಸಲ್ಪಟ್ಟಿರುವದರಿಂದ ಆನಂದ ತಾರತಮ್ಯಕ್ಕೆ ಕಾರಣವೇ ಇಲ್ಲವು ಎಲ್ಲಾ ಮುಕ್ತರಿಗೂ ಒಂದೇ ವಿಧವಾದ ಸ್ವಸ್ವರೂಪಾವಿರ್ಭಾವವು ಪ್ರಾಪ್ತವಾಗುವದರಿಂದ ಅನುಭವದಲ್ಲಿ ವ್ಯತ್ಯಾಸ ಉಂಟಾಗಲು ಕಾರಣವೇ ಇಲ್ಲವು.

ಆಕ್ಕೈಯಿನಾಲ್ - ಆದುದರಿಂದ ಎಂದರೆ ಹೀಗೆ ಅಂತಿಮ ಶರೀರಕ್ಕೆ ನಿಯಮವಿಲ್ಲದೆ ಉತ್ಕೃಷ್ಟಾಪಕೃಷ್ಟಗಳಿರಬಹುದೆಂದು ನಿರ್ಣಯಿಸಿದ ನಂತರ, ಮುಮುಕ್ಷು ದಶೈಯಿಲ್ - ಮೋಕ್ಷವನ್ನು ಬಯಸುವ ದೆಶೆಯಲ್ಲಿ, ಔಪಾಧಿಕಙ್ಗಳಾನ - ಕರ್ಮೋಪಾಧಿಮೂಲಕವಾಗಿ ಉಂಟಾದ, ಉತ್ಕರ್ಷಾಪಕರ್ಷಙ್ಗಳೈಕೊಣ್ಡು - ಉತ್ಕೃಷ್ಟಾಪಕೃಷ್ಟಗಳನ್ನು ಆಧಾರವಾಗಿಟ್ಟುಕೊಂಡು, ಮುಕ್ತದಶೈಯಿಲುಮ್ - ಮುಕ್ತಾವಸ್ಥೆಯಲ್ಲಿಯೂ, ಅನುಭವ ತಾರತಮ್ಯಮುಣ್ಡೆನ್ಱು - ಭೋಗದಲ್ಲಿ ತಾರತಮ್ಯ ಉಂಟೆಂದು ಹೇಳಿದ, ಆನಂದತಿೞ್ಮೈಯರ್ - ಶ್ರೀ ಮಧ್ವಾಚಾರ್ಯರವರು,

ಡೇ ಪರಮ ಸಾಮ್ಯಮ್ ಶೊಲ್ಲುಗಿರ ಶ್ರುತ್ಯಾದಿಗಳೈ ಮರನ್ದಾರ್ಗಳ್.

ಮುಕ್ತರಿಗೆಲ್ಲಾ, ಸರ್ವೇಶ್ವರನೊಂದಿಗೆ, ಪರಮ ಸಾಮ್ಯಮ್ - ವಿಶೇಷ ಸಮಭಾವವನ್ನು, ಶೊಲ್ಲುಗಿರ - ಹೇಳುವ, ಶ್ರುತ್ಯಾದಿಗಳೈ - ಶ್ರುತಿಯನ್ನೂ, ಆದಿ ಶಬ್ದದಿಂದ ಸ್ಮೃತಿಯಾದ ಗೀತಾವಾಕ್ಯ ಮೊದಲಾದವುಗಳನ್ನು, ಮರನ್ದಾರ್ಗಳ್ - ಜ್ಞಾಪಕಕ್ಕೆ ತಂದುಕೊಳ್ಳಲಿಲ್ಲವು; ಆನಂದ ತಾರತಮ್ಯ ಹೇಳಿದರೆ, ಈ ಶ್ರುತಿ ಸ್ಮೃತಿಗಳಿಗೆ ವಿರೋಧವಾಗುತ್ತವೆಂಬುದನ್ನು ಮರೆತರೆಂಬ ಭಾವವು. ಉತ್ಕೃಷ್ಟರಾಗಿ ಋಷಿಗಳಾಗಿದ್ದು ಉತ್ಕೃಷ್ಟ ದೇಹವನ್ನೆತ್ತಿದ್ದ ವ್ಯಾಸರಿಗೂ, ಹಿಂಸಾರೂಪ ಕರ್ಮಾವಲಂಬಿಯಾದ ವ್ಯಾಧನಿಗೂ ಒಂದೇ ವಿಧವಾದ ಮುಕ್ತಿ ಎಂದರೆ ಮನ ಒಡಂಬಡದೆ ಇಬ್ಬರಿಗೂ ಆನಂದದಲ್ಲಿ ವ್ಯತ್ಯಾಸವಿರಬೇಕೆಂದು ಅಭಿಪ್ರಾಯ ಪಡುವ ಕಾಲದಲ್ಲಿ, ಪರಮಸಾಮ್ಯವನ್ನು ಹೇಳುವ ಶ್ರುತಿಗೂ ಇತರ ಪ್ರಮಾಣಗಳಿಗೂ ವಿರೋಧವಾಗುತ್ತದೆಂಬುದನ್ನು ಮರೆತರೆಂಬ ಭಾವವು. ಅವುಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಲಿಲ್ಲವು ಆ ಶ್ರುತಿ ಯಾವುದೆಂದರೆ:— **"ತದಾವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ"** (ಮುಂಡಕ, ೩. ೧. ೩) "ಯಾವಾಗ ಸರ್ವೇಶ್ವರ ಸಾಕ್ಷಾತ್ಕಾರ ಉಂಟಾಯಿತೋ, ಆಗ ಈ ಬ್ರಹ್ಮವಿತ್ತಾದವನು, ಪುಣ್ಯಪಾಪಗಳನ್ನೆಲ್ಲಾ ಕೊಡವಿಕೊಂಡು ಎಂದರೆ ಅವುಗಳಿಂದ ವಿಮುಕ್ತನಾಗಿ, ಪ್ರಕೃತಿ ಲೇಪವಿಲ್ಲದವನಾಗಿ ಕರ್ಮಬಂಧವಿಲ್ಲದೆ, ಅಪಹತ ಪಾಪ್ಮತ್ವಾದಿ ಗುಣಾಷ್ಟಕಗಳೊಂದಿಗೆ ಸ್ವಸ್ವರೂಪಾವಿರ್ಭಾವ ಉಂಟಾಗುವದರ ಮೂಲಕ ಪರಬ್ರಹ್ಮನೊಂದಿಗೆ ಅತ್ಯಂತ ಸಾಮ್ಯವನ್ನು ಹೊಂದುತ್ತಾನೆ. ಎಂದರೆ ಸಮಾನ ಆನಂದ ಸಮಾನ ಭೋಗವನ್ನು ಹೊಂದುತ್ತಾನೆ." ಹಾಗೆಯೇ ಸ್ಮೃತಿಯೂ ಹೇಳುತ್ತದೆ:—

"ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ ।
ಸರ್ಗೇಽಪಿ ನೋಪಜಾಯನ್ತೇ ಪ್ರಳಯೇ ನವ್ಯಥನ್ತಿ ಚ ॥" (೧೪. ೨)

ಇದು ಭಗವದ್ವಾಕ್ಯವು. ಮುಂದೆ ನಾನು ನಿನ್ನಲ್ಲಿರುವ ಪ್ರೀತ್ಯತಿಶಯದಿಂದುಪದೇಶಿಸುವ ಜ್ಞಾನವನ್ನಾಶ್ರಯಿಸಿ, ನನ್ನೊಂದಿಗೆ ಸಮಾನಧರ್ಮವನ್ನು ಹೊಂದಿದವರು (ಇದನ್ನೇ ಶ್ರುತಿಯು ಸಾಮ್ಯವೆಂದು ಹೇಳಿತು.) ಸೃಷ್ಟಿಯಲ್ಲಿ ಪುನಃ ಜನ್ಮವೆತ್ತುವದಿಲ್ಲವು, ಯಾವಾಗ ಜನ್ಮವಿಲ್ಲವೋ ಪ್ರಳಯದಲ್ಲಿ ಸಿಕ್ಕಿ ದುಃಖಿಸುವದೂ ಇಲ್ಲವು ಎಂದು ಹೇಳುತ್ತದೆ. ಅದ್ವೈತಿಗಳು ಪರಮಾತ್ಮನಲ್ಲಿ ಐಕ್ಯವೇ ಸಾಧರ್ಮ್ಯವೆಂದು ಹೇಳುತ್ತಾರೆ. ಇವರಿಗೆ ಈ ಗೀತಾವಾಕ್ಯವೂ ಈ ಸಾಮ್ಯ

ಶ್ರುತಿಯೂ ವಿರೋಧವಾದುವು. ಸಾಧರ್ಮ್ಯವೆಂದರೆ ಸರ್ವೇಶ್ವರನೊಂದಿಗೆ ಸಮಾನ ಧರ್ಮವು, ಅಪಹತಪಾಪ್ಮತ್ವಾದಿ ಗುಣಾಷ್ಟಕಾವಿರ್ಭಾವದಿಂದಲೂ, ಸಮಾನಾನಂದ ಭೋಗದಿಂದಲೂ ಸಮಾನ ಧರ್ಮವೆಂದು ತಿಳಿಯತಕ್ಕದ್ದು. ಏತಲ್ಲಿ ಸಮಾನ ಧರ್ಮವೆಂಬುದನ್ನು ಶ್ರೀ ವ್ಯಾಸಮಹರ್ಷಿಗಳು ವ್ಯಕ್ತಪಡಿಸುತ್ತಾರೆ. ಜಗದ್ವ್ಯಾಪಾರಧರ್ಮವಿಲ್ಲವೆಂದೂ, ಭೋಗದಲ್ಲಿ ಮಾತ್ರ ಎಂದರೆ ಆನಂದದಲ್ಲಿ ಮಾತ್ರ ಸಾಮ್ಯವೆಂದುಪದೇಶಿಸುತ್ತಾರೆ. ವ್ಯಾಸೋಕ್ತಿಗಿಂತ ಆಪ್ತವಾಕ್ಯವು ಬೇರೆ ದೊರೆಯಲಾರದು. ಇಂತಹ ಪ್ರಮಾಣಗಳನ್ನೆಲ್ಲಾ ಮನಸ್ಸಿನಲ್ಲಿಟ್ಟು ಶ್ರೀ ವಾಲ್ಮೀಕಿ ಮಹರ್ಷಿಯೂ ಈ ಅಭಿಪ್ರಾಯವನ್ನೇ ವ್ಯಕ್ತಪಡಿಸಿರುತ್ತಾರೆ. ಶ್ರೀ ವಿಭೀಷಣಾಳ್ವಾರನು, "ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ" ಎಂದು ಸರ್ವವಿಧ ಪ್ರಾತಿಕೂಲ್ಯವನ್ನೂ ತೊರೆದು ಮಹಾ ವಿರಕ್ತಿಭಾವದಿಂದ, ಪೂರ್ಣ ಭರನ್ಯಾಸವನ್ನು ಯಾವಾಗನುಷ್ಠಿಸಿದನೋ, ಮತ್ತು ಯಾವಾಗ ಶ್ರೀರಾಮನು ಸುಗ್ರೀವನಭಿಪ್ರಾಯಕ್ಕೆ ವಿರೋಧವಾಗಿ ತನ್ನ ಶರಣಾಗತ ರಕ್ಷಣೆ ಪ್ರತಿಜ್ಞೆಯನ್ನು ವ್ಯಕ್ತಪಡಿಸಿದನೋ, ಆಗ ಶ್ರೀರಾಮನಭಿಪ್ರಾಯವನ್ನಂಗೀಕರಿಸಿದವನಾಗಿ ಸುಗ್ರೀವನು ಹೇಳುತ್ತಾನೆ:—

ತಸ್ಮಾತ್ ಕ್ಷಿಪ್ರಂ ಸಹಾಸ್ಮಾಭಿ ಸ್ತುಲ್ಯೋಭವತು ರಾಘವ ।
ವಿಭೀಷಣೋ ಮಹಾಪ್ರಾಜ್ಞ ಸ್ಸಖಿತ್ವಂ ಚಾಭ್ಯುಪೈತು ನಃ ।

(ರಾಮಾ ಯುದ್ಧ ೧೮. ೩೮) "ವಿಭೀಷಣನು ಮಹಾಪ್ರಾಜ್ಞನಾದುದರಿಂದ ನಮಗೆ ಮಿತ್ರನಾಗಿ ನಮ್ಮೆಲ್ಲರೊಂದಿಗೂ ಸಮಭಾಗವನ್ನು ಹೊಂದಲಿ ಎಂದರೆ ಸಮಾನ ಭೋಗವನ್ನು ಹೊಂದಲಿ ಎಂದು ಹೇಳಿದನು. ಇದರಿಂದ ಮುಕ್ತದೆಶೆಯಲ್ಲಿ ಮುಕ್ತರಿಗೆ ಪರಸ್ಪರ ಸಮಾನಾನಂದವೂ, ಈ ಆನಂದವೂ ಪರಮಾತ್ಮನಿಗೆ ಸಮಾನವಾದುದೆಂದು ಸ್ಪಷ್ಟವಾಯಿತು. ಹೀಗೆಲ್ಲಾ ಪ್ರಮಾಣಗಳಿದ್ದರೂ ದ್ವೈತಸಿದ್ಧಾಂತಿಗಳಾದ ಶ್ರೀಮಧ್ವಾಚಾರ್ಯರವರು ಆನಂದ ತಾರತಮ್ಯವನ್ನು ತಮ್ಮ ಶಿಷ್ಯರುಗಳಿಗೆ ಉಪದೇಶಿಸಿದರು. ಈ ಅಭಿಪ್ರಾಯವು ಅಭಯಂ ಸರ್ವ ಭೂತೇಭ್ಯೋ ದದಾಮಿ ಎಂಬಲ್ಲಿರುವ ಸರ್ವ ಭೂತೇಭ್ಯಃ ಎಂಬ ಪ್ರಯೋಗಕ್ಕೂ "ಸಮೋಽಹಂ ಸರ್ವ ಭೂತೇಷು" ಎಂಬ ಪ್ರಮಾಣಕ್ಕೂ, ಸರ್ವಸ್ಯ ಶರಣಂ ಸುಹೃತ್ ಎಂಬ ಶ್ರುತಿಗೂ ಸಹ ವಿರೋಧವಾಗುತ್ತದೆ. ಉತ್ಕೃಷ್ಟ ಸಾಧನದಿಂದ ಮುಕ್ತನಾದವನಿಗೂ ನಿಕೃಷ್ಟ ಸಾಧನದಿಂದ ಮುಕ್ತನಾದವನಿಗೂ ಒಂದೇ ವಿಧವಾದಾನಂದವು ಹೇಗೆ ಎಂಬ ಶಂಕೆ ತಾನಾಗಿ ಅವನ್ನು ಬಾಧಿಸುವಂತಾಗಿ ತೋರುತ್ತದೆ. ಈ ಶಂಕೆಗೆ ಸಮಾಧಾನವು ಪ್ರಮಾಣ: ನದೇವೋ ನನರೋ ನಪಶುರ್ನ ಚ ಪಾದಪಃ । ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ (ವಿ. ಪು. ೨. ೧೩. ೯೮)

ಎಂದರೆ ಆತ್ಮನು ದೇವತೆಯೂ ಅಲ್ಲವು, ಮನುಷ್ಯನೂ ಅಲ್ಲವ, ವೃಕ್ಷವೂ ಅಲ್ಲವು, ಈ ದೇಹಗಳೆಲ್ಲಾ ಚೇತನರುಗಳಿಗೆ ಕರ್ಮ ಮೂಲಕ ಉಂಟಾದವು ಎಂದು ಹೇಳಿರುವದರಿಂದ, ಮುಕ್ತದಶೆಯಲ್ಲಿ ಕರ್ಮಗಳೂ, ಆ ಕಾರಣದಿಂದ ಈ ದೇಹಗಳೂ ಇಲ್ಲದಿರುವದರಿಂದ ಅವರಿಂದ ತಾರತಮ್ಯವು ಹೇಗೆ? ಆನಂದದಲ್ಲಿ ಭೇದ ಉಂಟೆಂಬ ಭಾವವು ವಿ. ಪು. ಷಷ್ಠಾಂಶ ಸಪ್ತಮಾಧ್ಯಾಯ ೯೫, ೯೬ನೆಯ ಶ್ಲೋಕಗಳಲ್ಲಿ ಶ್ರೀ ಪರಾಶರರಿಂದ ವಿಶದವಾಗಿ ಹೇಳಲ್ಪಟ್ಟಿರುತ್ತದೆ. "ತದ್ಭಾವ ಭಾವಮಾಪನ್ನಸ್ತತೋಽಸೌ ಪರಮಾತ್ಮನಾ। ಭವತ್ಯಭೇದೀ ಭೇದಶ್ಚ ತಸ್ಯಾಜ್ಞಾನಕೃತೋ ಭವೇತ್ ॥" ತದ್ಭಾವ ಭಾವಂ - ಆ ಪರಮಾತ್ಮನ ಭಾವಗಳಾದ ಅಪಹತಪಾಪ್ಮತ್ವಾದಿ ಧರ್ಮಗಳ ಭಾವ ಎಂದರೆ ಪ್ರಾದುರ್ಭಾವವನ್ನು. ಆಪನ್ನಃ - ಹೊಂದಿದ ಮುಕ್ತನಾದ, ಅಸೌ - ಇವನು, ಪರಮಾತ್ಮನಾ - ಪರಮಾತ್ಮನೊಂದಿಗೆ, ಅಭೇದೀ - ಭೇದವಿಲ್ಲದವನು ಎಂದರೆ ಪರಮಸಾಮ್ಯವನ್ನು ಹೊಂದಿದವನು, ಭವತಿ - ಆಗುವನು, ಜ್ಞಾನಾದಿಗಳಲ್ಲಿ ಬೇರಾದ ಆಕಾರಗಳಿಂದ ಪರಮಾತ್ಮನೊಂದಿಗೆ ಸಮಾನಾಕಾರವುಳ್ಳವನಾಗುತ್ತಾನೆ. ತಸ್ಯ - ಅಂಥ ಮುಕ್ತನಿಗೆ, ಭೇದಃ - ಭೇದವು, ಅಜ್ಞಾನಕೃತೋ ಭವೇತ್ - ಕರ್ಮ ಮೂಲಕವಾಗಿ ಬಂದ ಅಜ್ಞಾನದಿಂದುಂಟಾಗುತ್ತದೆ; ಅಥವಾ, ತಸ್ಯ - ಆ ಮುಕ್ತನಿಗೆ, ಭೇದಃ - ಬದ್ಧದಶೆಯಲ್ಲಿ ಭೇದವಿದ್ದಿದ್ದರೂ, ಅಜ್ಞಾನಕೃತೋ ಭವೇತ್ - ಕರ್ಮ ಮೂಲಕವಾಗಿ ಬಂದ ಅಜ್ಞಾನದಿಂದ ಹಾಗೆ ಇರುತ್ತದೆ ಈ ಅಭಿಪ್ರಾಯವನ್ನೇ ಮುಂದಿನ ಶ್ಲೋಕದಲ್ಲಿ ವಿವರಿಸಿ ಹೇಳುತ್ತಾರೆ:— "ವಿಭೇದ ಜನಕೇಽಜ್ಞಾನೇ ನಾಶಮಾತ್ಯಂತಿಕಂ ಗತೇ। ಆತ್ಮನೋ ಬ್ರಹ್ಮಣೋ ಭೇದಮಸಂತಂ ಕಃ ಕರಿಷ್ಯತಿ ॥" (ವಿ. ಪು. ೬. ೭. ೯೬) ವಿಭೇದ ಜನಕೇ - ನಾನಾ ವಿಧವಾದ ತಿರ್ಯಕ್ತ್ವಾದಿ ರೂಪದಿಂದುಂಟಾದ, ಅಜ್ಞಾನೇ - ಅಜ್ಞಾನವು, ನಾಶಮಾತ್ಯಂತಿಕಂ ಗತೇ - ಜ್ಞಾನಪ್ರಕಾಶದಿಂದ ಪುನಃ ಹುಟ್ಟದಿರುವದು ಎಂಬ ಜ್ಞಾನದಿಂದ ಸಂಪೂರ್ಣವಾಗಿ ನಾಶಹೊಂದಲಾಗಿ, ಆತ್ಮನಃ - ಜೀವಾತ್ಮರುಗಳಿಗೂ (ಜಾತ್ಯೇಕ ವಚನ), ಬ್ರಹ್ಮಣಃ - ಪರಬ್ರಹ್ಮಕ್ಕೂ, ಅಸಂತಂ - ಇಲ್ಲದೇ ಇರುವ, ಭೇದಂ - ಭೇದವನ್ನು, ಕಃ ಕರಿಷ್ಯತಿ - ಯಾವನು ತಾನೇ ಮಾಡುವನು? ಎಂದರೆ ಇಬ್ಬರಿಗೂ ಸಾಮ್ಯವನ್ನು ಹೇಳಿರುವ ಭಾವ.

ಇದಲ್ಲದೆ ಕೆಲವರಿಗೆ ಅಧಿಕಾನಂದವೂ, ಇನ್ನು ಕೆಲವರಿಗೆ ಕಮ್ಮಿ ಆನಂದವೂ ಹೀಗಾದರೆ, ಕಡಿಮೆಯುಳ್ಳವರಿಗೆ ಸ್ವಪರಸ್ವರೂಪಗಳಲ್ಲಿ ದೋಷ ದೇಶದ ದಾನಾಯಿತು. ನಮ್ಮ ನಾಥರಾನಂದವುಂಟೆಂದು ಹೊಂದಿದವರನ್ನು, ಅಧಿಕಾನಂದವಿರುವವನನ್ನು ಕಂಡು, ತನಗೆ ಅಂತಹ ಆನಂದವಿಲ್ಲವೇ ಎಂಬ ಶೋಕವನ್ನು

ಹೊಂದಬಹುದು, ಅಂತಹ ಒಬ್ಬ ಮನುಷ್ಯನ ಆನಂದವನ್ನು ಬುದ್ಧಿಯಿಂದ ನೋಡಿಕೊಳ್ಳಲು ಹೇಗೆ ಸಾಧ್ಯವಾದೀತು? ಅಪರಿಚ್ಛಿನ್ನವಾದ ಆ ಐಶ್ವರ್ಯವನ್ನೂ, ಸ್ವಾತಂತ್ರ್ಯವನ್ನು ಹೇಳುವುದರಿಂದ ಪ್ರಾಪಂಚಿಕ ಸನ್ನಿವೇಶದಲ್ಲಿ ಪುರುಷಾರ್ಥಕ್ಕೆ ಅಸಾಧಾರಣವನ್ನೂ ಪರಿಚ್ಛೇದವನ್ನೂ ಕಲ್ಪಿಸಿದ ಹಾಗಾಗುವುದಿಲ್ಲವೇ? ಪರಮ ಪುರುಷಾರ್ಥವೆಂದು ಹೇಳಿಸಿಕೊಳ್ಳುವುದಕ್ಕೆ ತರತಮ ಭಾವ ಉಂಟೇ?

ಈ ಆನಂದ ತಾರತಮ್ಯಕ್ಕೆ ಅವರುಗಳು ಉದಾಹರಿಸುವ ಮುಖ್ಯ ಪ್ರಮಾಣಗಳು ಯಾವುವೆಂದರೆ:—ತೈತ್ತಿರೀಯ ಉಪನಿಷತ್ತು ಮತ್ತು ಬೃಹದಾರಣ್ಯಕದ (೬. ೩. ೩೩) ವಾಕ್ಯಗಳು. ತೈತ್ತಿರೀಯದಲ್ಲಿ ಪರಮಾತ್ಮನ ಆನಂದದ "ಮೀಮಾಂಸಾ" ಸಂಕ್ಷೇಪ ಎಂದರೆ, ಅದರ ವಿಚಾರ, ಇಷ್ಟು ಎಂದು ಅಳತೆಮಾಡಲು ಸಾಧ್ಯವೇ ಎಂದು ಹೇಳಿ ಹೊರಟು, ಒಬ್ಬ ಯುವಾ - ಮನುಷ್ಯನನ್ನು ಸಕಲ ಆಯುರಾರೋಗ್ಯೈಶ್ವರ್ಯಗಳನ್ನುಳ್ಳವನಾಗಿ, ಚಕ್ರವರ್ತಿಯಾಗಿ, ಈ ಸಮಸ್ತ ಲೋಕವನ್ನು ಆಳುವವನಾಗಿ ಪೂರ್ಣಕಾಮನಾಗಿದ್ದಾನೆಂದು ಊಹಿಸಿ, ಅಂತವನ ಆನಂದವನ್ನು ಒಂದು ಮಾನುಷ್ಯಾನಂದವೆಂದು ಇಟ್ಟುಕೊಂಡರೆ, ಅಂತಹ ನೂರು ಆನಂದಗಳು ಮನುಷ್ಯಗಂಧರ್ವನ ಆನಂದವಾಗುತ್ತದೆಂದೂ, ಅದರ ನೂರರಷ್ಟು ದೇವಗಂಧರ್ವನ ಆನಂದವಾಗುತ್ತದೆಂದು ಹೇಳುತ್ತಾ ಹೋಗಿ, ಕಡೆಗೆ ಅದರ ನೂರರಷ್ಟಾದರೆ, ಇಂದ್ರನಾನಂದವೆಂದೂ, ಇಂದ್ರನ ನೂರರಷ್ಟು ಆನಂದವು ಬೃಹಸ್ಪತಿಯಾನಂದವೆಂದೂ, ಅದರ ನೂರರಷ್ಟು ಚತುರ್ಮುಖನಾನಂದವೂ, ಅದರ ನೂರರಷ್ಟು ಪರಬ್ರಹ್ಮನಿಗೆ ಎಂದು ಹೇಳಲಾಗಿ ಹೇಳಲಾಗಿದೆ. ಹೀಗೆ ಒಂದಕ್ಕಿಂತ ಒಂದು ನೂರರಷ್ಟು ಎಂದು ಹೇಳುವಾಗ, ಪ್ರತಿಯೊಬ್ಬರಾದ ಮನುಷ್ಯಗಂಧರ್ವ, ದೇವಗಂಧರ್ವಾದಿಗಳೇ ಮೊದಲಾದ ಇಂದ್ರ, ಬೃಹಸ್ಪತಿ, ಚತುರ್ಮುಖ, ಪರಬ್ರಹ್ಮಾನಂದಗಳು ಪ್ರತಿಯೊಂದೂ, ಶ್ರೋತ್ರಿಯಸ್ಯ ಚಾಕಾಮಹತಸ್ಯ, ಬ್ರಹ್ಮನಿಷ್ಠನಾಗಿ ಅಪಹತಪಾಪ್ಮತ್ವಾದಿ ಗುಣಗಳುಳ್ಳ ಮುಕ್ತನಿಗೂ ಉಂಟೆಂದು ಹೇಳಿ, ಬ್ರಹ್ಮಣಃ ಆನಂದಃ, ಶ್ರೋತ್ರಿಯಸ್ಯ ಚಾಕಾಮಹತಸ್ಯ ಎಂಬಲ್ಲಿ ಚಕಾರವಿರುವದರಿಂದ ಪರಬ್ರಹ್ಮನೇ ಬೇರೆ ಅತನಿಗೆ ಅಕ್ಷಯವಾಗಿ ಉಪಭೋಗಾನಾದ ಮುಕ್ತನೂ ಬೇರೆ ಎಂದು ಅದ್ವೈತವನ್ನು ಖಂಡಿಸಿ ದೇವ, ಪರಬ್ರಹ್ಮಾನಂದವೂ ಮುಕ್ತಾನಾನಂದವೂ ಎರಡೂ ಸಮನೆಂದು ಹೇಳಲ್ಪಟ್ಟಿರುತ್ತದೆ. ನಿರಂಜನಃ ಪರಮಂ ಸಾಮ್ಯಮುಪೈತಿ ಎಂಬ ಛಾಂದೋಗ್ಯ ಶ್ರುತ್ಯರ್ಥವೇ ಇಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. ಇವೆಲ್ಲಾ ಆನಂದಗಳೂ ಮುಕ್ತನಿಗೂ ಉಂಟೆಂದು ಹೇಳುವದಕ್ಕಾಗಿಯೇ, ಶ್ರೋತ್ರಿಯಸ್ಯ ಚಾಕಾಮಹತಸ್ಯ ಎಂಬ ಪದಗಳು ಪ್ರತಿಯೊಂದು ವಾಕ್ಯದಲ್ಲಿಯೂ ಪಲ್ಲವಿಯಹಾಗೆ ಪ್ರಯೋಗಿಸಲ್ಪಟ್ಟಿರುತ್ತದೆ. ಆದರೆ ದ್ವೈತಸಿದ್ಧಾಂತಿಗಳು ಮನುಷ್ಯಗಂಧರ್ವ,

ದೇವಗಂಧರ್ವ, ಇಂದ್ರ, ಚತುರ್ಮುಖ ಮೊದಲಾದವರ ಆನಂದಗಳಿಗೆ ಹೇಗೆ ತಾರತಮ್ಯ ಉಂಟೋ, ಈ ಮುಕ್ತಾನಂದವು ಹಾಗೆ ತಾರತಮ್ಯ ಉಳ್ಳದ್ದೆಂದು ಅರ್ಥ ಮಾಡಿದರು. ಇದು ಸಮಂಜಸವಾದ ಅರ್ಥವಾಗುವದಿಲ್ಲವು. ಏಕೆಂದರೆ, ಶ್ರೋತ್ರಿಯಸ್ಯಚಾ ಕಾಮಹತಸ್ಯ ಎಂಬದಾಗಿ ಒಂದೇ ವಿಧವಾದ ಧರ್ಮಗಳುಳ್ಳ ಮುಕ್ತರಿಗೆ ಬೇರೆಬೇರೆ ವಿಧವಾದ ಆನಂದಪ್ರಾಪ್ತಿ ಎಂಬುದು ಯುಕ್ತವಲ್ಲವು. ಆಗ ಪರಮಾತ್ಮನಿಗೆ ವೈಷಮ್ಯ ನೈರ್ಘೃಣ್ಯಗಳನ್ನಾರೋಪಿಸಿದಂತಾಯಿತು. ಆದುದರಿಂದ ಈ ಶ್ರುತಿಯೊಂದಾನಂದವೂ ಮುಕ್ತನಿಗೂ ಉಂಟೆಂದು ಅರ್ಥ ಮಾಡುವದೇ ಸರಸವು. ಸಮಂಜಸವು. ಇದರ ಮೇಲೆ ಒಂದು ಪೂರ್ವ ಪಕ್ಷವನ್ನು ಮಾಡಬಹುದು. ಏನೆಂದರೆ, ಪರಬ್ರಹ್ಮಾನಂದಕ್ಕೇನೇ ಈ ಮುಕ್ತಾನಂದವೂ ಸಮವೆಂದು ಹೇಳಿದರೇನೇ, ಮುಕ್ತ ಎಲ್ಲರ ಆನಂದವೂ ಉಂಟೆಂದು ಹೇಳಿದ ಹಾಗೆ ಆಗುವಾಗ ಪ್ರತಿಯೊಬ್ಬರಾನಂದವೂ ಮುಕ್ತನಿಗುಂಟೆಂದು ಉಪನಿಷತ್ತು ಹೇಳುವದು ನಿರರ್ಥಕವಲ್ಲವೇ ಎಂದರೆ. ಉಪನಿಷತ್ತುಗಳುಪದೇಶವೇ ಪೌನರುಕ್ತ್ಯಯುಳ್ಳದ್ದು. ಸರ್ವೇಶ್ವರನಿಗೆ ಸಮಸ್ತವೂ ಶರೀರವೆಂದೂ, ಆತನು ಸರ್ವಾಂತರ್ಯಾಮಿ ಎಂದೂ ಹೇಳಲು ಹೊರಟು, ಪೃಥಿವಿಯಲ್ಲಿ ಅಂತರ್ಯಾಮಿಯಾಗಿದ್ದಾನೆಂದೂ, ಹಾಗೆಯೇ ಅಪ್ಪಿನಲ್ಲೂ, ಅಗ್ನಿಯಲ್ಲೂ, ಅಂತರಿಕ್ಷದಲ್ಲೂ, ವಾಯುವಿನಲ್ಲೂ ಎಂದು ೨೧ ದ್ರವ್ಯಗಳಿಗೆ ಅಂತರ್ಯಾಮಿ ಎಂದು ಉಪದೇಶಿಸಿರುತ್ತದೆ. (ಬೃಹ. ೫. ೭. ೩ ರಿಂದ ೨೩) ಇಂತಹ ಅನೇಕ ನಿದರ್ಶನಗಳನ್ನು ತೋರಿಸಬಹುದು. ಅದರೆ ಹೀಗೆ ಒಂದಕ್ಕಿಂತ ಒಂದು ನೂರರಷ್ಟು ಎಂದು ಹೇಳುತ್ತಾ ಹೋದರೆ ಪರಮಾತ್ಮನ ಆನಂದಕ್ಕೆ ಪರಿಚ್ಛಿನ್ನತೆಯನ್ನು ಹೇಳಿದಹಾಗಾಗುವದಿಲ್ಲವೇ ಎಂದರೆ, ಅಪರಿಚ್ಛಿನ್ನವೆಂದು ತಿಳಿಸುವದಕ್ಕಾಗಿಯೇ ಹೀಗೆ ಒಂದಕ್ಕಿಂತ ಒಂದು ನೂರರಷ್ಟೆಂದು ಹೇಳುತ್ತಾ ಹೋಗಿ ಕಡೆಗೆ **"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ"** ಆದರಿಂದ ವಾಕ್ಕು ಹಿಂದಿರುಗುತ್ತದೆ, ಮನಸ್ಸಿನಿಂದಲೂ ಊಹಿಸಲಸಾಧ್ಯವು ಎಂದು ಹೇಳಿ ಶ್ರುತಿಯು ವಿರಾಮವನ್ನು ಹೊಂದಿತು. ಈ ಶ್ರುತಿಯು ಪರಮಾತ್ಮನ ಒಂದು ಗುಣದ ನಿರೂಪಣಾ ಸಾಧ್ಯವೇ ಎಂದು ಹೇಳಿದ ಹಾಗೆ, ಸ್ವಾಮಿ ದೇಶಿಕರವರು ಪಾದುಕಾ ಸಹಸ್ರದಲ್ಲಿ ಪಾದುಕೆಗಳ ಮಹಾತ್ಮ್ಯೆಯನ್ನು ವರ್ಣಿಸಲು ಸಾಧ್ಯವೇ ಎಂಬುವಕ್ಕೆ ಹೇಳುತ್ತಾರೆ :—

ನಿಶ್ಶೇಷ ಮಂಬರತಲಂ ಯದಿ ಪತ್ರಿಕಾಸ್ಯಾ
ತ್ಸಪ್ತಾರ್ಣವೀಯದಿ ಸಮೇತ್ಯಮಷೀ ಭವಿತ್ರೀ ।
ವಕ್ತಾ ಸಹಸ್ರವದನಃ ಪುರುಷಸ್ಸ್ವಯಂಚೇ
ಲ್ಲಿಖ್ಯೇತ ರಂಗಪತಿ ಪಾದುಕಯೋಃ ಪ್ರಭಾವಃ ॥

"ಪೃಥಿವೀಪರ್ಯಂತ ಆಕಾಶ ಪ್ರದೇಶವೆಲ್ಲಾ ಒಂದು ಕಾಗದವಾಗಿ, ಸಪ್ತ ಸಮುದ್ರವೂ ಮಸಿಯಾಗಿ, ಪರ್ವತ ಲೇಖನಿಯು ಸರ್ವೇಶ್ವರನೇ ಆಗಿ ಸಹಸ್ರಮುಖದಿಂದಲೂ ವರ್ಣಿಸಿದರೆ ಆಗಲೂ ಒಂದು ವೇಳೆ ಪಾದುಕಾ ಪ್ರಭಾವವನ್ನು ಬರೆದರೂ ಬರೆಯಬಹುದು" ಎಂದು ಹೇಳಿದರೆ ಪ್ರಭಾವಕ್ಕೆ ಪರಿಚ್ಛಿತ್ತಿಯನ್ನು ಹೇಗೆ ಹೇಳಿದ ಹಾಗೆ ಆಗಲಿಲ್ಲವೋ ಹಾಗೆಯೇ ಈ ಮೇಲಿನ ಆನಂದವಲ್ಲಿಯ ವಾಕ್ಯದಲ್ಲೂ ಎಂದು ತಿಳಿಯತಕ್ಕದ್ದು. (ಬೃಹ. ೫. ೭. ೩ ರಿಂದ ೨೩)

ಈ ಆನಂದ ತಾರತಮ್ಯಕ್ಕೆ ಇನ್ನೊಂದು ಪ್ರಮಾಣವು ಬೃಹದಾರಣ್ಯಕವು ೪. ೩. ೩೩. ಇದು ಮೇಲಿನ ತೈತ್ತಿರೀಯ ವಾಕ್ಯಗಳ ಹಾಗೆಯೇ ಇರುತ್ತದೆ. "ಸಯೋ ಮನುಷ್ಯಾಣಾಗ್ಂ ರಾದ್ಧಃ ಸಮೃದ್ಧೋ ಭವತ್ಯನ್ಯೇಷಾಮಧಿಪತಿಃ ಸರ್ವೈರ್ಮಾನುಷ್ಯೈರ್ಭೋಗೈಸ್ಸಂಪನ್ನತಮಃ ಸ ಮನುಷ್ಯಾಣಾಂ ಪರಮ ಆನಂದಃ" ಎಂದು ಪ್ರಾರಂಭಿಸಿ, ಸಮಸ್ತೋಪಾಯಗಳಿಂದ ಸಿದ್ಧನಾಗಿ, ಯುವತ್ವಾದಿ ಗುಣಸಮೃದ್ಧಿಯುಳ್ಳವನಾಗಿ, ಇತರ ಮನುಷ್ಯರಿಗೆಲ್ಲಾ ರಾಜನಾಗಿ, ಪರಿಪೂರ್ಣಮನೋರಥನಾಗಿ ಇರುವವನೆನಿಸಿದ್ದರೆ, ಅಂತವನು ಮನುಷ್ಯರಲ್ಲಿ ಪರಮಾನಂದ ಉಳ್ಳವನೆಂದು ಹೇಳಬಹುದು. ಇಂತಹ ನೂರು ಆನಂದವು ಇನ್ನೊಬ್ಬನಿಗೆ, ಅದರ ನೂರರಷ್ಟು ಮತ್ತೊಬ್ಬನಿಗೆ ಎಂದು ಹೀಗೆ ಹೇಳುತ್ತಾ, ಆದೂ ಶ್ರೋತ್ರಿಯೋಽವೃಜಿನೋಽಕಾಮಹತಃ, ಬ್ರಹ್ಮನಿಷ್ಠನಾಗಿ, ಪಾಪರಹಿತನಾಗಿ, ಯಾವ ವಿಧವಾದ ಕಾಮನೆಯ ಕ್ಲೇಶವಿಲ್ಲದಿರುವ ಮುಕ್ತನಿಗೂ ಉಂಟೆಂದು ಹೇಳಿ, ಹೀಗೆಯೇ ಹೇಳುತ್ತಾ ಅನಂತರ ಅದರ ನೂರರಷ್ಟು ಆನಂದವು ಚತುರ್ಮುಖನಿಗೆಂದೂ, ಆ ಆನಂದವೂ ಮುಕ್ತನಿಗುಂಟೆಂದೂ, ಚತುರ್ಮುಖನ ನೂರರಷ್ಟಾನಂದವು ಪರಬ್ರಹ್ಮನಿಗೂ ಆ ಆನಂದವು ಮುಕ್ತನಿಗೂ ಉಂಟೆಂದು ಹೇಳಿರುತ್ತದೆ. ಇದರಿಂದ ಮುಕ್ತನಾನಂದವು ಪರಬ್ರಹ್ಮಾನಂದಕ್ಕೆ ಸಮನಾದುದು ಎಂದೂ, ಬೋಧಿಸಿರುತ್ತದೆಯೇ ವಿನಾ, ಆನಂದ ತಾರತಮ್ಯವನ್ನು ಬೋಧಿಸುವದಿಲ್ಲವು.

ಈ ಎರಡು ಉಪನಿಷತ್ತುಗಳಲ್ಲದೆ, ಒಂದು ಪಾದ್ಮಪುರಾಣ ಶ್ಲೋಕವನ್ನೂ ಸ್ಮೃತಿ ವಾಕ್ಯವನ್ನೂ ಈ ಆನಂದ ತಾರತಮ್ಯಕ್ಕೆ ದ್ವೈತ ಸಿದ್ಧಾಂತಿಗಳು ಉದಾಹರಿಸುತ್ತಾರೆ. ಇವುಗಳು ಉಪನಿಷತ್ತಿನ ಹಾಗೆ ಮುಖ್ಯವಾದವುಗಳಲ್ಲವಾದುದರಿಂದ ಅವುಗಳ ಚರ್ಚೆಯು ಇಲ್ಲಿ ಪ್ರಕೃತವಲ್ಲವು

ಆದುದರಿಂದ ನಿರಂಜನಃ ಪರಮಂ ಸಾಮ್ಯಮುಪೈತಿ ಎಂಬ ವಾಕ್ಯವನ್ನನುಸರಿಸಿ, ಎಲ್ಲಾ ಮುಕ್ತರ ಆನಂದವೂ ಸಮವೆಂದು ಭಾವಿಸಿ, ಆ ಆನಂದವು ಪರಬ್ರಹ್ಮಾನಂದಕ್ಕೂ ಸಮವಾದುದೆಂದು ಒಪ್ಪತಕ್ಕದ್ದು. ಇದನ್ನೇ ಶ್ರೀ ಯತಿವರ್ಯರು "ಯಜ್ಜ್ಞಾತ್ವಾ ನ ಪುನರ್ಮೋಹಂ" ಎಂಬ ಗೀತಾ ೪ನೆಯ ಅಧ್ಯಾಯ,

"ಆಚಾರ ವೈಕಲ್ಯ"ಮುಡೈಯ ಮುಮುಕ್ಷುಕ್ಕಳುಕ್ಕು ಆನಂದಹ್ರಾಸಮುಣ್ಡಾಮೆನ್ರು ಶಿಲರ್ ಶೊಲ್ಲುಮ್ ವಚನಮಾಪ್ತಮಾನಾಲುಮ್ ಮುಕ್ತನಾವದರ್ಕ್ಕು ಮುನ್ನೇ ವರುಮ್ ಭಗವದನುಭವತ್ತಿಲ್ ಸಜಾತ್ಯೋಚಿತ್ತೈ ಶೊಲ್ಲಿತ್ತಾ ಮತ್ತನ್ರು.

ಈನೆಯ ಶ್ಲೋಕದ ವ್ಯಾಖ್ಯಾನದಲ್ಲಿ, "ನಾಮರೂಪ ವಿನಿರ್ಮುಕ್ತಸ್ಯಾತ್ಮವಸ್ತುನಃ ಪರಸ್ವರೂಪ ಸಾಮ್ಯಮುಪಗಮ್ಯತೇ, ಅತಃ ಪ್ರಕೃತಿ ವಿನಿರ್ಮುಕ್ತಂ ಸರ್ವಂ ಆತ್ಮವಸ್ತು ಪರಸ್ಪರಂ ಸಮಂ, ಸರ್ವೇಶ್ವರೇಣ ಚ ಸಮಂ" ಎಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಪ್ರಕೃತಿ ಸಂಬಂಧದಿಂದ ಬಿಡಲ್ಪಟ್ಟವರಿಂದ ಈಗಿನ ಹಾಗೆ ನಾಮರೂಪಗಳಿಲ್ಲದ ಆತ್ಮಸಮುದಾಯಕ್ಕೆಲ್ಲಾ ಪರಬ್ರಹ್ಮ ಸಾಮ್ಯ ಉಂಟೆಂದೂ, ಹೀಗೆ ಪ್ರಕೃತಿ ವಿಮುಕ್ತರಾದ ಆತ್ಮರುಗಳೆಲ್ಲಾ ಜ್ಞಾನೈಕಾಕಾರತೆಯಿಂದ ಪರಸ್ಪರ ಸಮರೆಂದೂ ನಿರಂಜನಃ ಪರಮಂ ಸಾಮ್ಯಮುಪೈತಿ ಎಂಬ ಶ್ರುತ್ಯರ್ಥವನ್ನು ವ್ಯಕ್ತಪಡಿಸಿರುತ್ತಾರೆ.

೧. ಆಗಲಿ, "ಮುಮುಕ್ಷೂಣಾಂ ಸದಾಚಾರ ವೈಕಲ್ಯಂ ಯಾವದಾಯುಷಂ । ಭವೇದ್ಯದಿ ತದಾನಂದೇ ನ್ಯೂನತಾಂ ಜನಯೇನ್ನೃಪ ॥" "ಮೋಕ್ಷಾರ್ಥಿಗಳಿಗೆ ಸದಾಚಾರದಲ್ಲಿ ನ್ಯೂನತೆಯು ಆಯುಸ್ಸು ಇರುವವರೆಗೂ ಉಂಟಾದದ್ದೇಯಾದರೆ, ಆಗ ಆನಂದದಲ್ಲಿ ನ್ಯೂನತೆಯನ್ನುಂಟುಮಾಡುತ್ತದೆ" ಎಂಬ "ಆನಂದೇ ತಾರತಮ್ಯಂಸ್ಯಾದಾಚಾರೇ ತಾರತಮ್ಯತಃ" "ಆಚಾರ ತಾರತಮ್ಯದಿಂದ ಆನಂದತಾರತಮ್ಯವುಂಟಾಗುತ್ತದೆ" ಎಂಬ ನಮ್ಮ ಆಪ್ತರ ವಚನಗಳು ಆನಂದತಾರತಮ್ಯವನ್ನು ಹೇಳುತ್ತವೆಯಲ್ಲಾ ಎಂದರೆ ಆ ವಚನಗಳು ಮುಕ್ತಾತ್ಮರುಗಳ ಆನಂದ ತಾರತಮ್ಯವನ್ನು ಹೇಳುವದಿಲ್ಲವೆಂದು ಉತ್ತರ ಕೊಡುತ್ತಾರೆ "ಆಚಾರ ವೈಕಲ್ಯ" ಮುಡೈಯ - ಆಚಾರದಲ್ಲಿ ನ್ಯೂನತೆಯಿರುವ, ಮುಮುಕ್ಷುಕ್ಕಳುಕ್ಕು - ಮೋಕ್ಷಾರ್ಥಿಗಳಿಗೆ, ಆನಂದಹ್ರಾಸಮ್ - ಆನಂದದಲ್ಲಿ ನ್ಯೂನತೆಯು, ಉಂಡಾಮೆನ್ರು - ಉಂಟೆಂಬದಾಗಿ, ಶಿಲರ್ - ಕೆಲವರು, ಶೊಲ್ಲುಮ್ ವಚನಮ್ - ಹೇಳುವ ವಚನವು, ಆಪ್ತಮಾನಾಲುಮ್ - ಆಪ್ತರು ಹೇಳಿದ ಮಾತಾದರೂ, ಮುಕ್ತನಾವದರ್ಕ್ಕು - ಮುಕ್ತಿಯನ್ನು ಹೊಂದುವದಕ್ಕೆ, ಮುನ್ನೇ - ಮುಂಚಿತವಾಗಿಯೇ, ವರುಮ್ - ಉಂಟಾಗುವ, ಭಗವದನುಭವದಲ್ಲಿ, ಸಜಾತ್ಯೋಚಿತ್ತೈ ಶೊಲ್ಲಿತ್ತಾಯಿತ್ತು - ನ್ಯೂನತೆಯನ್ನು ಹೇಳಿದಂತೆ ಭಾವಿಸತಕ್ಕದ್ದು. "ಮುಮುಕ್ಷೂಣಾಂ ಸದಾಚಾರ ವೈಕಲ್ಯಂ" ಎಂಬ

ವಚನವು ಆಪ್ತರು ಹೇಳಿದುದಾದರೂ, ಆನಂದ ತಾರತಮ್ಯವನ್ನು ಮುಕ್ತದೆಶೆಯಲ್ಲಿ ಹೇಳಿತೆಂದರೆ, ಆ ವಚನವು ಶ್ರುತಿ ಸ್ಮೃತಿ ಸೂತ್ರಾದಿಗಳಿಗೆ ವಿರೋಧವಾಗುವದರಿಂದ ಪ್ರಮಾಣವೇ ಆಗುವದಿಲ್ಲವು; ಆದರೆ ಆಪ್ತವಾಕ್ಯವನ್ನು ಪ್ರಮಾಣವಾಗಿ ಭಾವಿಸತಕ್ಕದ್ದಲ್ಲವೇ ಎಂದರೆ, ಆಗ ಐಹಿಕಾನಂದದಲ್ಲಿ ನ್ಯೂನತೆಯನ್ನುಂಟುಮಾಡುತ್ತದೆಂದು ಅರ್ಥ ಮಾಡತಕ್ಕದ್ದೆಂಬ ಭಾವವು. ವರ್ಣಾಶ್ರಮಾಚಾರಗಳಲ್ಲಿ ನ್ಯೂನತೆಯುಂಟಾದರೆ ಐಹಿಕ ಭೋಗಗಳಲ್ಲೂ ನ್ಯೂನತೆಯುಂಟೆಂದು ಪ್ರಮಾಣವು ಹೇಳಿತೆಂದು ತಿಳಿಯತಕ್ಕದ್ದು. "ಸಂಧ್ಯಾಹೀನೋಽಶುಚಿರ್ನಿತ್ಯ ಮನರ್ಹಸ್ಸರ್ವ ಕರ್ಮಸು । ಯದನ್ಯತ್ಕುರುತೇ ಕರ್ಮ ನತಸ್ಯ ಫಲಭಾಗ್ಭವೇತ್ ॥ ವರ್ಣಾಶ್ರಮಾಚಾರವತಾ ಪುರುಷೇಣ ಪರಃಪುಮಾನ್ । ವಿಷ್ಣುರಾರಾಧ್ಯತೇ ಪನ್ಥಾ ನಾನ್ಯಸ್ತತ್ತೋಷಕಾರಕಃ ॥" ಇತ್ಯಾದಿ ಪ್ರಮಾಣಗಳ ಭಾವಾನುಗುಣವಾಗಿ ಅನ್ವಯಿಸತಕ್ಕದ್ದು. "ಸಂಧ್ಯಾವಂದನವೇ ಮೊದಲಾದ ನಿತ್ಯಕರ್ಮಗಳ ನ್ಯೂನತೆಯುಳ್ಳವನು ಅಶುಚಿಯಾದವನು, ಇತರ ಕರ್ಮಗಳಿಗೆಲ್ಲಾ ಅನರ್ಹನು. ಇತರ ಕರ್ಮಗಳನ್ನನುಷ್ಠಿಸಿದರೂ ಅವುಗಳ ಫಲಗಳನ್ನು ಪಡೆಯಲಾರನು, ವರ್ಣಾಶ್ರಮಾಚಾರಗಳುಳ್ಳ ಮನುಷ್ಯನಿಂದ ಪರಮಪುರುಷನಾದ ವಿಷ್ಣುವು ಆರಾಧಿಸಲ್ಪಡುವನು, ಇನ್ನು ಯಾವುದೂ ಶ್ರೀ ಮಹಾ ವಿಷ್ಣುವಿಗೆ ಅಷ್ಟು ಸಂತೋಷವನ್ನುಂಟುಮಾಡುವದಿಲ್ಲವು" ಎಂದು ಹೇಳಿರುವದರಿಂದ ಆಚಾರನ್ಯೂನತೆಯಿಂದ ಭಗವದನುಗ್ರಹಕ್ಕೆ ಕುಂದಕವುಂಟಾಗಿ ಐಹಿಕದ ಆನಂದದಲ್ಲಿ ನ್ಯೂನತೆಯುಂಟಾಗಬಹುದೆಂಬ ತಾತ್ಪರ್ಯವು.

ಆದರೆ ಕೆಲವರು ಭಕ್ತಿಮಾರ್ಗದಲ್ಲಿರುವ ಉಪಾಸಕನಿಗೆ ಮುಕ್ತದೆಶೆಯಲ್ಲಿ ಅನುಭವ ಮಾತ್ರವೇ ಆನಂದವು, ಭರನ್ಯಾಸ ನಿಷ್ಠರಿಗೆ ಕೈಂಕರ್ಯಪ್ರಾಪ್ತಿ ಮಾತ್ರವೇ ಆನಂದವು, ಹೀಗೆ ಆನಂದ ಭೇದ ಉಂಟೆಂದು ಊಹಿಸಬಹುದು. ಇಂತಹ ಪೂರ್ವಪಕ್ಷಕ್ಕೂ ಕೂಡ ಅವಕಾಶವಿಲ್ಲವು. ಮುಕ್ತರಿಗೆ ಸರ್ವಕರ್ಮನಾಶವನ್ನು ಶ್ರುತಿಗಳು ಬೋಧಿಸುವದರಿಂದ ಆನಂದ ತಾರತಮ್ಯಕ್ಕೆ ಕಾರಣವೇ ಇಲ್ಲವು. ಅದೂ ಅಲ್ಲದೆ, "ಸಾಯುಜ್ಯಂ ಪ್ರತಿಪನ್ನಾಯೇ ತೀವ್ರಭಕ್ತಾಸ್ತಪಸ್ವಿನಃ । ಕಿಙ್ಕರಾಮನುತೇ ನಿತ್ಯಂ ಭವಂತಿ ನಿರುಪದ್ರವಾಃ ॥" ಎಂದು ಹೇಳಿರುವದರಿಂದ, ಎಲ್ಲಾ ಮುಕ್ತರೂ ಕಿಂಕರರಾದುದರಿಂದ ಪರಬ್ರಹ್ಮಾನುಭವ ಕೈಂಕರ್ಯಗಳು ಎಲ್ಲರಿಗೂ ಸಮವೆಂದು ಹೇಳಲ್ಪಟ್ಟಿರುತ್ತದೆ.

ಮುಂದಿನ ವಾಕ್ಯದಿಂದ ಇನ್ನೊಂದು ಪೂರ್ವಪಕ್ಷಕ್ಕೆ ಸಮಾಧಾನವನ್ನು ಹೇಳುತ್ತಾರೆ. ಕೆಲವರಿಗೆ ಬಹಳ ಕಾಲಗಳ ಮುಂಚೆಯೇ ಮುಕ್ತಿಯುಂಟಾಗುತ್ತದೆ. ಕೆಲವರಿಗೆ ಈಗಲೂ, ಕೆಲವರಿಗೆ ಬಹು ಕಾಲಗಳು ಕಳೆದ ನಂತರವೂ

ಪಿರ್ಪಡ ಮುಕ್ತರಾನಾರ್ಕ್ಕುಮ್ ನಾಳಿಳವೇ ಪೋಕ್ಕಿ (ಪ್ಪೊರುಳಿಳ) ಪ್ಪೇರಿಳವಿಲ್ಲೈ.

ಸಾಲೋಕ್ಯಾದೌ ಮುಕ್ತತ್ವವ್ಯಪದೇಶೋ ಔಪಚಾರಿಕಃ.

ಶ್ರೀ ವಿಷ್ಣುಲೋಕಾದಿಗಳಿಲೇ ಸಾಲೋಕ್ಯ ಸಾರೂಪ್ಯಾದಿ ಮಾತ್ರಮ್

ಮುಕ್ತಿಯುಂಟಾಗಬಹುದು. ಬಹು ಕಾಲಕ್ಕೆ ಮುಂಚೆ ಮುಕ್ತಿಯುಂಟಾದವರಿಗೆ ಹೆಚ್ಚು ಆನಂದವೂ, ಈಚೆಗೆ ಉಂಟಾದವರಿಗೆ ಕಮ್ಮಿ ಆನಂದವೂ ಉಂಟಾಗಿ ಹೀಗೆ ಆನಂದ ತಾರತಮ್ಯವು ಉಂಟಾಗುವದಿಲ್ಲವೇ ಎಂದರೆ, ಈಗ ವಿವಾದಾಸ್ಪದವಾಗಿರುವದು ಆನಂದ ಸ್ವರೂಪವಾದುದರಿಂದ ನ್ಯೂನಾಧಿಕ ಕಾಲವ್ಯತ್ಯಾಸವಿದ್ದರೂ ಸ್ವರೂಪ ವ್ಯತ್ಯಾಸವಿಲ್ಲವೆಂದು ತಿಳಿಸುತ್ತಾರೆ

೨. ಪಿರ್ಪಡ ಮುಕ್ತರಾನಾರ್ಕ್ಕುಮ್ - ಅನಂತರ ಮುಕ್ತಿಯನ್ನು ಹೊಂದಿದವರಿಗೂ, ನಾಳಿಳವೇ ಪೋಕ್ಕಿ - ಕಾಲದ ಅತಿಕ್ರಮ ವ್ಯತ್ಯಾಸಮೂಲಕವಾಗಿ, ಪೇರಿಳವಿಲ್ಲೈ - ಪುರುಷಾರ್ಥದಲ್ಲಿ ವ್ಯತ್ಯಾಸವಿಲ್ಲವು, ಪ್ಪೊರುಳಿಳವಿಲ್ಲೈ - ಎಂಬ ಪಾಠವಾದರೆ ವಸ್ತು ತಾರತಮ್ಯವಿಲ್ಲವು. ಎಂಬರ್ಥವು. ಪ್ರಾಪ್ಯದಲ್ಲೇನೂ ವ್ಯತ್ಯಾಸವಿಲ್ಲವೆಂಬರ್ಥವು. ಪ್ರತಿಬಂಧಕವಾಗಿದ್ದ ಬಂಧದ ನಿವೃತ್ತಿಯು ಕರ್ಮಾನುಗುಣವಾಗಿ ಕಾಲವ್ಯತ್ಯಾಸದಿಂದುಂಟಾದರೂ, ಆನಂದ ಸ್ವರೂಪದಲ್ಲಿ ತಾರತಮ್ಯವಿಲ್ಲವೆಂಬ ಭಾವವು.

ಮುಂದೆ ಮೂರನೆಯ ಪೂರ್ವಪಕ್ಷಕ್ಕೆ ಸಮಾಧಾನವು ಹೇಳಲ್ಪಡುತ್ತದೆ ಕೆಲವರಿಗೆ ಸಾಲೋಕ್ಯವೂ, ಕೆಲವರಿಗೆ ಸಾರೂಪ್ಯವೂ, ಕೆಲವರಿಗೆ ಸಾಮೀಪ್ಯವೂ, ಇನ್ನು ಕೆಲವರಿಗೆ ಸಾಯುಜ್ಯವೂ, ಪ್ರಾಪ್ತವಾಗುತ್ತವೆಂದು ಶಾಸ್ತ್ರದಲ್ಲಿ ಹೇಳಿರುವದರಿಂದ ಆ ಸಂದರ್ಭದಲ್ಲಿ ಆನಂದ ತಾರತಮ್ಯವಿಲ್ಲವೋ ಎಂದರೆ, ಸಾಲೋಕ್ಯ, ಸಾರೂಪ್ಯ, ಸಾಮೀಪ್ಯವೆಲ್ಲಾ ಮೋಕ್ಷವಾಗುವದಿಲ್ಲವೆಂದೂ, ಸಾಯುಜ್ಯಮಾತ್ರವೇ ಮೋಕ್ಷವನ್ನು ಬೋಧಿಸುತ್ತದೆಂದು ಸಮಾಧಾನವನ್ನು ಹೇಳಿ ಇಲ್ಲಿಯೂ ಆನಂದ ತಾರತಮ್ಯವು ಹೇಳಲ್ಪಡಲಿಲ್ಲವೆಂದುಪದೇಶಿಸುತ್ತಾರೆ. ಅದಕ್ಕಾಗಿ ಭಾಗವತ ಪ್ರಮಾಣವನ್ನು ಉದಾಹರಿಸುತ್ತಾರೆ.

ಸಾಲೋಕ್ಯಾದಿಗಳಿಗೆ ಮುಕ್ತತ್ವವೆಂದು ಹೇಳೋಣವು ಔಪಚಾರಿಕವು.

ಶ್ರೀ ವಿಷ್ಣುಲೋಕಾದಿಗಳಿಲೆ-ವಿಷ್ಣುವನ್ನು ಹಿಂದೆ ಶ್ರೀಮನ್ನಾರಾಯಣನ ಪ್ರಥಮಾವತಾರನೆಂದು ಹೇಳಲ್ಪಟ್ಟಿತು. ಆತನ ಲೋಕಕ್ಕೆ ವಿಷ್ಣುಲೋಕವೆಂದು ಹೆಸರು, ಇಲ್ಲಿ ಆದಿ ಶಬ್ದದಿಂದ ಸತ್ಯಲೋಕ, ಕೈಲಾಸ ಮೊದಲಾದವುಗಳು ಹೇಳ

ಪೆತ್ತಾರ್ಕ್ಕು ಮುಕ್ತವ್ಯಪದೇಶಮ್ ಅದೂರ ವಿಪ್ರಕರ್ಷತ್ತಾಲೆ ಯಾ

ಲ್ಪಟ್ಟವು. ಇಂತಹ ಲೋಕಗಳಲ್ಲಿ, **ಸಾಲೋಕ್ಯ** - ಆ ಲೋಕಾಧಿಪರ ಲೋಕಗಳಲ್ಲಿರುವದು, **ಸಾರೂಪ್ಯ** - ಆ ಲೋಕಾಧಿಪರ ರೂಪವನ್ನು ತಾಳುವದು, ಆದಿ ಶಬ್ದದಿಂದ ಸಾಮೀಪ್ಯವು ಹೇಳಲ್ಪಟ್ಟಿತು, ಅವರ ಸಮೀಪದಲ್ಲಿರುವದು, **ಮಾತ್ರಮ್** - ಇಷ್ಟು ಮಾತ್ರವನ್ನೇ, **ಪೆತ್ತಾರ್ಕ್ಕು** - ಹೊಂದಿದವರಿಗೆ, **ಮುಕ್ತವ್ಯಪದೇಶಮ್** - ಅವರನ್ನು ಮುಕ್ತರೆಂದು ಹೇಳೋಣವು, **ಅದೂರವಿಪ್ರಕರ್ಷತ್ತಾಲೆಯಾಮುತ್ತನ್ನೈ** ಮೋಕ್ಷಕ್ಕೆ ತುಂಬಾ ದೂರವಿಲ್ಲದೆ ಇರುವದೇನು, ಹತ್ತಿರದಲ್ಲೇ ಇರುವದೇನು, ಇವುಗಳಿಂದುಂಟಾಗುವ ವ್ಯತ್ಯಾಸವೇ ವಿನಾ ಬೇರೆಯಲ್ಲವು. ಅವರುಗಳು ಮುಕ್ತರು ಎಂದಿಗೂ ಅಲ್ಲವು. ಮೋಕ್ಷಕ್ಕೆ ಸಮೀಪದಲ್ಲೇ ಅವರುಗಳು ಇರುವವರಾಗಿ ಅಲ್ಲಿಂದ ಹೋಗಿ ಪರಮಪದವನ್ನು ಸೇರುವವರು ಎಂಬರ್ಥವು. ಈ ಸಾಲೋಕ್ಯ, ಸಾರೂಪ್ಯ, ಸಾಮೀಪ್ಯವೆಂಬ ಸ್ಥಿತಿಯು ಪರಮಪದದಲ್ಲೇ ಇರುವ ಅವಸ್ಥೆಗಳನ್ನು ಬೋಧಿಸಿದರೆ, ಆಗ ಆನಂದದಲ್ಲಿ ತಾರತಮ್ಯವನ್ನು ಒಂದು ವೇಳೆ ಹೇಳಬಹುದು. ಕೆಲವರು ಹೀಗೆ ಭಾವಿಸಿ ಆನಂದ ತಾರತಮ್ಯ ಉಂಟೆಂದು ಅಂಗೀಕರಿಸುವರು; ಇದು ಶುದ್ಧ ತಪ್ಪಾದಭಿಪ್ರಾಯವೆಂದು ತಿಳಿಸುವದಕ್ಕಾಗಿಯೇ, ಶ್ರೀ ವಿಷ್ಣು **ಲೋಕಾದಿಗಳಲ್ಲೇ ಸಾಲೋಕ್ಯ ಸಾರೂಪ್ಯ**ವೆಂಬ ಪ್ರಯೋಗವು **ಮಾತ್ರ ಪೆತ್ತಾರ್ಕ್ಕು** ಎಂದು ಏಕೆ ಪ್ರಯೋಗಿಸಿರುತ್ತಾರೆಂದರೆ, ಸಾಯುಜ್ಯವನ್ನು ಹೊಂದಿದರೆ, ಈ ಸಾಲೋಕ್ಯಾದಿಗಳೂ ಪ್ರಾಪ್ತವಾಗುತ್ತವೆ, ಆದುದರಿಂದ, ಸಾಲೋಕ್ಯ ಮಾತ್ರ ಸಾರೂಪ್ಯ ಮಾತ್ರ ಹೊಂದಿದವರಿಗೆ ಎಂದು ಹೇಳಿದುತ್ತಾರೆ. ಸ್ವರ್ಗಾದಿ ಲೋಕಪ್ರಾಪ್ತಿಗಳ ಹಾಗೆ ಈ ವಿಷ್ಣುಲೋಕಪ್ರಾಪ್ತಿಯಲ್ಲವು; ವಿಷ್ಣುಲೋಕ, ಸತ್ಯಲೋಕಗಳಿಂದ ಪರಮಪದಕ್ಕೇನೇ ಹೋಗುವರು. ಸ್ವರ್ಗಾದಿ ಲೋಕಗಳನ್ನು ಸೇರಿದವರು "**ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ**" ಎಂದು ಹೇಳಿರುವ ಹಾಗೆ ಈ ಲೋಕಕ್ಕೇ ಬರುವರು. ಆದುದರಿಂದ ಸ್ವರ್ಗಾದಿ ಲೋಕಗಳಲ್ಲಿ ಸಾಲೋಕ್ಯಾದಿಗಳು, ಪರಮಪದದಿಂದ ದೂರವಾಗಿರುವುವು; ಆದರೆ ವಿಷ್ಣುಲೋಕಾದಿಗಳ ಸಾಲೋಕ್ಯಾದಿಗಳು ಹಾಗಲ್ಲವು. ಆದುದರಿಂದ ಅದೂರ ವಿಪ್ರಕರ್ಷತ್ತಾಲೆಯುಮ್ ಎಂದು ಹೇಳಿರುತ್ತಾರೆ. **ಅತ್ತನ್ನೈ** - ಎಂದು ಹೇಳಿದುದರಿಂದ ಅವುಗಳೆಂದಿಗೂ ಮುಕ್ತಿಪ್ರಭೇದಗಳಲ್ಲವು ಹೀಗೆ ಮುಕ್ತಿಗೆ ಸನ್ನಿಹಿತವಾದುದರಿಂದ ಮುಕ್ತಿ ಎಂಬ ಶಬ್ದವು ಇಲ್ಲಿ ಔಪಚಾರಿಕವು, ವಾಸ್ತವವಲ್ಲವು. ಅದೂರ ಎಂದರೆ ಪರಸ್ಪರ ಸಂಬಂಧವಿರುವದರಿಂದ

ಮುತ್ತ್ರನ್ಯೈ. ಇವ್ವರ್ಥಮ್, (೧) "ಲೋಕೇಷು ವಿಷ್ಣೋರ್ನಿವಸಂತಿ ಕೇಚಿತ್ಸಮೀಪ ಮೃಚ್ಛಂತಿ ಚ ಕೇಚಿದನ್ಯೇ । ಅನ್ಯೇತು ರೂಪಂ ಸದೃಶಂ ಭಜಂತೇ ಸಾಯುಜ್ಯಮನ್ಯೇ ಸತು ಮೋಕ್ಷ ಉಕ್ತಃ ॥" ಎನ್ರು ನಿಯಮಿಕ್ಕೈಯಾಲೇ ಸಿದ್ಧಮ್.

ಸಾಧರ್ಮ್ಯವು ಉಂಟಾಗುತ್ತದೆ ವಿಪ್ರಕರ್ಷವಿದ್ದರೆ ಅಂತಹ ಪರಸ್ಪರ ಸಂಬಂಧವಿಲ್ಲದಿರುವದರಿಂದ ಸಾಧರ್ಮ್ಯವಿಲ್ಲವು ವಿಪ್ರಕರ್ಷವು ಶಾಸ್ತ್ರಗಳಲ್ಲಿ ಮೂರು ವಿಧವೆಂದು ಹೇಳಲ್ಪಟ್ಟಿರುತ್ತದೆ; (೧) ದೇಶವಿಪ್ರಕರ್ಷ, (೨) ಸ್ವಭಾವ ವಿಪ್ರಕರ್ಷ, (೩) ಕಾಲವಿಪ್ರಕರ್ಷ. ದೇಶವಿಪ್ರಕರ್ಷಕ್ಕೆ ಉದಾಹರಣೆಯು ಜಲಾರ್ಕವು. ಸೂರ್ಯನು ನೀರಿನಲ್ಲಿ ಪ್ರತಿಫಲಿಸಿದ್ದರೂ ನೀರಿನಲ್ಲಿರುವ ದೋಷಚಲನಾದಿಗಳಿಂದ ಸ್ಪರ್ಶಿಸಲ್ಪಡುವದಿಲ್ಲವು. ಸ್ವಭಾವ ವಿಪ್ರಕರ್ಷಕ್ಕೆ ಉದಾಹರಣೆಯು ಘಟಾಕಾಶಾದಿಗಳು. ಬಿಂದಿಗೆ ಚೊಂಬುಗಳಲ್ಲಿ ಆಕಾಶವಿದ್ದರೂ, ವೃದ್ಧಿ ಹ್ರಾಸರೂಪಗುಣಗಳಿಂದ ಆಕಾಶಕ್ಕೆ ಸ್ಪರ್ಶವಿಲ್ಲವು. ಕಾಲವಿಪ್ರಕರ್ಷಕ್ಕೆ ಉದಾಹರಣೆಯು ನಿತ್ಯವಿಭೂತಿಜ್ಞಾನ ಮೊದಲಾದವುಗಳು, ಕಾಲವ್ಯತ್ಯಾಸವು ಇವುಗಳನ್ನು ಸ್ಪರ್ಶಿಸುವದಿಲ್ಲವು. ಈ ಅಭಿಪ್ರಾಯಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ:—**ಕೇಚಿತ್** - ಕೆಲವರು ಭಾಗವತರು, ವಿಷ್ಣೋಃ - ವಿಷ್ಣುವಿನ, **ಲೋಕೇಷು** - ಲೋಕಗಳಲ್ಲಿ, **ನಿವಸಂತಿ** - ವಾಸಮಾಡುವರು, ವಿಷ್ಣೋಃ - ಎಂಬುವದನ್ನು ಎಲ್ಲಾದಕ್ಕೂ ಅನ್ವಯಿಸತಕ್ಕದ್ದು, **ಕೇಚಿದನ್ಯೇ** - ಇನ್ನು ಕೆಲವರು, ವಿಷ್ಣುವಿನ **ಸಮೀಪಂ** - ಸಮೀಪವನ್ನು, **ಋಚ್ಛಂತಿ** - ಹೊಂದುತ್ತಾರೆ. **ಅನ್ಯೇತು** ಇನ್ನು ಕೆಲವರಾದರೋ ವಿಷ್ಣುವಿನ, **ಸದೃಶಂ ರೂಪಂ** - ಸಮಾನವಾದ ಶರೀರವನ್ನು, **ಭಜಂತೇ** – ಹೊಂದುವರು; **ಅನ್ಯೇ** - ಇನ್ನು ಕೆಲವರು, **ಸಾಯುಜ್ಯಮ್** - ಜೊತೆಯಲ್ಲಿರುವವರಾಗಿ ಸಮಾನವಾದ ಭೋಗವನ್ನು ಹೊಂದುವರು, **ಸತು** - ಅಂತಹ ಸಾಯುಜ್ಯವಾದರೋ, **ಮೋಕ್ಷ ಉಕ್ತಃ** - ಮೋಕ್ಷವೆಂದು ಹೇಳಲ್ಪಡುವದು; ಮೋಕ್ಷವೆಂದು ಹೇಳುದರಿಂದ, ಸಾಯುಜ್ಯವೆಂಬುದು ಪರಮಪದದಲ್ಲಿ ಉಂಟಾಗುವ ಸಮಾನ ಭೋಗಾನುಭವವನ್ನು ಸೂಚಿಸುತ್ತದೆಂದು ತಿಳಿಯತಕ್ಕದ್ದು. ಎನ್ರು - ಎಂಬದಾಗಿ, **ನಿಯಮಿಕ್ಕೈಯಾಲೆ ಸಿದ್ಧಮ್** - ನಿಯಮಿಸೋಣದರಿಂದ, ಪ್ರಮಾಣವಾಗಿ ವಿಧಿಸಿರುವದರಿಂದ ಈ ಮೇಲಿನ ಅಭಿಪ್ರಾಯವು ಸಿದ್ಧವಾದುದು ಎಂದರೆ ವ್ಯವಸ್ಥಿತವಾದುದು; ಯಾವ ಅಭಿಪ್ರಾಯ

(೧) ಭಾಗವತ.

ಸಾಯುಜ್ಯಸ್ಯೇವ ಮೋಕ್ಷಶಬ್ದಾರ್ಥತ್ವ ಕಥನಂ

ಇದು ಪರಮಪದತ್ತಿಲೆ ಶೆನ್ರಾಲ್ ವರುಮ್ ಸಾಯುಜ್ಯಮೇ ಮೋಕ್ಷಮೆನ್ನಿರದು.

ವೆಂದರೆ ಉಭಯ ವಿಭೂತಿ ವಿಶಿಷ್ಟ ಪರಬ್ರಹ್ಮಾನುಭವರೂಪವಾದ ಸಾಯುಜ್ಯವು, ಕ್ಷೀರಾಬ್ಧಿ ವಿಷ್ಣು ಲೋಕಾದಿಗಳಲ್ಲಿ ಉಂಟಾಗದೆ ಇರುವದರಿಂದ, ಇದು ಮುಕ್ತಿಯಾಗದು, ಪರಮಪದದಲ್ಲಿ ಮುಕ್ತಿಯು ಉಭಯ ವಿಭೂತಿ ವಿಶಿಷ್ಟ ಪರಬ್ರಹ್ಮಾನುಭವವನ್ನುಂಟುಮಾಡುವದರಿಂದ, ಅಂತಹ ಮುಕ್ತಿಯೇ ಸಾಯುಜ್ಯವೆಂದು ಹೇಳಲ್ಪಡುತ್ತದೆಂದು ಗ್ರಹಿಸತಕ್ಕದ್ದಾಗಿರುತ್ತದೆ. ಇಂತಹ ವೈಲಕ್ಷಣ್ಯವು ಸಾಯುಜ್ಯಕ್ಕೆ ಉಂಟೆಂದು ತಿಳಿಸುವದಕ್ಕಾಗಿಯೇ, ಸತು - ಎಂಬಲ್ಲಿ ತು ಶಬ್ದಪ್ರಯೋಗವು. ಸತು ಮೋಕ್ಷಃ ಎಂದರೆ ಸ ಏವ ಮೋಕ್ಷಃ, ಅದೇ ಮೋಕ್ಷವು, ಮಿಕ್ಕವಲ್ಲವೆಂಬರ್ಥವು.

ಆದರೆ ಸಾಯುಜ್ಯವು ಈ ಮೇಲೆ ಹೇಳಿದ ಲೋಕಗಳಲ್ಲೇ ಪ್ರಾಪ್ತವಾದರೆ ಅದೂ ಕೂಡ ಮೋಕ್ಷವೆಂದೇ ಏಕೆ ಅರ್ಥ ಮಾಡಕೂಡದು ಎಂದಾಕ್ಷೇಪಿಸಿದರೆ, ಅಲ್ಲಿನ ಸಾಯುಜ್ಯಕ್ಕೆ ಉಭಯ ವಿಭೂತಿ ವಿಶಿಷ್ಟ ಪರಮಾತ್ಮಾನುಭವವಿಲ್ಲವಾದುದರಿಂದ ಮೋಕ್ಷವಾಗುವದಿಲ್ಲವೆಂದೂ, ಈ ಸಾಯುಜ್ಯವು ಪರಮಪದದಲ್ಲುಂಟಾದರೇನೆ, ಸಾಯುಜ್ಯವು ಮೋಕ್ಷವಾಗುತ್ತದೆಂದೂ ಮುಂದಿನ ವಾಕ್ಯದಿಂದ **"ಇದು ಪರಮಪದತ್ತಿಲೇ"** ಎಂದಾರಂಭಿಸಿ ಸಮಾಧಾನವನ್ನು ಹೇಳುತ್ತಾರೆ.

ಸಾಯುಜ್ಯಕ್ಕೆ ಮಾತ್ರವೇ ಮೋಕ್ಷವೆಂಬ ಹೇಳಿಕೆಯು ಸಲ್ಲುತ್ತದೆ.

ಇದು - ಎಂಬುದಕ್ಕೆ **"ಲೋಕೇಷು ವಿಷ್ಣೋಃ"** ಎಂಬ ಶ್ಲೋಕವೆಂದು ಸಾರದೀಪಿಕೆಯವರು ವ್ಯಾಖ್ಯಾನ ಮಾಡಿರುತ್ತಾರೆ. ಸಾರಾಸ್ವಾದಿನೀಯವರು **"ಸತು ಮೋಕ್ಷ ಉಕ್ತಃ"** ಎಂಬ ವಚನವೆಂದು ಅರ್ಥ ಮಾಡಿರುತ್ತಾರೆ. ಮೋಕ್ಷವು ಪ್ರಕರಣವಾದುದರಿಂದ, ಈ ಎರಡನೇ ಅಭಿಪ್ರಾಯವೇ ಯುಕ್ತವಾಗಿ ತೋರುತ್ತದೆ. **ಪರಮಪದತ್ತಿಲೆ ಶೆನ್ರಾಲ್** - ಪರಮಪದದಲ್ಲಿ ಸೇರಿದರೆ ಅಥವಾ ಅಸ್ಪೃಯಿಸಿದರೆ, **ವರುಮ್ ಸಾಯುಜ್ಯಮ್** - ಉಂಟಾಗುವ ಸಾಯುಜ್ಯವನ್ನೇ, **ಮೋಕ್ಷಮೆನ್ನಿರದು** - ಮೋಕ್ಷವೆಂದು ಹೇಳತಕ್ಕದ್ದು; ಸಾಲೋಕ್ಯ, ಸಾರೂಪ್ಯ, ಸಾಮೀಪ್ಯಗಳಿಂದ ವ್ಯಾವೃತ್ತವಾದ ಪರಮಪದದಲ್ಲಿ ಪ್ರಾಪ್ತವಾಗುವ

ಅದುಕ್ಕುಳ್ಳೇ ಸಹಸ್ರತ್ತಿಲ್ ಶತಾದಿಗಳ್ಪೋಲೆ, ಸಾಲೋಕ್ಯಾದಿಗಳೆಲ್ಲಾಮ್ ಅಂತರ್ಭೂತಙ್ಗಳ್. ಆಗೈಯಾಲ್ ಅಙ್ಗುರುವರುಕ್ಕುಮ್ ವೈಷಮ್ಯಮಿಲ್ಲೈ.

ಸಾಯುಜ್ಯವೇ ಮೋಕ್ಷವೆಂಬ ಭಾವವು; "ನಿರಂಜನಃ ಪರಮಂ ಸಾಮ್ಯಮುಪೈತಿ," "ಮಮಸಾಧರ್ಮ್ಯಮಾಗತಾಃ" ಇತ್ಯಾದಿ ಪ್ರಮಾಣಾನುಸಾರ ಪರಮಪದ ಪ್ರಾಪ್ತಿಯಲ್ಲಿ ಉಂಟಾಗುವದು ಸಾಯುಜ್ಯ ಶಬ್ದ ಬೋಧಿತವೇ ಹೊರತು, ಮಿಕ್ಕ ಮೂರು ಶಬ್ದಗಳೂ ಅದನ್ನು ಬೋಧಿಸಲಾರವು. ಈ ಅಭಿಪ್ರಾಯವು, ಪರಮಪದತ್ತಿಲೆ ವರುಮ್ ಸಾಯುಜ್ಯಮೇ ಎಂಬ ಪ್ರಯೋಗದಿಂದ ವ್ಯಕ್ತವು. ಇತರ ಲೋಕಗಳಲ್ಲಿ ಉಂಟಾಗುವ ಸಾಲೋಕ್ಯಾದಿಗಳು ಆ ಕಾರಣದಿಂದ ಎಂದಿಗೂ ಮುಕ್ತಿ ಶಬ್ದದಿಂದ ಹೇಳಲು ಯೋಗ್ಯವಲ್ಲವು. ಒಂದು ವೇಳೆ ಹಾಗೆ ಪ್ರಯೋಗವಿದ್ದದಾದರೆ ಔಪಚಾರಿಕವೆಂದು ಭಾವಿಸತಕ್ಕದ್ದು. ಆದುದರಿಂದ ಪರಮಪದದಲ್ಲಿ ಸಾಯುಜ್ಯವೇ ಯಾವಾಗ ಉಂಟಾಯಿತೋ, ಆಗ ಮಿಕ್ಕ ಮೂರೂ ಅದರಲ್ಲೇ ಅಂತರ್ಗತಗಳಾಗಿ, ಸಾಲೋಕ್ಯವೂ, ಸಾರೂಪ್ಯವೂ, ಸಾಮೀಪ್ಯವೂ ಪ್ರಾಪ್ತವಾಗುತ್ತವೆಂಬ ಭಾವವು. ಪರಮಪದದಲ್ಲೇ ಸಾಲೋಕ್ಯ ಮಾತ್ರವೇ, ಸಾರೂಪ್ಯ ಮಾತ್ರವೇ, ಸಾಮೀಪ್ಯ ಮಾತ್ರವೇ ಉಂಟೆಂದೂ, ಆ ಕಾರಣದಿಂದ ಆನಂದ ತಾರತಮ್ಯ ಉಂಟೆಂದೂ, ಹೇಳುವಭಿಪ್ರಾಯವು ಸರ್ವಾತ್ಮನಾ ಶ್ರುತಿಸ್ಮೃತ್ಯಾದಿ ಪ್ರಮಾಣವಚನ ವಿರುದ್ಧವೆಂದು ಭಾವಿಸತಕ್ಕದ್ದು. ಆದುದರಿಂದ ಪರಮಪದದಲ್ಲಿ ಉಂಟಾಗುವ ಸಾಯುಜ್ಯದಲ್ಲೇ ಸಾಲೋಕ್ಯಾದಿಗಳೆಲ್ಲಾ ಅಡಗಿವೆ ಎಂದೂ, ಆನಂದ ತಾರತಮ್ಯದಿಂದುಂಟಾಗುವ ವೈಷಮ್ಯಕ್ಕೆ ಕಾರಣವೇ ಇಲ್ಲವೆಂದೂ ಮುಂದಿನ ವಾಕ್ಯಗಳಿಂದ ಸಿದ್ಧಾಂತಿಸಿ ಉಪದೇಶಿಸುತ್ತಾರೆ:—

ಅದುಕ್ಕುಳ್ಳೇ – ಆ ಪರಮಪದದಲ್ಲಿ ಲಭಿಸುವ ಸಾಯುಜ್ಯದಲ್ಲೇ, **ಸಹಸ್ರತ್ತಿಲ್ ಶತಾದಿಗಳ್ಪೋಲೆ** - ಸಾವಿರ ಸಂಖ್ಯೆಯಲ್ಲಿ ನೂರು ಇನ್ನೂರು ಮುನ್ನೂರು ಮೊದಲಾದ ಸಂಖ್ಯೆಗಳು ಹೇಗೆ ಅಡಗಿವೆಯೋ ಹಾಗೆ, **ಸಾಲೋಕ್ಯಾದಿಗಳೆಲ್ಲಾಮ್** - ಸಾಲೋಕ್ಯ, ಸಾರೂಪ್ಯ, ಸಾಮೀಪ್ಯಗಳೆಲ್ಲವೂ, **ಅಂತರ್ಭೂತಙ್ಗಳ್** - ಅಡಗಿರುವವು. ಯಾವಾಗ ಸಾಯುಜ್ಯವೇ ಪ್ರಾಪ್ತವಾಯಿತೋ ಆಗ ಪರಮಾತ್ಮನ ಲೋಕದಲ್ಲೇ ಇರುವದು, ಆತನ ಹಾಗೆ ಚತುರ್ಭುಜ, ಶಂಖ ಚಕ್ರಾದಿಗಳುಳ್ಳ ಸಮಾನವಾದ ದಿವ್ಯಮಂಗಳ ವಿಗ್ರಹ ಪ್ರಾಪ್ತಿಯೂ, ಹಾಗೆಯೇ ಆತನ ಸಮೀಪದಲ್ಲಿರೋಣವೂ ಎಲ್ಲವೂ ಸಿದ್ಧಿಸುತ್ತವೆಂಬ ಭಾವವು. **ಆಗೈಯಾಲ್** -

(೧) "ಮೋಕ್ಷಮ್ ಸಾಲೋಕ್ಯ ಸಾರೂಪ್ಯಂ ಪ್ರಾರ್ಥಯೇನ ಕದಾಚನ । ಇಚ್ಛಾಮ್ಯಹಂ ಮಹಾಬಾಹೋ ಸಾಯುಜ್ಯಂ ತವ ಸುವ್ರತ ॥" ಎಙ್ಗಿರ ವಿಡತ್ತಿಲುಮ್ ಇವ್ವರ್ಥಮ್ ಕಂಡುಕೊಳ್ವದು.

ಆ ಕಾರಣದಿಂದ, ಅಙ್ಗೇ - ಪರಮಪದದಲ್ಲಿ, ಒರುವರುಕ್ಕುಮ್ - ಯಾರೊಬ್ಬರಿಗೂ, ವೈಷಮ್ಯಮಿಲ್ಲೈ-ಆನಂದದಲ್ಲಿ ವ್ಯತ್ಯಾಸವಿಲ್ಲವು, ಎಂದರೆ ಮುಕ್ತರೆಲ್ಲರೂ ಆನಂದದಲ್ಲಿ ಪರಸ್ಪರ ಸಮರು ಎಂಬ ಭಾವವು. ಅಥವಾ ಎಲ್ಲರಿಗೂ ಸಮವಾದ ಆನಂದವಾದುದರಿಂದ ಯಾರಿಗೂ ವೈಷಮ್ಯವಿಲ್ಲವೆಂದೂ ಅರ್ಥ ಹೇಳಬಹುದು. ಅಥವಾ ಪರಮಪದದಲ್ಲಿ ಯಾರೊಬ್ಬರಿಗೂ ಎಂದು ಹೇಳಿದುದರಿಂದ ಪರಮಾತ್ಮನಿಗೂ ಕೂಡ, ವೈಷಮ್ಯಮಿಲ್ಲೈ - ಒಬ್ಬರಿಗೆ ಹೆಚ್ಚಾದ ಆನಂದವನ್ನೂ, ಇನ್ನೊಬ್ಬರಿಗೆ ಕಮ್ಮಿ ಆನಂದವನ್ನೂ ಕೊಡುವ ವೈಷಮ್ಯವಿಲ್ಲವು ಎಂಬರ್ಥವೂ ಸೂಚಿತವು.

ಆದರೆ ಜಿತಂತಾ ಸ್ತೋತ್ರದ "ಮೋಕ್ಷಂ ಸಾಲೋಕ್ಯ ಸಾರೂಪ್ಯಂ" ಎಂಬ ಶ್ಲೋಕದಲ್ಲಿ ಸಾಲೋಕ್ಯ ಸಾರೂಪ್ಯಾದಿಗಳು ಮೋಕ್ಷಪ್ರಭೇದಗಳೆಂದೂ, ಅಂತಹ ಮೋಕ್ಷಗಳು ಬೇಡವೆಂದೂ, ಸಾಯುಜ್ಯ ರೂಪ ಮೋಕ್ಷವೇ ಅಪೇಕ್ಷಿತವೆಂದೂ ಹೇಳಿರುತ್ತದೆಯಲ್ಲಾ ಎಂದರೆ, ಆ ಶ್ಲೋಕಕ್ಕೆ ಈ ಮೇಲಿನರ್ಥವಲ್ಲವೆಂದೂ, ಆ ಶ್ಲೋಕವೂ ಕೂಡ ಈ ಮೇಲೆ ಉಪಪಾದಿಸಲ್ಪಟ್ಟ ಅಭಿಪ್ರಾಯವನ್ನೇ ಸಮರ್ಥನೆ ಮಾಡುತ್ತದೆಂದೂ, ತಿಳಿಸುತ್ತಾರೆ. **ಮೋಕ್ಷಂ ಸಾಲೋಕ್ಯ ಸಾರೂಪ್ಯಂ** - ಇತರ ಲೋಕಾದಿಗಳಲ್ಲುಂಟಾಗುವ ಸಾಲೋಕ್ಯ ಸಾರೂಪ್ಯ ಸಾಮೀಪ್ಯವೆಂಬ ಔಪಚಾರಿಕ ಮೋಕ್ಷವು, ಅಥವಾ ಸಾಲೋಕ್ಯಾದಿ ರೂಪ ಮೋಕ್ಷವು ಪರಮಪದದಲ್ಲೇ ಒಂದು ವೇಳೆ ಇದ್ದುದಾದರೆ ಎಂದಾಗಲಿ ಅರ್ಥ ಮಾಡಬಹುದು; ಸಾಲೋಕ್ಯಾದಿಗಳು ಪರಮಪದದಲ್ಲಿ ಇಲ್ಲವು, ಒಂದು ವೇಳೆ ಅವು ಇದ್ದುದಾದರೆ ಎಂದಾಗಲಿ ಅರ್ಥ ಮಾಡಬಹುದು. ಮೊದಲನೆಯ ಅರ್ಥವೇ ಸ್ವಾರಸ್ಯವಾದುದು **ಕದಾಚನ** - ಎಂದಿಗೂ, **ನ ಪ್ರಾರ್ಥಯೇ** - ನಾನು ಪ್ರಾರ್ಥಿಸುವದಿಲ್ಲವು, **ಹೇ ಸುವ್ರತ** - "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವ ಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ ॥" ಎಂದರೆ ನಿನ್ನವನಯ್ಯಾ ರಕ್ಷಿಸು ಎಂದು ಹೇಳಿ ಒಂದು ಸಲ ಶರಣಾಗತಿ ಮಾಡಿದರೆ ಸರ್ವ ಚೇತನರಿಗೂ ಅಭಯವನ್ನು ಕೊಡುತ್ತೇನೆಂಬುವದೇ ತನ್ನ

---

(೧) ದ್ವಿತೀಯ ಜಿತಂತಾ ೩೬.

ಸಾಯುಜ್ಯ ಶಬ್ದಸ್ಯ ನಿಷ್ಕರ್ಷಾರ್ಥಃ

ಸಾಯುಜ್ಯಮಾವದು ? ಸಯುಕ್ಕಿನುಡೈಯ ಭಾವಮ್. ಸಯುಕ್ಕಾನಾನೊರು ಭೋಗ್ಯತ್ತಿಲೆ ಭೋಕ್ತಾವಾಯ್‌ಕ್ಕೊಣ್ಡು ಕೂಡ ವನ್ವಯಿಕ್ಕುಮವನ್. ಇಙ್ಗು ಸಪ್ರಕಾರ ಬ್ರಹ್ಮಮಾಗಿರ ಭೋಗ್ಯತ್ತಿಲೆ ಬ್ರಹ್ಮಮುಮ್

ಸನಾತನವಾದ ವ್ರತವೆಂದು ಭಾವಿಸಿರುವ ಸರ್ವೇಶ್ವರನೇ, ಹೇ ಮಹಾಬಾಹೋ - ಓ ಆಜಾನುಬಾಹುವುಳ್ಳವನೇ, ಸಂಸಾರಸಾಗರದಲ್ಲಿ ಮುಳುಗಿರುವವರನ್ನು ಎತ್ತಿ ಉದ್ಧಾರ ಮಾಡುವದಕ್ಕಾಗಿ ದೀರ್ಘವಾದ ಬಾಹುಗಳುಳ್ಳವನೇ, ಅಹಂ - ನಾನು, ತವ ಸಾಯುಜ್ಯಮ್ - ನಿನ್ನ ಸಾಯುಜ್ಯರೂಪ ಮೋಕ್ಷವನ್ನು, ಇಚ್ಛಾಮಿ - ಅಪೇಕ್ಷಿಸುತ್ತೇನೆ," ಎಙ್ಗಿರ ವಿಡತ್ತಿಲುಮ್ - ಎಂದು ಹೇಳಿರುವ ಸ್ಥಳದಲ್ಲಿಯೂ, ಪ್ರಮಾಣದಲ್ಲಿಯೂ, ಇವ್ವರ್ಥಂ - ಈ ಅಭಿಪ್ರಾಯವನ್ನೇ, ಕಂಡು ಕೊಳ್ವದು - ತಿಳಿದುಕೊಳ್ಳುವದು.

ಸಾಯುಜ್ಯವೇ ಮೋಕ್ಷವೆಂದು ಹೇಳಲ್ಪಟ್ಟಿತು. ಅದರ ನಿಷ್ಕರ್ಷಾರ್ಥವೇನೆಂದು ತಿಳಿಸುತ್ತಾರೆ. ಇದೂ ಅಲ್ಲದೆ, ಮೋಕ್ಷ ವಿಷಯದಲ್ಲಿ ದ್ವೈತಿಗಳ ಆನಂದ ತಾರತಮ್ಯವು ಸರಿಯಲ್ಲವೆಂದು ತಿಳಿಸಿದುದರಿಂದ, ಅದ್ವೈತಿಯು ತನ್ನ ಸ್ವರೂಪೈಕ್ಯರೂಪ ಮೋಕ್ಷವೇ ಸರಿಯಾದಭಿಪ್ರಾಯವೆಂದು ಭಾವಿಸಿ, ಸಾಯುಜ್ಯವೆಂದರೆ ಪರಮಾತ್ಮ ಸ್ವರೂಪದಲ್ಲಿ ಐಕ್ಯವೆಂದು ಹೇಳಬಹುದೆಂಬಭಿಪ್ರಾಯದಿಂದಲೂ ಸಾಯುಜ್ಯಶಬ್ದದ ಸರಿಯಾದ ಅರ್ಥವನ್ನು ತಿಳಿಸುತ್ತಾರೆ :—

ಸಾಯುಜ್ಯ ಶಬ್ದದ ನಿಷ್ಕರ್ಷವಾದ ಅರ್ಥವು.

ಸಾಯುಜ್ಯಮಾವದು - ಸಾಯುಜ್ಯವೆಂಬುವದು ಯಾವುದು ? ಸಾಯುಜ್ಯವೆಂದರೇನು ಎಂಬುವದು ಪ್ರಶ್ನೆಯು. **ಸಯುಕ್ಕಿನುಡೈಯ ಭಾವಮ್** - ಒಂದು ವಸ್ತುವನ್ನು ಇಬ್ಬರು ಅನುಭವಿಸಿದರೆ ಅವರಿಬ್ಬರಿಗೂ ಸಯುಕ್ಕೆಂದು ಹೆಸರು. ಅಂತವರ ಭಾವಕ್ಕೆ ಸಾಯುಜ್ಯವೆಂದು ಹೇಳುತ್ತಾರೆ. ಅದನ್ನೇ ಮುಂದೆ ವಿವರಿಸಿ ಹೇಳುತ್ತಾರೆ. **ಸಯುಕ್ಕಾನಾನ್** - ಸಯುಕ್ಕಾದವನು, **ಒರು ಭೋಗ್ಯತ್ತಿಲೆ** - ಒಂದು ಭೋಗ್ಯವಾದುದಲ್ಲಿ, **ಭೋಕ್ತಾವಾಯ್‌ಕ್ಕೊಂಡು** - ಅನುಭವಿಸುವವನಾಗಿ, **ಕೂಡ** - ಆ ಭೋಗ್ಯವಸ್ತುವಿನೊಂದಿಗೆ, **ಅನ್ವಯಿಕ್ಕುಮವನ್** - ಸಂಬಂಧಿಸಿಕೊಂಡಿರುವವನು. ಹೀಗೆ ಸಾಧಾರಣವಾಗಿ ಹೇಳಿ, **ಇಙ್ಗು** - ಈ **ಸಂದರ್ಭ**

ಮುಕ್ತನುಮ್ ಕೂಡ, ಭೋಕ್ತಾಕ್ಕಳಾಯ್ ಅನ್ವಯಿಕ್ಕೈಯಾಲೆ, ಮುಕ್ತನೈ ಸಯುಕ್ಕೆನ್ನಿರದು.

ದಲ್ಲಿ ಎಂದರೆ ಮುಕ್ತನು ಪರಬ್ರಹ್ಮನನ್ನು ಸೇರಿ ಸಾಯುಜ್ಯವನ್ನು ಹೊಂದುವಾಗ, **ಸಪ್ರಕಾರಬ್ರಹ್ಮವಾಗಿರ**-ಸಮಸ್ತ ವಿಶೇಷಣವಿಶಿಷ್ಟನಾಗಿರುವ ಎಂದರೆ ಉಭಯ ವಿಭೂತಿನಾಥನಾಗಿ ಅನಂತ ಕಲ್ಯಾಣಗುಣಾಕರನಾಗಿರುವ ಪರಬ್ರಹ್ಮನೂ, **ಮುಕ್ತನುಮ್ ಕೂಡ** - ಮುಕ್ತನೂ ಕೂಡ, **ಭೋಕ್ತಾಕ್ಕಳಾಯ್** - ಭೋಕ್ತೃಗಳಾಗಿ, **ಅನ್ವಯಿಕ್ಕೈಯಾಲೆ** - ಸಂಬಂಧಿಸಿಕೊಂಡಿರುವದರಿಂದ, ಮುಕ್ತನನ್ನು, **ಸಯುಕ್ಕೆನ್ನಿರದು** - ಸಯುಕ್ಕೆಂಬದಾಗಿ ಹೇಳೋಣವು. ಸರ್ವೇಶ್ವರನಿಗೆ ಯಾವ ಆನಂದವೋ ಅಂತಹ ಆನಂದವೂ ಈ ಮುಕ್ತನಿಗೂ ಉಂಟಾಗತಕ್ಕದ್ದು. ಇಂತಹ ಅನುಭವದಲ್ಲಿ ಇಬ್ಬರೂ ಸಂಬಂಧಿಸಿ ಒಟ್ಟಿಗೆ ಇರಬಹುದು. ಅದೂ ಅಲ್ಲದೆ ಈ ಪರಬ್ರಹ್ಮಾನುಭವವೆಂಥಾದ್ದೆಂದರೆ ಸರ್ವವಿಶೇಷಣ ವಿಶಿಷ್ಟನಾಗಿರುವ ಪರಬ್ರಹ್ಮಾನುಭವವು; ಉಭಯವಿಭೂತಿ ವಿಶಿಷ್ಟನಾಗಿ ಕಲ್ಯಾಣಗುಣಾಕರನಾಗಿ ಹೀಗೆ ಪರಿಪೂರ್ಣಬ್ರಹ್ಮಾನುಭವ ಉಂಟಾಗಿ ಆತನೊಂದಿಗೆ ಸಂಬಂಧಿಸಿದ್ದರೆ, ಆಗ ಮುಕ್ತನಿಗೆ ಸಯುಕ್ಕೆಂಬ ಹೆಸರು. ಅಂತವನ ಅನುಭವವೇ ಸಾಯುಜ್ಯವೆಂದು ಉಪದೇಶಿಸಿದರು. ಹೀಗೆ ಸಾಯುಜ್ಯದಲ್ಲಿ ಸಮಾನಾನುಭವವಿರುವ ಇಬ್ಬರು ಚೇತನರಿರಬೇಕಾದ ಪ್ರಯುಕ್ತ, ಮೋಕ್ಷದಶೆಯಲ್ಲಿ ಶಾಂಕರರು ಹೇಳುವ ಸ್ವರೂಪೈಕ್ಯವು ಎಂದಿಗೂ ಕೂಡುವದಲ್ಲವೆಂದೂ, ಹಾಗೆಯೇ ಅವರುಗಳ ನಿರ್ಗುಣವಾದವೂ ಕೂಡ ಸಮಂಜಸವಾದುದಲ್ಲವೂ ಎಂಬ ಭಾವವು. ನಿರ್ಗುಣನೆಂದರೆ ಯಾವದೊಂದು ಗುಣವೂ ಇಲ್ಲದ ನಿರ್ವಿಶೇಷ ಬ್ರಹ್ಮನೆಂದು ಅರ್ಥ ಹೇಳಿದರೀಗ ಅಸಾಮಂಜಸ್ಯವು. ಆದರೆ ಪರಬ್ರಹ್ಮನು ಸಗುಣನೆಂದೂ ನಿರ್ಗುಣನೆಂದೂ ಶಾಸ್ತ್ರಗಳಲ್ಲಿ ಹೇಳಿದೆಯಲ್ಲಾ ಎಂದರೆ ಸಗುಣನೆಂದರೆ ಕಲ್ಯಾಣಗುಣ ಮಹೋದಧಿ ಎಂದೂ, ನಿರ್ಗುಣನೆಂದರೆ ಹೇಯವಾದ ಈ ಪ್ರಾಕೃತ ಗುಣಗಳ ಸಂಬಂಧವಿಲ್ಲದವನೆಂದೂ ತಿಳಿಯತಕ್ಕದ್ದು. ಮಹರ್ಷಿಯು ಶ್ರೀಮದ್ಭಾಗವತದಲ್ಲಿ ಜೀವಾತ್ಮನೇ ಇಂತಹ ಹೇಯಗುಣ ರಹಿತನೆಂದು,

> **ಪ್ರಕೃತಿಸ್ಥೋಽಪಿ ಪುರುಷೋ ನಾಜ್ಯತೇ ಪ್ರಾಕೃತೈರ್ಗುಣೈಃ ।**
> **ಅವಿಕಾರಾದ ಕರ್ತೃತ್ವಾತ್ ನಿರ್ಗುಣತ್ವಾಜ್ಜಲಾರ್ಕವತ್ ॥**

ಎಂಬ ಶ್ಲೋಕದಲ್ಲಿ ಉಪಪಾದಿತವಾಗಿರುತ್ತದೆ. ಈ ದೇಹದಲ್ಲಿ ಶಯನಿಸಿರುವ ಜೀವಾತ್ಮನು, ಪ್ರಕೃತಿಯೊಡನೆ ಹೀಗೆ ಸೇರಿದ್ದರೂ ಕೂಡ ಈ ಪ್ರಾಕೃತ ಗುಣ

ಗಳಿಂದ ಸ್ಪರ್ಶಿಸಲ್ಪಡುವದಿಲ್ಲವು ಏಕೆಂದರೆ, ಮೂರು ಹೇತುಗಳನ್ನು ತಿಳಿಸುತ್ತಾರೆ. ಜೀವಾತ್ಮಸ್ವರೂಪವು ಎಂದಿಗೂ ವಿಕಾರ ಹೊಂದುವದಿಲ್ಲವು, ಪ್ರಕೃತಿ ಸಂಬಂಧ ವಿಲ್ಲದೆ ಅದಕ್ಕೆ ಕರ್ತೃತ್ವವೇ ಇಲ್ಲವು, ಆ ಕಾರಣದಿಂದ ಅದು ನಿರ್ಗುಣವೆಂದು ಹೇಯುವಲ್ಲವೆಂದು ಹೇಳಿಸಿಕೊಳ್ಳುತ್ತದೆ; ಹೇಗೆಂದರೆ? ಜಲಾರ್ಕವತ್-ತಟಾಕಾದಿ ಗಳಲ್ಲಿರುವ ಜಲದಲ್ಲಿ ಪ್ರತಿಫಲಿಸಿರುವ ಸೂರ್ಯನೋಪಾದಿಯಲ್ಲಿ; ಎಂದರೆ ತಟಾಕ ಜಲದ ಮಲಗಳಿಂದ ಸೂರ್ಯಪ್ರತಿಬಿಂಬವಾಗಲಿ ಸೂರ್ಯಕಿರಣಗಳಾಗಲಿ ಹೇಗೆ ದೂಷಿತವಾಗುವದಿಲ್ಲವೋ ಹಾಗೆಯೇ ಜ್ಞಾನಸ್ವರೂಪನಾಗಿಯೂ ಜ್ಞಾನ ಗುಣಕ ನಾಗಿಯೂ ಗುಣಾಷ್ಟಕಗಳಿಂದ ವಿರಾಜಿಸುತ್ತಿರುವ ಈ ಪರಿಶುದ್ಧನಾದ ಆತ್ಮನು ದೇಹಕ್ಕೆ ಸಂಬಂಧಪಟ್ಟ ಹೇಯಗುಣಗಳಿಂದ ಕಲುಷಿತನಾಗದಿರುವದರಿಂದ ನಿರ್ಗು ಣನೆಂದು ಹೇಳಿಸಿಕೊಳ್ಳುವನು. ಜೀವಾತ್ಮನಿಗೇನೇ ಹೇಯಗುಣಸಂಬಂಧವಿಲ್ಲ ವೆಂದು ಹೇಳಿದ ನಂತರ ಪರಮಾತ್ಮನಿಗೂ ಇಲ್ಲವೆಂಬುದು ಕೈಮುತಿಕ ನ್ಯಾಯ ಸಿದ್ಧವು. ನಿರ್ಗುಣಶಬ್ದಕ್ಕೆ ಪ್ರಾಕೃತ ಗುಣವಿಲ್ಲವೆಂಬರ್ಥವೇ ಸರಸವೇ ವಿನಾ ಶಾಂಕರಾದಿಗಳು ಹೇಳುವ ಸರ್ವಗುಣ ವಿಶೇಷಣ ಶೂನ್ಯವೆಂಬರ್ಥವು ಸಮಂಜಸ ವಾಗುವದಿಲ್ಲವು. ಏಕೆಂದರೆ, ನಿರ್ಗುಣವಾದುದು ಶ್ರುತಿಯಲ್ಲಿ ಉಪಪಾದಿಸಲಸಾ ಧ್ಯವಾದುದಾಗಿ, ಸ್ವರೂಪಬೋಧಕ ವಾಕ್ಯಗಳಿಗೆ ಶ್ರುತಿಯಲ್ಲಿ ಅವಕಾಶವೇ ಇಲ್ಲವಾ ಗುತ್ತದೆ ಪರಬ್ರಹ್ಮವನ್ನು ಕುರಿತು ಶ್ರುತಿಯು ಹೇಳುತ್ತದೆಂದು ಒಪ್ಪಿಕೊಂಡರೆ ಆಗ ಸವಿಶೇಷಣವನ್ನೂ ಒಪ್ಪಿಕೊಂಡ ಹಾಗಾಗುತ್ತದೆ. ಧರ್ಮವಿಲ್ಲದೆ ದ್ರವ್ಯವೇ ಇಲ್ಲವು ಧರ್ಮವಿಲ್ಲವೆಂದರೆ ಗಗನಕುಸುಮ, ಶಶಶೃಂಗ ಮೊದಲಾದವುಗಳ ಹಾಗೆ ಪರಬ್ರಹ್ಮಕ್ಕೂ ತುಚ್ಛತೆಯನ್ನು ಆರೋಪಿಸಿದ ಹಾಗೆ ಆಗುತ್ತದೆ.

ಆದುದರಿಂದ ಶ್ರೀ ದೇಶಿಕರವರು ಸಪ್ರಕಾರ ಬ್ರಹ್ಮವೆಂದು ಪ್ರಯೋಗಿಸಿ ರುತ್ತಾರೆ. ಆದುದರಿಂದ ಪರಬ್ರಹ್ಮನು ನಮ್ಮ ಸಿದ್ಧಾಂತ ರೀತ್ಯಾ ಸರ್ವ ವಿಶೇಷಣ ವಿಶಿಷ್ಟನು ಆದುದರಿಂದ ಆತನು ಲಕ್ಷ್ಮೀವಿಶಿಷ್ಟನಾಗಿ ಸಪತ್ನೀಕನು, ಕಲ್ಯಾಣ ಗುಣಾಕರನು, ಹೇಯಗುಣ ಸಂಬಂಧ ರಹಿತನು, ಉಭಯವಿಭೂತಿನಾಥನು, ಶುಭಾ ಶ್ರಯನು, ವಿವಿಧ ವಿಚಿತ್ರ ರೂಪಧಾರಿಯು, ಸರ್ವೈಶ್ವರ್ಯಯುಕ್ತನಾಗಿ ಪರಿಪೂರ್ಣ ಕಾಮನು; ಇಂತಹ ಪರಬ್ರಹ್ಮವೇ ಭೋಗ್ಯವಸ್ತುವು, ಅದನ್ನು ಮುಕ್ತನು ಅನು ಭವಿಸುವನು. ಈ ಆನಂದವು ಪರಬ್ರಹ್ಮಾನಂದಕ್ಕೆ ಸಮಾನವಾದುದು. ಆದುದ ರಿಂದ ಪರಬ್ರಹ್ಮವೂ ಮುಕ್ತನೂ ಸಹ ಸಯುಕ್ತಗಳು ಎಂದರೆ ಸಮಾನಭೋಗ ವುಳ್ಳವರು ಎಂಬ ಭಾವವು.

ಹೀಗೆ ಸಾಯುಜ್ಯ ಶಬ್ದಕ್ಕೆ, ಒಂದಾದ ಭೋಗ್ಯವಸ್ತುವಿನಲ್ಲಿ ಒಬ್ಬರೊಂದಿಗೆ ಇನ್ನೊಬ್ಬರಿಗೂ ಸಮಾನವಾದ ಅನ್ವಯ ಉಂಟೆಂದು ಅರ್ಥ ಹೇಳಿದರೆ, ಶ್ರುತಿ

ಸಾಯುಜ್ಯಾದನ್ಯದೇವಹಿ ಸಾಷ್ಟಿರ್ತ್ವಂ.

ಇಪ್ಪಡಿಯಾ (ನಾಲ್) ಕಿಲ್ ಶ್ರುತಿಯಿಲ್ ಸಾಯುಜ್ಯಶಬ್ದಮುಮ್, ಸಾಷ್ಟಿರ್ತಾ ಶಬ್ದಮುಮ್, ಶೇರ ಪ್ರಯೋಗಿಪ್ಪಾನೇ ನೆನ್ನಿಲ್ ?

ಸಾಯುಜ್ಯಮುಭಯೋ ರತ್ರ ಭೋಕ್ತ್ರವ್ಯಸ್ಯಾ ವಿಶಿಷ್ಟತಾ ।
ಸಾಷ್ಟಿರ್ತಾ ತತ್ರ ಭೋಗಸ್ಯ ತಾರತಮ್ಯ ವಿಹೀನತಾ ॥೨೦॥

ಯಲ್ಲಿ ಇದೇ ಅಭಿಪ್ರಾಯವು ತೋರುವ ಸಾಷ್ಟಿರ್ ಶಬ್ದವು ಸಾಯುಜ್ಯ ಶಬ್ದದೊಂದಿಗೆ "**ಏತಾಸಾಮೇವ ದೇವತಾನಾಂ ಸಾಯುಜ್ಯಗ್ಂ ಸಾಷ್ಟಿರ್ತಾಗ್ಂ ಸಮಾನಲೋಕತಾಮಾಪ್ನೋತಿ**" ಎಂಬಲ್ಲಿ ಪ್ರಯೋಗಿಸಲ್ಪಟ್ಟಿರುವದರಿಂದ, ಪುನರುಕ್ತಿ ದೋಷವು ಪ್ರಾಪ್ತವಾಗುವದಿಲ್ಲವೇ? ಸಾಷ್ಟಿರ್ತಾ ಶಬ್ದಕ್ಕಿಂತ ಬೇರೆ ಅರ್ಥವನ್ನು ಸಾಯುಜ್ಯ ಶಬ್ದಕ್ಕೆ ಕಲ್ಪಿಸಿ, ಸ್ವರೂಪೈಕ್ಯವೆಂದರ್ಥವನ್ನು ಹೇಳುವದು ಸರಿಯಲ್ಲವೋ ಎಂದರೆ, ಸಾಷ್ಟಿರ್ ಶಬ್ದ ಸಾಯುಜ್ಯಗಳ ಸರಿಯಾದಭಿಪ್ರಾಯಗಳನ್ನು ಒಂದು ಕಾರಿಕೆಯ ಮೂಲಕ ಉಪದೇಶಿಸುತ್ತಾರೆ.

ಸಾಷ್ಟಿರ್ತ್ವವು ಸಾಯುಜ್ಯಕ್ಕಿಂತ ಬೇರೆಯಾದುದು.

ಇಪ್ಪಡಿಯಾಗಿಲ್ - ಸಾಯುಜ್ಯಶಬ್ದಕ್ಕೆ ಹೀಗೆ ಅರ್ಥವಾದರೆ, ಶ್ರುತಿಯಲ್ಲಿ ಸಾಯುಜ್ಯ ಶಬ್ದವನ್ನೂ ಸಾಷ್ಟಿರ್ತಾ ಶಬ್ದವನ್ನೂ, **ಶೇರ**-ಒಟ್ಟಿಗೆ, **ಪ್ರಯೋಗಿಪ್ಪಾನೇಃನೆನ್ನಿಲ್** - ಪ್ರಯೋಗಿಸಿರುವದು ಏತಕ್ಕೆಂದರೆ, ಅವುಗಳ ನಿಷ್ಕರ್ಷಾರ್ಥವನ್ನು ಮನಸ್ಸಿನಲ್ಲಿಡುವದು ಆವಶ್ಯಕವಾದುದರಿಂದ ಸಿದ್ಧಾಂತಿಸಿ ತಮ್ಮ ಕಾರಿಕೆಯ ಮೂಲಕ ತಿಳಿಸಿರುತ್ತಾರೆ.

ಅತ್ರ – ಇಲ್ಲಿ ಎಂದರೆ ಪರಮಪದದಲ್ಲಿ, **ಸಾಯುಜ್ಯಂ** - ಸಾಯುಜ್ಯವೆಂಬುದು ಯಾವುದೆಂದು, **ಉಭಯೋಃ** - ಮುಕ್ತಜೀವನಿಗೂ ಪರಮಾತ್ಮನಿಗೂ, **ಭೋಕ್ತವ್ಯಸ್ಯ** - ಪರಿಪೂರ್ಣ ಬ್ರಹ್ಮರೂಪವಾದ ಭೋಗ್ಯವಸ್ತುವಿನಲ್ಲಿ, **ಅವಿಶಿಷ್ಟತಾ** - ವಿಶೇಷವೇನೂ ಇಲ್ಲದಿರುವಿಕೆಯು, ಭೋಗ್ಯವಾಗಿರುವದು ಇಬ್ಬರಿಗೂ ಸಮವು ಎಂಬ ಭಾವವು. **ತತ್ರ** - ಆ ಭೋಗ್ಯವಸ್ತುವಿನಲ್ಲಿ, ಅಥವಾ ಆ ಸಂದರ್ಭದಲ್ಲಿ, **ಸಾಷ್ಟಿರ್ತಾ**-ಸಾಷ್ಟಿರ್ತಾ ಎಂಬುದು ಯಾವುದೆಂದರೆ :—**ಭೋಗಸ್ಯ**-ಭೋಗದಲ್ಲಿ, ಅನುಭವದಲ್ಲಿ, **ತಾರತಮ್ಯ ವಿಹೀನತಾ** - ತರತಮ ಭಾವವಿಲ್ಲದಿರುವಿಕೆಯು ಎಂದರೆ, ಸಾಮ್ಯವಿರೋಣವು ಸಾಯುಜ್ಯದಲ್ಲಿ ಭೋಗ್ಯವು ಇಬ್ಬರಿಗೂ

ಮುಕ್ತಸ್ಯ ಭೋಗಮಾತ್ರೇ ಸಾಮ್ಯಂ, ಜಗದ್ವ್ಯಾಪಾರ ವರ್ಜಂ.

ಮುಕ್ತನುಕ್ಕು ಜಗದ್ವ್ಯಾಪಾರಮಿಲ್ಲೆಯೇಯಾಗಿಲುಮ್, ಕೃಷಿಪಣ್ಣಿನ ಪಿತಾವುಮ್ ನಿರ್ವ್ಯಾಪಾರರಾನ ಪುತ್ರಾದಿಗಳುಮ್ ಕೂಡ, ಕೃಷಿಫಲತ್ತೈ

ಸಮವು, ಸಾರ್ಷ್ಟಿತೆಯಲ್ಲಿ ಭೋಗವು ಸಮಾನವು. ಹೇಗೆಂದರೆ ಕ್ಷೀರವೇ ಮೊದಲಾದವು ಇಬ್ಬರಿಗೂ ಭೋಗ್ಯವಾಗಿರಬಹುದು. ಆದರೆ ಒಬ್ಬರಿಗೆ ಅನುಕೂಲ್ಯಾತಿಶಯದಿಂದ ಅನುಕೂಲರೂಪ ಸುಖವು ಹೆಚ್ಚಾಗಿರಬಹುದು. ಇನ್ನೊಬ್ಬರಿಗೆ ಮಂದಾನುಕೂಲ್ಯದಿಂದ ಅಷ್ಟು ಪ್ರೀತಿರೂಪ ಸುಖವಿಲ್ಲದೆ ಹೋಗಿ, ಹೀಗೆ ಭೋಗದಲ್ಲಿ ವೈಷಮ್ಯವಿರಬಹುದು. ಪರಮಪದದಲ್ಲಿ ಹಾಗಲ್ಲವು. ಪರಬ್ರಹ್ಮನಿಗೂ ಮುಕ್ತನಿಗೂ ಭೋಗ್ಯವು ಒಂದೇಯಾಗಿದ್ದರೂ ಭೋಗದಲ್ಲಿ ವ್ಯತ್ಯಾಸವಿಲ್ಲವು. ಆದರಲ್ಲೂ ಸಮತ್ವ ಉಂಟೆಂಬ ಭಾವವು. ಆದುದರಿಂದ ಸಾಯುಜ್ಯ ಶಬ್ದಕ್ಕೆ ಭೋಗ್ಯವು ಇಬ್ಬರಿಗೂ ಸಮಾನವಾಗಿರೋಣವೆಂಬರ್ಥವು, ಸಾರ್ಷ್ಟಿತಾ ಶಬ್ದಕ್ಕೆ ಭೋಗ ಅಥವಾ ಅನುಭವವು ಇಬ್ಬರಿಗೂ ಸಮಾನವೆಂಬರ್ಥವು ಇದರಿಂದ ಸಾಯುಜ್ಯ ಶಬ್ದಕ್ಕೆ ಸ್ವರೂಪೈಕ್ಯ ಹೇಳಬೇಕಾದ ಆವಶ್ಯಕತೆಯೂ ಇಲ್ಲವು, ಸಾಯುಜ್ಯ ಸಾರ್ಷ್ಟಿತಾ ಶಬ್ದಗಳು ಭಿನ್ನಾರ್ಥಗಳುಳ್ಳವಾದುದರಿಂದ ಪುನರುಕ್ತಿ ದೋಷವೂ ಇಲ್ಲವೆಂಬ ಭಾವವು.

ಆದರೆ ಮುಕ್ತನಿಗೆ ಜಗದ್ವ್ಯಾಪಾರದಲ್ಲಿ ಅನ್ವಯವಿಲ್ಲವೆಂದು ಶಾಸ್ತ್ರಗಳಲ್ಲಿ ಹೇಳಿರುವಾಗ ಮುಕ್ತನಿಗೂ ಪರಬ್ರಹ್ಮನಿಗೂ ಪರಮಸಾಮ್ಯವು ಹೇಗೆ? ಎಂಬ ಶಙ್ಕೆಗೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ.

ಮುಕ್ತನಿಗೆ ಭೋಗದಲ್ಲಿ ಮಾತ್ರ ಸಾಮ್ಯವು, ಜಗದ್ವ್ಯಾಪಾರವಿಲ್ಲವು.

ಮುಕ್ತನುಕ್ಕು-ಮುಕ್ತನಿಗೆ, **ಜಗದ್ವ್ಯಾಪಾರಮಿಲ್ಲೆಯೇಯಾಗಿಲುಮ್**- ಜಗತ್ತಿನ ವ್ಯಾಪಾರಗಳಾದ ಸೃಷ್ಟಿ, ಸ್ಥಿತಿ ಲಯಾದಿಗಳಲ್ಲಿ ಸಂಬಂಧವಿಲ್ಲದೇ ಇದ್ದರೂ, **ಕೃಷಿ ಪಣ್ಣಿನ ಪಿತಾವುಮ್** - ಕ್ಷೇತ್ರವನ್ನು ಸಂಪಾದಿಸಿ, ಅವಕ್ಕೆ ಬೇಕಾದ ಕೃಷಿಯನ್ನು ಮಾಡಿ ಹೆಚ್ಚಾಗಿ ದವಸ ಧಾನ್ಯಾದಿಗಳನ್ನು ಬೆಳದು ವಿಶೇಷ ಧನಾರ್ಜನೆ ಮಾಡಿದ ತಂದೆಯೂ, ಇಲ್ಲಿ ಕೃಷಿವ್ಯಾಪಾರವು ಇತರ ವಿಧ ಧನಾರ್ಜನೆಯ ರೂಪವಾದ ವ್ಯಾಪಾರಕ್ಕೂ ಉಪಲಕ್ಷಣವು, **ನಿರ್ವ್ಯಾಪಾರರಾನ ಪುತ್ರಾದಿಗಳುಮ್ ಕೂಡ** - ಕೃಷ್ಯಾದಿ ಅಂತಹ ವ್ಯಾಪಾರಗಳನ್ನೇನೂ

ಭುಜಿಕ್ಕುಮಾಪ್ಪೋಲೆ, ಜಗದ್ವ್ಯಾಪಾರತ್ತಾಲ್ ವರುಮ್ ರಸಮ್, ವ್ಯಾಪಿರುಕ್ಕಿರ ಈಶ್ವರನುಕ್ಕುಮ್, ಪಾರ್ತ್ತಿರುಕ್ಕಿರ ಮುಕ್ತನುಕ್ಕುಮ್, ತುಲ್ಯಮ್.

ಮಾಡವ, ಮಕ್ಕಳೇ ಮೊದಲಾದವರೂ ಕೂಡ, ಇಲ್ಲಿ ಆದಿ ಶಬ್ದದಿಂದ ಭಾರ್ಯಾ ಭ್ರಾತ್ರಾದಿ ಇತರ ಬಂಧುಗಳೂ ಹೇಳಲ್ಪಟ್ಟರು, **ಕೃಷಿ ಫಲತ್ತೈ** - ಕೃಷಿ ಮಾಡಿದುದರಿಂದುಂಟಾದ ಫಲವನ್ನು, **ಭುಜಿಕ್ಕುಮಾಪ್ಪೋಲೆ** - ಊಟ ಮಾಡುವ ಹಾಗೆ, ಅನುಭವಿಸುವ ಹಾಗೆ, **ಜಗದ್ವ್ಯಾಪಾರತ್ತಾಲ್ ವರುಮ್** - ಜಗತ್ತಿನ ಸೃಷ್ಟಿ ಸ್ಥಿತಿ ಲಯಾದಿಗಳಿಂದುಂಟಾಗುವ, **ರಸಮ್** - ಆನಂದವು, **ವ್ಯಾಪಿರಿಕ್ಕಿರ**- ಅಂತರ್ಬಹಿರ್ವ್ಯಾಪಿಸುವ ಶಕ್ತಿಯುಳ್ಳ **ಈಶ್ವರನುಕ್ಕುಮ್** - ಸರ್ವೇಶ್ವರನಿಗೂ, **ಪಾರ್ತ್ತಿರುಕ್ಕಿರ**- ನೋಡುತ್ತಿರುವ, **ಮುಕ್ತನುಕ್ಕುಮ್** - ಮುಕ್ತನಿಗೂ ಸಹ, **ತುಲ್ಯಂ** - ಸಮಾನವಾದುದು.

ಜಗದ್ವ್ಯಾಪಾರವು ಮುಕ್ತನಿಗಿಲ್ಲದುದರಿಂದ, ಆ ವ್ಯಾಪಾರದಿಂದುಂಟಾಗುವ ಆನಂದವು ಪರಬ್ರಹ್ಮನಿಗೆ ಮಾತ್ರವೇ ಪ್ರಾಪ್ತವಾಗುವದರಿಂದ, ಆನಂದದಲ್ಲಿ ಸಮವೆಂಬ ಶಾಸ್ತ್ರಮರ್ಯಾದೆಯು ಹೇಗೆ ಸರಿಹೋಗುತ್ತದೆ, ಎಂಬ ಆಕ್ಷೇಪಕ್ಕೆ ಒಂದು ದೃಷ್ಟಾಂತ ಮೂಲಕ ಸಮಾಧಾನವನ್ನು ಹೇಳುತ್ತಾರೆ. ಪಿತಾವಾದವನು ಅನೇಕ ಗದ್ದೆ ಹೊಲ ತೋಟಗಳನ್ನು ಸಂಪಾದಿಸಿಕೊಂಡು, ಅವುಗಳ ಆಡಳಿತದಲ್ಲಿ ನಿರತನಾಗಿ, ಬಹು ದ್ರವ್ಯವನ್ನು ತನ್ಮೂಲಕ ಗಳಿಸಿ, ತುಂಬಾ ಸಮೃದ್ಧಿಯಲ್ಲಿದ್ದುಕೊಂಡು ಅನುಭವಿಸುವ ಭೋಗಗಳಲ್ಲಿ, ಇವು ಯಾವುದನ್ನೂ ಮಾಡದೇ ಇರುವ ಪುತ್ರನಿಗೂ ಸಹ ಈ ಸಮೃದ್ಧಿ ಉಪಭೋಗ ಆನಂದಾದಿಗಳೂ ಹೇಗೆ ಸಮವೋ ಹಾಗೆಯೇ ಪರಬ್ರಹ್ಮನಿಗೂ ಮುಕ್ತನಿಗೂ ಕೂಡ ಆನಂದದಲ್ಲಿ ಸಮಭಾವವು. ಇಲ್ಲಿ ವ್ಯಾಪಿರುಕ್ಕಿರ **ಈಶ್ವರನುಕ್ಕುಮ್**, ಎಂದು ಹೇಳಿರುವದರಭಿಪ್ರಾಯವೇನೆಂದರೆ:—"**ತತ್ಸೃಷ್ಟ್ವಾತದೇವಾನುಪ್ರಾವಿಶತ್**" ಆ ಜಗತ್ತನ್ನು ಸೃಷ್ಟಿಸಿ ಅವನೇ ಅನುಪ್ರವೇಶ ಮಾಡಿರುತ್ತಾನೆಂದು ಶ್ರುತಿಗಳಲ್ಲಿ ಹೇಳಿರುವದರಿಂದ ಆತನು ಮಾತ್ರವೇ ಜಗತ್ಕಾರಣನೇ ವಿನಾ ಮುಕ್ತನು ಆ ಪ್ರಕರಣಗಳಲ್ಲಿ ಹೇಳಲ್ಪಡಲಿಲ್ಲವಾದುದರಿಂದ ಜಗತ್ಕಾರಣನಲ್ಲವೆಂಬುದನ್ನು ತಿಳಿಸುವದಕ್ಕಾಗಿ ಎಂದು ಊಹಿಸತಕ್ಕದ್ದು. ಈಶ್ವರ ಶಬ್ದದಲ್ಲೇ ಸರ್ವವ್ಯಾಪ್ತಿ ಆತನಿಗೆ ಮಾತ್ರವೇ ಉಂಟೆಂಬುದು ತೋರಿಬರುತ್ತದೆ. "**ಯೋ ಲೋಕತ್ರಯ ಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ**" (ಗೀ. ೧೫. ೧೭) ಈಶ್ವರನೆಂದು ಹೇಳಿಸಿಕೊಳ್ಳುವದಕ್ಕೆ ವಿಕಾರ ಹೊಂದುವ ಅಚಿತ್ತೇನು, ಅದರ ಸಂಬಂಧವುಳ್ಳ ಬದ್ಧಚೇತನನೇನು, ಅದರ

ಸಂಬಂಧವೇಗಿಲ್ಲದ ಮುಕ್ತನೇನು ಇಂತಹ ಲೋಕತ್ರಯವನ್ನೂ ವ್ಯಾಪಿಸಿ ಅವುಗಳಿಗಿಂತ ವಿಲಕ್ಷಣನಾಗಿ ಬೇರೆಯಾಗಿ ಅವುಗಳಿಗೆ ನಿಯಾಮಕನಾಗಿರಬೇಕು. ಈ ಅಭಿಪ್ರಾಯವನ್ನೇ ಶ್ರೀ ಯಾಮುನೇಯರೂ ಗೀತಾರ್ಥಸಙ್ಗ್ರಹದಲ್ಲಿ ಪರಮಾತ್ಮನು ಈಶ್ವರನು ಹೇಗೆಂದರೆ :—"ವ್ಯಾಪನಾದ್ಭರಣಾತ್ಸ್ವಾಮ್ಯಾತ್" ಉಭಯ ವಿಭೂತಿಯನ್ನು ವ್ಯಾಪಿಸಿ, ಭರಣಮಾಡಿ, ಅವಕ್ಕೆಲ್ಲಾ ನಿಯಾಮಕನಾಗಿ ಸ್ವಾಮಿಯಾಗಿರುವದರಿಂದ ಈಶ್ವರನೆಂದು ಹೇಳಲ್ಪಡುವನೆಂದುಪದೇಶಿಸಿದ್ದಾರೆ ಮುಕ್ತನು ವಿಭುವೂ ಅಲ್ಲವು, ಆತನಿಗೆ ಭರಣನಿಯಾಮಕ ಶಕ್ತಿಯೂ ಇಲ್ಲವು, ಈತನು ಸರ್ವೇಶ್ವರನಿಗೆ ಸ್ವಂ ಆಗಿ ಯಾವ ಸ್ವಾತನ್ತ್ರ್ಯ ಇವನಿಗಿಲ್ಲವು; ಆದುದರಿಂದ ಈತನು ಜಗತ್ಸೃಷ್ಟಿಗೆ ಎಂದಿಗೂ ಕಾರಣನಲ್ಲವು. ಆದರೆ ಮುಕ್ತನಾದುದರಿಂದ ಪುನಸ್ಸೃಷ್ಟಿಯಲ್ಲಿ ಸೇರನೇ ಇರುವದರಿಂದ, ಸರ್ವೇಶ್ವರನು ಈ ಲೀಲಾವಿಭೂತಿಯನ್ನು ಸೃಷ್ಟಿಸಿ, ರಕ್ಷಿಸಿ, ಲಯ ಹೊಂದಿಸುವಾಗ ಸುಮ್ಮನೆ ನೋಡುತ್ತಿರುವನೆಂಬುದನ್ನು ತಿಳಿಸುವದಕ್ಕಾಗಿ "ಪಾರ್ತ್ತಿರುಕ್ಕಿರ ಮುಕ್ತನುಮ್" ಎಂಬ ಪ್ರಯೋಗವು. ಆದರೆ ಅನೇಕರು ಒಂದರ ಉಪಭೋಗವನ್ನು ಹೊಂದಿದರೆ ಆನಂದದಲ್ಲಿ ವ್ಯತ್ಯಾಸವನ್ನು ಕಂಡಿರುತ್ತೇವೆಯಲ್ಲಾ ಎಂದರೆ, ಅಂತಹ ವ್ಯತ್ಯಾಸವೆಲ್ಲಾ ಈ ಕರ್ಮಭೂಮಿಯಲ್ಲಿರುವ ಪ್ರಕೃತಿಯಿಂದ ಬದ್ಧರಾಗಿ ತಿರೋಹಿತ ಸ್ವರೂಪವುಳ್ಳವರಿಗೆ ವಿನಾ, ಗುಣಾಷ್ಟಕಗಳಿಂದ ಸ್ವಸ್ವರೂಪಾವಿರ್ಭಾವ ಉಂಟಾದ ಮುಕ್ತರಿಗೆ ಹಾಗಲ್ಲವು. ಇಂತಹ ಸ್ವರೂಪಾವಿರ್ಭಾವವು ಎಲ್ಲಾ ಮುಕ್ತರಿಗೂ ಸಮವಾಗಿ ಉಂಟಾಗುವದರಿಂದ ಆನಂದದಲ್ಲೂ ಪರಸ್ಪರ ಸಾಮ್ಯವೂ ಪರಮಾತ್ಮನೊಂದಿಗೆ ಸಾಮ್ಯವೂ ಉಂಟಾಗುವದು. ಆನಂದವೆಂದರೆ ಅನುಕೂಲದರ್ಶನದಿಂದುಂಟಾಗುವ ಪ್ರೀತಿವಿಶೇಷವು. ಮುಕ್ತರಾಗಿ ನಿತ್ಯವಿಭೂತಿಯಲ್ಲಿರುವವರಿಗೆ ಸರ್ವವೂ ಅನುಕೂಲವಾಗಿಯೇ ತೋರುವುವೆಂದು ಹಿಂದೆಯೇ ಉಪಪಾದಿಸಲ್ಪಟ್ಟಿರುತ್ತದೆಯಾದುದರಿಂದ ಸರ್ವರಿಗೂ ಆನಂದದಲ್ಲಿ ಸಾಮ್ಯವುಂಟೆಂಬುದು ಸ್ವತಸ್ಸಿದ್ಧವು. ಈ ವಿಷಯದಲ್ಲಿ ದ್ವೈತ ಸಿದ್ಧಾಂತಿಗಳು ಸಂದೇಹಪಡುವದಕ್ಕೆ ಕಾರಣವೇ ಇರುವದಿಲ್ಲವು. ಈ ಸಾಮ್ಯವು ಭೋಗದಲ್ಲಿ ಮಾತ್ರವೇ ವಿನಾ ಜಗದ್ವ್ಯಾಪಾರಾದಿಗಳಲ್ಲಿಲ್ಲವೆಂದು ಸೂತ್ರಗಳು ಉಪದೇಶಿಸುತ್ತವೆ. ಆದುದರಿಂದ ಶ್ರೀ ದೇಶಿಕರವರು ತಾವು ಈಗ ಉಪದೇಶಿಸಿದುದಕ್ಕೆ ಪ್ರಮಾಣಬಲ ಉಂಟೆಂದು ಆ ವ್ಯಾಸಸೂತ್ರಗಳನ್ನು ಉದಾಹರಿಸುತ್ತಾರೆ :—

ಸೂತ್ರಕಾರರುಮ್ - ಶಾರೀರಕ ಮೀಮಾಂಸಾ ಸೂತ್ರಗಳನ್ನು ರಚಿಸಿದ ಶ್ರೀ ವ್ಯಾಸ ಮಹರ್ಷಿಗಳು, ಈ ಅಭಿಪ್ರಾಯಗಳನ್ನೇ "ಜಗದ್ವ್ಯಾಪಾರ ವರ್ಜಂ" (೪. ೪. ೧೭) ಎಂದು, ತುಡಙ್ಗಿ - ಪ್ರಾರಂಭಿಸಿ, "ಭೋಗಮಾತ್ರ ಸಾಮ್ಯ

ಸೂತ್ರಕಾರರುಮ್ “ಜಗದ್ವ್ಯಾಪಾರ ವರ್ಜಂ” ಎನ್ರುತುಡಙ್ಗಿ, “ಭೋಗಮಾತ್ರ ಸಾಮ್ಯಲಿಂಗಾಚ್ಚ” ಎನ್ರರುಳಿಚ್ಚೆಯ್ದಾರ್.

ಲಿಂಗಾಚ್ಚ” (೪ ೪. ೨೧) ಎಂಬ ಸೂತ್ರದವರೆಗೂ, **ಅರುಳಿಚ್ಚೆಯ್ದಾರ್** - ಕ್ರಮವಾ ಉಪದೇಶಿಸುತ್ತಾರೆ. ಹೀಗೆ ಈ ಐದು ಸೂತ್ರಗಳಲ್ಲಿ ಈ ವಿಷಯಗಳು ಉಪಪಾದಿತವಾಗಿವೆ ಎಂಬ ಭಾವವು. “**ಜಗದ್ವ್ಯಾಪಾರ ವರ್ಜಂ ಪ್ರಕರಣಾದ ಸನ್ನಿಹಿತತ್ವಾಚ್ಚ**” ಎಂಬ ಸೂತ್ರದಲ್ಲಿ ಮುಕ್ತನಿಗೆ ಜಗದ್ವ್ಯಾಪಾರ ಸಂಬಂಧವಿಲ್ಲವೆಂದು ಹೇಳಲ್ಪಟ್ಟಿರುತ್ತದೆ; ಏಕೆಂದರೆ **ಯತೋವಾ ಇಮಾನಿ ಭೂತಾನಿ ಜಾಯನ್ತೇ** (ತ್ತೈ. ಭೃಗ.) ಎಂದು ಪ್ರಾರಂಭಿಸಿ **ಹೇಳಿರುದು** ಯಾವುದೆಂದರೆ “**ತದ್ಬ್ರಹ್ಮ**” ಅದೇ ಪರಬ್ರಹ್ಮವೆಂದು ಹೇಳಿರುವದರಿಂದ, ಪ್ರಕರಣದಿಂದ ಪರಬ್ರಹ್ಮನಿಗೇನೇ ಜಗದ್ವ್ಯಾಪಾರದ ಅನ್ವಯವು. “**ಅಸನ್ನಿಹಿತತ್ವಾಚ್ಚ**” ಸೃಷ್ಟ್ಯಾದಿ ಕ್ರಮವನ್ನು ಹೇಳುವ **ಸಂದರ್ಭ**ಗಳಲ್ಲಿ ಮುಕ್ತನ ಸಾನ್ನಿಧ್ಯವು ಅಂತಹ ಶ್ರುತಿಗಳಲ್ಲಿ ಕಾಣದಿರುವದರಿಂದಲೂ ಮುಕ್ತನಿಗೆ ಜಗದ್ವ್ಯಾಪಾರವಿಲ್ಲವು. ಇವರ ಮುಂದಿನ ಸೂತ್ರವಲ್ಲಿ “**ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ**” ಎಂದು ಛಾಂದೋಗ್ಯದಲ್ಲಿ ಹೇಳಿರುವದರಿಂದ, ಮುಕ್ತನಿಗೆ ಸಮಸ್ತ ಲೋಕಗಳಲ್ಲೂ ಕಾಮಚಾರ ಉಂಟೆಂಬುದರಿಂದ ಜಗದ್ವ್ಯಾಪಾರವಿರುವ ಹಾಗೆ ತೋರುವದಿಲ್ಲವೇ ಎಂದರೆ, ಹಾಗಲ್ಲವು, ಪರಮಪುರುಷನಿಂದ ಲೋಕನಿಯಮನಾಧಿಕಾರದಲ್ಲಿ ನಿಯಮಿಸಲ್ಪಟ್ಟ ಚತುರ್ಮುಖ ಬ್ರಹ್ಮಾದಿಗಳ ಲೋಕವಲ್ಲಿರುವ ಭೋಗವನ್ನು ಅನುಭವಿಸಬೇಕೆಂಬ ಇಚ್ಛೆಯುಂಟಾದರೆ, ಆಗ ಪರಮಪುರುಷನ ಅನುಗ್ರಹದಿಂದ ಆ ಲೋಕಗಳ ಭೋಗಗಳನ್ನನುಭವಿಸುವನೆಂದು ಹೇಳಲ್ಪಟ್ಟಿತು. ಅವರ ಮುಂದಿನ **ಸೂತ್ರ**ದಲ್ಲಿ, ಮುಕ್ತನ ಭೋಗವೆಂಥಾದ್ದೆಂಬುದು ತಿಳಿಸಲ್ಪಡುತ್ತ**ದೆ** :- ಉತ್ಪತ್ತ್ಯಾದಿ ವಿಕಾರಗಳ ಸ್ಪೃಕ್ಕೇ ಇಲ್ಲದಿರುವ ಪರಿಪೂರ್ಣ ಬ್ರಹ್ಮಾನುಭವವೇ ಮುಕ್ತನ ಭೋಗವು, ಏತಕ್ಕೆಂದರೆ “**ರಸೋವೈಸಃ, ರಸಂಹ್ಯೇವಾಯಂ ಲಬ್ಧ್ವಾನಂದೀಭವತಿ**” ಎಂದರೆ (ತ್ತೈ. ಆನಂ. ೨. ೭. ೧) **ಬ್ರಹ್ಮನಿಷ್ಠೋ ಬ್ರಹ್ಮೈವ ಲಬ್ಧ್ವಾನಂದೀಭವತಿ** ಇತ್ಯಾದಿ ಶ್ರುತಿವಾಕ್ಯಗಳು ಹಾಗೆ ಉಪದೇಶಿಸುತ್ತವೆ ಎಂದು ಹೇಳಲ್ಪಟ್ಟಿರುತ್ತದೆ. ಇನ್ನು ಮುಂದಿನ ಸೂತ್ರದಲ್ಲಿ ಜಗದ್ವ್ಯಾಪಾರಗಳೆಲ್ಲಾ ಪರಬ್ರಹ್ಮನಿಗೆ ಸೇರಿದವೆಂದೂ, ಮುಕ್ತನಿಗೆ ಪರಿಪೂರ್ಣ ಬ್ರಹ್ಮಾನುಭವರೂಪ ಭೋಗವೆಂದೂ ಶ್ರುತಿಸ್ಮೃತಿಗಳು ತೋರಿಸುತ್ತವೆಂದು ಹೇಳಲ್ಪಟ್ಟಿರುತ್ತದೆ. **ಆ ಶ್ರುತಿ ಸ್ಮೃತಿಗಳು ಯಾವುವೆಂದರೆ :—**

"ಸಾಮರಸ್ಯಂಹಿ ಸಾಯುಜ್ಯಮ್ ವದನ್ತಿ ಬ್ರಹ್ಮವಾದಿನಃ" ಎನ್ರು ಶಾಕಟಾಯನನುಮ್ ಸೊನ್ನಾನ್.

---

೧. "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶ ಸ್ಸಂಭೂತಃ" (ತೈ.) ಎಂಬಿವೇ ಮೊದಲಾದವು ಶ್ರುತಿಗೆ ಉದಾಹರಣೆಯು.

೨. "ಅಹಂ ಸರ್ವಸ್ಯ ಪ್ರಭವಃ ಮತ್ತಃ ಸರ್ವಂ ಪ್ರವರ್ತತೇ" (ಗೀ. ೧೦. ೮) ಎಂಬಿವೇ ಮೊದಲಾದವು ಸ್ಮೃತಿಗೆ ಉದಾಹರಣವು. ಇದಾದ ನಂತರ ಭೋಗಮಾತ್ರ ಸಾಮ್ಯಲಿಂಗಾಚ್ಚ (೪. ೪. ೨೧) ಎಂಬ ಸೂತ್ರದಿಂದ ಮುಕ್ತನಿಗೆ ಪರಿಪೂರ್ಣ ಬ್ರಹ್ಮಾನುಭವದಿಂದುಂಟಾದ ಆನಂದದಲ್ಲಿ ಮಾತ್ರ ಸಾಮ್ಯವೆಂದು ಹೇಳಲ್ಪಟ್ಟಿರುತ್ತದೆ. ತೈತ್ತಿರೀಯ ಆರಣ್ಯಕ ವಾಕ್ಯವಾದ (೨. ೧. ೨) "ಸೋಽಶ್ನುತೇ ಸರ್ವಾನ್ ಕಾಮಾನ್ ಸಹಬ್ರಹ್ಮಣಾ ವಿಪಶ್ಚಿತಾ" ಎಂಬುವದರಿಂದ ಮುಕ್ತನಿಗೆ ಉಂಟಾಗುವ ಪರಬ್ರಹ್ಮಾನುಭವ ಭೋಗಮಾತ್ರದಿಂದ ಪರಬ್ರಹ್ಮನೊಂದಿಗೆ ಸಾಮ್ಯವು ಹೇಳಲ್ಪಟ್ಟಿರುವದರಿಂದ, ಆನಂದ ಮಾತ್ರದಲ್ಲಿ ಸಾಮ್ಯವೇ ವಿನಾ, ಜಗದ್ವ್ಯಾಪಾರಗಳಲ್ಲಿಲ್ಲವೆಂದು ನಿರ್ಧರಿಸಲ್ಪಟ್ಟಿರುತ್ತದೆ.

ಸಾಯುಜ್ಯ ಶಬ್ದಕ್ಕೆ ಇಂತಹ ಭೋಗಸಾಮ್ಯವೇ ಅರ್ಥವೆಂದು ಈಗ ಉಪಪಾದಿಸುವದಕ್ಕೆ ವ್ಯಾಕರಣಸೂತ್ರಗಳನ್ನು ರಚಿಸಿದ ಶ್ರೀ ಶಾಕಟಾಯನರ ಪ್ರಮಾಣವನ್ನು ಉದಾಹರಿಸುತ್ತಾರೆ:—ಸಾಮರಸ್ಯಂಹಿ - ಸಮರಸವುಳ್ಳ ಭಾವವನ್ನಲ್ಲವೇ ಎಂದರೆ "ರಸೋವೈಸಃ, ರಸಗ್ಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ" ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ರಸವೆಂದರೆ ಆನಂದಮಯನಾದ ಪರಬ್ರಹ್ಮನು, ಅವನೊಂದಿಗೆ ಸಮಾನವಾದ ಆನಂದವನ್ನುಳ್ಳ ಭಾವವನ್ನೇ ಎಂಬರ್ಥವು. ಬ್ರಹ್ಮವಾದಿನಃ - ಬ್ರಹ್ಮವಿತ್ತುಗಳು, ಸಾಯುಜ್ಯವೆಂಬದಾಗಿ, ವದನ್ತಿ - ಹೇಳುತ್ತಾರೆ, ಎನ್ರು - ಎಂಬದಾಗಿ ಶಾಕಟಾಯನರೂ, ಸೊನ್ನಾನ್ - ಹೇಳಿರುತ್ತಾರೆ. ಸಾಮರಸ್ಯಂ ಎಂದು ಹೇಳಿರುವದರಿಂದ ಇಬ್ಬರಿಗೆ ಒಂದೇ ವಿಧವಾದ ಆನಂದವೆಂದು ಹೇಳಿರುವದರಿಂದ, ಸಾಯುಜ್ಯವು ಸ್ವರೂಪೈಕ್ಯವನ್ನು ಬೋಧಿಸುತ್ತದೆ ಎಂದು ಹೇಳುವ ಅದ್ವೈತಿಗಳಭಿಪ್ರಾಯವು ಸಮಂಜಸವಾದುದಲ್ಲವೆಂಬುದು ತೋರಿಬರುತ್ತದೆ. "ನಿರಂಜನಃ ಪರಮಂ ಸಾಮ್ಯಮುಪೈತಿ" ಎಂಬಲ್ಲಿ ಸಮಶಬ್ದವನ್ನು ಜೋಡಿಸಿರುವದರಿಂದಲೇ, ಮುಕ್ತನೂ ಪರಮಾತ್ಮನೂ ಒಂದೇ ಎಂಬ ಅದ್ವೈತಸಿದ್ಧಾಂತಕ್ಕೆ ಪ್ರಬಲ ವಿರೋಧವು. ಇದು ಕುದುರೆಗೆ ಸಮ ಎಂದು ಹೇಳಿದರೆ ಇದು ಕುದುರೆಯಲ್ಲವೆಂದು ಕಂಠೋಕ್ತವಾಗಿ ಹೇಳಿದಂತಾಗ

ಶ್ರೀ ಶಙ್ಕರೋಕ್ತ ಸಾಯುಜ್ಯಾರ್ಥಸ್ಯ ಖಂಡನಂ

ಶಬ್ದಶಕ್ತಿಯುನಿಕ್ಕೇ ಯಿರುಕ್ಕ, ಭೇದಶ್ರುತಿಗಳುಮ್ ವಿರೋಧಿಕ್ಕ, ಸಾಯುಜ್ಯ ಶಬ್ದತ್ತುಕ್ಕು ಐಕ್ಯಮ್ ಪೊರುಳಾಗ ನಿನೈತ್ತಿರುಪ್ಪಾರ್ಕ್ಕು, ಮುಕ್ತನ್ ಪರಮ ಸಾಮ್ಯತ್ತೈ ಯಡೈಯು ಮೆನ್ರುಮ್, ತಾದೃಕ್ಯಾ ಮೆನ್ರುಮ್, ಶೊಲ್ಲುಗಿರ ಶ್ರುತಿಗಳುಮ್ ವಿರೋಧಿಕ್ಕುಮ್.

ಲಿಲ್ಲವೇ ? ಆದುದರಿಂದ ಮುಕ್ತನ ಸ್ವರೂಪವೇ ಬೇರೆ ಪರಮಾತ್ಮನ ಸ್ವರೂಪವೇ ಬೇರೆ ಎಂಬುದು ವ್ಯಕ್ತಪಟ್ಟಿತು. ಯಾವುದರಲ್ಲಿ ಸಾಮ್ಯವೆಂದರೆ **ಭೋಗಮಾತ್ರ ಸಾಮ್ಯಂ** ಎಂದು ಶ್ರೀ ವ್ಯಾಸಾರ್ಯರು ನಿರ್ಧರಿಸಿದರು. ಇಲ್ಲಿ ಆನಂದದಲ್ಲಿ ಮಾತ್ರ ಸಾಮ್ಯವೆಂದು ಹೇಳಿದುದರಿಂದಲೇ ಇಲ್ಲೂ ವ್ಯತ್ಯಾಸ ಉಂಟೆಂದು ಹೇಳಿದಂತಾಯಿತು. ಎಲ್ಲಿ ವ್ಯತ್ಯಾಸವೆಂದರೆ **ಜಗದ್ವ್ಯಾಪಾರ ವರ್ಜಂ** ಎಂದು ಹೇಳಿದರು. ಆದುದರಿಂದ ಸಾಯುಜ್ಯವೆಂದರೆ ಸ್ವರೂಪೈಕ್ಯವೆಂಬ ಶಂಕರಾಭಿಪ್ರಾಯವು ಸರಿಯಲ್ಲವೆಂಬುದು "**ಸಾಮರಸ್ಯಂ ಹಿ ಸಾಯುಜ್ಯಂ ವದನ್ತಿ ಬ್ರಹ್ಮವಾದಿನಃ**" ಎಂಬುದರಿಂದ ಏರ್ಪಡುತ್ತದೆ. ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯಗಳಿಂದ ಸಮರ್ಥನ ಮಾಡಿ ಹೇಳುತ್ತಾರೆ.

ಸಾಯುಜ್ಯ ಶಬ್ದದ ಶ್ರೀ ಶಂಕರಾಚಾರ್ಯರರ್ಥದ ಖಂಡನವು.

ಶಬ್ದಶಕ್ತಿಯುನಿಕ್ಕೇ ಇರುಕ್ಕ - ಸಾಯುಜ್ಯಶಬ್ದ ಸಾಮರ್ಥ್ಯವು ಐಕ್ಯವೆಂಬರ್ಥವಲ್ಲದೇ ಇರುವಾಗ, **ಭೇದಶ್ರುತಿಗಳುಮ್**-ಪರಮಾತ್ಮ ಜೀವಾತ್ಮರಿಗೆ ಭೇದವನ್ನು ಹೇಳುವ ಶ್ರುತಿಗಳೂ, **ವಿರೋಧಿಕ್ಕ**-ವಿರೋಧವಾದವುಗಳಾಗಿರುವಾಗ, **ಸಾಯುಜ್ಯ ಶಬ್ದಕ್ಕೆ, ಐಕ್ಯಂ ಪೊರುಳಾಗ** - ಪರಮಾತ್ಮ ಜೀವಾತ್ಮರ ಐಕ್ಯವೇ ತಾತ್ಪರ್ಯವಾಗಿ, **ನಿನೈತ್ತಿರುಪ್ಪಾರ್ಕ್ಕು** - ಎಣಿಸಿರುವವರಿಗೆ, **ಮುಕ್ತನ್** - ಮುಕ್ತನು, **ಪರಮಸಾಮ್ಯತ್ತೈ ಯಡೈಯುಮೆನ್ರುಮ್** - ಪರಮಸಾಮ್ಯವನ್ನು ಹೊಂದುವನೆಂದೂ, **ತಾದೃಕ್ಯಾಮ್ ಎನ್ರುಮ್** - ಪರಮಾತ್ಮನಿಗೆ ಸದೃಶನಾಗುವನೆಂದೂ, **ಶೊಲ್ಲುಗಿರ**-ಹೇಳುವ, ಶ್ರುತಿಗಳೂ ಸಹ, **ವಿರೋಧಿಕ್ಕುಮ್**-ವಿರೋಧವಾದವುಗಳಾಗುವವು. ಮುಕ್ತದೆಸೆಯಲ್ಲಿ ಜೀವಾತ್ಮನು ಪರಮಾತ್ಮನಲ್ಲಿ ಐಕ್ಯ ಹೊಂದುವನೆಂದೂ, ಇದೇ ಸಾಯುಜ್ಯಶಬ್ದಾರ್ಥವೆಂದೂ ಶ್ರೀ ಶಂಕರಾಚಾರ್ಯರು ಅಭಿಪ್ರಾಯಪಟ್ಟಿರುತ್ತಾರೆ. ಈ ಅಭಿಪ್ರಾಯವು ಅನೇಕ ಶ್ರುತಿ

ಪ್ರಮಾಣಗಳಿಗೆ ವಿರೋಧವಾಗುತ್ತದೆಂದು ಹೇಳುತ್ತಾರೆ. ಆ ಭೇದ ಶ್ರುತಿಗಳು ಯಾವುವೆಂದರೆ:—

೧. "ನಿತ್ಯೋ(ನಿತ್ಯಾನಾಂ ಚೇತನಶ್ಚೇತನಾನಾಂ ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್" (ಶ್ವೇ. ೬. ೧೩, ಕಠ ೨. ೫. ೧೩) ನಿತ್ಯಾನಾಂ ಬಹೂನಾಂ ಚೇತನಾನಾಂ - ಅನೇಕರಾಗಿ ಅಸಂಖ್ಯಾಕರಾದ ನಿತ್ಯರಾದ ಜೀವಾತ್ಮರುಗಳಿಗೆ, ನಿತ್ಯಃ ಏಕಃ ಚೇತನಃ - ನಿತ್ಯನಾದ ಒಬ್ಬನಾದ ಯಾವ ಪರಮಾತ್ಮನು ಸರ್ವ ಇಷ್ಟಾರ್ಥ ಭೋಗಗಳನ್ನೆಲ್ಲಾ ಉಂಟುಮಾಡುವನೋ.

(೨) ಪೃಥಗಾತ್ಮಾನಂ ಪ್ರೇರಿತಾರಂಚಮತ್ವಾ - ಜೀವಾತ್ಮವರ್ಗವೂ, ನಿಯಾಮಕನಾದ ಪರಮಾತ್ಮನೂ, ಪೃಥಕ್ - ಬೇರೆ ಎಂದು ತಿಳಿದವನಾಗಿ (ಶ್ವೇ. ೧. ೬)

(೩) "ದ್ವಾಸುಪರ್ಣಾ ಸಯುಜಾ ಸಖಾಯಾ" (ಮುಂ. ೩. ೧. ೧, ಶ್ವೇ. ೪. ೬) ನಮ್ಮ ಹೃದಯ ಕುಹರದಲ್ಲಿ ಇಬ್ಬರು ಆತ್ಮರುಗಳು, ಜೀವಾತ್ಮ ಪರಮಾತ್ಮರುಗಳಿದ್ದಾರೆ, ಅವರು ಯಾವಾಗಲೂ ಒಟ್ಟಿಗೆ ಇರುವವರು, ಪರಮ ಮಿತ್ರರುಗಳು, ಇತ್ಯಾದಿ.

(೪) "ಯಸ್ಯಾತ್ಮಾ ಶರೀರಂ" (ಬೃ. ೫. ೭. ೨೨) ಯಾವ ಪರಮಾತ್ಮನಿಗೆ ಈ ಜೀವಾತ್ಮನು ಶರೀರವೋ.

(೫) ಭೋಕ್ತಾ ಭೋಗ್ಯಂ ಪ್ರೇರಿತಾರಂಚಮತ್ವಾ. (ಶ್ವೇ. ೧. ೧೨)

(೬) ಸರ್ವಸ್ಯ ಶರಣಂ ಸುಹೃತ್-ಸಮಸ್ತ ಚೇತನರಿಗೂ ಪರಮಾತ್ಮನು ಉಪಾಯವು ಮತ್ತು ಪರಮ ಮಿತ್ರನು, ಪರಮೋಪಕಾರಿಯು.

(೭) "ಈಶನೀಶೌ" (ಶ್ವೇತ. ೧. ೯) ಒಬ್ಬನು ಸರ್ವೇಶ್ವರನು ಸರ್ವ ನಿಯಾಮಕನು, ಇನ್ನೊಬ್ಬನು (ಜಾತ್ಯೇಕ ವಚನವು) ಅತನಿಗೆ ದಾಸನು.

(೮) ಪ್ರಧಾನ ಕ್ಷೇತ್ರಜ್ಞ ಪತಿರ್ಗುಣೇಶಃ" (ಶ್ವೇತ ೬. ೧೬) ಪ್ರಕೃತಿಯಾದ ಅಚೇತನವರ್ಗಕ್ಕೂ, ಚೇತನವರ್ಗಕ್ಕೂ ಕಲ್ಯಾಣಗುಣಗಳಿಗೂ ಸಹ ನಾಯಕನು.

(೯) "ಕ್ರಿಯಾಗುಣೈರಾತ್ಮಗುಣೈಶ್ಚ ತೇಷಾಂ ಸಂಯೋಗಹೇತುರಪರೋಽಪಿ ದೃಷ್ಟಃ" (ಶ್ವೇ. ೫ ೧೨) ಕರ್ಮಗಳಿಗೂ ಸಂಸಾರಕ್ಕೂ ಕಾರಣಭೂತವಾದ ಗುಣಗಳೇನು, ಚೇತನಸಂಬಂಧಗುಣಗಳಾಗಿ ಮೋಕ್ಷಕ್ಕೆ ಕಾರಣಭೂತವಾದ ಗುಣಗಳೇನು ಇವುಗಳನ್ನು ಆ ಚೇತನರೊಂದಿಗೆ ಸೇರಿಸುವದಕ್ಕೆ ಹೇತುವಾಗಿರುವ ಪರಬ್ರಹ್ಮನೆಂಬವನು ಇವರುಗಳಿಂದ ಬೇರೆಯಾಗಿ ತೋರುವನು. (ಶ್ವೇತ. ೬. ೧೬)

(೧೦) ಸಕಾರಣಂ ಕರಣಾಧಿಪಾಧಿಪಃ - ಇಂದ್ರಿಯಗಳಿಗೆ ಅಧಿಪತಿ

ಗಳಾಗಿರುವ ಚೇತನರಿಗೂ ಕಾರಣವಾಗಿ ಪರಬ್ರಹ್ಮನಿದ್ದಾನೆ (ಶ್ವೇತ. ೬. ೯)

(೧೧) "ಯ ಆತ್ಮನಿ ತಿಷ್ಠನ್" - ಯಾವ ಪರಮಾತ್ಮನು ಜೀವನಲ್ಲಿ ಆತನಿಗೆ ಆತ್ಮಾವಾಗಿರುವನಾಗಿ (ಬೃ. ೩. ೭. ೨೨)

(೧೨) "ತಮೇವಂ ವಿದಿತ್ವಾತಿಮೃತ್ಯುಮೇತಿ" (ಶ್ವೇತ. ೩. ೮) ಆ ಪರಬ್ರಹ್ಮವನ್ನು ಹೀಗೆ ತಿಳಿದವನಾಗಿ, ಸಾಕ್ಷಾತ್ಕರಿಸಿದವನಾಗಿ ಸಂಸಾರಸಾಗರವನ್ನು ದಾಟುತ್ತಾನೆ.

(೧೩) "ಪ್ರಾಜ್ಞೇನಾತ್ಮನಾನ್ವಾರೂಢಃ ಉತ್ಸರ್ಜನ್ಯಾತಿ" (ಬೃ. ೬, ೩. ೨೧) ಸರ್ವಜ್ಞನಾದ ಪರಮಾತ್ಮನಿಂದ ಸೇರಿದವನಾಗಿ ದೇಹತ್ಯಾಗ ಮಾಡಿದವನಾಗಿ ಹೋಗುತ್ತಾನೆ.

(೧೪) ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಗ್ಂ ಸರ್ವಾತ್ಮಾ (ತೈ. ಆ. ೩. ೨೪) ಪರಬ್ರಹ್ಮನು ಎಲ್ಲಾ ಚೇತನರಲ್ಲೂ ಪ್ರವೇಶ ಮಾಡಿ ಅವರಿಗೆ ನಿಯಾಮಕನಾಗಿ, ಎಲ್ಲರಿಗೂ ಸತ್ತೆಯನ್ನೀಯುವ ಆತ್ಮಾವಾಗಿದ್ದಾನೆ.

(೧೫) "ಯಥಾ ನದ್ಯಃ ಸ್ಯಂದಮಾನಾಸ್ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ । ತಥಾವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥" ಹೇಗೆ ನದಿಗಳು ಸಮುದ್ರದ ಕಡೆಗೆ ಪ್ರವಹಿಸುವವುಗಳಾಗಿ ತಮ್ಮ ರೂಪಗಳನ್ನೂ ಹೆಸರುಗಳನ್ನೂ ಕಳೆದುಕೊಂಡು ಸಮುದ್ರದಲ್ಲಿ ಸೇರಿಹೋಗುವವೋ, ಹಾಗೆಯೇ ಉಪಾಸಕನೂ ಕೂಡ ತನ್ನ ನಾಮರೂಪಗಳಿಂದ ಬಿಡಲ್ಪಟ್ಟವನಾಗಿ ಎಂದರೆ ನಾಮರೂಪಗಳ ಕಾರಣವಾದ ಪ್ರಕೃತಿಸಂಬಂಧದಿಂದ ಬಿಡುಗಡೆಯನ್ನು ಹೊಂದಿದವನಾಗಿ ದಿವ್ಯವಾದ ಪರಬ್ರಹ್ಮವನ್ನು ಹೊಂದುವನು ಎಂಬ ಭಾವವು, ಇಲ್ಲಿ ಕರ್ತೃವು ಉಪಾಸಕನು, ಕರ್ಮವು ಪರಬ್ರಹ್ಮವು ಆದುದರಿಂದ ಕರ್ತೃ ಕರ್ಮಗಳು ಒಂದೇ ಆಗಲಾರವು. ಒಬ್ಬನು ಪ್ರಾಪ್ತಾ, ಇನ್ನೊಬ್ಬನು ಪ್ರಾಪ್ಯನು.

ಹೀಗೆ ನೂರಾರು ಶ್ರುತಿಗಳನ್ನಾರಿಸಿ ಹೇಳಬಹುದು.

ಹಾಗೆಯೇ ಸ್ಮೃತಿಯೂ ಕೂಡ.

(೧) ಕ್ಷರಸ್ಸರ್ವಾಣಿಭೂತಾನಿ ಕೂಟಸ್ಥೋಽಕ್ಷರಉಚ್ಯತೇ । ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ॥ (ಗೀ. ೧೫ ೧೬) ಬದ್ಧ ಮುಕ್ತ ನಿತ್ಯರುಗಳಿಗಿಂತ ಬೇರೆಯಾಗಿ ವಿಲಕ್ಷಣನಾಗಿ ಪರಮಾತ್ಮನೆನಿಸುವನು.

(೨) ಹಾಗೆಯೇ ವಿಷ್ಣುಪುರಾಣದಲ್ಲೂ (೬ ೭ ೩೦)

"ಆತ್ಮಭಾವಂ ನಯತ್ಯೇನಂ ತದ್ಬ್ರಹ್ಮಧ್ಯಾಯಿನಂ ಮುನಿಂ ।
ವಿಕಾರ್ಯಮಾತ್ಮನಶ್ಶಕ್ತ್ಯಾ ಲೋಹಮಾಕರ್ಷಕೋ ಯಥಾ ॥"

(೪) "ಮಮಸಾಧರ್ಮ್ಯಮಾಗತಾಃ" ಎನ್ರು ಗೀತಾಚಾರ್ಯನುಮ್ ಅರುಳಿಚ್ಚೆಯ್ದಾನ್.

---

೩. ಹಾಗೆಯೇ ಶ್ರೀ ವೇದವ್ಯಾಸರೂ ಮಹಾ ಭಾರತದ ಆದಿ ಪರ್ವ ಶಕುಂತಲೋಪಾಖ್ಯಾನದಲ್ಲಿ, "**ಏಕೋಽಹಮಸ್ಮೀತಿ ಚ ಮನ್ಯಸೇ ತ್ವಂ ನ ಹೃಚ್ಛಯಂ ವೇತ್ಸಿ ಕವಿಂ ಪುರಾಣಂ**" "ನೀನು ಒಬ್ಬನೇ ಎಂದು ತಿಳಿದಿರುತ್ತೀಯೋ, ನಿನ್ನ ಹೃದಯ ಗುಹೆಯಲ್ಲಿಯೇ ಶಯನಿಸಿರುವ ಮಹಾನುಭಾವನನ್ನು ನೀನು ಅರಿಯೆಯಾ" ಎಂದು ಹೇಳಲ್ಪಟ್ಟಿರುತ್ತದೆ.

ಆಕರ್ಷಕಃ - ಆಯಸ್ಕಾಂತ ಶಿಲೆಯು **ಆತ್ಮನಶ್ಶಕ್ತ್ಯಾ** - ತನ್ನ ಶಕ್ತಿಯಿಂದ, **ಲೋಹಂ** - ಕಬ್ಬಿಣವನ್ನು, ಆತ್ಮಭಾವಂ - ತನ್ನ ಸ್ವಭಾವ ಹೇಗೋ, ಹಾಗೆಯೇ ಆಕರ್ಷಿಸುವ ಸ್ವಭಾವವನ್ನು, ನಯತಿ - ಹೊಂದಿಸುತ್ತದೋ ಹಾಗೆಯೇ, ವಿಕಾರ್ಯಂ - ಪ್ರಕೃತಿ ಸಂಬಂಧದಿಂದ ದೋಷಯುಕ್ತನಾದುದಾಗಿದ್ದ, **ಏನಂ** - ಈ, ಬ್ರಹ್ಮಧ್ಯಾಯಿನಂ - ಪರಬ್ರಹ್ಮೋಪಾಸಕನಾದ, ಮುನಿಂ - ಮೌನದಿಂದ ಮನನಶೀಲನಾದವನನ್ನು, ತತ್ - ಆ ಪರಬ್ರಹ್ಮನು, **ಆತ್ಮನಃ ಶಕ್ತ್ಯಾ** - ತನ್ನ ಶಕ್ತಿಯಿಂದಲೇ, **ನಯತಿ** - ಹೊಂದಿಸುವನು.

ಇತ್ಯಾದಿ ಅನೇಕ ಪ್ರಮಾಣಗಳಿಗೆ ಶ್ರೀ ಶಂಕರಾಚಾರ್ಯರ ಸ್ವರೂಪೈಕ್ಯಾಭಿಪ್ರಾಯವು ವಿರೋಧವಾದುದಾಗಿರುತ್ತದೆ. ಇಲ್ಲಿ ಪರಮಾತ್ಮನಿಗೆ ಸ್ವಭಾವವುಂಟೆಂದು ಹೇಳಿರುವದರಿಂದ ನಿರ್ಗುಣವಾದವೂ ಅಪ್ರಾಮಾಣಿಕವಾಗುದೆಂಬುದು ಸ್ಪಷ್ಟವು. ಆದುದರಿಂದ ಸಾಯುಜ್ಯವೆಂದರೆ ಸಯುಕ್ತನ ಭಾವವು. ಎಂದರೆ ಜೀವಾತ್ಮನು ಪರಮಾತ್ಮ ಸ್ವಭಾವವುಳ್ಳವನಾಗಿ ಪರಮಾತ್ಮನಿಗೆ ಸದೃಶನಾದವನಾಗುವನೆಂಬ ಭಾವವು. ನಿರಂಜನಃ ಪರಮಂ ಸಾಮ್ಯಮುಪೈತಿ ಎಂಬ ಶ್ರುತ್ಯಭಿಪ್ರಾಯವೇ, ಮಮಸಾಧರ್ಮ್ಯಮಾಗತಾಃ ಎಂದು ಗೀತಾವಾಕ್ಯದಲ್ಲಿ ಉಪಪಾದಿತವಾಗಿರುವದರಿಂದ, ಪರಮಂ ಸಾಮ್ಯಂ ಎಂಬುವದಕ್ಕೆ ಪರಬ್ರಹ್ಮ ಸಾಧರ್ಮ್ಯವೆಂದೇ ಅರ್ಥ ಮಾಡಬೇಕೆಂದು ಹೇಳಿದಂತಾಯಿತು. ಪರಬ್ರಹ್ಮನಿಗೆ ಸದೃಶವಾದ ಧರ್ಮ ಉಳ್ಳೋಣವೇ ಸಾಯುಜ್ಯವು, ಮತ್ತು ಪರಬ್ರಹ್ಮನು ಪ್ರಾಕೃತ ಸ್ಥಿತಿಯಲ್ಲೂ ಧರ್ಮವುಳ್ಳವನೆಂದು ಹೇಳಿದಂತಾಯಿತು. ಇದರಿಂದ ನಿರ್ಗುಣ ಬ್ರಹ್ಮವೆಂಬುವದು ಅಪಸಿದ್ಧಾಂತವೆಂಬುದೂ ತೋರಿಬರುತ್ತದೆ.

(೯) "ಮಮ - ನನ್ನ, ಸಾಧರ್ಮ್ಯಂ - ಸಮಾನ ಧರ್ಮವುಳ್ಳ ಭಾವವನ್ನು, ಆಗ

---

(೪) ಗೀ. ೧೪. ೨.

ತಾಃ-ಹೊಂದಿದವರು" ಎಂದು ಗೀತಾಚಾರ್ಯನುಮ್-ಗೀತೋಪದೇಶಿಕರಾದ ಶ್ರೀ ಕೃಷ್ಣ ಭಗವಾನವರು ಅರುಳಿಚ್ಚೆಯ್‌ದಾರ್ – ಕೃಪೆಯಾ ಹೇಳಿರುತ್ತಾರೆ. ಮುಂದೆ "ಸರ್ಗೇಽಪಿ ನೋಪಜಾಯನ್ತೇ ಪ್ರಳಯೇ ನವ್ಯಥನ್ತಿ ಚ" ಈ ಮುಕ್ತರು ಸೃಷ್ಟಿಕಾಲದಲ್ಲೂ ಪುನಃ ಜನ್ಮವೆತ್ತುವದಿಲ್ಲವು, ಪ್ರಳಯದಲ್ಲೂ ಕ್ಲೇಶ ವನ್ನು ಹೊಂದುವದಿಲ್ಲವು, ಎಂದು ಹೇಳಲ್ಪಟ್ಟಿರುತ್ತದೆ.

ಸಾಧರ್ಮ್ಯವೆಂದು ಹೇಳಿರುವದರಿಂದ ಪರಬ್ರಹ್ಮವೂ ಮುಕ್ತನೂ ಇಬ್ಬರೂ ಧರ್ಮಯುಕ್ತರೆಂದು ತೋರಿಬರುವದರಿಂದ ನಿರ್ಗುಣವಾದಕ್ಕೆ ಅವಕಾಶವೇ ಇಲ್ಲವು. ಇಬ್ಬರೂ ಸಮಾನ ಧರ್ಮಯುಕ್ತರೆಂದು ಹೇಳಿರುವುದರಿಂದ, ಸ್ವರೂಪೈಕ್ಯವಾದವು ಒಂದು ಕ್ಷಣವೂ ನಿಲ್ಲಲಾರದು. ಸ್ವರೂಪೈಕ್ಯವಾಗಿ ಬೇರೇ ಸ್ಥಿತಿಯೇ ಇಲ್ಲದಿರುವ ಈ ಮೋಕ್ಷಕ್ಕಿಂತ, ಋಷಿಗಳ ಹಾಗೆ ಪ್ರವರ್ತನೆಯನ್ನು ಹೊಂದಿ ಈ ಲೋಕದಲ್ಲೇ ಸದಾ ಇರುವ ಸ್ಥಿತಿಯು ಸಾಧ್ಯವಾದುದಾದರೆ ಸರ್ವೋತ್ಕೃಷ್ಟ ಸ್ಥಿತಿಯೆಂದು ಆಗ ಭಾವಿಸತಕ್ಕದ್ದಾಗುತ್ತದೆ. ಶ್ರೀ ಶಂಕರಾಚಾರ್ಯರವರು "ಮಮ ಸಾಧರ್ಮ್ಯ ಮಾಗತಾಃ" ಎಂಬುದಕ್ಕೆ ವ್ಯಾಖ್ಯಾನವಾಗಿ "ಮತ್ಸ್ವರೂಪಂ ಪ್ರಾಪ್ತಾಃ, ನತು ಸಮಾನ ಧರ್ಮತಾ ಸಾಧರ್ಮ್ಯಂ, ಕ್ಷೇತ್ರಜ್ಞೇಶ್ವರಯೋಃ ಭೇದಾನಭ್ಯುಪ ಗಮಾತ್ ಗೀತಾಶಾಸ್ತ್ರೇ" ಎಂದು ಬರೆದಿರುತ್ತಾರೆ. ಸಾಧರ್ಮ್ಯಂ ಎಂಬುದಕ್ಕೆ ಸ್ವರೂಪವೆಂದರ್ಥವೇ ವಿನಾ ಸಮಾನ ಧರ್ಮವುಳ್ಳ ಭಾವವೆಂದಲ್ಲವು, ಎಂದು ಹೇಳಿ, ಗೀತಾಶಾಸ್ತ್ರದಲ್ಲಿ ಜೀವಾತ್ಮ ಪರಮಾತ್ಮರುಗಳಿಗೆ ಭೇದವನ್ನು ಅಂಗೀಕರಿ ಸುವದಿಲ್ಲವಾದುದರಿಂದ, ಎಂಬ ಹೇತುವನ್ನು ಹೇಳಿರುತ್ತಾರೆ. ಈ ಹೇತುವು ಅಸಿದ್ಧಿದೋಷಯುಕ್ತವಾದುದು; ಏಕೆಂದರೆ ಗೀತಾವಾಕ್ಯದಲ್ಲೇ "ಉತ್ತಮಃ ಪುರುಷಸ್ತ್ವನ್ಯಃ" (ಗೀ. ೧೫-೧೭) ಎಂದು ವಿಶದವಾಗಿ ಭೇದವು ಕಂಠೋಕ್ತವಾ ಗಿರುವದರಿಂದ ಅದ್ವೈತಸಿದ್ಧಾಂತವನ್ನು ಗೀತಾಶಾಸ್ತ್ರವು ಅಂಗೀಕರಿಸಿಲ್ಲವು ಎಂದು ಹೇಳಿದ್ದರೆ ಪ್ರಾಮಾಣಿಕವಾದ ವಾಕ್ಯವಾಗುತ್ತಿತ್ತು. ಇಲ್ಲಿ ಅನ್ಯಃ ಎಂದರೆ ಸ್ವರೂಪತಃ ಅನ್ಯನಾಗಿ ವಿಲಕ್ಷಣನಾದವನು ಎಂದು ಅರ್ಥ ಮಾಡದೆ ಉಪಾಧಿ ಸ್ವಭಾವದಿಂದ ಅನ್ಯಃ ಎಂದು ಅರ್ಥ ಮಾಡಿರುತ್ತಾರೆ. ಸಾಧರ್ಮ್ಯಕ್ಕೆ ಸಮಾನ ಧರ್ಮವಲ್ಲ, ಸಮಾನ ಸ್ವರೂಪವೆಂದು ಅರ್ಥ ಮಾಡುವದೂ, ಸ್ವರೂಪತಃ ಅನ್ಯ ನಾದುದಕ್ಕೆ ಉಪಾಧಿ ಮಾತ್ರದಿಂದ ಅನ್ಯವೆಂದು ಅರ್ಥ ಮಾಡುವದೂ, ಹೇಗೆ ಸಮಂಜಸವೆಂಬುದನ್ನು ನಿಷ್ಪಕ್ಷಪಾತಿಗಳು ಆಲೋಚಿಸಬಹುದು. ಗೀತೆಯು "ನತ್ವೇವಾಹಂ ಜಾತು ನಾಸಂ" ಎಂಬಲ್ಲಿ, ಸರಿಯಾದ ಜ್ಞಾನವಿಲ್ಲದೆ ಶೋಕಿಸುತ್ತಾ, ತನಗೆ ಪರಮಾರ್ಥ ಜ್ಞಾನವನ್ನು ಉಪದೇಶಿಸಬೇಕೆಂದು, "ಶಾಧಿಮಾಂ ತ್ವಾಂ ಪ್ರಪನ್ನಂ" ಎಂದು ಅತಿ ದೈನ್ಯದಿಂದ ಬೇಡಿದ ಅರ್ಜುನನಿಗೆ ಪರಮಾರ್ಥವನ್ನು ಹೇಳಲ

ಇನ್ನರ್ಥತ್ರೈ, (೧) "ಪರೇಣ ಪರಧರ್ಮೀಚ ಭವತ್ಯೇಷ ಸಮೇತ್ಯವೈ। ವಿಶುದ್ಧಧರ್ಮಾ ಶುದ್ಧೇನ ಬುದ್ಧೇನ ಚ ಸ ಬುದ್ಧಿಮಾನ್। ವಿಮುಕ್ತ ಧರ್ಮಾ ಮುಕ್ತೇನ ಸಮೇತ್ಯ ಭರತರ್ಷಭ। ವಿಯೋಗ ಧರ್ಮಿಣಾಚೈವ ವಿಯೋ

ತೊಡಗಿದ ಪೃಥಕು ಶ್ಲೋಕದಲ್ಲೂ, "ಅಹಂ, ತ್ವಂ ಇಮೇ" ಎಂಬ ಶಬ್ದಗಳಿಂದ ಜೀವಾತ್ಮ ಪರಮಾತ್ಮ ಭೇದವನ್ನೂ, ಜೀವಾತ್ಮರ ಪರಸ್ಪರಭೇದವನ್ನೂ, ಬೋಧಿಸಿರುತ್ತಾರೆ. ಕೊನೆಯ ಶ್ಲೋಕದಲ್ಲೂ "ಸರ್ವಧರ್ಮಾನ್ ಪರಿತ್ಯಜ್ಯ" ಎಂಬಲ್ಲಿಯೂ, ಅಹಂ ತ್ವಾ ಎಂಬ ಪ್ರಯೋಗದಿಂದ ಪ್ರಾಪ್ತಾವೇ ಬೇರೆ, ಪ್ರಾಪ್ಯನೇ ಬೇರೆ ಎಂದು ಗೀತೆಯಲ್ಲೆಲ್ಲಾ ಪ್ರತಿಪಾದಿತವೇ ವಿನಾ, ಅಭೇದವೆಂದಿಗೂ ಇಲ್ಲವು.

ಶ್ರೀ ವ್ಯಾಸಮಹರ್ಷಿಯು "ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ" ಸರ್ವಶಾಸ್ತ್ರಗಳಲ್ಲೂ ನಿಪುಣತೆಯನ್ನು ಹೊಂದಿದವರಾಗಿ, ಪುನಃ ಪುನಃ ಅವುಗಳನ್ನು ಪರಿಶೀಲಿಸಿ ನಿಷ್ಕೃಷ್ಟಾರ್ಥಗಳನ್ನು ವ್ಯವಸ್ಥೆ ಮಾಡಿರುವದರಿಂದ, ಅಂತಹ ಮಹನೀಯರಭಿಪ್ರಾಯಕ್ಕೂ ಈ ಶ್ರೀ ಶಂಕರಾಭಿಪ್ರಾಯವು ಪರಮವಿರುದ್ಧವಾದುದೆಂದು ತಿಳಿಸುವದಕ್ಕಾಗಿ ಮೋಕ್ಷಧರ್ಮದ ವಸಿಷ್ಠ ಕರಾಳ ಸಂವಾದದಲ್ಲಿ ಸಿದ್ಧಾಂತಿಸಲ್ಪಟ್ಟ ಅಭಿಪ್ರಾಯವನ್ನು ದಾಹರಿಸಿರುತ್ತಾರೆ. **ಪರಮಂ ಸಾಮ್ಯಂ** ಎಂದರೆ **ಸಾಧರ್ಮ್ಯಂ** ಎಂದು ಗೀತೆಯಲ್ಲಿ ಸಂಗ್ರಹವಾಗಿ ಹೇಳಿದುದನ್ನೇ ವಿಶದವಾಗಿ ಉಪಪಾದನೆ ಮಾಡಿ ಈ ಸಂವಾದದಲ್ಲಿ ಹೇಳಿರುವದರಿಂದ, ಆ ತತ್ತ್ವಾರ್ಥವೇ ಪರಮಗ್ರಾಹ್ಯವೆಂದು ತಿಳಿಸುವದಕ್ಕಾಗಿಯೂ ಅಲ್ಲಿನ ಶ್ಲೋಕಗಳನ್ನು ದಾಹರಿಸಿರುತ್ತಾರೆ.

"**ಏಷಃ** - ಈ ಮುಕ್ತನು, **ಪರೇಣ ಸಮೇತ್ಯ** - ಪರವಸ್ತುವಾದ ವಾಸುದೇವನೊಂದಿಗೆ ಸೇರಿದವನಾಗಿ, **ಪರಧರ್ಮೀಚ ಭವತಿ** - ಪರಬ್ರಹ್ಮನು ಯಾವ ಧರ್ಮಗಳುಳ್ಳವನೋ, ಅಂತಹ ಧರ್ಮಗಳುಳ್ಳವನೇ ಆಗುತ್ತಾನೆ ಎಂದರೆ ಪ್ರಕೃತಿ ಸಂಬಂಧ ತೊಲಗಿದುದರಿಂದ ತತ್ಸ್ವದೃಶವಾದ ಧರ್ಮಗಳುಳ್ಳವನಾಗುತ್ತಾನೆ. ಮುಂದೆ ಇದನ್ನೇ ವಿಸ್ತರಿಸಿ ಹೇಳುತ್ತಾರೆ:—**ಶುದ್ಧೇನ** - ಅವಿದ್ಯಾದಿ ದೋಷಗಂಧರಹಿತನಾಗಿ ಅಪಹತಪಾಪ್ಮನಾದ ಪರಮಾತ್ಮನೊಂದಿಗೆ, **ಸಮೇತ್ಯ**, **ವಿಶುದ್ಧಧರ್ಮಾ** - ಅವಿದ್ಯಾದಿ ದೋಷಗಂಧರಹಿತನಾಗುವನು, **ಬುದ್ಧೇನ ಚ ಸಮೇತ್ಯ** - ಸರ್ವಜ್ಞನಾದ ಪರಮಾತ್ಮನೊಂದಿಗೆ ಸೇರಿ, **ಬುದ್ಧಿಮಾನ್ ಭವತಿ** - ಮುಕ್ತನೂ ಸರ್ವಜ್ಞನಾಗುವನು. ಓ **ಭರತರ್ಷಭ** - ಓ ಭರತವಂಶದ ಕರಾಳರಾಜನೇ;

(೧) ಭಾರತ ಶಾಂತಿ. ೩೧೩—೨೬, ೩೧.

ಗಾತ್ಮಾ ಭವತ್ಯಪಿ । ವಿಮೋಕ್ಷಿಣಾ ವಿಮೋಕ್ಷೀ ಚ ಸಮೇತ್ಯೇಷ ತಥಾ ಭವೇತ್ । ಶುಚಿಕರ್ಮಣಾ ಶುಚಿಶ್ಚೈಷ ಭವತ್ಯಮಿತದೀಪ್ತಿಮಾನ್ । ವಿಮಲಾತ್ಮಾ ಚ ಭವತಿ ಸಮೇತ್ಯ ವಿಮಲಾತ್ಮನಾ । ಕೇವಲಾತ್ಮಾ ತಥಾಚೈವ ಕೇವಲೇನ ಸಮೇತ್ಯವೈ । ಸ್ವತಂತ್ರಶ್ಚ ಸ್ವತಂತ್ರೇಣ ಸ್ವತಂತ್ರತ್ವಮವಾಪ್ನುತೇ

ಎಂದು ಸಂಬೋಧಿಸಿ ವಸಿಷ್ಠರು ಹೇಳುತ್ತಾರೆ, **ಮುಕ್ತೇನ ಸಮೇತ್ಯ** - ಯಾವ ಬಂಧವೂ ಇಲ್ಲದ ಪರಮಾತ್ಮನೊಂದಿಗೆ ಸೇರಿ ಮುಕ್ತನೂ, **ವಿಮುಕ್ತ ಧರ್ಮಾ, ಭವತಿ** - ಬಿಡಲ್ಪಟ್ಟ ಎಲ್ಲಾ ಬಂಧಗಳುಳ್ಳವನಾಗುತ್ತಾನೆ. **ಮುಕ್ತೇನ** - ಎಂದರೆ ಸಾರಸಂಗ್ರಹ ವ್ಯಾಖ್ಯಾತೃವು ಇಂದ್ರಿಯಾಧೀನವಾದ ಜ್ಞಾನವಿಲ್ಲದ ಪರಮಾತ್ಮನೆಂದು ಹೇಳಿರುತ್ತಾರೆ. **ವಿಯೋಗ ಧರ್ಮಿಣಾ** - ದುಃಖವು ಇಲ್ಲದಿರುವ ಪರಮಾತ್ಮನಿಂದ, **ಸಮೇತ್ಯ** - ಸೇರಿದವನಾಗಿ, **ವಿಯೋಗಾತ್ಮಾಪಿ** - ಈತನು ದುಃಖವಿಲ್ಲದಂಥಾವನೂ ಕೂಡ, **ಭವತಿ** - ಆಗುವನು, **ಏಷಃ** - ಈ ಮುಕ್ತನು, **ವಿಮೋಕ್ಷಿಣಾ ಸಮೇತ್ಯ** - ಮಹಾನಂದವನ್ನು ಹೊಂದಿರುವ ಪರಬ್ರಹ್ಮನೊಂದಿಗೆ ಬಂದು ಸೇರಿದವನಾಗಿ, **ತಥಾ** - ಹಾಗೆಯೇ, **ವಿಮೋಕ್ಷೀ ಚ ಭವೇತ್** - ತಾನೂ ನಿರತಿಶಯಾನಂದಯುಕ್ತನಾಗುವನು." **"ರಸೋವೈಸಃ ರಸಂಹ್ಯೇವಾಯಂ ಲಬ್ಧ್ವಾನನ್ದೀಭವತಿ"** ಎಂಬ ತೈತ್ತರೀಯ ಆನಂದವಲ್ಲಿಯ ಶ್ರುತ್ಯರ್ಥವು ಇಲ್ಲಿ ಉಪಪಾದಿಸಲ್ಪಟ್ಟಿತು "ಮುಕ್ತಿರ್ಮೋಕ್ಷೋ ಮಹಾನಂದಃ" ಎಂಬ ವಾಕ್ಯಾನುಸಾರವಾಗಿ, ಇಲ್ಲಿ ಮೋಕ್ಷಶಬ್ದಕ್ಕೆ ಆನಂದವೆಂಬರ್ಥವು. ಸಾರ ಪ್ರಕಾಶಿಕೆಯವರು, ವಿಮೋಕ್ಷೀ ಎಂಬುವದಕ್ಕೆ ಅವಿದ್ಯಾಕರ್ಮ ವಾಸನಾರುಚಿಗಳಿಂದ ಬಿಡಲ್ಪಟ್ಟವನಾಗುತ್ತಾರೆಂದು ಅರ್ಥ ಮಾಡಿರುತ್ತಾರೆ. **ಶುಚಿಕರ್ಮಣಾ** - ಹೇಯವಾದ ಕರ್ಮಸಂಬಂಧವಿಲ್ಲದವನಾದುದರಿಂದ ಪರಿಶುದ್ಧವಾದ ವ್ಯಾಪಾರಗಳುಳ್ಳ ಪರಮಾತ್ಮನೊಂದಿಗೆ, **ಸಮೇತ್ಯ** - ಸೇರಿದವನಾಗಿ, **ಏಷಃ** - ಈ ಮುಕ್ತನು, **ಶುಚಿಃ** - ಹಾಗೆಯೇ ಕರ್ಮಸಂಬಂಧವಿಲ್ಲದೆ ಪರಿಶುದ್ಧವ್ಯಾಪಾರಗಳುಳ್ಳವನಾಗಿಯೂ, **ಅಮಿತ ದೀಪ್ತಿಮಾನ್** - ನಿರವಧಿಕ ಜ್ಞಾನದೀಪ್ತಿಯುಳ್ಳವನಾಗಿಯೂ ಅಥವಾ ನಿರತಿಶಯ ಕಾಂತಿಯುಳ್ಳ ದಿವ್ಯಮಂಗಳವಿಗ್ರಹಯುಕ್ತನಾಗಿಯೂ ಅಪಹತಪಾಪ್ಮತ್ವಾದಿ ಗುಣಾಷ್ಟಕಗಳಿಂದ ಪ್ರಕಾಶಿಸುವನಾಗಿಯೂ, **ಭವತಿ** ಆಗುವನು. **ವಿಮಲಾತ್ಮನಾ** - ಸತ್ವಾದಿ ಗುಣರಾಹಿತ್ಯದಿಂದ ಪರಿಶುದ್ಧನಾದ ಪರಮಾತ್ಮನಿಂದ, **ಸಮೇತ್ಯ** - ಸೇರಿದವನಾಗಿ, **ಏಷಃ** - ಈ ಮುಕ್ತನೂ, **ವಿಮಲಾತ್ಮಾ ಚ** - ಸತ್ವಾದಿ ಗುಣರಹಿತನಾಗಿ, **ಭವತಿ** - ಆಗುವನು, **ಕೇವಲೇನ ಸಮೇತ್ಯವೈ** - ಪ್ರಾಕೃತ ದೇಹೇಂದ್ರಿಯಾದಿ

(ಮಮಾಪ್ಯುಕ್ತೇ) ಏತಾವದೇ ತತ್ಕಥಿತಂ ಮಯಾತೇ ತಥ್ಯಂ ಮಹಾರಾಜ ಯಥಾರ್ಥತತ್ತ್ವಮ್ । ಅಮತ್ಸರಸ್ತ್ವಂ ಪ್ರತಿಗೃಹ್ಯ ಚಾರ್ಥಂ ಸನಾತನಂ

ಗಳಿಲ್ಲದ ಅಪ್ರಾಕೃತ ದಿವ್ಯಮಂಗಳವಿಗ್ರಹವುಳ್ಳ ಪರಮಾತ್ಮನೊಂದಿಗೆ ಸೇರಿದವನಾಗಿ, **ವಿಷ್ಣುಃ ತಥಾ** - ಈ ಮುಕ್ತನೂ ಹಾಗೆಯೇ, **ಕೇವಲಾತ್ಮಾ** (ಭವತಿ) - ಪ್ರಾಕೃತ ದೇಹೇಂದ್ರಿಯಗಳಿಲ್ಲದೆ, ದಿವ್ಯಮಂಗಳವಿಗ್ರಹಯುಕ್ತನಾಗುವನು, **ಸ್ವತಂತ್ರೇಣ ಸಮೇತ್ಯ** - ಅಕರ್ಮವಶ್ಯನೊಂದಿಗೆ ಸೇರಿದವನಾಗಿ ತಾನೂ, **ಸ್ವತಂತ್ರತ್ವ** - ಅಕರ್ಮವಶ್ಯನಾಗಿ, **ಸ್ವತಂತ್ರತ್ವಮವಾಪ್ನುತೇ** - ಭಗವಂತನ ಸ್ವಾತಂತ್ರ್ಯವನ್ನನುಭವಿಸುವನು. ಸದಾ ಪರಮಾತ್ಮನಿಗಧೀನನಾದವನಾಗುವನು ಎಂಬರ್ಥವು "ಸಸ್ವರಾಡ್ಭವತಿ" ಎಂಬ ಶ್ರುತ್ಯರ್ಥವೂ "ಪಾರತಂತ್ರ್ಯಂ ಪರೇ ಪುಂಸಿ" ಪರಮಾತ್ಮನಿಗೆ ತಾನು ಯಾವಾಗಲೂ ಪರತಂತ್ರನೆಂದು ತಿಳಿಯುವನು ಎಂಬ ಸ್ಮೃತ್ಯರ್ಥವೂ ಇಲ್ಲಿ ಹೇಳಲ್ಪಟ್ಟಿತು. ಇಲ್ಲಿ **ಅವಾಪ್ನುತೇ** ಎಂಬ ಪಾಠಾಂತರವಾದರೆ ಸ್ವಾತಂತ್ರ್ಯವನ್ನು ಹೊಂದುವನೆಂಬರ್ಥ ಉಂಟಾಗುವದರಿಂದ, ಇದು ಸ್ವತಂತ್ರತ್ವ ಎಂಬಲ್ಲಿಯೇ ಉಂಟಾಗುವದರಿಂದ ಈ ಪಾಠಾಂತರವು ಸ್ವಾರಸ್ಯವಾದುದಲ್ಲವು. ಅಕರ್ಮವಶ್ಯನಾಗಿ ಸ್ವತಂತ್ರನಾದರೂ, ಭಗವಂತನಿಗಧೀನನಲ್ಲದೆ ಸ್ವತಂತ್ರನಲ್ಲವು ಎಂದು ಹೇಳುವದಕ್ಕಾಗಿ **ಸ್ವತಂತ್ರತ್ವಮುಪಾಪ್ನುತೇ** - ಭಗವಂತನ ಸ್ವಾತಂತ್ರ್ಯವನ್ನನುಭವಿಸುವನು ಎಂದರೆ ಆತನಿಗೆ ಸದಾ ಅಧೀನನಾಗಿರುವದರಲ್ಲಿ ತುಂಬಾ ಆಸಕ್ತಿಯುಳ್ಳವನೆಂಬ ಸ್ವಾರಸ್ಯಾರ್ಥವು ತೋರಿಬರುತ್ತದೆ. ಮುಂದಿನ ವಾಕ್ಯದಿಂದ ಕರಾಳನೃಪನು, ಮುಕ್ತನಿಗೆ ಸರ್ವೇಶ್ವರನ ಕೃಪೆಯೂ ಪ್ರಾಪ್ತವಾಗುವ ಇಂತಹ ಪರಮ ವೈಭವವನ್ನೂ ಪರಮಾತ್ಮನೊಂದಿಗೆ ಪರಮ ಸಾಮ್ಯವನ್ನೂ ಹೊಂದುವನೆಂದು ತಾವು ವಿಶದವಾಗಿ ಹೇಳಿದ ವಾಕ್ಯದಲ್ಲಿ ಸಂಶಯವುಳ್ಳವನಾದಾನೆಂದು ತಿಳಿದು ವಸಿಷ್ಠ ಮಹರ್ಷಿಯು ತಾವು ಈಗ ಹೇಳಿದುದು ಪರಮ ಯಥಾರ್ಥಾಭಿಪ್ರಾಯವೆಂದುಪದೇಶಿಸುತ್ತಾರೆ :—"**ಹೇ ಮಹಾರಾಜ** - ಓ ಮಹಾರಾಜನಾದ ಕರಾಳನೇ, **ಏತಾವತ್** - ಇಷ್ಟು ಮಾತ್ರ, ಮೋಕ್ಷವಿಷಯದಲ್ಲಿ, **ಮಯಾ** - ನನ್ನಿಂದ, **ತೇ** - ನಿನಗಾಗಿ, **ಯಥಾರ್ಥ ತತ್ತ್ವಮ್** - ನಿಜವಾದ ತತ್ತ್ವಾಭಿಪ್ರಾಯವೆಂದು, **ಕಥಿತಂ** - ಹೇಳಲ್ಪಟ್ಟಿದ್ದು, **ತಥ್ಯಂ** - ಸತ್ಯವಾದದ್ದು, **ಅಮತ್ಸರಃ** - ಈ ನನ್ನ ಅಭಿಪ್ರಾಯಗಳಲ್ಲಿ ಮಾತ್ಸರ್ಯವಿಲ್ಲದವನಾಗಿ, **ತ್ವಂ** - ನೀನು, **ಅರ್ಥಮ್** - ನಾವು ಹೇಳಿದುದನ್ನು, **ಪ್ರತಿಗೃಹ್ಯ** - ಅಂಗೀಕರಿಸಿ, **ಸನಾತನಂ** - ಅನಾದಿಯಾಗಿರುವ, **ವಿಶುದ್ಧಂ** - ಅವಿದ್ಯಾದಿ ದೋಷಗಂಧವೂ ಇಲ್ಲದ,

ಬ್ರಹ್ಮವಿಶಾದ್ಯ ಉಪಾಸ್ಯಮ್" ಎನ್ರು ವಸಿಷ್ಠ ಕರಾಳ ಸಂವಾದತ್ತಿಲುಮ್ ಪರಕ್ಕಪ್ಪೇಶಿ, ಇದುವೇ ಪರಮಾರ್ಥಮೆನ್ರು ಮಹರ್ಷಿ ನಿಗಮಿತ್ತಾರ್. ಇಪ್ಪಡಿ ಮುಕ್ತನೈ ಸ್ವತನ್ತ್ರನೆಣ್ಣ್‌ರದು ಕರ್ಮವಶ್ಯನನ್ರೆನ್ರಪಡಿ. ಮುಕ್ತ ವಿಷಯಮಾನ ಸ್ವರಾಟ್ಶಬ್ದತ್ತೈ "ಅಕರ್ಮವಶ್ಯಃ ಎನ್ರು ಭಾಷ್ಯಕಾರರ್ ವ್ಯಾಖ್ಯಾನಮ್ ಪಣ್ಣಿ ಯರುಳಿನಾರ್.

ಆದ್ಯಮ್ - ಎಲ್ಲಾದಕ್ಕೂ ಮೂಲಕಾರಣಭೂತನಾದ, ಬ್ರಹ್ಮ - ಪರಬ್ರಹ್ಮನನ್ನು, ಉಪಾಸ್ಯ - ಉಪಾಸನೆ ಮಾಡತಕ್ಕದ್ದು' ಎನ್ರು - ಎಂಬದಾಗಿ, ವಸಿಷ್ಠ ಕರಾಳ ಸಂವಾದದಲ್ಲಿ, ಪರಕ್ಕಪೇಶಿ-ಸವಿಸ್ತರವಾಗಿ ಹೇಳಿ, ಇದುವೇ - ಪರಮಂ ಸಾಮ್ಯಂ ಎಂಬ ಶಬ್ದಕ್ಕೂ ಸಾಯುಜ್ಯಶಬ್ದಕ್ಕೂ ಸಮಾನ ಧರ್ಮವೇ, ಪರಮಾರ್ಥಮೆನ್ರು - ಸಮಂಜಸವಾದ ಸತ್ಯವಾದ ಅರ್ಥವೆಂದು, ಮಹರ್ಷಿ - ವಸಿಷ್ಠ ಮಹರ್ಷಿಯು, ನಿಗಮಿತ್ತಾರ್ - ಮುಗಿಸಿ ಹೇಳಿರುತ್ತಾರೆ. ಹೀಗೆ "ಪರಮಂ ಸಾಮ್ಯ" ವೆಂಬುವಕ್ಕೂ, "ನಾರಾಯಣ ಸಾಯುಜ್ಯಮವಾಪ್ನೋತಿ" ಎಂಬಲ್ಲಿರುವ "ಸಾಯುಜ್ಯ" ಶಬ್ದಕ್ಕೂ "ಸಾಧರ್ಮ್ಯ" ವೆಂಬರ್ಥವನ್ನು ಶ್ರೀ ಭಗವದ್ಗೀತೆಯಲ್ಲಿ ಹೇಳಿರುವದನ್ನೇ ಇಲ್ಲಿ ವಿವರಿಸಿ ಮುಕ್ತನು ಪರಮಾತ್ಮನಿಗೆ ಸಮಾನವಾದ ಧರ್ಮಗಳುಳ್ಳವನಾಗುತ್ತಾನೆಂದು ಹೇಳಲ್ಪಟ್ಟಿತು. ಆದರೆ ಮೇಲಿನ ಸಂವಾದದಲ್ಲಿ ಪರಮಾತ್ಮನಂತೆ ಸ್ವತಂತ್ರನಾಗುತ್ತಾನೆಂದು ಹೇಳಿರುವದರಿಂದ ಇವನ್ನೂ ಸ್ವತಂತ್ರನಾಗುವನೆಂದರೆ ಪರಮಾತ್ಮನ ಸ್ವಾತಂತ್ರ್ಯಕ್ಕೆ ವಿರುದ್ಧವಾಗುವದರಿಂದ ಸ್ವತಂತ್ರ ಬ್ರಹ್ಮೈಕ್ಯವೇ ಅಭಿಪ್ರಾಯ ಉಂಟಾದೀತೆಂದು ಭಾವಿಸಿ ಸ್ವತಂತ್ರ ಶಬ್ದಕ್ಕೆ ಅಕರ್ಮವಶ್ಯನೆಂದು ಅರ್ಥ ಹೇಳಿ, ಯಾವಾಗ ಕರ್ಮಾಧೀನತೆಯಿಲ್ಲವೋ ಆಗ ಈತನು ಸ್ವತಂತ್ರನ ಹಾಗೆಂಬ ಭಾವವು. ಇಪ್ಪಡಿ - ಈ ಮೇಲಿನ ವಸಿಷ್ಠ ಕರಾಳ ಸಂವಾದದಲ್ಲಿ, ಮುಕ್ತನೈ ಸ್ವತಂತ್ರನೆಣ್ಣ್‌ರದು - ಮುಕ್ತನನ್ನು ಸ್ವತಂತ್ರನೆಂದು ಹೇಳಿರುವದು, ಅಕರ್ಮವಶ್ಯನೆನ್ರಪಡಿ - ಆಗ ಕರ್ಮವಶ್ಯತೆ ಇಲ್ಲದವನೆಂದು ಹೇಳಿದ ಹಾಗೆಂಬ ಭಾವವು. ಮುಕ್ತ ವಿಷಯಮಾನ - ಮುಕ್ತನನ್ನು ಕುರಿತು ಶ್ರುತಿಯಲ್ಲಿ ಹೇಳಿರುವ, ಸ್ವರಾಟ್ಶಬ್ದತ್ತೈ - "ಸ ಸ್ವರಾಡ್ಭವತಿ" (ಛಾಂ ೭ ೨೫ ೨) ಎಂಬುದರಲ್ಲಿರುವ ಸ್ವರಾಟ್ ಎಂಬ ಶಬ್ದಕ್ಕೆ, ಅಕರ್ಮವಶ್ಯನೆಂದು ಶ್ರೀ ಭಾಷ್ಯಕಾರರು ವ್ಯಾಖ್ಯಾನ ಮಾಡಿ, ಅರುಳಿನಾರ್ - ಕೃಪೆಯಿಂದ ಉಪದೇಶಿಸಿದರು "ದಾಸಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ"। "ನಾನ್ಯಥಾ ಲಕ್ಷಣಂ ತೇಷಾಂ ಬಂಧೇ ಮೋಕ್ಷೇ ತಥೈವ ಚ।" ಈ ಚೇತನನು

ಸ್ವಭಾವತಃ ಬದ್ಧಾವಸ್ಥೆಯಲ್ಲಾಗಲಿ ಮುಕ್ತಾವಸ್ಥೆಯಲ್ಲಾಗಲಿ ಪರಮಾತ್ಮನಿಗೆ ದಾಸಭೂತನಾಗಿದ್ದುಕೊಂಡು ಆತನಿಗೆ ಯಾವಾಗಲೂ ಕೈಂಕರ್ಯ ಮಾಡುವದೇ ಸ್ವರೂಪವೆಂದು ಹೇಳಿರುವಾಗ, ಸ್ವತಂತ್ರನು ಹೇಗೆ ಎಂದರೆ ಸರ್ವೇಶ್ವರನು ಹೇಗೆ ಕರ್ಮಕ್ಕೆ ಅಧೀನನಲ್ಲವೋ ಹಾಗೆಯೇ ಈ ಮುಕ್ತನೂ ಅಲ್ಲವೆಂದು ಅರ್ಥ ಹೇಳತಕ್ಕದ್ದೆಂದು, ಮುಕ್ತನು ಸ್ವರಾಡ್ಭವತಿ ಎಂದು ಹೇಳಿರುವ ಶ್ರುತಿಯೂ ಈ ಅಕರ್ಮ ವಶ್ಯತೆಯನ್ನೇ ಬೋಧಿಸುತ್ತದೆಂದು ಶ್ರೀ ಭಾಷ್ಯಕಾರರು ಸ್ವರಾಟು ಶಬ್ದಕ್ಕೆ ಅಕರ್ಮವಶ್ಯನೆಂದು ಅರ್ಥ ಬರೆದಿರುತ್ತಾರೆ. ಇದು ಎಲ್ಲಿ ಎಂದರೆ ಶ್ರೀ ಭಾಷ್ಯದಲ್ಲಿ "ಅತ ಏವ ಚಾನನ್ಯಾಧಿಪತಿಃ" (ಶಾ. ಸೂ. ೪. ೪. ೯) ಎಂಬ ಸೂತ್ರದಲ್ಲಿ ಮುಕ್ತನು ಅಪಹತಪಾಪ್ಮನು ಸತ್ಯಸಂಕಲ್ಪನೆಂದು ಛಾಂದೋಗ್ಯದಲ್ಲಿ ಹೇಳಿರುವದರಿಂದ, ಆತನು ಇನ್ನು ಮುಂದಕ್ಕೆ ಯಾವಾಗಲೂ ಕರ್ಮವಶ್ಯನಾಗುವದಿಲ್ಲವೆಂದು ಹೇಳುವ ಸಂದರ್ಭದಲ್ಲಿ "ಸಸ್ವರಾಡ್ಭವತಿ, ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ" ಮುಕ್ತನು ಕರ್ಮವಶ್ಯನಾಗುವದಿಲ್ಲವು, ಅವನು ಸಮಸ್ತ ಲೋಕಗಳಲ್ಲೂ ತನ್ನಿಷ್ಟಾನುಸಾರ ಭಗವಂತನಪ್ಪಣೆಯನ್ನು ಪಡೆದು ಸಂಚರಿಸುವವನಾಗುವನು, ಎಂದರೆ ಈ ಮುಕ್ತನು ವಿಕಾರಾಸ್ಪದ ಲೋಕಗಳಲ್ಲಿ ಸಂಚರಿಸುವದು ಕರ್ಮವಶ್ಯರ ಹಾಗಲ್ಲವು ಎಂಬ ತಾತ್ಪರ್ಯವು. ಆದುದರಿಂದ ಪರಮಾತ್ಮನು ಹೇಗೆ ಸ್ವತಂತ್ರನೋ ಹಾಗೆ ಮುಕ್ತನು ಸ್ವತಂತ್ರನಲ್ಲವು, ಆಗಲೂ ಸರ್ವೇಶ್ವರನಿಗೆ ಶೇಷಭೂತನಾಗಿ ಅಧೀನನಾಗಿ ಆತನಿಗೆ ದಾಸನಾದುದರಿಂದ, ಆತನಿಗೆ ಕೈಂಕರ್ಯ ಮಾಡುವ ಸಾಮ್ರಾಜ್ಯ ಪದವಿಯನ್ನು ಹೊಂದುವನು ಎಂಬ ಭಾವವು. ಆದುದರಿಂದ "ಪಾರತಂತ್ರ್ಯಂ ಪರೇ ಪುಂಸಿ ಪ್ರಾಪ್ಯ ನಿರ್ಗತಬಂಧನಃ । ಸ್ವಾತಂತ್ರ್ಯಮತುಲಂ ಪ್ರಾಪ್ಯತೇನೈವ ಸಹ ಮೋದತೇ" ಎಂಬ ವಾಕ್ಯದಲ್ಲಿ ತೋರುವ ಪ್ರಕೃತಿ ಸಂಬಂಧ ಕರ್ಮಾವಿದ್ಯಾದಿ ಬಂಧನಗಳಿಲ್ಲದೇ ಇರುವ ಸ್ವತಂತ್ರ್ಯವೇ ಇಲ್ಲಿ ತೋರುವ ಅಭಿಪ್ರಾಯವೆಂದೂ ಇದರಿಂದ ಭಗವತ್ಪಾರತಂತ್ರ್ಯವಿಲ್ಲವೆಂಬರ್ಥವಲ್ಲವೆಂದೂ ಗ್ರಹಿಸತಕ್ಕದ್ದು. ಈ ವಿಷ್ಣು ತತ್ವಶ್ಲೋಕಾಭಿಪ್ರಾಯಕ್ಕೆ ಅಧಿಕಾರಿ ವಿಭಾಗದ ೮೪೪-೫ನೆಯ ಪುಟಗಳನ್ನು ಪರಾಂಬರಿಸತಕ್ಕದ್ದು.

ಆದರೆ ಕೆಲವು ಶ್ರುತಿ ಸ್ಮೃತಿ ಸೂತ್ರಗಳು ಮುಕ್ತನಿಗೆ ಪರಬ್ರಹ್ಮನೊಂದಿಗೆ ಸಮತ್ವವನ್ನಾಗಲಿ ಸಾಧರ್ಮ್ಯವನ್ನಾಗಲಿ ವ್ಯಕ್ತವಾಗಿ ಬೋಧಿಸದೆ ಐಕ್ಯವನ್ನು "ಅಹಂ ಬ್ರಹ್ಮಾಸ್ಮಿ", "ಬ್ರಹ್ಮೈವ ಭವತಿ" ಇತ್ಯಾದಿ ವಾಕ್ಯಗಳಿಂದ ಬೋಧಿಸುತ್ತವೆಯಲ್ಲಾ, ಅಂತಹ ಸಂದರ್ಭದಲ್ಲಿ ಹೇಗೆ ಅರ್ಥ ನಿರ್ವಾಹವೆಂದರೆ, ಹೇಳುತ್ತಾರೆ. ಇವುಗಳಿಗೆ ಅರ್ಥವನ್ನು ಹೇಳುವಾಗ ಸ್ಫುಟವಾಗಿ ಭೇದವನ್ನು ಬೋಧಿಸುವ ಶ್ರುತಿ ಸ್ಮೃತಿ ಸೂತ್ರಗಳಿಗೆ ವಿರೋಧವಿಲ್ಲದ ಹಾಗೆ ಅರ್ಥ ಹೇಳಿ, ಈ ಎರಡು ವಿಧ

ಮುಕ್ತ ವಿಷಯೇ ಐಕ್ಯಪರಪ್ರಮಾಣಾನಾಂ ಅರ್ಥ ನಿರ್ವಾಹವಾಹ.

ಇಪ್ಪಡಿ ಶ್ರುತಿ ಸ್ಮೃತಿ ಸೂತ್ರಙ್ಗಳಿಲೆ ಸಾಮ್ಯಂ ಕಂಠೋಕ್ತಮಾಗೈಯಾಲ್, ಮುಕ್ತದಶೈಯಿಲ್ ಐಕ್ಯಮ್ ತೋತ್ತಿನ ವಿಡಙ್ಗಳೆಲ್ಲಾಮ್ (೧) "ರಾಮಸುಗ್ರೀವಯೋ ರೈಕ್ಯಂ ದೇವ್ಯೇವಂ ಸಮಜಾಯತ" ಇತ್ಯಾದಿಗಳಿರ್ ಪಡಿಯೇ ಭೇದ ಶ್ರುತ್ಯ ವಿರೋಧೇನ ಕಣ್ಣುಕೊಳ್ಳದು.

ಪ್ರಮಾಣಗಳಿಗೂ ಸಾಮಂಜಸ್ಯವನ್ನು ಕಲ್ಪಿಸತಕ್ಕದ್ದು. ಪರಸ್ಪರ ವಿರುದ್ಧಾರ್ಥಗಳನ್ನು ಕಲ್ಪಿಸಕೂಡದು ಶ್ರುತಿಗಳಿಗೂ ಸ್ಮೃತಿಗಳಿಗೂ ಸೂತ್ರಗಳಿಗೂ ಪರಸ್ಪರವಾಗಲಿ ಒಂದಕ್ಕೊಂದಾಗಲಿ ವಿರೋಧವೆಲ್ಲಾದರೂ ಉಂಟೇ ? ಆದುದರಿಂದ ಸಮಂಜಸಾರ್ಥವನ್ನು ಕಲ್ಪಿಸತಕ್ಕದ್ದು ಯುಕ್ತವೆಂದು ಹೇಳುತ್ತಾರೆ. ಇಲ್ಲಿಯೂ ಐಕ್ಯ ಹೇಗೆ ಎಂದರೆ, ಸಮಾನ ಧರ್ಮ ಭೋಗಗಳಿಂದ ಐಕ್ಯವೇ ವಿನಾ, ಶ್ರೀ ಶಂಕರಾಭಿಪ್ರಾಯವಾದ ಸ್ವರೂಪೈಕ್ಯವಲ್ಲವೆಂದು ಮುಂದಿನ ವಾಕ್ಯದಿಂದುಪದೇಶಿಸುತ್ತಾರೆ.

ಹಾಗಾದರೆ ಮುಕ್ತರಿಗೆ ಪರಬ್ರಹ್ಮನೊಂದಿಗೆ ಐಕ್ಯವನ್ನು ಹೇಳುವ ಪ್ರಮಾಣಗಳಿಗೆ ಅರ್ಥ ನಿರ್ವಾಹ ಹೇಗೆ ?

ಇಪ್ಪಡಿ - ಈ ಮೇಲೆ ಹೇಳಿದ ರೀತಿಯಲ್ಲಿ, ಶ್ರುತಿಯಲ್ಲೂ ಸ್ಮೃತಿಯಲ್ಲೂ ಸೂತ್ರಗಳಲ್ಲೂ, ಮೇಲೆ ಉದಾಹರಿಸಿದ ಪ್ರಮಾಣಗಳ ಮೂಲಕ, **ಸಾಮ್ಯಂ** - ಮುಕ್ತರಿಗೂ ಪರಮಾತ್ಮನಿಗೂ ಸಹ ಭೋಗದಲ್ಲಿ ಸಾಮ್ಯವೆಂಬುವದು, **ಕಂಠೋಕ್ತಮಾಗೈಯಾಲೆ** - ವ್ಯಕ್ತವಾಗಿ ಹೇಳಿರುವದರಿಂದ, ಮುಕ್ತ ದೆಶೆಯಲ್ಲಿ, **ಐಕ್ಯಮ್ ತೋತ್ತಿನ ವಿಡಙ್ಗಳೆಲ್ಲಾಮ್** - ಐಕ್ಯವೆಂದು ತೋರುವ ಎಂದರೆ ಯಥಾರ್ಥವಾಗಿ ಐಕ್ಯವಿಲ್ಲದೆ ಐಕ್ಯದ ಹಾಗೆ ತೋರುವ ಸ್ಥಳಗಳಲ್ಲೆಲ್ಲಾ **"ರಾಮ ಸುಗ್ರೀವ ಯೋರೈಕ್ಯಂ ದೇವ್ಯೇವಂ ಸಮಜಾಯತ"** "ಶ್ರೀ ರಾಮ ಸುಗ್ರೀವರಿಗೆ ಪರಮಸೌಹಾರ್ದರೂಪ ಐಕ್ಯವು ಓ ಸೀತಾದೇವಿಯೇ ಈ ಪರಿಯಲ್ಲಿ ಉಂಟಾಯಿತು", **ಇತ್ಯಾದಿಗಳಿರ್ ಪಡಿಯೇ** - ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಭೇದಶ್ರುತ್ಯವಿರೋಧೇನ** - ಭೇದ ಶ್ರುತಿಗಳಿಗೆ ವಿರೋಧವಿಲ್ಲದಹಾಗೆ, **ಕಣ್ಣುಕೊಳ್ವದು** - ತಿಳಿಯತಕ್ಕದ್ದು. ಇಲ್ಲಿ ರಾಮ ಸುಗ್ರೀವರಿಗೆ ಸಖ್ಯದಿಂದ ಐಕ್ಯವೇ ವಿನಾ, ಭಿನ್ನರಾದ ಇವರಿಬ್ಬರಿಗೂ

ರಾಮಾ. ಸುಂದರ ೩೫-೫೧.

ಸ್ವರೂಪೈಕ್ಯವು ಸರ್ವಾತ್ಮನಾ ಕೂಡುವದಿಲ್ಲವು. ಹೀಗಿರುವದರಿಂದ ವಿಭುವಾಗಿ ಶೇಷಿಯಾಗಿ ಸರ್ವಾಧಾರನಾಗಿರುವ ಪರಮಾತ್ಮನಾಗಿರುವವನಿಗೂ, ಅಣುವಾಗಿ ಶೇಷನಾಗಿ ಆಧೇಯನಾಗಿಯೂ ಇರುವ ಜೀವಾತ್ಮನಿಗೂ ಸ್ವರೂಪೈಕ್ಯವು ಕೂಡುವದಿಲ್ಲವಾದುದರಿಂದ, ಇಬ್ಬರಿಗೂ ಪರಮ ಮೈತ್ರಿ ಇರುವದರಿಂದ ಐಕ್ಯ ಹೇಳುವ ಸ್ಥಳಗಳಲ್ಲೆಲ್ಲಾ, ರಾಮಸುಗ್ರೀವರಿಗೆ ಮಹರ್ಷಿಯು ಹೇಗೆ ಐಕ್ಯವನ್ನು ಹೇಳಿದರೋ, ಹಾಗೆ ಪರಮ ಮೈತ್ರಿಯಿಂದ ಸಮಾನ ಭೋಗಾದಿ ಧರ್ಮಗಳುಳ್ಳವರೆಂದು ಅರ್ಥ ಹೇಳತಕ್ಕದ್ದೆಂದುಪದೇಶಿಸುತ್ತಾರೆ. ಏಕೆಂದರೆ ಸ್ವರೂಪೈಕ್ಯವೆಂಬರ್ಥ ಮಾಡಿದರೆ ಭೇದ ಶ್ರುತಿಗಳಿಗೆ ವಿರೋಧವಾದುದಾಗುತ್ತದೆ. ಹಾಗೆ ಐಕ್ಯ ತೋರುವ ಪ್ರಮಾಣಗಳಾವುವೆಂದರೆ :—

೧. "ಅಯಮಾತ್ಮಾ ಬ್ರಹ್ಮ" (ಬೃ. ೬. ೪. ೫) ಈ ಸಂಸಾರಿಯಾದ ಜೀವಾತ್ಮನು ಪರಬ್ರಹ್ಮವೇ ಆಗುತ್ತಾನೆಂದು ಶ್ರೀ ಶಂಕರಾಚಾರ್ಯರು ಅರ್ಥ ಮಾಡಿದರು. ಸರಿಯಾದ ಅರ್ಥವಾದರೋ, ಈ ಆತ್ಮನು ಅಪಹತ ಪಾಪ್ಮತ್ವಾದಿ ಗುಣಗಳಿಂದ ಪರಬ್ರಹ್ಮನಿಗೆ ಸಮಾನನಾಗುವದರಿಂದ ಈ ಜೀವಾತ್ಮನು ಪರಬ್ರಹ್ಮವೆಂದು ಹೇಳಲ್ಪಟ್ಟಿತು. ಒಬ್ಬ ಬಾಲನು ಸಿಂಹದಹಾಗೆ ಪರಾಕ್ರಮ ಉಳ್ಳವನಾದರೆ, "ಸಿಂಹೋ ಮಾಣವಕಃ" ಎಂಬ ಪ್ರಯೋಗದಲ್ಲಿ ಬಾಲನೇ ಸಿಂಹ ಹೇಗಲ್ಲವೋ, ಹಾಗೆ.

೨. "ತತ್ತ್ವಮಸಿ ಶ್ವೇತಕೇತೋ" (ಛಾಂ. ೬. ೮. ೭) ಆ ದೇವರು ಪ್ರತ್ಯಗಾತ್ಮನಾಗಿ ಕಲ್ಯಾಣಗುಣಾಕರನಾಗಿ ಜಗತ್ಕಾರಣಭೂತನಾದ ಸತ್ಯಕಾಮಸಂಕಲ್ಪನಾದ ಪರಮಾತ್ಮನೇ ಅಚಿತ್ಸ್ರೀಶರೀರಕನಾದ ನಿನ್ನನ್ನು ಶರೀರವಾಗಿ ಉಳ್ಳವನು ಓ ಶ್ವೇತಕೇತುವೇ. ಹೀಗೆ ಹೇಳುವದರಿಂದ, ಸಾಮಾನಾಧಿಕರಣ್ಯವೂ ಕೂಡುತ್ತದೆ. ಆದುದರಿಂದ ಜಗತ್ಕಾರಣನಲ್ಲದ ಜೀವನೂ ಜಗತ್ಕಾರಣನಾದ ಪರಮಾತ್ಮನೂ ಬೇರೆ ಎಂಬುವದು ಸಿದ್ಧವು. ಶ್ರೀ ಶಂಕರಾಭಿಪ್ರಾಯ ಪ್ರಕಾರ ಸ್ವರೂಪೈಕ್ಯ ಹೇಳಿದರೆ ಸಾಮಾನಾಧಿಕರಣ್ಯವೇ ಸರಿಹೋಗುವದಿಲ್ಲವು.

೩. "ಬ್ರಹ್ಮವೇದ ಬ್ರಹ್ಮೈವ ಭವತಿ" (ಮುಂ. ೩. ೨. ೯) ಪರಬ್ರಹ್ಮವನ್ನು ಸಾಧಿಸಿ ಪರಬ್ರಹ್ಮಸಾಕ್ಷಾತ್ಕಾರ ಹೊಂದಿದವನು ಪರಬ್ರಹ್ಮವೇ ಆಗುವನು ಎಂದರೆ ಆವಿರ್ಭವಿಸಿದ ಸ್ವಸ್ವರೂಪದಿಂದ ಪರಬ್ರಹ್ಮನಿಗೆ ಸಮಾನನಾಗುವನು. ಗುಣದಲ್ಲೂ ಭೋಗದಲ್ಲೂ ತತ್ಸದೃಶನಾಗುವನು. ಬ್ರಹ್ಮನೊಬ್ಬನು ಸಾಕ್ಷಾತ್ಕರಿಸುವನೊಬ್ಬನು ಹೀಗೆ ಇಬ್ಬರೆಂಬುವದು ಬ್ರಹ್ಮವೇದ ಶಬ್ದದಿಂದಲೇ ಸ್ಪಷ್ಟವು. ಹೀಗಿರುವಲ್ಲಿ ಬ್ರಹ್ಮೈವ ಭವತಿ ಎಂಬಲ್ಲಿ ಸ್ವರೂಪೈಕ್ಯಾರ್ಥವು ಕೂಡುವದಿಲ್ಲವು. ಅಧಿಕಂತು ಭೇದನಿರ್ದೇಶಾತ್ (ಬ್ರ. ಸೂ. ೨. ೧. ೨೨) ಎಂಬ ಸೂತ್ರದಲ್ಲೂ

ಅಧಿಕೋಪದೇಶಾತ್ ಎಂಬ ಸೂತ್ರದಲ್ಲೂ ಪರಮಾತ್ಮನು ಜೀವಾತ್ಮನಿಗಿಂತ ಬೇರೆಯಾಗಿ ಅಧಿಕನೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಶ್ರುತಿಯಲ್ಲೂ "ಪೃಥಗಾತ್ಮಾನಂ ಪ್ರೇರಿತಾರಂಚ ಮತ್ವಾ" (ಶ್ವೇತಾ. ೧. ೬) ಎಂದು ಹೇಳಲ್ಪಟ್ಟಿರುತ್ತದೆ.

೪. "ಅಹಂ ಬ್ರಹ್ಮಾಸ್ಮಿ" (ಬೃ. ೩. ೪. ೧೦) ಉಪಾಸನೆ ಮಾಡುವನು "ಅಹಂಬ್ರಹ್ಮಾಸ್ಮಿ" ಎಂದು ಉಪಾಸನೆ ಮಾಡತಕ್ಕದ್ದೆಂದು ಹೇಳಲ್ಪಟ್ಟಿರುತ್ತದೆ. ಇದು ಸ್ವರೂಪೈಕ್ಯವನ್ನು ಹೇಳುವ ವಾಕ್ಯದ ಹಾಗೆ ತೋರುತ್ತದೆ. ಇದರ ಸಮಂಜಸಾರ್ಥವು "ನನಗೆ ಪರಮಾತ್ಮನು ಆತ್ಮಾ ಎಂದು ತಿಳಿದವನಾಗಿ ಉಪಾಸಿಸತಕ್ಕದ್ದೆಂಬ ಭಾವವು.

೫. "ವಿಭೇದ ಜನಕೇಽಜ್ಞಾನೇ ನಾಶಮಾತ್ಯಂತಿಕಂ ಗತೇ । ಆತ್ಮನೋ ಬ್ರಹ್ಮಣೋ ಭೇದಮಸಂತಂ ಕಃ ಕರಿಷ್ಯತಿ ॥" (ವಿ. ಪು. ೬. ೭. ೯೬) ಇದರರ್ಥವು ಹಿಂದೆಯೇ ವಿವರಿಸಲ್ಪಟ್ಟಿರುತ್ತದೆ.

೬. "ತದ್ಧ್ಯಾನ ಭಾವನಾಪನ್ನಸ್ತದಾಸೌ ಪರಮಾತ್ಮನಾ । ಭವತ್ಯಭೇದೀ ಭೇದಶ್ಚ ತಸ್ಯಾಜ್ಞಾನ ಕೃತೋ ಭವೇತ್ ॥" ಇದರರ್ಥವೂ ಹಿಂದೆ ವಿವರಿಸಲ್ಪಟ್ಟಿರುತ್ತದೆ.

೭. "ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ (ಬ್ರ. ಸೂ. ೪.೧.೩.) ತಾನು ಪರಮಾತ್ಮನೆಂದೇ ಉಪಾಸನೆ ಮಾಡತಕ್ಕದ್ದು, ಶಾಸ್ತ್ರಗಳು ಇದನ್ನೇ ಅಂಗೀಕರಿಸಿರುತ್ತವೆ ಎಂಬರ್ಥವು ಈ ಸೂತ್ರಕ್ಕೆ ತೋರಿಬರುತ್ತದೆ. ಹೀಗೆ ಅರ್ಥ ಹೇಳಿದರೆ ಹಿಂದಿನ "ಅಧಿಕಂತು ಭೇದ ನಿರ್ದೇಶಾತ್" ಇತ್ಯಾದಿ ಬ್ರಹ್ಮಸೂತ್ರಗಳಿಗೆ ವಿರೋಧವುಂಟಾಗುವದರಿಂದ ವಿರೋಧವಿಲ್ಲದಹಾಗೆ ತಾತ್ಪರ್ಯವನ್ನು ಬರೆಯತಕ್ಕದ್ದು. ಉಪಾಸನೆಯನ್ನೇನೋ ತಾನು ಪರಮಾತ್ಮನೆಂಬ ಭಾವದಿಂದಲೇ ಮಾಡತಕ್ಕದ್ದು. ಅಭಿಪ್ರಾಯ ಹೇಗೆಂದರೆ ಪರಮಾತ್ಮನು ತನಗೆ ಆತ್ಮಾವಾದುದರಿಂದ ಆತ್ಮಾ ಎಂದೇ ಉಪಾಸನೆಯನ್ನು ಮಾಡತಕ್ಕದ್ದು. ಅದು ಹೇಗೆಂದರೆ, ಮನುಷ್ಯೋಽಹಂ ಎಂಬಲ್ಲಿ ಮನುಷ್ಯ ಶರೀರಕನಾದ ತನಗೆ ಆತ್ಮಾವಾದ ಅಹಂ ಎಂಬ ಶಬ್ದವೂ ಆ ಬುದ್ಧಿಯೂ ಸಹ ಹೇಗೆ ಸಲ್ಲುತ್ತದೋ, ಹಾಗೆಯೇ ಆತ್ಮಶರೀರಕನಾದ ಪರಮಾತ್ಮನಿಗೆ ಜೀವಾತ್ಮನನ್ನು ಬೋಧಿಸುವ ಅಹಂ ಶಬ್ದವೂ ತದ್ಬುದ್ಧಿಯೂ ಸಲ್ಲುತ್ತವೆಂಬ ಭಾವವು. ಆದುದರಿಂದ ಪರಮಾತ್ಮನು ತನಗೆ ಆತ್ಮಾನೆಂದು ಉಪಾಸಿಸತಕ್ಕದ್ದು, ಹಾಗೆಯೇ ಶಾಸ್ತ್ರಗಳು ಹೇಳುತ್ತವೆ.

ಇವುಗಳಿಂದ ನಾವು ಮುಖ್ಯವಾಗಿ ಗ್ರಹಿಸುವ ವಿಷಯವೇನೆಂದರೆ, ಇಂತಹ ಅದ್ವೈತ ತೋರುವ ಶ್ರುತಿಗಳಿಗೆ ಅರ್ಥ ಹೇಳುವಾಗ ಇತರ ವ್ಯಕ್ತಭೇದ ಶ್ರುತಿಗಳಿಗೆ ವಿರೋಧವಿಲ್ಲದ ಹಾಗೆ ಅರ್ಥ ಹೇಳಬೇಕು. ಎಲ್ಲಾ ಶ್ರುತಿಗಳೂ, ಸ್ಮೃತಿಗಳೂ

ಸ್ವರೂಪೈಕ್ಯೇ ಬಾಧಕ ಪ್ರದರ್ಶನಮ್

ಇಜ್ಞನಲ್ಲಾದಪೋದು (೧) "ಯದಾತು ಮನ್ಯತೇ ನ್ಯೋಹ ಮನ್ಯ

ಪುರಾಣೇತಿ ಹಾಸಗಳೂ, ಚೇತನ ವರ್ಗವು ಪರಮಾತ್ಮನಿಗೆ ಶರೀರವೆಂದೂ, ಪರಮಾತ್ಮನು ಈ ಚೇತನ ವರ್ಗಕ್ಕೆಲ್ಲಾ ಆತ್ಮಾವೆಂದೂ ಹೇಳಿ, ಪರಮಾತ್ಮನಿಗೂ ಚೇತನ ವರ್ಗಕ್ಕೂ ಸ್ವಾಮಿ ದಾಸ ಸಂಬಂಧವನ್ನು ಉಪಪಾದಿಸಿ, ಚೇತನನು ಪರಮಾತ್ಮನನ್ನು ಕುರಿತು ಹೋಗುವ ಪ್ರಾಪ್ತಾವೆಂದೂ, ಉಪಾಯಾನುಷ್ಠಾನದಿಂದ ಪರಮಾತ್ಮನಾದ ಪ್ರಾಪ್ಯವನ್ನು ಹೊಂದುತ್ತಾನೆಂದೂ, ಹೇಳುತ್ತವೆ. ಐಕ್ಯವನ್ನು ಹೇಳುವಾಗ ಈ ಅಭಿಪ್ರಾಯಗಳಿಗೆ ವಿರೋಧವಿಲ್ಲದಹಾಗೆ ಅರ್ಥ ಹೇಳಬೇಕೇ ವಿನಾ, ಐಕ್ಯಬೋಧೆಯಿಂದ ಸ್ವರೂಪೈಕ್ಯವೇ ಹೇಳಲ್ಪಟ್ಟಿತೆಂದು ನಂಬಿ ಪರಸ್ಪರ ವಿರುದ್ಧಾರ್ಥ ಕಲ್ಪನೆಯು ಸರಿಯಲ್ಲವು. ವೇದವೇ ಒಂದು ಕಡೆಯಲ್ಲಿ ಸರಿಯಾಗಿಯೂ ಇನ್ನೊಂದು ಕಡೆಯಲ್ಲಿ ಸರಿಯಲ್ಲದೆಯೂ ಉಪದೇಶಿಸಲಾರದಷ್ಟೇ. ಆದುದರಿಂದ ಸ್ವರೂಪೈಕ್ಯವನ್ನು ಹೇಳದೆ, ರಾಮಸುಗ್ರೀವರು ಒಟ್ಟಿಗೆ ಸೇರಿದರು, ಸಮುಕ್ಕಾದರು, ಸಮಾನ ಭೋಗಾದಿಗಳನ್ನು ಹೊಂದಿದರು, ಮಿತ್ರತೆಯನ್ನು ಹೊಂದಿದರು, ಎಂಬಭಿಪ್ರಾಯದಲ್ಲಿ "ರಾಮಸುಗ್ರೀವಯೋರೈಕ್ಯಂ" ಎಂದು ಐಕ್ಯಶಬ್ದ ಪ್ರಯೋಗವನ್ನು ಮಹರ್ಷಿಯು ಹೇಗೆ ಮಾಡಿರುತ್ತಾರೋ, ಹಾಗೆ ಈ ಐಕ್ಯಶ್ರುತಿಗಳ ವಿಷಯದಲ್ಲಿ ಅನ್ವಯಿಸತಕ್ಕದ್ದೆಂದುಪದೇಶಿಸುತ್ತಾರೆ. ರಾಮಸುಗ್ರೀವರಿಗೆ ಹೇಗೆ ಸ್ವರೂಪೈಕ್ಯವನ್ನು ಹೇಳಲು ಸಾಧ್ಯವಿಲ್ಲವೋ, ಹಾಗೆಯೇ ಈ ಐಕ್ಯಶ್ರುತಿಗಳಲ್ಲೂ ಸಾಧ್ಯವಿಲ್ಲವೆಂಬ ಭಾವವು. ಹಾಗೆ ಸ್ವರೂಪೈಕ್ಯ ಹೇಳಿದರೆ ಬಹು ಬಾಧಕಗಳು ಪ್ರಾಪ್ತವಾಗುತ್ತವೆಂಬುವದನ್ನು ಶ್ರೀ ಭಾಷ್ಯನ್ಯಾಯ ಸಿದ್ಧಾಂಜನಾದಿಗಳಲ್ಲಿ ಕಾಣಬಹುದು.

ಹೀಗೆ ಸ್ವರೂಪೈಕ್ಯವನ್ನು ಈ ಶ್ರುತ್ಯಾದಿಗಳಿಗೆ ಕಲ್ಪಿಸಿದರೆ ಉಂಟಾಗುವ ಬಾಧಕವೇನೆಂದರೆ ಸೂಕ್ಷ್ಮವಾಗಿ ಹೇಳುತ್ತಾರೆ. ಅನೇಕ ಮಹರ್ಷಿಗಳ ವಾಕ್ಯಗಳಿಗೂ ಗೀತಾಚಾರ್ಯೋಪದೇಶಾದಿ ಅನೇಕ ಪ್ರಮಾಣಗಳಿಗೂ ವಿರೋಧ ಉಂಟಾಗುತ್ತದೆಂದುಪದೇಶಿಸುತ್ತಾರೆ.

ಸ್ವರೂಪೈಕ್ಯ ಹೇಳಿದರೆ ಪ್ರಾಪ್ತವಾಗುವ ಬಾಧಕಗಳು.

ಇಜ್ಞನಲ್ಲಾದ ಪೋದು- ಈ ಐಕ್ಯ ಪ್ರತಿಪಾದಕ ಪ್ರಮಾಣಗಳಿಗೆ ಮೇಲೆ

---

(೧) ಭಾರತ. ಶಾಂತಿ. ೩೨೩-೭೭, ೮೦.

ಏಷ ಇತಿದ್ವಿಜಃ । ತದಾಸಕೇವಲೀಭೂತಷ್ಷಡ್ವಿಂಶ ಮನುಪಶ್ಯತಿ । ಅನ್ಯಶ್ಚ ರಾಜನ್ ಸಪರಃ ಸ್ತಥಾನ್ಯಃ ಪಂಚವಿಂಶಕಃ । ತತ್ಸ್ಥತ್ವಾದನುಪಶ್ಯನ್ತಿ ಹ್ಯೇಕಏವೇತಿ ಸಾಧವಃ । ಅನ್ಯಶ್ಚ ರಾಜನ್ ಸಪರಸ್ತಥಾನ್ಯಃ ಪಂಚವಿಂಶಕಃ । ತೇನೈತನ್ನಾಭಿಜಾನಂತಿ ಪಂಚವಿಂಶಕ ಮಚ್ಯುತಮ್ । ಜನ್ಮಮೃತ್ಯು

ಹೇಳಿದ ಹಾಗೆ ಅರ್ಥ ಹೇಳದೆ, ಸ್ವರೂಪೈಕ್ಯವನ್ನು ವಿಪಕ್ಷಿಗಳು ಹೇಳುವ ಹಾಗೆ ಹೇಳಿದರೆ, ಅನೇಕ ಪ್ರಮಾಣಗಳಿಗೆ ವಿರೋಧ ಉಂಟಾಗುತ್ತದೆಂದು ಹೇಳುವ ದಕ್ಕಾಗಿ ಐಕ್ಯಾರ್ಥವನ್ನು ಚೆನ್ನಾಗಿ ಉಪಪಾದಿಸಿ ಹೇಳುವ ತತ್ವಾರ್ಥ ನಿರ್ಣಯ ದಲ್ಲಿ ಮಹಾಗ್ರೇಸರರಾದ ಶ್ರೀ ವ್ಯಾಸಮಹರ್ಷಿಯು ವಾಕ್ಯಗಳನ್ನು ಪ್ರಥಮತಃ ಉದಾ ಹರಿಸ ತ್ತಾರೆ :—"**ಯದಾತು** - ಯಾವಾಗಲಾದರೆ, **ಅಹಂ** - ನಾನು, **ಅನ್ಯಃ** - ಪರಮಾತ್ಮಸ್ವರೂಪಕ್ಕಿಂತ ಬೇರೆಯಾದವನೆಂದೂ, **ಏಷಃ** - ಈ ಪರಮಾತ್ಮನು **ಅನ್ಯಃ** - ಜೀವಾತ್ಮ ಸ್ವರೂಪಕ್ಕಿಂತ ಬೇರೆಯಾದವನೆಂದೂ, **ದ್ವಿಜಃ**-ಬ್ರಾಹ್ಮ ಣನು, **ಮನ್ಯತೇ** - ತಿಳಿಯುವನೋ, **ತದಾ** - ಆಗ, **ಸಃ** - ಆ ಬ್ರಾಹ್ಮಣನು, **ಕೇವಲೀ ಭೂತಃ** - ಪ್ರಾಕೃತ ದೇಹಾದಿಗಳಿಲ್ಲದವನಾಗಿ, **ಷಡ್ವಿಂಶಂ** - ಇಪ್ಪ ತ್ತಾರನೆಯ ತತ್ವವಾದ ಪರಮಾತ್ಮನನ್ನು, **ಅನುಪಶ್ಯತಿ** - ಸಾಕ್ಷಾತ್ಕರಿಸುವನು. ಪರಮಪದದಲ್ಲಿ ಪರಮಾತ್ಮನೊಂದಿಗೆ ಸೇರಿ ಆತನನ್ನೇ ನೋಡುತ್ತಾ ಆನಂದಿಸುವ ನೆಂಬರ್ಥವು. **ಹೇ ರಾಜನ್** - ಓ ಜನಕಮಹಾರಾಜನೇ, ಯಾಜ್ಞವಲ್ಕ್ಯರು ಜನಕಮಹಾರಾಜನನ್ನು ಕುರಿತು ಹೇಳುತ್ತಾರೆ. **ಸಪರಃ** - ಆ ಪರವಸ್ತುವಾದ ಸರ್ವೇಶ್ವರನು, **ಅನ್ಯಶ್ಚ** - ಬೇರೆಯಾದವನು, **ತಥಾ** - ಹಾಗೆಯೇ, **ಪಂಚ ವಿಂಶಕಃ** - ಇಪ್ಪತ್ತೈದನೆಯ ತತ್ವವಾದ ಜೀವಾತ್ಮನು, **ಅನ್ಯಃ** - ಬೇರೆ ಎಂದರೆ ಸ್ವರೂಪತಃ ಇಬ್ಬರೂ ಬೇರೆಬೇರೆಯಾದರೂ, **ಸಾಧವಃ** - ಮಹಾ ಜ್ಞಾನಿಗಳು, **ತತ್ಸ್ಥತ್ವಾತ್** - ಪಂಚವಿಂಶಕನಾದ ಜೀವಾತ್ಮನಿಗೂ ಅಂತರಾತ್ಮನಾಗಿರುವದ ರಿಂದ, **ಏಕಏವೇತಿ** - ಹೀಗೆ ಒಟ್ಟಿಗೆ ಸೇರಿರುವದರ ಮಾತ್ರದಿಂದಲೇ ಒಬ್ಬರೇ ಎಂದೇ, **ಅನುಪಶ್ಯಂತಿ** - ಕಾಣುವರು, ಭಾವಿಸುವರು ಇದರಿಂದ ಸ್ವರೂಪೈಕ್ಯ ದಿಂದ ಒಂದಾಗಿ ಎಣಿಸುವದಿಲ್ಲವೆಂದೂ, ಪರಮಾತ್ಮನಿಗೆ ಜೀವಾತ್ಮನು ಶರೀರವಾ ಗಿಯೂ ಜೀವಾತ್ಮನು ಪರಮಾತ್ಮನಿಗೆ ಅಂತರಾತ್ಮನಾಗಿಯೂ ಇರುವದರಿಂದ ದೇಹಾತ್ಮಗಳಿಗೆ ಹೇಗೆ ಏಕೀಭಾವವೋ ಹಾಗೆ ಏಕೀಭಾವವೆಂಬಭಿಪ್ರಾಯವು, **ಹೇ ರಾಜನ್** - ಓ ಜನಕರಾಜನೇ, **ಸಪರಃ** - ಆ ಪರಮಾತ್ಮನೇ, **ಅನ್ಯಶ್ಚ** - ಬೇರೆ, **ಪಂಚವಿಂಶಕಃ** - ೨೫ನೆಯ ತತ್ವವಾದ ಜೀವಾತ್ಮನೇ, **ಅನ್ಯಃ** - ಬೇರೆ ;

ಭಯಾದಿಭೀತಾಸ್ಸಾಂಖ್ಯಯೋಗಾಶ್ಚ ಕಾಶ್ಯಪ । ಷಡ್ವಿಂಶಮನುಪಶ್ಯನ್ತಿ ಶುಚಯಸ್ತತ್ಪರಾಯಣಾಃ" ॥

ತೇನ – ಆ ಕಾರಣದಿಂದ, ಏತಂ ಅಚ್ಯುತಂ – ಈ ಅಚ್ಯುತನಾದ ಪರಮಾತ್ಮನನ್ನು, ಪಂಚವಿಂಶಕಂ – ಇಪ್ಪತ್ತೈದನೆಯ ತತ್ವವಾದ ಜೀವಾತ್ಮನನ್ನಾಗಿ, ನಾಭಿಜಾನಂತಿ - ತಿಳಿಯುವದಿಲ್ಲವು. ಈ ಮಹರ್ಷಿ ವಾಕ್ಯದಿಂದ ಜೀವಾತ್ಮ ಪರಮಾತ್ಮರುಗಳಿಗೆ ಸ್ವರೂಪೈಕ್ಯವಾದವು ದೂರೀಕೃತವಾಯಿತು. ಹೇ ಕಾಶ್ಯಪ - ಓ ಕಶ್ಯಪ ಕುಲೋದ್ಭವನೇ, ಜನ್ಮ ಮೃತ್ಯು ಭಯಾದಿಭೀತಾಃ - ಜನನ ಮರಣಗಳ ಭಯದಿಂದ ಹೆದರಿದ, ಸಾಂಖ್ಯಯೋಗಾಶ್ಚ - ಜ್ಞಾನಯೋಗನಿಷ್ಠರು, ಶುಚಯಃ - ಕರ್ಮಯೋಗನಿಷ್ಠೆಯಿಂದ ಸರ್ವ ಪಾಪಗಳ ಸಂಬಂಧವಿಲ್ಲದೆ ಪರಿಶುದ್ಧರಾಗಿ, ತತ್ಪರಾಯಣಾಃ - ಆ ಪರಮಾತ್ಮನನ್ನೇ ಸೇರಬೇಕೆಂಬ ಆಶೆಯಿಂದ ಸರ್ವದಾ ಆತನನ್ನು ಚಿಂತಿಸುವರಾಗಿ, ಷಡ್ವಿಂಶಂ - ೨೬ನೆಯ ತತ್ವವಾದ ಪರಮಾತ್ಮನನ್ನು, ಅನುಪಶ್ಯಂತಿ - ನಿರಂತರ ತೈಲಧಾರೆಯ ಹಾಗೆ ಅವಿಚ್ಛಿನ್ನವಾದ ಸ್ಮೃತಿಸಂತಾನದಿಂದ ಆತನನ್ನು ಸಾಕ್ಷಾತ್ಕರಿಸುತ್ತಾರೆ." ಸರ್ವ ಶಾಸ್ತ್ರಗಳ ವಿಮರ್ಶೆಯನ್ನು ಮಾಡಿ, ಅವುಗಳನ್ನು ಪುನಃ ಪುನಃ ವಿಚಾರ ಮಾಡಿದವರುಗಳಲ್ಲಿ ಅಗ್ರೇಸರರು ಶ್ರೀ ವ್ಯಾಸಮಹರ್ಷಿಯು. ಅವರ ದಿವ್ಯಸೂಕ್ತಿಗಿಂತ ಪ್ರಮಾಣವಾಕ್ಯವು ಬೇರೆ ಇರಲಾರದು. ಇಲ್ಲಿ ಕಂಠೋಕ್ತವಾಗಿ ಜೀವನೇ ಬೇರೆ ಪರಮಾತ್ಮನೇ ಬೇರೆ ಎಂದು ಪುನಃ ಪುನಃ ಹೇಳಿ ಸ್ವರೂಪೈಕ್ಯವು ಕೂಡುವದಿಲ್ಲವೆಂದು ಬಹು ಸ್ಫುಟವಾಗಿ ಉಪಪಾದಿಸಿರುತ್ತಾರೆ. ಆದರೆ ಉಪನಿಷತ್ತುಗಳಲ್ಲೂ ಅವುಗಳ ಉಪಬೃಹ್ಮಣಗಳಲ್ಲೂ ಐಕ್ಯವು ಹೇಳಿದೆಯಲ್ಲಾ. ಇದನ್ನನುಸರಿಸಿ ಅನೇಕ ಜ್ಞಾನವೃದ್ಧರು ಐಕ್ಯವನ್ನು ಹೇಳುತ್ತಾರಲ್ಲಾ ಎಂದರೆ ಎಲ್ಲೂ ಸ್ವರೂಪೈಕ್ಯವು ಹೇಳಲ್ಪಡಲಿಲ್ಲವೆಂದೂ, ಜೀವಾತ್ಮನಿಗೆ ಪರಮಾತ್ಮನು ಅಂತರಾತ್ಮನಾದುದರಿಂದ ಐಕ್ಯವೆಂದು ಉಪದೇಶಿಸಿರುತ್ತಾರೆ. ಎರಡೂ ಒಂದೇ ಅಲ್ಲವೆಂದು ದೃಢೀಕರಿಸಿ ಹೇಳುವದಕ್ಕಾಗಿ ಜೀವಾತ್ಮನನ್ನು ಪಂಚವಿಂಶಕನೆಂದೂ, ಪರಮಾತ್ಮನನ್ನು ಷಡ್ವಿಂಶಕನೆಂದೂ ಹೇಳುತ್ತಾರೆ. ಇಬ್ಬರೂ ಸ್ವರೂಪತಃ ಒಬ್ಬರೇ ಆಗಿದ್ದ ಪಕ್ಷದಲ್ಲಿ ಪಂಚವಿಂಶಕ, ಷಡ್ವಿಂಶಕನೆಂದು ವಿವೇಚನೆ ಮಾಡಿ ಹೇಳಲು ಸಾಧ್ಯವಿಲ್ಲವಷ್ಟೇ. ಬಾಕಿ ೨೪ ತತ್ವಗಳು ಯಾವುವು ಎಂಬುದಕ್ಕೆ ತತ್ವತ್ರಯಾಧಿಕಾರದ ೫೩ನೆಯ ಪುಟವನ್ನು ಪರಾಂಬರಿಸಬಹುದು. ಹೀಗೆ ೨೪ ತತ್ವಗಳು ಸಾಂಖ್ಯರು ವಿಭಾಗಿಸಿ ಹೇಳಿದುದು ಅಚಿತ್ತತ್ವಗಳು ; ೨೫, ೨೬ ಎರಡೂ ಚಿತ್ತತ್ವ

(೨) "ಉತ್ತಮಃ ಪುರುಷಸ್ತ್ವನ್ಯಃ".

ಗಳು, ಅದರಲ್ಲಿ ಎರಡನೆಯದು ಜೀವಾತ್ಮ ತತ್ವವು, ಮೂರನೆಯದು ಪರತತ್ವವು.

ಗೀತೆಯಲ್ಲೂ ಹೀಗೆಯೇ ಬಹು ಸ್ಫುಟತರವಾಗಿ ಪರಮಾತ್ಮನು ಎರಡು ವಿಧ ಜೀವಾತ್ಮರುಗಳಿಗಿಂತ ಬೇರೆಯಾದವನೆಂದು ಹೇಳಿರುತ್ತದೆ. ಮುಂದೆ ಆ ಪ್ರಮಾಣವನ್ನುದಾಹರಿಸುತ್ತಾರೆ :—ದ್ವಾವಿಮೌ ಪುರುಷೌಲೋಕೇಕ್ಷರಶ್ಚಾಕ್ಷರ ಏವಚ । ಕ್ಷರಸ್ಸರ್ವಾಣಿಭೂತಾನಿ ಕೂಟಸ್ಥೋಕ್ಷರ ಉಚ್ಯತೇ । ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ । ಯೋಲೋಕತ್ರಯಮಾವಿಶ್ಯಬಿಭರ್ತ್ಯವ್ಯಯ ಈಶ್ವರಃ ॥ ಸಮಸ್ತ ವೇದಗಳಲ್ಲೂ ಸಾರಭೂತವಾದ ಯಥಾರ್ಥವಾದ ಅರ್ಥವನ್ನು ತನ್ನ ಪ್ರಿಯ ಶಿಷ್ಯನಾದ ಅರ್ಜುನನಿಗೆ ಶ್ರೀ ಕೃಷ್ಣ ಭಗವಾನರು ಉಪದೇಶಿಸುತ್ತಾರೆ. ಪಾರಮಾರ್ಥಿಕವಾದ ಅರ್ಥವನ್ನು ಹೇಳುವ ಸಂದರ್ಭದಲ್ಲಿ ವ್ಯಾವಹಾರಿಕ ವಿಷಯವನ್ನು ಉಪದೇಶಿಸಿದರೆಂದು ಹೇಳುವದು ಅಸಂಗತವಲ್ಲವೇ? ಆದುದರಿಂದ ತತ್ವೋಪದೇಶವನ್ನೇ ಮಾಡುತ್ತಾರೆಂದು ನಂಬತಕ್ಕದ್ದಾಗಿರುತ್ತದೆ. ಕ್ಷರನೆಂದೂ ಅಕ್ಷರನೆಂದೂ ಇಬ್ಬರು ಪುರುಷರು, ಜೀವಕೋಟಿಗೆ ಸೇರಿದವರು. ಚತುರ್ಮುಖ ಮೊದಲುಗೊಂಡು ಕ್ರಿಮಿಕೀಟಾದಿಗಳವರೆಗೂ ಇರುವ ಜೀವರಾಶಿಯು ಎಲ್ಲಾ ದೇಹರೂಪವಾದ ಅಚಿತ್ಸಂಸರ್ಗದಿಂದ ಜನ್ಮಸ್ಥಿತ್ಯಾದಿ ಪರಿಣಾಮಗಳುಂಟಾದಹಾಗೆ ತೋರುವದರಿಂದ ಕ್ಷರಶಬ್ದವಾಚ್ಯವು. ಇಂತಹ ಅಚಿತ್ಸಂಸರ್ಗವಿಲ್ಲದೆ ಪರಿಣಾಮಾವಸ್ಥೆಯಿಲ್ಲದುದರಿಂದ, ಸ್ವಸ್ವರೂಪದಿಂದ ವಿರಾಜಿಸುವ ನಿತ್ಯರ ಮತ್ತು ಮುಕ್ತರ ವರ್ಗವು ಅಕ್ಷರ ಶಬ್ದದಿಂದ ಬೋಧಿಸಲ್ಪಟ್ಟಿರುತ್ತದೆ. ಇವರಿಬ್ಬರುಗಳಿಗಿಂತಲೂ ಉತ್ತಮಃಪುರುಷನು, ಪುರುಷೋತ್ತಮನು, ಪರಮಾತ್ಮನು ವಿಲಕ್ಷಣನಾಗಿ ಅನ್ಯಃ - ಬೇರೆಯಾದವನು. ಈ ಬದ್ಧಮುಕ್ತನಿತ್ಯರುಗಳಿಗಿಂತ ಸರ್ವೇಶ್ವರನು ವಿಲಕ್ಷಣನು ಎಂದು ಇಲ್ಲಿ ಹೇಳಲ್ಪಟ್ಟಿತು. ಅದು ಹೇಗೆ ಎಂಬದೆ ಮುಂದೆ ವಿವರಿಸಿ ತಿಳಿಸುತ್ತಾರೆ. ಯಃ - ಯಾವ ಪರಮಾತ್ಮನು, ಲೋಕತ್ರಯಂ - ಚಿದಚಿದಾತ್ಮಕವಾದ ಮೂರು ಲೋಕಗಳನ್ನೂ, ಆವಿಶ್ಯ - ಅಂತರಾತ್ಮನಾಗಿ ಪ್ರವೇಶಿಸಿ, ಅದರಿಂದ ಯಾವುದೊಂದು ಪರಿಣಾಮಗಳನ್ನು ಹೊಂದದೆ ನಿರ್ವಿಕಾರನಾಗಿ, ಈಶ್ವರಃ - ಅವುಗಳಿಗೆಲ್ಲಾ ತಾನು ಸ್ವಾಮಿಯಾಗಿಯೂ ಅವೆಲ್ಲಾ ತನಗೆ, ಸ್ವಂ - ಸ್ವತ್ತಾಗಿಯೂ, ಬಿಭರ್ತಿ - ನಿಯಮನಾದಿಗಳ ಮೂಲಕ ರಕ್ಷಿಸುತ್ತಾನೋ, ಆ ಕಾರಣದಿಂದಲೇ ಅವನು ವಿಲಕ್ಷಣನು. ಆತನ ಅನುಪ,

(೨) ಗೀ. ೧೫.೧೭.

ವೇಶಕ್ಕೆ, ಈ ಚಿದಚಿತ್ತುಗಳೂ ನಿತ್ಯವಾಗಿ ಇರಬೇಕಷ್ಟೆ. ಅಚಿತ್ತು ಪರಿಣಾಮ
ಹೇತುವಾಗಿದ್ದರೂ "ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ" ಎಂಬ
ಶ್ರುತಿಯಲ್ಲಿ ಪ್ರಕೃತಿಯು (ಅಚಿತ್ತು) ನಿತ್ಯವೆಂದು ಹೇಳಲ್ಪಟ್ಟಿರುತ್ತದೆ. ಮಮೈ
ವಾಂಶೋ ಜೀವಲೋಕೇ ಜೀವಭೂತಸ್ಸನಾತನಃ ಎಂಬಲ್ಲೂ, "ಅಚ್ಛೇ
ದ್ಯೋಯಮದಾಹ್ಯೋಯಂ ಅಕ್ಲೇದ್ಯೋಶೋಷ್ಯ ಏವಚ । ನಿತ್ಯಸ್ಸರ್ವಗತ
ಸ್ಸ್ಥಾಣುರಚಲೋಯಂ ಸನಾತನಃ" (ಗೀ. ೨. ೨೪) ಎಂಬಲ್ಲೂ, ಹಾಗೆಯೇ
"ನಿತ್ಯೋನಿತ್ಯಾನಾಂ" ಮೊದಲಾದ ಅನೇಕ ಶ್ರುತಿಗಳಲ್ಲೂ, ಜೀವವರ್ಗವೂ ನಿತ್ಯ
ವೆಂದು ಹೇಳಲ್ಪಟ್ಟಿರುತ್ತದೆ. ಹೀಗೆ ಚಿದಚಿದೀಶ್ವರರಾದ ಮೂರು ತತ್ವಗಳೂ
ನಿತ್ಯವಾಗಿರುವಲ್ಲಿ, ಸ್ವರೂಪೈಕ್ಯವನ್ನು ಸಾಧಿಸುವ ವಾದವು ತುಂಬಾ ಸಾಹಸವಾ
ದುದು. ಶ್ರೀ ಶಂಕರಾಚಾರ್ಯರವರು ಕ್ಷರಾಕ್ಷರಗಳೆರಡೂ ಉಪಾಧಿಯಿಂದುಂಟಾದ
ಹಾಗೆ ಅಭಿಪ್ರಾಯಪಟ್ಟಿರುತ್ತಾರೆ. ಅದೂ ಅಲ್ಲದೆ ಪರಮಾತ್ಮವನ್ನು ಶ್ರೀ
ಕೃಷ್ಣನು ಈ ಶ್ಲೋಕ ಮೂಲಕ ತಿಳಿಸುತ್ತಾನೆಂದು ಹೇಳುತ್ತಾರೆ. ಹಾಗಾದರೆ
ವಿಶದವಾಗಿ ಇಲ್ಲಿ ಅವು ಉಪಾಧಿ ಮೂಲಕ ಹಾಗೆ ತೋರುತ್ತವೆಂದು ಹೇಳಬೇಡ
ವೇ ? ಶ್ರೀಧರಾಚಾರ್ಯರವರ ಟೀಕೆಯಲ್ಲಿ ಕೂಟಸ್ಥ ಶಬ್ದಕ್ಕೆ ಪರ್ವತದ ಹಾಗೆ
ಚಲಿಸದೇ ಇರುವವನು ಎಂದರೆ, ದೇಹವು ನಾಶ ಹೊಂದಿದರೂ ಸ್ಥಿರವಾಗಿರುವ
ಜೀವನೆಂದು ಅರ್ಥ ಬರೆದಿದ್ದಾರೆ. ಇದೀಗ ಸರಿಯಾದಭಿಪ್ರಾಯವು ಶ್ರೀ ಭಾಷ್ಯ
ಕಾರರು ಕೂಟಸ್ಥ ಶಬ್ದಕ್ಕೆ ಅಚಿತ್ತಿನ ಸಂಸರ್ಗದಿಂದ ಬಿಡಲ್ಪಟ್ಟು ತನ್ನ ನಿಜ
ಸ್ವರೂಪದಿಂದಿರುವ ಮುಕ್ತಾತ್ಮನೆಂದು ಅರ್ಥ ಬರೆದಿರುತ್ತಾರೆ. ಅಕ್ಷರ ಶಬ್ದಕ್ಕೆ
ದ್ವೈತ ಸಿದ್ಧಾಂತಿಗಳು ಲಕ್ಷ್ಮೀ ಎಂಬದಾಗಿ ಅರ್ಥ ಮಾಡಿರುತ್ತಾರೆ. ಇದೂ
ತುಂಬಾ ಸಾಹಸವಾಡಿ ಹೇಳುವರ್ಥವೇ. ಏಕೆಂದರೆ ದ್ವಾವಿಮೌ ಪುರುಷೌ
ಎಂದೂ, ಅಕ್ಷರನೆಂದೂ ಪುಲ್ಲಿಂಗ ಪ್ರಯೋಗವಿರುವಾಗ ಲಕ್ಷ್ಮೀ ಎಂದರ್ಥ ಹೇಳ
ಬಹುದೇ ? ಶ್ರೀ ವ್ಯಾಸಮಹರ್ಷಿಯು ಪರಮಾರ್ಥ ಬೋಧಿಸುವ ಸ್ಥಳದಲ್ಲಿ ಹೀಗೆ
ಸಂದಿಗ್ಧವಾದ ಪ್ರಯೋಗವನ್ನು ಮಾಡಿಬಿಟ್ಟು ಭ್ರಾಂತಿಕಕ್ಕೂ ಅಜ್ಞಾನಕ್ಕೂ
ಸಂಶಯಕ್ಕೂ ಅಸ್ಪದವನ್ನುಂಟುಮಾಡಿಯಾರೇ ? ಇಂತಹ ಅತಿ ಸಾಹಸಾರ್ಥ
ಗಳನ್ನು ಬಿಟ್ಟು ಕ್ಷರವಲ್ಲದುದು ಅಕ್ಷರವೆಂದು ಹೇಳಿ, ಬದ್ಧ ಜೀವನಲ್ಲ
ದವನು ಯಾರೆಂದರೆ ಮುಕ್ತಜೀವನೆಂದು ಅರ್ಥ ಹೇಳುವುದು ಯುಕ್ತ ವಿಷಯ
ವಲ್ಲವೇ ? ಆದುದರಿಂದ ಸ್ವರೂಪೈಕ್ಯ ಹೇಳುವ ವಾದವು ಈ ಪ್ರಮಾಣಕ್ಕೆ ಪ್ರಬಲ
ವಿರುದ್ಧವೆಂದು ಹೇಳಲಿಕ್ಕೆ ಯಾವುದೂ ಸಂದೇಹವಿರುವದಿಲ್ಲವು. ಜೀವನೇ ಬೇರೆ
ಪರಮಾತ್ಮನೇ ಬೇರೆ ಎಂದು ಶ್ರೀ ವ್ಯಾಸ ಮಹರ್ಷಿಯು ಅನೇಕ ಸ್ಥಳಗಳಲ್ಲಿ
ಸ್ಪಷ್ಟವಾಗಿ ಹೇಳಿರುತ್ತಾರೆ. ಇದೇ ಗೀತೆಯಲ್ಲೇ "ಅಪರೇಯಂ ಇತಸ್ತ್ವ

(೩) "ತತ್ರ ಯಃ ಪರಮಾತ್ಮಾ ತು ಸ ನಿತ್ಯೋ ನಿರ್ಗುಣಸ್ಸ್ಮೃತಃ।

ನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಂ। ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥" (೭. ೫) ಎಂದು ತನಗೆ ಶರೀರ ರೂಪದಲ್ಲಿ ಸಂಬಂಧಿಸಿದ ಎರಡು ಪ್ರಕೃತಿಗಳೆಂದೂ, ಒಂದು ಜಡ ಪ್ರಕೃತಿಯೆಂದೂ, ಇನ್ನೊಂದು ಜೀವವರ್ಗವೆಂದು ಹೇಳಿಸಿಕೊಳ್ಳುವ ಪರಾ ಪ್ರಕೃತಿಯೆಂದೂ ಹೇಳಿರುವದರಿಂದ ಜೀವರುಗಳೇ ಬೇರೆ ಪರಮಾತ್ಮನೇ ಬೇರೆ ಎಂದೂ ಸ್ಫುಟವಾಗಿ ಹೇಳಿರುತ್ತದೆ. ಹಿಂದೆ ಜೀವನನ್ನು ಪಂಚವಿಂಶಕನೆಂದೂ, ಪರಮಾತ್ಮನನ್ನು ಷಡ್ವಿಂಶಕನೆಂದೂ ಬೇರೆಯಾಗಿ ಉದಾಹರಿಸಿದ ಶಾಂತಿಪರ್ವ ಶ್ಲೋಕಗಳೇ ಸಾಕಾಗಿರುತ್ತವೆ. ಇದೂ ಅಲ್ಲದೆ ಮಹರ್ಷಿಯು ಇನ್ನೊಂದು ಕಡೆಯಲ್ಲಿ ಆದಿಪರ್ವದ ಶಕುಂತಲೋಪಾಖ್ಯಾನದಲ್ಲಿ,

(೪) ಏಕೋಽಹ ಮಸ್ಮೀತಿ ಚ ಮನ್ಯಸೇ ತ್ವಂ
ನ ಹೃಚ್ಛಯಂ ವೇತ್ಸಿ ಮುನಿಂ ಪುರಾಣಂ।
ಯೋ ವೇದಿತಾ ಕರ್ಮಣಃ ಪಾಪಕಸ್ಯ
ತಸ್ಯಾಂತಿಕೇ ತ್ವಂ ವೃಜಿನಂ ಕರೋಷಿ ॥

ಎಂದು ಹಿಂದಿನ ಶ್ಲೋಕದಲ್ಲಿ ಈ ಜೀವಾತ್ಮನು ಸ್ವಾಮಿಯ ಸ್ವಂ-ಸ್ವತ್ತಾಗಿದ್ದರೂ ತನ್ನದು ಎಂದು ಚೋರಕೃತ್ಯವನ್ನು ಮಾಡುವನೆಂದು ಹೇಳಿ, ಓ ಜೀವಾತ್ಮನೇ ನೀನೊಬ್ಬನೇ ಎಂದು ದುರಭಿಮಾನದಿಂದಿರುವ ಹಾಗೆ ತೋರುತ್ತದೆ. ನಿನ್ನ ಪಕ್ಕದಲ್ಲೇ ನಿನ್ನ ಹೃದಯವೆಂಬ ದೇವಾಲಯದಲ್ಲಿ ನಿನಗಾಗಿ ದಿವ್ಯಮಙ್ಗಳ ವಿಗ್ರಹವನ್ನು ಧರಿಸಿ ನಿನಗೆ ನಿಯಾಮಕನಾಗಿ ಸನಾತನನಾದ ಹಾರ್ದಾವತಾರಿಯು ನೆಲಸಿರುವನೆಂಬುದು ತಿಳಿಯದೋ ಏನು? ಈ ಆತ್ಮಾಪಹಾರ ಚೋರಕೃತ್ಯವನ್ನು ಮಾಡಿದ ಪಾಪಕರ್ಮವನ್ನು ಮೊದಲು ತಿಳಿಯುವನೇ ಆ ಸರ್ವಜ್ಞನು. ಅಂಥಾವನ ಸಮೀಪದಲ್ಲಿಯೇ ಇದ್ದುಕೊಂಡು ನೀನು ಈ ಪಾಪಕೃತ್ಯವನ್ನು ನಡಿಸುತ್ತೀಯೇ. ಇದು ತುಂಬಾ ಶೋಚನೀಯವಾದ ವಿಷಯವೆಂದು ಶಕುಂತಳೆಯು ದುಷ್ಯಂತನಿಗೆ ಹೇಳುತ್ತಾಳೆ.

ಮೇಲೆ ಮಹರ್ಷಿಯ ಪ್ರಮಾಣವೇ ಸಾಕಾಗಿದ್ದರೂ ತೃಪ್ತಿ ಇಲ್ಲದೆ ಶ್ರೀ ದೇಶಿಕರು ಪುನಃ ಇನ್ನೊಂದು ಪ್ರಮಾಣವನ್ನುದಾಹರಿಸಿ, ಜೀವ ಪರಮಾತ್ಮ ಭೇದವನ್ನೇ ಉಪದೇಶಿಸುವದರಿಂದ ಸ್ವರೂಪೈಕ್ಯಕ್ಕೆ ಸುತರಾಂ ಅವಕಾಶವಿಲ್ಲವೆಂದು ವ್ಯಕ್ತಪಡಿಸುತ್ತಾರೆ.

---

(೩) ಭಾರ. ಶಾಂತಿ ೩೬೧-೧೪, ೧೫. (೪) ಭಾರ. ಆದಿ ೯೮-೮

ಸ ತು ನಾರಾಯಣೋ ಜ್ಞೇಯಸ್ಸರ್ವಾತ್ಮಾ ಪುರುಷೋ ಹಿ ಸಃ । ನಲಿಪ್ಯತೇ ಕರ್ಮಫಲೈಃ ಪದ್ಮಪತ್ರಮಿವಾಂಭಸಾ । ಕರ್ಮಾತ್ಮಾ ತ್ವಪರೋ ಯೋಽಸೌ ಮೋಕ್ಷಬಂಧೈಃ ಸಯುಜ್ಯತೇ" ॥

---

(೩) ಇದು "ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್" ಎಂಬ ಶ್ರುತ್ಯುಪಬೃಂಹಣವಾಗಿ ಚತುರ್ಮುಖ ಬ್ರಹ್ಮನು ತನ್ನ ಮಗನಾದ ರುದ್ರನಿಗೆ ಉಪದೇಶಿಸುವ ಪ್ರಕರಣವು. ತತ್ರ-ಆ ಜೀವಾತ್ಮನಲ್ಲಿ ಅಂತರ್ಯಾಮಿಯಾಗಿರುವ ವಿಷಯದಲ್ಲಿ. ಯಃ-ಯಾವ, ಪರಮಾತ್ಮಾ ತು-ಪರಮಾತ್ಮನಾದರೋ, ನಿತ್ಯಃ-ಶಾಶ್ವತನಾದವನು, ನಿರ್ಗುಣಃ-ಈ ಲೋಕದ ಗುಣಗಳಿಲ್ಲದವನು ಎಂದು, ಸ್ಮೃತಃ-ಸ್ಮರಿಸಲ್ಪಡುವವನು ಅಥವಾ ಸ್ಮೃತಿಯಲ್ಲಿ ಹೇಳಲ್ಪಟ್ಟವನು. ಯಾವ ಗುಣಗಳೂ ಇಲ್ಲದವನೆಂದು ಏಕೆ ಅರ್ಥ ಮಾಡಕೂಡದು? ಎಂದರೆ ಯಾವ ಗುಣಗಳೂ ಇಲ್ಲದ ವಸ್ತುವು ಇಲ್ಲವೇ ಇಲ್ಲವು. ಹಾಗೆ ನಿರ್ಗುಣವಾದ ವಸ್ತುವನ್ನು ಶಾಸ್ತ್ರಗಳು ಹೊಗಳಲಾರವು. ಆಗ ಶಾಸ್ತ್ರವು ವ್ಯರ್ಥವಾಗುತ್ತದೆ. ಶ್ರೀ ವ್ಯಾಸಮಹರ್ಷಿಯ ಅಭಿಪ್ರಾಯವು ಹಾಗಲ್ಲವೆಂಬುದು ಮುಂದೆ ಇದೇ ಅಧ್ಯಾಯದ ಗಣನೆಯ ಶ್ಲೋಕದಿಂದ ವ್ಯಕ್ತವು. "ಜ್ಞಾತಾ ಜ್ಞೇಯಂ ಸಗುಣಂ ನಿರ್ಗುಣಂ ಚ" ಎಂದು ಕ್ರಮವಾಗಿ ಹೇಳಿರುವುದರಿಂದ ಜ್ಞಾತಾ ಇಲ್ಲಿ ಸತ್ತ್ವರಜಸ್ತಮೋಗುಣಗಳಿಂದ ಯುಕ್ತನಾಗಿರತಕ್ಕದ್ದರಿಂದ ಸಗುಣನಾದ ಜೀವಾತ್ಮನು. ಜ್ಞೇಯಂ - ಇಂತಹ ಸತ್ತ್ವ ರಜಸ್ತಮೋಗುಣಗಳಿಂದ ಯುಕ್ತನಾಗಿರದುದರಿಂದ ನಿರ್ಗುಣನೆನಿಸುವ, ಅಪ್ರಾಕೃತ ಕಲ್ಯಾಣಗುಣಗಳಿಂದ ಯುಕ್ತನಾದ ಪರಮಾತ್ಮನು ಎಂದು ಮುಂದೆ ಹೇಳಲ್ಪಟ್ಟಿರುತ್ತದೆ. ಸತು - ಅಂತಹ ಪರಮಾತ್ಮನಾದರೋ, ನಾರಾಯಣಃ - ನಾರಾಯಣನು. ಜ್ಞೇಯಃ - ಅವನೇ ತಿಳಿಯಲ್ಪಡತಕ್ಕ ವಸ್ತುವು. ಶಾಸ್ತ್ರಜನ್ಯ ಜ್ಞಾನದಿಂದ ತಿಳಿಯಲ್ಪಡತಕ್ಕವನು. ಸರ್ವಾತ್ಮಾ - ಅವನೇ ಸಮಸ್ತಕ್ಕೂ ಅಂತರಾತ್ಮಾ. ಸಃ - ಅವನೇ. ಪುರುಷೋ ಹಿ - ಪರಮ ಪುರುಷನು. ಅಥವಾ, ಏಕಃ ಪುರುಷಃ - ಮುಖ್ಯ ಪುರುಷನು. ಅಥವಾ, ಸ್ತ್ರೀಪ್ರಾಯಮಿತರತ್ ಎಂಬ ವ್ಯಾಸೋಕ್ತಿಯ ಪ್ರಕಾರ, ಅವನೊಬ್ಬನೇ ಪುರುಷಸೂಕ್ತದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಪುರುಷನು; ಅಂಭಸಾ - ಉದಕದಿಂದ, ಪದ್ಮಪತ್ರಂ - ಕಮಲಪತ್ರವು ಹೇಗೆ, ನಲಿಪ್ಯತೇ - ಲೇಪಿಸಲ್ಪಡುವದಿಲ್ಲವೋ. ಹಾಗೆ, ಕರ್ಮಫಲೈಃ - ಕರ್ಮಗಳ ಫಲದಿಂದ ಎಂದರೆ ತಾನು ಪ್ರೇರಕನಾಗಿ ಮಾಡಿಸುವ ಕರ್ಮಫಲಗಳಿಂದ, ನಲಿಪ್ಯತೇ - ಲೇಪಿಸಲ್ಪಡುವದಿಲ್ಲವು. ಆದರೆ ಆ ಕರ್ಮ

(೪) “ಅಯಃಪಿಂಡೇ ಯಥಾವಹ್ನಿರ್ಭಿನ್ನಸ್ತಿಷ್ಠತ್ಯಭಿನ್ನವತ್ । ತಥಾವಿಶ್ವಮಿದಂ ದೇವೋಽಪ್ಯಾವೃತ್ಯ ಪರಿತಿಷ್ಠತಿ ॥” ಇತ್ಯಾದಿ ಪ್ರಮಾಣ ಸಹಸ್ರಂ ವಿರೋಧಿಕ್ಕುಮ್.

ಗಳಿಗೆ ಗುರಿ ಯಾಗು ? ಎಂದರೆ ಹೇಳುತ್ತಾರೆ. ಕರ್ಮಾತ್ಮಾತು - ಆ ಕರ್ಮಗಳ ಸ್ವರೂಪಕ್ಕೆ ಸಿಲುಕಿದವನಾದರೋ, ಅವರಃ - ಆ ಪರಮಾತ್ಮನ ಹಾಗೆ ಸರ್ವೋತ್ಕೃಷ್ಟನಲ್ಲದ, ಯೋಽಸೌ - ಯಾವ ಈ ಜೀವಾತ್ಮನಾದರೋ, ಅಸೌ ಎಂದು ಹೇಳಿದವನರಿಂದ ನಿನ್ನಲ್ಲಿಯೂ ನನ್ನಲ್ಲಿಯೂ ಇದ್ದು ಹೀಗೆ ಅನೇಕರಾಗಿರುವ ಈ ಜೀವಾತ್ಮನಾದರೋ ಎಂಬ ಭಾವವು. ಕೆಲವು ಪುಸ್ತಕಗಳಲ್ಲಿ ಅವರಃ ಎಂಬುದಕ್ಕೆ ಬದಲಾಗಿ ಅಪರಃ ಎಂಬ ಪಾಠಾಂತರವುಂಟು, ಆಗ ಪರಮಾತ್ಮನಿಗಿಂತ ಬೇರೆ ಯಾರವನು ಈ ಜೀವಾತ್ಮನು ಎಂಬರ್ಥವು. ಆಗಲೂ ಜೀವ ಪರಮಾತ್ಮರ ಭೇದವೇ ಹೇಳಲ್ಪಟ್ಟಿತು. ಮೊದಲನೆಯ ಪಾಠವೇ ಸರಸವಾದುದು ; ಸಃ - ಅಂತಹ ಜೀವಾತ್ಮನು, ಮೋಕ್ಷಬಂಧೈಃ - ಮೋಕ್ಷಫಲವೇನು, ಸಂಸಾರಬಂಧವೇನು ಈ ಫಲಗಳಿಂದ, ಯುಜ್ಯತೇ - ಹೊಂದುವನಾಗುತ್ತಾನೆ” ಇಲ್ಲಿ ಸತು ನಾರಾಯಣೋಽಜ್ಞೇಯಃ ಎಂಬ ವಾಕ್ಯವು ಚತುರ್ಮುಖನು ರುದ್ರನಿಗೆ ಉಪದೇಶಿಸುವ ವಾಕ್ಯವಾದುದರಿಂದ, ಈ ಇಬ್ಬರಿಗಿಂತ ವಿಲಕ್ಷಣನಾಗಿ ಉತ್ಕೃಷ್ಟನೆಂಬುದು ವ್ಯಕ್ತವು.

(೪) “ಅಯಃಪಿಂಡೇ - ಕಾದ ಕಬ್ಬಿಣದ ಮುದ್ದೆಯಲ್ಲಿ, ವಹ್ನಿಃ - ಅಗ್ನಿಯು, ಭಿನ್ನಃ - ಯಥಾರ್ಥವಾಗಿ ಭಿನ್ನವಾಗಿದ್ದರೂ, ಯಥಾ - ಹೇಗೆ, ಅಭಿನ್ನವತ್ - ಭಿನ್ನವಲ್ಲವೆಂಬ ಹಾಗೆ, ತಿಷ್ಠತಿ - ಇರುತ್ತದೆಯೋ, ತಥಾ - ಹಾಗೆಯೇ, ದೇವೋಽಹಿ - ಕ್ರೀಡಾಪರನಾದ ಪರಮಾತ್ಮನೂ ಕೂಡ, ವಿಶ್ವಮಿದಂ ಆವೃತ್ಯ - ವ್ಯಾಪ್ತವಾಗಿಯೂ ತನಗಿಂತಲೂ ಬೇರೆಯಾದ ಈ ವಿಶ್ವವನ್ನೆಲ್ಲಾ ಪ್ರವೇಶಿಸಿ, ಪರಿತಿಷ್ಠತಿ - ಅದರೊಂದಿಗೆ ಸೇರಿರುವುದರಿಂದ ಒಂದೆಯೋ ಎನ್ನುವ ಹಾಗೆ, “ಯಚ್ಚ ಕಿಂಚಿತ್ ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥” ಎಂದು ಹೇಳಿರುವ ಹಾಗೆ ಇರುತ್ತಾನೆಂಬ ಭಾವವು. ಇಲ್ಲಿ ಅಭಿನ್ನವತ್ - ಬೇರೆಯಲ್ಲವೋ ಎನ್ನುವ ಹಾಗೆ, ಎಂದಿರುವುದರಿಂದ ಭಿನ್ನವಾದುದೆಂಬುದು ಸುಸ್ಪಷ್ಟವು.” ಇತ್ಯಾದಿ - ಇವೇ ಮೊದಲಾದ, ಪ್ರಮಾಣ ಸಹಸ್ರಂ - ಸಾವಿರಾರು ಪ್ರಮಾಣಗಳು, ವಿರೋ

---

(೪) ಜಯಾಖ್ಯಸಂಹಿತೆ.

ಪರಮಸಾಮ್ಯ ಶ್ರುತೇರಭಿಪ್ರಾಯಃ

ಆಗೈಯಾಲ್ ಮುಕ್ತನುಕ್ಕು ಜ್ಞಾನ ಭೋಗಾದಿಗಳಾಲ್ ವನ್ದ ಪರಮಸಾಮ್ಯಮೇ ಯುಳ್ಳದು.

ಧಿಕ್ಕುಮ್ - ವಿರೋಧವಾದವುಗಳಾಗುತ್ತವೆ. ಇಲ್ಲಿ ಸಹಸ್ರ ಶಬ್ದವು ಅನೇಕ ವೆಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ. ಸ್ವರೂಪೈಕ್ಯ ಹೇಳಿದರೆ ಸಾವಿರಾರು ಪ್ರಮಾಣಗಳಿಗೆ ವಿರೋಧವಾಗುತ್ತವೆಂಬ ಭಾವವು. ಹಾಗಾದರೆ ಐಕ್ಯವನ್ನು ಹೇಳುವ ವಾಕ್ಯಗಳಿಗೆ ಅರ್ಥ ಹೇಗೆ ಎಂದರೆ **ರಾಮಸುಗ್ರೀವಯೋರೈಕ್ಯಂ** ಎಂದು ಹೇಳಿರುವ ಹಾಗೆ ಸಯುಕ್ತನಾಗಿರುವ ಭಾವವೆಂದು ಹಿಂದೆಯೇ ಹೇಳಲ್ಪಟ್ಟಿತು.

ಪರಮಸಾಮ್ಯವನ್ನು ಹೇಳುವ ಶ್ರುತಿಯ ಅಭಿಪ್ರಾಯವು.

ಇಷ್ಟು ದೂರ ಉಪಪಾದನ ಮಾಡಿ ದ್ವೈತಿಗಳ ಅನಂದತಾರತಮ್ಯವನ್ನೂ, ಅದ್ವೈತಿಗಳ ಸ್ವರೂಪೈಕ್ಯವನ್ನೂ, ಖಂಡಿಸಿದುದರಿಂದ "**ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ**" ಎಂಬ ಶ್ರುತಿಯಲ್ಲಿ ಸಾಮ್ಯದ ಅಭಿಪ್ರಾಯವೇನು ಎಲ್ಲಾ ವಿಷಯದಲ್ಲೂ ಸಮನೇ ? ಎಲ್ಲಾ ವಿಷಯದಲ್ಲೂ ಸಮವಾದರೆ ಐಕ್ಯಾಭಿಪ್ರಾಯವೇ ಆಗುತ್ತದೆ. ಆದುದರಿಂದ ಯಾವಾಗ ಪರಮಾತ್ಮನಿಗೆ ಸಮವೆಂದು ಹೇಳಲ್ಪಟ್ಟಿತೋ, ಅದರಿಂದಲೇ ಕೆಲವು ವಿಷಯಗಳಲ್ಲಿ ಸಮವಲ್ಲವೆಂಬುದು ವ್ಯಕ್ತವು. ಮೊದಲು ಯಾವ ವಿಷಯದಲ್ಲಿ ಸಮಭಾವವೆಂಬುದನ್ನು ಹೇಳಿ, ಅನಂತರ ಯಾವ ವಿಷಯಗಳಲ್ಲಿ ಭಿನ್ನತೆಯೆಂಬುದನ್ನು ತಿಳಿಸುತ್ತಾರೆ.

ಆಗೈಯಾಲ್ - ಆದುದರಿಂದ, ಮುಕ್ತನಿಗೆ, **ಜ್ಞಾನಭೋಗಾದಿಗಳಾಲ್**- **ಜ್ಞಾನ** ವೆಂದರೆ ಏಕಕಾಲದಲ್ಲಿ ಪ್ರತ್ಯಕ್ಷವಾಗಿ ಸಮಸ್ತವನ್ನೂ ವಿಷಯೀಕರಿಸುವ ಸರ್ವಜ್ಞತ್ವವು, ಭೋಗವೆಂದರೆ ತನಗೆ ಯಾವಾಗಲೂ ಅನುಕೂಲವಾಗಿರುವ ಹಾಗೆ ಎಲ್ಲವೂ ಸರ್ವೇಶ್ವರನಿಗೆ ಶರೀರವಾಗಿರುವದರಿಂದ ಹೀಗೆ ಎಲ್ಲಾ ವಿಭೂತಿಯಿಂದಲೂ ಸೇರಿದವನಾಗಿ ಪರಮಾತ್ಮನನ್ನು ಅನುಭವಿಸುವಿಕೆಯು, ಇಲ್ಲಿ ಆದಿ ಶಬ್ದದಿಂದ ಅಪಹತ ಪಾಪ್ಮತ್ವಾದಿ ಗುಣಾಷ್ಟಕವು ಬೋಧಿಸಲ್ಪಟ್ಟಿತು, ಇವುಗಳಿಂದ, **ವನ್ದ** - ಪ್ರಾಪ್ತವಾದ, **ಪರಮಸಾಮ್ಯಮೇ ಉಳ್ಳದು** - ಪರಮಾತ್ಮನೊಂದಿಗೆ ಸಮತ್ವವೇ ಇಲ್ಲಿ ಅಭಿಪ್ರಾಯವು. ಸರ್ವೇಶ್ವರನೊಂದಿಗೆ **ಸಾಮ್ಯ**ವೆಂಬುದರ ಅಭಿಪ್ರಾಯವು

ಮುಕ್ತೇ ಅವಿದ್ಯಮಾನಾಃ ಭಗವದಸಾಧಾರಣಧರ್ಮಾಃ.

ಈಶ್ವರನುಕ್ಕು ಛತ್ರಚಾಮರಾದಿಗಳೈಪ್ಪೋಲೆ, ಲಕ್ಷಣಮಾಗ

ಏನೆಂದರೆ (೧) ಪರಮಾತ್ಮನ ಹಾಗೆ, ಎಲ್ಲವನ್ನೂ ಏಕಕಾಲದಲ್ಲಿ ಸಾಕ್ಷಾತ್ಕರಿಸುವ ಸರ್ವಜ್ಞತೆಯನ್ನು ಹೊಂದುವದು. (೨) ಎಲ್ಲವೂ ಅನುಕೂಲವಾಗುವದರಿಂದ, ಸರ್ವವೂ ಅನುಕೂಲವಾದುದಾಗಿ ಉಭಯವಿಭೂತಿವಿಶಿಷ್ಟನಾದ ಪರಮಾತ್ಮನನ್ನನುಭವಿಸುವ ನಿರತಿಶಯ ಸುಖವನ್ನು ಹೊಂದುವದು. (೩) ಸ್ವಸ್ವರೂಪಾವಿರ್ಭಾವವು ಉಂಟಾಗುವದರಿಂದ ಸರ್ವೇಶ್ವರನ ಹಾಗೆ ಅಪಹತಪಾಪ್ಮತ್ವಾದಿ ಗುಣಾಷ್ಟಕಗಳನ್ನುಳ್ಳವನಾಗುವದು. ಈ ಅಭಿಪ್ರಾಯಗಳೆಲ್ಲಾ ಬ್ರಹ್ಮಸೂತ್ರದ ಸಂಪದ್ಯಾವಿರ್ಭಾವ ಸಙ್ಕಲ್ಪಾಧಿಕರಣಗಳಲ್ಲೂ, ಮತ್ತು **ಭೋಗಮಾತ್ರಸಾಮ್ಯ ಲಿಙ್ಗಾಚ್ಚ** ಎಂಬ ಸೂತ್ರದಲ್ಲೂ ಉಪಪಾದಿತಗಳಾಗಿವೆ. ಆದುದರಿಂದ ಜ್ಞಾನಭೋಗಾದ ಸಾಮ್ಯದಲ್ಲಿ ಮಾತ್ರವೇ "**ಪರಮಸಾಮ್ಯ**" ಶ್ರುತಿಗೆ ಅಭಿಪ್ರಾಯವೆಂದು ತಿಳಿಯತಕ್ಕದ್ದು.

ಹಿಂದೆ "ಇದು ಕುದುರೆಗೆ ಸಮ" ಎಂದು ಹೇಳಿದರೆ, ಇದು ಕುದುರೆಯಲ್ಲವು ಕುದುರೆಯ ಕೆಲವು ಗುಣಗಳು ಮಾತ್ರವಿರುವದರಿಂದ ಕುದುರೆಗೆ ಸಮವೆಂದು ಹೇಳಲ್ಪಟ್ಟಿತೆಂದೂ, ಇದಕ್ಕೂ ಕುದುರೆಗೂ ವ್ಯತ್ಯಾಸ ಉಂಟೆಂಬುವದು ಸ್ವತಃ ವ್ಯಕ್ತವೆಂದೂ ಹೇಳಲ್ಪಟ್ಟಿತು. ಹಾಗೆಯೇ ಇಲ್ಲಿಯೂ ಮುಕ್ತನು ಪರಮಾತ್ಮನಿಗೆ ಸಮನಾಗುವನು ಎಂದರೆ ಯಾವ ಧರ್ಮಗಳಲ್ಲಿ ಸಮವೆಂಬುವದು ಇಲ್ಲಿ ವ್ಯಕ್ತಗೊಳಿಸಲ್ಪಟ್ಟಿತು. ಇನ್ನು ಮುಂದೆ ಯಾವ ವಿಷಯಗಳಲ್ಲಿ ಭಿನ್ನತೆ ಎಂಬುದನ್ನು ವಿಶದೀಕರಿಸುತ್ತಾರೆ. ಪರಮಾತ್ಮನಿಗೆ ಮಾತ್ರವೇ ಅಸಾಧಾರಣವಾದ ಧರ್ಮಗಳು ಯಾವುವು, ಹಾಗೆಯೇ ಜೀವಕೋಟಿಗೆ ಸೇರಿರುವ ಮುಕ್ತನಿಗೆ ಮಾತ್ರವೇ ಅಸಾಧಾರಣವಾದ ಧರ್ಮಗಳಾವುವು ಎಂಬುವದನ್ನು ಮುಂದೆ ತಿಳಿಸುತ್ತಾರೆ.

ಮುಕ್ತನಲ್ಲಿಲ್ಲದಿರುವ ಭಗವಂತನಲ್ಲಿ ಮಾತ್ರವಿರುವ ಧರ್ಮಗಳು.

ಈಶ್ವರನುಕ್ಕು – ಸರ್ವೇಶ್ವರನಿಗೆ, ಛತ್ರ ಚಾಮರ ಮೊದಲಾದವುಗಳ ಹಾಗೆ, ಇಲ್ಲಿ ಆದಿಪದದಿಂದ ಶ್ರೀ ವತ್ಸ, ಕೌಸ್ತುಭ ವೈಜಯಂತೀ ಮೊದಲಾದವು ಹೇಳಲ್ಪಟ್ಟಿತು, **ಲಕ್ಷಣಮಾಗಚ್ಚೊನ್ನ** - ಪರಮಾತ್ಮನಿಗೆ ಮಾತ್ರವೇ ಅಸಾಧಾರಣ ವಿಶೇಷಣಗಳಾಗಿ ಹೇಳಲ್ಪಟ್ಟ, ಎಂದರೆ ಛತ್ರಚಾಮರಾದಿಗಳು ಭಗವಂತನಿಗೆ **ಮಾತ್ರವೇ ಹೇಗೆ** ಅಸಾಧಾರಣ ವಿಶೇಷಣಗಳೋ ಹಾಗೆ ಎಂಬರ್ಥವು, **ಲಕ್ಷಣ**

ವೆಂದರೆ ಅಸಾಧಾರಣವಾದ ಧರ್ಮವೆಂಬರ್ಥವು, ಅವುಗಳು ಹೇಗೆ ಲಕ್ಷಣಗಳೋ ಹಾಗೆಯೇ ಮುಂದೆ ಹೇಳುವ ಧರ್ಮಗಳೆಲ್ಲಾ ಪರಮಾತ್ಮನಿಗೆ ಮಾತ್ರವೇ ಅಸಾಧಾರಣ ಧರ್ಮಗಳೇ ವಿನಾ ಇನ್ನ್ಯಾರಲ್ಲೂ ಎಂದರೆ ಚತುರ್ಮುಖರುದ್ರಾದಿ ಸರ್ವ ಜೀವಾತ್ಮರಲ್ಲೂ ಇಲ್ಲವೆಂಬ ಭಾವವು. ಇವುಗಳು ಮುಖ್ಯವಾಗಿ ಜಗದ್ವ್ಯಾಪಾರಧರ್ಮಗಳಾದುದರಿಂದ ಶ್ರೀ ವ್ಯಾಸರು ಇವುಗಳನ್ನೆಲ್ಲಾ ಜಗದ್ವ್ಯಾಪಾರ ವರ್ಜಂ ಎಂಬ ಸೂತ್ರದ ಮೂಲಕ ಬೋಧಿಸಿದರು. ಅವುಗಳು ಯಾವುವೆಂದರೆ :—

(೧) ಜಗತ್ಕಾರಣತ್ವ - ಸಮಸ್ತ ಜಗತ್ತಿಗೂ ಕಾರಣಭೂತನಾಗಿರುವಿಕೆಯು, "ಯತೋ ವಾ ಇಮಾನಿ ಭೂತಾನಿ ಜಾಯನ್ತೇ ಯೇನ ಜಾತಾನಿ ಜೀವಂತಿ ಯತ್ಪ್ರಯನ್ತ್ಯಭಿ ಸಂವಿಶನ್ತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮ" (ತೈ. ಭೃಗು.) ಎಂಬ ಶ್ರುತ್ಯನುಸಾರವಾಗಿಯೂ ಜನ್ಮಾದ್ಯಸ್ಯಯತಃ ಎಂಬ ಸೂತ್ರಾನುಸಾರವಾಗಿಯೂ, ಜಗತ್ತಿನ ಜನ್ಮಸ್ಥಿತಿಲಯಾದಿಗಳಿಗೆ ಕಾರಣಭೂತನ್ಯಾರೋ ಅತನೇ ಪರಬ್ರಹ್ಮವೆಂದು ಬೋಧಿಸುವುದರಿಂದಲೂ, ಮುಕ್ತರೇ ಮೊದಲಾದವರಿಗೆ ಇಂತಹ ಶಕ್ತಿ ಇಲ್ಲದಿರುವುದರಿಂದ, ಪರಬ್ರಹ್ಮನಿಗೆ ಮಾತ್ರವೇ ಅಸಾಧಾರಣ ಧರ್ಮವು ಕಾರಣವು ಮೂರು ವಿಧ. ಉಪಾದಾನ ಕಾರಣ, ನಿಮಿತ್ತಕಾರಣ, ಸಹಕಾರಿಕಾರಣ. ಘಟವೆಂಬ ಕಾರ್ಯಕ್ಕೆ ಮೃತ್ತು ಉಪಾದಾನ ಕಾರಣವು, ಕುಲಾಲನು ನಿಮಿತ್ತಕಾರಣವು, ದಂಡ ಚಕ್ರಾದಿಗಳು ಸಹಕಾರಿ ಕಾರಣಗಳು. ಈ ಜಗತ್ತೆಂಬ ಕಾರ್ಯಕ್ಕೆ ಈ ಮೂರುವಿಧ ಕಾರಣವೂ ಪರಬ್ರಹ್ಮನೇ. ಹಾಗೆಯೇ ಶ್ರುತಿಯು ಹೇಳುತ್ತದೆ:—"ಯಥೋರ್ಣನಾಭಿಸ್ಸೃಜತೇ ಗೃಹ್ಣತೇ ಚ" (ಮುಂ. ೧. ೧. ೭) ಜಾಡರ ಹುಳುವು ತಂತುವನ್ನುಂಟುಮಾಡಿ ಅವನ್ನೇ ಹೇಗೆ ನುಂಗುತ್ತದೋ ಹಾಗೆ; ಜಾಡರಹುಳುವಿನ ದ್ರವ್ಯದಿಂದಲೇ ತಂತುವಾಗಿರುವುದರಿಂದ ಜಾಡರಹುಳುವು ತಂತುವಿಗೆ ಉಪಾದಾನಕಾರಣವು ಅದು ಸಂಕಲ್ಪಿಸಿ ತಂತುವನ್ನು ಬಿಡುವುದರಿಂದ ಅದೇ ನಿಮಿತ್ತ ಕಾರಣವು ತನ್ನ ಕಾಲುಗಳ ಸಹಾಯದಿಂದ ನೂಲುವುದರಿಂದ ಸಹಕಾರಿ ಕಾರಣವೂ ಅದೇ. ಹೀಗೆ ಸರ್ವೇಶ್ವರನು ಸೃಷ್ಟಿಸಿದ ಒಂದು ಹುಳಕ್ಕೇನೇ ಮೂರು ವಿಧ ಕಾರಣವೂ ಆಗಲು ಶಕ್ತಿಯಿದ್ದರೆ, ಸರ್ವಶಕ್ತನಾದ ಸರ್ವೇಶ್ವರನಿಗೆ ಅಂತಹ ಶಕ್ತಿಯಿಲ್ಲವೇ? ಹೀಗಿದ್ದರೂ, ದ್ವೈತಸಿದ್ಧಾಂತಿಗಳು ಸರ್ವೇಶ್ವರನು ನಿಮಿತ್ತಕಾರಣಮಾತ್ರವೆಂದೂ ಪ್ರಕೃತಿಯು ಉಪಾದಾನಕಾರಣವೆಂದೂ ಹೇಳುವರು. ನಮ್ಮ ಸಿದ್ಧಾಂತ ಪ್ರಕಾರ ಸೂಕ್ಷ್ಮಚಿದಚಿದ್ವಿಶಿಷ್ಟ ಸರ್ವೇಶ್ವರನೇ ಕಾರಣವು, ಸ್ಥೂಲಚಿದಚಿದ್ವಿಶಿಷ್ಟ ಸರ್ವೇಶ್ವರನೇ ಕಾರ್ಯವು, ಹೀಗೆ ಹೇಳುವುದರಿಂದ ಪರಮಾತ್ಮನಿಗೇ ಜಗತ್ಕಾರಣತ್ವವನ್ನು ಹೇಳುವ ಶ್ರುತಿಗಳು ನಮಗೆ ಸಮಂಜಸವಾದವು. ಕಾರ್ಯವೂ ಕಾರಣವೂ ಒಂದೇ ಎಂದು ಹೇಳುವ, "ತದನನ್ಯ

ಚೈತನ್ಯ, ಜಗತ್ಕಾರಣತ್ವ, ಮೋಕ್ಷಪ್ರದತ್ವ, ಸರ್ವಾಧಾರತ್ವ, ಸರ್ವನಿಯಂತೃತ್ವ, ಸರ್ವಶೇಷಿತ್ವ, ಸರ್ವಶರೀರಿತ್ವ, ಸರ್ವಶಬ್ದವಾಚ್ಯತ್ವ, ಸರ್ವವೇದ

ತ್ವಂ ಆರಂಭಣ ಶಬ್ದಾದಿಭ್ಯಃ" ಎಂಬ ಸೂತ್ರಾರ್ಥವೂ ನಮಗೆ ಸಮಂಜಸವಾದುದೇ. ದ್ವೈತ ಸಿದ್ಧಾಂತಿಗಳು ನಿಮಿತ್ತಕಾರಣ ಮಾತ್ರವನ್ನು ಹೇಳುವದರಿಂದ ಈ ಸೂತ್ರಕ್ಕೆ ಬೇರೇ ವಿಧವಾಗಿ ಅರ್ಥವನ್ನು ಹೇಳುತ್ತಾರೆ.

(೨) **ಮೋಕ್ಷಪ್ರದತ್ವ** - ಮೋಕ್ಷವನ್ನು ಕೊಡುವ ಶಕ್ತಿಯು. ಇದು ಶ್ರೀಮನ್ನಾರಾಯಣನಿಗೆ ಮಾತ್ರವೇ ಇದೆಯೇ ವಿನಾ ಇನ್ನ್ಯಾರಿಗೂ ಇಲ್ಲವು. ಚತುರ್ಮುಖ ರುದ್ರಾದಿಗಳಿಗೆ ಈ ಶಕ್ತಿಯಿಲ್ಲವೆಂಬುದಕ್ಕೆ ಪರದೇವತಾ ಪಾರಮಾರ್ಥ್ಯಾಧಿಕಾರದ ೬೯೦–೭೦೦ ನೆಯ ಪುಟಗಳನ್ನು ನೋಡಿ. ಇತಿಹಾಸಗಳಲ್ಲಿ ಎಲ್ಲಿಯೂ ರುದ್ರನು ಮೋಕ್ಷವನ್ನಿತ್ತನೆಂಬುದಕ್ಕೆ ನಿದರ್ಶನವಿಲ್ಲವು. ಮಾರ್ಕಂಡೇಯರಿಗೆ ರುದ್ರನಿಂದ ಆದವ್ರಕ್ಷಣೆಯೂ "ನಾರಾಯಣನರುಳೇ" (ತಿರು. ೪. ೧೦. ೮) ಶ್ರೀಮನ್ನಾರಾಯಣನ ಕೃಪೆಯೇ ಯೆಂದು ಹೇಳಲ್ಪಟ್ಟಿರುತ್ತದೆ.

(೩) ಸರ್ವಾಧಾರತ್ವ - ಸಮಸ್ತಕ್ಕೂ ಆಧಾರಭೂತನಾಗಿರುವಿಕೆಯು, ಇದು ನಾರಾಯಣ ಶಬ್ದದಿಂದ ವ್ಯಕ್ತವು.

(೪) ಸರ್ವನಿಯನ್ತೃತ್ವ - ಸಮಸ್ತಕ್ಕೂ ಅಂತರ್ಯಾಮಿಯಾಗಿ ಸಮಸ್ತವನ್ನೂ ನಿಯಮಿಸೋಣವು, "ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ" (ಶ್ವೇ. ೧. ೧. ೨) ಎಂಬ ಶ್ರುತಿಯಲ್ಲಿ ಎಲ್ಲಕ್ಕೂ ಪ್ರೇರಕನೆಂದು ಹೇಳಿರುತ್ತದೆ. ಹಾಗೆಯೇ "ಅಂತರೋಯಮಯತಿ" ಎಂಬಿವೇ ಮೊದಲಾದ ವಾಕ್ಯಗಳಿಂದಲೂ ತೋರಿಬರುತ್ತದೆ

(೫) ಸರ್ವಶೇಷಿತ್ವ - ಸಮಸ್ತವನ್ನೂ ತನಗೆ ಶೇಷಭೂತವಾಗಿ ಉಳ್ಳೋಣವು. ಸಮಸ್ತವೂ ಪರಮಾತ್ಮನ ಸ್ವಂ-ಸ್ವತ್ವಾದುದರಿಂದ ಸರ್ವಶೇಷಿತ್ವವೂ ಪರಮಾತ್ಮನಿಗೆ ಮಾತ್ರವೇ ಸಲ್ಲುತ್ತದೆ. ಜೀವಾತ್ಮನಿಗೆ ಸಲ್ಲುವದಿಲ್ಲವು. "ಪತಿಂ ವಿಶ್ವಸ್ಯ" ಎಂಬ ಶ್ರುತಿಪ್ರಮಾಣವಿರುತ್ತದೆ.

(೬) ಸರ್ವಶರೀರಿತ್ವ - ಸಮಸ್ತವೂ ತನಗೆ ಶರೀರವಾಗಿ ಅವಕ್ಕೆಲ್ಲಾ ತಾನು ಆತ್ಮನಾಗಿರುವದು. ಇದು ಬೃಹದಾರಣ್ಯಕ ೫. ೭. ೧–೨೨ ದಲ್ಲೂ ಮತ್ತು ಸುಬಾಲ ೭ ಖಂಡದಲ್ಲೂ ಛಾಂ. ೬. ೮. ೭ ರಲ್ಲೂ ಉಪಪಾದಿತವಾಗಿರುತ್ತದೆ. ಶರೀರ ಶರೀರ ಲಕ್ಷಣವ್ಯಾಪ್ತವೆಂಬುದಕ್ಕೆ ಪ್ರಧಾನ ಪ್ರತಿತಂತ್ರಾಧಿಕಾರದ ೨೧೭–೨೮೨ ನೆಯ ಪುಟಗಳನ್ನು ನೋಡಿ.

(೭) ಸರ್ವಶಬ್ದವಾಚ್ಯತ್ವ - ಇದು ಶರೀರಿತ್ವದಿಂದ ಪ್ರಾಪ್ತವಾಗುವ ಧರ್ಮವು, ಶರೀರವನ್ನು ಬೋಧಿಸುವ ಶಬ್ದವು ಶರೀರಿಗೂ ಅನ್ವಯಿಸುವದರಿಂದ, ಸಮಸ್ತ ವಸ್ತುಗಳನ್ನು ಬೋಧಿಸುವ ಶಬ್ದಗಳು ತತ್ತಚ್ಛರೀರಕ ಪರಮಾತ್ಮನನ್ನೇ ಬೋಧಿಸುತ್ತವೆ ಎಂಬ ಭಾವವು.

(೮) ಸರ್ವವೇದ ವೇದ್ಯತ್ವ - ಸಮಸ್ತ ವೇದಗಳಿಂದಲೂ ತಿಳಿಯಲ್ಪಡುವದು. "ವೇದೈಶ್ಚ ಸರ್ವೈರಹಮೇವ ವೇದ್ಯಃ" (ಗೀ. ೧೫ ೧೫) ಸಮಸ್ತ ವೇದಗಳೂ ಆತನನ್ನೇ ಹೇಗೆ ಬೋಧಿಸುತ್ತವೆ ಎಂದರೆ ಕೆಲವು ವಾಕ್ಯಗಳೇನೋ ಆತನ ಸ್ವರೂಪ, ರೂಪ, ಗುಣ ವಿಭವೈಶ್ವರ್ಯ ಚೇಷ್ಟೆ ಮೊದಲಾದವುಗಳನ್ನು ಪ್ರತಿಪಾದಿಸಬಹುದು. ಇನ್ನು ಕೆಲವು ಚಂದ್ರ, ಅಗ್ನಿ, ಸೂರ್ಯ, ಇಂದ್ರ ಮೊದಲಾದವರುಗಳ ಸ್ವರೂಪಾದಿಗಳನ್ನು ತಿಳಿಸಬಹುದು. ಇವರುಗಳಿಗೆಲ್ಲಾ ಸರ್ವೇಶ್ವರನೇ ಅಂತರಾತ್ಮಾವಾದುದರಿಂದ, ಅವರನ್ನು ಕುರಿತು ಯಜ್ಞ, ಹವಿಸ್ಸಮರ್ಪಣೆ, ಮೊದಲಾದ ಆರಾಧನೆಗಳೆಲ್ಲಾ ಸರ್ವೇಶ್ವರನನ್ನೇ ಹೋಗಿ ಸೇರುವದರಿಂದ, ಸರ್ವವೇದ ವೇದ್ಯತ್ವವು ಆತನಿಗೆ ಉಂಟು. ಜೀವಾತ್ಮನಿಗೆ ಈ ಧರ್ಮವಿಲ್ಲವು.

(೯) ಸರ್ವಲೋಕ ಶರಣ್ಯತ್ವ - ಇದನ್ನೇ ಶ್ರೀ ಭಾಷ್ಯಕಾರರು ಅನಾಲೋಚಿತ ವಿಶೇಷಾಶೇಷಲೋಕ ಶರಣ್ಯತ್ವವೆಂದು ಹೇಳಿರುತ್ತಾರೆ. ಕುಲ, ಗುಣ, ವೃತ್ತದಿಂದ ಹೀನರಾಗಿದ್ದರೂ ಶರಣಾಗತರಾದ ಪಕ್ಷದಲ್ಲಿ ಎಲ್ಲರನ್ನೂ ಉದ್ಧರಿಸುವಿಕೆಯು. ಇದು ಹಿಂದೆಯೇ ಪ್ರಪತ್ತಿಗೆ ಸರ್ವಾಧಿಕಾರತ್ವವನ್ನುಪಪಾದಿಸುವ ಸಂದರ್ಭದಲ್ಲಿ ಸಮರ್ಥಿಸಲ್ಪಟ್ಟಿರುತ್ತದೆ. ದ್ವೈತ ಸಿದ್ಧಾಂತಿಗಳು ಕೆಲವರಿಗೆ ಎಂದಿಗೂ ಮೋಕ್ಷವೇ ಇಲ್ಲವೆಂದೂ, ಕೆಲವರು ನಿತ್ಯ ಸಂಸಾರಿಗಳಾಗಿಯೂ ಕೆಲವರು ನಿತ್ಯ ನರಕಭಾಗಿಗಳಾಗಿಯೂ ಇರುತ್ತಾರೆಂದೂ ಹೇಳುವರು. ಗೀತೆಯಲ್ಲಿ "ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ । ಕ್ಷಿಪಾಮ್ಯಜಸ್ರ ಮಶುಭಾನ್ ಆಸುರೀಷ್ವೇವಯೋನಿಷು ॥ ಆಸುರೀಂ ಯೋನಿಮಾಪನ್ನಾಃ ಮೂಢಾಃ ಜನ್ಮನಿ ಜನ್ಮನಿ ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂಗತಿಂ" (ಗೀ. ೧೬. ೧೯, ೨೦) ಎಂದರೆ ನನಗೆ ಪರತ್ವವನ್ನು ಸಾಧಿಸಿದರೆ ಸಹಿಸದೇ ಇರುವ ಅತಿ ಕ್ರೂರರಾದ ಮನುಷ್ಯಾಧಮರನ್ನು ಜನನ ಮರಣಾದಿ ರೂಪದಲ್ಲಿ ಸುತ್ತುವ ಸಂಸಾರದಲ್ಲಿ. ಅದರಲ್ಲೂ ನನಗೆ ಎಂದಿಗೂ ಅನುಕೂಲರಲ್ಲದೇ ಇರುವ. ಯೋನಿಗಳಲ್ಲಿ ಯಾವಾಗಲೂ ತಳ್ಳಿಬಿಡುವೆನು, ಎಂದು

ಹೇಳಿರುವದರಿಂದ, ಇಂಥಾವರಿಗೆ ಎಂದಿಗೂ ಮೋಕ್ಷವಿಲ್ಲವೆಂದೂ ಅವರು ನಿತ್ಯ ಸಂಸಾರಿಗಳೆಂದೂ ಹೇಳುವರು. ಹೀಗೆ ಹೇಳದಿದ್ದರೆ ಲೀಲಾವಿಭೂತಿಗೆ ನಿತ್ಯತ್ವವು ಇಲ್ಲದೆ ಹೋಗುವದೆಂದೂ ಹೇಳುವರು; ಏಕೆಂದರೆ ಎಲ್ಲರಿಗೂ ಒಂದಾನೊಂದು ಕಾಲದಲ್ಲಿ ಮುಕ್ತಿಯಾಗಿಬಿಟ್ಟರೆ, ಲೀಲಾವಿಭೂತಿಯಲ್ಲಿ ಚೇತನರೇ ಇಲ್ಲವಾಗಿ ಹೋಗಬಹುದೆಂಬುದು ಅವರಭಿಪ್ರಾಯವು. ಇದು ಸರಿಯಾದ ಅಭಿಪ್ರಾಯವಾಗುವದಿಲ್ಲವು ; ಏಕೆಂದರೆ ಒಂದುವೇಳೆ ಅಂತಹ ನಿತ್ಯಸಂಸಾರಿಗಳು ಮಾತ್ರವೇ ಈ ಲೀಲಾವಿಭೂತಿಯಲ್ಲಿ ನಿಂತುಹೋಗಿ ಎಲ್ಲಾ ಮುಕ್ತಿಹೊಂದಲು ಯೋಗ್ಯರಾದವರು ಮುಕ್ತಿಯನ್ನು ಹೊಂದಿದರೂ, ಆಗಲೂ ಸರ್ವೇಶ್ವರನಿಗೆ ಲೀಲಾವಿಭೂತಿಯಲ್ಲಿ ಏನೂ ಕೆಲಸವಿಲ್ಲದುದರಿಂದ ಈ ಲೀಲಾವಿಭೂತಿಯು ಇದ್ದರೂ ವ್ಯರ್ಥವಾದುದಾಗುತ್ತದೆ. ಆದುದರಿಂದ ಮನುಷ್ಯನು ತಾನು ಮಾಡುವ ಕ್ರೂರ ಕರ್ಮಗಳಿಂದ ಉಪಾಯಾನುಷ್ಠಾನವನ್ನು ಮಾಡದೇ ನಿತ್ಯಸಂಸಾರಿಯಾಗಬಹುದು. "ಯದಿವಾ ರಾವಣಸ್ಸ್ವಯಂ" ಎಂದು ಹೇಳಿರುವಹಾಗೆ ಅಂತಹ ಕ್ರೂರಕರ್ಮಿಯೇ ಈಷತ್ಸುಕೃತ ಮಾಡಿದರೆ, ತನ್ಮೂಲಕ ಪ್ರೀತನಾಗುವ ಶ್ರೀ ಹರಿಯು ಆತನಿಗೂ ಮಾರ್ಗವನ್ನು ತೋರಿಸಿ ರಕ್ಷಿಸುವನೆಂಬುದರಲ್ಲಿ ಸಂದೇಹವಿಲ್ಲವು. ಹೀಗೆ ಹೇಳಿದರೇನೇ ಸ್ವಾಮಿಯ ನಿರ್ಹೇತುಕ ಕೃಪೆಗೆ ನ್ಯೂನತೆ ಇಲ್ಲವಾಗುತ್ತದೆ. ಆತನಿಗೆ ವೈಷಮ್ಯ ನೈರ್ಘೃಣ್ಯರೂಪವಾದ ಅಪವಾದ ಹೊರಿಸಿದ ಹಾಗೂ ಆಗುವದಿಲ್ಲವು.

ಆದುದರಿಂದ ಸ್ವಾಮಿ ದೇಶಿಕರವರು ತಮ್ಮ ಶಾಸ್ತ್ರಸಮ್ಮತವಾದಭಿಪ್ರಾಯವೇನೆಂಬುವದನ್ನು ತಮ್ಮ ನ್ಯಾಯ ಸಿದ್ಧಾಂಜನದಲ್ಲಿ ಸೂಚಿಸಿರುತ್ತಾರೇನೆಂದರೆ, ಈ ಜೀವಾತ್ಮನ ಸ್ವರೂಪವನ್ನಾಲೋಕಿಸಿದರೆ ಆತನು ಸ್ವತಸ್ಸುಖಿಯು, ಉಪಾಧಿವಶದಿಂದ ಸಂಸಾರಪದವಿಯನ್ನು ಹೊಂದುತ್ತಾನೆ. ಆತ್ಮರು ಎರಡು ವಿಧ, ಸಂಸಾರಿ, ಅಸಂಸಾರಿ ಎಂಬದಾಗಿ; ಪುಣ್ಯಪಾಪಗಳ ಸಂಬಂಧವಿರುವವರು ಸಂಸಾರಿಗಳು. ಅವುಗಳ ಸಂಬಂಧವಿಲ್ಲದವರು ಅಸಂಸಾರಿಗಳು (ನಿತ್ಯರೂ ಮುಕ್ತರೂ). ಸಂಸಾರಿಗಳು ಎರಡು ವಿಧವು. ನಿತ್ಯಸಂಸಾರಿಗಳು ಮತ್ತು ಭಾವಿ ಸಂಸಾರ ವಿರಹಿಗಳು. ನಿತ್ಯಸಂಸಾರಿಗಳು ಯಾರೆಂದರೆ, ಈಗ ಸೃಷ್ಟಿ ಮೊದಲುಗೊಂಡು ಈವರೆಗೂ ಮುಕ್ತಿ ಹೊಂದದಿರುವದರಿಂದ ಇದರಂತೆಯೂ ಮುಂದಕ್ಕೂ ಬಹು ಕಾಲ ಹೀಗೆಯೇ ಸಂಸಾರದಶೆಯಲ್ಲಿರುವವರು. ಇಂಥಾವರಿಗೂ ಕೂಡ ಉಪಾಯಾನುಷ್ಠಾನ ಸಂಬಂಧವು ವಿರುದ್ಧವಲ್ಲದುದರಿಂದ ಬಹು ಕಾಲಾನಂತರ ಈಶ್ವರ ಕೃಪೆಯು ಪ್ರಾಪ್ತವಾಗಲು ಅಭ್ಯಂತರವಿಲ್ಲದುದರಿಂದ ಸರ್ವೇಶ್ವರನು ಸರ್ವಲೋಕ ಶರಣ್ಯನೆಂದು ಹೇಳಲ್ಪಡಲು ಏನೊಂದೂ ವಿರೋಧವಿಲ್ಲವು. ಪ್ರಪದನರೂಪ ಉಪಾಯಾನುಷ್ಠಾನಕ್ಕೆ ಸರ್ವಾಧಿಕಾರತ್ವವನ್ನು ಹಿಂದೆಯೇ ಶಾಸ್ತ್ರಮುಖೇನ ಸ್ಥಾಪಿಸಿರು

ಪ್ರದತ್ವ, ಸರ್ವವ್ಯಾಪ್ತಜ್ಞಾನಾನಂದಸ್ವರೂಪತ್ವ, ಲಕ್ಷ್ಮೀಸಹಾಯತ್ವಾದಿಗಳ್ ಪ್ರತಿ ನಿಯುಕ್ತಜ್ಗಳ್.

ಪದರಿಂದ. ಸರ್ವಲೋಕ ಶರಣ್ಯತ್ವವೂ ಸಹ ಸರಸವಾದಭಿಪ್ರಾಯವು. ಭಾವಿ ಸಂಸಾರ ವಿಮುಕ್ತಿಗಳ್ಳರೆಂದರೆ, ಮುಂದೆ ಉಪಾಸನಾನುಷ್ಠಾನ ಮಾಡಿ ಮೋಕ್ಷ ಹೊಂದುವ ಚೇತನರು.

(೧೦) ಸರ್ವಮುಮುಕ್ಷೂಪಾಸ್ಯತ್ವ - ಸಮಸ್ತ ಮೋಕ್ಷಾರ್ಥಿಗಳಿಂದಲೂ ಉಪಾಸಿಸಲ್ಪಡಲು ಯೋಗ್ಯತೆಯು. ಮೋಕ್ಷ ಕೊಡುವ ಶಕ್ತಿ ಇರುವವನನ್ನು ತಾನೇ ಮೋಕ್ಷಾರ್ಥಿಯು ಉಪಾಸಿಸತಕ್ಕದ್ದು. ಈ ಶಕ್ತಿಯು ಚತುರ್ಮುಖ ರುದ್ರಾದಿ ಮೊದಲುಗೊಂಡು ಯಾವ ಜೀವಾತ್ಮರಿಗೂ ಇಲ್ಲದಿರುವ ಧರ್ಮವು. ಆದರೆ ಯೋಗ ರೂಪ ಉಪಾಸನೆಯು ತ್ರೈವರ್ಣಿಕರಿಗೆ ಮಾತ್ರ ಹೇಳಿರುವಾಗ ಸರ್ವ ಮುಮುಕ್ಷೂಪಾಸ್ಯತ್ವ ಹೇಗೆ ಎಂದಾಕ್ಷೇಪಿಸಿದರೆ ಭಕ್ತಿಯೋಗರೂಪ ಉಪಸನಾನುಷ್ಠಾನಾಧಿಕಾರವು ತ್ರೈವರ್ಣಿಕರಿಗೆ ಮಾತ್ರ ಇದ್ದರೂ, ತದಿತರರಿಗೂ ಕೂಡ ಭರನ್ಯಾಸಾನಂತರವೂ ಆತನು ಫಲರೂಪ ಭಕ್ತಿಯ ಮೂಲಕ ಧ್ಯೇಯವಸ್ತುವಾದುದರಿಂದ ಸರ್ವ ಮುಮುಕ್ಷೂಪಾಸ್ಯತ್ವವು ಸಮ್ಮತವಾದದ್ದೆಂಬ ಭಾವವು.

(೧೧) ಸರ್ವಫಲಪ್ರದತ್ವ - ಯಾವಾಗ ಶ್ರಿಯಃಪತಿಯು ಸರ್ವ ಮುಮುಕ್ಷುಗಳಿಂದಲೂ ಉಪಾಸ್ಯನಾದನೋ, ಆಗ ಅವರ ಇಷ್ಟಾರ್ಥಗಳನ್ನೆಲ್ಲಾ ಸಲ್ಲಿಸಲು ಶಕ್ತಿಯುಳ್ಳವನೆಂಬುದು ಪರ್ಯವಸಿತು. ಆದುದರಿಂದ ಆತನಿಗೆ ಸರ್ವ ಫಲಗಳನ್ನೂ ಕೊಡುವ ಶಕ್ತಿಯುಂಟೆಂದು ಹೇಳತಕ್ಕದ್ದು. ಚತುರ್ವಿಧ ಪುರುಷಾರ್ಥಗಳಲ್ಲಿ, ಮೋಕ್ಷವಲ್ಲದ ಇತರ ಮೂರಾದ ಧರ್ಮಾರ್ಥಕಾಮಗಳನ್ನು ಬ್ರಹ್ಮರುದ್ರಾದಿಗಳೂ ಕೊಟ್ಟರೂ, ಸರ್ವೇಶ್ವರನ ಅನುಮತಿ ಮೂಲಕ ಕೊಡುತ್ತಾರೆ. ಮೋಕ್ಷವನ್ನು ಇವರುಗಳು ತಮ್ಮನ್ನು ಕುರಿತು ತಪಸ್ಸು ಮಾಡಿದವರಿಗೆ ಕೊಟ್ಟರೆಂಬ ಯಾವದೊಂದು ಇತಿಹಾಸವೂ ಶಾಸ್ತ್ರದಲ್ಲಿ ಇಲ್ಲವಾದುದರಿಂದ. ಇವರುಗಳಿಗೆ ಆ ಶಕ್ತಿ ಇಲ್ಲವೆಂಬುದು ವ್ಯಕ್ತವು. ಈ ಮೂರು ಪುರುಷಾರ್ಥಗಳೊಂದಿಗೆ ಮೋಕ್ಷವನ್ನೂ ಸಹ ಕೊಡುವ ಶಕ್ತಿಯು ಲಕ್ಷ್ಮೀಪತಿಗೆ ಮಾತ್ರ ಇರುವದರಿಂದ ಆತನೇ ಸರ್ವರಿಂದಲೂ ಉಪಾಸ್ಯನು, ಆತನೇ ಸರ್ವಫಲಪ್ರದನು.

(೧೨) ಸರ್ವವ್ಯಾಪ್ತಜ್ಞಾನಾನಂದಸ್ವರೂಪತ್ವ - ಸಮಸ್ತ ಜಗತ್ತಿನಲ್ಲೂ ವ್ಯಾಪಿಸಲ್ಪಡುವ ಜ್ಞಾನಾನಂದ ಸ್ವರೂಪವುಳ್ಳವನು. ಎಂದರೆ ವಿಭು ಸ್ವರೂಪವುಳ್ಳವನೇ ಸರ್ವಗತತ್ವವು. "ಯಚ್ಚ ಕಿಂಚಿಜ್ಜಗತ್ಯಸ್ಮಿನ್ದೃಶ್ಯತೇ ಶ್ರೂ

ಮುಕ್ತ ಪ್ರತಿನಿಯತ ಧರ್ಮಾಃ

ಮುಕ್ತನುಕ್ಕು ಆಧೇಯತ್ವ, ವಿಧೇಯತ್ವ, ಶೇಷತ್ವಾಣುತ್ವಾದಿಗಳ್ ವ್ಯವಸ್ಥಿತಙ್ಗಳ್.

ಯತೇಪಿವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣಸ್ಥಿತಃ” ಎಂದು ಹೇಳಿರುವ ಹಾಗೆ ಇದು ವಿಭು ಸ್ವರೂಪನು. ಯದ್ಯಪಿ ಜೀವಾತ್ಮನೂ ಜ್ಞಾನಾನಂದ ಸ್ವರೂಪನು. ಆದರೆ ಈತನು ಎಲ್ಲವನ್ನೂ ವ್ಯಾಪಿಸಿಲ್ಲವು. ಆದುದರಿಂದ ಸರ್ವವ್ಯಾಪ್ತಜ್ಞಾನಾನಂದತ್ವವು ಜೀವನಲ್ಲಿಲ್ಲವು. ಆದರೆ ಧರ್ಮಭೂತಜ್ಞಾನ ದ್ವಾರಾ ವ್ಯಾಪನೆಯುಂಟು.

(೧೩) **ಲಕ್ಷ್ಮೀ ಸಹಾಯತ್ವ** - ಲಕ್ಷ್ಮಿಯು ಪತ್ನಿಯಾಗಿ, ಆಕೆಯ ಸಹಾಯವನ್ನು ಆತನ ಎಲ್ಲಾ ವ್ಯಾಪಾರಗಳಲ್ಲೂ ಹೊಂದಿರೋಣವು; ಸರ್ಗಸ್ಥಿತಿಲಯಾದಿ ವ್ಯಾಪಾರಗಳಲ್ಲೂ ಅಂತರ್ಯಾಮಿಯಾಗಿ ಸತ್ತಾಬಾಯಕನಾಗಿರುವಾಗಲೂ ವಿಭವಾವತಾರಿಯಾಗಿ ಅಧರ್ಮೋನ್ಮೂಲನವನ್ನು ಮಾಡಿ ಧರ್ಮಸಂಸ್ಥಾಪನ ಮಾಡುವಾಗಲೂ, ಆಶ್ರಿತ ಪರಿಪಾಲನವನ್ನು ಮಾಡುವಾಗಲೂ, ದುಷ್ಟ ನಿಗ್ರಹ ಮಾಡುವಾಗಲೂ, ಲಕ್ಷ್ಮಿಯು ಸಹಾಯಕಳಾದುದರಿಂದ ಲಕ್ಷ್ಮೀ ಸಹಾಯವನ್ನು ಹೊಂದಿರುವಿಕೆಯು. ಇದು ಇನ್ಯಾರಿಗೂ ಇಲ್ಲವು.

ಇಲ್ಲಿ ಆದಿಗಳ್ ಎಂಬ ಪದದಿಂದ ಭೂನೀಳಾನಾಯಕತ್ವ, ಅನಂತಭೋಗಪರ್ಯಂಕತ್ವ, ಗರುಡಧ್ವಜಾದಿಗಳು ಹೇಳಲ್ಪಟ್ಟವು ಈ ಧರ್ಮಗಳೆಲ್ಲಾ ಸರ್ವೇಶ್ವರನಿಗೆ ಮಾತ್ರ ಪ್ರತಿನಿಯತಙ್ಗಳ್ - ಅಸಾಧಾರಣವಾದ ಧರ್ಮಗಳು. ಈ ಧರ್ಮಗಳು ಭಗವಂತನಲ್ಲದೆ ಇನ್ಯಾರಿಗೂ ಇಲ್ಲವೆಂಬ ಭಾವವು ಪರಮಾತ್ಮನಿಗೆ ಹೇಳಿದ ಈ ಅಸಾಧಾರಣ ಧರ್ಮಗಳು ತನ್ನೊಂದಿಗೆ ಯಾವಾಗಲೂ ಸೇರಿರುವ ಲಕ್ಷ್ಮಿಗೂ ಉಂಟೆಂದು ಭಾವಿಸತಕ್ಕದ್ದು ಆದರೆ ಸರ್ವನಿಯಂತೃತ್ವವು ಲಕ್ಷ್ಮಿಗೆ ಹೇಗೆ ಎಂದರೆ ತನ್ನ ವಾಲ್ಲಭ್ಯಾತಿಶಯದಿಂದ ಪರಮಾತ್ಮನನ್ನು ವಶ ಮಾಡಿಕೊಂಡು ನಿಯಮಿಸಬಲ್ಲಳೆಂದು ಭಾವಿಸಬಹುದು, ಅಥವಾ ಪರಮಾತ್ಮನ ಅನುಮತಿಯಿಂದ ಆತನ ವಿನಾ ಎಲ್ಲವನ್ನೂ ನಿಯಮಿಸುವ ಶಕ್ತಿಯುಳ್ಳವಳೆಂದೂ ಊಹಿಸಬಹುದು ಲಕ್ಷ್ಮಿಗೆ ಅನ್ವಯಿಸುವಾಗ ಲಕ್ಷ್ಮೀಸಹಾಯತ್ವಕ್ಕೆ ಬದಲಾಗಿ ಸರ್ವೇಶ್ವರ ಸಹಾಯತ್ವವೆಂದಿಟ್ಟುಕೊಳ್ಳಬಹುದು. ಹೀಗೆ ಸರ್ವೇಶ್ವರನಿಗೆ ಮಾತ್ರವೇ ಅಸಾಧಾರಣವೆಂದು ವ್ಯವಸ್ಥೆ ಹೊಂದಿದ ಧರ್ಮಗಳನ್ನು ಹೇಳಿ, ಜೀವಾತ್ಮನಿಗೆ ಮಾತ್ರವೇ ಅಸಾಧಾರಣವೆಂದು ವ್ಯವಸ್ಥೆ ಹೊಂದಿದ ಧರ್ಮಗಳನ್ನು ಬೋಧಿಸುತ್ತಾರೆ

ಮುಕ್ತಸ್ಯ ಪುನರಾವರ್ತಿ ಶಂಕಾ ನಿರಾಸಃ.

ಇಪ್ಪಡಿಯಾಗಿಲ್, (೧) "ನಸಂಪದಾಂ ಸಮಾಹಾರೇ ವಿಪದಾಂ

ಮುಕ್ತನಿಗೆ ಮಾತ್ರ ವ್ಯವಸ್ಥಿತವಾದ ಧರ್ಮಗಳು.

ಮುಕ್ತನುಕ್ಕು - ಮುಕ್ತನಿಗೆ (ಜಾತ್ಯೇಕ ವಚನವು.) ಆಧೇಯತ್ವ, ವಿಧೇಯತ್ವ, ಶೇಷತ್ವ, ಆಣುತ್ವ ಮೊದಲಾದವುಗಳು, ವ್ಯವಸ್ಥಿತಙ್ಗಳ್ - ಎಂದರೆ ಸರ್ವೇಶ್ವರನಿಗೆ ಅನ್ವಯಿಸದೆ ಮುಕ್ತನಿಗೆ ಮಾತ್ರ ಏರ್ಪಟ್ಟ ಧರ್ಮಗಳು. ಯಾವಾಗ ಮುಕ್ತನಿಗೇ ಇವುಗಳು ಉಂಟೆಂದು ಹೇಳಲ್ಪಟ್ಟವೋ ಬದ್ಧರಿಗೂ ಉಂಟೆಂಬುವದು ಕೈಮುತಿಕನ್ಯಾಯ ಸಿದ್ಧವು. ಇಲ್ಲಿ ಆದಿ ಶಬ್ದದಿಂದ ವಿಧೇಯತ್ವದಿಂದ ಪ್ರಾಪ್ತವಾದ ಪಾರತಂತ್ರ್ಯವೂ, ರಕ್ಷ್ಯತ್ವವೇ ಮೊದಲಾದವೂ ಸಹ ಹೇಳಲ್ಪಟ್ಟವು. ಆಧೇಯತ್ವ, ವಿಧೇಯತ್ವ, ಶೇಷತ್ವ ಶಬ್ದಗಳ ಅರ್ಥಕ್ಕೆ ಪ್ರಧಾನ ಪ್ರತಿತಂತ್ರಾಧಿಕಾರದ ಪ್ರಥಮಶ್ಲೋಕವನ್ನು ಪರಾಂಬರಿಸತಕ್ಕದ್ದು.

ಮುಕ್ತನಿಗೆ ಪುನರಾವರ್ತಿಯುಂಟಾದೀತೆಂಬ ಶಙ್ಕೆಯಿನ ನಿರಸನವು.

ಒಂದು ವೇಳೆ ಪುನರಾವರ್ತಿಯುಂಟಾದರೆ ಸರ್ವೇಶ್ವರನ ಮೂಲಕವಾಗಿಯಾಗಲಿ ಅಥವಾ ಮುಕ್ತನ ಮೂಲಕವಾಗಿಯಾಗಲಿ ಆಗತಕ್ಕದ್ದಾಗಿದೆ. ಸರ್ವೇಶ್ವರನ ಮೂಲಕವೆಂದರೆ – ಇಲ್ಲವೇ ಆತನ ಸಙ್ಕಲ್ಪಮೂಲಕವಾಗಿ ಮೋಕ್ಷಯಿಷ್ಯಾಮಿ ಎಂದು ಹೇಳಿರುವ ಹಾಗೆ, ಆವರ್ತಯಿಷ್ಯಾಮಿ ಅಥವಾ ನಿವರ್ತಯಿಷ್ಯಾಮಿ ಎಂದು ಸಙ್ಕಲ್ಪಿಸಿ ಈತನಿಗಧೀನನಾದ ಮುಕ್ತನಿಗೆ ಪುನರಾವರ್ತಿಯನ್ನುಂಟುಮಾಡಬೇಕು. ಅಥವಾ ಆತನ ಪ್ರಪತ್ತಿಗಳಿಂದ ಅತೃಪ್ತನಾಗಿ ಪುನರಾವರ್ತಿಯನ್ನುಂಟುಮಾಡಬೇಕು. ಹಾಗೆಯೇ ತನ್ನ ಮೂಲಕವಾಗಿ ಆಗಬಹುದೇ ಎಂದು ವಿಕಲ್ಪಿಸಿದರೆ, ಬೇರೇ ಪುರುಷಾರ್ಥದಲ್ಲಿ ಇಚ್ಛೆಯುಂಟಾಗಿ ಆಗಬಹುದು ಎಂದು ಶಙ್ಕಿಸಬಹುದು. ಅಥವಾ ಆ ಮುಕ್ತನ ಅಜ್ಞಾನದಿಂದ ಹಾಗೆ ಆವರ್ತಿಯನ್ನಪೇಕ್ಷಿಸಬಹುದು. ಹೀಗೆ ನಾಲ್ಕು ವಿಧವಾಗಿ ವಿಕಲ್ಪಿಸುವದರಿಂದ ತೋರುವ ಶಙ್ಕೆಗಳಿಗೂ ಕಾರಣವಿಲ್ಲವೆಂದು ಮುಂದೆ ಉಪಪಾದಿಸುತ್ತಾರೆ. (೧) ಭಗವತ್ಸಂಕಲ್ಪದಿಂದಾಗಲಿ, (೨) ಭಗವದಪ್ರೀತಿಯಿಂದಾಗಲಿ, (೩) ತನ್ನ ಇಚ್ಛಾನುಸಾರವಾಗಲಿ, (೪) ತನ್ನ ಅಜ್ಞಾನ ಮೂಲಕವಾಗಲಿ ಪುನರಾವರ್ತಿಯುಂಟಾಗುವ ಸಂಭವವಿಲ್ಲವೆಂದುಪದೇಶಿಸುತ್ತಾರೆ :—

೧. ವಿ. ಪು.

ವಿನಿವರ್ತನೇ।ಸಮರ್ಥೋ ವಿದ್ಯತೇಕಶ್ಚಿತ್ತ್ರಂವಿನಾ ಪುರುಷೋತ್ತಮಮ್"(೧) ಎಙ್ಗಿರನಿಲ್ಲೈಯಾಯ್, ಸ್ವತಂತ್ರರಲ್ಲಾದ ಮುಕ್ತರುಕ್ಕು ಏದೇನುಮೊರು ಹೇತುವಾಲೆ ಆವೃತ್ತಿಶಙ್ಕೈವಾರಾದೋ ವೆನ್ನಿಲ್? ಅದು ವಾರಾದು. (೧) "ಸಾಯುಜ್ಯಮ್ ಪ್ರತಿಪನ್ನಾಯೇ ತೀವ್ರಭಕ್ತಾ ಸ್ತಪಸ್ವಿನಃ। ಕಿಙ್ಕರಾ

ಇಪ್ಪಡಿಯಾಗಿಲ್-ಹೀಗೆ ಮುಕ್ತನಿಗೆ ಆಧೇಯತ್ವ, ವಿಧೇಯತ್ವ, ಶೇಷತ್ವ ಪಾರತಂತ್ರ್ಯಾದಿಗಳು ವ್ಯವಸ್ಥಿತ ಧರ್ಮಗಳಾದ್ದರಿಂದಲೂ, "**ಸಂಪದಾಂ** - ಸರ್ವ ಸಂಪತ್ತುಗಳ, ಶ್ರೇಯಸ್ಸುಗಳ, **ಸಮಾಹಾರೇ** - ಸೇರಿಸುವವರಲ್ಲೂ, **ವಿಪದಾಂ** - ವಿಪತ್ತುಗಳ, **ವಿನಿವರ್ತನೇ** - ಹೋಗಲಾಡಿಸುವದರಲ್ಲೂ, **ಪುರುಷೋತ್ತಮಂ ವಿನಾ** - ಪುರುಷರಲ್ಲಿ ಸರ್ವಶ್ರೇಷ್ಠನಾದ ಶ್ರಿಯಃಪತಿಯಲ್ಲದೆ, **ಕಶ್ಚಿತ್ ಸಮರ್ಥಃ** - ಯಾವನೊಬ್ಬ ಸಮರ್ಥನೂ, **ನ ವಿದ್ಯತೇ** - ಇರುವದಿಲ್ಲವು" ಎಙ್ಗಿರನಿಲ್ಲೈ**ಯಾಯ್** - ಎನ್ನುವ ಸಿದ್ಧಾಂತಾನುಸಾರವಾಗಿ, **ಸ್ವತಂತ್ರರಲ್ಲಾದ** - ಸ್ವತಂತ್ರ ರಲ್ಲದೆ ಭಗವಂತನಿಗೆ ಸಂಪೂರ್ಣ ಪರತಂತ್ರರಾದ, **ಮುಕ್ತರುಕ್ಕು** - ಮುಕ್ತರಿಗೆ **ಏದೇನುಮೊರು ಹೇತುವಾಲೇ** - ಯಾವುದೋ ಒಂದು ಕಾರಣದಿಂದ, **ಆವೃತ್ತಿ ಶಙ್ಕೈ ವಾರಾದೋ ವೆನ್ನಿಲ್** - ಆವೃತ್ತಿ ಉಂಟೆಂಬ ಶಙ್ಕೆಯು ಉಂಟಾಗ ಲಾರದೋ ಎಂದರೆ, **ಅದುವಾರಾದು** - ಅಂತಹ ಶಂಕೆಯುಂಟಾಗಲು ಕಾರಣ ವಿಲ್ಲವು. ಈ ಚೇತನನು ಮುಕ್ತನಾದ ನಂತರ ಯಾವನಾದರೂ ಒಂದು ಕಾರಣ ದಿಂದ **ಪುನಃ** ಈ ಲೀಲಾವಿಭೂತಿಗೇನೆ ಬರುವ ಸಂದರ್ಭದ ಶಂಕಾ ಉಂಟೇ ಎಂದರೆ ಅಂತಹ ಶಂಕೆಗೆ ಹೇಗೆ ಯೋಚಿಸಿದರೂ ಕಾರಣವೇ ಇಲ್ಲವೆಂದುಪದೇಶಿ ಸುತ್ತಾರೆ. ಈ ಶಂಕಾ ನಾಲ್ಕು ವಿಧವಾಗಿರಬಹುದೆಂದು ಈ ವಾಕ್ಯದ ಅವತಾರಿಕೆ ಯಲ್ಲಿ ತೋರಿಸಿರುತ್ತದೆ. ಶ್ರಿಯಃಪತಿಯು "**ಮೋಕ್ಷಯಿಷ್ಯಾಮಿ ಮಾಶುಚಃ**" ಎಂದು ಲೀಲಾಸಾರಥಿಯಾಗಿ ಹೇಳಿದ ಅಮೋಘವಾದ ಅಮೃತರಸಪ್ರಾಯವಾದ ವಾಕ್ಕಿಗೆ ವಿರೋಧವಾಗಿ ತಾನೇ ಈಗ "**ನಿವರ್ತಯಿಷ್ಯಾಮಿ**" ಎಂದು ಹೇಳಿ ಆವ ರ್ತಿಸಿ ತನ್ನ ಸತ್ಯಸಂಕಲ್ಪತೆಯನ್ನು ಹಾಳುಮಾಡಿಕೊಳ್ಳುವನೇ? ಹಾಗೆ ಎಂದಿಗೂ ಇಲ್ಲವೆಂಬುದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ:—"**ಸಾಯುಜ್ಯಂ ಪ್ರತಿ ಪನ್ನಾಃ** - ಪರಮಪದದಲ್ಲಿ ಪರಮಾತ್ಮ ಸಾಯುಜ್ಯವನ್ನು ಹೊಂದುವವರು. **ತೀವ್ರಭಕ್ತಾಃ**-ಪರಮಭಕ್ತಿಯುಳ್ಳವರಾಗಿ, ಭಕ್ತಿಯೋಗನಿಷ್ಠರಾಗಿ, **ತಪಸ್ವಿನಃ** "**ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ**" ಎಂಬರೆ "ಈ ತಪಸ್ಸು

(೧) ಪರಮ ಸಂಹಿತೆ.

ಮಮತೇ ನಿತ್ಯಂ ಭವಂತಿ ನಿರುಪದ್ರವಾಃ” ಎನ್ರು ತಾನೇ ಅರುಳಿಚ್ಚೆಯ್ ದಾನಿರೇ. ಮುಮುಕ್ಷುದಶೈಯಿಲ್ ಕೇವಲಾಚಿತ್ತೈಯುಮ್, ಕೇವಲ ಚಿತ್ತೈಯುಮ್, ಅನುಭವಿಕ್ಕೈಯಾಗಿರ ಐಶ್ವರ್ಯ ಕೈವಲ್ಯಙ್ಗಳಿಲ್ ವೈರಾಗ್ಯಮ್ ಪಿರನ್ದವಿದು ಮುಕ್ತನುಕ್ಕು ಬ್ರಹ್ಮಾತ್ಮಕಮಾಗ ಸರ್ವತ್ತೈಯುಮ್ ಕಾಣ್ಗೈಯಾಲೇ ಕೇವಲಾನುಭವ ಪ್ರಸಙ್ಗಮಿಲ್ಲಾಮೈಯಾಲುಮ್ ಅನ್ಯ ಪುರುಷಾರ್ಥಾಂತರಙ್ಗಳಿನುಡೈಯ ದೋಷಮೆಲ್ಲಾಮ್ ನಿತ್ಯಪ್ರತ್ಯಕ್ಷಿತಮಾ

ತಪ್ಪ ಇತರ ತಪಸ್ಸುಗಳಿಗಿಂತಲೂ ಮೇಲಾದುದು ಎಂದು ಹೇಳುವರು’ ಎಂದು ಶ್ರುತಿಯು ಹೇಳಿರುವ ಹಾಗೆ ನ್ಯಾಸರೂಪತಪೋನಿಷ್ಠರು, ಯೇ - ಯಾರೋ, ತೇ - ಅವರೂ, ನಿತ್ಯಂ - ಯಾವಾಗಲೂ, ಮಮ ಕಿಙ್ಕರಾಃ - ನನ್ನ ದಾಸಭೂತರಾಗಿ, ನಿರುಪದ್ರವಾಃ - ಏನೊಂದೂ ಕ್ಲೇಶತಾಪಗಳಿಲ್ಲದವರಾಗಿ, ಭವಂತಿ - ಆಗುವರು,” ಎನ್ರುತಾನೇ - ಎಂದು ತಾನೇ, ಅರುಳಿಚ್ಚೆಯ್‌ದಾನಿರೇ - ಹೇಳಿರುವನಷ್ಟೆ. ಇಲ್ಲಿ ನಿತ್ಯಂ ಮಮ ಕಿಙ್ಕರಾಃ ಎಂದು ಹೇಳಿರುವದರಿಂದ, ಸದಾ ಮುಕ್ತದಶೆಯಲ್ಲೇ ಇರುವವರೆಂಬುದು ವ್ಯಕ್ತವು. ಇಲ್ಲಿ ತೀವ್ರಭಕ್ತಾಃ ಎಂಬುದರಿಂದ ಭಕ್ತ್ಯುಪಾಯನಿಷ್ಠರು ಹೇಳಲ್ಪಟ್ಟರು, ತಪಸ್ವಿನಃ - ಎಂಬುದರಿಂದ ಭರನ್ಯಾಸನಿಷ್ಠರು. ಹೀಗೆ ಎರಡು ವಿಧವಾದ ಉಪಾಯಾನುಷ್ಠಾನದಿಂದಲೂ ಮುಕ್ತಿಯನ್ನು ಹೊಂದಿದವರಿಗೆ ಪುನರಾವೃತ್ತಿ ಭಯವಿಲ್ಲವೆಂಬುದು ಮುಖ್ಯತಾತ್ಪರ್ಯವು.

ಮುಂದೆ ತನ್ನ ಇಚ್ಛೆಯಿಂದೇನಾದರೂ ಆವೃತ್ತಿಶಂಕಾ ಉಂಟೋ ಎಂದರೆ ಅದಕ್ಕೆ ಅವಕಾಶವೇ ಇಲ್ಲವೆಂದು ಹೇಳುತ್ತಾರೆ:--ಮುಮುಕ್ಷು ದಶೈಯಿಲ್ - ಮೋಕ್ಷಾರ್ಥಿಯಾಗಿರುವ ಅವಸ್ಥೆಯಲ್ಲಿ, ಕೇವಲಾಚಿತ್ತೈಯುಮ್ - ಅಬ್ರಹ್ಮಾತ್ಮಕವಾಗಿ ಬರೀ ಅಚಿತ್ತನ್ನೂ, ಕೇವಲ ಚಿತ್ತೈಯುಮ್ - ಅಬ್ರಹ್ಮಾತ್ಮಕವಾಗಿ ಚಿತ್ತನ್ನೂ, ಅನುಭವಿಕ್ಕೈಯಾಗಿರ - ಅನುಭವಿಸೋಣವಾಗಿರುವ, ಐಶ್ವರ್ಯ ಕೈವಲ್ಯಗಳಲ್ಲಿ, ವೈರಾಗ್ಯಮ್ - ವಿರಕ್ತಿಭಾವವು, ಆಸೆಯಿಲ್ಲದಿರೋಣವು, ಪಿರನ್ದವಿದು - ಹುಟ್ಟಿದಂಥಾ ಇದು, ಮುಕ್ತನುಕ್ಕು - ಮುಕ್ತನಿಗೆ, ಬ್ರಹ್ಮಾತ್ಮಕಮಾಗ - ಪರಬ್ರಹ್ಮನನ್ನೇ ಆತ್ಮಾವಾಗಿ ಪುಳ್ಳ ಭಾವದಿಂದ, ಸರ್ವತ್ತೈಯುಮ್ ಕಾಣ್ಗೈಯಾಲೇ - ಸಮಸ್ತವನ್ನೂ ಕಾಣುವದರಿಂದ, ಕೇವಲಾನುಭವ ಪ್ರಸಙ್ಗಮಿಲ್ಲಾಮೈಯಾಲುಮ್ - ಬರೀ ಅನುಭವ ಉಂಟಾಯಿತೆಂಬುದು ಇಲ್ಲದುದರಿಂದಲೂ, ಮತ್ತು ಅನ್ಯ ಪುರುಷಾರ್ಥಾಂತರಙ್ಗಳಿನುಡೈಯ - ಆ ಮೋಕ್ಷೇತರ ಪುರುಷಾರ್ಥಗಳಾದ ಐಶ್ವರ್ಯ ಕೈವಲ್ಯಗಳ, ದೋಷಮೆಲ್ಲಾಮ್ - ಎಲ್ಲಾ

ಗೈಯಾಲುಮ್ ಪ್ರತಿಷ್ಠಿತವಾಯಿತ್ತು. ಆಗೈಯಾಲ್ ತನ್ನಿಚ್ಛೈಯಡಿಯಾಗ ಆವೃತ್ತಿ ಶಙ್ಕೈ ಯಿಲ್ಲೈ.

ದೋಷವೂ, **ನಿತ್ಯ ಪ್ರತ್ಯಕ್ಷಿತ ವಾಗೈಯಾಲುಮ್** - ಮುಕ್ತನು ಸರ್ವಜ್ಞತೆಯನ್ನು ಹೊಂದುವದರಿಂದ, ಸದಾ ಪ್ರತ್ಯಕ್ಷವಾಗಿಯೇ ತೋರುವದರಿಂದಲೂ, **ಪ್ರತಿಷ್ಠಿತವಾಯಿತ್ತು** - ಸಿದ್ಧಾಂತಿಸಲ್ಪಟ್ಟಿತು. ಇದಕ್ಕೆ ಕರ್ತೃಪದವು "ಆವೃತ್ತಿ ಶಙ್ಕಾ ನಾರಾದು" ಎಂಬುವದು. ಇದು ಹಿಂದಿನ ವಾಕ್ಯದಲ್ಲಿರುತ್ತದೆ. ಮೋಕ್ಷಾರ್ಥಿಗೆ ಕೇವಲ ಅಚಿದನುಭವರೂಪವಾದ ಐಶ್ವರ್ಯದಲ್ಲೂ, ಕೇವಲ ಚಿದನುಭವರೂಪವಾದ ಕೈವಲ್ಯದಲ್ಲೂ ಮಮತೆ ಇರುವದಿಲ್ಲವು. ಏಕೆಂದರೆ ಆತನಿಗೆ ಇವುಗಳಲ್ಲಿ ವೈರಾಗ್ಯ ಉಂಟಾಗಿರುತ್ತದೆ. ಈ ಪುರುಷಾರ್ಥಗಳು ಅಲ್ಪಾಸ್ಥಿರವಾದುವುಗಳಾದುದರಿಂದ ಆತನಿಗೆ ಈ ಐಶ್ವರ್ಯ ಕೈವಲ್ಯಗಳಲ್ಲಿ ಮಮತೆ ಇರುವದಿಲ್ಲವು. ಮುಮುಕ್ಷುವಿಗೇನೇ ಹೀಗಿರುವಾಗ ಇನ್ನು ಮುಕ್ತನಿಗೆ ಹೇಳತಕ್ಕದ್ದೇನಿರುತ್ತದೆ. ಮುಮುಕ್ಷುವಿಗೆ ಬ್ರಹ್ಮಾತ್ಮಕವೆಂದು ತೋರಬೇಕಿದ್ದರೂ ಕೂಡ ಮುಕ್ತನಿಗೆ ಸ್ವಸ್ವರೂಪಾವಿರ್ಭಾವದೊಡನೆ ಸರ್ವಜ್ಞತೆಯು ಪ್ರಾಪ್ತವಾಗಿ ಸಮಸ್ತವೂ ಬ್ರಹ್ಮಾತ್ಮಕವಾಗಿಯೇ ತೋರುವದರಿಂದ ಮೋಕ್ಷೇತರ ಪುರುಷಾರ್ಥಗಳೆಲ್ಲಾ ಅಸಾರವಾದುವು, ದೋಷಯುಕ್ತವಾದುವೆಂಬುದನ್ನು ಸದಾ ಪ್ರತ್ಯಕ್ಷಿಸುತ್ತಿರುವನು. ಇಂಥಾವನು ನಿರತಿಶಯ ಪರಿಪೂರ್ಣಬ್ರಹ್ಮಾನುಭವದ ಆನಂದವನ್ನು ತ್ಯಜಿಸಿ, ಅಲ್ಪಾಸ್ಥಿರ ಫಲಗಳಿಗಾಗಿ ಪರಮಪದವನ್ನು ಬಿಟ್ಟು ಬರುವನೇ ? ಅದುದರಿಂದ ಆವೃತ್ತಿ ಶಙ್ಕಾವಿಗೆ ಅವಕಾಶವೇ ಇಲ್ಲವೆಂದು ಹೇಳಿದುದು ಸ್ಥಾಪಿತವಾಯಿತೆಂದು ಹೇಳಲ್ಪಟ್ಟಿತು. ಹಾಗೆಯೇ ಶ್ರೀ ಭಾಷ್ಯಕಾರರವರು ಕೊನೆಯ ಸೂತ್ರದ ಭಾಷ್ಯದಲ್ಲಿ ಹೇಳಿರುವದೇನೆಂದರೆ :—ಮುಕ್ತನಿಗೆ ಆವರ್ತಿ ಶಙ್ಕೆಗೆ ಕಾರಣವೇ ಇಲ್ಲವೆಂದು ಉಪಪಾದಿಸಿ, ಆವರ್ತಿ ಶಙ್ಕಾ (೧) ಕರ್ಮಮೂಲಕವಾಗಿಯಾಗಲಿ (೨) ಮುಕ್ತನ ಸ್ವೇಚ್ಛಾಮೂಲಕವಾಗಲಿ (೩) ಭಗವಂತನ ಸಙ್ಕಲ್ಪ ಮೂಲಕವಾಗಲಿ ಪ್ರಾಪ್ತವಾಗಬಹುದೆಂದು ವಿಕಲ್ಪಿಸಿ, ಮೂರರ ಮೂಲಕವೂ ಶಙ್ಕಾವಿಗೆ ಕಾರಣವೇ ಇಲ್ಲವೆಂದುಪಪಾದಿಸಿರುತ್ತಾರೆ ಕರ್ಮದ ವಿಷಯದಲ್ಲಿ ಹೇಳಿರುವದೇನೆಂದರೆ:- "ಉಪಾಸೀನಾನನಾದಿ ಕಾಲ ಪ್ರವೃತ್ತಾನನ್ತದುಸ್ತರ ಕರ್ಮಸಂಚಯರೂಪಾವಿದ್ಯಾಂ ವಿನಿವರ್ತ್ಯ ಸ್ವಯಾಥಾತ್ಮ್ಯಾನುಭವರೂಪಾನವಧಿಕಾತಿಶಯಾನನ್ದಂ ಪ್ರಾಪಯ್ಯ ಪುನಃ ಸಾವರ್ತಯತೀತ್ಯಪಿ ಶಬ್ದಾದೇವಾವಗಮ್ಯತೇ" (ಶಾ ಸೂ. ೪. ೪. ೨೨) ಅನಾದಿಕಾಲದಿಂದ ಅನುಸರಿಸಿ ಬಂದ ಅನಂತಗಳಾಗಿ

ದುಃಖಲೇಶಾಸ್ಪೃಷ್ಟವಾದ ಕರ್ಮಸಮೂಹರೂಪವಾದ ಅವಿದ್ಯೆಯನ್ನು ಹೋಗಲಾಡಿಸಿ ತನ್ನ ನಿಜವಾದ ಅನುಭವರೂಪವಾದ ನಿರವಧಿಕವಾದ ಅತಿಶಯವುಳ್ಳ ಆನಂದವನ್ನುಂಟುಮಾಡಿ ಪುನಃ ಸಂಸಾರರೂಪ ಆವೃತ್ತಿಯನ್ನು ಹೊಂದಿಸುವದಿಲ್ಲವೆಂಬುದು ಶ್ರುತಿವಾಕ್ಯದಿಂದಲೇ ತೋರಿಬರುತ್ತದೆ. ಆ ಶ್ರುತಿ ವಾಕ್ಯವು ಯಾವುದೆಂದರೆ:- "**ಸಖಲ್ವೇವಂ ವರ್ತಯನ್ ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ ನ ಚ ಪುನರಾವರ್ತತೇ**" (ಛಾಂ. ೮-೧೫-೧) ಬ್ರಹ್ಮಪ್ರಾಪ್ತಿಗಾಗಿ ಉಪಾಸನವು ಮರಣವಾಗುವವರೆಗೂ ಮಾಡಬೇಕೆಂಬ ವಿಧಿ ಇರುವದರಿಂದ ಹೀಗೆ ಇರುವವನಾಗಿ ಎಂದರೆ ಆ ಮರಣಾಂತ ಉಪಾಸಿಸುವನಾಗಿ, ಬ್ರಹ್ಮವಿತ್ತಾದವನು ದಿವ್ಯ ವೈಕುಂಠ ಲೋಕವನ್ನು ಹೊಂದುತ್ತಾನೆ, ಆತನಿಗೆ ಪುನರಾವೃತ್ತಿ ಇಲ್ಲವೆಂದು ಹೇಳಿರುತ್ತದೆ. ಹಾಗೆಯೇ ಗೀತೆಯಲ್ಲೂ "**ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಂ । ನಾಪ್ನುವಂತಿ ಮಹಾತ್ಮಾನಸ್ಸಂಸಿದ್ಧಿಂ ಪರಮಾಂ ಗತಾಃ**" ಹೀಗೆ ಬ್ರಹ್ಮವಿತ್ತಾದವರು ನನ್ನನ್ನು ಹೊಂದಿ ಪರಮನಿಶ್ರೇಯಸವನ್ನು ಪಡೆದ ಬಳಿಕ ದುಃಖಕ್ಕೆ ತೌರುಮನೆಯಾಗಿಯೂ ಅಶಾಶ್ವತವಾಗಿಯೂ ಇರುವ ಈ ಪ್ರಕೃತಿ ಮಂಡಲವನ್ನು ಕುರಿತು ಬರುವದಿಲ್ಲವು. ಏಕೆಂದರೆ ಅವರು ಮಹಾತ್ಮಾನಃ, ಮಹತ್ತಾದ ಉತ್ಕೃಷ್ಟವಾದ ಮನಸ್ಸುಳ್ಳವರು ಎಂದರೆ ನನ್ನ ಯಥಾವತ್ತಾದ ಸ್ವರೂಪಜ್ಞಾನವುಳ್ಳವರಾಗಿ ನನಗೆ ಅತಿ ಪ್ರಿಯರಾಗಿ ನಾನಿಲ್ಲದೆ ಶರೀರಧಾರಣೆಯನ್ನು ಹೊಂದದವರಾಗಿ ನನ್ನಲ್ಲೇ ಸಕ್ತವಾದ ಮನಸ್ಸುಳ್ಳವರು. (ಗೀ. ೮. ೧೫.)

(೨) ಮುಕ್ತನ ಸ್ವೇಚ್ಛಾಮೂಲಕವಾಗಿಯೂ ಆವರ್ತಿ ಶಙ್ಕಾವಿಲ್ಲವೆಂದು ಹೇಳುತ್ತಾರೆ:—"**ನಚೋಚ್ಛಿನ್ನ ಕರ್ಮಬಂಧಸ್ಯಾ ಸಙ್ಕುಚಿತಜ್ಞಾನಸ್ಯ ಪರಬ್ರಹ್ಮಾನುಭವೈಕ ಸ್ವಭಾವಸ್ಯ ತದೇಕ ಪ್ರಿಯಸ್ಯಾ ನವಧಿಕಾತಿಶಯಾನನ್ದಂ ಬ್ರಹ್ಮಾನುಭವತಃ ಅನ್ಯಾಪೇಕ್ಷಾ; ತದರ್ಥಾರಮ್ಭಾದ್ಯ ಸಮ್ಭವಾತ್ಪುನರಾವೃತ್ತಿ ಶಙ್ಕಾ**" ಕರ್ಮಬಂಧವು ನಿಶ್ಶೇಷವಾಗಿ ತೊಲಗಿ, ಇವರ ಸಙ್ಕೋಚವಿಲ್ಲದ ಸ್ವಸ್ವರೂಪಾವಿರ್ಭಾವ, ಗುಣಾಷ್ಟಕಗಳ ಪ್ರಾಪ್ತಿ ಉಂಟಾಗಿ, ಪರಬ್ರಹ್ಮಾನುಭವವನ್ನೇ ಮುಖ್ಯ ಸ್ವಭಾವವಾಗಿವುಳ್ಳ, ಪರಮಾತ್ಮನಿಗೆ ಪರಮಪ್ರಿಯಸಖನಾಗಿರುವ ಮುಕ್ತನಿಗೆ, ನಿರವಧಿಕವಾಗಿ ನಿರತಿಶಯವಾದ ಆನನ್ದರೂಪವಾದ ಪರಬ್ರಹ್ಮನನ್ನು ಅನುಭವಿಸುವದಕ್ಕಿಂತಲೂ ಬೇರೇ ವಿಧವಾದಪೇಕ್ಷೆಯು ಎಂದಿಗೂ ಹುಟ್ಟಲಾರದು, ಆದುದರಿಂದ ಪರಮಪದವನ್ನು ಬಿಟ್ಟುಹೋಗುವ ಪ್ರಯತ್ನವು ಅಸಂಭವವಾದುದರಿಂದ, ಈ ವಿಧವಾದ ಪುನರಾವರ್ತಿ ಶಙ್ಕಾವಿಗೂ ಕಾರಣವಿಲ್ಲವು.

(೩) ಪರಮಪುರುಷನ ಸಙ್ಕಲ್ಪ ಮೂಲಕವಾಗಿಯೂ ಆವೃತ್ತಿ ಶಙ್ಕಾವಿಲ್ಲ

ಚಿದಚಿದೀಶ್ವರ ತತ್ವತ್ರಯ ವಿಷಯಮಾಗವುಮ್, ಹೇಯೋಪಾದೇಯ ವಿಷಯಮಾಗವುಮ್, ಮುನ್ಬು ಪಿರನ್ಬು ಜ್ಞಾನಮಿಪ್ಪೋದು

ವೆಂದು ಶ್ರೀ ಭಾಷ್ಯಕಾರರು ತಮ್ಮ ಭಾಷ್ಯದ ಪರಿಸಮಾಪ್ತಿಯಲ್ಲಿ ಉಪದೇಶಿಸಿರುತ್ತಾರೆ. ಹೇಗೆಂದರೆ—**"ನ ಚ ಪರಮಪುರುಷಸ್ಸತ್ಯ ಸಙ್ಕಲ್ಪೋಽತ್ಯರ್ಥ ಪ್ರಿಯಂ ಜ್ಞಾನಿನಂ ಲಬ್ಧ್ವಾ ಕದಾಚಿದಾವರ್ತಯಿಷ್ಯತಿ"** ಆತನು ಸಾಮಾನ್ಯ ಪುರುಷರ ಹಾಗೆ ತನ್ನ ಮನಬಂದಹಾಗೆ ನಡಿಸುವನಲ್ಲವು, ಪರಮಪುರುಷನು **ಸರ್ವೋತ್ಕೃಷ್ಟನು**, ಏನೋ ತನ್ನ ಸಙ್ಕಲ್ಪವನ್ನು ಬದಲಾಯಿಸಲಾರನೋ ಎಂದರೆ ಸತ್ಯಸಙ್ಕಲ್ಪನು, **"ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ"** ಶರಣಾಗತನನ್ನು ಎಂದಿಗೂ ಬಿಡುವದಿಲ್ಲವೆಂದೂ, **"ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ"** ಶರಣಾಗತನಿಗೆ ಅಭಯಪ್ರದಾನ ಮಾಡುವೆನೆಂದೂ, ಸ್ಥಿರಸಙ್ಕಲ್ಪಮಾಡಿದವನೆಂದು ಹೇಳಲು **ಸತ್ಯಸಙ್ಕಲ್ಪಃ** ಎಂದು ಪ್ರಯೋಗಿಸಿರುತ್ತಾರೆ. ತುಂಬಾ ಪ್ರಿಯತಮನನ್ನು ಬಹುಕಾಲಕ್ಕೆ ದಿವ್ಯ ವೈಕುಂಠಕ್ಕೆ ಬರಮಾಡಿಕೊಂಡವನಾಗಿ **"ಸಮಹಾತ್ಮಾಸು ದುರ್ಲಭಃ"** ಅಂತಹ ಮಹಾತ್ಮರು ತನಗೆ ವೈಕುಂಠ ವಾಸಿಗಳಾಗಿ ಸಿಕ್ಕುವದು ಅತಿ ದುರ್ಲಭವೆಂದು ಹೇಳಿ, ಅಂತಹ ಮಹಾತ್ಮನನ್ನು ಪುನಃ ಅಲ್ಲಿಂದ ದಬ್ಬಿಬಿಡುವನೇ ? ಹೀಗೆ ಎಂದಿಗೂ ಇಲ್ಲವು. ಮೂರು ವಿಧವಾದ ಶಙ್ಕೆಗಳೂ ಅಸಂಭವವೆಂದು ತೋರಿಸಿರುತ್ತಾರೆ.

ಇದರಂತೆಯೇ ಶ್ರೀ ದೇಶಿಕರವರೂ ಈ ವಿಧ ಶಙ್ಕಾಗಳಿಗೆ ಕಾರಣವಿಲ್ಲವೆಂದುಪದೇಶಿಸುವರಾಗಿ ಮುಕ್ತನ ಸ್ವೇಚ್ಛಾಮೂಲಕವಾಗಿ ಶಙ್ಕಾ ಅಸಂಭವವೆಂದು ಹೇಳಿದರು. ಆದರೆ ತಾನೇ ಅಪೇಕ್ಷಿಸಿ ಆವರ್ತಿಯನ್ನುಂಟುಮಾಡಿಕೊಳ್ಳದಿದ್ದರೂ ಅಜ್ಞಾನಮೂಲಕವಾಗಲಿ ಆವರ್ತಿಯನ್ನು ಹೊಂದುವನೋ ಎಂದರೆ ಅಂತಹ ಅಜ್ಞಾನದ ಶಙ್ಕೆಗೂ ಅವಕಾಶವಿಲ್ಲವೆಂದು ತಿಳಿಸುತ್ತಾರೆ. **ಚಿದಚಿದೀಶ್ವರ ತತ್ವತ್ರಯ ವಿಷಯಮಾಗವುಮ್** - ಚಿತ್ತು, ಅಚಿತ್ತು ಈಶ್ವರರಾದ ಮೂರು ತತ್ವಗಳ ಯಥಾರ್ಥವಾದ ವಿಷಯದಲ್ಲೂ, **ಹೇಯೋಪಾದೇಯ ವಿಷಯಮಾಗವುಮ್** - ಅಲ್ಪಾಸ್ಥಿರ ಫಲಗಳುಳ್ಳವುಗಳಲ್ಲಿ ಅಭಿರುಚಿಯು ಹೇಯವಾದುದರಿಂದ ತ್ಯಾಜ್ಯವೆಂಬ ಮತ್ತು ಮಹತ್ತಾದ ಶಾಶ್ವತ ಫಲಗಳುಳ್ಳವುಗಳಲ್ಲಿ ಅಭಿರುಚಿಯು ಉಪಾದೇಯವಾದುದರಿಂದ ಗ್ರಾಹ್ಯವೆಂಬ ವಿಷಯದಲ್ಲೂ, **ಮುನ್ಬು** - ಈ ಲೀಲಾ ವಿಭೂತಿಯಲ್ಲಿ ಮುಮುಕ್ಷುವಾದ ಅವಸ್ಥೆಯಲ್ಲಿ, **ಪಿರನ್ಬು** -

ವಿಚ್ಛೇದಸಙ್ಕೋಚಂಗಳಿಲ್ಲಾದ ಪಡಿ ವಿಕಸಿತಮಾಯಿತ್ತು. ಆಗೈಯಾಲ್ ತನ್ ಅಜ್ಞಾನಮಡಿಯಾಗ ಆವೃತ್ತಿ ಶಙ್ಕಿಕ್ಕವೊಣ್ಣಾದು.

ಭಗವದ್ವಿಷಯ ವೈಲಕ್ಷಣ್ಯಜ್ಞಾನತ್ತಾಲೆ ಮುನ್ಬು ಪಿರನ್ದ ಭಕ್ತಿ ಶಬ್ದವಾಚ್ಯಮಾನ ಪ್ರೀತಿರೂಪಾಪನ್ನ ಜ್ಞಾನಮಿಪ್ಪೋದು ಶಾಸ್ತ್ರಙ್ಗಳುಕ್ಕು ನಿಲಮಿಲ್ಲಾದ ಭಗವದ್ವೈಲಕ್ಷಣ್ಯಮೆಲ್ಲಾಮ್ ಪ್ರತ್ಯಕ್ಷಮಾನಪಡಿಯಾಲೆ

ಶಾಸ್ತ್ರಮೂಲಕವಾಗಿಯೂ, ಗುರೂಪದೇಶ ಮೂಲಕವಾಗಿಯೂ, ವಿವೇಕಮೂಲಕವಾಗಿಯೂ ಹುಟ್ಟಿದ, ಜ್ಞಾನವು, ಇಪ್ಪೋದು-ಈ ಮುಕ್ತಾವಸ್ಥೆಯಲ್ಲಿ, ವಿಚ್ಛೇದ ಸಙ್ಕೋಚಗಳಿಲ್ಲಾದ ಪಡಿ - ನಾಶ ಮತ್ತು ಸಙ್ಕೋಚಗಳಿಲ್ಲದ ಹಾಗೆ, ವಿಕಸಿತಮಾಯಿತ್ತು – ವಿಕಾಸವನ್ನು ಹೊಂದಿತು. ಸ್ವಸ್ವರೂಪಾವಿರ್ಭಾವ ಉಂಟಾಗುವದರಿಂದ ಶಾಸ್ತ್ರಾದಿಗಳ ಮೂಲಕ ಉಂಟಾದ ಜ್ಞಾನಕ್ಕೆ ನಾಶವಾಗಲಿ, ನ್ಯೂನತೆಯಾಗಲಿ, ಇಲ್ಲದೆ ಸದಾ ಪ್ರಕಾಶಿಸುವಂಥಾದ್ದಾಗಿರುತ್ತದೆ. ಮುಮುಕ್ಷು ದೆಶೆಯಲ್ಲಿ ಈ ಲೋಕದಲ್ಲಿರುವಾಗ ಜ್ಞಾನಕ್ಕೆ ವಿಚ್ಛೇದ ಹ್ರಾಸವೃದ್ಧಿಗಳುಂಟು. ಮುಕ್ತ ದೆಶೆಯಲ್ಲಿ ಜ್ಞಾನ ತಿರೋಧಾನವಿಲ್ಲದುದರಿಂದ ಸದಾ ಸರ್ವಜ್ಞನಾಗಿರುವನು. ಆಗೈಯಾಲ್-ಆ ಕಾರಣದಿಂದ, ತನ್ ಅಜ್ಞಾನ ಮಡಿಯಾಗ-ತನ್ನ ಅಜ್ಞಾನ ಮೂಲಕವಾಗಿ, ಆವೃತ್ತಿ ಉಂಟಾಗುವದೆಂದು ಶಙ್ಕಿಕ್ಕ ವೊಣ್ಣಾದು - ಶಙ್ಕಿಸ ತಕ್ಕದ್ದಲ್ಲವು. ಮುಕ್ತನಿಗೆ ಅಜ್ಞಾನವಿದ್ದರಲ್ಲವೇ ಆವೃತ್ತಿಯ ಶಙ್ಕೆಯನ್ನು ಆರೋಪಿಸಬಹುದು ಅಜ್ಞಾನಕ್ಕೆ ಕಾರಣವೇ ಇಲ್ಲದಿದ್ದರೆ. ಕಾರಣಾಭಾವೇ ಕಾರ್ಯಾಭಾವಃ ಎಂಬುವಹಾಗೆ, ಆವೃತ್ತಿ ಶಙ್ಕೆಯೇ ಉಂಟಾಗುವದಿಲ್ಲವೆಂಬ ಭಾವವು.

ಮುಂದೆ ಪರಮ ಪುರುಷನ ಸಙ್ಕಲ್ಪ ಮೂಲಕವಾಗಿ ಏನಾದರೂ ಆವೃತ್ತಿಯುಂಟೋ ಎಂಬ ಶಙ್ಕೆಗೆ ಕಾರಣವಿಲ್ಲವೆಂದುಪದೇಶಿಸುತ್ತಾರೆ:—ಭಗವದ್ವಿಷಯ ವೈಲಕ್ಷಣ್ಯಜ್ಞಾನತ್ತಾಲೆ-ಭಗವಂತನ ವಿಷಯವಾದುದು, ಪ್ರಾಕೃತ ವಿಷಯಗಳಿಂದ ವಿಲಕ್ಷಣವಾಗಿ ನಿರತಿಶಯ ಮಹಿಮೆಯುಳ್ಳದು ಎಂಬ ಜ್ಞಾನದಿಂದ, ಮುನ್ಬು ಪಿರನ್ದ - ಮುಕ್ತ ದೆಶೆಗೆ ಮುಂದೆ ಮುಮುಕ್ಷ್ವವಸ್ಥೆಯಲ್ಲುಂಟಾದ, ಭಕ್ತಿ ಶಬ್ದ ವಾಚ್ಯಮಾನ – ಭಕ್ತಿ ಶಬ್ದದಿಂದ ಹೇಳಿಸಿಕೊಳ್ಳುವ, ಪ್ರೀತಿರೂಪಾಪನ್ನ ಜ್ಞಾನಮ್ ಪ್ರೀತಿರೂಪವಾಗಿ ಪರಿಣಮಿಸಿದ ಜ್ಞಾನವು, ಇಪ್ಪೋದು - ಈ ಮುಕ್ತಾವಸ್ಥೆಯಲ್ಲಿ, ಶಾಸ್ತ್ರಙ್ಗಳುಕ್ಕು ನಿಲಮಿಲ್ಲಾದ ಶಾಸ್ತ್ರಗಳಿಗೂ ಕೂಡ ಹೇಳುವದಕ್ಕಾಗಲಿ ಅಥವಾ ತಿಳಿಸುವದಕ್ಕಾಗಲಿ ಸಾಧ್ಯವಲ್ಲದ, ಭಗವದ್ವೈಲಕ್ಷಣ್ಯ

ನಿರತಿಶಯ ಪ್ರೀತಿರೂಪಾಪನ್ನಜ್ಞಾನಮಾಯ್ ತಲೈಕಟ್ಟಿತ್ತು.

ಮೇಲ್ಲಾಮ್ - ಭಗವಂತನ ಅಪ್ರಾಕೃತ ವಿಷಯವೆಲ್ಲವೂ, **ಪ್ರತ್ಯಕ್ಷಮಾನಪಡಿಯಾಲೇ** - ಪ್ರತ್ಯಕ್ಷವಾಗುವದರಿಂದ, **ನಿರತಿಶಯ ಪ್ರೀತಿರೂಪಾಪನ್ನಜ್ಞಾನಮಾಯ್** – ಅತ್ಯಂತಾತಿಶಯವಾದ ಪ್ರೀತಿಯಾಗಿ ಪರಿಣಮಿಸಿದ ಜ್ಞಾನವಾದುದಾಗಿ ಎಂದರೆ ಪರಮಾಭಕ್ತಿ ಎಂದು ಹೇಳಿಸಿಕೊಳ್ಳುವ ಜ್ಞಾನರೂಪವಾಗಿ, **ತಲೈ ಕಟ್ಟಿತ್ತು** - ಸಂಪೂರ್ಣತೆಯನ್ನು ಹೊಂದಿತು. ಶಾಸ್ತ್ರಮೂಲಕವಾಗಿಯಾಗಲಿ, ಗುರೂಪದೇಶಮೂಲಕವಾಗಲಿ ಭಗವಂತನು ಸರ್ವಚಿದಚಿತ್ತುಗಳಿಗಿಂತಲೂ ವಿಲಕ್ಷಣನಾಗಿ, ಪುರುಷೋತ್ತಮನೆಂದು ಪ್ರಥಿತನಾಗಿರುತ್ತಾನೆ. ಅಂತಹ ಭಗವಂತನಿಗೆ ಅಧೀನವಾಗಿ ತನ್ನ **ಸರ್ವಸತ್ತಾಸ್ಥೇಮಪ್ರಯತನ** ಫಲಾದಿಗಳೆಲ್ಲಾ ಇವೆ ಎಂದು ಯಾವಾಗ ಅರಿತನೋ, ಆವಾಗ ಈತನಿಗೆ ಅಂತಹ ಪರನೋಪಕಾರಕನಲ್ಲಿ ಭಕ್ತಿಯುಂಟಾಗುತ್ತದೆ. ಭಕ್ತಿ ಎಂದರೆ **ಸ್ನೇಹರೂಪಮನುಧ್ಯಾನಂ ಭಕ್ತಿರಿತ್ಯಭಿಧೀಯತೇ** ಎಂದು ಹೇಳಿರುವ ಹಾಗೆ ಪ್ರೀತಿರೂಪಾಪನ್ನಜ್ಞಾನವೆಂದು ಇಲ್ಲಿ ಉಪಪಾದಿಸಿರುತ್ತಾರೆ. ಈ ಭಕ್ತಿಯೇ ಉತ್ಕರ್ಷಾವಸ್ಥೆಯನ್ನು ಹೊಂದಿದಾಗ **ಪರಾಭಕ್ತಿಃ** ಎಂದೂ, ಅತ್ಯುತ್ಕರ್ಷಾವಸ್ಥೆಯನ್ನು ಹೊಂದಿದಾಗ **ಪರಮಾಭಕ್ತಿಃ**ಯೆಂದೂ ಹೇಳಿಸಿಕೊಳ್ಳುತ್ತದೆ. (೮೮೫-೮೯ಳನೆಯ ಪುಟಗಳನ್ನು ನೋಡಿ. ಶಾಸ್ತ್ರಗಳಿಗೆ ಪರಮಪುರುಷನ ವೈಲಕ್ಷಣ್ಯವನ್ನು ಚೆನ್ನಾಗಿ ತಿಳಿಸುವ ಶಕ್ತಿಯು ಸಾಲದು; **ಯತೋವಾಚೋ ನಿವರ್ತಂತೇ ಅಪ್ರಾಪ್ಯಮನಸಾ ಸಹ** ಎಂದು ಶ್ರುತಿಯು ಹೇಳುತ್ತದೆ. ಅಥವಾ ಒಂದುವೇಳೆ ಶ್ರುತಿಯು ತಿಳಿಸುವ ಶಕ್ತಿಯುಳ್ಳದ್ದೆಂದು ಒಪ್ಪಿಕೊಂಡರೂ ಅದನ್ನು ಗ್ರಹಿಸುವ ಶಕ್ತಿಯು ನಮಗಿಲ್ಲವು. ಆದುದರಿಂದ ಶಾಸ್ತ್ರಗಳಿಂದ ಭಗವಂತನ ವೈಲಕ್ಷಣ್ಯದ ಮಹಿಮೆಯನ್ನರಿಯುವದು ಸುತರಾಂ ಸಾಧ್ಯವಲ್ಲವು. ಮುಕ್ತದೆಶೆಯಲ್ಲಾದರೋ ಹಾಗಲ್ಲವು. ಪ್ರತ್ಯಕ್ಷದಲ್ಲಿ ಸರ್ವವೂ ವೇದ್ಯವಾಗುವದರಿಂದ, ಭಗವಂತನಲ್ಲಿ ಮುಕ್ತನಿಗುಂಟಾಗುವ ಪ್ರೀತಿಯು ನಿರತಿಶಯವಾದುದೆಂದು ಹೇಳಿರುತ್ತಾರೆ. ಆದುದರಿಂದ ಮುಕ್ತದೆಶೆಯಲ್ಲಿ ಈ ಭಕ್ತಿಯು ಪರಮಾತ್ಮನಿಂದ ವಿಶ್ಲೇಷವನ್ನು ಒಂದು ಕ್ಷಣವಾಗಲಿ ಸಹಿಸದ ಪರಮ ಭಕ್ತಿರೂಪವಾಗಿರುವ ಸರ್ವೋತ್ಕೃಷ್ಟರೂಪವಾದುದು ಆಗುವದರಿಂದ **ತಲೈ ಕಟ್ಟಿತ್ತು** ಎಂದು ಪ್ರಯೋಗಿಸಿರುತ್ತಾರೆ. ಇಂತಹ ನಿರತಿಶಯ ಪ್ರೀತಿಯು ಭಗವಂತನ ವಿಷಯದಲ್ಲಿ ಈ ಮುಕ್ತನಿಗೆ ಉಂಟಾಗಿರುವಾಗ, ಯಾವ ಕಾಲದಲ್ಲೇ ಯಾಗಲಿ ಈ ಮುಕ್ತನಿಗೆ ಭಗವಂತನ ವಿಷಯದಲ್ಲಿ ಅಪ್ರೀತಿ ಎಂಬುವದು **ಪ್ರಾಪ್ತವಾದೀತೇ ? ಎಂದಿಗೂ ಇಲ್ಲವೆಂಬ ಭಾವವು.**

ಇಪ್ಪಡಿ ಇರುಕ್ಕೈಯಾಲೇ (೧) "ಸ ಚ ಮಮಪ್ರಿಯಃ" ಎನ್ರ ಈಶ್ವರನುಡೈಯ ಪ್ರೀತ್ಯತಿಶಯಂ ಅರ್ವತನ್ನಾಲುಮ್ ನಿಯಮಿಕ್ಕ ವೊಣ್ಣಾದಪಡಿ ಕರೈಪುರಣ್ಡು ವನೋಡು ಪರಂಪರಯಾ ಸಂಬಂಧಮುಡೈಯ ತಿಡರ್ ನಿಲಙ್ಗಳಿಲು ಮೇರಿಪ್ಪಾಯುಮ್ಪಡಿಯಾಯಿತ್ತು. ಅಗೈಯಾಲ್ ಕರ್ಮ

ಈ ಮುಕ್ತನಿಗೆ ಆವೃತ್ತಿಯನ್ನುಂಟುಮಾಡಬೇಕೆಂಬ ಭಗವತ್ಸಙ್ಕಲ್ಪ ಉಂಟಾಗಬೇಕಾದರೆ ಮೂರು ಕಾರಣಗಳಿಂದುಂಟಾಗಬಹುದು :—(೧) ಮುಕ್ತನಿಗೇನೇ ಭಗವಂತನಲ್ಲಿ ಅಪ್ರೀತಿಯುಂಟಾಗುವದರ ಮೂಲಕ ಭಗವಂತನು ಈತನನ್ನು ಶಿಕ್ಷಿಸುವದಕ್ಕಾಗಿ ಆವರ್ತಿಸಬಹುದು. ಅಥವಾ (೨) ಭಗವದಾಜ್ಞೆಯನ್ನು ಉಲ್ಲಂಘಿಸೋಣದಿಂದರಾಗಲಿ ಆವರ್ತಿಯನ್ನುಂಟುಮಾಡಬಹುದು. ಅಥವಾ (೩) ಭಗವಂತನಿಗೇನೇ ಮುಕ್ತನಲ್ಲುಂಟಾಗುವ ಅಪ್ರೀತಿಯಿಂದಲಾಗಲಿ ಆಗಬಹುದು. ಮೇಲಿನ ವಾಕ್ಯದಲ್ಲಿ ಮುಕ್ತನಿಗೆ ಶ್ರೀಯಃಪತಿಯಲ್ಲಿ ಸರ್ವೋತ್ಕೃಷ್ಟವಾದ ವಿಶ್ಲೇಷ ದುಸ್ಸಹವಾಗುವಂತಹ ನಿರತಿಶಯ ಪ್ರೀತಿ ಇರುವಾಗ, ಆ ಮುಕ್ತನಿಗೆ ಭಗವಂತನಲ್ಲಿ ಅಪ್ರೀತಿ ಎಂಬುವದು ಅಙ್ಕುರಿಸೀತೇ ? ಎಂದಿಗೂ ಇಲ್ಲವು. ಆದುದರಿಂದ ಪ್ರಥಮ ವಿಕಲ್ಪದ ಶಙ್ಕಾವಿಗೆ ಆಸ್ಪದವಿಲ್ಲವು. ಮುಂದೆ ಆಜ್ಞಾತಿಲಂಘನ ದ್ವಾರಾ ಭಗವತ್ಸಙ್ಕಲ್ಪಮೂಲಕ ಆವೃತ್ತಿಯುಂಟಾದೀತೆಂಬ ಶಙ್ಕೆಗೂ ಕಾರಣ ವಿರುವದಿಲ್ಲವೆಂದುಪದೇಶಿಸುತ್ತಾರೆ.

ಇಪ್ಪಡಿ ಇರುಕ್ಕೈಯಾಲೇ - ಇಂತಹ ವಿಶ್ಲೇಷ ಸಹಿಸದಿರುವ ನಿರತಿಶಯ ಪ್ರೀತಿಯು ಮುಕ್ತನಿಗೆ ಭಗವಂತನಲ್ಲಿರುವದರಿಂದಲೇ, **"ಸ ಚ ಮಮ ಪ್ರಿಯಃ"** ಅವನೂ ಕೂಡ ನನಗೆ ತುಂಬಾ ಪ್ರಿಯನು," **ಎನ್ರ**-ಎಂದು ಹೇಳಿರುವ, ಪ್ರೀತ್ಯತಿಶಯವು, **ಅರ್ವ ತನ್ನಾಲುಮ್** ಆ ಭಗವಂತನಿಂದಲೂ, **ನಿಯಮಿಕ್ಕ ವೊಣ್ಣಾದಪಡಿ** ನಿಯಮಿಸಲು ಸಾಧ್ಯವಿಲ್ಲದಹಾಗೆ, **ಕರೈಪುರಂಡು** ಎಲ್ಲೆಯನ್ನು ಮೀರಿ, **ಇವನೋಡು** - ಈ ಮುಕ್ತನೊಂದಿಗೆ, **ಪರಂಪರಯಾಸಂಬಂಧಮುಡೈಯ**-ಪರಂಪರೆಯಾಗಿ ಸಂಬಂಧವನ್ನು ಹೊಂದಿದ, **ತಿಡರ್ ನಿಲಙ್ಗಳಿಲುಮ್** ಎತ್ತರವಾದ ಪ್ರದೇಶಗಳಲ್ಲೂ, **ಏರಿಪ್ಪಾಯುಮ್ಪಡಿ** - ಹತ್ತಿ ಪ್ರವಹಿಸುವಹಾಗೆ **ಆಯಿತ್ತು** - ಆಗುತ್ತದೆ. ಹಿಂದಿನ ವಾಕ್ಯದಲ್ಲಿ ಮುಕ್ತನಿಗೆ ಸರ್ವೇಶ್ವರನಲ್ಲಿರುವ ಪ್ರೀತ್ಯತಿಶಯವು ಸರ್ವೋತ್ಕೃಷ್ಟವಾದುದಾಗಿ ಸರ್ವೇಶ್ವರನಿಂದ ಒಂದು ಕ್ಷಣಕಾಲ ವಿಶ್ಲೇಷೆಯನ್ನೂ ಕೂಡ ಸಹಿಸನೆಂದು ಹೇಳಲ್ಪಟ್ಟಿತು. ಹೀಗೆ ಸರ್ವೋತ್ಕೃಷ್ಟ

---

(೧) ಗೀ. ೭.೧೭.

ವಾದ ಪ್ರೀತಿಯನ್ನು ತೋರಿದರೆ ಅದಕ್ಕೆ ಬದಲಾಗಿ ಕರುಣಾಸಾಗರನು ಈ ಮುಕ್ತ ನಲ್ಲಿ ಎಂದಿಗಾದರೂ ಅಪ್ರೀತಿಯನ್ನು ತೋರಿಸುವನೇ ? ಶ್ರೀ ಕೃಷ್ಣ ಭಗವಾನ್ ರವರೇ ಹೇಳಿರುವದೇನೆಂದರೆ :—

" ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥ ಮಹಂ ಸ ಚ ಮಮ ಪ್ರಿಯಃ " ॥

ತೇಷಾಂ – ಆ ನಾಲ್ಕು ಜನ ಭಕ್ತರಾದ ಆರ್ತನು, ಜಿಜ್ಞಾಸುವು, ಅರ್ಥಾರ್ಥಿಯು, ಜ್ಞಾನೀ ಇವರುಗಳಲ್ಲಿ ಜ್ಞಾನಿಯಾದವನು ಪರಮಶ್ರೇಷ್ಠನು. ಏಕೆಂದರೆ, ಇನ್ನು ಮೂರು ಜನವು ಹಾಗಲ್ಲದೆ ಜ್ಞಾನಿಯು ಮಾತ್ರ ಏಕಭಕ್ತಿಃ - ನನ್ನೊಬ್ಬನಲ್ಲೇ ಮುಖ್ಯವಾದ ಭಕ್ತಿಯುಳ್ಳವನು. ಆದುದರಿಂದ ವಿಶಿಷ್ಯತೇ – ಇತರರಿಗಿಂತ ವಿಲಕ್ಷಣನು, ಎಂದರೆ ಸಾಧನ ದಶೆಯಲ್ಲೂ ಪ್ರಾಪ್ಯದಶೆಯಲ್ಲೂ ನಿರತಿಶಯ ಪ್ರೇಮರೂಪ ಭಕ್ತಿಯುಳ್ಳವನಾಗಿದ್ದಾನೆಂಬ ಭಾವವು. ಇತರ ಭಕ್ತರಾದರೋ ಹಾಗಲ್ಲವು, ಅವರು ಏಕಭಕ್ತಿಯುಳ್ಳವರಲ್ಲವು. ಏಕೆಂದರೆ ಫಲದಲ್ಲೇ ಅವರಿಗೆ ಮುಖ್ಯ ದೃಷ್ಟಿ, ಪರಮಾತ್ಮನಲ್ಲಿ ಭಕ್ತಿಯು ಸಾಧನರೂಪ ಮಾತ್ರವಾಗಿ ಎಂಬ ಭಾವವು. ಇಷ್ಟೇ ಅಲ್ಲವು. ಆ ಜ್ಞಾನಿಯು **ನಿತ್ಯಯುಕ್ತಃ**-ಸದಾ ಧ್ಯಾನ ಯೋಗಿಯು, ಯಾವಜ್ಜೀವವೂ, ಉಪಾಸಕನು. ಅನಂತರವೂ ಭಕ್ತನು. ಇತರರು ಯೋಗಿಯಾಗಿರುವದು ಫಲಪ್ರಾಪ್ತಿಯವರೆಗೆ ಮಾತ್ರವೇ. ಅನಂತರವಿಲ್ಲವು. ಆದುದರಿಂದ ಅವರು ನಿತ್ಯಯುಕ್ತರಲ್ಲವು. ಆದುದರಿಂದ ಜ್ಞಾನೀ ವಿಶಿಷ್ಯತೇ ಎಂದು ಹೇಳಲ್ಪಟ್ಟಿತು. ಇತರರು ಮೂರುಜನ ಭಕ್ತರೂ ಚ್ಯವನಧರ್ಮವುಳ್ಳವರೆಂದೂ " ಶ್ರುತಿಬುದ್ಧಿಸ್ತು ಮೋಕ್ಷಭಾಕ್ " ಎಂದು ಜ್ಞಾನಿಯು ಮಹಾಪ್ರಾಜ್ಞನೆಂದೂ, ಇನ್ನೊಂದು ಕಡೆಯಲ್ಲೂ ಪ್ರಶಂಶಿಸಲ್ಪಟ್ಟಿರುತ್ತಾನೆ. ಅಹಂ-ನಾನು ಯದ್ಯಪಿ ಸರ್ವಜ್ಞನಾಗಿ ಸರ್ವಶಕ್ತನಾಗಿದ್ದರೂ ಕೂಡ, ಜ್ಞಾನಿಗೆ **ಅತ್ಯರ್ಥಂ**-ಇಷ್ಟೆಂದು ಹೇಳಲಸಾಧ್ಯವಾಗಿ ವಷ್ಟು, ಪ್ರಿಯೋಹಿ-ಆತನಿಗೆ ಪರಮಪ್ರಿಯ ವಸ್ತುವಲ್ಲವೇ ? ಆ ಕಾರಣದಿಂದಲೇ **ಸ ಚ**-ಆ ಪರಮಭಕ್ತನೂ ಕೂಡ, ಅತ್ಯರ್ಥಂ ಮಮ ಪ್ರಿಯಃ-" **ಮಮ ಪ್ರಾಣಾ ಹಿ ಪಾಂಡವಾಃ** " ಎಂದು ನಾನೇ ಇನ್ನೊಂದು ಸಂದರ್ಭದಲ್ಲಿ ಹೇಳಿದ ಹಾಗೆ, ನನಗೆ ಪ್ರಾಣಪ್ರಿಯನು. ಏಕಭಕ್ತಿರ್ವಿಶಿಷ್ಯತೇ ಎಂದು ಹೇಳಲ್ಪಟ್ಟಿತಲ್ಲಾ, ಇದಕ್ಕೇನಾದರೂ ನಿದರ್ಶನವುಂಟೋ ಎಂದರೆ, ಮಹಾ ಪ್ರಾಜ್ಞನಾದ ಆಂಜನೇಯನು ಒಂದು ಒಳ್ಳೇ ನಿದರ್ಶನವೆಂದು ಭಾವಿಸತಕ್ಕದ್ದು. ಆ ಪರಮಭಕ್ತನು ಹೇಳಿಕೊಂಡಿರುವದೇನೆಂದರೆ:—" **ಸ್ನೇಹೋಮೇ ಪರಮೋರಾಜನ್ ತ್ವಯಿ ನಿತ್ಯಂ ಪ್ರತಿಷ್ಠಿತಃ । ಭಕ್ತಿಶ್ಚ ನಿಯತಾವೀರಭಾವೋ ನಾನ್ಯತ್ರ ಗಚ್ಛತಿ** " ಓ ಸರ್ವಜನ **ಚಿತ್ತಾಹ್ಲಾದಕರನಾದ** ಶ್ರೀ ರಾಮನೇ ನಿನ್ನಲ್ಲಿ ನನಗಿರುವ ನಿರತಿಶಯವಾದ

ಮಿಲ್ಲೈಯೇ ಯಾಗಿಲುಮ್ ಸ್ವತಂತ್ರನಾನ ಈಶ್ವರನುಡೈಯ ಇಚ್ಛೈ

ಪ್ರೀತಿಯು ಸದಾ ಶಾಶ್ವತವಾಗಿರುವಂಥಾದ್ದಾಗಿರುತ್ತದೆ. ನಿನ್ನಲ್ಲಿ ಭಕ್ತಿ ಎಂಬುದು ಸ್ವಭಾವಜನ್ಯವಾದುದಾಗಿ ನಿಯತವಾಗಿರುತ್ತದೆ. ನನ್ನ ಮನಸ್ಸು ನಿನ್ನನ್ನು ಬಿಟ್ಟು ಮತ್ತೆಲ್ಲಿಯೂ ಹೋಗುವದಿಲ್ಲವೆಂದು ಹೇಳಿಕೊಂಡಿರುತ್ತಾನೆ. ಶ್ರೀ ಯತಿವರ್ಯರೂ ಒಂದು ಒಳ್ಳೇ ನಿದರ್ಶನವನ್ನು ಪ್ರದರ್ಶಿಸಿರುತ್ತಾರೆ:—"ಸತ್ವಾಸಕ್ತಮತಿಃ ಕೃಷ್ಣೇ ದಶ್ಯಮಾನೋ ಮಹೋರಗೈಃ ನವಿವೇದಾತ್ಮನೋ ಗಾತ್ರಂ ತತ್ಸ್ಮೃತ್ಯಾಹ್ಲಾದ ಸಂಸ್ಥಿತಃ" (ವಿ. ಪು ೧ ೧೭. ೩೯.) ಜ್ಞಾನಿಗಳಲ್ಲಿ ಅಗ್ರೇಸರರಾದ ಪ್ರಹ್ಲಾದರು ಶ್ರೀ ಕೃಷ್ಣನಲ್ಲೇ ಮಗ್ನವಾದ ಮನಸ್ಸುಳ್ಳವರಾದ ಪ್ರಯುಕ್ತ ತನ್ನ ದುಷ್ಟ ಪಿತಾವಿನ ಆಜ್ಞೆಯ ಪ್ರಕಾರ ಘಟಸರ್ಪಗಳಿಂದ ಕಚ್ಚಲ್ಪಟ್ಟರೂ ತನ್ನ ಶರೀರಕ್ಕೆ ವೇದನೆಯುಂಟಾಯಿತೆಂದು ಆ ಪರಮ ಭಾಗವತರರಿಯಲೇ ಇಲ್ಲವು; ಏಕೆಂದರೆ ತತ್ಸ್ಮೃತ್ಯಾಹ್ಲಾದಸಂಸ್ಥಿತಃ, ಎಂದರೆ ಆ ಪರಮಾತ್ಮನನ್ನು ನಿರಂತರ ಸ್ಮರಿಸುವ ಏಕಾಂತಬುದ್ಧಿಯಿಂದುಂಟಾದ ಪರಮ ಸಂತೋಷದಲ್ಲಿ ಮಗ್ನನಾಗಿರುವದರಿಂದ, ಅವರಿಗೆ ಯಾವ ಕ್ಲೇಶವೂ ತೋರಲಿಲ್ಲವು ಇಂತಹ ಪ್ರಹ್ಲಾದರಲ್ಲಿ ಸರ್ವೇಶ್ವರನಿಗಿರುವ ಪ್ರೀತ್ಯತಿಶಯವು ಎಂಥಾದ್ದೆಂಬುದನ್ನು ಸರ್ವೇಶ್ವರನು ಪ್ರಹ್ಲಾದ ಪರಿಪಾಲನವನ್ನು ಮಾಡುವದಕ್ಕಾಗಿ ಒಂದು ವಿಲಕ್ಷಣವಾದ ಅವತಾರ ವಿಶೇಷವನ್ನೇ ಕೈಕೊಂಡನೆಂಬುದು ಎಲ್ಲರಿಗೂ ತಿಳಿದಂಶವೇ ಆಗಿರುತ್ತದೆ. ಈ ಪ್ರೀತ್ಯತಿಶಯವನ್ನು ಒಂದು ಜಲಪ್ರವಾಹಕ್ಕೆ ಹೋಲಿಸಿರುತ್ತಾರೆ. ಪ್ರಬಲ ಪ್ರವಾಹವನ್ನು ಹೇಗೆ ತಡೆಯುವದಶಕ್ಯವಾಗಿ, ಅದು ದಡಗಳನ್ನತಿಕ್ರಮಿಸಿ, ಮೇಲಕ್ಕೆ ಹಾಯ್ದು, ಎತ್ತರ ಪ್ರದೇಶವನ್ನೂ ಕೂಡ ನೀರಿನಲ್ಲಿ ಮುಳುಗುವಹಾಗೆ ಮಾಡುತ್ತದೋ, ಹಾಗೆಯೇ ಸರ್ವೇಶ್ವರನಿಗೆ ಏಕಾಂತಭಕ್ತನಲ್ಲಿರುವ ಪ್ರೀತ್ಯತಿಶಯದ ಪ್ರವಾಹವು, ಪಾಪ ಪ್ರಾಚುರ್ಯದಿಂದ ಸರ್ವೇಶ್ವರನ ಅಂತಹ ಪ್ರೀತ್ಯತಿಶಯಕ್ಕೆ ಅನರ್ಹವಾಗಿದ್ದರೂ, ಅಂಶವುಗಳನ್ನೂ ಸಹ ಹೋಗಲಾಡಿಸುವಹಾಗೆ ಆಕ್ರಮಿಸುತ್ತದೆ ಎಂಬ ಭಾವವು. ಆದುದರಿಂದ ಸ್ವಾಮಿಯು ತಾನೇ ಸ್ವತಂತ್ರಿಸಿ ಅಂತಹ ಮುಕ್ತನನ್ನು ಎಂದಿಗೂ ಆವರ್ತಿಸುವಹಾಗೆ ಮಾಡಲಾರನೆಂದು ಮುಂದೆ ಹೇಳುತ್ತಾರೆ :—ಆಗೈಯಾಲ್ - ಆದುದರಿಂದ ಎಂದರೆ ಅಂತಹ ಮುಕ್ತನಲ್ಲಿ ಸರ್ವೇಶ್ವರನಿಗೆ ನಿರವಧಿಕವಾದ ಪ್ರೀತ್ಯತಿಶಯವು ಸರ್ವದಾ ನಿತ್ಯವಾಗಿರುವದರಿಂದ, **ಕರ್ಮಮಿಲ್ಲೈ ಯೇ ಯಾಗಿಲುಮ್** - ಮುಕ್ತನಲ್ಲಿ ಕರ್ಮಲೇಶವೇನೂ ಇಲ್ಲದಿದ್ದರೂ, **ಸ್ವತಂತ್ರನಾನ ಈಶ್ವರನುಡೈಯ** - ಸ್ವತಂತ್ರನಾದ ಸರ್ವೇಶ್ವರನ,

ಯಾಲೆ ಪುನರಾವರ್ತ್ತಿಯುಣ್ಡಾಗಿರದೋ ವೆನ್ರು ಶಙ್ಕಿಕ್ಕವೊಣ್ಣಾದು. ಶಾಸ್ತ್ರವಶ್ಯಾಧಿಕಾರಮ್ ಕಳಿಗೈಯಾಲೇ ಮುಕ್ತ ದಶೈಯಿಲ್ ಆಜ್ಞಾತಿಲಂಘನಮಿಲ್ಲೈ. ಅವನುಕಪ್ಪಾಲೇ (ಪ್ಪೇ) ತನಕ್ಕು ಕಪ್ಪಾಗೈಯಾಲೇ

ಇಚ್ಛೈಯಾಲೆ - ಇಷ್ಟಪ್ರಕಾರ, **ಪುನರಾವೃತ್ತಿಯುಂಡಾಗಿರದೋ ವೆನ್ರು** - ಪುನರಾವೃತ್ತಿ ಏನಾದರೂ ಸಂಭವಿಸೀತೋ ಎಂದು, **ಶಙ್ಕಿಕ್ಕವೊಣ್ಣಾದು** - ಶಙ್ಕಿಸಲು ಸಾಧ್ಯವಿಲ್ಲವು. ಏಕೆಂದರೆ ಮುಂದಿನ ವಾಕ್ಯದಿಂದ ಕಾರಣವನ್ನು ಹೇಳುತ್ತಾರೆ. **ಶಾಸ್ತ್ರವಶ್ಯಾಧಿಕಾರಮ್** - ಸ್ವಾಮಿಯು ವೇದರೂಪದಲ್ಲಿ ದಯ ಪಾಲಿಸಿರುವ ವಿಧಿ ನಿಷೇಧವಾಕ್ಯಗಳಿಗೆ ವಶವಾಗಿರುವ ಅಧಿಕಾರವು, **ಕಳಿಗೈಯಾಲೆ** - ಮುಕ್ತದೆಶೆಯಲ್ಲಿ ಕಳೆದುಹೋಗುವದರಿಂದ, **ಮುಕ್ತದಶೈಯಿಲ್, ಆಜ್ಞಾತಿಲಂಘನಮಿಲ್ಲೈ** - ಭಗವದಾಜ್ಞೆಯನ್ನು ಮೀರಿ ನಡೆಯುವ ಸಂಭವವೇ ಇಲ್ಲವು. ಭಗವಂತನು ಏನೊಂದೂ ಕಾರಣವಿಲ್ಲದೆ, ತನ್ನನ್ನು ಪರಮಭಕ್ತಿಯಿಂದ ಬಂದು ಸೇರಿದವನನ್ನು ಕೈಬಿಟ್ಟು ತನ್ನ ಪರಮ ಪದದಿಂದ ತಳ್ಳಿಸಿ ಬಿಡುವದಿಲ್ಲವು. ಈಗಿನ ಮದಾಂಧರಾದ ಅಧಿಕಾರಿಗಳ ಹಾಗೆ ಭಗವಂತನಲ್ಲವು. ತಾನು ಸ್ವತಂತ್ರನಾದರೂ ಮಾರ್ಗತಪ್ಪಿ ಎಂದಿಗೂ ನಡೆಯುವನಲ್ಲವು. ತಾನು ಮಾಡಿದ ವಿಧಿ ನಿಷೇಧ ವಾಕ್ಯಗಳಿಗೆ ಕಟ್ಟುಬಿದ್ದೇ ಎಲ್ಲವನ್ನೂ ನಡೆಸುವನು. ಭಗವಂತನು ಲೋಕಾಪವಾದಕ್ಕೆ ಎಂದಿಗೂ ಸಿಕ್ಕುವನಲ್ಲವು. ಶ್ರೀರಾಮನೇ ಇದಕ್ಕೆ ನಿದರ್ಶನವು. ಸ್ಯಮಂತಕೋಪಾಖ್ಯಾನವು ಇದನ್ನೇ ಸಮರ್ಥಿಸುತ್ತದೆ. ತನ್ನ ಮನಬಂದಂತೆ ನಡೆಸಿದುದಾದರೆ ಆತನಿಗೆ ವೈಷಮ್ಯ ನೈರ್ಘೃಣ್ಯಾದಿಗಳು ಸಂಭವಿಸುತ್ತವೆ. ಆವರ್ತ್ತಿಯುಂಟಾಗುವದಕ್ಕೆ ಭಗವದಪ್ರೀತಿಯುಂಟಾಗಬೇಕು. ಭಗವದಪ್ರೀತಿಯುಂಟಾಗಲು ಮುಕ್ತನು ಆಜ್ಞಾತಿಲಂಘನವನ್ನು ಮಾಡಬೇಕು. ಹಿಂದಿನ ಪಾಪಶೇಷದಿಂದಲೇನಾದರೂ ಭಗವಂತನಿಗೆ ಅಪ್ರೀತಿಯೋ ಎಂದರೆ ಪಾಪವೆಲ್ಲಾ ಕಳೆದುಹೋಗಿರುತ್ತದೆ. ಆಗಲಿ, ಪರಮಪದದಲ್ಲೇ ಈ ಮುಕ್ತನು ಏಕೆ ಆಜ್ಞಾತಿಲಂಘನವನ್ನು ಮಾಡಕೂಡದು ? "ಶ್ರುತಿಸ್ಸ್ಮೃತಿರ್ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ವರ್ತತೇ । ಆಜ್ಞಾಚ್ಛೇದೀ ಮಮದ್ರೋಹೀ ಮದ್ಭಕ್ತೋಽಪಿ ನ ವೈಷ್ಣವಃ" ಎಂದು ಹೇಳಿರುವಹಾಗೆ ಆಜ್ಞೋಲ್ಲಂಘನವನ್ನು ಏಕೆ ಮಾಡಕೂಡದು ? ಎಂದರೆ, ಈ ಚೇತನನಿಗೆ ಜ್ಞಾನವು ಸಂಕೋಚವನ್ನು ಹೊಂದಿರುವಾಗಷ್ಟೇ ಶಾಸ್ತ್ರದ ಅವಶ್ಯಕತೆಯು ; ಯಾವಾಗ ಜ್ಞಾನವು ವಿಕಾಸವನ್ನು ಹೊಂದಿತೋ, ಆಗ ಉಂಟಾದ ಸರ್ವ

ಈಶ್ವರಾಭಿಮತತ್ತುಕ್ಕು ವಿಪರೀತಮಾನವನುಷ್ಠಾನಮಿಲ್ಲೈ. ಅಗ್ಗೈಯಾಲ್ ಕೈಙ್ಕರ್ಯ ಪರ್ಯಂತ ಪರಿಪೂರ್ಣ ಬ್ರಹ್ಮಾನುಭವರೂಪಮಾನ ಮೋಕ್ಷಾಖ್ಯ ಪುರುಷಾರ್ಥಮ್ ಮೇಲೆ ಯಾವದಾತ್ಮಭಾವಿಯಾಯಿತ್ತು. ಇನ್ನೈ ಎಲ್ಲಾ

ಸಾಕ್ಷಾತ್ಕಾರರೂಪವಾದ ಪ್ರತ್ಯಕ್ಷಜ್ಞಾನದಿಂದ ಪ್ರತಿಕೂಲಾಚರಣೆಯು ಈಷದಪಿ ಇರುವದಿಲ್ಲವು. ಆದುದರಿಂದ ಆಗ ಶಾಸ್ತ್ರಗಳು ಬೇಕಿಲ್ಲವು. ಈತನಿಗೆ ಆಗ ಶಾಸ್ತ್ರವಶ್ಯಾಧಿಕಾರವು ಕಳೆಯಿತೆಂದು ಹೇಳಲ್ಪಟ್ಟಿರುತ್ತದೆ. ಹೀಗೆ ಪರಮಭಕ್ತಿಯಿಂದ ವರ್ತಿಸುವವನಾದುದರಿಂದ ಆಜ್ಞಾತಿಲಂಘನ ಪ್ರವರ್ತನೆಗೆ ಕಾರಣವೇ ಇಲ್ಲವು. ಏಕೆಂದರೆ ಯಾವಾಗಲೂ ಮುಕ್ತನು ಸರ್ವೇಶ್ವರನ ಪ್ರಸನ್ನತೆಯನ್ನೇ ಎದುರು ನೋಡುವವನಾಗಿ ಆತನಿಗೆ ಸದಾ ಕೈಙ್ಕರ್ಯಗಳನ್ನೆಸಗುವದರಲ್ಲೇ ನಿರತನಾಗಿರುವವನು. ಆದುದರಿಂದ ಸರ್ವೇಶ್ವರನ ಅಭಿಮತವೇ ತನ್ನ ಅಭಿಮತವೆಂದು ಮುಕ್ತನು ವರ್ತಿಸುವನೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ:—**ಅನನುಕಷ್ಪಾಲೇ** - ಶ್ರಿಯಃಪತಿಯು ಪ್ರೀತಿಯನ್ನು ಹೊಂದುವದರಿಂದ, **ತನಕ್ಕುಕಷ್ಪಾಗ್ಗೈಯಾಲ್** - ಮುಕ್ತನಾದ ತನಗೂ ಪ್ರೀತಿಯುಂಟಾಗುವದರಿಂದ, **ಈಶ್ವರಾಭಿಮತತ್ತುಕ್ಕು** - ಆ ಸರ್ವೇಶ್ವರನ ಇಷ್ಟಕ್ಕೆ, **ವಿಪರೀತಮಾನ** - ವಿರುದ್ಧವಾದ, ವ್ಯತ್ಯಸ್ತವಾದ, **ಅನುಷ್ಠಾನಮಿಲ್ಲೈ** - ಆಚರಣೆಯಿಲ್ಲವು.

ಹೀಗೆ ಸರ್ವ ವಿಧ ಆವೃತ್ತಿ ಶಙ್ಕೆಗಳನ್ನೂ **ಪೂರ್ವಪಕ್ಷರೀತ್ಯಾ** ಅನುವಾದ ಮಾಡಿ, ಆ ಶಙ್ಕೆಗಳಿಗೆ ಕಾರಣವೇ ಇಲ್ಲವೆಂದು ಸಿದ್ಧಾನ್ತಿಸಿ ಉಪಪಾದನೆ ಮಾಡಿದುದರಿಂದ ಆ ಪರಿಪೂರ್ಣಬ್ರಹ್ಮಾನುಭವವು ಶಾಶ್ವತವಾದುದೆಂದು ಮುಗಿಸುತ್ತಾರೆ:—**ಅಗ್ಗೈಯಾಲ್** - ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ ಯಾವ ವಿಧ ಪುನರಾವೃತ್ತಿ ಶಙ್ಕೆಗೂ ಕಾರಣವೇ ಇಲ್ಲದುದರಿಂದ, **ಕೈಙ್ಕರ್ಯಪರ್ಯಂತ** - ಶ್ರಿಯಃಪತಿಯು ಅಭಿಮತಾನುಸಾರ ಎಲ್ಲಾ ಕೈಙ್ಕರ್ಯವನ್ನು ಮಾಡುವ ಪರ್ಯಂತವಾದ, ಪರಿಪೂರ್ಣಬ್ರಹ್ಮಾನುಭವರೂಪವಾದ, **ಮೋಕ್ಷಾಖ್ಯಪುರುಷಾರ್ಥಂ** - ಮೋಕ್ಷವೆಂದು ಹೇಳಿಸಿಕೊಳ್ಳುವ ಪುರುಷಾರ್ಥವು, **ಮೇಲ್** - ಅರ್ಚಿರಾದಿ ಮಾರ್ಗಮೂಲಕ ಪ್ರಾಪ್ಯವನ್ನು ಪರಮಪದದಲ್ಲಿ ಹೊಂದಿದ ನಂತರ, **ಯಾವದಾತ್ಮಭಾವಿಯಾಯಿತ್ತು** - ಆತ್ಮಾ ಹೇಗೆ ನಿತ್ಯವೋ ಶಾಶ್ವತವೋ ಹಾಗೆಯೇ ಶಾಶ್ವತವಾದುದು ಎಂಬ ಭಾವವು. ಮುಕ್ತನಿಗೆ ಉಂಟಾಗುವ ಮೋಕ್ಷವೆಂಬ ಪುರುಷಾರ್ಥವು ಎಂಥಾದ್ದೆಂಬುದಕ್ಕೆ ಈ ವಾಕ್ಯದಲ್ಲಿ ಕೈಙ್ಕರ್ಯಪರ್ಯಂತ ಪರಿಪೂರ್ಣ ಬ್ರಹ್ಮಾನುಭವನೆಂದು ಹೇಳಿರುತ್ತಾರೆ. ಆದರೆ ಕೆಲವರು ಭಕ್ತ್ಯುಪಾಯನಿಷ

ತ್ತೈಯುಮ್ ನಿನೈತ್ತು (೧) "ಅನಾವೃತ್ತಿಶ್ಶಬ್ದಾತ್, ಅನಾವೃತ್ತಿಶ್ಶಬ್ದಾತ್" ಎನ್ರು ಸೂತ್ರಕಾರರು ಮರುಳಿಚ್ಚೆಯ್‌ದಾರ್.

ನಿಗೆ ಪರಿಪೂರ್ಣಬ್ರಹ್ಮಾನುಭವವೂ, ಪ್ರಪತ್ತಿನಿಷ್ಠನಿಗೆ ಕೈಙ್ಕರ್ಯ ಮಾತ್ರವೂ ಪ್ರಾಪ್ತಿಯಾಗುತ್ತದೆಂದು ಹೇಳುವರು. ಈ ಅಭಿಪ್ರಾಯವು ಸರಿಯಲ್ಲವೆಂದು ತಿಳಿಸುವದಕ್ಕಾಗಿಯೂ ಮೋಕ್ಷದೆಶೆಯಲ್ಲಿ ಎರಡೂ ಪ್ರಾಪ್ತವಾಗುತ್ತದೆಂದು ಹೇಳುವದಕ್ಕಾಗಿ ಕೈಙ್ಕರ್ಯ ಪರ್ಯಂತ ಎಂಬ ಪ್ರಯೋಗವು.

ತಾವು ಮೇಲೆ ಉಪಪಾದಿಸಿದ ಶಙ್ಕಾಗಳಿಗೂ ತನ್ನಿರಸನಗಳಿಗೂ ಶಾಸ್ತ್ರಾಧಾರ ಉಂಟೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ—**ಇವೈ ಯೆಲ್ಲಾತ್ತೈಯುಮ್**- ಈ ಶಙ್ಕಾಗಳನ್ನೂ, ಅವುಗಳ ನಿರಸನಗಳನ್ನೂ, **ನಿನೈತ್ತು** - ಮನಸ್ಸಿನಲ್ಲಿಟ್ಟು **"ಅನಾವೃತ್ತಿಶ್ಶಬ್ದಾತ್, ಅನಾವೃತ್ತಿಶ್ಶಬ್ದಾತ್"** ಎಂಬ ಕೊನೆಯ ಸೂತ್ರದಲ್ಲಿ, **ಸೂತ್ರಕಾರರುಮ್** - ಬಾದರಾಯಣರೂ ವ್ಯಾಸಮಹರ್ಷಿಯೂ, **ಅರುಳಿಚ್ಚೆಯ್‌ದಾರ್** ಕೃಪಯಾ ಉಪದೇಶಿಸಿರುತ್ತಾರೆ. ಶ್ರೀ ಬಾದರಾಯಣರು ಈ ಎಲ್ಲಾ ಶಙ್ಕಾಗಳಿಗೂ ಸಮಾಧಾನವಾಗಿ ಮುಕ್ತನಿಗೆ ಎಂದಿಗೂ **ಅನಾವೃತ್ತಿಃ** - ಆವೃತ್ತಿ ಇಲ್ಲವು, ಪುನಃ ಶರೀರವನ್ನೆತ್ತಿ ಈ ಲೀಲಾವಿಭೂತಿಯಲ್ಲಿ ಜನಿಸುವದಿಲ್ಲವು. ಏಕೆಂದರೆ, **ಶಬ್ದಾತ್** - ಶ್ರುತಿಯಲ್ಲಿ ಹಾಗೆ ಹೇಳಿರುತ್ತದೆ. ಎಲ್ಲಿ ಹಾಗೆ ಹೇಳಿರುತ್ತದೆ ಎಂದರೆ, ಛಾಂದೋಗ್ಯೋಪನಿಷತ್ತಿನ ಉಪಸಂಹಾರ ವಾಕ್ಯವಾದ **"ಸಖಲ್ವೇವಂ ವರ್ತಯನ್ಯಾವದಾಯುಷಂ, ಬ್ರಹ್ಮಲೋಕ ಮಭಿಸಂಪದ್ಯತೇ ನ ಚ ಪುನರಾವರ್ತತೇ ನ ಚ ಪುನರಾವರ್ತತೇ"** ಎಂಬಲ್ಲಿ ಹೇಳಿರುತ್ತದೆ. ಈ ಶಙ್ಕಾಗಳನ್ನೂ, ಅವುಗಳನ್ನು ಖಂಡಿಸಿ ಸಿದ್ಧಾನ್ತವನ್ನೂ, ಶ್ರೀ ಭಾಷ್ಯಕಾರರು ಚೆನ್ನಾಗಿ ತಾವು ಅನುಗ್ರಹಿಸಿದ ಶ್ರೀ ಭಾಷ್ಯದಲ್ಲಿ ಉಪದೇಶಿಸಿರುವಾಗ ಅದನ್ನು ತಿಳಿಸದೆ ಶ್ರೀ ವ್ಯಾಸಸೂತ್ರವನ್ನು ಮಾತ್ರ ತಿಳಿಸಿರುವದಕ್ಕೆ ಕಾರಣವೇನೆಂದು ಪ್ರಶ್ನಿಸಬಹುದು. ವ್ಯಾಸಸೂತ್ರವನ್ನು ಯಾವಾಗ ಉದಾಹರಿಸಿದರೋ, ಆ ವ್ಯಾಸ ಸೂತ್ರಗಳಿಗೆ ಶ್ರೀ ಭಾಷ್ಯವನ್ನು ನಮ್ಮ ಸಿದ್ಧಾನ್ತರೀತ್ಯಾ ಅನುಗ್ರಹಿಸಿರುವವರು ಶ್ರೀ ಯತಿವರ್ಯರಾಗಿ, ಅದು ಎಲ್ಲರಿಗೂ ವೇದ್ಯವಾದ ವಿಷಯವಾದುದರಿಂದ, ಅಂತಹ ವಿಷಯವನ್ನು ಹೇಳುವದು ಅನಾವಶ್ಯಕವಾದುದರಿಂದ ಹೇಳಲಿಲ್ಲವು. ಶ್ರೀ ದೇಶಿಕರವರು ತಾವು ಬರೆದಿರುವದೆಲ್ಲಾ ಶ್ರೀ ಭಾಷ್ಯಕಾರರು ಸಂಕ್ಷೇಪವಾಗಿ

---

(೧) ಶಾ. ಸೂ. ೪. ೪. ೨೨.

ಏರಿ ಎಳಿಲ್‌ಪದನೆಲ್ಲಾ ವುಯುರ್‌ಕ್ಕು ಮಿತಮುಕಕ್ಕುಮ್ ।
ನಾರು ತುಳಾಯ್‌ಮುಡಿ ನಾಥನೈ ನಣ್ಣಿಯಡಿಮೈ ಯಿನಮ್ ।
ಕೊರು ಕವರ್‌ನದಕುರುಕ್ಕಳ್ ಕುಳಾಜ್ಗಳ್ ಕುರೈ ಕಳರ್ ಕೀಳ್ ।
ಮಾರುದಲಿನ್ರಿ ಮಕಿಳ್‌ನ್ದೆಳುಮ್ ಪೋಗತ್ತುಮನ್ನುವಮೇ ॥೨೯॥

ಬರೆದುದರ ಉಪಪಾದನವೇಂದೇ ಹೇಳಿಕೊಂಡಿರುತ್ತಾರೆ. ಆದುದರಿಂದ ಶ್ರೀ ಭಾಷ್ಯದ ಉಪಕ್ರಮಿಯನ್ನು ಇಲ್ಲಿ ಸ್ಮರಿಸಲಿಲ್ಲವೆಂದು ಹೇಳಲಾಗುವದಿಲ್ಲವು. ಈ ಪ್ರಕರಣದಲ್ಲಿ ಶ್ರೀ ಭಾಷ್ಯಾಭಿಪ್ರಾಯವೇನೆಂಬುವದಕ್ಕೆ ಹಿಂದೆ ೧೨೧-೨೩ ನೆಯ ಪುಟಗಳನ್ನು ಪರಾಂಬರಿಸತಕ್ಕದ್ದು. ಅದೂ ಅಲ್ಲದೆ ಶ್ರೀ ವ್ಯಾಸಸೂತ್ರದಿಂದುಂಟಾದ ಮಹದುಪದೇಶಕ್ಕೆ ಶ್ರೀ ಭಾಷ್ಯಕಾರರು ಪ್ರಥಮೋಪಕಾರಕರಾದರೂ, ಶ್ರೀ ಭಾಷ್ಯಕಾರರಿಂದಲೇ ಉಪದೇಶಿಸಲ್ಪಟ್ಟ ಭಾಷ್ಯಾರ್ಥಗಳ ಉಪಪಾದನೆಯನ್ನು ಪರಂಪರಯಾ ಒದಗಿಸಿಕೊಟ್ಟ ಶ್ರೀ ಸುದರ್ಶನ ಭಟ್ಟರು, ನಡಾದೂರಮ್ಮಾಳ್, ಶ್ರೀ ವಾದಿ ಹರಿಹಾಂಬುವಾಹರೇ ಮೊದಲಾದ ಪೂರ್ವಾಚಾರ್ಯರುಗಳನ್ನೂ ಸ್ಮರಿಸಿದವರಾಗಿ, ಮುಂದಿನ ಅಧಿಕಾರ ಸಂಗ್ರಹರೂಪವಾದ ಗಾಥಾಶ್ಲೋಕದಿಂದ ಪರಿಪೂರ್ಣಬ್ರಹ್ಮಾನುಭವವು—ಗುಣವಿಗ್ರಹ ವಿಭೂತ್ಯಾದಿ ವಿಶಿಷ್ಟನಾದ ಪರಬ್ರಹ್ಮನೇ ಪರಮಭೋಗ್ಯವೆಂಬನುಭವವೂ, ಮತ್ತು ಅದರ ಪರೀವಾಹವಾಗಿ ಆತನಿಗೆ ಸರ್ವವಿಧ ಕೈಂಕರ್ಯ ಮಾಡೋಣವೂ, ಮತ್ತು ಅದರಲ್ಲಿ ನಿರತಿಶಯ ಪ್ರೀತಿಯೂ ಎಂದೂ, ಅದಕ್ಕೆ ಎಂದಿಗೂ ಚ್ಯುತಿ ಇಲ್ಲದಿರುವದರಿಂದ ಶಾಶ್ವತವಾದುದೆಂದೂ ಹೇಳುವದರೊಂದಿಗೆ, ಅಲ್ಲಿಯೂ ಕೂಡ ಭಗವತ್ಕೈಂಕರ್ಯವೂ ಇಂತಹ ಆಚಾರ್ಯರ ಕೈಂಕರ್ಯ ಪರ್ಯಂತವಾದುದೆಂದು ತಿಳಿಸುತ್ತಾರೆ :—

ಅರ್ಥ - ಎಳಿಲ್‌ಪದಂ - ಸರ್ವಾಭೀಷ್ಟವರ್ಧಕನಾದ ಸ್ಥಾನವು ಎಂದರೆ ಪರಮಪದವನ್ನು, ಏರಿ - ಅರ್ಚಿರಾದಿಗತಿಯ ಮೂಲಕ ಆರೋಹಣಮಾಡಿ, ಹತ್ತಿ, ಎಲ್ಲಾ ಉಯಿರ್‌ಕ್ಕುಮ್ - ಎಲ್ಲಾ ಚೇತನರಿಗೂ, ಯಿತಮುಕಕ್ಕುಮ್ - ಪರಮಹಿತವನ್ನು ದಯಪಾಲಿಸುವನಾದ, ನಾರು ತುಳಾಯ್ ಮುಡಿ ನಾಥನೈ - ಸುಗಂಧವುಳ್ಳ ತುಳಸಿಯ ಮಾಲೆಯನ್ನು ಕಿರೀಟದಲ್ಲಿ ಧರಿಸಿರುವ ಸ್ವಾಮಿಯನ್ನು, ನಣ್ಣಿ - ಸಮೀಪಿಸಿ, ಸೇರಿ, ಅಡಿಮೈಯಿಲ್ - ಕೈಂಕರ್ಯದಲ್ಲಿ, ನಮ್ ಕೂರು ಕವರ್‌ನ್ದ - ನಮಗೆ ಸೇರಿದ ಅಂಶವನ್ನು ಎಂದರೆ ಇಷ್ಟು ದಿನವೂ ಅನುಭವಿಸದೇ ಬಿಟ್ಟು ಹೋದ ಭಾಗವುಂಟಾಗಬೇಕೆಂದಪೇಕ್ಷಿಸಿದ, ಕುರುಕ್ಕಳ್ - ಗುರುಗಳ,

ಕುಳಾಙ್ಗಳ್ - ಸಮೂಹಗಳ, **ಕುರ್ರೈಕಳಲ್ ಕೀಳ್ ಕುರ್ರೈ** ಎಂದರೆ ಕಾಲಂದಿಗೆ ಯಿಂದಲೂ ಆದರ ಶಬ್ದದಿಂದಲೂ ಸೇರಿಸಿ ಪಾದಗಳ ಕೆಳಗೆ, **ವಾರುದಲಿನ್ರಿ** - ವಿಚ್ಛೇದವಿಲ್ಲದಹಾಗೆ ಎಂದರೆ ಎಂದಿಗೂ ಪುನರಾವರ್ತ್ತಿ ಇಲ್ಲದಹಾಗೆ, **ಮಕಿಳಿನ್ದು**- ಪರಿಪೂರ್ಣಬ್ರಹ್ಮಾನುಭವದಿಂದ ನಿರತಿಶಯಾನಂದಯುಕ್ತರಾಗಿ, **ಎಳುಮ್ ಪೋ ಗೆತ್ತು** - ಮೇಲೆ ಮೇಲೆ ವೃದ್ಧಿ ಹೊಂದುವ ಕೈಂಕರ್ಯ ಸಾಮ್ರಾಜ್ಯರೂಪವಾದ ಭೋಗದಲ್ಲಿ, **ಮನ್ನುವವೋ**-ದೃಢವಾಗಿ, ಶಾಶ್ವತವಾಗಿ ಎಂದಿಗೂ ಪುನರಾವೃತ್ತಿ ಯಿಲ್ಲದ ಹಾಗೆ, **ಪ್ರತಿಷ್ಠಿತರಾಗುವೆವು**.

ತಾತ್ಪರ್ಯ—ಪ್ರಾಪ್ಯನಿಗೇನೇ ಪ್ರಾಪಕ ಭಾವವು ಸಲ್ಲತಕ್ಕದ್ದೆಂಬಭಿಪ್ರಾಯ ವನ್ನು ಪ್ರದರ್ಶಿಸುವರಾಗಿ, ಪ್ರಾಪ್ತಿ ಫಲದಲ್ಲಿ ನಿರತಿಶಯಪ್ರಿಯರೂಪವಾದ ಪರಿ ಪೂರ್ಣಬ್ರಹ್ಮಾನುಭವದ ಪರೀವಾಹರೂಪವಾದ ಕೈಂಕರ್ಯವು, ಸ್ವಾಚಾರ್ಯ ಪರ್ಯಂತ ವಾದುದು ಎಂದು ತಿಳಿಸುತ್ತಾರೆ. ಇದು ಶಬರೀವೃತ್ತಾಂತದಿಂದ ಸುವ್ಯಕ್ತವು. ಪರಮ ಭಾಗವತಳಾದ "**ಸಂಶಿತವ್ರತ**" ಳಾದ ತಾಪಸಿಯಾದ ಶಬರಿಯು ಶ್ರೀ ರಾಮನನ್ನು ಕಂಡು ಧನ್ಯಳಾಗಿ "**ಚಕ್ಷುಷಾ ತವ ಸೌಮ್ಯೇನ ಪೂತಾಸ್ಮಿ ರಘು ನಂದನ । ಗಮಿಷ್ಯಾಮ್ಯಕ್ಷಯಾನ್ ಲೋಕಾಂಸ್ತ್ವತ್ಪ್ರಸಾದಾದರಿಂದಮ**" "ಓ ರಘುಕುಲೋತ್ಪನ್ನನೇ ನಿನ್ನ ಕೃಪಾಸೂಚಕವಾಗಿ ತಂಪಾಗಿರುವ ಕಟಾಕ್ಷ ದಿಂದ ದಾಸಳಾದ ನಾನು ಪರಿಶುದ್ಧಳಾದೆನು. ಸರ್ವ ಪಾಪಗಳಿಂದಲೂ ಬಿಡುಗಡೆ ಯನ್ನು ಹೊಂದಿದೆನು, ಇನ್ನು ಪುನರಾವೃತ್ತಿಯಿಲ್ಲದ ದಿವ್ಯ ವೈಕುಂಠವನ್ನು ಹೊಂದುವೆನು." ಎಂದು ಹೇಳಿಕೊಂಡಿರುತ್ತಾಳೆ. ಉಕ್ತಿ ಪ್ರತ್ಯುಕ್ತಿಗಳು ನಡೆದ ನಂತರ ಶ್ರೀರಾಮನನ್ನು ಶಬರಿಯು ಪ್ರಾರ್ಥಿಸುವಳು :—ಅದು ಹೇಗೆಂದರೆ—(೧) "**ತೇಷಾಮಿಚ್ಛಾಮ್ಯಹಂಗಂತುಂ ಸಮೀಪಂ ಭಾವಿತಾ ತ್ಮನಾಂ । ಮುನೀನಾಮಾಶ್ರಮೋ ಯೇಷಾ ಮಹಂ ಚ ಪರಿಚಾರಿಣೀ**" ಇದು ಯಾವ ಮಹರ್ಷಿಯಾದವರ ಆಶ್ರಮವೋ, ಯಾವ ಋಷಿಗೆ ನಾನು ಪರಿಚರ್ಯೆ ಯನ್ನು ಮಾಡುವ ದಾಸಿಯೋ, ಅಂತಹ ಬ್ರಹ್ಮನಿಷ್ಠರಾಗಿ ಜ್ಞಾನಿಗಳಾದ ಮತಂಗ ಮಹರ್ಷಿಗಳಿರುವ ದಿವ್ಯ ವೈಕುಂಠವನ್ನು ಕುರಿತು ಹೋಗಲಪೇಕ್ಷಿಸುವೆನೆಂದು ಕೇಳಿ ಕೊಂಡಿರುತ್ತಾಳೆ. ಇಂತಹ ಅತ್ಯಾಶ್ಚರ್ಯಕರವಾದ ಪ್ರಾರ್ಥನೆಗೆ ಶ್ರೀರಾಮನು ಮೆಚ್ಚಿ, ಯಾವ ಕೋಟಿಸೂರ್ಯ ಪ್ರಭೆಯಿಂದ ವಿರಾಜಿಸುತ್ತಿದ್ದ, ಮತ್ತು "**ಯತ್ರ ತೇ ಸುಕೃತಾತ್ಮಾನೋ ವಿಹರಂತಿ ಮಹರ್ಷಯಃ**" ಆ ಮತಂಗ ಮಹರ್ಷಿಗಳು ವಿಹರಿಸುತ್ತಿದ್ದ ಪರಮ ಪದವನ್ನು ಆ ಪರಮ ತಾಪಸಿಯು ಹೊಂದಿದಳು ಎಂದು

(೧) ರಾಮಾ. ಅರ. ೭೪. ೨೯.

ಹೇಳಿರುವದರಿಂದ ಮುಕ್ತನಿಗೂ ಕೂಡ ಭಗವತ್ಕೈಙ್ಕರ್ಯವು ಭಾಗವತ ಕೈಙ್ಕರ್ಯ ಪರ್ಯನ್ತವೆಂದು ಈ ಪಾಶುರದಿಂದ ಹೇಳಿ ಮುಕ್ತನಿಗೆ ಪರಿಪೂರ್ಣ ಬ್ರಹ್ಮಾನುಭವವೂ ಉಂಟು, ಅದರ ಪರೀವಾಹವಾಗಿ ಕೈಙ್ಕರ್ಯವೂ ಉಂಟೆಂದು ತಿಳಿಸುತ್ತಾರೆ. "ಭಗವದ್ವಂದನಂ ಸ್ವಾದ್ಯಂ ಗುರುವಂದನ ಪೂರ್ವಕಂ । ಕ್ಷೀರಂ ಶರ್ಕರಯಾಯುಕ್ತಂ ಸ್ವದತೇಹಿ ವಿಶೇಷತಃ" ಹಾಲೇ ಸ್ವತಃ ಬಹು ರುಚಿಕರವಾಗಿದ್ದರೂ ಸಕ್ಕರೆಯಿಂದ ಸೇರಿದರೆ ಹಾಲು ಕೀರೆಂದೆನಿಸಿ ಹೇಗೆ ವಿಶೇಷ ಸ್ವಾದುವಾದುದಾಗುತ್ತದೋ ಹಾಗೆಯೇ ಭಗವತ್ಕೈಙ್ಕರ್ಯವು ಭೋಗ್ಯವು. ಅದು ಭಾಗವತ ಕೈಙ್ಕರ್ಯದಿಂದ ಮಿಳಿತವಾಗಿದ್ದರೆ ತನಗೂ ಸ್ವಾಮಿಗೂ ಸಹ ಇಲ್ಲಿ ಹೇಗೆ ಪರಮ ಭೋಗ್ಯವೋ ಹಾಗೆಯೇ ಅಲ್ಲಿಯೂ ಎಂಬ ಭಾವವು. ದೇಹಾವಸಾನಾನಂತರ ಹೀಗೆ ಆಚಾರ್ಯ ಪಾದಮೂಲವೂ ಆಚಾರ್ಯ ಕೈಙ್ಕರ್ಯವೂ ಪರಮಪದದಲ್ಲಿ ಸಿಕ್ಕುವದರಿಂದಲೇ ದೇಹಾವಸಾನವಾಗಿ ಮುಕ್ತಿಯನ್ನು ಹೊಂದಿದರೆಂದು ಹೇಳುವದಕ್ಕೆ ಬದಲಾಗಿ ಆಚಾರ್ಯತಿರುವಡಿಯನ್ನು ಸೇರಿದರೆಂದು ಹೇಳುವ ವಾಡಿಕೆಯುಂಟು. ಇಲ್ಲಿ ಪರಮ ಪದವು ಎಳಿಲ್ ಪದವ್, ಅತ್ಯಂತ ಉಜ್ವಲವಾದ ಪದವೆಂದು ಹೇಳಿರುತ್ತಾರೆ. ಇದು ಸ್ವಯಂಪ್ರಕಾಶವಾದುದೆಂದು ಹಿಂದೆ ಉಪೋದ್ಘಾತಾಧಿಕಾರದಲ್ಲೂ ತತ್ವತ್ರಯಾಧಿಕಾರದಲ್ಲೂ ಉಪಪಾದಿತವಾಗಿರುತ್ತದೆ. ಇದಕ್ಕೆ ಅನೇಕ ಶಾಸ್ತ್ರ ಪ್ರಮಾಣಗಳುಂಟು. ಅವುಗಳಲ್ಲಿ ಒಂದೆರಡನ್ನು ಸೂಚಿಸುವೆವು:—"ಆದಿತ್ಯವರ್ಣಂ ತಮಸಃ ಪರಸ್ತಾತ್", ಹಿರಣ್ಮಯೇ ಪರೇಲೋಕೇ" ಇಲ್ಲಿ ಪರಮಪದವು ಸುವರ್ಣದಹಾಗೆ ಪ್ರಕಾಶಮಾನವಾದುದೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಇನ್ನೊಂದು ಕಡೆಯಲ್ಲಿ,"ದೇವಾಶ್ಚ ಯನ್ನ ಪಶ್ಯನ್ತಿ ದಿವ್ಯಂ ತೇಜೋ ಮಯಂ ಪದಂ। ಅತ್ಯರ್ಕಾನಲ ದೀಪ್ತಂ ತತ್ ಸ್ಥಾನಂ ವಿಷ್ಣೋರ್ಮಹಾತ್ಮನಃ" "ಆ ಮಹಾವಿಷ್ಣುವಿನ ಸ್ಥಾನವಾದ ಪರಮಪದವು ದಿವ್ಯ ತೇಜೋಮಯವಾದುದು; ಸೂರ್ಯಾಗ್ನಿಗಳ ತೇಜಸ್ಸುಗಳಿಗಿಂತ ಉಜ್ವಲವಾದುದು, ದೇವತೆಗಳು ಕೂಡ ತಮ್ಮ ಎವೆ ಇಲ್ಲದ ನೋಟದಿಂದ ಕಾಣಲಾರರು, ಅವರಿಗೂ ಕೂಡ ದುಶ್ಶಕವಾಗಿ ದುಸ್ತರವಾದುದೆಂದು ಹೇಳಲ್ಪಟ್ಟಿರುತ್ತದೆ. ಮತ್ತು, "ಸ್ವಯೈವ ಪ್ರಭಯಾ ರಾಜನ್ ದುಷ್ಪ್ರೇಕ್ಷಂ ದೇವದಾನವೈಃ" ಎಂಬುವ ಪ್ರಮಾಣವು ನಿತ್ಯ ವಿಭೂತಿಯು ಸ್ವಯಂಪ್ರಕಾಶವಾಗಿ ದೇವದಾನವರಿಂದಲೂ ನೋಡಲಸಾಧ್ಯವಾದುದೆಂದು ಸೂಚಿಸುತ್ತದೆ. ಉಪಾಯಾನುಷ್ಠಾನವನ್ನು ಮಾಡಿಸಿ ದೇಹಾವಸಾನಾನಂತರ ಅರ್ಚಿರಾದಿ ಗತಿಯ ಮೂಲಕ ಇಂತಹ ಪರಮಪದವನ್ನು ಹೊಂದಿಸುವವನು ಅವನೇ; "ಯ ಮೇವೈಷ ವೃಣುತೇ ತೇನಲಭ್ಯಃ", ಎಂಬ ಶ್ರುತಿಯಲ್ಲಿ ಉಪಪಾದಿಸಿರುವ ಹಾಗೆ ಆತನೇ ಪ್ರಾಪಕನೂ, ಆತನೇ ಪ್ರಾಪ್ಯನೂ ಎಂದು ತಿಳಿಸುವದಕ್ಕಾಗಿ,

ಎಲ್ಲಾ ಉಂಬರ್ಕ್ಕುಂ, ಪಿತರುಕ್ಕುಮ್ ಎಂದು ಪ್ರಯೋಗಿಸಿರುತ್ತಾರೆ. ಸಮಸ್ತ ಚೇತನರ ಸ್ವಾಮಿಯಿಂದ ಕರ್ಮಾನುಸಾರ ಕೊಡಲ್ಪಟ್ಟ ಕರಣಕಳೇಬರ ಮೊದಲಾದವು. ಶಾಸ್ತ್ರವನ್ನು ಮುಂದಾಗಿಟ್ಟುಕೊಂಡು ಉಪಾಯಾನುಷ್ಠಾನವನ್ನು ಮಾಡಬಹುದು. “ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ” ಎಂದು ಹೇಳಿರುವ ಪ್ರಕಾರ ತನ್ನಲ್ಲಿ ಉಪಾಯಾನುಷ್ಠಾನ ಮೂಲಕ ಮುಕ್ತಿಯನ್ನಿತ್ತು ಕಾಪಾಡುವವನು. “ಸರ್ವಸ್ಯ ಶರಣಂ ಸುಹೃತ್” ಸಮಸ್ತರಿಗೂ ಉಪಾಯಭೂತನು ಎಂದೂ ಹಾಗೆಯೇ “ಸಮೋಽಹಂ ಸರ್ವಭೂತೇಷು” ಎಂದೂ ಹೇಳಲ್ಪಟ್ಟಿರುತ್ತದೆ. ಆದರೆ ಕೆಲವರು ನಿತ್ಯಸಂಸಾರಿಗಳಾಗಿಯೇ ಇರುತ್ತಾರಲ್ಲಾ ಅದು ಹೇಗೆ ಎಂದರೆ ಅವರುಗಳು ಕರ್ಮಪ್ರಾಬಲ್ಯದಿಂದ ಉಪಾಯಾನುಷ್ಠಾನಮಾಡಲು ಅಶಕ್ತರುಗಳಾಗಿಯೇ ಆಗುವುದರಿಂದ ಎಂದು ಭಾವಿಸತಕ್ಕದ್ದು. ಆದರೆ ಸರ್ವೇಶ್ವರನೇನೋ ಸಮಸ್ತರ ವಿಷಯದಲ್ಲೂ ತನ್ನನ್ನಾಶ್ರಯಿಸಿದರೆ ಸಾಕೆಂದು ಅವರ ಪ್ರತೀಕ್ಷೆಯನ್ನು ಮಾಡುತ್ತಲಿರುವನು, ಆದುದರಿಂದಲೇ ಪಿತರುಕ್ಕುಮ್ ಎಂಬ ಪ್ರಯೋಗವು. ಸ್ವಲ್ಪ ನ್ಯಾಯದಿಂದಲೇ ಆತನು ತೃಪ್ತನಾಗಿ ಅವನಿಗೆ ಒಳ್ಳೆಯದನ್ನುಂಟುಮಾಡುವನು. “ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ” ಎಂಬ, ಮಹರ್ಷಿಯ ಉಕ್ತಿಯುಂಟು. “ಅಣ್ವಪ್ಯುಪಾಹೃತಂ ಭಕ್ತೈಃ ಪ್ರೇಮ್ಣಾ ಭೂರ್ಯೇವ ಮೇ ಭವೇತ್” ಭಕ್ತರಿಂದ ಅಲ್ಪ ಸ್ವಲ್ಪವಾಗಿ ಕೊಡಲ್ಪಟ್ಟರೂ ಕೂಡ ತನಗೆ ಪ್ರೀತ್ಯತಿಶಯದಿಂದ ಅನಂತವಾಗುತ್ತದೆಂದು ಶ್ರೀಕೃಷ್ಣನು ಪರಮಭಾಗವತನಾದ ಕುಚೇಲನಿಗೆ ಹೇಳಿರುತ್ತಾನೆ.

ಕೋಯಿಲ್ ಕೊಳ್ ದೈವ - ನಾವೆಲ್ಲರೂ ಲೋಕಪಿತಾವಿಗೆ ಪ್ರಜೆಗಳು, ಆದುದರಿಂದ ನಮಗೆ ಸ್ವತಸ್ಸಿದ್ಧ ದಾಯಭಾಗವಾದ ಪುರುಷಾರ್ಥವನ್ನು ನಮಗಾಗಿ ಇಟ್ಟಿರುತ್ತಾನೆ. ಆ ದಾಯವು ಯಾವುದೆಂದರೆ ಆತನ ಎಲ್ಲಾ ವಿಭೂತಿಯನ್ನೂ ನಾವು ಅನುಭವಿಸೋಣವು. ಆತನು ಪರಿಪೂರ್ಣ ವಿಭೂತಿ ವಿಶಿಷ್ಟನೆಂದು ತಿಳಿಸುವದಕ್ಕಾಗಿ ನಾರ್ ತುಳಾಯ್ ಮುಡಿನಾಥ ನೆಂದು ಪ್ರಯೋಗಿಸಿರುತ್ತಾರೆ. “ಸರ್ವಗಂಧಸ್ಸರ್ವರಸಃ” ಎಂಬ ಭಾವವು ನಾರ್ತುಳಾಯ್ ಎಂಬುವದರಿಂದ ತಿಳಿಯಬರುತ್ತದೆ. ಮುಡಿನಾಥ ಎಂಬ ಪ್ರಯೋಗದಿಂದ, ಉಭಯ ವಿಭೂತಿ ನಾಯಕನಾಗಿ ಕಿರೀಟಧಾರಿಯಾಗಿ ಆತನು ರಾಜಾಧಿರಾಜನಾದ ಸರ್ವಶೇಷಿ ಎಂಬ ಭಿಪ್ರಾಯವು ಸೂಚಿಸಲ್ಪಟ್ಟಿತು. ಆದುದರಿಂದ ಈ ಅನುಭವವು ಪರಿಪೂರ್ಣ ಬ್ರಹ್ಮಾನುಭವವೆಂದು ಹೇಳಲಾಯಿತು. ಇದು ಮಾತ್ರವೇ ನಮ್ಮ ದಾಯಭಾಗವಲ್ಲವು; ಅಡಿಸ್ಸೈಯಿಲ್ ಕೂಡ ಎಂದರೆ ಕೈಂಕರ್ಯಸಾಮ್ರಾಜ್ಯದಲ್ಲೂ ಕೂಡ

ನಮ್ಮ ಭಾಗ ಉಂಟೆಂದು ತಿಳಿಸುತ್ತಾರೆ ನಮಗೆ ಶ್ರೀ ಹರಿಕೃಪಯಾ ಪ್ರಾಪ್ತವಾಗುವ ಮೋಕ್ಷದಲ್ಲಿ ಬರೀ ಅನುಭವಮಾತ್ರವೇ ಅಲ್ಲವು, ಭಗವತ್ಕೈಂಕರ್ಯದಲ್ಲೂ, ನಮಗೆ ಅಂಶವುಂಟೆಂದು ತಿಳಿಸುವುದಕ್ಕಾಗಿ, "ಅಡಿಮೈಯಿಲ್ ನಂಕೂರು ಕವರ್ನ್ದು" ಎಂದು ಪ್ರಯೋಗಿಸಿರುತ್ತಾರೆ.

ಹೀಗೆ ನಮ್ಮ ದಾಯಭಾಗವಾದ ಪರಿಪೂರ್ಣಬ್ರಹ್ಮಾನುಭವ ಕೈಂಕರ್ಯ ಪ್ರಾಪ್ತಿಗಳು ನಮಗೆ ಪ್ರಾಪ್ತವಾಗುವದು "ದೇಶಿಕೋಪದೇಶತೋಯಾಳ್ಗಳ್" ಎಂದು ಹೇಳಿರುವ ಹಾಗೆ ನಮ್ಮ ಗುರುಗಳ ಪರಮಕೃಪಾವಾತ್ಸಲ್ಯ ಮಾಹಾತ್ಮ್ಯದ ಪ್ರಭಾವವು. ಆದುದರಿಂದ ಅಂತಹ ಕೃಪಾಶಾಲಿಗಳಾದ ಗುರುಗಳು ತಮ್ಮ ಶಿಷ್ಯರಿಗೆ ಇಂತಹ ಪರಮಶ್ರೇಯಸ್ಸು ಉಂಟಾಯಿತೇ, ನಾವು ಅವರುಗಳಿಗಾಗಿ ಮಾಡಿದ ಮಹತ್ತಾದ ಯತ್ನವು ಫಲಿಸಿತೇ, ಎಂದು ಪರಮಾನಂದಭರಿತರಾಗುವಂತವರು ಎಂದು ತಿಳಿಸುವುದಕ್ಕಾಗಿ "ಕೆವರ್ನ್ದ ಕುರುಕ್ಕಳ್" ಎಂದು ಪ್ರಯೋಗಿಸಿರುತ್ತಾರೆ. ಇಂತಹ ಪರಿಪೂರ್ಣಬ್ರಹ್ಮಾನುಭವದ ಪರೀವಾಹರೂಪವಾದ ಕೈಂಕರ್ಯವನ್ನು ಶ್ರಿಯಃಪತಿಗೆ ಮಾತ್ರವೇ ಅಲ್ಲದೆ, ತಮ್ಮ ಪುರುಷಕಾರದ ಪ್ರಭಾವದಿಂದ ನಮಗೂ ಸಹ ಸ್ಥಿರಪಡಿಸಿದುದರಿಂದ, ಅಂತಹ ಗುರುಗಳ ಪಾದಮೂಲವನ್ನು ಹೊಂದಿ ಅವರಿಗೂ ಸಹ ಕೈಂಕರ್ಯವನ್ನೆಸಗುವ ನಿರತಿಶಯಾನಂದವನ್ನು ಸ್ಥಿರವಾಗಿ ಹೊಂದುವೆವು ಎಂದು ಎಳುನ್ ಭೋಗತ್ತು ಮನ್ನುವಮೋ ಎಂಬುವುದರಿಂದ ತಿಳಿಸುತ್ತಾರೆ. ಆ ಗುರುಗಳ ಪಾದಮೂಲವೆಂಥಾದ್ದೆಂದರೆ, ಪರೈ ಕಳರ್ ಕೀಳ್-ಮಂಜೀರ (ಕಾಲಂದಿಗೆಯು) ಶಬ್ದವಿಶಿಷ್ಟವಾದುದು. ಬಾಹ್ಯ ಕುದೃಷ್ಟಿಗಳ ಅಪಸಿದ್ಧಾಂತಗಳನ್ನೆಲ್ಲಾ ತಮ್ಮ ಸತ್ತರ್ಕದಿಂದ ಗೆದ್ದು, ಅವುಗಳನ್ನೆಲ್ಲಾ ತಮ್ಮ ವಾಮಪಾದದಿಂದ ನೆಲಕ್ಕುರುಳಿಸಿ ಅಂತಹ ವಾದವಾಗುವ ಕಾಲದಲ್ಲಿ ನ್ಯಾಯಾಧಿಪತಿಗಳಾಗಿ ನಿಂತ ರಾಜರುಗಳು ಅಂತವರ ಜಯಸೂಚಕವಾಗಿ ಕಾಲಿಗೆ ಸುವರ್ಣಾಭರಣವನ್ನು ಪಾರಿತೋಷಕವಾಗಿ ಕೊಟ್ಟರೆಂಬಭಿಪ್ರಾಯವನ್ನು ತಿಳಿಸುವ ಹಾಗೆ ಈ ಗುರುಗಳ ಪಾದಾರವಿಂದಗಳು ಗಲ್‌ಗಲ್ ಎಂದು ವಿಮತ ನಿರಸನ ಜಯಧ್ವನಿಯನ್ನೇನಾದರೂ ಅನುಕರಿಸುತ್ತವೋ ಎಂಬಭಿಪ್ರಾಯವನ್ನು ತೋರಿಸಿರುತ್ತಾರೆ. ಹಾಗೆಯೇ ಸಙ್ಕಲ್ಪಸೂರ್ಯೋದಯದಲ್ಲಿ ಉಪಪಾದಿತವಾಗಿರುತ್ತದೆ. ಅಲ್ಲಿ ಶಿಷ್ಯರು (ತಾವೇ) ಕುವಾದಿಗಳನ್ನೆಲ್ಲಾ ವಾದದಲ್ಲಿ ಗೆದ್ದುದರಿಂದ ಗುರುವು (ಯತೀಂದ್ರರು) ರಾಜನೂ ಸಹ ಸಂತುಷ್ಟರಾಗಿ ಕಾಲಂದಿಗೆಯನ್ನು ಪಾರಿತೋಷಿಕವಾಗಿ ದಯಪಾಲಿಸಿರುತ್ತಾರೆಂದು ಈ ಮುಂದಿನ ಶ್ಲೋಕದಲ್ಲಿ ಹೇಳಲ್ಪಟ್ಟಿರುತ್ತದೆ.

"ತ್ರಯ್ಯನ್ತಸ್ಥಾಪಕೋಽಯಂ ದೃಢತರ ಮನುಸಾ ತತ್ತ್ವದೃಷ್ಟಿಶ್ಚ ದಿಷ್ಟ್ಯಾ ।
ದಿಷ್ಟ್ಯಾ ಚಾದಿಷ್ಟ ಮೇ ತದ್ವಿಶಿದಿಶಿ ಲಡಹೋಡಿಂಡಿಮಸ್ಸ್ಥಾಪನೀಯಃ ।

ಅವಿಶ್ರಾಂತ ಶ್ರದ್ಧಾ ಶತಕಲಹ ಕಲ್ಲೋಲ (ವಿಷಮಾ) ಕಲುಷಾ ।
ಮಮಾವಿರ್ಭೂಯಾಸು ರ್ಮನಸಿ ಮುನಿ ಸಿದ್ಧಾದಿ ಸುಲಭಾಃ ॥

"ಕುಶಿಕ್ಷೇಪನ್ಯಾಸ ಶಿಕ್ಷಾಪಟುಮುಕಟು ರಟದ್ವೈರಿ ವಿದ್ವತ್ಕರೋಟೀ ।
ಕೋಟ್ಯಾಕ ಕ್ರೀಡ ಮುಷ್ಟಾಪದ ಕಟಕ ಮುಸೌವಾಮುಪಾದೇ ಬಿಭರ್ತ್ತಿ ॥"
(ಸಙ್ಕಲ್ಪ ಸೂರ್ಯೋದಯ ೧೦೧.)

ಇವನ್ನೆಲ್ಲಾ ಮನಸ್ಸಿನಲ್ಲಿಟ್ಟೇ ಕುರ್ವೈಕಳಲ್ ಕೀಳೆ ಎಂಬುದರಿಂದ ಪರಮ ಪದದಲ್ಲಿ ಭಾಗವತ ಕೈಙ್ಕರ್ಯ ಪರ್ಯನ್ತವಾದ ಭಗವತ್ಕೈಙ್ಕರ್ಯಕ್ಕೆ ವಿಚ್ಛೇದವೆಂದಿಗೂ ಇಲ್ಲವೆಂದು, ಮಾರುದಲಿನ್ರಿ ಎಂಬುದರಿಂದ ಉಪದೇಶಿಸಿರುತ್ತಾರೆ. ಆದುದರಿಂದ ಮುಕ್ತನಿಗೆ ಪರಿಪೂರ್ಣ ಬ್ರಹ್ಮಾನುಭವವೂ ಉಂಟು, ಕೈಙ್ಕರ್ಯವೂ ಉಂಟು. ಆ ಕೈಙ್ಕರ್ಯವು ತನ್ನ ಆಚಾರ್ಯಪರ್ಯನ್ತವೂ ತನ್ಮೂಲಕ ಸರ್ವ ಭಾಗವತ ಪರ್ಯನ್ತವಾದುದೆಂದು ತಿಳಿಯತಕ್ಕದ್ದು.

ಈ ಅಧಿಕಾರದಲ್ಲಿ ಮುಕ್ತನಿಗೆ ಪರಮ ಪದದಲ್ಲಿ ಪ್ರಾಪ್ತವಾಗುವ ಪುರುಷಾರ್ಥನಿರ್ಣಯವು ಸೊಂಭಾಷ್ಯೆಂದು ಸ್ಥಾಪಿಸಲ್ಪಟ್ಟ ನಂತರ, ಆದರಲ್ಲಿ ತುಂಬಾ ಶ್ರದ್ಧೆಯೂ ತ್ವರಾತಿಶಯವೂ ಉಂಟಾಗಿ, ಅಂತಹ ಪುರುಷಾರ್ಥರೂಪವಾದ ಪರಿಪೂರ್ಣಬ್ರಹ್ಮಾನುಭವವೂ, ಅದರ ಪರೀವಾಹರೂಪವಾದ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಭಗವತ್ಕೈಙ್ಕರ್ಯಗಳೂ ಕೂಡ ಇಲ್ಲಿ ತಮ್ಮ ಮನಸ್ಸಿನಲ್ಲಿ ಪ್ರತ್ಯಕ್ಷವಾಗಿ ಆವಿರ್ಭವಿಸಲಿ ಎಂದು ಪ್ರಾರ್ಥಿಸುತ್ತಾರೆ.

ಅರ್ಥ—ಅವಿಶ್ರಾಂತ ಶ್ರದ್ಧಾ ಶತ ಕಲಹ ಕಲ್ಲೋಲ ಕಲುಷಾಃ, ಇದು ಮುಂದೆ ಬ್ರಹ್ಮಾನುಭವ ಪರಿವಾಹಾಃ ಎಂಬುದರಲ್ಲಿ ತೋರಿಬರುವ ಕೈಙ್ಕರ್ಯ ವಿಶೇಷಗಳಿಗೆ ವಿಶೇಷಣವು. ಆ ಕೈಙ್ಕರ್ಯಗಳು ಎಂಥಾವೆಂದರೆ, ಅವಿಶ್ರಾಂತ-ವಿಶ್ರಾಂತಿಯೇ ಇಲ್ಲದಹಾಗೆ, ಇವನ್ನು ಶ್ರದ್ಧಾಶತಕ್ಕಾಗಲಿ, ಕಲಹಕ್ಕಾಗಲಿ ಅನ್ವಯಿಸಬಹುದು, ಶ್ರದ್ಧಾಶತ–"ಶ್ರದ್ಧಾ ಸಂಪ್ರತ್ಯಯಸ್ಸ್ಪೃಹಾ" ಎಂದು ಅಮರ ನಿಘಂಟುವಿನಿಂದ ತಾವು ಮಾಡುವ ಕೈಙ್ಕರ್ಯವು ಭಕ್ತಿಪುರಸ್ಸರವಾಗಿ ಚನ್ನಾಗಿ ನಡೆಯಬೇಕೆಂಬ ಕುತೂಹಲಕ್ಕೆ ಶ್ರದ್ಧಾ ಎಂದು ಹೆಸರು, ಇಂತಹ ಕೈಙ್ಕರ್ಯವನ್ನು ನಾನು ಮಾಡಬೇಕು, ನಾನು ಮಾಡಬೇಕೆಂಬ ಅನೇಕ ಮುಕ್ತರ ಮೂಲಕ ಉಂಟಾದ ಶ್ರದ್ಧಾಶತಗಳ, ಅಥವಾ ಒಬ್ಬೊಬ್ಬರು "ಅಹಂ ಸರ್ವಂ ಕರಿಷ್ಯಾಮಿ, ಅಹಂ ಸರ್ವಂ ಕರಿಷ್ಯಾಮಿ" ಎಂಬ ಕುತೂಹಲವಾಗಲಿ ಆಗಬಹುದು. ಇಂತಹ ಶ್ರದ್ಧಾಶತದಿಂದುಂಟಾದ, ಕಲಹ ಪರಸ್ಪರ ಸ್ಪರ್ಧೆಯು, ಕಲ್ಲೋಲ ಮೇಲೆ

ಮಧುಕ್ಷೀರನ್ಯಾಯ ಸ್ವಗುಣ ವಿಭವಾ ಸಂಜನ ಘನಸ್ ।
ಮಹಾನಂದ ಬ್ರಹ್ಮಾನುಭವ ಪರಿವಾಹಾ ಬಹುವಿಧಾಃ ॥೪೯॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ
ಶ್ರೀಮದ್ವೇಂಕಟನಾಥಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ
ಪರಿಪೂರ್ಣಬ್ರಹ್ಮಾನುಭವಾಧಿಕಾರೋ ದ್ವಾವಿಂಶಃ.
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ.

ಮೇಲೆ ನಿರಂತರವಾಗಿ ಉಕ್ಕುತ್ತಿರುವ ತರಂಗಗಳಿಂದ, ಕಲುಷಾಃ-ನೀರು ಹೇಗೆ ಜಲನೆಯಿಂದ ಸ್ವಚ್ಛವಲ್ಲದಹಾಗೆ ತೋರುತ್ತದೋ ಹಾಗೆ ಷಡೂರ್ಮಿಯಿಂದ ವಿಪರೀತವಾಗಿ ತೋರುವವುಗಳಾದ, (ಕೈಂಕರ್ಯಗಳು), ವಿಷಮಾಃ-ಎಂಬುದು ಪಾಠಾಂತರವು, ಆಗ, ವ್ಯತ್ಯಸ್ತವಾಗಿ ತೋರುವವುಗಳಾದ ಎಂಬರ್ಥವಾಗುತ್ತದೆ. ಇಂಥಾ ಎಂಥಾವುಗಳಿಂದಲೆ, ಮುನಿಸಿದ್ಧಾದಿ ಸುಲಭಾಃ. ಮುನಿ - ಪರಾಶರ, ವ್ಯಾಸ, ಶುಕ ಮೊದಲಾದ ಮಹರ್ಷಿಗಳೇನು. ಸಿದ್ಧ - ಪ್ರತ್ಯಕ್ಷ ಆನಂತ ಗರುಡ ವಿಷ್ವಕ್ಸೇನಾದಿಗಳೇನು ಆದಿ ಶಬ್ದದಿಂದ ನಮ್ಮಾಳ್ವಾರ್ ಮೊದಲಾದ ಆಳ್ವಾರಾಚಾರ್ಯ ಶ್ರೇಷ್ಠರುಗಳೇನು ಇವರುಗಳಿಗೆ, ಸುಲಭಾಃ, ಸುಖಲಭ್ಯಾಃ-ಸುಖದಿಂದ ಲಭಿಸುವಂತಹವುಗಳಾದ, ಮಧುಕ್ಷೀರನ್ಯಾಯ - ಜೇನುತುಪ್ಪವೂ ಹಾಲೂ ಬೆರೆತರೆ ಹೇಗೆ ಬಹು ಭೋಗ್ಯವಾದ ಸಮ್ಮೇಳನ ಉಂಟಾಗುತ್ತದೋ ಹಾಗೆ, ಸ್ವಗುಣ ವಿಭವ - ಪರಮಾತ್ಮನ ಕಲ್ಯಾಣಗುಣಗಳೇನು, ಉಭಯವಿಭೂತಿಯೇನು ಇವುಗಳ, ಆಸಂಜನ - ಸಮ್ಮೇಳನದಿಂದ, ಘನತ್-ದೇದೀಪ್ಯಮಾನನಾಗಿರುವ, ಮಹಾನಂದಬ್ರಹ್ಮ ಇಷ್ಟೆಂದು ಅಳವಿಡಲು ಸಾಧ್ಯವಿಲ್ಲವೆಂದು ಶ್ರುತ್ಯುಪಪಾದ್ಯವಾದ ಆನಂದಮಯನಾದ ಪರಬ್ರಹ್ಮನ, ಅನುಭವ - ಅನುಭವದ, ಪರಿವಾಹಾಃ - ಪ್ರವಾಹರೂಪವಾದ ಕೈಂಕರ್ಯಗಳು, ಬಹುವಿಧಾಃ - ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯಗಳಾಗಿ, ಮಮ ಮನಸಿ - ನನ್ನ ಮನಸ್ಸಿನಲ್ಲಿ, ಆವಿರ್ಭವಂತು - ಆವಿರ್ಭವಿಸಲಿ. ಭಗವದನುಭವಜನಿತ ಪ್ರೀತಿಕಾರಿತ ಕೈಂಕರ್ಯವನ್ನುಂಟುಮಾಡಲಿ ಎಂಬ ಪ್ರಾರ್ಥನೆಯು. ಸ್ವಗುಣವಿಭವವೆಂಬಲ್ಲಿ ಸಾಮಾನ್ಯೋಕ್ತಿ, ಸಾರವಿವರಣೆ, ಸಾರಸಂಗ್ರಹ ವ್ಯಾಖ್ಯಾತೃಗಳು ಸ್ವಸ್ಯ ಎಂದರೆ ಸ್ವಸ್ವರೂಪಾವಿರ್ಭಾವ ಹೊಂದಿದ ಮುಕ್ತಾತ್ಮನ ಅಪಹತಪಾಪ್ಮತ್ವಾದಿಗುಣಗಳ ಸಂಗತಿಯ ಆಸಂಜನವೆಂದು ಅರ್ಥಮಾಡಿರುತ್ತಾರೆ. ಸಾರಾಸ್ವಾದಿನೀ ಸಾರಪ್ರಕಾಶಿಕಾಕಾರರುಗಳ ವ್ಯಾಖ್ಯಾನವೇ ಸ್ವಾರಸ್ಯವಾದುದು.

ತಾತ್ಪರ್ಯ—ಈ ಅಧಿಕಾರದಲ್ಲಿ ಪರಿಪೂರ್ಣ ಬ್ರಹ್ಮಾನುಭವರೂಪಪ್ರಾಪ್ತಿಯು ಸ್ವರೂಪಾವಿರ್ಭಾವವೆಂದು ಉಪಪಾದಿಸಲ್ಪಟ್ಟಿತು. ಈ ಪರಬ್ರಹ್ಮಾನುಭವವು ಗುಣವಿಭೂತ್ಯೈಶ್ವರ್ಯಾದಿಗಳಿಂದ ಯುಕ್ತನಾದುದರಿಂದ ಪರಿಪೂರ್ಣನಾದ ಪರಬ್ರಹ್ಮನ ಅನುಭವವೆಂದೂ ಹೇಳಲ್ಪಟ್ಟಿತು. ಅದು ಎಲ್ಲರಿಗೂ ಸಮವೆಂದೂ ಸಮರ್ಥಿಸಲ್ಪಟ್ಟಿತು. ಅನಂತರ ಈ ಪರಿಪೂರ್ಣ ಬ್ರಹ್ಮಾನುಭವದ ಪರೀವಾಹವಾಗಿ ಸರ್ವವಿಧ ಕೈಂಕರ್ಯಗಳ ಪ್ರಾಪ್ತಿಯೂ ಸಹ ಉಂಟಾಗುತ್ತದೆಂದು ಹೇಳಲ್ಪಟ್ಟಿತು. ಈ ಅಭಿಪ್ರಾಯಗಳನ್ನೆಲ್ಲಾ ಈ ಶ್ಲೋಕದಿಂದ ಸಂಗ್ರಹಿಸುವರಾಗಿ ಇಂತಹ ಅಮೋಘರೂಪ ಪ್ರಾಪ್ತಿಯು ಮುಂದೆ ಲಭಿಸತಕ್ಕುದಾದುದರಿಂದ ತತ್ಪ್ರಾಪ್ತಿಯಲ್ಲಿ ತ್ವರಾತಿಶಯವು ತಮ್ಮ ಮನಸ್ಸಿನಲ್ಲಿ ಜನಿಸಬೇಕಾಗಿ ಪ್ರಾರ್ಥಿಸುತ್ತಾರೆ.

ಈ ಪರಿಪೂರ್ಣಾನುಭವದಲ್ಲಿ ತಮಗೆ ಮುಖ್ಯವಾದಂಶವು ಮೂಲಮಂತ್ರದಲ್ಲೂ ದ್ವಯದಲ್ಲೂ ಇರುವ ನಾರಾಯಣಾಯ ಎಂಬ ಪದದ ವ್ಯಕ್ತ ಚತುರ್ಥಿಯಿಂದ ವ್ಯಕ್ತವಾಗುವ ಪರಮ ಪುರುಷನಿಗೆ ತಾವು ಮಾಡುವ ಕೈಂಕರ್ಯಗಳು. ಇವು ಬಹುವಿಧ-ನಾನಾವಿಧವಾದುವೆಂದು ಹೇಳುತ್ತಾರೆ. ಛತ್ರವನ್ನು ಸಮರ್ಪಿಸುವದು, ತಾಲವೃಂತವನ್ನು ಬೀಸುವದು, ಚಾಮರವನ್ನು ಹಾಕುವದು, ಸಾಮಗಾನದಿಂದ ಸ್ತೋತ್ರಮಾಡುವದು ಇತ್ಯಾದಿ ಸರ್ವವಿಧ ಕೈಂಕರ್ಯಗಳು. ಇಂತಹ ಕೈಂಕರ್ಯಗಳನ್ನೆಲ್ಲಾ ಮಾಡಬೇಕೆಂಬ ಶ್ರದ್ಧೆಯೂ ತ್ವರೆಯೂ ನನ್ನ ಮನಸ್ಸಿನಲ್ಲಿ ಆವಿರ್ಭವಿಸಲೆಂದು ಪ್ರಾರ್ಥಿಸುತ್ತಾರೆ. ಈ ಕೈಂಕರ್ಯಗಳಿಂತಹವೆಂದರೆ ನಾಲ್ಕು ವಿಶೇಷಣಗಳಿಂದ ಪ್ರಪಂಚಿಸಿ ಹೇಳುತ್ತಾರೆ:—(೧) ಈ ಕೈಂಕರ್ಯಗಳನ್ನು ಚೆನ್ನಾಗಿ ಮಾಡಬೇಕೆಂಬ ಅನವರತ ಕುತೂಹಲವು ಸರ್ವಮುಕ್ತರಿಗೂ ಉಂಟಾಗತಕ್ಕದ್ದು. ಒಂದು ಕೈಂಕರ್ಯವನ್ನೆಸಗುವ ಕಾಲದಲ್ಲಿ ಇನ್ನೊಂದು ಕೈಂಕರ್ಯವು ಮಹೋಪಕಾರಿಯಾದ ಪುರುಷೋತ್ತಮನಿಗೆ ಉಚಿತವೆಂದು ತೋರಬಹುದು. ಅಥವಾ ಅನೇಕರು ಇಂತಹ ಕೈಂಕರ್ಯಗಳನ್ನು ಮಾಡಬೇಕೆಂಬ ಕುತೂಹಲವುಂಟಾಗಬಹುದು; ಆದುದರಿಂದ ಪ್ರವೃದ್ಧಕುತುಕವೆಂದು ಹೇಳಲ್ಪಟ್ಟಿತು. ಇಂತಹ ಶ್ರದ್ಧೆಯೂ, ಉತ್ಸಾಹವೂ, ಅದರಿಂದುಂಟಾದ ಸಡಗರವೂ ಆ ಪದಗಳಲ್ಲಿ ತೋರಿಬರುವದರಿಂದ ಅದನ್ನು ಕೇವಲ ಶಬ್ದದಿಂದ ಇಲ್ಲಿ ವ್ಯಕ್ತಪಡಿಸುತ್ತಾರೆ. ಅಥವಾ ಒಬ್ಬರಿಗಿಂತ ಒಬ್ಬರು ಮುಂದಾಗಿ ಕೈಂಕರ್ಯ ನಡಿಸಬೇಕೆಂಬ ಸ್ಪರ್ಧೆಯ ಕಲಹವೆಂದಾದರೂ ಆಗಬಹುದು. ಇಂತಹ ಕಲಹಗಳು ಗುಣರೂಪವಾದವೇ ವಿನಾ ದೋಷರೂಪವಾದವುಗಳಲ್ಲ. [illegible] ಕಲಹವು [illegible] ಸರ್ವಜ್ಞನಾದುದರಿಂದ [illegible] ಇವುಗಳ [illegible] ಈ ಲೋಕದಲ್ಲೇ ವಿನಾ [illegible]

ಪದದಲ್ಲಿರುವ. ಈ ಪದಗಳೆಲ್ಲಾ ತರಂಗತರಂಗ ರೂಪದಲ್ಲಿ ಉಂಟಾಗಬಹುದಾದುದರಿಂದ ಕಲ್ಲೋಲ ಶಬ್ದಪ್ರಯೋಗವು. ಇಂತಹ ಪದಗಳ ಪ್ರವಾಹದಿಂದ ವಿಷಮವಾದವುಗಳು, ವ್ಯತ್ಯಸ್ತವಾದವುಗಳೆಂದು ಹೇಳಿರುತ್ತಾರೆ. ಅಥವಾ ಒಂದು ಕೈಙ್ಕರ್ಯಕ್ಕಿಂತ ಇನ್ನೊಂದು ಕೈಙ್ಕರ್ಯ ಪ್ರಚುರವೆಂದೂ ಉತ್ಕೃಷ್ಟವೆಂದೂ ತೋರಬಹುದಾಗಿ, ಇಂತಹ ಕಾಲುಷ್ಯಯುಕ್ತವಾದುವೆಂದು ತಿಳಿಸುತ್ತಾರೆ. ಅಥವಾ ಆ ಕಾಲುಷ್ಯವೆಂಥಾದ್ದೆಂದರೆ ಈ ಕೈಙ್ಕರ್ಯಗಳಿಗೆ ನಾನು ಮುಂದೆ, ನಾನು ಮುಂದೆ ಎಂಬ ಕುತೂಹಲದಿಂದಾದರೂ ಉಂಟಾಗಬಹುದು ಎಂಬ ತಾತ್ಪರ್ಯವು.

(೨) ಮುನಿಸಿದ್ಧಾದಿ ಸುಲಭಾಃ ಎಂಬ ಎರಡನೆಯ ವಿಶೇಷಣದಿಂದ ಇವು ಯಾರಿಗೆ ಸುಲಭವಾಗಿ ಉಂಟಾಗುತ್ತವೆ, ಯಾರಿಗೆ ಸುಖಲಭ್ಯಾಃ ಸುಖವಾಗಿ ಕ್ಲೇಶವಿಲ್ಲದೆ ಉಂಟಾಗುತ್ತವೆ, ಎಂದರೆ, ಮುನಿಸಿದ್ಧಾದಿಗಳಿಗೆ ಎಂದು ಹೇಳುತ್ತಾರೆ. ಸನಕಾದಿ ಮುನಿಗಳಿಗೂ, ಅನಂತ ಗರುಡ ವಿಷ್ವಕ್ಸೇನಾದಿ ನಿತ್ಯರಿಗೂ, ಆದಿ ಶಬ್ದದಿಂದ ಪರಮಭಾಗವತೋತ್ತಮರಾಗಿ ಪ್ರಪನ್ನರಾಗಿ ಮುಕ್ತಿ ಹೊಂದಿದವರಿಗೂ ಇವು ಸುಲಭವು. ಇತರ ಸಾಧಾರಣ ಜನಗಳಿಗೆ ಸುಲಭಸಾಧ್ಯವಲ್ಲವೆಂಬ ಭಾವವು. "ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ । ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ" ಎಂದು ಹೇಳಿರುವ ಹಾಗೆ ಅಂತಹ ಕೈಙ್ಕರ್ಯಗಳ ಪ್ರಾಪ್ತಿಯನ್ನು ಹೊಂದಿದವರು ಅತಿ ವಿರಳರೆಂಬ ಭಾವವು. ಇಂತಹ ಮುನಿಸಿದ್ಧಾದಿಗಳಿಗುಂಟಾದ ಪರಮಪ್ರಿಯತಮವಾದ ಭಗವತ್ಕೈಙ್ಕರ್ಯವನ್ನು ಮಾಡುವುದರಲ್ಲಿ ತ್ವರಾತಿಶಯವೂ ಶ್ರದ್ಧೆಯೂ ನನ್ನ ಮನಸ್ಸಿನಲ್ಲಿ ಸ್ಥಿರವಾಗಿರಲಿ ಎಂದು ಪ್ರಾರ್ಥಿಸುತ್ತಾರೆ.

(೩) ಇಲ್ಲಿ ನಮಗೆ ಪ್ರಾಪ್ತವಾಗುವ ಕೈಙ್ಕರ್ಯಗಳು ಉಪಾಧಿಯುಕ್ತವಾಗಿ ಅಷ್ಟು ಆನಂದಯುಕ್ತವಾದವಲ್ಲವು. ಆದರೆ ಕೆಲವು ಪ್ರಪನ್ನರು ಬಹು ಶ್ರದ್ಧೆಯಿಂದ ಇಲ್ಲೂ ಭಗವದ್ಭಾಗವತ ಕೈಙ್ಕರ್ಯಗಳನ್ನೆಸಗುವದನ್ನು ಕಂಡಿಲ್ಲವೇ ? ಅಂತಹ ಕೈಙ್ಕರ್ಯಗಳೇ ನಮಗೆ ಪ್ರಾಪ್ತವಾಗುವಂತಹವು, ಎಂದರೆ ಇವುಗಳಲ್ಲೂ ಪರಿಮಿತಿ ಇರುವದರಿಂದ ಅಂಥಾವಲ್ಲವೆಂದೂ ಅಲ್ಲಿ ಪ್ರಾಪ್ತವಾಗುವ ಕೈಙ್ಕರ್ಯಗಳು ನಿರತಿಶಯವಾದುವೆಂದೂ ಪರಿಪೂರ್ಣಬ್ರಹ್ಮಾನಂದಕ್ಕೆ ಸಮವಾದ ಆನಂದದಿಂದುಂಟಾದ ಪರೀವಾಹರೂಪವಾದುವು ಎಂದು ಹೇಳಿರುತ್ತಾರೆ. ಅಧಿಕಾರಾವಿ ಶ್ಲೋಕದಲ್ಲಿ "ವಿಚಿತ್ರ ವಿಭೂತಿಕಂ ಪರಮಂ ಸಾಮ್ಯಂ ಭಜತಿ" ಹೀಗೆ ಪರಿಪೂರ್ಣಬ್ರಹ್ಮಾನುಭವವನ್ನು ಹೊಂದಿ ಪರಬ್ರಹ್ಮನೊಂದಿಗೆ ಸಮವಾದ ಆನಂದವನ್ನು ಹೊಂದುವನೆಂದು ಹೇಳುವುದನ್ನೇ ಈ ಮೂರನೆಯ ವಿಶೇಷಣದಿಂದ ಉಪಪಾದಿಸಿ ಹೇಳುತ್ತಾರೆ. ಪರಿಪೂರ್ಣಬ್ರಹ್ಮಾನುಭವವೆಂಬುವದನ್ನು ಮುಖ್ಯವಾಗಿ

ಈ ನಿಗಮನ ಶಬ್ದ ಶ್ರುತಿ ಶ್ಲೋಕದಿಂದಲೂ ತಿಳಿಸುತ್ತಾರೆ. ಈ ಪರಬ್ರಹ್ಮಾನುಭವ ವೆಂಥಾದ್ದೆಂದರೆ:—ಸ್ವಗುಣ ವಿಭವಾ ಸಂಜನ ಕನನ್ಮಹಾನಂದರೂಪವಾದುದು ಎಂದು ತಿಳಿಸುತ್ತಾರೆ. ತನ್ನ ಕಲ್ಯಾಣಗುಣ ಸಮೂಹನೇನು, ಉಭಯ ವಿಭೂತಿಯಿಂದ ಯುಕ್ತನಾಗಿರುವನೇನು, ಲೀಲಾವಿಭೂತಿಯ ಸೃಷ್ಟಿಸ್ಥಿತಿ ನಿಯಮನಾದಿಗಳೇನು, ನಿತ್ಯವಿಭೂತಿಯ ಸ್ಥಿತಿನಿಯಮನಾದಿಗಳೇನು, ಇಂತಹ ಸ್ವರೂಪ ರೂಪಗುಣವಿಭವೈಶ್ವರ್ಯಾದಿ ಸಕಲವಿಶೇಷಣಗಳಿಂದ ಯುಕ್ತನಾಗಿ ಕೋಟಿಸೂರ್ಯ ಪ್ರಕಾಶದಂತೆ ಜಾಜ್ವಲ್ಯಮಾನನಾಗಿ, "ತಸ್ಯಭಾಸಾ ಸರ್ವಮಿದಂ ವಿಭಾತಿ" ಎಂದು ಶ್ರುತಿಯಲ್ಲಿ ಹೇಳಿರುವಹಾಗೆ ಕಂಗೊಳಿಸುತ್ತಿರುವ ಆನಂದಮಯನೆಂದು ಶ್ರುತಿಯಲ್ಲಿ ಉಪಪಾದಿತನಾದ ಪರಬ್ರಹ್ಮನೆಂದು ಹೇಳಿರುತ್ತಾರೆ ಈ ಆನಂದವು ಮಹಾನಂದವೆಂದು ಹೇಳಲ್ಪಟ್ಟಿರುತ್ತದೆ. ಏಕೆಂದರೆ, ಶ್ರುತಿಯು ಆದರ ಮೀಮಾಂಸಾ ಸಾಧ್ಯವೇ ಎಂದು ಯೋಚಿಸಿ ಹೇಳಲು ಹೊರಟು ಮನುಷ್ಯಾನಂದದಿಂದ ಬ್ರಹ್ಮಾನಂದವರೆಗೂ ಹಿಂದಕ್ಕಿಂತ ಒಂದು ನೂರರಷ್ಟು ಎಂದು ಹೇಳುತ್ತಾ ಹೋಗಿ ಕಡೆಗೆ ಪರಬ್ರಹ್ಮಾನಂದವಿಂಥಾದ್ದೆಂದು ಹೇಳಲು ಸಾಧ್ಯವಿಲ್ಲದೆ ಹೋಗಿ, ಯತೋವಾಚೋ ನಿವರ್ತಂತೇ। ಅಪ್ರಾಪ್ಯ ಮನಸಾಸಹ, ವಾಕ್ಕು ಇಷ್ಟೆಂದು ಹೇಳಲಾರದು, ಮನಸ್ಸು ಇಷ್ಟೆಂದು ಊಹಿಸಲಾರದೆಂದು ಹೇಳಿ ಶ್ರುತಿಯು ವಿರಾಮ ಹೊಂದಿತೆಂದು ಹೇಳಲ್ಪಟ್ಟಿರುತ್ತದೆ. ಈ ಕಾರಣದಿಂದ ಮಹಿಮಾನಂದವೆಂಬ ಪ್ರಯೋಗವು. ಇಂತಹ ಆನಂದಸ್ವರೂಪನೂ ಆನಂದಗುಣಕನೂ ಆದ ಪರಬ್ರಹ್ಮನ ಅನುಭವವೆಂಬ ಭಾವವು. ಹೀಗೆ ಸ್ವಕೀಯವಾದ ಸ್ವರೂಪ ರೂಪಗುಣ ವಿಭವೈಶ್ವರ್ಯಾದಿ ವಿಶೇಷಣಗಳಿಂದ ಪರಿಪೂರ್ಣನಾದ ಪರಬ್ರಹ್ಮನ ಅನುಭವವು ಮುಕ್ತನಿಗೆ ಉಂಟಾಗುತ್ತದೆ. ಈ ಅನುಭವದ ಪರಿವಾಹರೂಪಗಳಾದವು ಕೈಂಕರ್ಯಗಳೆಂದು ಹೇಳಲ್ಪಟ್ಟವು ಆದರೆ ಈ ಪರಿಪೂರ್ಣನಾದ ಪರಬ್ರಹ್ಮನ ವಿಷಯದಲ್ಲಿ ಕಲ್ಯಾಣಗುಣಗಣವೇ ಮೊದಲಾದ ವಿಶೇಷಣಗಳಿಂದ ಪರಬ್ರಹ್ಮನಿಗೆ ಉತ್ಕರ್ಷವೇ ಅಥವಾ ಪರಬ್ರಹ್ಮನಿಂದ ಅವುಗಳಿಗೆ ಉತ್ಕರ್ಷವೇ ಎಂಬ ಚರ್ಚೆಯಲ್ಲಿ ಎರಡೂ ಉತ್ಕೃಷ್ಟವಾದುದರಿಂದ ಎರಡರ ಆಸಂಜನವು ಸಮ್ಮೇಳನವು ಸರ್ವೋತ್ಕೃಷ್ಟತೆಗೆ ಕಾರಣವೆಂಬ ಭಾವವು. ಈ ಅಭಿಪ್ರಾಯವನ್ನು ವಿಶದೀಕರಿಸುವದಕ್ಕಾಗಿ ಮಧುಕ್ಷೀರನ್ಯಾಯ ದೃಷ್ಟಾಂತವನ್ನು ಕೊಟ್ಟಿರುತ್ತಾರೆ. ಮಧುವೂ ಮಧುರವಾಗಿರುತ್ತದೆ, ಕ್ಷೀರವೂ ಮಧುರವಾಗಿರುತ್ತದೆ, ಇವೆರಡೂ ಬೆರತರೆ ಹೇಗೆ ಸರ್ವೋತ್ಕೃಷ್ಟ ರುಚಿಯು ಉಂಟಾಗಿ ಕ್ಷೀರ, ಮಧು ಇವುಗಳಿಗಿಂತಲೂ ಶ್ರೇಷ್ಠವಾದ ಭೋಗ್ಯವಸ್ತುವೆನಿಸುತ್ತದೋ ಹಾಗೆಯೇ ಕಲ್ಯಾಣಗುಣವಿಶೇಷಣಾದಿಗಳಿಂದ ಯುಕ್ತನಾದವನೇ ಪ್ರಾಪ್ಯನೆಂದೆಣಿಸಿ ಪರಮ

ಭೋಗ್ಯನಾಗುವನು ಎಂಬ ಭಾವವು. ಶರಣಾಗತನಿಗೆ ಆಶ್ರಯಣೋಪಯುಕ್ತವಾದ ಗುಣಗಳುಳ್ಳವರಿಂದಲೇ ಆತನು ಆಶ್ರಯಿಸಲ್ಪಡುವನು. ಇಲ್ಲದಿದ್ದರೆ ಯಾರೂ ಪರಬ್ರಹ್ಮವನ್ನು ಕಣ್ಣೆತ್ತಿ ನೋಡನು. ಈ ಮಧುಕ್ಷೀರ ದೃಷ್ಟಾಂತದಂತೆ ಇನ್ನು ಇತರ ದೃಷ್ಟಾಂತಗಳನ್ನು ವ್ಯಾಖ್ಯಾನಿಗಳು ಕೊಟ್ಟಿರುತ್ತಾರೆ :—ಪುಷ್ಪ ಮತ್ತು ಪರಿಮಳ ; ಪುಷ್ಪವೇ ರಮಣೀಯವಾಗಿ ಉತ್ಕೃಷ್ಟವಾದುದು ಅದರೊಂದಿಗೆ ದಿವ್ಯ ಪರಿಮಳವೂ ಸೇರಿದರೆ ಸರ್ವೋತ್ಕೃಷ್ಟವಾಗಿ ಪರಮಭೋಗ್ಯವಾದುದು. ಹಾಗೆಯೇ ರತ್ನವು ಉತ್ಕೃಷ್ಟವಾದುದು, ಅದಕ್ಕೆ ಒಳ್ಳೇ ದೀಪ್ತಿಯು ಸೇರಿದರೆ ಇನ್ನು ಉತ್ಕೃಷ್ಟತೆಯನ್ನು ಹೊಂದಿ ಮಹಾರ್ಘವಾದುದಾಗುತ್ತದೆ. (ದಾಸನು ಬರೆದಿರುವ ಶ್ರೀಸ್ತುತಿಯ ೨೮ ನೆಯ ಪುಟ ನೋಡಿ.) ಬ್ರಾಹ್ಮಣನು ಶಮದಮಾದಿ ಗುಣಗಳಿಂದ ಉತ್ಕೃಷ್ಟತೆಯನ್ನು ಹೊಂದಿರುತ್ತಾನೆ ; ಕರ್ಮನಿಷ್ಠೆ ಜ್ಞಾನನಿಷ್ಠೆಗಳಿಂದ ಸೇರಿ ಮಹಾ ಬ್ರಹ್ಮಜ್ಞಾನಿಯಾದರೆ ಇನ್ನು ಉತ್ಕೃಷ್ಟತೆಯನ್ನು ಹೊಂದುವನಾಗುತ್ತಾನೆ. ಸರ್ವಲಾವಣ್ಯಯುಕ್ತಳಾದ ಸ್ತ್ರೀಗೆ ಮಹಾ ಪಾತಿವ್ರತ್ಯಾದಿ ಅಮೋಘಗುಣಗಳು ಸೇರಿದರೆ ಇನ್ನು ಸರ್ವೋತ್ಕೃಷ್ಟಳಾಗಿ ರಂಜಿಸುವಳು. ಹೀಗೆ ಧರ್ಮಧರ್ಮಿಗಳಿಗೆ ಪರಸ್ಪರ ಉತ್ಕರ್ಷತೆಯೂ, ಅವುಗಳ ಸಮ್ಮೇಳನದಿಂದ ಉತ್ಕರ್ಷಾಧಿಕ್ಯವೂ ಉಂಟೆಂದು ಹೇಳುವದಕ್ಕಾಗಿ ಶ್ರೀದೇಶಿಕರವರು ಅಸಂಜನಿಕೆ ಶಬ್ದವನ್ನು ಪ್ರಯೋಗಿಸಿರುತ್ತಾರೆ. ಹೀಗೆ ಹೇಯಗಂಧವು ಸ್ವಲ್ಪವೂ ಇಲ್ಲದೆ ಜ್ಞಾನ ಬಲೈಶ್ವರ್ಯ ವೀರ್ಯ ಶಕ್ತಿ ತೇಜಸ್ಸೇ ಮೊದಲಾದ ಕಲ್ಯಾಣಗುಣಗಳಿಗೆ ಆಕರನಾಗಿರುವ, ಅಪಾರಕಾರುಣ್ಯ ಸೌಶೀಲ್ಯವಾತ್ಸಲ್ಯೌದಾರ್ಯ ಮಹೋದಧಿಯಾಗಿ, ಅನಾಲೋಚಿತ ವಿಶೇಷಾಶೇಷಲೋಕಶರಣ್ಯನಾಗಿ, ಪ್ರಣತಾರ್ತಿಹರನಾಗಿ, ಆಶ್ರಿತವಾತ್ಸಲ್ಯೈಕ ಜಲಧಿಯಾಗಿ ಮತ್ತು ವಿಚಿತ್ರಾನಂತ ಭೋಗ್ಯಭೋಗೋಪಕರಣಭೋಗಸ್ಥಾನ ಪರಿಪೂರ್ಣನಾಗಿ ಸಮಸ್ತ ಜಗತ್ತುಗಳ ಉದಯವಿಭವ ಲಯಗಳನ್ನೇ ಲೀಲೆಯಾಗಿ ಇರುವವನು ಪರಬ್ರಹ್ಮನು. ಆತನು ಇಂತಹ ಸರ್ವೋತ್ಕೃಷ್ಟ ವಿಶೇಷಣಗಳಿಂದ ಕೂಡಿದವನು ; ಮತ್ತು ಆತನ ಸ್ವರೂಪವೂ ಸಹ ಸರ್ವೋತ್ಕೃಷ್ಟವಾದುದು. ಆತನು ಜ್ಞಾನ ಸ್ವರೂಪನು, ಜ್ಞಾನ ಗುಣಕನು, ಆನಂದಸ್ವರೂಪನು, ಆನಂದಗುಣಕನು. ಹೀಗಿರುವಾಗ ಅದ್ವೈತಿಗಳು ಸ್ವರೂಪವನ್ನು ಮಾತ್ರ ಇಟ್ಟುಕೊಂಡು, ಪರಬ್ರಹ್ಮನಿಗೆ ಗುಣಗಳನ್ನು ಮಾತ್ರ ಪರಮ ನಿಕ್ಕರುಣೆಯಿಂದ ತೆಗೆದು ಬಿಸುಡಿರುತ್ತಾರೆ. ಹೀಗೆ ತೆಗೆದುಹಾಕಿದರೆ, ಮಧುವಿಲ್ಲದ ಕ್ಷೀರದಹಾಗೂ, ಕಾಂತಿ ಇಲ್ಲದ ರತ್ನದ ಹಾಗೂ, ಪರಿಮಳವಿಲ್ಲದ ಪಾಶ್ಚಾತ್ಯರ ಪುಷ್ಪಗಳ ಹಾಗೂ, ಕರ್ಮನಿಷ್ಠೆ ಜ್ಞಾನನಿಷ್ಠೆಗಳಿಲ್ಲದ ಬ್ರಾಹ್ಮಣನಹಾಗೂ ಪಾತಿವ್ರತ್ಯಾದಿ ಮಹಾಗುಣಗಳಿಲ್ಲದ ಸ್ತ್ರೀಯ ಹಾಗೂ

ಪರಮಾತ್ಮನು ಕಲ್ಯಾಣಗುಣಗಳಿಲ್ಲದೆ ಹೆಚ್ಚಾಗಿ ಶೋಭಿಸುವದಿಲ್ಲವು. ಆಶ್ರಯೋಪಯುಕ್ತ ಗುಣಗಳಿಲ್ಲದ ಬರಿಯ ಅಂತಹ ನಿರ್ಗುಣಬ್ರಹ್ಮನು ಅನುಗ್ರಹಿಸಲು ಯೋಗ್ಯನಾಗನು. ಆದರೆ ಶಾಸ್ತ್ರಗಳಲ್ಲಿ ಆತನು ನಿರ್ಗುಣನೆಂದು ಹೇಳಿದೆಯಲ್ಲಾ ಎಂದರೆ ಪ್ರಾಕೃತವಾದ ಅಥವಾ ಪ್ರಾಕೃತತುಲ್ಯವಾದ ಗುಣಗಳಿಲ್ಲವೆಂದೂ ಅಪ್ರಾಕೃತಗುಣಗಳುಳ್ಳವನೆಂದೂ ಅಭಿಪ್ರಾಯವು. ಹೀಗೆ ಪರಿಪೂರ್ಣನಾಗಿ ಆನಂದಸ್ವರೂಪನಾಗಿ ಅನಂತಗುಣಕನಾಗಿರುವದರಿಂದಲೇ ನಮ್ಮನ್ನು "ಆನಂದಯಾತಿ" ಆನಂದಗೊಳಿಸುವನು ಎಂದೂ, ತನಗೆ ಸಮಾನನಾದ ಆನಂದವನ್ನುಂಟುಮಾಡುವನೆಂದೂ ಶ್ರುತಿಗಳಲ್ಲಿ ಹೇಳಲ್ಪಟ್ಟಿವೆ.

ಈ ವಿಶೇಷಣದಲ್ಲಿ ಸ್ವಗುಣವಿಭವಾಸಂಜನ ಎಂಬಲ್ಲಿ ಸ್ವ ಶಬ್ದಕ್ಕೆ ಸಾರಾಸ್ವಾದಿನಿ, ಸಾರಪ್ರಕಾಶಿಕಾ, ಸಾರ ವಿವರಿಣೀ ವ್ಯಾಖ್ಯಾತೃಗಳು ಪರಬ್ರಹ್ಮಪರವಾಗಿ ಅರ್ಥವನ್ನು ಬರೆದಿರುತ್ತಾರೆ. ಇವುಗಳನ್ನನುಸರಿಸಿಯೇ ದಾಸನು ಉಪಪಾದನೆಯನ್ನು ಮಾಡಿರುತ್ತೇನೆ. ಆದರೆ ಸಾರದೀಪಿಕಾ, ಸಾರಸಂಗ್ರಹ ವ್ಯಾಖ್ಯಾತೃಗಳು ಸ್ವ ಶಬ್ದಕ್ಕೆ ಜೀವಪರವಾಗಿ ಅರ್ಥ ಮಾಡಿರುತ್ತಾರೆ. ಆಗ ಪರಮಾತ್ಮನ ಮಹಾನಂದಕ್ಕೆ ಮುಕ್ತನಾದ ಜೀವಾತ್ಮನ ಗುಣಗಳಿಂದ ಆವಿರ್ಭವಿಸಿದ ಅಪಹತ ಪಾಪ್ಮತ್ವಾದಿಗುಣಾಷ್ಟಕಗಳೊಂದಿಗೆ ಸಮ್ಮೇಳನವು ಹೇಳಲ್ಪಟ್ಟಿತು; ಈ ಸಮ್ಮೇಳನವು ಮಧುಕ್ಷೀರನ್ಯಾಯರೂಪವಾದುದು, ಮಧುವು ಕ್ಷೀರಕ್ಕೆ ತನ್ನಲ್ಲಿರುವ ಸರ್ವಗುಣಗಳನ್ನೂ ಕೊಡುತ್ತದೆ, ಹಾಗೆಯೇ ಪರಬ್ರಹ್ಮನೂ ಸಹ ಆ ಮುಕ್ತನಿಗೆ ಸಮಾನ ಭೋಗವನ್ನುಂಟುಮಾಡುವನೆಂಬ ಭಾವವು ತೋರಿಬರುತ್ತದೆ. ಆದರೆ ಅಧಿಕಾರವು ಪರಿಪೂರ್ಣಬ್ರಹ್ಮಾನುಭವಾಧಿಕಾರವಾಗಿ, ಇಲ್ಲಿ ಪರಿಪೂರ್ಣ ಬ್ರಹ್ಮಾನುಭವವೂ, ಅದರ ಫಲವಾಹವಾಗಿ ಕೈಙ್ಕರ್ಯವೂ ಎರಡೂ ಮುಕ್ತನಿಗುಂಟಾಗುತ್ತದೆ ಎಂದೂ ಹೇಳುವದು ಇಲ್ಲಿ ಪ್ರಕೃತವಾದುದರಿಂದ ಮೊದಲಿನ ಅಭಿಪ್ರಾಯವೇ ಶ್ಲಾಘ್ಯತರವಾಗಿ ತೋರುತ್ತದೆ.

ಎಂಬಲ್ಲಿಗೆ

ಶ್ರೀಮದ್ರಹಸ್ಯತ್ರಯಸಾರದ

೨೨ನೆಯದಾದ ಪರಿಪೂರ್ಣಬ್ರಹ್ಮಾನುಭವಾಧಿಕಾರಕ್ಕೆ

ತಿರುನಾರಾಯಣಪುರಂ ವಿಜಯರಾಘವ ಶರ್ಮನ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

**ಸಂದೃಷ್ಟಸ್ಸಾರವಾಗ್ಮಿತ್ಸ್ವಪರ ನಿಶಿತಧೀ ಸ್ಸಂಗ ಜಿನ್ನೈಕ ಸಂಸ್ಥ
ಸ್ವಸ್ವೋಪಾಯೋತಿ ಖಿನ್ನ ಸ್ವಪರಿಕರ ಭರನ್ಯಾಸ ನಿಷ್ಪನ್ನಕೃತ್ಯಃ**

ಅವತಾರಿಕೆ. ಈ ಇಪ್ಪತ್ತೆರಡು ಅಧಿಕಾರಗಳಿಂದಲೂ ಎಂದರೆ ಪ್ರಧಾನ ಪ್ರತಿತನ್ತ್ರಾಧಿಕಾರ ಮೊದಲುಗೊಂಡು ಈ ಪರಿಪೂರ್ಣಬ್ರಹ್ಮಾನುಭವಾಧಿಕಾರಾಂತ್ಯವವರೆಗೂ ತತ್ವಹಿತ ಪುರುಷಾರ್ಥಗಳು ಯಾವುವು ? ಎಂದು ಉಪದೇಶಿಸಿ ಇವೆಲ್ಲಾ ಶ್ರೀಮದ್ರಹಸ್ಯತ್ರಯದಲ್ಲಿ ಅಡಗಿವೆ ಎಂದು ತೋರಿಸಿದುದನ್ನೆಲ್ಲಾ ಒಂದು ಶ್ಲೋಕದಿಂದ ಸರ್ವರೂ ಕ್ರಮವಾಗಿ ಅನುಸಂಧಾನಮಾಡಲಿ ಎಂಬಾಶಯದಿಂದ ಸಂಗ್ರಹಿಸಿ ಹೇಳುತ್ತಾರೆ,

ಅರ್ಥವು—**ಏಕಃ ಅಚ್ಯುತಂ ನಿತ್ಯಂ ಅನುಭವತಿ** ಎಂಬುವು ಇಲ್ಲಿ ಕರ್ತೃಕ್ರಿಯಾಪದಗಳು. ಏಕಃ ಎಂದರೆ ಕಶ್ಚಿದೇಕಃ ಎಲ್ಲೋ ಒಬ್ಬ ಮುಕ್ತನಾಗುವನು, ಅಚ್ಯುತಂ-ಯಾವನಿಂದ ಚ್ಯುತವಾದುದು ಇಲ್ಲವೋ ಅಂತಹ ಪರಿಪೂರ್ಣಬ್ರಹ್ಮಾನುಭವವನ್ನು ಕೊಡುವ ಅಥವಾ ಯಾವುದೂ ಚ್ಯುತವಲ್ಲದೆ ಅವಾಪ್ತ ಸಮಸ್ತ ಕಾಮನಾದ ಸರ್ವೇಶ್ವರನನ್ನು, ನಿತ್ಯಂ - ಸದಾ, ಎಂದರೆ ಪುನರಾವರ್ತಿ ಇಲ್ಲದಹಾಗೆ, **ಅನುಭವತಿ** – ಅನುಭವಿಸುವನು ಎಂಬರ್ಥವು. ಆ ಮುಕ್ತನು ಎಂತವನೆಂದರೆ ಹೇಳುತ್ತಾರೆ:—**ಸಂದೃಷ್ಟಃ** - ಬದ್ಧ ದೆಶೆಯಲ್ಲಿ ಪ್ರಥಮತಃ ಗುರುಕಟಾಕ್ಷದಿಂದ ಈಕ್ಷಿಸಲ್ಪಟ್ಟವನಾದ, ಇದರಿಂದ ಉಪೋದ್ಘಾತಾಧಿಕಾರಾರ್ಥವು ಹೇಳಲ್ಪಟ್ಟಿತು, **ಸಾರವಾಗ್ಮಿತ್** - ಶಾಸ್ತ್ರಗಳಲ್ಲೆಲ್ಲಾ ಸಾರತಮವಾದುದು ರಹಸ್ಯತ್ರಯಾರ್ಥಗಳೆಂದು ತಿಳಿದ ಸಾರಜ್ಞನಾಗಿ ಇದರಿಂದ ಸಾರನಿಷ್ಕರ್ಷಾರ್ಥವು ಸೂಚಿಸಲ್ಪಟ್ಟಿತು, **ಸ್ವಪರ ನಿಶಿತಧೀಃ** - **ಸ್ವಶ್ಚ ಸ್ವಶ್ಚ ಸ್ವೌ** ಎಂಬ ವ್ಯುತ್ಪತ್ತಿಯಿಂದ ಜೀವಾತ್ಮನಾದ ತಾನೂ ತನಗೆ ಭೋಗ್ಯಭೂತವಾದ ಅಚೇತನವೂ ಎರಡೂ ಸ್ವಶಬ್ದದಿಂದ ಹೇಳಲ್ಪಟ್ಟಿತು. ಹೀಗೆ ಚಿದಚಿತ್ತುಗಳ ಮತ್ತು **ಪರ**-ಪರಮಾತ್ಮನ ವಿಷಯವಾದ, **ನಿಶಿತಧೀಃ**-ನಿಷ್ಕೃಷ್ಟವಾದ ಯಥಾರ್ಥವಾದ ಜ್ಞಾನವುಳ್ಳವನಾದ, ಇದರಿಂದ ಚಿದಚಿತ್ತುಗಳು ಸರ್ವೇಶ್ವರನಿಗೆ ಶರೀರವೆಂದು ಹೇಳಿರುವ ಪ್ರಧಾನ ಪ್ರತಿತಂತ್ರಾಧಿಕಾರ, ಅರ್ಥಪಂಚಕಾಧಿಕಾರ, **ತತ್ವತ್ರಯಾಧಿಕಾರ**, ಪರದೇವತಾ ಪಾರಮಾರ್ಥ್ಯಾಧಿಕಾರಗಳ ಅರ್ಥವೂ ಹೀಗೆ ನಾಲ್ಕು ಅಧಿಕಾರಗಳ ಅರ್ಥಗಳೂ ಸಂಗ್ರಹಿಸಲ್ಪಟ್ಟವು. **ಸಂಗಜಿತ್** - ಐಹಿಕ ವಿಷಯಭೋಗರೂಪ ಐಶ್ವರ್ಯ, ಸ್ವರ್ಗಾದಿ ಲೋಕಗಳ ಉಪಭೋಗ, ಕೈವಲ್ಯ ಮೊದಲಾದವುಗಳಲ್ಲಿ ಅಭಿಲಾಷೆಯನ್ನು ಜಯಿಸಿದವನಾಗಿ, ಮುಮುಕ್ಷೆಯನ್ನು ತ್ಯಜಿಸಿದವನಾದ, ಇದರಿಂದ ಮುಮುಕ್ಷುತ್ವಾಧಿಕಾರಾರ್ಥವು ಉಪದೇಶಿಸಲ್ಪಟ್ಟಿತು, **ನೈಕ**

ಸ್ವಾವಸ್ಥಾರ್ಹಾಂ ಸಪರ್ಯಾವಿಧಿ ಮಿಹ ನಿಯತಂ ವ್ಯಾಗಸಂಕ್ವಾಪಿಬಿಭ್ರ ।
ನ್ನಿರ್ಮುಕ್ತಸ್ಥೂಲ ಸೂಕ್ಷ್ಮ ಪ್ರಕೃತಿರನುಭವತ್ಯಚ್ಯುತಂ ನಿತ್ಯಮೇಕಃ ॥

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ
ಶ್ರೀಮದ್ವೇಙ್ಕಟ ನಾಥಸ್ಯ ವೇದಾಂತಾಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ
ಅರ್ಥಾನುಶಾಸನ ಭಾಗಃ ಪ್ರಥಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ.

ಸಂಸ್ಥಃ, ನೈಕ-ಒಂದಲ್ಲದೆ ಇರುವ ಎಂದರೆ ಭಕ್ತಿ ಪ್ರಪತ್ತಿ ಎಂಬ ಎರಡು ವಿಧ ಉಪಾಯಗಳ **ಸಂಸ್ಥಃ**-ಅಧಿಕಾರಿಗಳ ಜ್ಞಾನವುಳ್ಳವನಾದ, ಇದರಿಂದ ಅಧಿಕಾರ ವಿಭಾಗಾಧಿಕಾರಾರ್ಥವು ವ್ಯಕ್ತವು, **ಸ್ಪಷ್ಟೋಪಾಯಃ** – ಎರಡು ವಿಧ ಉಪಾಯಗಳ ಸ್ಪಷ್ಟವಾದ ಎಂದರೆ ನಿರ್ಣೀತವಾದ ಉಪಾಯಜ್ಞಾನವುಳ್ಳವನಾದ, ಇಲ್ಲಿ ಉಪಾಯ ವಿಭಾಗಾಧಿಕಾರಾರ್ಥವು ಸ್ಮರಿಸಲ್ಪಟ್ಟಿತು, **ಅತಿಖಿನ್ನಃ**-ತನ್ನ ಅಕಿಂಚನತ್ವ ಅನನ್ಯಗತಿತ್ವಾವಸ್ಥೆಗಳಿಂದ ಅತಿ ದುಃಖಿತನಾದ, ಇಲ್ಲಿ ಪ್ರಪತ್ತಿಯೋಗ್ಯಾಧಿಕಾರ್ಥವು ನಿರೂಪಿಸಲ್ಪಟ್ಟಿತು. **ಸಪರಿಕರ ಭರನ್ಯಾಸ ನಿಷ್ಪನ್ನಕೃತ್ಯಃ** ಪರಿಕರಗಳಿಂದ ಸೇರಿದ ಸಾಙ್ಗ ಭರನ್ಯಾಸದಿಂದ ಕೃತಕೃತ್ಯನಾಗಿ, ಇದರಿಂದ ಪರಿಕರವಿಭಾಗಾಧಿಕಾರ, ಸಾಙ್ಗ ಪ್ರಪದನಾಧಿಕಾರ, ಕೃತಕೃತ್ಯಾಧಿಕಾರ ಇವುಗಳರ್ಥಗಳು ಜ್ಞಾಪಿಸಲ್ಪಟ್ಟವು, **ಸ್ವಾವಸ್ಥಾರ್ಹಂ**, ಇದೂ **ಸಪರ್ಯಾವಿಧಿಂ, ಇಹನಿಯತಂ, ವ್ಯಾಗಸಂ**, ಇವುಗಳಿಗೆಲ್ಲಾ **ಬಿಭ್ರತ್** ಎಂಬುವದರೊಂದಿಗೆ ಅನ್ವಯವು; **ಸ್ವಾವಸ್ಥಾರ್ಹಂ** - ತನ್ನ ಈಗ ಪ್ರಾಪ್ತವಾದ ಮಹತ್ತಾದ ಅವಸ್ಥೆಗೆ ಯೋಗ್ಯವಾದುದನ್ನು ಅದು ಯಾವುದೆಂದರೆ ಸ್ವನಿಷ್ಠಾಭಿಜ್ಞಾನವನ್ನು, **ಸಪರ್ಯಾವಿಧಿಂ**-ಕೈಂಕರ್ಯ ವಿಧಿಯನ್ನು, ಇದರಿಂದ ಉತ್ತರಕೃತ್ಯಾಧಿಕಾರವೂ ಮತ್ತು ಪುರುಷಾರ್ಥ ಕಾಷ್ಠಾಧಿಕಾರವೂ ಸಹ ಪ್ರದರ್ಶಿಸಲ್ಪಟ್ಟವು, **ಇಹ ನಿಯತಂ** - ಈ ಲೋಕದಲ್ಲೇ ಶಾಸ್ತ್ರಗಳಲ್ಲಿ ನಿರ್ಣಯಿಸಲ್ಪಟ್ಟಿರುವ ಹಾಗೆ, ಶಾಸ್ತ್ರೀಯ ನಿಯಮನಾಧಿಕಾರಾರ್ಥವು ಬೋಧಿಸಲ್ಪಟ್ಟಿತು, **ವ್ಯಾಗಸಂ** - ಪಾಪಗಳೊಂದೂ ಇಲ್ಲದಹಾಗೆ, ಇದರಿಂದ ಅಪರಾಧಪರಿಹಾರಾಧಿಕಾರಾರ್ಥವು ಶಿಕ್ಷಿತವಾಯಿತು ; **ಕ್ವಾಪಿ** - ಯಾವುದಾದರೂ ಒಂದು ಸ್ಥಾನವಿಶೇಷದಲ್ಲಿ, ಸ್ಥಾನವಿಶೇಷಾಧಿಕಾರಾಭಿಪ್ರಾಯವು ವ್ಯವಸ್ಥಿತವಾಯಿತು ; **ಬಿಭ್ರತ್** - ಧರಿಸುವವನಾಗಿ, **ನಿರ್ಮುಕ್ತಸ್ಥೂಲ ಸೂಕ್ಷ್ಮ ಪ್ರಕೃತಿಃ**- ಬಿಡಲ್ಪಟ್ಟ ಸ್ಥೂಲವಾದ ಪ್ರಕೃತಿ ಶರೀರ ಸಂಬಂಧವನ್ನೂ ಮತ್ತು ಸೂಕ್ಷ್ಮ

ಶರೀರ ಸಂಬಂಧವನ್ನೂ ಉಳ್ಳವನಾಗಿ; ಇದರಿಂದ ನಿರ್ಯಾಣಗತಿಚಿಂತನಾಧಿಕಾರ ಗಳ ತಾತ್ಪರ್ಯವು ಸ್ಪಷ್ಟವಾದಲ್ಲಾಯಿತು, ಇಂತಹ ಪ್ರಪನ್ನನು ಯಾವನೋ ಒಬ್ಬನು, (ಇಂತವನು ದೊರಕುವದು ದುರ್ಲಭವೆಂಬುದು ತಿಳಿಸಲ್ಪಟ್ಟಿತು.) **ಅನುಭವತ್ಯಚ್ಯುತಂ ನಿತ್ಯಂ** - ಪರಿಪೂರ್ಣಬ್ರಹ್ಮನನ್ನು ಪುನರಾವೃತ್ತಿ ಭಯ ವಿಲ್ಲದೆ ಅನುಭವಿಸುವನು ಎಂಬುದರಿಂದ ಪರಿಪೂರ್ಣಬ್ರಹ್ಮಾನುಭವಾಧಿಕಾರವು ಉಪದೇಶಿಸಲ್ಪಟ್ಟಿತು.

ತಾತ್ಪರ್ಯ—ಈ ಪರಿಪೂರ್ಣ ಬ್ರಹ್ಮಾನುಭವಾಧಿಕಾರದ ನಿಗಮನದಿಂದ ಶ್ರೀಮದ್ರಹಸ್ಯತ್ರಯಸಾರದ ಅರ್ಥಾನುಶಾಸನವೆಂಬ ಪ್ರಥಮ ಭಾಗವು ಪೂರೈ ಸಿತು. ಈ ಇಪ್ಪತ್ತೆರಡು ಅಧಿಕಾರಗಳಿಂದ ಶ್ರೀಮದ್ರಹಸ್ಯತ್ರಯದಲ್ಲಿ ತೋರಿಬರುವ ತತ್ತ್ವಹಿತಪುರುಷಾರ್ಥಗಳ ಸ್ವರೂಪವೇನೆಂಬುದನ್ನೂ ವಿಶದವಾಗಿ ಉಪದೇಶಿಸಿರು ವದರಿಂದ ಇದಕ್ಕೆ ಅರ್ಥಾನುಶಾಸನವೆಂಬ ಹೆಸರು. ಇದು ಶ್ರೀಮದ್ರಹಸ್ಯತ್ರಯ ಸಾರದ ಪ್ರಥಮ ಭಾಗವು. ಅರ್ಥಾನುಶಾಸನ ವೆಂದರೆ ರಹಸ್ಯತ್ರಯಾರ್ಥಗಳ ಶಿಕ್ಷಣವು, ಉಪದೇಶವು. ತತ್ತ್ವವೇನೆಂಬುದನ್ನು ಮೊದಲಿನ ಆರು ಅಧಿಕಾರಗಳಿಂ ದಲೂ, ಹಿತವೇನೆಂಬುದನ್ನು ಅನಂತರ ಹನ್ನೆರಡು ಅಧಿಕಾರಗಳಿಂದಲೂ, ಪುರುಷಾ ರ್ಥವನ್ನು ಅನಂತರ ಇನ್ನು ಮೂರು ಅಧಿಕಾರಗಳಿಂದಲೂ ಉಪದೇಶಿಸಿರುತ್ತಾರೆ.

ಈ ಶ್ಲೋಕದಿಂದ ಈ ೨೨ ಅಧಿಕಾರಗಳ ಅರ್ಥಗಳನ್ನು ಜ್ಞಾಪಕಕ್ಕೆ ತಂದು ಕೊಂಡು ಅನುಸಂಧಾನಕ್ಕೆ ಸಹಕಾರಿಯಾಗುವ ಹಾಗೆ ಅನುಗ್ರಹಿಸಿರುತ್ತಾರೆ. ಹೀಗೆ ಪ್ರಪನ್ನನಾಗಿ ಮುಕ್ತಿಯನ್ನು ಹೊಂದುವರು ಅತಿ ವಿರಳರಾಗಿ ಎಲ್ಲಿಯೋ ಒಬ್ಬೊಬ್ಬರೆಂದು ತಿಳಿಸುವದಕ್ಕಾಗಿ ಏಕಃ ಎಂಬ ಪ್ರಯೋಗವು. "ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ" ಎಂಬ ಗೀತಾಶ್ಲೋಕ ತಾತ್ಪರ್ಯವು (೭-೩) ಇಲ್ಲಿ ಸೂಚಿಸಲ್ಪಟ್ಟಿತು. ಅದೇನು ಅಷ್ಟು ದುರ್ಲಭ ವೆಂದರೆ ತತ್ತ್ವಜ್ಞಾನ ಬೇಕು, ಉಪಾಯಾನುಷ್ಠಾನ ಮಾಡಬೇಕು. ಇದ ಕ್ಕೆಲ್ಲಾ ಮೂಲಕಾರಣ ಚೇತನನ ಸುಕೃತಮೂಲಕ ಉಂಟಾದ ಸಿದ್ಧೋಪಾಯ ನಾದ ಪರಮೇಶ್ವರನ ಕೃಪಾಪ್ರಭಾವವೆಂದು ಹೇಳುವದಕ್ಕಾಗಿ ಸಂದೃಷ್ಟಃ ಎಂದು ಹೇಳಿರುತ್ತಾರೆ. ಆಗ ಶ್ರೀಹರಿಯು ಜನನಕಾಲದಲ್ಲಿ ತನ್ನ ಕೃಪಾಕಟಾಕ್ಷದಿಂದ ನೋಡುವವನಾಗಿ "ಜಾಯಮಾನಂಹಿ ಪುರುಷಂ ಯಂಪಶ್ಯೇನ್ಮಧುಸೂಧನಃ। ಸಾತ್ತ್ವಿಕಸ್ಸತುವಿಜ್ಞೇಯಸ್ಸವೈ ಮೋಕ್ಷಾರ್ಥಚಿಂತಕಃ॥" ಎಂದು ಹೇಳಿರುವ ಹಾಗೆ ಸಾತ್ತ್ವಿಕ ಸ್ವಭಾವವುಳ್ಳವನಾಗಿ, ಸಾತ್ತ್ವಿಕರೊಂದಿಗೆ ಸಂಭಾಷಣೆಯನ್ನು ಹೊಂದಿ ಮೋಕ್ಷಾರ್ಥಚಿಂತಕನಾಗಿ ಆಗ ಸದ್ಗುರುವಿನಿಂದಲೂ ಕೂಡ ಸಂದೃಷ್ಟ ನಾಗಿ ಮೋಕ್ಷಾರ್ಥಚಿಂತೆಯುಳ್ಳವನಾಗುವನು. ಅಂತಹ ಸದ್ಗುರುವಿನ ಕೃಪಾ

ಕಟಾಕ್ಷದಿಂದ ಶಾಸ್ತ್ರಗಳಲ್ಲಿ ಸಾರತಮವಾದುದು ಶ್ರೀಮದ್ರಹಸ್ಯತ್ರಯವೆಂಬುದನ್ನು ಅರಿತು ಸಾರಜ್ಞಾನಿಯಾಗುವನು.

ಈ ಸಾರತಮವಾದ ರಹಸ್ಯತ್ರಯಗಳು ಉಪದೇಶಿಸುವ ಅರ್ಥಗಳನ್ನು ಚೆನ್ನಾಗಿ ಗ್ರಹಿಸಲು ಸ್ವಲ್ಪಮಟ್ಟಿಗೆ ಜ್ಞಾನ ಬೇಕು. ಸೃಷ್ಟಿಯಲ್ಲಿ ಮನುಷ್ಯನು ಸರ್ವೋತ್ಕೃಷ್ಟನಾದ ಪ್ರಾಣಿಯು, ಕರಣ ಕಳೇಬರಯೋಗ ಇತರ ಜಂತುಗಳ ಹಾಗೆಯೇ ಇದ್ದರೂ, ಇವನಿಗೆ ಕೊಟ್ಟಿರುವ ಜ್ಞಾನ ವಿವೇಕಗಳು ಅಮೋಘವಾದವು. ಇವನಿಗೋಸ್ಕರವಾಗಿಯೇ ಸರ್ವೇಶ್ವರನು ಶಾಸ್ತ್ರಗಳನ್ನೂ ಶಾಸ್ತ್ರೋಪದೇಶಿಕರನ್ನೂ ದಯಪಾಲಿಸಿರುತ್ತಾನೆ. ಆದುದರಿಂದ ಈತನು ಸ್ವಲ್ಪಮಟ್ಟಿಗಾದರೂ ಶಾಸ್ತ್ರಜ್ಞಾನವನ್ನು ಹೊಂದಬೇಕು. ಆ ಶಾಸ್ತ್ರಜ್ಞಾನವು ಎಷ್ಟು ಮಟ್ಟಿಗೆ ಬೇಕು ಎಂದರೆ, ನಮಗೆ ಮುಖ್ಯ ಪ್ರಮಾಣವಾದ ಶ್ರುತಿಗಳಿಗೆಲ್ಲಾ ಸಾಮಂಜಸ್ಯವನ್ನುಂಟುಮಾಡುವ **ಪ್ರಧಾನಪ್ರತಿತಂತ್ರವು** ಯಾವುದೆಂಬುದನ್ನು ತಿಳಿದುಕೊಳ್ಳಬೇಕು. ಇದನ್ನು ಇತರರು ತಿಳಿಯದೆಯೂ ಅಙ್ಗೀಕರಿಸದೆಯೂ ಇರುವದರಿಂದ ಅವರುಗಳ ಸಿದ್ಧಾನ್ತದಲ್ಲಿ ಶ್ರುತಿವಾಕ್ಯಗಳಿಗೆ ಪರಸ್ಪರ ವಿರೋಧವು ತೋರಿಬರುತ್ತದೆ. ಸರ್ವವೂ ಸರ್ವೇಶ್ವರನಿಗೆ ಶರೀರವು, ಆತನು ನಮ್ಮಗಳಿಗೆಲ್ಲಾ ಆತ್ಮಾವೆಂದು ಶ್ರುತಿಯಲ್ಲೇ ಹೇಳಿರುವದನ್ನು ನಾವು ಮುಖ್ಯವಾಗಿ ಮನಸ್ಸಿನಲ್ಲಿ ಇಟ್ಟರೆ, ಶ್ರುತಿಗಳಿಗೆ ಪರಸ್ಪರವಾಗಿಯೂ ಅವುಗಳಿಗೂ ಸ್ಮೃತಿಗಳಿಗೂ ಸಾತ್ವಿಕ ಪುರಾಣೇತಿಹಾಸಗಳಿಗೂ ಏನೊಂದೂ ವಿರೋಧವಿಲ್ಲದೆ ಸರ್ವಸಾಮಂಜಸ್ಯವು ಏರ್ಪಟ್ಟು ತನಗೆ ಪರಮಾತ್ಮನು ಆಧಾರವು, ನಿಯಾಮಕನು, ಶೇಷಿಯು ಎಂಬ ಯಥಾರ್ಥಜ್ಞಾನವು ಉಂಟಾಗುತ್ತದೆ. ಶಾಸ್ತ್ರಜ್ಞಾನವು ಮುಖ್ಯವಾಗಿ ನಮಗೆ ಏತಕ್ಕೆ ಆವಶ್ಯಕವೆಂದರೆ ನಮ್ಮ ಅಜ್ಞಾನ, ಅನ್ಯಥಾ ಜ್ಞಾನ ವಿಪರೀತಜ್ಞಾನಗಳಿಂದುಂಟಾಗುವ ಭ್ರಾಂತಿಗಳು ತೊಲಗಲು ಅವಶ್ಯಕವು. ಇಂತಹ ಭ್ರಾಂತಿಗಳೆಲ್ಲಾ ತೊಲಗುವದಕ್ಕಾಗಿ ಶಾಸ್ತ್ರಗಳೆಲ್ಲಾ ತಿಳಿಸುವದು ಮುಖ್ಯವಾಗಿ ಏನೆಂದು ಗ್ರಹಿಸತಕ್ಕದ್ದು; ಅವು ಐದು ವಿಷಯಗಳಾದ **ಅರ್ಥ ಪಂಚಕಗಳನ್ನು** ಮುಖ್ಯವಾಗಿ ತಿಳಿಸುತ್ತವೆ. ತನಗೆ ಈಗಿರುವ ಬಾಧವು ಕಳೆಯಲು ತಾನು ಯಾರನ್ನು ಆಶ್ರಯಿಸತಕ್ಕದ್ದು, ಅಂತವನ ಸ್ವರೂಪವೆಂತಾದ್ದು, ಪ್ರಾಪ್ತಾವಾದ ತನ್ನ ಸ್ವರೂಪವೆಂತಾದ್ದು, ಆತನನ್ನು ಹೊಂದುವ ಉಪಾಯಗಳು ಯಾವುವು, ಅದರಿಂದುಂಟಾಗುವ ಫಲಸ್ವರೂಪವೆಂತಾದ್ದು, ಅಂತಹ ಪ್ರಾಪ್ತಿಗೆ ವಿರೋಧಿಗಳು ಯಾವುವು ಎಂಬುದನ್ನು ಗ್ರಹಿಸತಕ್ಕದ್ದು. ಇಷ್ಟುಮಾತ್ರವೇ ಅಲ್ಲವು, ಇಂತಹ ಭ್ರಾಂತಿಗಳು ತೊಲಗುವದಕ್ಕೆ ತನ್ನೊಂದಿಗೆ ಯಾವಾಗಲೂ ಅನುವರ್ತಿಸಿಕೊಂಡಿರುವ ಅಚಿತ್ತೋನು, ಪರಮಾತ್ಮನೇನು, ಹೀಗೆ ಮೂರು ತತ್ವಗಳ, ಸ್ವರೂಪ, ಸ್ವಭಾವ, ಪ್ರವೃತ್ತಿಗಳ ಜ್ಞಾನವು ಚನ್ನಾಗಿ

ತಕ್ಕದ್ದು. ಇವುಗಳ ವಿಷಯದಲ್ಲಿ ಅನೇಕ ಅಪಸಿದ್ಧಾಂತಗಳುಂಟು. ಅವುಗಳೆಲ್ಲಾ, ಶ್ರುತಿವಾಕ್ಯಗಳನ್ನು ದೂರೀಕರಿಸಿ ಅಥವಾ ಅವುಗಳಿಗೆ ಸರಿಯಾದ ಸಾಮಂಜಸ್ಯವನ್ನು ಕಲ್ಪಿಸದೆ, ಶ್ರುತಿಗಳಿಗೆ ಪರಸ್ಪರ ವಿರೋಧವನ್ನುಂಟುಮಾಡಿ ಬಾಧ್ಯಬಾಧಕಗಳನ್ನು ಕಲ್ಪಿಸುತ್ತವೆ. ಆದುದರಿಂದ ಅವುಗಳಿಗೆ ಮನಗೊಟ್ಟರೆ ಪುನಃ ಭ್ರಾಂತಿಗೆ ಮೂಲವಾಗುತ್ತದೇ ವಿನಾ ಭ್ರಾಂತಿಯು ತೊಲಗುವದಿಲ್ಲವು. ಆದುದರಿಂದ ಮುಮುಕ್ಷುವು ಸ್ವಪರ ನಿಶಿತಧೀ ಯುಳ್ಳವನಾಗಬೇಕೆಂದು ತಿಳಿಸಿರುತ್ತಾರೆ. ಈ ಚೇತನನು ಅಚೇತ್ಸಂಸರ್ಗದಿಂದ ಭ್ರಾಂತನಾಗಿ, ತಾನೇ ಕರ್ತಾ ಭೋಕ್ತಾವೆಂದು ಭಾವಿಸಿ, ತನಗಿಂತ ಬೇರೆ ಪರಮಾತ್ಮನಿಲ್ಲವೆಂದು ಭ್ರಮಿಸುವನು. ತನಗೆ ಪರಮಾತ್ಮನ ದಾಸ್ಯವು ನಿಯತವೆಂದು ತಿಳಿದು, ತನ್ನ ಕರ್ತೃತ್ವ ಭೋಕ್ತೃತ್ವವೆಲ್ಲಾ ಪರಾಯತ್ತವಾದುದರಿಂದ ತಾನೂ ಸಂಪೂರ್ಣವಾಗಿ ಅಸ್ವತಂತ್ರನೆಂದು ತಿಳಿದು, ತಾನು ಮಾಡುವ ಕಾರ್ಯವೆಲ್ಲಾ ಧರ್ಮಪ್ರತಿಷ್ಠಿತವಾಬುದಾಗಿ, ಅವುಗಳನ್ನೆಲ್ಲಾ ಸ್ವಾಮಿಯಲ್ಲಿ ಸಮರ್ಪಿಸಿ, ಆತನ ಪ್ರೀತ್ಯನುಗ್ರಹಗಳಿಗೆ ಪಾತ್ರನಾಗಬೇಕು. ಮುಮುಕ್ಷುವು ಮುಖ್ಯವಾಗಿ ಆರಾಧಿಸತಕ್ಕ ಪರದೇವತೆಯು ಶ್ರುತಿಸ್ಮೃತೀತಿಹಾಸಾದಿಗಳಲ್ಲಿ ಯಾವ ಹೆಸರಿನಿಂದ ಬೋಧಿತವಾಗಿದೆ ಎಂದು ತಿಳಿಯತಕ್ಕದ್ದು. ಏಕೆಂದರೆ ಮೋಕ್ಷಪ್ರದತ್ವವು ಆತನಿಗೆ ಮಾತ್ರವೇ ವಿನಾ ಮಿಕ್ಕ ಇತರ ದೇವತೆಗಳಾದ ಚತುರ್ಮುಖರುದ್ರೇಂದ್ರಾದಿಗಳಿಗೆ ಯಾರಿಗೂ ಇರುವದಿಲ್ಲವು. ಆ ಪರತತ್ವವು ಈ ಮೇಲೆ ಹೇಳಿದ ಶಾಸ್ತ್ರಗಳಲ್ಲೆಲ್ಲಾ ಶ್ರೀಮನ್ನಾರಾಯಣನೆಂದೇ ಉದ್ಘೋಷಿಸಲ್ಪಟ್ಟಿರುತ್ತದೆ.

ಹೀಗೆ ಪರತತ್ವಸ್ವರೂಪವನ್ನು ಯಥಾರ್ಥವಾಗಿ ತಿಳಿದವನಾಗಿ, ತನಗೆ ಹಿತವಾದುದು ಯಾವುದೆಂದು ತಿಳಿದವನಾಗಿ ಉಪಾಯಾನುಷ್ಠಾನವನ್ನು ಮಾಡತಕ್ಕದ್ದು. ಇಂತಹ ಮುಮುಕ್ಷುವಿಗೆ "ಪರಮಾತ್ಮನಿಯೋರಕ್ತಃ ವಿರಕ್ತೋಽಪರಮಾತ್ಮನಿ" ಎಂದು ಹೇಳಿರುವ ಹಾಗೆ ವಿರಕ್ತಿಭಾವವು ಬೇಕು. ಐಹಿಕದಲ್ಲಿ ಜಿಹಾಸೆಯು ಅವಶ್ಯಕವು. ಐಹಿಕಭೋಗಗಳೂ ಸ್ವರ್ಗಾದಿ ಸುಖಗಳೂ ಕೂಡ ಅಸ್ಥಿರಮಾತ್ರವಲ್ಲದೆ "ಸುಖಸ್ಯಾನಂತರಂ ದುಃಖಂ" ಎಂದು ಹೇಳಿರುವ ಹಾಗೆ ಪರ್ಯವಸಾನದಲ್ಲಿ ದುಃಖಪ್ರದಗಳು. ಆದುದರಿಂದ ಇಂತಹ ಸುಖಗಳೂ ಕೈವಲ್ಯವೂ ಸಹ ಏತೇವೈ ನಿರಯಾಸ್ತಾತಸ್ಥಾನಸ್ಯ ಪರಮಾತ್ಮನಃ ಎಂದು ಹೇಳಿರುವ ಹಾಗೆ ನರಕತುಲ್ಯಗಳೆಂಬ ಭಾವನೆಯಿರತಕ್ಕದ್ದು. ಇಂತಹ ವಿರಕ್ತಿಭಾವವು ಆವಶ್ಯಕವೆಂದು ತಿಳಿಸುವದಕ್ಕಾಗಿ ಸಂಗಜಿತ್ ಎಂದು ಮುಮುಕ್ಷುತ್ವಾಧಿಕಾರರ್ಥವನ್ನು ತಿಳಿಸಿರುತ್ತಾರೆ. ಹೀಗೆ ಮೋಕ್ಷಾರ್ಥಿಯು ಪ್ರಪನ್ನನಾಗಬೇಕಾದರೆ ಭಕ್ತಿಮಾರ್ಗಾವಲಂಬಿಯಾಗಿಯಾಗಲಿ, ಅಥವಾ ಭರನ್ಯಾಸಾನುಷ್ಠಾತಾವಾಗಿ

ಯಾಗಲಿ ಆಗಬೇಕು. ತನಗೆ ಯಾವುದು ಯೋಗ್ಯವೆಂದು ತಿಳಿದು, ಮೂವತ್ತೆರಡು ರೂಪವಾದ ಭಕ್ತಿಮಾರ್ಗದಲ್ಲಿ ಒಂದನ್ನಾಗಲಿ, ಅಥವಾ ಸ್ವನಿಷ್ಠೆ, ಉಕ್ತಿನಿಷ್ಠೆ ಆಚಾರ್ಯನಿಷ್ಠೆ ಎಂಬ ಪ್ರಭೇದಗಳಲ್ಲಿ ಒಂದಾದ ಭರನ್ಯಾಸವನ್ನಾಗಲಿ ಅವಲಂಬಿಸತಕ್ಕದ್ದು. ಇಂತಹ ಪ್ರಪನ್ನಾಧಿಕಾರಿಯಾಗದೇ ಈತನಿಗೆ ಮೋಕ್ಷವಿಲ್ಲದುದರಿಂದ ಈ ಎರಡು ವಿಧ ಉಪಾಯಗಳನ್ನು ಚನ್ನಾಗಿ ತಿಳಿದು, ಅವುಗಳಲ್ಲಿ ತನಗೆ ಯಾವುದಕ್ಕೆ ಯೋಗ್ಯತೆಯೋ ಅದನ್ನು ಅವಲಂಬಿಸಬೇಕಾಗುತ್ತದೆಯಾದುದರಿಂದ **ನೈಕಸಂಸ್ಥಃ** ಎಂದು ಅಧಿಕಾರಿ ವಿಭಾಗಾರ್ಥವನ್ನು ಗ್ರಹಿಸಿದವನಾಗಿ ಅನಂತರ ಈ ಎರಡು ವಿಧ ಉಪಾಯಗಳಿಗೂ ಇರುವ ವೈಲಕ್ಷಣ್ಯವನ್ನು ತಿಳಿಯತಕ್ಕದ್ದು. ಇದಕ್ಕಾಗಿ **ಸ್ಪಷ್ಟೋಪಾಯ**ವೆಂದು ಉಪಾಯ ವಿಭಾಗಾಧಿಕಾರ್ಥವು ಹೇಳಲ್ಪಟ್ಟಿತು. ಅನಂತರ ಮುಮುಕ್ಷುತ್ವಾಧಿಕಾರದಲ್ಲಿ ಹೇಳಿಗುವ ಹದಿನೈದು ವಿಧರಾದ ಅಶಕ್ತರಲ್ಲಿ ತಾನೊಬ್ಬನಾಗಿ ತೋರಿ ಅರ್ಥಿತ್ವ ಸಾಮರ್ಥ್ಯಗಳು ಇರುವರೆಲ್ಲರಿಗೂ ಈ ಭರನ್ಯಾಸವು ಉಪಾಯವೆಂದು ಹೇಳಿರುವದರಿಂದ, ಅನನ್ಯಗತಿಕನಾಗಿಯೂ ಅಕಿಂಚನನಾಗಿಯೂ ಇರುವದರಿಂದ ಪ್ರಪತ್ತಿಗೆ ಯೋಗ್ಯತೆಯುಂಟೆಂದು ಭಾವಿಸತಕ್ಕದ್ದೆಂದು, "**ಅತಿ ಖಿನ್ನಃ**" ಎಂಬುದರ ಮೂಲಕ ಪ್ರಪತ್ತಿಯೋಗ್ಯಾಧಿಕಾರದ ಸಾರಾಂಶವು ವ್ಯಕ್ತಗೊಳಿಸಲ್ಪಟ್ಟಿತು. ಇಂತಹ ಉತ್ತಮವಾದ ಉಪಾಯಕ್ಕೆ ಪರಿಕರಗಳು (ಅಂಗಗಳು) ಆನುಕೂಲ್ಯ ಸಂಕಲ್ಪಾದಿ ಐದು ಅಂಗಗಳೆಂದು ತಿಳಿದವನಾಗಿ, (ಪರಿಕರವಿಭಾಗಾಧಿಕಾರದ ಅರ್ಥವು) ಅನಂತರ ಅಂಗಿಯಾವುದೆಂಬುದನ್ನು ನಿಷ್ಕರ್ಷಿಸಿ ತಿಳಿದು, ಭರನ್ಯಾಸಾನುಷ್ಠಾನವನ್ನು ಮಾಡತಕ್ಕದ್ದು. (ಇದು ಸಾಂಗಪ್ರಪದನಾಧಿಕಾರದ ಅರ್ಥವು). ಹಾಗೆ ಭರನ್ಯಾಸವನ್ನು ಅನುಷ್ಠಿಸಿದವನು **ಭರನ್ಯಾಸ ನಿಷ್ಪನ್ನಕೃತ್ಯಃ**, ನಿರ್ಭರನಾಗಿ ನಿರ್ಭಯನಾಗಿ ನಿಸ್ಸಂಶಯನಾಗಿ ಹೃಷ್ಟಮನಸ್ಕನಾಗಿ ಕೃತಕೃತ್ಯನಾಗುವನೆಂದು ಹೇಳಲ್ಪಟ್ಟಿತು. ಅಂತಹ ಪ್ರಪನ್ನನಿಗೆ ಸ್ವರೂಪೋಪಾಯ ಪುರುಷಾರ್ಥಗಳಲ್ಲೂ ಸ್ವನಿಷ್ಠಾಭಿಜ್ಞಾನವಿರಬೇಕೆಂದು ಹೇಳುವದಕ್ಕಾಗಿ **ಸ್ವಾನಸ್ಥಾಹಾರ್ಣಂ** ಎಂಬ ಪ್ರಯೋಗವು ಇಂತಹ ಸ್ವನಿಷ್ಠಾಭಿಜ್ಞಾನವುಳ್ಳ ಪ್ರಪನ್ನನು ಕೃತಕೃತ್ಯನಾದರೂ ಈತನು ಮಾಡತಕ್ಕ ಕೆಲವು ಇತಿಕರ್ತವ್ಯಗಳುಂಟೆಂದೂ, ಅವುಗಳಲ್ಲಿ ಪ್ರಥಮತಃ ಆಜ್ಞಾಕೈಂಕರ್ಯಗಳಾದ ನಿತ್ಯನೈಮಿತ್ತಿಕ ಕರ್ಮಗಳನ್ನು ಭಗವತ್ಪ್ರೀತ್ಯರ್ಥವಾಗಿಯೂ, ಅನುಜ್ಞಾಕೈಂಕರ್ಯಗಳನ್ನು ಭಗವನ್ಮುಖೋಲ್ಲಾಸಕ್ಕಾಗಿಯೂ ಮಾಡುತ್ತಾ, ಜ್ಞಾನಿಗಳ ಮೂಲಕ ಶಾಸ್ತ್ರಾಭ್ಯಾಸವನ್ನು ಮಾಡುತ್ತಾ, ತಿಳಿಯದಿರುವವರಿಗೆ ಉಪದೇಶಿಸುತ್ತಾ ಕಾಲಯಾಪನೆಯನ್ನು ಮಾಡಬೇಕೆಂದೂ, ಈ ಕೈಂಕರ್ಯಗಳ ಪರಾಕಾಷ್ಠೆಯು ಭಾಗವತಶೇಷತ್ವಾನುಸಂಧಾನಪೂರ್ವಕವೆಸ

ಗುವ ಭಾಗವತ ಕೈಂಕರ್ಯವೆಂದೂ ಹೇಳಿ ಇವನ್ನು ತಿಳಿಸುವದಕ್ಕಾಗಿ ಸಪರ್ಯಾ ವಿಧಿಂ ಎಂದು ಪ್ರಯೋಗಿಸಿರುತ್ತಾರೆ. ಈ ಭಗವದ್ಭಾಗವತ ಕೈಂಕರ್ಯಗಳನ್ನು ತನ್ನ ಇಷ್ಟಬಂದಂತೆ ನಡೆಸತಕ್ಕದ್ದಲ್ಲವೆಂದೂ ಶಾಸ್ತ್ರೀಯನಿಯಮಾನುಸಾರವೇ ಅನುಷ್ಠಿಸತಕ್ಕದ್ದೆಂಬುದನ್ನೂ ಇಹ ನಿಯತಃ ಎಂಬ ಪದಗಳ ಮೂಲಕ ತಿಳಿಸಿರುತ್ತಾರೆ. ಇಂತಹ ಪ್ರಪನ್ನನಿಗೆ ದೇಹಾವಸಾನದಲ್ಲಿ ಮುಕ್ತಿಯು ಸಿದ್ಧವಾದರೆ ಆತನ ಪುಣ್ಯಪಾಪಗಳ ಪರಿಹಾರ ಹೇಗೆ ಎಂಬ ಸಂದೇಹದಲ್ಲಿ ಪ್ರಾರಬ್ಧಮಾತ್ರವೇ ಈತನು ಅನುಭವಿಸತಕ್ಕದ್ದೆಂದೂ, ಪೂರ್ವಾಘಗಳೂ, ಪ್ರಮಾದದಿಂದುಂಟಾಗುವ ಉತ್ತರಾಘಗಳೂ ಸಹ ಈತನನುಷ್ಠಿಸಿದ ಉಪಾಯದ ಮಾಹಾತ್ಮ್ಯಯಿಂದಲೇ ಕಳೆದುಹೋಗುತ್ತವೆಂದೂ ಹೇಳಿ, ಭರನ್ಯಾಸಾನಂತರ ಈತನು ಎಂದಿಗೂ ಬುದ್ಧಿಪೂರ್ವಕವಾಗಿ ಅಪರಾಧವನ್ನು ಮಾಡುವದಿಲ್ಲವೆಂದೂ, ಒಂದುವೇಳೆ ಬುದ್ಧಿಪೂರ್ವಕವಾಗಿ ಮಾಡಿದರೆ, ಪರಿತಾಪಮೂಲಕವಾಗಿ ಪ್ರಾಯಶ್ಚಿತ್ತ ಶರಣಾಗತಿಯನ್ನು ಮಾಡಿಕೊಂಡರೆ ಆ ಅಪರಾಧವು ನಶಿಸಿಹೋಗುವುದೆಂದೂ, ಹಾಗೆ ಒಂದುವೇಳೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ, ಅಲ್ಪಶಿಕ್ಷೆಯಿಂದ ದಂಡಿಸಿ, ಬೇಗೆ ಸರ್ವಾಪರಾಧಗಳು ನಿವೃತ್ತಿಸಿ ಹೋಗುವಹಾಗೆ ಭರಸ್ವೀಕಾರ ಮಾಡಿದ ಕರುಣಾಸಾಗರನು ಮಾಡುವನೆಂದೂ ಹೇಳುವುದಕ್ಕಾಗಿ ವ್ಯಾಗಸಂ ಎಂದು ಪ್ರಯೋಗಿಸಿರುತ್ತಾರೆ. ಇದರಿಂದ ಭರನ್ಯಾಸವನ್ನು ಅನುಷ್ಠಿಸಿದ ಪ್ರಪನ್ನನಿಗೆ ಉಪಾಯವೆಂದಿಗೂ ವಿಫಲವಾಗದೆಂದು ತಿಳಿಸುವದಕ್ಕಾಗಿಯೂ ವ್ಯಾಗಸಂ ಎಂಬ ಪ್ರಯೋಗವು. ಇಂತಹ ಸ್ವನಿಷ್ಠೆಯನ್ನರಿತ ಪ್ರಪನ್ನನು ಶಾಸ್ತ್ರೀಯ ನಿಯಮಾನುಸಾರವಾಗಿ ಭಗವದ್ಭಾಗವತ ಕೈಂಕರ್ಯಗಳನ್ನೆಸಗುತ್ತಾ ದೇಹಾವಸಾನದವರೆಗೂ ಇರತಕ್ಕ ಸ್ಥಳವು, ತನ್ನ ಈಗಿನ ಮಹತ್ತಾದ ದೆಸೆಗೆ ಉಚಿತವಾದ ಸ್ಥಳಗಳಾದ ಶ್ರೀರಂಗಾದಿ ದಿವ್ಯದೇಶಗಳಾಗಲಿ ಅಥವಾ ಭಾಗವತ ಮಂಡಲಿಯಿರುವ ಸ್ಥಳಗಳಾಗಲಿ ಆಗಬಹುದೆಂದು ಹೇಳಿ ಅವರುಗಳ ಮಧ್ಯೆ ಇರಬೇಕಾದುದು ಆವಶ್ಯಕವೆಂದು ಕ್ವಾಪಿ ಎಂಬ ಶಬ್ದದಿಂದ ಜ್ಞಾಪಿಸಿರುತ್ತಾರೆ.

ಕೊನೆಗೆ ಇಂತಹ ಮಹತ್ತಾದ ಉಪಾಯವನ್ನವಲಂಬಿಸಿ ಪ್ರಪನ್ನನೆನಿಸಿದನನಿಗೆ ದೇಹಾವಸಾನದಲ್ಲಿ ಈತನು ಹೇಗೆ ದಿವ್ಯ ವೈಕುಂಠವನ್ನು ಸೇರುವನು ಎಂಬುದನ್ನು ಜ್ಞಾಪಕಕ್ಕೆ ತರುವದಕ್ಕಾಗಿ ನಿರ್ಮುಕ್ತಸ್ಥೂಲಸೂಕ್ಷ್ಮ ಪ್ರಕೃತಿಃ ಎಂದು ನಿರ್ಯಾಣಾಧಿಕಾರಾರ್ಥವನ್ನು ಹೇಳಿರುತ್ತಾರೆ. ಮೊದಲು ದೇಹಾವಸಾನದಲ್ಲಿ ಸ್ಥೂಲ ಶರೀರದ ವಿಯೋಗವೂ, ಅನಂತರ ಅರ್ಚಿರಾದಿಗತಿಯಲ್ಲಿ ವಿರಜಾವಗಾಹನೆಯಿಂದ ಸೂಕ್ಷ್ಮಶರೀರವಿಯೋಗವೂ ಉಂಟಾಗುತ್ತದೆಂಬುದನ್ನು ಇದರಿಂದ ತಿಳಿಸುತ್ತಾರೆ. ಪ್ರಪನ್ನನಿಗೆ ಉತ್ಕ್ರಾಂತಿಯು ಉಂಟಾಗುವಾಗ ಸೂಕ್ಷ್ಮರೂಪದಲ್ಲಿ

ಇಂದ್ರಿಯಗಳೆಲ್ಲಾ ಮನಸ್ಸಿನಲ್ಲೂ, ಅದೆಲ್ಲವೂ ಪ್ರಾಣದಲ್ಲೂ, ಅನಂತರ ಜೀವಾತ್ಮನಲ್ಲೂ, ಹೀಗೆ ಭೂತಸೂಕ್ಷ್ಮದೊಂದಿಗೆ ಪರಮಾತ್ಮನಲ್ಲಿ ಈತನು ಸೇರುವನು ; ಅಲ್ಲಿಂದ ಆತನ ಕೃಪೆಯಿಂದ ಸುಷುಮ್ನಾ ನಾಡಿಯ ಮೂಲಕ ಅರ್ಚಿರಾದಿ ಗತಿಯನ್ನು ಹೊಂದುವನು ; ಮೋಕ್ಷವಲ್ಲದೆ ಫಲಾಂತರಾಪೇಕ್ಷೆ ಯುಳ್ಳವನಾದರೆ ಮಿಕ್ಕ ಹೃದಯದ ನೂರು ನಾಡಿಗಳ ಮೂಲಕ ಹೊರಟು ಧೂಮಾದಿ ಇತರ ಮಾರ್ಗಗಳ ಮೂಲಕ ಹೋಗಿ ತನ್ನ ಕರ್ಮಗಳಿಗೆ ಯೋಗ್ಯವಾದ ಫಲವನ್ನು ಹೊಂದುವನು. ಪ್ರಪನ್ನನಾದರೋ ಮೇಲೆ ಹೇಳಿದ ಅರ್ಚಿರಾದಿ ಗತಿಯನ್ನು ಹೊಂದಿದವನಾಗಿ, ಅರ್ಚಿಸ್, ಎಂದರೆ ಅಗ್ನಿ, ಅಹಸ್, ಶುಕ್ಲಪಕ್ಷ, ಉತ್ತರಾಯಣ, ಸಂವತ್ಸರ ಎಂಬ ಆತಿವಾಹಿಕ ರುಗಳಿಂದ ಸತ್ಕರಿಸಲ್ಪಟ್ಟವನಾಗಿ ಅವರುಗಳಿಂದ ಮಾರ್ಗತೋರಿಸಲ್ಪಟ್ಟವ ನಾಗಿಮುಂದಕ್ಕೆ ತೆರಳುವನು. ಸಂವತ್ಸರ ದೇವತೆಯಾದ ನಂತರ ವಾಯು (ದೇವಲೋಕವೆಂದು ಅಪರನಾಮಧೇಯವು) ದೇವತೆಯೂ ಅಲ್ಲಿಂದ ರಥ ಚಕ್ರದಹಾಗಿರುವ ಒಂದು ರಂಧ್ರದ ಮೂಲಕ ಆದಿತ್ಯನನ್ನು ಸೇರುವನು ; ಅಲ್ಲಿಂದ ಚಂದ್ರನನ್ನು ಸೇರಿದುಂದುಭಿ ರಂಧ್ರದಹಾಗಿರುವ ಮಾರ್ಗಮೂಲಕ ಹೋಗಿ ವೈದ್ಯುತನನ್ನು ಸೇರುವನು. ಇವನಿಗೆ ಅಮಾನವನೆಂಬದಾಗಿಯೂ ಹೆಸರು. ಈತನೇ ಈ ಪ್ರಪನ್ನನನ್ನು ವರುಣ, ಇಂದ್ರ, ಚತುರ್ಮುಖ ಬ್ರಹ್ಮ ರಿಂದ ಸತ್ಕರಿಸಲ್ಪಟ್ಟ ನಂತರ ಪರಮಪದಕ್ಕೆ ಕರೆದುಕೊಂಡು ಹೋಗಿ ಸರ್ವೇಶ್ವರನಮುಂದೆ ನಿಲ್ಲಿಸುವವನು. ದಿವ್ಯ ವೈಕುಂಠಲೋಕದ ಎಲ್ಲೆಯಲ್ಲಿ ವಿರಜೆ ಎಂಬ ಅಮೃತನದಿಯುಂಟು. "ವೈಕುಂಠಸೀಮ್ನಿ ವಿರಜಾಂ ಸ್ಯಂದಮಾ **ನಾಂ ಮಹಾನದೀಂ**" ಎಂಬ ಪ್ರಮಾಣದಿಂದ ಇದನ್ನು ಗ್ರಹಿಸಬಹುದು. "**ಗತ್ವಾ ಯೋ ವಿರಜಾಂ ವಿಮುಂಚತಿ ತನುಂ ಸೂಕ್ಷ್ಮಾಂ**" ಎಂದು ಹೇಳ ಲ್ಪಟ್ಟಿರುವದರಿಂದ ಇಲ್ಲಿ ಆತನ ಸೂಕ್ಷ್ಮ ಶರೀರವು ಬಿಟ್ಟು ತೊಲಗುತ್ತದೆ. ಇವೆಲ್ಲಾ ಅಭಿಪ್ರಾಯಗಳಿಗೂ ಸಂಗ್ರಾಹಕವಾಗಿ "**ನಿರ್ಮುಕ್ತಸ್ಥೂಲ ಸೂಕ್ಷ್ಮ ಪ್ರಕೃತಿಃ**" ಎಂದು ಪ್ರಯೋಗಿಸಿರುತ್ತಾರೆ. (ಗತಿಚಿಂತನಾಧಿಕಾರಾರ್ಥವು.)

ಹೀಗೆ ವಿರಜಾವಗಾಹನದಿಂದ ಸರ್ವಹೇಯ ಸಂಬಂಧವನ್ನೂ ಕಳೆದು ಕೊಂಡವನಾಗಿ, ಜೊತೆಯಲ್ಲಿದ್ದ ಅಮಾನವನೆಂಬ ನಿತ್ಯಸೂರಿಯ ಕರಸ್ಪರ್ಶವನ್ನು ಹೊಂದಿ ದಿವ್ಯಮಂಗಳ ವಿಗ್ರಹಯುಕ್ತನಾಗಿ, ಕೋಟಿಸೂರ್ಯಪ್ರಕಾಶವುಳ್ಳದ್ದಾಗಿ, ತೇಜೋಮಯವಾಗಿ ಶುದ್ಧ ಸತ್ವವಾಗಿರುವ ದಿವ್ಯವೈಕುಂಠಲೋಕವನ್ನು ಹೊಂದು ವನು. ಉಪನಿಷತ್ತುಗಳಲ್ಲೂ ಭಗವಚ್ಛಾಸ್ತ್ರ ಸಂಹಿತೆಗಳಲ್ಲೂ ಹಾಗೆಯೇ ಶ್ರೀ ಯತಿವರ್ಯರ ವೈಕುಂಠಗದ್ಯದಲ್ಲೂ ಹೇಳಿರುವ ಮೇರಿಗೆ, ಮಾರ್ಗದಲ್ಲಿ ಅರ

ವೆಂದೂ, ಆರಣ್ಯವೆಂದೂ, ಹೆಸರುಳ್ಳ ಅಮೃತಮಯವಾದ ಸಮುದ್ರಗಳನ್ನೂ, ದಿವ್ಯೋದ್ಯಾನಸಮಾವೃತ ನದೀತಟಾಕಗಳನ್ನೂ ಐರಮ್ಮದೀಯ ವೆಂಬ ಅಮೃತ ಸರಸ್ಸನ್ನೂ ದಾಟಿ ಅಲ್ಲಿಂದ ಮುಂದಕ್ಕೆ ಬಹು ಮನೋಹರವಾಗಿ ಸೂರಿಸೇವ್ಯ ವಾದ ಸೋಮಸವನವೆಂಬ ಅಶ್ವತ್ಥವನ್ನೂ ಸೇರುವನು. ಅಲ್ಲಿಂದ ಮುಂದೆ ಐನೂರು ದಿವ್ಯಾಪ್ಸರಸ್ಸುಗಳು ನೂರುನೂರಾದ ಗುಂಪಿನಲ್ಲಿರುವವರಾಗಿ ಈ ಹೊಸ ಮುಕ್ತನನ್ನು ಬ್ರಹ್ಮಾಲಂಕಾರ ಮೂಲಕ ಅಲಂಕರಿಸುವರು. ಅಲ್ಲಿಂದ ಮುಂದಕ್ಕೆ ಗೋಪುರ ಬಾಗಿಲನ್ನು ದಾಟಿ, ಹಿರಣ್ಮಯವಾದ ದಿವ್ಯ ವಿಮಾನವನ್ನು ಸೇರಿ, ಅಲ್ಲಿ ಚಂಡಾದಿ ದ್ವಾರಪಾಲಕರಿಂದ ಸತ್ಕೃತನಾಗಿ ಮಂಟಪವನ್ನು ಪ್ರವೇಶಿಸಿ, ಸಭೆಯ ನಿತ್ಯಸೂರಿಗಳ ಅರುಳಪ್ಪಾಡು ಮೂಲಕವಾಗಿ ಶ್ರಿಯಃಪತಿಗೆ ಅಭಿಮುಖ ನಾಗಿ ನಿಂತು ಲಕ್ಷ್ಮೀನಾರಾಯಣರಿಬ್ಬರಿಗೂ ಸಾಷ್ಟಾಂಗವೆರಗುವನು. ಅಲ್ಲಿ ಲಕ್ಷ್ಮಿಯೂ ನಾರಾಯಣನೂ ಹೇಗೆ ನೆಲೆಯನ್ನಿಯುವರೆಂಬುದನ್ನು ಶ್ರೀ ವೈಕುಂಠ ಗದ್ಯದ ಮೂಲಕ ಗ್ರಹಿಸಬಹುದು. ಶ್ರೀ ಆಳವಂದಾರ್ರವರು ಅನುಗ್ರಹಿ ಸಿರುವ ಸ್ತೋತ್ರರತ್ನದಲ್ಲೂ ಕಾಣಬಹುದು. ಪಂಚಾಯುಧ ಮೊದಲಾದ ದಿವ್ಯಾ ಯುಧ ದಿವ್ಯಾಭರಣ ಪೀತಾಂಬರ ವನಮಾಲಾದಿಗಳಿಂದಲೂ ಅಲಂಕೃತನಾಗಿ ನಿತ್ಯ ಮುಕ್ತರುಗಳಿಂದ ಸೇವಿತನಾಗಿ ಲಕ್ಷ್ಮಿಯಿಂದಲೂ ಭೂಮಿ ನೀಳಾದೇವಿಗಳಿಂದಲೂ ಸೇವಿತನಾಗಿ, ಸಾಮಗಾನದಿಂದ ಸ್ತುತಿಸಲ್ಪಟ್ಟವನಾಗಿ, ಶೇಷ ಪರ್ಯಂಕದಲ್ಲಿದ್ದು ಕೊಂಡು, ಸಕಲ ವಿಭೂತಿಗಳನ್ನೂ ಧರಿಸಿದವನೆಂದು ತಿಳಿಸುವದಕ್ಕಾಗಿ ಆಯಾ ಅಭಿಮಾನ ದೇವತೆಗಳನ್ನೆಲ್ಲಾ ಆ ಶ್ರಿಯಃಪತಿಯ ಅವಯವಗಳಲ್ಲಿ ಸರ್ವ ತತ್ವಗಳ ಮೂಲಕ ಪರಿಪೂರ್ಣನನ್ನಾಗಿ ಕಾಣುವನು. ಶ್ರಿಯಃಪತಿಯು ತನಗೆ ಮಾಡಿದ ಮಹೋಪಕಾರಕ್ಕಾಗಿಯೂ, ತನ್ನ ಆಚಾರ್ಯರುಗಳನ್ನು ಕೂಡ ಆ ಸಭೆಯಲ್ಲೇ ಕಂಡು ಅವರುಗಳು ಪುರುಷಕಾರರೂಪದಲ್ಲಿ ಮಾಡಿದ ಮಹೋಪಕಾರಕ್ಕೂ ಸಹ, ಕೃತಜ್ಞತಾಭಾವದಿಂದ ಆನಂದಸಾಗರದಲ್ಲಿ ಮಗ್ನನಾದಂತೆ ತಿಳಿಯುವನು. ಈತನು ಶ್ರಿಯಃಪತಿಯ ಚರಣಾರವಿಂದವನ್ನೇ ಉಪಾಯವಾಗಿ ವರಿಸಿದವನಾದುದರಿಂದ ಲೋಕಜನಕ ಜನನಿಗಳಾದ ಇಬ್ಬರೂ ಈತನನ್ನೆತ್ತಿ ತಮ್ಮ ಪಾದಗಳಲ್ಲಿಟ್ಟವರಾಗಿ, ಅಸದೃಶವಾದ ಪರಮಾನುರಾಗದಿಂದ ತಮಗೆ ಸಮಾನವಾದ ಭೋಗವನ್ನು ಏರ್ಪ ಡಿಸಿದವರಾಗಿ, ಹೀಗೆ ಪರಿಪೂರ್ಣಬ್ರಹ್ಮಾನುಭವದಆನಂದವನ್ನೂ, ತಮಗೆ ಕೈಂಕರ್ಯ ಮಾಡುವ ಸಾಮ್ರಾಜ್ಯವನ್ನೂ ಒದಗಿಸಿ ಕೊಟ್ಟು ತಮ್ಮ ಶರಣಾಗತ ಪರಿಪಾಲನಾ ರೂಪಸುಸಙ್ಕಲ್ಪವನ್ನು ಕಾಪಾಡಿಕೊಂಡು "ಕೃತಕೃತ್ಯಸ್ತದಾರಾಮೋವಿಜ್ವರಃ ಪ್ರಮುಮೋದಹ" ಎಂದು ಹೇಳಿರುವಹಾಗೆ ಶ್ರಿಯಃಪತಿಯೂ ವಿಷ್ಣು ಪತ್ನಿಯೂ ಪರಮಾನಂದ ಭರಿತರಾಗುವರು. ಹೀಗೆ ಈ ಚೇತನನು ಪರಿಪೂರ್ಣ ಬ್ರಹ್ಮಾನು

ಭವವನ್ನು ಹೊಂದುವನು ಎಂಬುದನ್ನು ಜ್ಞಾಪಕಕ್ಕೆ ಕೊಡುವದಕ್ಕಾಗಿ, ಅನುಭವತ್ಯತ್ಯಂತಂ ಎಂದು ಹೇಳಲ್ಪಟ್ಟಿರುತ್ತದೆ. ಇಲ್ಲಿ ಅತ್ಯಂತದ ಅನುಭವಪ್ರಾಪ್ತಿಯು ಭಗವತ್ಕೈಂಕರ್ಯಪ್ರಾಪ್ತಿಗೂ ಉಪಲಕ್ಷಣವು. ನಿತ್ಯಮನುಭವತಿ ಎಂದು ಹೇಳುವದರಿಂದ ಈ ಅನುಭವದಿಂದ ಪುನರಾವರ್ತಿ ಎಂದರೆ ಪುನಃ ಸಂಸಾರ ಬಂಧವು ಇಲ್ಲವೆಂದು ಹೇಳಲ್ಪಟ್ಟಿತು. ಇದು ಪರಿಪೂರ್ಣಬ್ರಹ್ಮಾನುಭವಾಧಿಕಾರಾರ್ಥವು. ಇಂತಹ ಅತ್ಯರ್ಥಪ್ರಿಯನಾದ ಜ್ಞಾನಿಯನ್ನು ಸರ್ವೇಶ್ವರನೇ ಎಂದಿಗೂ ಪರಮಪದದಿಂದ ಈ ಲೋಕಕ್ಕೆ ಹೋಗುವಹಾಗೆ ಕಳುಹಿಸಿಬಿಡುವದಿಲ್ಲವು; ಆದರೆ ವೈದಿಕ ಪುತ್ರರನ್ನು ಶ್ರೀ ಕೃಷ್ಣನು ತಂದು ಬ್ರಾಹ್ಮಣನಿಗೆ ಕೊಟ್ಟು ಅರ್ಜುನನ ಸಂಕಲ್ಪಕ್ಕೆ ವಿಘಾತ ಬಂದಹಾಗೆ ಮಾಡಲಿಲ್ಲವೇ ? ಎಂದರೆ ಆ ಪುತ್ರರುಗಳಿಗೆ ಅರ್ಚಿರಾದಿ ಗತಿಯ ಮೂಲಕ ಈ ಪರಮಪದಪ್ರಾಪ್ತಿಯುಂಟಾಗಿರಲಿಲ್ಲವೆಂದು ತಿಳಿಯತಕ್ಕದ್ದಾಗಿರುತ್ತದೆ. ಆ ಪುತ್ರರುಗಳಿಗೆ ಉಂಟಾದುದು ಮೋಕ್ಷಪ್ರಾಪ್ತಿಯಲ್ಲವು. ಅರ್ಜುನನ ಅಹಂಕಾರ ಶಮನಾರ್ಥವಾಗಿ ಮಾಡಿದ ಕೌತುಕವೆಂದು ಭಾವಿಸತಕ್ಕದ್ದಾಗಿರುತ್ತದೆ. ಮತ್ತು ಇಂತಹ ನಿರತಿಶಯವಾದ ಆನಂದದಲ್ಲಿರುವ ಮುಕ್ತನು, ತಾನೇ ಪುನಃ ಇಲ್ಲಿನ ಬಂಧರೂಪವಾದ ದೇಹವನ್ನು ಅಪೇಕ್ಷಿಸುವದಿಲ್ಲವು. ಈ ಅಭಿಪ್ರಾಯವನ್ನು ಜ್ಞಾಪಕಕ್ಕೆ ತರುವದಕ್ಕಾಗಿ ನಿತ್ಯಂ-ಸದಾ, ಅನುಭವಿಸುವೆನೆಂದು ಹೇಳಲ್ಪಟ್ಟಿತು.

ಆದುದರಿಂದ ಮುಕ್ತನು ಆವರ್ತಿಸುವದಿಲ್ಲವು ಎಂದು ಹೇಳಿದುದರ ಮುಖ್ಯಾಭಿಪ್ರಾಯವೇನೆಂದರೆ ಅವನಿಗೆ ಸಂಸಾರಬಂಧವಿಲ್ಲವೆಂಬ ಅಭಿಪ್ರಾಯ ಮಾತ್ರವೇ ವಿನಾ ಆತನಿಗೇನೆ ಅಪೇಕ್ಷೆಯುಂಟಾದರೆ, ಅಪೇಕ್ಷಿತ ಲೋಕಗಳಲ್ಲಿ ಸಂಚಾರ ಮಾಡುವ ಶಕ್ತಿಯುಂಟೆಂದು ಶ್ರುತಿಯೇ ಹೇಳುತ್ತದೆ, ಹೇಗೆಂದರೆ:—

"ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ" (ಛಾಂ. ೭. ೨೫. ೨) **"ಇಮಾನ್ ಲೋಕಾನ್ ಕಾಮಾನ್ನೀ ಕಾಮರೂಪ್ಯನುಸಂಚರನ್"** (ತೈ. ಭೃಗು ೧೦ ೫) ಹೀಗೆ ನಿತ್ಯರೂ ಮುಕ್ತರೂ ಸಹ ತಾವಾಗಿಯೇ ಈಶ್ವರಾಜ್ಞೆ ಮೂಲಕ ಆಳ್ವಾರ್ ಆಚಾರ್ಯರೂಪದಿಂದ ಅವತರಿಸಬಹುದು. ಆದ ಪ್ರಯುಕ್ತ ಅಂತವರ ವಿಷಯದಲ್ಲಿ ಕೇವಲ ಮಾನುಷಶರೀರವನ್ನಾಶ್ರಯಿಸಿದವರೆಂಬ ಭಾವನೆಯುಳ್ಳವನು ನರಕಭಾಗಿಯಾಗುವನೆಂದು ಹೇಳಲ್ಪಟ್ಟಿರುತ್ತದೆ.

ಹೀಗೆ ಮೇಲೆ ಹೇಳಿದ ತತ್ವಜ್ಞಾನವನ್ನು ಹೊಂದಿದವನಾಗಿ ಉಪಾಯಾನುಷ್ಠಾನವನ್ನು ಮಾಡಿ ಉತ್ತರಕೃತ್ಯಗಳನ್ನು ಶಾಸ್ತ್ರ ನಿಯಮಾನುಸಾರ ನಡೆಸಿ ದೇಹತ್ಯಾಗಮಾಡಿ ಪರಮಾತ್ಮನನ್ನು ಸೇರುವದು ದುರ್ಲಭವೆಂಬುದರಲ್ಲೇನೂ ಸಂದೇಹವಿಲ್ಲವು. ಆದುದರಿಂದಲೇ **ನಿತ್ಯಮೇಕಃ** ಎಂದು ಮುಗಿಸಿರುತ್ತಾರೆ.

ಅನುಭವತಿ ಎಂದು ಹೇಳಿರುವದರಿಂದ ಶೇಷತ್ವವೇ ಅಸಾಧಾರಣ ಧರ್ಮವಾದ ಈ ಮುಕ್ತನಿಗೆ ತನ್ನ ಸ್ವಾಮಿಗೆ ಕೈಂಕರ್ಯವನ್ನೆಸಗುವದೂ ಅನುಭವದಲ್ಲೇ ಸೇರಿದುದರಿಂದ ತನ್ನ ಶೇಷಿಗೆ ನಿತ್ಯಸೇವೆಯನ್ನೆಸಗುವ ಕೈಂಕರ್ಯ ಸಾಮ್ರಾಜ್ಯ ಪದವಿಯನ್ನೂ ಅನುಭವಿಸುವನೆಂಬ ಭಾವವೂ ದ್ಯೋತಿತವು.

ಎಂಬಲ್ಲಿಗೆ

ಶ್ರೀಮದ್ರಹಸ್ಯತ್ರಯಸಾರದ

ಪ್ರಥಮಭಾಗವಾದ ಅರ್ಥಾನುಶಾಸನಭಾಗಕ್ಕೆ

ತಿರುನಾರಾಯಣಪುರಂ ವಿಜಯರಾಘವ ಶರ್ಮನ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ನಮ್ಮಲ್ಲಿ ದೊರೆಯುವ ಗ್ರಂಥಗಳು

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ

ಶ್ರೀಮನ್ನಿಗಮಾನ್ತ ಮಹಾದೇಶಿಕರವರ

೧. ಅಭೀತಿಸ್ತವವೆಂಬ ಶ್ರೀರಂಗನಾಥಸ್ತೋತ್ರವು ೦ ೧

೨. ಶ್ರೀಸ್ತುತಿ ಎಂಬ ಶ್ರೀ ರಂಗನಾಯಕೀಸ್ತೋತ್ರವು ೦ ೧

೩. ಶ್ರೀಮದ್ರಹಸ್ಯತ್ರಯಸಾರವು:—

(೧) ಗುರುಪರಂಪರಾಸಾರವು ೦ ೧

(೨) ಉಪೋದ್ಘಾತಾಧಿಕಾರವು ಮತ್ತು ಸಾರನಿಷ್ಕರ್ಷಾಧಿಕಾರವು ೦

(೩) ಪ್ರಧಾನ ಪ್ರತಿತಂತ್ರಾಧಿಕಾರವು ಮತ್ತು ಅರ್ಥಪಞ್ಚಕಾಧಿಕಾರವು ೦ ೧

(೪) ತತ್ವತ್ರಯಾಧಿಕಾರವು ೦ ೧

(೫) ಪರದೇವತಾ ಪಾರಮಾರ್ಥ್ಯಾಧಿಕಾರವು ಮತ್ತು ಮುಮುಕ್ಷುತ್ವಾಧಿಕಾರವು ೦ ೧

(೬) ಅಧಿಕಾರಿವಿಭಾಗಾಧಿಕಾರವು ಉಪಾಯವಿಭಾಗಾಧಿಕಾರವು ಮತ್ತು ಪ್ರಪತ್ತಿಯೋಗ್ಯಾಧಿಕಾರವು ೦

(೭) ಪರಿಕರವಿಭಾಗಾಧಿಕಾರವು ಮತ್ತು ಸಾಙ್ಗಪ್ರಪದನಾಧಿಕಾರವು ೦ ೧

(೮) ಕೃತಕೃತ್ಯಾಧಿಕಾರವು, ಸ್ವನಿಷ್ಠಾಭಿಜ್ಞಾನಾಧಿಕಾರವು ಮತ್ತು ಉತ್ತರಕೃತ್ಯಾಧಿಕಾರವು ೦ ೧

(೯) ಪುರುಷಾರ್ಥಕಾಷ್ಠಾಧಿಕಾರವು, ಶಾಸ್ತ್ರೀಯ ನಿಯಮನಾಧಿಕಾರವು ಮತ್ತು ಅಪರಾಧಪರಿಹಾರಾಧಿಕಾರವು ೧

(೧೦) ಸ್ಥಾನವಿಶೇಷಾಧಿಕಾರವು, ನಿರ್ಯಾಣಾಧಿಕಾರವು ೦ ೧

(೧೧) ಗತಿಚಿಂತನಾಧಿಕಾರವು ಪರಿಪೂರ್ಣಬ್ರಹ್ಮಾನುಭವಾಧಿಕಾರವು ೦ ೧

(೧೨) ಸಿದ್ಧೋಪಾಯ ಶೋಧನಾಧಿಕಾರವು ಅಚ್ಚಾಗುತ್ತ

೪. ಶ್ರೀ ಯಾಮುನೇಯರವರ ಚತುಶ್ಲೋಕೀ ೨

೫. ಶ್ರೀ ವಿಷ್ಣುಸಹಸ್ರನಾಮಾವಳಿ (ಅರ್ಥ ಸಹಿತ) ೦ ೧

ಸಿ. ಯಂ. ವಿಜಯರಾಘವಾಚಾರ್,

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆ

ಬಸವನಗುಡಿ, ಬೆಂಗಳೂರು ಸಿಟಿ.

ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಗಿರಿಜಾ ವಿಲಾಸ ಪ್ರೆಸ್ಸಿನಲ್ಲಿ ಪ್ರೊಪ್ರೈಟ
ಹೆಚ್. ವೆಂಕಟರಮಣಯ್ಯನವರಿಂದ ಮುದ್ರಿಸಲ್ಪಟ್ಟಿತು.

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತ ರತ್ನಮಾಲಾ
ದ್ವಿತೀಯ ರತ್ನವು—ಹತ್ತನೆಯ ಸಂಚಿಕೆಯು

ಶ್ರೀಮನ್ನಿಗಮಾಂತ ಮಹಾದೇಶಿಕಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಸ್ಥಾನವಿಶೇಷಾಧಿಕಾರ ಏಕೋನವಿಂಶಃ.

ನಿರ್ಯಾಣಾಧಿಕಾರೋ ವಿಂಶಃ.

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರು
ಸಿ. ಯಂ. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ
೧೯೩೫

ಕ್ರಯ ೧೦ ಆಣೆಗಳು

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ



ಅಥ ಸ್ಥಾನವಿಶೇಷಾಧಿಕಾರಃ ೧೯

ಯತ್ರೈಕಾಗ್ರ್ಯಂ ಭವತಿ ಭಗವತ್ಪಾದಸೇವಾರ್ಚನಾದೇ ।
ರ್ಯತ್ರೈಕಾಂತ್ಯ ವ್ಯವಸಿತಧಿಯೋ ಯಸ್ಯ ಕಸ್ಯಾಪಿ ಲಾಭಃ ॥

ಅವತಾರಿಕೆ. ಹಿಂದಿನಧಿಕಾರದಲ್ಲಿ ಪ್ರತಿಬುದ್ಧನಾದ ಪ್ರಪನ್ನನಿಗೆ ಬುದ್ಧಿಪೂರ್ವೋತ್ತರಾಘವು ಉಂಟಾಗುವದಿಲ್ಲವೆಂದೂ, ಒಂದು ವೇಳೆ ಪ್ರಾಪ್ತವಾದರೆ ಪ್ರಾಯಶ್ಚಿತ್ತದಿಂದ ಆತನು ಶಮನಮಾಡಿಕೊಳ್ಳುವನೆಂದೂ ಹೇಳಲ್ಪಟ್ಟಿತು. ಬುದ್ಧಿಪೂರ್ವೋತ್ತರಾಘವು ಉಂಟಾಗುವದು ರಜಸ್ತಮೋಗುಣಗಳ ಪ್ರಭಾವವು, ಈ ಗುಣಗಳಿಗೆ ಅವಕಾಶ ಕೊಡದೆ ಸತ್ವವಿವೃದ್ಧಿಯುಂಟಾಗುವ ಹಾಗೆ ಮಾಡಿಕೊಳ್ಳತಕ್ಕದ್ದು ಪ್ರಾಜ್ಞನ ಕರ್ತವ್ಯವು. ಆದುದರಿಂದ ಪ್ರಾಜ್ಞನಾದ ಪ್ರಪನ್ನನು ಸತ್ವಗುಣ ವಿವೃದ್ಧಿಗಾಗಿ ಎಂತಹ ಸ್ಥಾನವಿಶೇಷದಲ್ಲಿರಬೇಕೆಂಬುವದನ್ನು ಈ ಅಧಿಕಾರದಿಂದುಪದೇಶಿಸುತ್ತಾರೆ.

ಅರ್ಥ :—ಯತ್ರ - ಯಾವ ದಿವ್ಯಸ್ಥಳದಲ್ಲಿ, **ಭಗವತ್ಪಾದ ಸೇವಾರ್ಚನಾದೇಃ** - ಭಗವಂತನ ಪಾದಗಳ ಸೇವೆ, ಅರ್ಚನೆ ಮೊದಲಾದವುಗಳಿಗೆ, ಇಲ್ಲಿ ಆದಿ ಶಬ್ದದಿಂದ

"ಶ್ರವಣಂ ಕೀರ್ತನಂ ವಿಷ್ಣೋಸ್ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ" ॥

ಎಂಬಲ್ಲಿ ಪಾದಸೇವನಂ ಅರ್ಚನಂ ಎಂಬುವದರೊಂದಿಗೆ ಹೇಳಿರುವ ಸರ್ವವಿಧ ಕೈಂಕರ್ಯಗಳೂ ಸಂಗ್ರಹಿಸಲ್ಪಟ್ಟವು; ಇಂತಹ ಕೈಂಕರ್ಯಗಳಿಗೆಲ್ಲಾ ಐಕಾಗ್ರ್ಯಮ್-ಚಿತ್ತಸಮಾಧಾನವು **ಭವತಿ** - ಉಂಟಾಗುತ್ತದೆಯೋ, ಒಂದು ವೇಳೆ ಇದು ಎಲ್ಲಾ ಪ್ರಪನ್ನರಿಗೂ ಲಭ್ಯವಿಲ್ಲದಿದ್ದರೂ, **ಯತ್ರ** - ಯಾವ ದಿವ್ಯಸ್ಥಳದಲ್ಲಿ, ಐಕಾಂತ್ಯ

ವಾಸಸ್ಥಾನಂ ತದಿಹ ಕೃತಿನಾಂ ಭಾತಿ ವೈಕುಂಠ ಕಲ್ಪಂ
ಪ್ರಾಯೋ ದೇಶಾ ಮುನಿಭಿರುದಿತಾಃ ಪ್ರಾಯಿಕೌಚಿತ್ಯವಂತಃ ॥೪೩॥

ವ್ಯವಸಿತಧಿಯಃ-ಪರಮೈಕಾಂತಿಯು ಧರ್ಮದಲ್ಲಿ ಯಾವುದು ತ್ಯಾಜ್ಯವು, ಯಾವುದು ಉಪಾದೇಯವೆಂಬ ವಿಷಯದಲ್ಲಿ ನಿಶ್ಚಯವಾದ ಬುದ್ಧಿಯುಳ್ಳ, ಯಸ್ಯಕಸ್ಯಾಪಿ-ಯಾವ ಕುಲದಲ್ಲಿ ಹುಟ್ಟಿದವನೇ ಬೇಕೆಂಬ ನಿಯಮವಿಲ್ಲದೆ ಯಾವನಾದರೂ ಒಬ್ಬ ಭಾಗವತೋತ್ತಮನ, ರಾಗಃ - ಪ್ರೀತಿಯು, ಭವತಿ - ಉಂಟಾಗುತ್ತದೆಯೋ, ತತ್ - ಅಂತಹ ಸಾನ್ನಿಧ್ಯವುಳ್ಳ ಸ್ಥಳವೇ, ಕೃತಿನಾಂ - ಸಾಙ್ಗಪ್ರಪತ್ತಿಯನ್ನು ಮಾಡಿ ಕೃತಕೃತ್ಯರಾದ ಪ್ರಪನ್ನರಿಗೆ, ವಾಸಸ್ಥಾನಂ - ವಾಸಮಾಡಲು ಯೋಗ್ಯವಾದ ಸ್ಥಾನವು, ಇಹ - ಈ ಭೂಲೋಕದಲ್ಲಿ, ಅದು, ವೈಕುಂಠಕಲ್ಪಂ - ದಿವ್ಯ ವೈಕುಂಠಕ್ಕೆ ಸಮಾನವಾದುದಾಗಿ, ಭಾತಿ - ಪ್ರಕಾಶಿಸುತ್ತದೆ. ಮುನಿಭಿರುದಿತಾಃ - ಋಷಿಗಳಿಂದ ಹೇಳಲ್ಪಟ್ಟ, ಪ್ರಾಯಃ ದೇಶಾಃ - ಬಹು ಪುಣ್ಯಸ್ಥಳಗಳು, ಪ್ರಾಯಿಕೌಚಿತ್ಯವಂತಃ - ಬಹುಶಃ ಹೀಗೆ ಭಾಗವತರುಗಳು ಅಲ್ಲಿ ನೆಲಸಿರುವದರಿಂದಲೋ ಅಥವಾ ಭಗವತ್ಸೇವಾರ್ಚನಾದಿಗಳಿಗೆ ಏಕಾಗ್ರ್ಯ ದೊರಕುವುದರಿಂದಲೋ ಮಹಿಮೆಯುಳ್ಳವುಗಳಾಗಿರುತ್ತವೆ.

ತಾತ್ಪರ್ಯ — ಸಾಙ್ಗಪ್ರಪದನಾನುಷ್ಠಾನವನ್ನು ಮಾಡಿ ಕೃತಕೃತ್ಯನಾದ ಪ್ರಪನ್ನನಿಗೆ ದೇಹಾವಸಾನದವರೆಗೂ ಇರಲು ಯೋಗ್ಯವಾದ ವಾಸಸ್ಥಳವು ಯಾವುದೆಂದರೆ ತಿಳಿಸುತ್ತಾರೆ. ಅದು ಶ್ರೀರಂಗಾದಿ ದಿವ್ಯಕ್ಷೇತ್ರವಾಗಿರಬೇಕು ಏಕೆಂದರೆ ಅಲ್ಲಿ ಭಗವತ್ಸೇವೆ, ಅರ್ಚನೆ ಮೊದಲಾದವುಗಳಿಗೆ ಬೇಕಾದ ಚಿತ್ತೈಕಾಗ್ರತೆಯು ದೊರೆಯುತ್ತದೆ. ಈತನು ತನಗೆ ಮಹೋಪಕಾರಿಯಾದ ಸರ್ವೇಶ್ವರನನ್ನು ಚಿತ್ತೈಕಾಗ್ರತೆಯಿಂದ ಧ್ಯಾನಿಸತಕ್ಕದ್ದು. ಆಗ ಈತನಿಗೆ ಸತ್ತ್ವೋದ್ರೇಕ ಉಂಟಾಗಿ ಬುದ್ಧಿಪೂರ್ವೋತ್ತರಾಘಗಳಲ್ಲಿ ಅಭಿಸಂಧಿಯಿಲ್ಲದೆ, "ಪರಮಾತ್ಮನಿ ಯೋ ರಕ್ತೋ ವಿರಕ್ತೋಽಪರಮಾತ್ಮನಿ" ಎಂದು ಹೇಳಿರುವ ಹಾಗೆ, ಐಹಿಕದಲ್ಲಿ ವಿರಾಗತೆಯುಂಟಾಗಿ, ತನ್ನ ಸ್ವರೂಪಾನುಗುಣವಾದ ಭಗವದ್ಭಾಗವತ ಕೈಂಕರ್ಯದಲ್ಲಿ ನೆಲಸುವನು. ಹೀಗೆಯೇ ಅನೇಕ ಪ್ರಪನ್ನರಾಗಿ ಜ್ಞಾನಿಗಳಾದ ಭಾಗವತರುಗಳು ಅಲ್ಲಿ ಸೇರಿರುವದರಿಂದ, ಉತ್ತರಕೃತ್ಯಾಧಿಕಾರದಲ್ಲಿ ಹೇಳಿರುವವನ್ನೆಲ್ಲಾ ನಡೆಸಲು ಅನುಕೂಲ ಉಳ್ಳವನಾಗುತ್ತಾನೆ. ನಾಲ್ಕು ಪುಣ್ಯಕ್ಷೇತ್ರಗಳು ಬಹಳ ಮುಖ್ಯವಾದುವೆಂದು

ಶ್ರೀರಂಗ ಮಂಗಳಮಣಿಂ ಕರುಣಾನಿವಾಸಂ ।
ಶ್ರೀ ವೇಙ್ಕಟಾದ್ರಿಶಿಖರಾಲಯ ಕಾಲಮೇಘಂ ।

ಶ್ರೀ ಹಸ್ತಿಶೈಲಶಿಖರೋಜ್ಜ್ವಲ ಪಾರಿಜಾತಂ ।
ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ ॥

ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟಿವೆ. ಅವು ಯಾವುವೆಂದರೆ ಶ್ರೀರಂಗ, ತಿರುಮಲೆ, ಕಾಂಚೀಪುರ ಮತ್ತು ಮೇಲುಕೋಟೆ. ಇಂತಹ ದಿವ್ಯ ಕ್ಷೇತ್ರಗಳು ದಕ್ಷಿಣದೇಶದಲ್ಲಿ ಬಹಳವಾಗಿ ಉಂಟು. ವಾನಮಾಮಲೆ, ಆಳ್ವಾರ್ ತಿರುನಗರಿ, ಶ್ರೀ ವಿಲ್ಲಿಪುತ್ತೂರು, ಕುಂಭಕೋಣ ಮೊದಲಾದ ಅನೇಕ ಪುಣ್ಯಸ್ಥಳಗಳಲ್ಲಿ ವಾಸಮಾಡಬಹುದು. ಶ್ರೀ ಭಾಷ್ಯಕಾರರಿಗೆ ಶ್ರೀರಂಗಕ್ಷೇತ್ರದಲ್ಲಿ ತುಂಬಾ ಮಮತೆಯಾದುದರಿಂದ, "ಯಾವಚ್ಛರೀರಪಾತಮತ್ರೈವ ಶ್ರೀರಂಗೇ ಸುಖಮಾಸ್ವ" ಎಂದು ಶರಣಾಗತಿಗದ್ಯದಲ್ಲಿ ತಮಗೆ ಶ್ರೀರಂಗನಾಥನು ನಿರೂಪಿಸಿದರ್ಥವನ್ನೇ ತಮ್ಮ ಶಿಷ್ಯರಿಗೂ ಪರಮ ಹಿತದಿಂದ ಬೋಧಿಸುತ್ತಾರೆ. ಹಾಗೆಯೇ ಶ್ರೀ ಭಾಷ್ಯಕಾರರು ತಿರುನಾರಾಯಣಪುರದಲ್ಲಿ ತಮ್ಮ ಶಿಷ್ಯರಿಗೆ ಒಂದು ಕುಟೀರವನ್ನು ಕಲ್ಪಿಸಿಕೊಂಡು ವಾಸಮಾಡತಕ್ಕದ್ದೆಂದುಪದೇಶಿಸಿದರು.

ಅಂತಹ ದಿವ್ಯಕ್ಷೇತ್ರಗಳಲ್ಲಿ ಪರಮಸಾನ್ನಿಧ್ಯದಿಂದ ಕಂಗೊಳಿಸುತ್ತಿರುವ ಅರ್ಚಾವತಾರಿಯಾದ ಸರ್ವೇಶ್ವರನ ದೃಷ್ಟಿಗೆ ಬೀಳುವನಾಗಿ, (೧) **"ದೃಷ್ಟ ಏವ ಹಿನಃ ಶೋಕಮಪನೇಷ್ಯತಿ ರಾಘವಃ"** ಎಂದು ಹೇಳಿರುವ ಹಾಗೆ, ಶೋಕಕ್ಕೆ ಕಾರಣಭೂತವಾದ ರಜಸ್ತಮೋಗುಣಗಳಿಂದ ಬಿಡಲ್ಪಟ್ಟವನಾಗಿ ಸತ್ವವೃದ್ಧಿಯನ್ನು ಹೊಂದುವನು. ಹಾಗೆಯೇ ಅಲ್ಲಿ ಏಕಾಂತ್ಯದಿಂದ ತನ್ನನ್ನು ಭಜಿಸುವ ಮಹಾಭಾಗವತೋತ್ತಮರ ದೃಷ್ಟಿಪಥಕ್ಕೂ ಬಿದ್ದವನಾಗಿ ಈ ರಜಸ್ತಮೋಗುಣಗಳ ನಾಶಪೂರ್ವಕವಾದ ಸತ್ವವೃದ್ಧಿಯನ್ನು ಇನ್ನೂ ವಿಶೇಷ ತ್ವರೆಯಿಂದ ಹೊಂದಿದವನಾಗಿ (೨) **"ದರ್ಶನಾದೇವ ಸಾಧವಃ"** ಎಂದೂ, (೨) **"ವಿಪಕ್ಷಿತೋ ಘ್ನಂತಿ ಮುಹೂರ್ತಸೇವಯಾ"** ಎಂದೂ, ಹೇಳಿರುವ ಹಾಗೆ ಪಾಪನಾಶವನ್ನು ಹೊಂದಿ ಪವಿತ್ರತೆಯನ್ನು ಪಡೆಯುವನು. ಹೀಗೆ ಈ ಎರಡು ವಿಧವಾಗಿಯೂ ಪ್ರಪನ್ನನಿಗೆ ಪ್ರಯೋಜನವು ಲಭಿಸುತ್ತದೆ.

ಆದರೆ ಎಲ್ಲಾ ಪ್ರಪನ್ನರೂ ಪುಣ್ಯಕ್ಷೇತ್ರಗಳಲ್ಲಿ ವಾಸಮಾಡಲು ಅನುಕೂಲತೆಯು ಇರಲಾರದು. ಅಲ್ಲಿ ದೇಹಯಾತ್ರೆಗೆ ಕಷ್ಟವಿರಬಹುದು. ಅಂತಹ ಸಂದರ್ಭದಲ್ಲಿ **"ಯತ್ರೈಕಾಂತ್ಯವ್ಯವಸಿತಧಿಯೋ ಯತ್ಯ ಕಸ್ಯಾಪಿ ಲಾಭಃ ಭವತಿ"** ಪರಮೈಕಾಂತಿಯಾದವನಲ್ಲೊಬ್ಬನಾದರೂ ವಸಿಸುವ ಸ್ಥಳದಲ್ಲಾಗಲಿ ಈ ಪ್ರಪನ್ನನು ಇರತಕ್ಕದ್ದು. ಆ ಪರಮೈಕಾಂತಿಯು ಉತ್ತಮ ಪದ್ಧದವನಾಗಿ ಉಂ

(೧) ರಾಮಾ.   (೨) ಭಾಗ

ದೇಶವನ್ನೀಯಲು ಅರ್ಹನಾಗಿದ್ದರೆ ಉತ್ತಮ ಪಕ್ಷವು. ಒಂದುವೇಳೆ ಅಂತಹ ಉತ್ತಮ ವರ್ಣದವನಿಲ್ಲದಿದ್ದರೂ, ಕ್ಷತ್ರಿಯ ವೈಶ್ಯ ಶೂದ್ರರಾದರೂ ಚಿಂತೆಯಿಲ್ಲವು. ಅಂತಹ ಭಾಗವತನ ಸಾನ್ನಿಧ್ಯದಲ್ಲಿ ವಸಿಸತಕ್ಕದ್ದೆಂಬ ಭಾವವು. ಅಂತಹ ಭಾಗವತನು ಜ್ಞಾನನಿಷ್ಠೆಯನ್ನು ಹೊಂದಿ ಸದ್ವೃತ್ತಿಯಲ್ಲಿದ್ದುಕೊಂಡು ಸ್ವಾಮಿಯನ್ನು ಚಿತ್ತೈಕಾಗ್ರತೆಯಿಂದ ಧ್ಯಾನಿಸುತ್ತಾ ಭಗವದ್ಭಾಗವತ ಕೈಙ್ಕರ್ಯಗಳನ್ನು ಮಾಡುತ್ತಿರುವವರಿಂದ, ಅಂತವನ ಸಮೀಪದಲ್ಲಿ ವಸಿಸುವದು **"ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ"** (ಗೀ. ೩-೨೧) ಎಂದು ಹೇಳಿರುವ ಹಾಗೆ ಪ್ರಪನ್ನನೂ ಹಾಗೆಯೇ ಪ್ರವೃತ್ತಿಹೊಂದುವದಕ್ಕೆ ಉತ್ತೇಜಕವಾಗಿರುತ್ತದೆ. ಆದುದರಿಂದ ಪರಮ ಭಾಗವತ ಶಿಖಾಮಣಿಯಾದ ವಿದುರನೂ, ಪರಮ ಭಕ್ತರಾದ ತಿರುಪ್ಪಾಣಾಳ್ವಾರ್ರವರೂ ಮೊದಲಾದವರೆಲ್ಲಾ ವಿಶೇಷ ಮಾನ್ಯರು. ಯುಧಿಷ್ಠಿರನು ವಿದುರನನ್ನು ಹಾಗೆಯೇ ಕೊಂಡಾಡಿರುತ್ತಾನೆ

ಭವದ್ವಿಧಾ ಭಾಗವತಾಸ್ತೀರ್ಥಭೂತಾಸ್ಸ್ವಯಂ ಪ್ರಭೋ ।
ತೀರ್ಥೀ ಕುರ್ವಂತಿ ತೀರ್ಥಾನಿ ಸ್ವಾಂತಸ್ಥೇನ ಗದಾಭೃತಾ ।

ಮಹಾಪರಿಶುದ್ಧಾತ್ಮರಾದ ತಮ್ಮಂಥಾ ಭಾಗವತರುಗಳು, ಶ್ರೀಮನ್ನಾರಾಯಣನನ್ನು ಸದಾ ಮನಸ್ಸಿನಲ್ಲಿಟ್ಟಿರುವದರಿಂದ ಪುಣ್ಯತೀರ್ಥಗಳಿಗೂ ಕೂಡ ಪವಿತ್ರತೆಯನ್ನುಂಟುಮಾಡುತ್ತೀರಿ ಎಂದು ಶ್ಲಾಘಿಸಿರುತ್ತಾನೆ.

ನಿಗೃಹಿತೇಂದ್ರಿಯಗ್ರಾಮೋ ಯತ್ರ ಯತ್ರ ವಸೇನ್ನರಃ
ತತ್ರ ತತ್ರ ಕುರುಕ್ಷೇತ್ರಂ ನೈಮಿಶಂ ಪುಷ್ಕರಂ ತಥಾ ॥

ಎಲ್ಲೆಲ್ಲಿ ಇಂದ್ರಿಯ ಸಮೂಹವನ್ನು ನಿಗ್ರಹಿಸಿರುವ ಮನುಷ್ಯನು ವಸಿಸುತ್ತಾನೋ ಆ ಸ್ಥಳವೆಲ್ಲಾ ಕುರುಕ್ಷೇತ್ರ, ನೈಮಿಶಾರಣ್ಯ, ಪುಷ್ಕರ ಮೊದಲಾದ ದಿವ್ಯಕ್ಷೇತ್ರಗಳನ್ನಾಗಿ ಭಾವಿಸತಕ್ಕದೆಂದೂ ಹೇಳಲ್ಪಟ್ಟಿರುತ್ತದೆ. ಇವನ್ನನುಸರಿಸಿಯೇ ಸ್ವಾಮಿದೇಶಿಕರವರೂ, (೨) **ವಾಸಸ್ಥಾನಂ ತದಿಹ ಕೃತಿನಾಂ ಭಾತಿ ವೈಕುಂಠಕಲ್ಪಂ** ಎಂದು ಹೇಳಿರುತ್ತಾರೆ. ಅಂತಹ ದಿವ್ಯಸ್ಥಳವು ಈ ಲೀಲಾವಿಭೂತಿಯಲ್ಲೇ ಸಂಸಾರದೆಶೆಯಲ್ಲಿರುವಾಗಲೇ ದಿವ್ಯ ವೈಕುಂಠಕ್ಕೆ ಸಮಾನವಾದ ಸ್ಥಳವು. ದಿವ್ಯ ವೈಕುಂಠದಲ್ಲಿನ ಹಾಗೆ ಸರ್ವೇಶ್ವರನ ಧ್ಯಾನಕ್ಕೆ ಬೇಕಾದ ಏಕಾಗ್ರಚಿತ್ತತೆಯುಂಟಾಗುವದರಿಂದ ಸರ್ವೇಶ್ವರನ ಅನುಭವವೂ, ಅದರಿಂದುಂಟಾಗುವ ಆನಂದವೂ, ಭಗವತ್ಕೈಙ್ಕರ್ಯವೂ, ಮತ್ತು ಇನ್ನೊಂದು ವಿಶೇಷ ವಿಷಯವಾದ ಭಾಗವತ ಕೈಙ್ಕರ್ಯವೂ ಎಲ್ಲವೂ ಅಂತಹ ಸ್ಥಳಗಳಲ್ಲಿ ಪ್ರಾಪ್ತವಾಗುವದರಿಂದ "ಭಾತಿ

(೧) ಭಾಗ. (೨) ಅಭೀತಿ.

ವೈಕುಂಠಕಲ್ಪಂ" ಪರಮಪದಕ್ಕೆ ಸಮಾನವಾದುದಾಗಿ ಶೋಭಿಸುತ್ತದೆಂದು ಹೇಳಿರುತ್ತಾರೆ. ಅಧೀತಸ್ತವದಲ್ಲಿ ಶ್ರೀ ನಿಗಮಾಂತ ದೇಶಿಕರವರು ಇಂತಹ ಸ್ಥಳಗಳನ್ನು "**ತದಕ್ಷತ ತಪೋವನಂ ತವಚರಾಜಧಾನೀಸ್ಥಿರಾ**" ಬದರಿಕಾಶ್ರಮವೇ ಮೊದಲಾದ ತಪೋವನಗಳಿಗೂ, ಪರ್ವೇಶ್ವರನಿಗೆ ನಿತ್ಯವಾದ ರಾಜಧಾನಿಯಾದ ಪರಮಪದಕ್ಕೂ ಸಮವೆಂದು ಹೇಳಿರುತ್ತಾರೆ.

ಆದರೆ "ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ | ಪುರೀದ್ವಾರವತೀಚೈವ ಸಪ್ತೈತೇ ಮೋಕ್ಷದಾಯಕಾಃ" ಎಂದುಹೇಳಿರುವ ಈಸ್ಥಳಗಳಿಗೆ ಮುನಿಗಳು ಪ್ರಾಶಸ್ತ್ಯವನ್ನು ಕೊಟ್ಟಿದ್ದಾರಲ್ಲಾ ಅದು ಹೇಗೆ ಎಂದು ಕೇಳಬಹುದು. ಅದಕ್ಕೆ ಉತ್ತರವನ್ನು ದಯಪಾಲಿಸುತ್ತಾರೆ. "**ಪ್ರಾಯೋದೇಶಾ ಮುನಿಭಿರುದಿತಾಃ ಪ್ರಾಯಕೌಚಿತ್ಯವನ್ತಃ**" ಹೀಗೆ ಅನೇಕ ಪುಣ್ಯಸ್ಥಳಗಳಿಗೆ ಔಚಿತ್ಯವನ್ನು ಮುನಿಗಳು ಕೊಟ್ಟಿರುವುದು ಮೇಲೆ ಹೇಳಿದ ಕಾರಣದಿಂದಲೇ ಎಂದು **ತಿಳಸುತ್ತಾರೆ.** ಅವು ಪರಮ ಭಾಗವತರುಗಳಿಗೆ ತುಂಬಾ ಪ್ರಿಯವಾದ ಸ್ಥಳಗಳಾಗಿ ಅಂತಹ ಭಾಗವತರ ಕಟಾಕ್ಷ ವೀಕ್ಷಣೆ, ಅವರ ಪ್ರಸನ್ನತೆ, ಉಪದೇಶಾದಿಗಳು ದೊರೆತು, ಚಿತ್ತೈಕಾಂತ್ಯಕ್ಕೆ ಅನುಕೂಲವಾದ ಸ್ಥಳಗಳಾದುದರಿಂದ ಅವುಗಳಿಗೆ ಮಾಹಾತ್ಮ್ಯೆಯುಂಟಾಗಿರುತ್ತದೆಂದು ಬೋಧಿಸುತ್ತಾರೆ. ಹಾಗೆಯೇ ಭಾಗವತಾಗ್ರೇಸರರಾದ ಭರತಾಳ್ವಾರ್ರವರು ಚಿತ್ರಕೂಟವನ್ನು "**ಸುಭಗಶ್ಚಿತ್ರಕೂಟೋಸೌ**" (ರಾಮಾ. ಅಯೋ.) ಎಂದುಹೇಳಿ ಶ್ಲಾಘಿಸಿದುದಕ್ಕೆ ಕಾರಣವನ್ನು "**ರಾಜೀವಾಕ್ಷನಾಗಿ ಮಹಾದ್ಯುತಿ**"ಯಾದಶ್ರೀರಾಮನು ಆಪರ್ವತವನ್ನಲಂಕರಿಸಿದುದರಿಂದ ಎಂದು ಹೇಳಿದರು. ಶ್ರೀರಾಮನಾದರೋ "**ಆ ಗಿರಿರಾಜೋಪಮೋ ಗಿರಿಃ**" ಗಿರಿಶ್ರೇಷ್ಠವಾದ ಶ್ರೀವೇಙ್ಕಟಾದ್ರಿಗೆ ಸಮಾನವಾದ ಚಿತ್ರಕೂಟವನ್ನು ಆಶ್ರಯಿಸಿ, ಅಲ್ಲಿ ಆಶ್ರಮನಿರ್ಮಾಣಮಾಡಿ ವಾಸಮಾಡಲು ಕಾರಣವನ್ನು ತಾವೇ ಹೇಳಿಕೊಂಡಿರುತ್ತಾರೆ.

"ಮುನಯಶ್ಚ ಮಹಾತ್ಮಾನೋ ವಸಂತ್ಯಸ್ಮಿನ್ ಶಿಲೋಚ್ಚಯೇ |
ಅಯಂ ವಾಸೋಭವೇತ್ತಾವದತ್ರ ಸೌಮ್ಯವಸೇಮಹಿ"

(ರಾ. ಅಯೋಧ್ಯಾ. ೫೬. ೧೫) ಮಹಾನುಭಾವರಾದ ಮುನಿಗಳು ಈ ಚಿತ್ರಕೂಟ ಪರ್ವತದಲ್ಲಿರುವುದರಿಂದ ತನಗೆ ಈಮನೋಹರವಾದ ಪರ್ವತದಲ್ಲಿ ವಾಸವು ಯೋಗ್ಯವೆಂದು ಶ್ರೀರಾಮಚಂದ್ರ ಪ್ರಭುವು ತನ್ನ ತಮ್ಮನನ್ನು ಕುರಿತು ತಿಳಿಸಿದರು. ಇದೂ ಅಲ್ಲದೆ ಇಂತಹ ಜ್ಞಾನದೀಪ್ತಿಯಿಂದ ವಿರಾಜಿಸುವ ಮುನಿಗಳಿರುವುದರಿಂದಲೇ '**ಯಾವತಾ ಚಿತ್ರಕೂಟಸ್ಯ ನರ ಶೃಂಗಾಣ್ಯವೇಕ್ಷತೇ | ಕಲ್ಯಾಣಾನಿ ಸಮಾಧತ್ತೇ ನಪಾಪೇ ಕುರುತೇ ಮನಃ**" ಎಂದು ಹೇಳಿರುವಹಾಗೆ ಯಾವ ಮನುಷ್ಯನು ಚಿತ್ರಕೂಟ ಪರ್ವತದ ಶೃಂಗಗಳನ್ನು ನೋಡುತ್ತಿರುವನೋ, ಆದುವರಿಗೂ ಆತನಮನಸ್ಸು ಮಂಗಳಕರವಾದ ಕೃತ್ಯಗಳಲ್ಲಿ ಪ್ರವರ್ತಿಸುವುದೇ ವಿನಾ ಪಾಪ

ಕರ್ಮಗಳಲ್ಲಿ ಪ್ರವರ್ತಿಸುವುದಿಲ್ಲವೆಂದು ಹೇಳಲ್ಪಟ್ಟಿದೆ. ಇನ್ನೊಂದು ಸಂದರ್ಭದಲ್ಲೂ ತನಗೆ ಪ್ರಿಯಮಿತ್ರನಾದ ಸುಗ್ರೀವನಿಗೆ ರಾಜ್ಯದಾರ ಪ್ರಾಪ್ತಿಯನ್ನುಂಟುಮಾಡಿ ಆತನು ಸಕಲ ದಿವ್ಯರಾಜ್ಯಭೋಗಗಳನ್ನೂ ಅನುಭವಿಸುತ್ತಾ **'ಸಂಪ್ರಾಪ್ಯ ಮಹತೀಂಶ್ರಿಯಂ'** ಎಂದು ಹೇಳಿರುವಹಾಗೆ, ಸಂತೋಷಗೊಂಡವನಾಗಿ, ತನ್ನ ತಮ್ಮನಾದ ಲಕ್ಷ್ಮಣನನ್ನು ಕುರಿತು ಓ ಸೌಮ್ಯನೇ ಈಗ ವರ್ಷಾಕಾಲವಾದುದರಿಂದ ಸೀತಾನ್ವೇಷಣ ಮುಂತಾದ ಕೆಲಸಗಳು ಸಾಧ್ಯವಲ್ಲದುದರಿಂದ ಹತ್ತಿರವಿರುವ ಪ್ರಸ್ರವಣ ಗಿರಿಯ ಗುಹೆಯು ವಿಶಾಲವಾಗಿರುವದರಿಂದ ಇಲ್ಲಿಯೇ **'ದೃಢಂ ರಂಸ್ಯಾವ ಸೌಮಿತ್ರೇ ಸಾಧ್ವತ್ರ ನಿವಸಾವಹೇ'** ವಿಹರಿಸುತ್ತ ಇದ್ದುಬಿಡೋಣ, ಏಕೆಂದರೆ ಈ ದೇಶವು ಬಹು ರಮಣೀಯವಾಗಿಯೂ, ಹತ್ತಿರದಲ್ಲೇ **'ರಮಣೀಯಾ ನದೀ ಸೌಮ್ಯ ಮುನಿಸಂಘೈರ್ನಿಷೇವಿತಾ'** ಮುನಿಗಳ ಸಮೂಹದಿಂದ ಅವಗಾಹನ ಮೊದಲಾದವುಗಳಿಂದ ಪವಿತ್ರೀಕರಿಸಲ್ಪಟ್ಟ ರಮಣೀಯವಾದ ನದಿಯು ಪ್ರವಹಿಸುವುದರಿಂದಲೂ ನಮಗೆ ಈ ಪರ್ವತಗುಹೆಯು ವಾಸಯೋಗ್ಯಸ್ಥಳವು" ಎಂದು ಹೇಳಿರುತ್ತಾರೆ. ಹೀಗೆ ಶ್ರೀರಾಮನಿಗೆ ಸುಭಗತ್ವ ರಮಣೀಯತ್ವಗಳೆಲ್ಲಾ ಯಾವಕಾರಣದಿಂದೆಂದರೆ. ಮುನಿ ಸಂಘಗಳಿಂದ ನಿಷೇವಿತವಾಗಿರುವುದರಿಂದಲೇ, ಆದುದರಿಂದ ಅನೇಕ ಋಷ್ಯಾಶ್ರಮಗಳಲ್ಲೇ ಶ್ರೀರಾಮಚಂದ್ರನು ಅಷ್ಟು ಆದರವನ್ನು ತೋರಿ ಅವುಗಳನ್ನು ಕುರಿತು ತೆರಳಿ ಭರದ್ವಾಜಾದಿ ಋಷಿಗಳಿಗೆ ತನ್ನ ಸಂದರ್ಶನವನ್ನು ದಯಪಾಲಿಸಿರುತ್ತಾನೆ. ಆದುದರಿಂದ ಭಾಗವತರುಗಳ ಸಾನ್ನಿಧ್ಯದಲ್ಲಿ ವಸಿಸತಕ್ಕದ್ದು ಪ್ರಪನ್ನನಿಗೆ ಅತ್ಯಾವಶ್ಯಕವು. ಸ್ವರೂಪಕ್ಕೆಯೋಗ್ಯವಾದುದು ಮಾತ್ರವೇ ಅಲ್ಲದೆ, ಅವರುಗಳ ಸಾನ್ನಿಧ್ಯದಿಂದ ಈತನಿಗೆ ರಜಸ್ತಮೋಗುಣಗಳ ನಾಶಪೂರ್ವಕವಾಗಿ ಸತ್ವವೃದ್ಧಿಯುಂಟಾಗುವದರಿಂದ ಬುದ್ಧಿ ಪೂರ್ವೋತ್ತರಾಘದಲ್ಲಿ ಮನಸ್ಸು ಪ್ರವರ್ತಿಸುವುದಿಲ್ಲವು. ಹಾಗೆಯೇ ಗೀತೆಯಲ್ಲಿ ಹೇಳಲ್ಪಟ್ಟಿರುತ್ತದೆ. (ಭ. ಗೀ. ೧೪-೧೭.) **ಸತ್ವಾತ್ಸಂಜಾಯತೇ ಜ್ಞಾನಂ ರಜಸೋಲೋಭವಿವಚ। ಪ್ರಮಾದಮೋಹೌ ತಮಸೋ ಭವತೋऽಜ್ಞಾನಮೇವಚ ||** ಅಪರಾಧ ಹೇತುಗಳಾದ ಲೋಭ ಪ್ರಮಾದ ಮೋಹ ಅಜ್ಞಾನಾದಿಗಳು ತೊಲಗಿ ಸುಜ್ಞಾನಾಭಿವೃದ್ಧಿಗಾಗಿ ಭಾಗವತರ ಮಧ್ಯದಲ್ಲಿರತಕ್ಕದ್ದು. ಹೀಗೆ ತೊಂಡರಡಿಪ್ಪೊಡಿಯಾಳ್ವಾರ್ ತಿರುಪ್ಪಾಣಾಳ್ವಾರ್ ತಿರುಮಂಗೈಯಾಳ್ವಾರ್ ಮೊದಲಾದ ಆಳ್ವಾರುಗಳಿಗೂ, ಯಾಮುನೇಯರು ದರ್ಶನಸ್ಥಾಪಕರಾದ ಶ್ರೀ ಭಾಷ್ಯಕಾರರು, ಪರಾಶರ ಭಟ್ಟರು, ಮೊದಲಾದ ಆಚಾರ್ಯರುಗಳಿಗೂ, ಬಹಳ ಪ್ರಿಯವಾದ ಸ್ಥಳವಾದುದರಿಂದ ಶ್ರೀರಂಗಕ್ಕೆ ದಿವ್ಯದೇಶವೆಂಬ ಪ್ರಾಶಸ್ತ್ಯವು ಹೆಚ್ಚು.

ಇದರಿಂದ ಪರಮೈಕಾನ್ತಿಗೆ ದೊಡ್ಡೂರು ತನ್ನ ನೆಂಟರಿಷ್ಟರು ತನ್ನ ಕುಲದವರೂ ಇರುವ ದೇಶ ಬೇಕಿಲ್ಲವು. ದಿವ್ಯ ವಿಷ್ಣು ಕ್ಷೇತ್ರವೂ ವೈಷ್ಣವ ಭಾಗವತರೂ

ಚಾತುರ್ವರ್ಣ್ಯಧರ್ಮ ಪ್ರತಿಷ್ಠಿತದೇಶಸ್ಯೋಪಾದೇಯತ್ವಕಥನಂ

ಇಙ್ಙಿರುನ್ದ ನಾಳಿಪ್ಪಡಿ ಸ್ವಯಮ್ ಪ್ರಯೋಜನಮಾಗ ನಿರಪರಾಧಾನುಕೂಲ ವೃತ್ತಿಯಿಲೇ ರುಚಿಯುಮ್ ತ್ವರೈಯು ಮುಡೈಯವನಾಯ್ (೧) "ಏಕಾಂತೀವ್ಯಪದೇಷ್ಟವ್ಯೋ ನೈವಗ್ರಾಮ ಕುಲಾದಿಭಿಃ। ವಿಷ್ಣುನಾವ್ಯಪದೇಷ್ಟವ್ಯ ಸ್ತಸ್ಯಸರ್ವಂ ಸ ಏವಹೀ" ಎನ್ರುಮ್ ಪಡಿಯಾ

ಇರುವ ದೇಶವೇ ತನಗೆ ಯೋಗ್ಯವೆಂದು ಭಾವಿಸುವನೆಂಬ ತಾತ್ಪರ್ಯವು.

ಆದುದರಿಂದ ಮಹಾ ಭಾಗವತೋತ್ತಮರುಗಳಿಂದ ಅಧಿಷ್ಠಿತವಾದ ದಿವ್ಯದೇಶವೀಗ ಪ್ರಪನ್ನನಿಗೆ ಯೋಗ್ಯವಾದ ವಾಸಸ್ಥಳವು. ದೇಹಯಾತ್ರಾದಿ ತೊಂದರೆಗಳಿಂದ ಅಂತಹ ಸ್ಥಳದಲ್ಲಿರಲು ಅನುಕೂಲವಿಲ್ಲದಿದ್ದರೂ, ಮಹಾಭಾಗವತನೊಬ್ಬನಾದರೂ ಇರುವ ಸ್ಥಳದಲ್ಲಿ ಅಂಥಾವರ ಸಾನ್ನಿಧ್ಯದಲ್ಲಿ ಪ್ರಪನ್ನನು ವಾಸಮಾಡತಕ್ಕದ್ದೆಂಬುವದು ಈ ಶ್ಲೋಕದ ಮುಖ್ಯಾಭಿಪ್ರಾಯವು.

ಇಙ್ಙಿರುನ್ದನಾಳ್—ಈ ಲೋಕದಲ್ಲಿದ್ದಷ್ಟು ದಿನ, ಹೇಗೆ ಇದ್ದಷ್ಟು ಕಾಲವೆಂದರೆ, ಕೃತಕೃತ್ಯಾಧಿಕಾರದಲ್ಲೂ ಸ್ವನಿಷ್ಠಾಭಿಜ್ಞಾನಾಧಿಕಾರದಲ್ಲೂ ಹೇಳಿರುವ ಹಾಗೆ ಕೃತಕೃತ್ಯನಾಗಿ ಸ್ವನಿಷ್ಠಾಭಿಜ್ಞಾನವುಳ್ಳವನಾಗಿ ಇದ್ದಷ್ಟುಕಾಲವು, **ಇಪ್ಪಡಿ**-ಈಪ್ರಕಾರವಾಗಿ ಎಂದರೆ ಶಾಸ್ತ್ರೀಯನಿಯಮನಾಧಿ ಕಾರದಲ್ಲಿ ಹೇಳಿರುವಹಾಗೆ ಆಜ್ಞಾನುಜ್ಞಾ ಕೈಙ್ಕರ್ಯ ನಿರತನಾಗಿ ಅವುಗಳನ್ನು ಶಾಸ್ತ್ರಾನುಗುಣವಾಗಿ ನಡೆಸುತ್ತಾ, **ಸ್ವಯಂ ಪ್ರಯೋಜನಮಾಗ** - ಉತ್ತರ ಕೃತ್ಯಾಧಿಕಾರದಲ್ಲಿ ಹೇಳಿರುವ ಹಾಗೆ ಕೈಙ್ಕರ್ಯ ಮಾಡುವದೇ ಪ್ರಯೋಜನವೆಂದು ಭಾವಿಸಿ, ಆದರಿಂದುಂಟಾಗುವ ಫಲದಲ್ಲಿ ಆಸೆಯನ್ನಿಡದೆ, **ನಿರಪರಾಧಾನುಕೂಲ ವೃತ್ತಿಯಿಲೇ ರುಚಿಯುಮ್**—ಅಪರಾಧ ಸಂಬಂಧವಿಲ್ಲದೆ ಅನುಕೂಲ ವೃತ್ತಿಯಾದ ಭಗವದ್ಭಾಗವತ ಕೈಙ್ಕರ್ಯದಲ್ಲಿ ಅಭಿರುಚಿಯನ್ನು, ನಿರಪರಾಧವೆಂದು ಹೇಳಿದುದರಿಂದ ಅಪರಾಧ ಪರಿಹಾರಾಧಿಕಾರದಲ್ಲಿ ಹೇಳಿರುವ ಹಾಗೆ, ಬುದ್ಧಿಪೂರ್ವೋತ್ತರಾಘದ ಸಂಬಂಧವಿಲ್ಲದವನಾಗಿ ಎಂಬ ಭಾವವೂ, **ಅನುಕೂಲವೃತ್ತಿಯಿಲೇ** ಎಂದು ಹೇಳಿದುದರಿಂದ ಪುರುಷಾರ್ಥಕಾಷ್ಠಾಧಿಕಾರದಲ್ಲಿ ಹೇಳಿರುವ ಹಾಗೆ, ಭಾಗವತ ಕೈಙ್ಕರ್ಯವನ್ನೆಸಗಿ ಭಾಗವತ ಪ್ರಸನ್ನತೆಯನ್ನು ಹೊಂದಬೇಕೆಂಬುವುದರಲ್ಲಿ ರುಚಿಯನ್ನೂ, **ತ್ವರೈಯುಮುಡೈಯವನಾಯ್**—ಒಂದುವೇಳೆ ಅಲ್ಲಿ ಅಂತಹ ಕೈಙ್ಕರ್ಯಕ್ಕೆ ವಿರೋಧಉಂಟಾದರೆ ಅದನ್ನು ಹೊಂದಲು ತ್ವರಾರೂಪ ಶ್ರದ್ಧೆಯಿಂದಲೂ, " **ಏಕಾನ್ತೀ**—ಇಲ್ಲಿ ಏಕಾನ್ತಿಶಬ್ದಕ್ಕೆ ಪರಮೈಕಾನ್ತಿ ಎಂದೇ ವ್ಯಾಖ್ಯಾನಮಾಡಿರುತ್ತಾರೆ. ಏಕಾನ್ತಿ ಎಂದರೆ " **ಯೋ**

---

(೧) ವಿಷ್ವಕ್ಸೇನ ಸಂಹಿತೆ.

ಯಿರುಕ್ಕಿರಪರಮೈಕಾಂತಿ(ಕ್ಕು) ವೃತ್ತಿಕ್ಕನುಗುಣವಾಗ ವಾಸಸ್ಥಾನ

ಮೋಕ್ಷಫಲೇನ ಸಾಕಂ ಫಲಾಂತರಾಣ್ಯಪಿ ಭಗವತ ಏವೇಚ್ಛತಿ " ಎಂದು ಹೇಳಿರುವ ಹಾಗೆ ದೇವತಾಂತರದಿಂದಲ್ಲದೆ ಸರ್ವೇಶ್ವರನಿಂದಲೇ ಮೋಕ್ಷಫಲದೊಂದಿಗೆ ಇತರ ಫಲಗಳನ್ನೂ ಅಪೇಕ್ಷಿಸುವವನು; ಪರಮೈಕಾನ್ತಿಯು, '**'ಭಕ್ತಿಜ್ಞಾನಾಭ್ಯಾಮನ್ಯತ್ಫಲಂ ಭಗವತೋಽಪಿ ನೇಚ್ಛತಿಯಃ ಸಪರಮೈಕಾನ್ತೀ**'', ಭಕ್ತಿಜ್ಞಾನಗಳಲ್ಲದೆ ಬೇರೆಯಾವುದನ್ನೂ ಭಗವಂತನಿಂದ ಪ್ರಾರ್ಥಿಸದೇ ಇರುವವನು, ಐಹಿಕ ಜಿಹಾಸೆಯುಳ್ಳವನು, **ಗ್ರಾಮ ಕುಲಾದಿಭಿಃ**—ಇಂತಹ ದೊಡ್ಡ ಗ್ರಾಮಕ್ಕೆ ಸೇರಿದವನು. ಇಂತಹ ಶ್ರೇಷ್ಠ ಕುಲಕ್ಕೆ ಸೇರಿದವನು ಎಂದು, **ನವ್ಯಪದೇಷ್ಟವ್ಯಃ**—ಹೇಳಿಸಿಕೊಳ್ಳಲು ಯೋಗ್ಯನಲ್ಲವು. ಇನ್ನು ಹೇಗೆ ಹೇಳಿಸಿಕೊಳ್ಳಲು ಯೋಗ್ಯನೆಂದರೆ:— **ವಿಷ್ಣುನಾವ್ಯಪದೇಷ್ಟವ್ಯಃ**— ವಿಷ್ಣು ಸಂಬಂಧಿ ಎಂದು ಹೇಳಿಸಿಕೊಳ್ಳಲು ಯೋಗ್ಯನು, ಕಾಂಚೀಪೂರ್ಣರು ಶ್ರೀಶೈಲಪೂರ್ಣರು ಎಂದು ಪ್ರಸಿದ್ಧರಾಗಿ ಹೇಳಿಸಿಕೊಂಡ ಹಾಗೆ ಹೇಳಿಸಿಕೊಳ್ಳುವವರು ; ಅದೇಕೆಂದರೆ ಹೇಳಲ್ಪಡುತ್ತದೆ, **ತಸ್ಯ ಸರ್ವಂ ಸ ಏವಹಿ**— ಆತನಿಗೆ, ಉಪಾಯೋಪೇಯವಾಗಿ ಸರ್ವವೂ, ಮಹೋಪಕಾರಕನಾಗಿ ಸಮಸ್ತವೂ, **ಸಏವಹಿ**— ಆಶ್ರಿಯಃಪತಿಯೇ, ಆತನಿಗೆ ಶ್ರಿಯಃಪತಿಯಲ್ಲದೇ ಇನ್ನಾವದೂ ಬೇಕಿಲ್ಲವು. ಆದುದರಿಂದ ಇಲ್ಲಿ ಏಕಾನ್ತೀ ಎಂದು ಹೇಳಿದರೂ ಪರಮೈಕಾನ್ತಿಯೇ ಹೇಳಲ್ಪಟ್ಟನು: ಆಕಾರಣದಿಂದಲೇ ಶ್ರೀ ದೇಶಕರೂ ಪರಮೈಕಾನ್ತಿ ಎಂದೇ ಮುಂದೆ ವ್ಯಾಖ್ಯಾನಮಾಡಿರುತ್ತಾರೆ. " **ಎನ್ರುಮ್ಬಡಿಯಾ ಯಿರುಕ್ಕಿರ**— ಹೀಗೆ ಸಮಸ್ತವೂ ತನಗೆ ಮಹಾವಿಷ್ಣುವೇ ಎಂಬ ಹಾಗೆ ಇರುವ, ಪರಮೈಕಾಂತಿಯ **ವೃತ್ತಿಕ್ಕು**— ಆಚರಣೆಗೆ, ಅನುಗುಣವಾಗ-ಯೋಗ್ಯವಾದ, ವಾಸಸ್ಥಾನ ವಿಶೇಷವು ಯಾವುದೆಂದರೆ, **ಆರ್ಯಾವರ್ತಾದಿ ಪುಣ್ಯದೇಶಂಗಳ್**—'' **ಆರ್ಯಾವರ್ತಃ ಪುಣ್ಯಭೂಮಿರ್ಮಧ್ಯಂ ವಿಂಧ್ಯಹಿಮಾಗಯೋಃ** " ಎಂದು ಅಮರದಲ್ಲಿ ಹೇಳಿರುವ ಹಾಗೆ, ಪೂರ್ವ ಪಶ್ಚಿಮ ಸಮುದ್ರಗಳಿಗೂ ವಿಂಧ್ಯ ಹಿಮವತ್ಪರ್ವತಕ್ಕೂ ಮಧ್ಯೆ ಇರುವ ಪ್ರದೇಶಕ್ಕೆ ಆರ್ಯಾವರ್ತವೆಂದು ಹೆಸರು. ಇಲ್ಲಿ ಧಾರ್ಮಿಕರಾದ ಭಾಗವತರು ಒಂದಾನೊಂದು ಕಾಲದಲ್ಲಿ ವಾಸಮಾಡುತ್ತಿದ್ದರಾದುದರಿಂದ ಆ ಹೆಸರು. ಆ ಕಾರಣದಿಂದಲೇ ಅದಕ್ಕೆ ಪುಣ್ಯಭೂಮಿ ಎಂದು ಹೆಸರು. ಮನುವು ಕೂಡ ಹಾಗೆಯೇ ಕೊಂಡಾಡಿರುತ್ತಾರೆ. '' **ಆ ಸಮುದ್ರಾತ್ತು ವೈ ಪೂರ್ವಾದಾಸಮುದ್ರಾಚ್ಚಪಶ್ಚಿಮಾತ್। ಹಿಮವದ್ವಿಂಧ್ಯಯೋರ್ಮಧ್ಯ ಮಾರ್ಯಾವರ್ತಂ ವಿದುರ್ಬುಧಾಃ,**'' ಈ ಆರ್ಯಾವರ್ತವೇ ಮೊದಲಾದ ಪುಣ್ಯದೇಶಗಳು. **ಯುಗಸ್ವಭಾವತ್ವಾತ್ತಲೇ**— ಈ ಕಲಿಯುಗದ ಸ್ವಭಾವದಿಂದ, ಆ ಸ್ವಭಾವವೆಂಥಾದ್ದೆಂದರೆ:—'' **ಅಧರ್ಮೋ ಗ್ರಸತೇ ಧರ್ಮಂ**" ಅಧರ್ಮವು ಧರ್ಮವನ್ನು ಎಂದರೆ

ವಿಶೇಷ ಮೋದೆನ್ನಿಲ್ —ಆರ್ಯಾವರ್ತಾದಿ ಪುಣ್ಯದೇಶಙ್ಗಳ್, ಯುಗ ಸಭಾವತ್ತಾಲೆ ಇಪ್ಪೋದು ವ್ಯಾಕುಲಿತಙ್ಗಳಾನ ಪಡಿಯಾಲೇ ಚಾತುರ್ವರ್ಣ್ಯ ಧರ್ಮಮ್ ಪ್ರತಿಷ್ಠಿತಮಾನ ವಿಡತ್ತಿಲೇವಸಿಪ್ಪಾ ನೆಙ್ಗರದೇ ಇಪ್ಪೋದೈಕ್ಕು ಉಪಾದೇಯುಮ್.

ಶ್ರುತಿಯಲ್ಲಿ ಹೇಳಿರುವ ಆಜ್ಞಾನುಜ್ಞಾ ಕೈಂಕರ್ಯಗಳನ್ನು ನುಂಗಿಬಿಡುತ್ತದೆ. ಇನ್ನೂ, **ಕಲೌ ಕಾರ್ತ್ತಯುಗಂಧರ್ಮಂ ಕರ್ತ್ತು ಮಿಚ್ಛತಿ ಯೋನರಃ । ಸ್ವಾಮಿದ್ರೋಹೀತಿತಂ ಮತ್ವಾತಸ್ಮೈ ಪ್ರದ್ವಿಷತೇ ಕಲಿಃ,** ಎಂದರೆ ಕಲಿಯುಗದಲ್ಲಿ ಯಾವನಾದರೂ ಕೃತಯುಗದ ಧರ್ಮವನ್ನು ಮಾಡಲು ಯತ್ನಿಸಿದರೆ, ಆತನನ್ನು ಸ್ವಾಮಿದ್ರೋಹಿಎಂದೆಣಿಸಿ, ತನಗೆಬೇಕಾದ ಅಧರ್ಮವನ್ನು ಬಿಟ್ಟು ತನಗೆ ವಿರೋಧವಾದ ಧರ್ಮಾಚರಣೆಮಾಡಿದುದರಿಂದ ಆತನನ್ನು ಕಲಿಯು ದ್ವೇಷಿಸುವನು, ಎಂದುಹೇಳಲ್ಪಟ್ಟಿರುತ್ತದೆ; **ಇಪ್ಪೋದು ವ್ಯಾಕುಲಂಗಳಾನ ಪಡಿಯಾಲೇ** - ಹಿಂದಿನ ಕಾಲದಲ್ಲಿ ಪುಣ್ಯಕ್ಷೇತ್ರಗಳೆಂದೆಣಿಸಿ ಪ್ರಸಿದ್ಧವಾದವುಗಳಾಗಿದ್ದರೂ ಈಗಿನ ಕಾಲದಲ್ಲಿ ಅಲ್ಲಿ ವರ್ಣಾಶ್ರಮ ಧರ್ಮಗಳು ನಷ್ಟವಾದಕಾರಣದಿಂದ, **ಚಾತುರ್ವರ್ಣ್ಯ ಧರ್ಮಮ್ ಪ್ರತಿಷ್ಠಿತಮಾನ ವಿಡತ್ತಿಲೆ**-ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರಾದ ನಾಲ್ಕು ವರ್ಣದವರ ಧರ್ಮಗಳು ಚೆನ್ನಾಗಿ ನೆಲಗೊಂಡಿರುವ ಸ್ಥಳದಲ್ಲಿ, **ವಸಿಪ್ಪಾ ಎಙ್ಗರದೇ ಇಪ್ಪೋದಕ್ಕು ಉಪಾದೇಯುಮ್** ವಾಸಮಾಡುವನೆಂಬುವದೇ ಈ ಕಾಲಕ್ಕೆ ನಮಗೆ ಗ್ರಾಹ್ಯವಾದುದು.

ಒಂದಾನೊಂದುಕಾಲದಲ್ಲಿ ಪ್ರಸಿದ್ಧ ಪುಣ್ಯಕ್ಷೇತ್ರಗಳಾಗಿದ್ದಮಾತ್ರದಿಂದ ವರ್ಣಾಶ್ರಮ ಧರ್ಮಗಳಿಗೆಲ್ಲಾ ಈಗ ಲೋಪವುಂಟಾಗಿದ್ದರೂ ಅವುಗಳನ್ನು ಪ್ರಪನ್ನನಿಗೆ ವಾಸಯೋಗ್ಯಸ್ಥಳಗಳೆಂದು ಭಾವಿಸತಕ್ಕದ್ದಲ್ಲವು. ಅವುಗಳಿಗಿಂತ ವರ್ಣಾಶ್ರಮಧರ್ಮಗಳೆಲ್ಲಾ ಸಮರ್ಪಕವಾಗಿ ನಡೆಯುವ ಸ್ಥಳಗಳೇ ಪರಮ ಗ್ರಾಹ್ಯಗಳೆಂದು ಹೇಳುತ್ತಾರೆ. ಹಾಗೆಯೇ ಮಹರ್ಷಿಯೂ "**ಕ್ಷತ್ರಂ ಬ್ರಹ್ಮಮುಖಂಚಾಸೀ ದ್ವೈಶ್ಯಾಃ ಕ್ಷತ್ರಮನುವ್ರತಾಃ । ಶೂದ್ರಾಸ್ಸ್ವಧರ್ಮನಿರತಾ ಸ್ತ್ರೀನ್ವರ್ಣಾನುಪಚಾರಿಣಃ** ಎಂದು ಹೇಳಿ ವರ್ಣಾಶ್ರಮಧರ್ಮಗಳು ಶಾಸ್ತ್ರೋಕ್ತರೀತಿಯಲ್ಲಿ ನಡೆಯುತ್ತಿದುದರಿಂದ ಅಯೋಧ್ಯೆಗೆ ಪ್ರಾಶಸ್ತ್ಯವನ್ನು ಕೊಟ್ಟಿರುತ್ತಾರೆ. ಹೀಗೆ ಆರ್ಯಾವರ್ತವೆಂದು ಶ್ಲಾಘಿಸಲ್ಪಟ್ಟ ದೇಶಗಳು ಒಂದಾನೊಂದು ಕಾಲದಲ್ಲಿ ಧರ್ಮಪ್ರಚುರ ಪ್ರದೇಶಗಳಾಗಿದ್ದರೂ ಈಗ ವ್ಯತ್ಯಸ್ತವಾದುದರಿಂದ ಅವು ಅಷ್ಟುಗ್ರಾಹ್ಯವಲ್ಲವೆಂಬ ಭಾವವು. ಇನ್ನುಯಾವ ಪ್ರದೇಶಗಳುತ್ತಮವೆಂದರೆ ದಕ್ಷಿಣದಲ್ಲಿ ವರ್ಣಾಶ್ರಮಧರ್ಮಗಳಿಗೆ ಪ್ರೋತ್ಸಾಹವಿರುವದರಿಂದ ಅವು ಗ್ರಾಹ್ಯವೆಂದುಹೇಳಿ, ಅವುಗಳಲ್ಲೂ ಎಂತಹ ಪ್ರದೇಶಗಳು ಅಧಿಕ ಗ್ರಾಹ್ಯವಾದುವಾಗಿ ಭಾವಿಸತಕ್ಕದ್ದೆಂಬುವದನ್ನು ಮುಂದೆ ಉಪದೇಶಿಸುತ್ತಾರೆ.

ಭಾಗವತೋತ್ತರ ದೇಶಸ್ಯ ಅಧಿಕ ಪರಿಗ್ರಾಹ್ಯತ್ವ ಕಥನಮ್

ಅವ್ವಿಡಙ್ಗಳ್ ತನ್ನಿಲುಮ್, "ಕರುನ್ದಡಿ ಮುಗಿಲ್ ವಣ್ಣನೈ ಕ್ಕಡೈಕ್ಕೊಂಡು ಕೈತೊಳುಮ್‌ಪತ್ತರ್‌ಗಳ್‌ರುನ್ದ ವೂರಿಲಿರುಕ್ಕು ಮಾನಿಡರೆತ್ತವಂಗಳ್ ಶೆಯ್‌ದಾರ್ ಕೋಲೋ" ಎಙ್ಗರ ಪಡಿಯೇ ಭಾಗವತೋತ್ತರಮಾನ ದೇಶಮ್ ಮುಮುಕ್ಷುವುಕ್ಕು ಪರಿಗ್ರಾ

ಮಹಾಭಾಗವತರುಗಳಿರುವ ಸ್ಥಳಗಳೇ ಪರಮಗ್ರಾಹ್ಯಗಳೆಂದು ಆಳ್ವಾರ್‌ಸೂಕ್ತಿ ಮೂಲಕವಾಗಿ ತಿಳಿಸುತ್ತಾರೆ.

ಅವ್ವಿಡಙ್ಗಳ್ ತನ್ನಿಲುಮ್ - ವರ್ಣಾಶ್ರಮಧರ್ಮಗಳನುಷ್ಠಾನವಿರುವ ಅಂತಹ ಪ್ರದೇಶಗಳಲ್ಲೂ, (1) **ಕರುಮ್**-ಕಪ್ಪಾಗಿ, **ತಿಡಮ್**-ದೃಢವಾದ, **ಮುಗಿಲ್**-ಮೇಘದ, ಎಂದರೆ ಮೇಘಸದೃಶವಾದ, **ವಣ್ಣನೈ**-ಬಣ್ಣವುಳ್ಳವನನ್ನು, ನೀಲಮೇಘ ಶ್ಯಾಮನನ್ನು, ಇದರಿಂದ ಸಂಸಾರಾದಿ ತಾಪತ್ರಯ ನಿವಾರಕತ್ವವು ಹೇಳಲ್ಪಟ್ಟಿತು, **ಕಡೈಕೊಂಡು**-ತಮಗೆ ರಕ್ಷಕನಾಗಿ ಶರಣಹೊಂದಿ, ಅಥವಾ **ಕಡೈ**-ಎಂದರೆ, ಸ್ವೈಚ್ಛ್ಯವು, ತಮ್ಮ ಸ್ವೈಚ್ಛ್ಯವನ್ನು ಮುಂದಿಟ್ಟುಕೊಂಡು, **ಕೈತೊಳುಮ್**— ನಾನಾವಿಧ ಕೈಙ್ಕರ್ಯಗಳನ್ನೆಸಗುವ, **ಪತ್ತರ್‌ಗಳ್**—ಭಕ್ತರುಗಳು, ಎಂದರೆ ಪ್ರಪನ್ನರಾದ ಭಾಗವತರುಗಳು, **ಇರುನ್ದವೂರಿಲ್** — ಇರುವ ಊರಿನಲ್ಲಿ, **ಇರುಕ್ಕುಮ್** ಇರುವ, **ಮಾನಿಡರ್** ಮನುಷ್ಯರು, **ಎತ್ತವಂಗಳ್ ಶೆಯ್‌ದಾರ್ ಕೋಲೋ** — ಯಾವ ಸುಕೃತಗಳನ್ನು ಮಾಡಿದವರೋ" **ಎಂಗಿರಪಡಿಯೇ**— ಎಂದು ಹೇಳಿರುವ ಹಾಗೆ, **ಭಾಗವತೋತ್ತರಮಾನ**— ಭಾಗವತ ಪ್ರಾಚುರ್ಯವುಳ್ಳ, ಎಂದರೆ ಅನೇಕ ಭಾಗವತರುಗಳಿರುವ, ಪ್ರದೇಶವು, **ಮುಮುಕ್ಷುವುಕ್ಕು ಪರಿಗ್ರಾಹ್ಯಮ್**—ಮೋಕ್ಷಾರ್ಥಿಗೆ ವಿಶೇಷಗ್ರಾಹ್ಯವು. ಎಲ್ಲಿ ಭಾಗವತ ಪ್ರಾಚುರ್ಯ ಉಂಟೋ ಅಂತಹ ಸ್ಥಳದಲ್ಲೇ ಈ ಪ್ರಪನ್ನನು ದೇಹಾವಸಾನವವರಿವಿಗೂ ವಸಿಸತಕ್ಕದ್ದು. ಈ ಸಂದರ್ಭದಲ್ಲಿ ಮಾರ್ಕಂಡೇಯ ಪುರಾಣ ಶ್ಲೋಕನಾದ " **ಸದ್ಭಿರೇವ ಸಹಾಸೀತಸದ್ಭಿಃ ಕುರ್ವೀತ ಸಂಗಮಮ್ । ಸದ್ಭಿರ್ವಿವಾದಂ ಮೈತ್ರಂಚ ನಾಸದ್ಭಿಃ ಕಿಂಚಿದಾಚರೇತ್** । ಎಂಬುದು ಅನುಸಂಧೇಯವು. ಹಾಗೆಯೇ **ಸಂಭಾಷಾದರ್ಶನಸ್ಪರ್ಶಃ ಕೀರ್ತನಂ ಸ್ಮರಣಂ ನತಿಃ ಪಾವನಾನಿಕಿಲೈತಾನಿ ಸಾಧೂನಾಮಿತಿ ಶುಶ್ರುಮ ॥** ಮಹಾಭಾಗವತರುಗಳೊಂದಿಗೆ ಸಂಭಾಷಣೆಯೂ, ಅವರ ದರ್ಶನವೂ, ಸ್ಪರ್ಶವೂ, ಅವರಕೀರ್ತನ ಸ್ಮರಣ ನಮಸ್ಕಾರಗಳೂ, ನಮ್ಮ ಪಾಪಗಳನ್ನೆಲ್ಲಾ ಹೋಗಲಾಡಿಸಿ ಪರಿಶುದ್ಧರನ್ನಾಗಿ ಮಾಡುವುವು ಎಂದುಕೇಳ್ಪಟ್ಟಿರುವೆವು.ಹಾಗೆಯೆ ಶ್ರೀಯಾಮುನೇಯರು "**ತವದಾಸ**

(೧) ಪೆರಿಯ ತಿರುಮೊಳಿ ೪. ೪. ೭.

ಸುಖೈಕಸಜ್ಞಾನಾಂ ಭವನೇಷ್ವಸ್ತ್ವಪಿಕೀಟಜನ್ಮಮೇ" ನಿನ್ನ ಕೈಙ್ಕರ್ಯದಲ್ಲೇ ಮುಖ್ಯ ವಾಗಿ ಮಗ್ನರಾಗಿರುವವರ ಮನೆಗಳಲ್ಲಿ ಒಂದುಹುಳುವಿನ ಜನ್ಮವಾದರೂ ನನಗೆ ಉಂಟಾಗುವದು ಉತ್ತಮವು ಎಂದು ಹೇಳಿರುವುದರಿಂದ, ಭಾಗವತಾಭಿಮಾನಕ್ಕೆ ಒಳಪಟ್ಟಪ್ರದೇಶದಲ್ಲಿ ವಾಸವೇ ಪರಮಯೋಗ್ಯವೆಂದು ಹೇಳಿರುತ್ತಾರೆ. ಅದೇಕೆ ಹಾಗೆಹೇಳಿದರೆಂದರೆ "**ಪಶುರ್ಮನುಷ್ಯಃ ಪಕ್ಷೀವಾಯೇಚ ವೈಷ್ಣವಸಂಶ್ರಯಾಃ। ತೇನೈವ ತೇ ಪ್ರಯಾಸ್ಯಂತಿ ತದ್ವಿಷ್ಣೋಃ ಪರಮಂ ಪದಂ**" ಇವುಗಳಿಗೆಲ್ಲಾ ವೈಷ್ಣವ ಭಾಗವತನನ್ನಾಶ್ರಯಿಸುವದರಿಂದ ಮೋಕ್ಷಪ್ರಾಪ್ತಿಯು ಉಂಟಾಗುತ್ತದೆಂದು ಹೇಳಿರುತ್ತದೆ. ಈ ಶ್ಲೋಕವ್ಯಾಖ್ಯಾನದಲ್ಲಿ ಶ್ರೀದೇಶಿಕರವರು

"ತಸ್ಮಾದ್ವಿಷ್ಣು ಪ್ರಸಾದಾಯ ವೈಷ್ಣವಾನ್ ಪರಿತೋಷಯೇತ್" ವಿಷ್ಣು ಪ್ರಸನ್ನತೆಗಾಗಿ ವೈಷ್ಣವ ಭಾಗವತರನ್ನು ಪ್ರಸನ್ನರಾಗಿ ಮಾಡಿಕೊಳ್ಳಬೇಕು ಎಂಬ, "ಕೇವಲಂ ಭಗವತ್ಪಾದ ಸೇವಯಾ ವಿಮಲಂ ಮನಃ। ನಜಾಯತೇ ಯಥಾ ನಿತ್ಯಂ ತದ್ಭಕ್ತ ಚರಣಾರ್ಚನಾತ್" ನಿತ್ಯ ಆತನ ಭಕ್ತರ ಪಾದಸೇವೆಯಿಂದ ಮನಸ್ಸಿನ ಮಲಗಳು ತೊಲಗಿ ಪರಿಶುದ್ಧತೆ ಯುಂಟಾಗುವ ಹಾಗೆ ಬರೀಭಗವತ್ಸೇವೆಯಿಂದ ಯುಂಟಾಗುವದಿಲ್ಲವು." ಎಂಬ, ಇವೇ ಮೊದಲಾದ ಪ್ರಮಾಣಗಳನ್ನು ಉದಾಹರಿಸಿರುತ್ತಾರೆ.

ಹಿಂದೆ ಪುರುಷಾರ್ಥಕಾಷ್ಠಾಧಿಕಾರಗಲ್ಲಿ ಭಾಗವತ ಪ್ರಸನ್ನತೆಯೇ ಕೃತಕೃತ್ಯನಾದ ಪ್ರಪನ್ನನಿಗೆ ಮುಖ್ಯವಾದುದೆಂದು ಯಾವಾಗ ಸ್ಥಾಪಿಸಲ್ಪಟ್ಟಿತೋ ಅದರಿಂದ ಅಂತಹ ಭಾಗವತರುಗಳ ಮಧ್ಯೆಯೇ ಈತನು ವಸಿಸತಕ್ಕದ್ದೆಂಬುವದು ಏರ್ಪಟ್ಟಿತು. **ಅಪ್ಪಿಡಂಗಳ್ ತನ್ನಿಲುಂ** ಎಂದು ಹೇಳಿರುವದರಿಂದ ವರ್ಣಾಶ್ರಮ ಧರ್ಮಗಳೂ ನಡೆದು ಭಾಗವತರುಗಳೂ ಇರುವ ಪ್ರದೇಶವೇ ಸರ್ವೋತ್ತಮವೆಂದು ಹೇಳಿದಂತಾಯಿತು.

ಮೇಲಿನ ವಾಕ್ಯದಲ್ಲಿ ಆರ್ಯಾವರ್ತವು ಈಗ ಅಷ್ಟುಉಪಾದೇಯವಲ್ಲವು; ಭಾಗವತೋತ್ತಮರು ಹೆಚ್ಚಾಗಿರುವ ದೇಶವು ಗ್ರಾಹ್ಯವೆಂದು ಹೇಳಿದುದಕ್ಕೆ ಶ್ರೀ ಪರಾಶರರ ದಿವ್ಯಸೂಕ್ತಿಯ ಪ್ರಮಾಣವನ್ನು ತೋರಿಸಿ ದಕ್ಷಿಣದಲ್ಲಿರುವ ದ್ರವಿಡದೇಶವೇ ಪ್ರಪನ್ನನಿಗೆ ವಾಸಯೋಗ್ಯವೆಂದು ವಾಮನಪುರಾಣ ದಿವ್ಯ ಸೂಕ್ತಿಯಿಂದ ತಿಳಿಸುತ್ತಾರೆ. **ಕಲೌ**-ಕಲಿಯುಗದಲ್ಲಿ, ಓ ಮೈತ್ರೇಯರೇ - **ಪಾಷಂಡೋಪಹತಾ ಜನಾಃ** ಪಾಷಂಡಿಗಳಿಂದ ಕೆಡಿಸಲ್ಪಟ್ಟ ಜನಗಳು, ಪಾಷಂಡಿಗಳು ಯಾರೆಂದರೆ—ಪಾಶಾನ್ ಷಣಂತಿ ಎಂಬ ವ್ಯುತ್ಪತ್ತಿಯಿಂದ ಸಂಸಾರಬಂಧಕ್ಕೆ ಹೇತುಭೂತವಾದ ಅಸಚ್ಛಾಸ್ತ್ರಗಳನ್ನು ಬೋಧಿಸುವವರು, ಬೌದ್ಧಕಾಪಾಲಿಕ ಕ್ಷಪಣಕಾದಿಭೇದ ಬಾಹ್ಯರು. **ಸರ್ವಸ್ರಷ್ಟಾರಂ** ಸರ್ವಕ್ಕೂ ಸೃಷ್ಟಿಕರ್ತನಾಗಿ, **ಈಶ್ವರಂ**-ಸರ್ವಕ್ಕೂ ಧಾರಕನಾಗಿ ಸ್ವಾಮಿಯಾಗಿ ನಿಯಂತನಾಗಿರುವ

ಹ್ಯಮ್. (೧) **ಕಲೌ ಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರ ಮೀಶ್ವರಂ। ನಾರ್ಚ ಯಿಷ್ಯಂತಿ ಮೈತ್ರೇಯ ಪಾಷಂಡೋಪಹತಾ ಜನಾಃ" ಎನ್ನುಚ್ಚೆಯ್‌ದೆ ೨ " ಕಲೌ ಖಲುಭವಿಷ್ಯಂತಿ ನಾರಾಯಣ ಪರಾಯಣಾಃ । ಕ್ವಚಿತ್ಕ್ವಚಿನ್ಮಹಾ ಭಾಗಾ (ದ್ರಾ) ದ್ರಮಿಡೇಷುಚ ಭೂರಿಶಃ। ತಾಮ್ರಪರ್ಣೀ ನದೀಯತ್ರ ಕೃತಮಾಲಾ ಪಯಸ್ವಿನೀ ।**

ಜಗತ್ಪಾಲಕನಾದ, ವಿಷ್ಣುವನ್ನು **ನಾರ್ಚಯಿಷ್ಯಂತಿ** ಪೂಜಿಸುವುದಿಲ್ಲವು." **ಎನ್ನುಚ್ಚೆಯ್‌ದೇ**-ಎಂದು ಹೇಳಲ್ಪಟ್ಟಿದ್ದರೂ ಕೂಡ, **ಕಲೌ**-ಕಲಿಯುಗದಲ್ಲೂ ಕೂಡ, **ನಾರಾಯಣ ಪರಾಯಣಾಃ**-ನಾರಾಯಣನಲ್ಲಿ ಆಸಕ್ತವಾದ ಮನಸ್ಸುಳ್ಳವರು, ಸುಕೃತ ವಿಶೇಷದಿಂದಲೂ, ಕಲಿಯುಗದಲ್ಲಿ ಸರ್ವೇಶ್ವರನನ್ನು ಹೊಂದುವ ಉಪಾಯಾನುಷ್ಠಾನವು ತುಂಬಾ ಸುಕರವಾದುದರಿಂದಲೂ, **ಭವಿಷ್ಯಂತಿ**-ಜನಿಸುವರು ಅಥವಾ ಆಗುವರು. **ಮಹಾಭಾಗಾಃ**-ನಾರಾಯಣ ಪರಾಯಣರಾದ ಅಂತಹ ಸುಕೃತ ಶಾಲಿಗಳಾದ ಮಹಾ ಭಾಗವತರುಗಳು ಮಿಕ್ಕ ದೇಶಗಳಲ್ಲಿ **ಕ್ವಚಿತ್ಕ್ವಚಿತ್**-ಎಲ್ಲೋ ಒಂದೊಂದು ಕಡೆಯಲ್ಲಿ ಜನಿಸುವರು. **ದ್ರಮಿಡೇಷು**-ದ್ರವಿಡ ದೇಶಗಳಲ್ಲಿ ಯಾದರೋ, **ಭೂರಿಶಃ**-ಬಹಳವಾಗಿ ಜನಿಸುವರು. ಆ ದ್ರವಿಡ ದೇಶಗಳಲ್ಲೂ ಎಲ್ಲಿ ಜನಿಸುವರು ಎಂದರೆ ಹೇಳುತ್ತಾರೆ. **ಯತ್ರ** - ಯಾವಸ್ಥಳದಲ್ಲಿ, ತಾಮ್ರಪರ್ಣೀನದಿಯು ಪ್ರವಹಿಸುತ್ತದೋ, ಅಲ್ಲಿ ಜನಿಸುವರು; ಹೀಗೆ ಹೇಳಿದುದರಿಂದ, ಆಳ್ವಾರರುಗಳಲ್ಲಿ ಶ್ರೇಷ್ಠರಾದ ನಮ್ಮಾಳ್ವಾರವರ ಅವತಾರಸ್ಥಳವು ಬೋಧಿಸಲ್ಪಟ್ಟಿತು. **ಯತ್ರಕೃತಮಾಲಾ**-ಎಲ್ಲಿ ವೈಗೆ ಎಂಬ ನದಿಯು ಪ್ರವಹಿಸುತ್ತದೋ ಅಲ್ಲಿಯೂ ಅವತರಿಸುವರು; ಈ ನದಿಯ ದಡದಲ್ಲಿರುವ **ಶ್ರೀವಿಲ್ಲಿಪುತ್ತೂರೆಂಬ** ಸ್ಥಳದಲ್ಲಿ ಪೆರಿಯಾಳ್ವಾರವರು ಅವತರಿಸಿದರು; **ಯತ್ರಪಯಸ್ವಿನೀ** ಎಲ್ಲಿ ಪಾಲಾರು ನದಿಯು ಪ್ರವಹಿಸುತ್ತದೋ ಅಲ್ಲಿಯೂ ಅವತರಿಸುವರು; ಇದರ ದಡದಲ್ಲಿ ತಿರುಮಳಿಶೈಯ್ಯಾಳ್ವಾರವರೇ ಮೊದಲಾದವರು ಜನಿಸಿದರು; **ಯತ್ರ ಮಹಾಭಾಗಾ ಕಾವೇರೀ**-ಎಲ್ಲಿ ಮಹಾ ಪುಣ್ಯ ನದಿಯಾದ ಕಾವೇರಿಯು ಪ್ರವಹಿಸುತ್ತದೋ ಅಲ್ಲಿಯೂ ಮಹಾ ಭಾಗವತರು ಉಂಟು; ಇದರ ದಡದಲ್ಲಿ, ತೊಂಡರಡಿಪ್ಪೊಡಿಯಾಳ್ವಾರ್ ತಿರುಪ್ಪಾಣಾಳ್ವಾರ್ ಮೊದಲಾದವರು ಶ್ರೀರಂಗದಲ್ಲಿ ಅವತರಿಸಿದರು; **ಯತ್ರಪ್ರತೀಚೀಚ ಮಹಾನದೀ**-ಎಲ್ಲಿ ಪ್ರಸಿದ್ಧವಾದ ಪ್ರತ್ಯಙ್ಮುಖೀ ನದಿಯು ಪ್ರವಹಿಸುತ್ತದೆಯೋ ಅಲ್ಲಿಯೂ ಮಹಾಭಾಗವತೋತ್ತಮರಿರುವರು; ಇವರ ದಡದಲ್ಲಿ ಶ್ರೀ ಕುಲಶೇಖರಾಳ್ವಾರವರು ಅವತರಿಸಿದರು; **ಹೇ ಮನುಜೇಶ್ವರ**-ಓ ರಾಜನೇ, **ಯೇ ಮನುಜಾಃ** - ಯಾವ ಮನುಷ್ಯರು, **ತಾಸಾಂ**-ನೇಲೆ

(೧) ವಿ. ಪ್ರ. ೬. ೧. ೫೦ (೨) ಶ್ರೀಭಾಗ. ೧೧. ೫. ೩೮-೯

ಕಾವೇರೀ ಚ ಮಹಾಭಾಗಾ ಪ್ರತೀಚೀ ಚ ಮಹಾನದೀ । ಯೇ ಪಿಬನ್ತಿ ಜಲಂ ತಾಸಾಂ ಮನುಜಾ ಮನುಜೇಶ್ವರ । ಪ್ರಾಯೋ ಭಕ್ತಾ ಭಗವತಿ ವಾಸುದೇವೇಽಮಲಾಶಯಾಃ ॥" ಇತ್ಯಾದಿಗಳಿಲೇ ಕಲಿಯುಗತ್ತಿಲ್ ಭಾಗವತರ್‌ಗಳ್ ವಸಿಕ್ಕುಮ್ ದೇಶವಿಶೇಷಮ್ ಶೊಲ್ಲುಗೈಯಾಲೆ, ಇನ್ದ ಯುಗತ್ತಿಲ್ ಇಪ್ಪ್ರದೇಶಙ್ಗಳಿಲ್ ಭಾಗವತ ಪರಿಗೃಹೀತಮಾನ ಸ್ಥಲಙ್ಗಳೇ ಪರಿಗ್ರಾಹ್ಯಙ್ಗಳ್. ತಿರುನಾರಾಯಣೀಯತ್ತಿಲ್ (೧) ಏಕಪಾದ

ಹೇಳಿದ ಆ ನದಿಗಳ, ಜಲಂ - ನೀರನ್ನು, ಪಿಬಂತಿ - ಕುಡಿಯುತ್ತಾರೋ, ಅವರುಗಳು, ವಾಸುದೇವೇ ಭಗವತಿ - ವಾಸುದೇವನಾದ ಭಗವಂತನಲ್ಲಿ, ಪ್ರಾಯಃ- ಸಾಮಾನ್ಯವಾಗಿ, ಭಕ್ತಾಃ - ಭಕ್ತರಾಗುತ್ತಾರೆ, ಅಮಲಾಶಯಾಃ - ನಿರ್ಮಲ ಚಿತ್ತರಾದವರಾಗಿ ಆಗುವರು. ಪಾಪದಲ್ಲಿ ಪ್ರವರ್ತಿಸದ ಮನಸ್ಸುಳ್ಳವರಾಗುವರೆಂಬ ಭಾವವು." ಇತ್ಯಾದಿಗಳಿಲೇ - ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ, ಕಲಿಯುಗದಲ್ಲಿ ಭಾಗವತರುಗಳು, ವಸಿಕ್ಕುಮ್ - ವಾಸ ಮಾಡುವ, ದೇಶವಿಶೇಷವನ್ನು, ಶೊಲ್ಲುಗೈಯಾಲೇ - ಹೇಳುವದರಿಂದ, ಇನ್ದ ಯುಗತ್ತಿಲ್ - ಈ ಕಲಿಯುಗದಲ್ಲಿ, ಇಪ್ಪ್ರದೇಶಙ್ಗಳಿಲ್ - ಚಾತುರ್ವರ್ಣ್ಯ ಧರ್ಮ ಪ್ರತಿಷ್ಠಿತವಾದ ಈ ದ್ರವಿಡ ಪ್ರದೇಶಗಳಲ್ಲಿ, ಭಾಗವತ ಪರಿಗೃಹೀತಮಾನ - ಭಾಗವತರುಗಳಿಂದ ಸ್ವೀಕರಿಸಲ್ಪಟ್ಟ ಎಂದರೆ ಅವರುಗಳಿಗೆ ಅಭಿಮತವಾದ, ಸ್ಥಳಗಳೇ, ಪರಿಗ್ರಾಹ್ಯಙ್ಗಳ್ - ಪ್ರಪನ್ನನಿಗೆ ಉಪಾದೇಯವಾದವುಗಳು, ಆತನು ಅಭಿಮಾನಿಸತಕ್ಕವು ಎಂಬ ಭಾವವು. ಹೀಗೆ ಹೇಳಿದುದರಿಂದ ಭಗವದಭಿಮತ ಸ್ಥಳಕ್ಕಿಂತ ಭಾಗವತಾಭಿಮತಸ್ಥಳವು ಉತ್ಕೃಷ್ಟವೆಂಬ ಭಾವವು. ಭಗವದ್ಭಾಗವತಾಭಿಮತಸ್ಥಳವಾದರೆ ಪರಮೋತ್ಕೃಷ್ಟವೆಂಬುವದೂ ತೋರಿಬರುತ್ತದೆ "ಯತ್ರಯತ್ರಹಿನೀತಿಸ್ಸ್ಯಾದ್ವೈಷ್ಣವೀ ಶಿಷ್ಟಸಂಮತಾ । ತತ್ರತತ್ರ ವಸೇನ್ನಿತ್ಯಂ ನಾನ್ಯತ್ರೇತಿ ಮತಿರ್ಮಮ" "ಪರಮಭಾಗವತರುಗಳಿಗಿಷ್ಟವಾದ ವೈಷ್ಣವನಿಷ್ಠೆಯು ಎಲ್ಲೆಲ್ಲಿರುತ್ತದೋ, ಅಲ್ಲಲ್ಲೆಲ್ಲಾ ಸದಾ ವಾಸಮಾಡತಕ್ಕದ್ದು. ಇನ್ನೆಲ್ಲೂ ಕೂಡದು. ಎಂಬುವದು ನನ್ನ ಅಭಿಪ್ರಾಯವು" ಎಂಬೀ ಪ್ರಮಾಣದ ತಾತ್ಪರ್ಯವು ಶ್ರೀ ಪರಾಶರ ವಾಕ್ಯದಲ್ಲಿ ಮಹಾಭಾಗವತರುಗಳಿರುವ ಸ್ಥಳವೇ ಇಲ್ಲವೆಂಬಭಿಪ್ರಾಯ ಉಂಟಾಗಬಹುದು. ಅವರಭಿಪ್ರಾಯವೇನೆಂದರೆ ಪಾಷಂಡೋಪಹತಜನವೇ ಹೆಚ್ಚೆಂದೂ, ಅವರುಗಳು ವಿಷ್ಣುವನ್ನಾರಾಧಿಸುವದಿಲ್ಲವೆಂದೂ ಹೇಳಿದರು. ಈ ಅಭಿಪ್ರಾಯವನ್ನೇ ಅವರ ಪೌತ್ರರಾದ ಶುಕಮಹರ್ಷಿಯು "ಕ್ವಚಿತ್ಕ್ವಚಿನ್ಮಹಾಭಾಗಾಃ" ಎಂದು ವ್ಯಾಖ್ಯಾನ

---

(೧) ಭಾರ. ಶಾಂತಿ. ೩೪೬. ೮೫.

ಸ್ಥಿತೇ ಧರ್ಮೇ ಯತ್ರ ಕ್ವಚನ ಗಾಮಿನಿ । ಕಥಂ ವಸ್ತವ್ಯ ಮಸ್ಮಾಭಿರ್ಭಗವಂ ಸ್ತದ್ವದಸ್ವ ನಃ ॥" ಎನ್ರು ದೇವರ್‌ಗಳುವ್ ಋಷಿಗಳುವ್ ವಿಣ್ಣ

ಮಾಡಿ ಅಂಥವರು ಎಲ್ಲೋ ಒಂದೊಂದು ಪ್ರದೇಶದಲ್ಲಿ ಅತಿ ವಿರಳರಾಗಿ ದೊರೆಯುವರೆಂದು ಹೇಳಿ, ಆದರೆ ದ್ರವಿಡ ದೇಶದಲ್ಲಿ ಈ ನದಿಗಳ ದಡದಲ್ಲಿ ಮಾತ್ರ, **ಭೂರಿಶಃ** - ಹೇರಳವಾಗಿ ದೊರೆಯುವರೆಂದು ಹೇಳಿದರು. ಆದುದರಿಂದ ಇವರಿಬ್ಬರ ಹೇಳಿಕೆಗೂ ಏನೂ ವ್ಯತ್ಯಾಸವಿಲ್ಲವು. ಇಲ್ಲಿ ಮಹಾಭಾಗವತರಾಗಿ ಜ್ಞಾನನಿಷ್ಠೆ ಕರ್ಮನಿಷ್ಠೆಗಳಿಂದ ಶೋಭಿಸುವ, ತಮ್ಮ ದಿವ್ಯಸೂಕ್ತಿಗಳಿಂದ ಪಾಮರ ಜನಗಳ ಅಂಧಕಾರಗಳನ್ನು ತೊಲಗಿಸುವ ದ್ರಾವಿಡ ಪ್ರಬಂಧಗಳನ್ನು ರಚಿಸುವ, ದಿವ್ಯಸೂರಿಗಳವತಾರವಾದ ಆಳ್ವಾರಾಚಾರ್ಯರುಗಳು ಈ ನದಿಗಳ ಸಮೀಪದಲ್ಲಿ ಜನಿಸುವರೆಂದು ಶ್ರೀ ವ್ಯಾಸಮಹರ್ಷಿಯೂ ಅವರ ಪುತ್ರರೂ ಸಹ ತಮ್ಮ ದಿವ್ಯಚಕ್ಷುಸ್ಸಿನಿಂದ ಮೊದಲೇ ನೋಡಿ, ಅಪ್ಪಣೆ ಕೊಟ್ಟಿರುವದು ಪರಮಾಶ್ಚರ್ಯಕರವಾದ ವಿಷಯವಾಗಿರುತ್ತದೆ. ಆದುದರಿಂದ ಇಂಥಾವರನುಗ್ರಹಿಸಿದ ಗ್ರಂಥವು ಪರಮಾಪ್ತವಾಕ್ಯವೆಂದು ತಿಳಿದು ಪರಿಗ್ರಹಿಸತಕ್ಕದ್ದು ಅತ್ಯಾವಶ್ಯಕವು.

ಆದರೆ ಋಷಿಗಳಿಂದ ಪ್ರಶಂಸಿತಗಳಾಗಿ ಶ್ರೀ ಮಹಾವಿಷ್ಣುವಿಗೆ ಆ ಕಾಲದಲ್ಲಿ ಪ್ರಿಯವಾಗಿದ್ದ ದೇಶಗಳನ್ನು ಬಿಟ್ಟು ಈಗ ಭಾಗವತ ಪ್ರಿಯವಾದ ಸ್ಥಳಗಳನ್ನು ಪರಿಗ್ರಹಿಸತಕ್ಕದ್ದೆಂಬ ಉಪದೇಶವು ಸರಿಯೋ ಎಂದಾಕ್ಷೇಪಿಸಬಹುದೆಂದು ಭಾವಿಸಿ ತಮ್ಮ ಅಭಿಪ್ರಾಯವೇ ಸರಿ ಎಂಬುವದಕ್ಕೆ ಭಾರತ ಶಾಂತಿಪರ್ವದಲ್ಲಿ ತಿರುನಾರಣೀಯ ಪ್ರಕರಣದಲ್ಲಿ ಹೇಳಿರುವ ಪ್ರಮಾಣವನ್ನು ಮುಂದೆ ಉದಾಹರಿಸುತ್ತಾರೆ. ಈ ಪ್ರಕರಣವು ಯಾವುದೆಂದರೆ, ಬದರಿಕಾಶ್ರಮದಲ್ಲಿ ನರನಾರಾಯಣರಲ್ಲಿ ಭಗವಂತನಾದ ಶ್ರೀ ನಾರಾಯಣ ಋಷಿಯು ಇತರ ಋಷಿಗಳಿಗೆ ಉಪದೇಶಿಸುವ ಪ್ರಕರಣವು. **ತಿರುನಾರಾಯಣೀಯತ್ತಿಲ್** ಇತಿ. **ಏಕಪಾದಸ್ಥಿತೇ ಧರ್ಮೇ** - ಧರ್ಮವು ಕಲಿಯುಗದಲ್ಲಿ ಒಂದು ಕಾಲಿನಲ್ಲಿ ನಿಂತಿರಲಾಗಿ, ಎಂದರೆ ಒಂದು ಕಾಲು ಪಾಲು ಧರ್ಮವು ಈ ಯುಗದಲ್ಲಿ ನಡೆಯುತ್ತದೆಂದು ಮುಕ್ಕಾಲು ಪಾಲು ಅಧರ್ಮವು ಎಂಬ ಭಾವವು. ಕೃತಯುಗದಲ್ಲಿ ಧರ್ಮವು ನಾಲ್ಕು ಕಾಲಲ್ಲೂ ನಿಂತಹಾಗೂ, ತ್ರೇತಾಯುಗದಲ್ಲಿ ಮೂರುಕಾಲಲ್ಲೂ, ದ್ವಾಪರದಲ್ಲಿ ಎರಡು ಕಾಲಲ್ಲೂ, ಕಲಿಯುಗದಲ್ಲಿ ಒಂದು ಕಾಲಲ್ಲೂ ನಿಂತಿರುವ ಹಾಗೆ ಭಾವನೆಯು ; ಮತ್ತು **ಯತ್ರಕ್ವಚನ ಗಾಮಿನಿ** - ಒಂದೇ ಕಾಲಿನಲ್ಲಿ ನಿಂತಿರುವದರಿಂದ ಎಲ್ಲೋ ಒಂದು ಕಡೆಗೆ ಹೋಗುತ್ತಿರಲಾಗಿ, **ಅಸ್ಮಾಭಿಃ** - ಅಧರ್ಮಭಯದಿಂದಿರುವ ನಮ್ಮಗಳಿಂದ, **ಕಥಂ ವಸ್ತವ್ಯಂ** - ಹೇಗೆ ಎಲ್ಲಿ ವಸಿಸತಕ್ಕದ್ದು. **ಭಗವನ್** - ಷಾಡ್ಗುಣ್ಯ ಪರಿಪೂರ್ಣನಾದ

ಷ್ಟಂ ಶಿಯ್ಯ ; (೧) "ಗುರುವೋ ಯತ್ರ ಪೂಜ್ಯಂತೇ ಸಾಧುವೃತ್ತಾಶ್ಶಮಾ ನ್ವಿತಾಃ । ವಸ್ತವ್ಯಂ ತತ್ರಯುಷ್ಮಾಭಿಃ ಯತ್ರ ಧರ್ಮೋ ನ ಹೀಯತೇ । ಯತ್ರ ವೇದಾಶ್ಚ ಯಜ್ಞಾಶ್ಚ ತಪಸ್ಸತ್ಯಂ ದಮಸ್ತಥಾ । ಹಿಂಸಾ ಚ ಧರ್ಮ ಸಂಯುಕ್ತಾ ಪ್ರಚರೇಯುಸ್ಸುರೋತ್ತಮಾಃ । ಸವೈದೇಶೋಹಿ ವಸ್ಸೇವ್ಯೋ ಮಾಭೂದ್ಧರ್ಮಃ ಪದಾಸ್ಪೃಶೇತ್" ಎನ್ರು ಭಗವಾನರುಳಿಚ್ಚೆಯ್ದಾನ್.

ಸ್ವಾಮಿಯೇ, **ತತ್** - ಅದನ್ನು, **ನಃ** - ನಿನ್ನ ಕರುಣೆಗೆ ಪಾತ್ರರಾದ ನಮಗೆ, **ವದಸ್ವ** - ದಯಮಾಡಿ ಹೇಳು," ಎಂದು ದೇವತೆಗಳೂ, ಋಷಿಗಳೂ, **ವಿಣ್ಣಪ್ಪಂ ಶೆಯ್ಯ** - ವಿಜ್ಞಾಪಿಸಿಕೊಳ್ಳಲು, ಅದಕ್ಕೆ ಶ್ರೀ ಭಗವಾನ್ ಹೇಳುತ್ತಾರೆ:— **ಸಾಧು ವೃತ್ತಾಃ** - ಶಾಸ್ತ್ರಚೋದಿತವಾದ ವಿಧಿನಿಷೇಧ ವಾಕ್ಯಗಳಿಗನುಸಾರವಾದ ಪ್ರವೃತ್ತಿನಿವೃತ್ತಿಗಳುಳ್ಳ, ಎಂದರೆ ಧರ್ಮಾನುಷ್ಠಾನಪರರಾದ, **ಶಮಾನ್ವಿತಾಃ** - ಅಂತರಿಂದ್ರಿಯಗಳನ್ನು ನಿಗ್ರಹಿಸಿ ಶಾಂತತೆಯುಳ್ಳವರಾದ, **ಗುರುವಃ** - ಮನಸ್ಸಿನ ಅಂಧಕಾರವನ್ನು ಹೋಗಲಾಡಿಸಿ, ಯಥಾರ್ಥ ಜ್ಞಾನವನ್ನು ಬೋಧಿಸುವ ಆಚಾರ್ಯರುಗಳು, **ಯತ್ರಪೂಜ್ಯಂತೇ** - ಯಾವ ಸ್ಥಳದಲ್ಲಿ ಪೂಜಿಸಲ್ಪಡುವವರೋ ಆ ಕಾರಣದಿಂದ, **ಯತ್ರಧರ್ಮೋ ನಹೀಯತೆ** - ಎಲ್ಲಿ ವೈದಿಕ ಧರ್ಮಕ್ಕೆ ಲೋಪವಿಲ್ಲವೋ ಎಂದರೆ ಎಲ್ಲಿ ವರ್ಣಾಶ್ರಮಧರ್ಮಗಳಿಗೆ ನ್ಯೂನತೆಯಿಲ್ಲವೋ, **ತತ್ರ** - ಅಲ್ಲಿ, **ಯುಷ್ಮಾಭಿಃ** - ನಿಮ್ಮಗಳಿಂದ, **ವಸ್ತವ್ಯಂ** - ವಸಿಸತಕ್ಕದ್ದು; ಎಂದರೆ ಅಂತಹ ಸ್ಥಳಗಳಲ್ಲಿ ನೀವು ಇರತಕ್ಕದ್ದು. **ಯತ್ರ** - ಎಲ್ಲಿ, **ವೇದಾಶ್ಚ** - ವೇದಗಳು ಎಂದರೆ ವೇದಾಧ್ಯಯನಾದಿಗಳೂ, **ಯಜ್ಞಾಶ್ಚ** – ಪಂಚಮಹಾಯಜ್ಞಗಳೂ, ಮತ್ತು ವೇದದಲ್ಲಿ ಹೇಳಿರುವ ಇತರ ಯಜ್ಞಗಳೂ, **ತಪಃ** - ಕೃಛ್ರ ಚಾಂದ್ರಾಯಣ ಮತ್ತು ಏಕಾದಶೀ ಉಪವಾಸ ಮೊದಲಾದವುಗಳೂ, **ಸತ್ಯಂ** - ಪ್ರಿಯವಾದ, ಹಿತವಾದ, ಯಥಾರ್ಥವಾದ ವಾಕ್ಕು, ಇದರಿಂದ ಅಂತಹ ಉಪದೇಶವು ಹೇಳಲ್ಪಟ್ಟಿತು, **ತಥಾದಮಃ** - ಹಾಗೆಯೇ ಬಾಹ್ಯೇಂದ್ರಿಯ ನಿಗ್ರಹವೂ, **ಧರ್ಮ ಸಂಯುಕ್ತಾ ಹಿಂಸಾ**–ಧರ್ಮದಿಂದ ಕೂಡಿದ ಹಿಂಸೆಯು, **ನ ಹಿಂಸ್ಯಾತ್** ಎಂಬ ಸಾಮಾನ್ಯ ವಿಧಿಯು ಹಿಂಸೆಯನ್ನು ನಿಷೇಧಿಸಿದರೂ, **ಪಶುಮಾಲಭೇತ** ಇತ್ಯಾದಿ ವಿಶೇಷ ವಿಧಿಗಳು ಪಶುಹಿಂಸೆಯನ್ನು ಧರ್ಮವೆಂದು ವೇದದಲ್ಲಿ ಬೋಧಿಸುವದರಿಂದ, ಧರ್ಮದಿಂದ ಸೇರಿದ ಹಿಂಸೆ ಎನ್ನುವದರಿಂದ, ಜ್ಯೋತಿಷ್ಟೋಮ, ರಾಜಸೂಯವೇ ಮೊದಲಾದ ಯಾಗಗಳೂ, ಇವೆಲ್ಲವೂ, **ಹೇ ಸುರೋತ್ತಮಾಃ** – ಓ ದೇವತೆಗಳಿರಾ, **ಪ್ರಚರೇಯುಃ** - ನಡೆಯುತ್ತವೆಯೋ, **ಸವೈ ದೇಶೋಹಿ** – ಅಂತಹ ದೇಶವು ತಾನೇ, **ವಃ** – ನಿಮಗೆ, **ಸೇವ್ಯಃ** - ವಸಿಸಲು ಯೋಗ್ಯವು ಎಂದರೆ ಇರಲು

ಅನ್ನಿಡಙ್ಗಳ್ ತನ್ನಿಲ್ ಉಗನ್ದರುಳಿನ ದಿವ್ಯದೇಶಙ್ಗಳಿಲೆ ತನುಕ್ಕು ಕೈಙ್ಕರ್ಯತ್ತುಕ್ಕು ಸೌಕರ್ಯಮುಳ್ಳ ವಿಡತ್ತಿಲೆ ನಿರಂತರ ವಾಸಮ್ಪಣ್ಣ ಉಚಿತಮ್.

ಯೋಗ್ಯವು, ಹೀಗೆ ಇಂತಹ ಸ್ಥಳದಲ್ಲಿದ್ದುದಾದರೆ, **ಅಧರ್ಮಃ** - ಅಧರ್ಮವು, **ವಃ** - ನಿಮ್ಮನ್ನು, **ಪದಾ** ಕಾಲಿನಿಂದಲೂ **ಕೂಡ, ಮಾಸ್ಪ್ರಾಕ್ಷೀತ್** - ಮುಟ್ಟದೇ ಇರಲಿ ಎಂದರೆ ಅಧರ್ಮವು ನಿಮ್ಮನ್ನು ಎಂದಿಗೂ ಕಾಲಿನಿಂದಲೂ ಮುಟ್ಟಲಾರದು ಎಂಬ ಭಾವವು. **ಎನ್ರು** - ಎಂಬದಾಗಿ, **ಭಗವಾನ್** - ನಾರಾಯಣ ಋಷಿಯು, **ಅರುಳಿಚ್ಚೆಯ್ದಾನ್** - ಕೃಪಯಾ ಉಪದೇಶಿಸಿದನು. ಇಂತಹ ಉತ್ತಮವಾಗಿ ಉಪದೇಶಿಸಲು ಯೋಗ್ಯರಾಗಿ, ಕರ್ಮನಿಷ್ಠ ಜ್ಞಾನನಿಷ್ಠರುಗಳಿಂದ ವಿರಾಜಿಸುವ ಭಾಗವತೋತ್ತಮರು ಯಾವ ಪುಣ್ಯಸ್ಥಳದಲ್ಲಿರುತ್ತಾರೆಯೋ, ಎಲ್ಲಿ ವೇದಾಧ್ಯಯನ ವರ್ಣಾಶ್ರಮಧರ್ಮ ಯಜ್ಞಯಾಗಾದಿಗಳು ಮೊದಲಾದವು ಶಾಸ್ತ್ರನಿಯಮಾನುಸಾರವಾಗಿ ನಡೆಯುತ್ತವೋ, ಅಂತಹ ಸ್ಥಳಗಳೇ ನಿಮಗೆ ಯೋಗ್ಯವಾದ ಸ್ಥಳಗಳು, ಏಕೆಂದರೆ ಅಂತಹ ಸ್ಥಳಗಳಲ್ಲಿ ಅಧರ್ಮವೆಂಬುವದು ನಿಮ್ಮಲ್ಲಿ ಪಾದವಿನ್ಯಾಸವನ್ನು ಮಾಡಲಾರದು. ಈ ನಡೆಯುತ್ತಿರುವ ಧರ್ಮವು ಅಧರ್ಮವನ್ನು ನುಂಗಿಬಿಡುತ್ತದೆ ಎಂಬ ತಾತ್ಪರ್ಯವು ಈ ಮೇಲಿನ ಪ್ರಕರಣದಲ್ಲಿ "**ಹಿಂಸಾ ಚ ಧರ್ಮಸಂಯುಕ್ತಾ**" ಎಂಬ ಪ್ರಾಚೀನ ಪಾಠಕ್ಕೆ ಬದಲಾಗಿ ಈಚಿನ ಮುದ್ರಣದಲ್ಲಿ "**ಅಹಿಂಸಾ ಧರ್ಮಸಂಯುಕ್ತಾ**" ಎಂಬ ಪಾಠವು ಕಂಡುಬರುತ್ತದೆ ಕೆಲವರು ಪ್ರತ್ಯಕ್ಷ ಪಶುವಧೆಯನ್ನು ನಿಷೇಧಿಸುವರು; ತಮ್ಮ ಸಿದ್ಧಾಂತಕ್ಕನುಗುಣವಾಗಿ ಹೀಗೆ ಮಹರ್ಷಿವಾಕ್ಯವನ್ನು ಬದಲಾಯಿಸುವದು ಯುಕ್ತವಾದುದಲ್ಲವು. ಸ್ವಾಮಿದೇಶಿಕರವರ ಕಾಲದ ಭಾರತದಲ್ಲಿ **ಹಿಂಸಾ ಚ ಧರ್ಮಸಂಯುಕ್ತಾ** ಎಂಬದಾಗಿ ಇತ್ತೆಂಬುವದು ಇದರಿಂದ ವ್ಯಕ್ತವು.

ಈಗ ಇಷ್ಟು ದೂರ ಉಪಪಾದಿಸಿದರ್ಥವನ್ನು ಸಂಗ್ರಹಿಸಿ, ತಮ್ಮ ಅಭಿಮತವು ಪ್ರಮಾಣಪ್ರಶಸ್ತವಾದುದರಿಂದ ಅದನ್ನು ಸಿದ್ಧಾಂತಿಸಿ ಹೇಳುತ್ತಾರೆ. **ಅನ್ನಿಡಙ್ಗಳ್ ತನ್ನಿಲ್** - ಈಗ ಪ್ರಪನ್ನನಿಗೆ ವಾಸಕ್ಕೆ ಯೋಗ್ಯವೆಂದು ಹೇಳಿದ ಸ್ಥಳಗಳಲ್ಲಿ, **ಉಗನ್ದರುಳಿನ** - ಮಹಾಭಾಗವತರುಗಳು ವಿಶ್ವಾಸದಿಂದ ಉಚಿತವೆಂದು ಹೇಳಿದ, **ದಿವ್ಯದೇಶಙ್ಗಳಿಲೆ** - ಶ್ರೀರಂಗ, ಕಾಂಚೀಪುರ, ತಿರುಮಲೆ, ತಿರುನಾರಾಯಣಪುರ, ಆಳ್ವಾರ್ ತಿರುನಗರಿ, ಶ್ರೀವಿಲ್ಲಿಪುತ್ತೂರ್, ವಾನಮಾಮಲೆ, ಮೊದಲಾದ ದಿವ್ಯದೇಶಗಳಲ್ಲಿ, **ತನುಕ್ಕು** - ಪ್ರಪನ್ನನಾದ ತನಗೆ, **ಕೈಙ್ಕರ್ಯತ್ತುಕ್ಕು** - ಭಗವದ್ಭಾಗವತ ಕೈಂಕರ್ಯಕ್ಕೆ, **ಸೌಕರ್ಯಮುಳ್ಳ** - ಅನುಕೂಲವಿರುವ,

ಅತ್ರ ಶ್ರೀ ಭಾಷ್ಯಕಾರ ದಿವ್ಯಸೂಕ್ತಿಃ.

ಇತ್ತೈ (೧) "ಯಾವಚ್ಛರೀರ ಪಾತ ಮತ್ರೈವ ಶ್ರೀರಙ್ಗೇ ಸುಖ ಮಾಸ್ವ" ಎನ್ರು ಸತ್ತ್ವೋತ್ತರಙ್ಗಳಾನ ಭಗವತ್ ಕ್ಷೇತ್ರಙ್ಗಳುಕ್ಕು ಪ್ರದರ್ಶನಾರ್ಥಮಾಗ ಅರುಳಿಚ್ಚೆಯ್‌ದಾರ್.

ಇಡತ್ತಿಲೇ - ಪ್ರದೇಶದಲ್ಲಿ, **ವಾಸಂ ಪಣ್ಣ ಉಚಿತಮ್** - ವಾಸ ಮಾಡುವದು ಉಚಿತವಾದುದು. ಇದರಿಂದ ಭಾಗವತ ಪ್ರಚುರವಾದ ದಿವ್ಯದೇಶದಲ್ಲಿ ಪ್ರಪನ್ನನು ದೇಹಾವಸಾನದವರೆಗೂ ವಾಸಮಾಡತಕ್ಕದ್ದೆಂದು ಏರ್ಪಟ್ಟಿತು. ಹೀಗೆ ಮಹಾ ಭಾಗವತಾಭಿಮಾನವುಳ್ಳ ದಿವ್ಯದೇಶವೇ ಪ್ರಪನ್ನನಿಗೆ ಯೋಗ್ಯವಾದ ವಾಸಸ್ಥಳ ವೆಂಬುವದಕ್ಕೆ ದರ್ಶನಸ್ಥಾಪಕರಾದ ಶ್ರೀ ಭಾಷ್ಯಕಾರರಭಿಪ್ರಾಯವನ್ನು ಉದಾಹರಿಸಿ ಇನ್ನೂ ಇತರ ಪ್ರಮಾಣಗಳಿಂದಲೂ ಅದನ್ನೇ ಸ್ಥಿರೀಕರಿಸುತ್ತಾರೆ:—

ಈ ಸಂದರ್ಭದಲ್ಲಿ ಶ್ರೀ ಭಾಷ್ಯಕಾರರ ದಿವ್ಯಸೂಕ್ತಿಯು.

ಇತ್ತೈ - ಈ ಅಭಿಪ್ರಾಯವನ್ನು, ಎಂದರೆ ಮಹಾಭಾಗವತಾಭಿಮಾನವುಳ್ಳ ದಿವ್ಯಕ್ಷೇತ್ರವು ಪ್ರಪನ್ನನಿಗೆ ಯೋಗ್ಯವಾದ ಸ್ಥಳವೆಂಬುವದನ್ನು, "**ಯಾವಚ್ಛರೀರಪಾತಂ** - ದೇಹಾವಸಾನದವರೆಗೂ, **ಅತ್ರೈವ ಶ್ರೀರಙ್ಗೇ** - ಈ ಶ್ರೀರಂಗದಲ್ಲೇ, **ಸುಖಮಾಸ್ವ** - ಸುಖವಾಗಿ ಇದ್ದುಬಿಡು" ಎಂದು, **ಸತ್ತ್ವೋತ್ತರಙ್ಗಳಾನ** - ಸತ್ತ್ವವೃದ್ಧಿಯಿರುವ ಎಂದರೆ ಮಹಾಭಾಗವತ ಬಾಹುಳ್ಯವಿರುವ, ಅವರಲ್ಲಿ ತಾನೇ ಸತ್ತ್ವಗುಣಪ್ರಾಚುರ್ಯವು. **ಭಗವತ್ ಕ್ಷೇತ್ರಙ್ಗಳುಕ್ಕು** - ಪ್ರಖ್ಯಾತಿ ಹೊಂದಿದ ವಿಷ್ಣ್ವಾಲಯಗಳುಳ್ಳ ಇತರ ದಿವ್ಯದೇಶಗಳನ್ನೂ, **ಪ್ರದರ್ಶನಾರ್ಥಮಾಗ** - ಬೋಧಿಸುವದಕ್ಕಾಗಿ, ಉಪಲಕ್ಷಣವಾಗಿ, **ಅರುಳಿಚ್ಚೆಯ್‌ದಾರ್**- ಅನುಗ್ರಹಿಸಿದರು, ಅಪ್ಪಣೆ ಕೊಡಿಸಿದರು. ಶ್ರೀರಂಗದಲ್ಲೇ ವಸಿಸತಕ್ಕದ್ದೆಂದು ಹೇಳಿದುದು ಶ್ರೀರಂಗದ ಹಾಗೆ ಭಾಗವತಪ್ರಾಚುರ್ಯವಿರುವ ಇತರ ದಿವ್ಯದೇಶದಲ್ಲೂ ವಸಿಸಬಹುದೆಂಬಭಿಪ್ರಾಯವೆಂದು ಭಾವಿಸತಕ್ಕದ್ದು. ಇದು ಶ್ರೀಯತಿವರ್ಯರನುಗ್ರಹಿಸಿದ ಪೃಥುಗದ್ಯ ಅಥವಾ ಶರಣಾಗತಿ ಗದ್ಯವೆಂಬ ಗ್ರಂಥದಲ್ಲಿದೆ ಇದು ಶ್ರೀಯತೀಶ್ವರ ರಂಗೇಶ್ವರ ಸಲ್ಲಾಪರೂಪವಾದುದು. ಈ ಶ್ರೀರಙ್ಗೇ ಸುಖಮಾಸ್ವ ಎಂಬ ವಾಕ್ಯವು ಶ್ರೀ ರಂಗನಾಥನು ಯತೀಶ್ವರರಿಗೆ ಉಪದೇಶಿಸಿದ ವಾಕ್ಯವಾದುದರಿಂದಲೂ ಪರಮ ಪರಿಗ್ರಾಹ್ಯವಾದುದು

---

(೧) ಶರಣಾಗತಿ ಗದ್ಯ.

ಅತ್ರ ಇತರ ಪ್ರಮಾಣಾನಿ.

ಭಗವತ್ ಕ್ಷೇತ್ರಙ್ಗಳೇ ವಿವೇಕಿಕ್ಕು ವಾಸಸ್ಥಾನ ಮೆನ್ನು ಮಿಡತ್ತೈ (೨) “ಯತ್ರನಾರಾಯಣೋದೇವಃ ಪರಮಾತ್ಮಾ ಸನಾತನಃ । ತತ್ಪುಣ್ಯಂ ತತ್ಪರಂ ಬ್ರಹ್ಮ ತತ್ತೀರ್ಥಂ ತತ್ತಪೋವನಂ । ತತ್ರ ದೇವರ್ಷಯಸ್ಸಿದ್ಧಾಸ್ಸರ್ವೇಚೈವ ತಪೋಧನಾಃ ॥” ಎನ್ನು ಅರಣ್ಯಪರ್ವತ್ತಿಲ್ ತೀರ್ಥಯಾತ್ರೈಯಿಲುಮ್ (೩) “ಗೋಮಂತಃ ಪರ್ವತೋ ರಾಜನ್ ಸುಮಹಾನ್ಸರ್ವಧಾ

ಈ ಸಂದರ್ಭದಲ್ಲಿ ಇನ್ನೂ ಇತರ ಪ್ರಮಾಣಗಳು.

ಭಗವತ್ ಕ್ಷೇತ್ರಙ್ಗಳೇ - ಶ್ರೀ ಮಹಾವಿಷ್ಣು ದೇವಾಲಯಗಳಿರುವ ದಿವ್ಯದೇಶಗಳೇ ಎಂದರೆ ಸತ್ಕ್ಷೇತ್ರಗಳಾದ ದಿವ್ಯಕ್ಷೇತ್ರಗಳೇ, **ವಿವೇಕಿಕ್ಕು** - ಸಾರಾಸಾರವಿವೇಚನವುಳ್ಳ ಜ್ಞಾನಿಗೆ, **ವಾಸಸ್ಥಾನಮೆನ್ನುಮಿಡತ್ತೈ** - ಯೋಗ್ಯವಾದ ವಾಸಸ್ಥಾನವೆಂಬ ಸ್ಥಳದಲ್ಲಿ, ಎಂಬ ಸಂದರ್ಭದಲ್ಲಿ ಪ್ರಮಾಣಗಳನ್ನುದಾಹರಿಸುತ್ತಾರೆ:—ಇಂತಹ ಪುಣ್ಯಕ್ಷೇತ್ರಗಳು ವಿವೇಕಿಯಾದ ಜ್ಞಾನಿಗೂ ಆವಶ್ಯಕವೆಂದು ಇಲ್ಲಿ ಹೇಳಿದುದರಿಂದ, ಜ್ಞಾನಿಯು ಎಲ್ಲಿ ವಾಸಮಾಡಿದರೂ ಆಗಬಹುದು; ಜ್ಞಾನಶೂನ್ಯನೀಗ ಇಂತಹ ಪುಣ್ಯಕ್ಷೇತ್ರಗಳಲ್ಲಿ ವಾಸಮಾಡತಕ್ಕದ್ದೆಂದು ಭಾವಿಸಬಹುದೆಂದಾಲೋಚಿಸಿ ವಿವೇಕಿಯಾದ ಪ್ರಪನ್ನನಿಗೂ ಕೂಡ ಭಾಗವತಾಭಿಮಾನವುಳ್ಳ ಪುಣ್ಯಕ್ಷೇತ್ರಗಳೇ ವಾಸಸ್ಥಳವೆಂದುಪದೇಶಿಸುತ್ತಾರೆ:— **ಯತ್ರ** - ಯಾವ ಮಹಾಕ್ಷೇತ್ರದಲ್ಲಿ, ಬದರಿಕಾಶ್ರಮವನ್ನೂ ಅಲ್ಲಿನ ಉಷ್ಣೋದಕಗಂಗೆ ಶೀತೋದಕಗಂಗೆಯನ್ನು ಕುರಿತು ಪ್ರಶಂಸಿಸುವ ಸಂದರ್ಭವು; **ಸನಾತನಃ** - ಅನಾದಿಯಾದ, **ಪರಮಾತ್ಮಾ**-ಪುರುಷೋತ್ತಮನಾದ, **ನಾರಾಯಣೋ ದೇವಃ** - ಸರ್ವೇಶ್ವರನಾದ ನಾರಾಯಣನಿರುತ್ತಾನೋ, **ತತ್** - ಆ ದಿವ್ಯಸ್ಥಳವು, **ಪುಣ್ಯಂ** - ಮಹಾಪಾವನಕರವಾದುದು, **ತತ್** - ಅದೇ, **ಪರಂಬ್ರಹ್ಮ** - ಪರಬ್ರಹ್ಮಸ್ವರೂಪವಾದುದು, **ತತ್ತೀರ್ಥಂ** - ಅದೇ ಪುಣ್ಯತೀರ್ಥವು, ಬೇರೆ ಪುಣ್ಯತೀರ್ಥ ಬೇಕಿಲ್ಲವೆಂಬ ಭಾವವು, **ತತ್** - ಅದೇ, **ತಪೋವನಂ** - ತಪಸ್ಸಿಗೆ ಯೋಗ್ಯವಾದ ಸ್ಥಳವು, **ತತ್ರ** - ಅಲ್ಲೇ, ದೇವರ್ಷಿಗಳೂ, ಸಿದ್ಧರೂ, ಸಮಸ್ತ ತಪೋಧನರಾದ ಮುನಿಗಳೂ ಇರುವರು.'' ಎನ್ನು-ಎಂಬದಾಗಿ, **ತೀರ್ಥಯಾತ್ರೈಯಿಲುಮ್** - ವನವಾಸದಲ್ಲಿರುವಾಗ ಯುಧಿಷ್ಠಿರನಿಗೆ ಧೌಮ್ಯಋಷಿಯು ಹೇಳುವ ಉತ್ತರದೇಶದ ತೀರ್ಥಯಾತ್ರಾ ಸ್ಥಳಗಳ ಪ್ರಶಂಸೆಯಲ್ಲೂ, ಇಲ್ಲಿ ತಪೋಧನರು ಇದ್ದಾರೆ ಎಂಬುವದರಿಂದ ಭಾಗವತಾಭಿಮಾನವೂ ಇರುವದರಿಂದ ವಾಸಯೋಗ್ಯ

---

(೨) ಭಾರ. ಆರ. ೮೮-೨೭, ೨೮. (೩) ಭಾರ. ಭೀಷ್ಮ. ೧೨-೮. ೯.

ತುಮಾನ್ । ವಸತೇ ಭಗವಾನ್ ಯತ್ರ ಶ್ರೀಮಾನ್ ಕಮಲಲೋಚನಃ । ಮೋಕ್ಷಿಭಿಸ್ಸಂಸ್ತುತೋ ನಿತ್ಯಂ ಪ್ರಭುರ್ನಾರಾಯಣೋ ಹರಿಃ ॥" ಎನ್ರು ಪ್ರದೇಶಾಂತರತ್ತಿಲುಮ್ ಮಹರ್ಷಿಯರುಳಿಚ್ಚೆಯ್‌ದಾನ್. ಶ್ರೀ ವಾ

ವೆಂಬ ಭಾವವೂ, ಮತ್ತು ತಪೋಧನರಿಗೆ ವಾಸಯೋಗ್ಯವಾದರೆ ಕೃತಕೃತ್ಯನಾದ ಪ್ರಪನ್ನನಿಗೂ ವಾಸಯೋಗ್ಯವೆಂಬ ಭಾವವೂ, ತೋರಿಬರುತ್ತವೆ. ಮತ್ತು, **ಹೇ ರಾಜನ್** – ಓ ರಾಜನಾದ ಧೃತರಾಷ್ಟ್ರನೇ, ಇದು ಸಂಜಯನು ಕ್ರೌಂಚದ್ವೀಪವನ್ನು ವರ್ಣಿಸುವ ಪ್ರಕರಣವು, **ಸುಮಹಾನ್** - ಅತ್ಯಂತ ದೊಡ್ಡದಾದ, **ಸರ್ವಧಾತುಮಾನ್** - ಗೈರಿಕಾದಿ ಸಮಸ್ತ ಧಾತುಗಳನ್ನೂ ಹೊಂದಿರುವ, **ಗೋಮಂತ**ವೆಂಬ ಪರ್ವತವು ಆ ಕ್ರೌಂಚದ್ವೀಪದಲ್ಲಿದೆ, **ಯತ್ರ** - ಯಾವ ಪ್ರಸಿದ್ಧವಾದ ಆ ಗೋಮಂತ ಪರ್ವತದಲ್ಲಿ, **ಶ್ರೀಮಾನ್** – ಲಕ್ಷ್ಮೀಯುಕ್ತನಾದ, **ಕಮಲಲೋಚನಃ** - ಭಕ್ತಮಂಡಲಿಯಲ್ಲಿ ಕೃಪಾಸೂಚಕವಾದ ಕಣ್ಣುಗಳುಳ್ಳ ಪುಂಡರೀಕಾಕ್ಷನಾದ, **ಭಗವಾನ್** - ಷಾಡ್ಗುಣ್ಯಪರಿಪೂರ್ಣನಾದ **ಪ್ರಭುಃ** - ಸ್ವಾಮಿಯಾದ, **ಹರಿಃ** – ಪಾಪನಾಶಕನಾದ, ನಾರಾಯಣನು, **ನಿತ್ಯಂ** - ಪ್ರತಿನಿತ್ಯವೂ, ಯಾವಾಗಲೂ, **ಮೋಕ್ಷಿಭಿಃ** - ಮೋಕ್ಷಾಕಾಂಕ್ಷೆಯುಳ್ಳವರಿಂದ, **ಸಂಸ್ತುತಃ** - ಸ್ತೋತ್ರಮಾಡಲ್ಪಟ್ಟವನಾಗಿ **ನಿತ್ಯಂ ವಸತೇ** - ಯಾವಾಗಲೂ ವಾಸಮಾಡುತ್ತಾನೆಯೋ, **ಎನ್ರು** - ಎಂಬದಾಗಿ, **ಪ್ರದೇಶಾಂತರತ್ತಿಲುಮ್** - ಬೇರೆ ದ್ವೀಪವಾದ ಕ್ರೌಂಚದ್ವೀಪದಲ್ಲೂ, **ಮಹರ್ಷಿಯರುಳಿಚ್ಚೆಯ್‌ದಾನ್** - ಶ್ರೀಮನ್ಮಹಾಭಾರತಕರ್ತೃವಾದ ವ್ಯಾಸಮಹರ್ಷಿಯು, ಅನುಗ್ರಹಿಸಿ ಹೇಳಿದರು. ಇಲ್ಲಿಯೂ **ಮೋಕ್ಷಿಭಿಃ ಸಂಸ್ತುತಃ** ಎಂದು ಹೇಳಿರುವದರಿಂದಲೂ, ಕಮಲಲೋಚನನು ಆ ಪರ್ವತದಲ್ಲಿ ವಸಿಸಿರುವದರಿಂದಲೂ ಆ ಪರ್ವತಕ್ಕೆ ವಾಸಯೋಗ್ಯವೆಂಬ ಮಾಹಾತ್ಮ್ಯವು ಎಂಬ ಭಾವವು. **ಮೋಕ್ಷಿಭಿಃ** ಎಂಬ ಪ್ರಯೋಗವಿರುವದರಿಂದ, ಇನ್ನೊಂದಭಿಪ್ರಾಯವೂ ವ್ಯಕ್ತವು. ಮೋಕ್ಷಪ್ರಾಪ್ತಿಯನ್ನು ದೇಹಾವಸಾನದಲ್ಲಿ ಹೊಂದುವವನಿಗೂ ಅಂತಹ ದೇಶವಾಸವು ಉಚಿತವೆಂಬಂಶವೂ ತೋರಿಬರುತ್ತದೆ. ಈಗ ಮುದ್ರಿಸಿರುವ ಪ್ರತಿಗಳಲ್ಲಿ "ವಸತೇ ಭಗವಾನ್ ಯತ್ರ" ಎಂಬುವದಕ್ಕೆ ಬದಲಾಗಿ "ಯತ್ರ ನಿತ್ಯಂ ನಿವಸತಿ" ಎಂದಿರುತ್ತದೆ. ಇಂತಹ ವ್ಯತ್ಯಾಸಗಳು ಅನೇಕವಿರುತ್ತವೆ. ಅರ್ಥವೇನೋ ಒಂದೇಯಾದರೂ ಮಹರ್ಷಿವಾಕ್ಯಗಳ ಬದಲಾವಣೆಗಳು ಸರಿಯಾದುದಲ್ಲವು. ಇವುಗಳಲ್ಲಿ ಮಹರ್ಷಿಯು ಅನುಗ್ರಹಿಸಿದ ವಾಕ್ಯವ್ಯಾವುದೆಂದು ಹೇಳಲು ಸಾಧ್ಯವಿಲ್ಲವು. ಮುಂದೆ ಈ ಅಭಿಪ್ರಾಯವು ಶ್ರೀಮದ್ರಾಮಾಯಣದಲ್ಲೂ ಉಪಪಾದಿತವೆಂದು ತೋರ್ಪಡಿಸುತ್ತಾರೆ. ಶ್ರೀವಾಲ್ಮೀಕಿ ಮಹರ್ಷಿಯಿಂದಲೂ, "ಅಸೌ - ಈ ಪರಿದೃಶ್ಯನಾದ ಚಿತ್ರಕೂಟ ಪರ್ವ

ಶ್ರೀಕ್ಕೆ ಭಗವಾನಾಲುಮ್ (೪) ಸುಭಗ ಶ್ಚಿತ್ರಕೂಟೋಽಸೌ ಗಿರಿರಾಜೋ ಪಮೋಗಿರಿಃ । ಯಸ್ಮಿನ್ವಸತಿ ಕಾಕುತ್ಸ್ಥಃ ಕುಬೇರ ಇವ ನಂದನೇ ॥" ಎಙ್ಗುರ ವಿಡತ್ತಿಲ್ ಭಗವದಧಿಷ್ಠಿತ ಕ್ಷೇತ್ರತ್ತಿನುಡೈಯ ಅಭಿಗಂತವ್ಯತ್ತೈ ಸುಭಗ ಶಬ್ದತ್ತಾಲೆ ಸೂಚಿಕ್ಕಪ್ಪಟ್ಟದು. ಶ್ರೀ ಸಾತ್ವತಾದಿಗಳಿಲುಮ್

ತವು, **ಗಿರಿರಾಜೋಪಮೋಗಿರಿಃ** - ಗಿರಿಶ್ರೇಷ್ಠವಾದ ಹಿಮವತ್ಪರ್ವತಕ್ಕೆ ಸಮಾನವಾದ ಪರ್ವತವು, ಅಥವಾ ಶ್ರೀನಿವಾಸನಿಗೆ ಆವಾಸಸ್ಥಾನವಾಗಿ ಗಿರಿಶ್ರೇಷ್ಠವೆನಿಸಿದ ಶ್ರೀ ವೇಂಕಟಾದ್ರಿಗೆ ಸಮಾನವಾದ ಪರ್ವತವು, ಏಕೆಂದರೆ ಇದೂ ಆ ವೇಂಕಟಾದ್ರಿಯ ಹಾಗೆ ಸರ್ವೇಶ್ವರನಿಗೆ ಆವಾಸಭೂತವಾದುದೆಂದು ಹೇಳುತ್ತಾರೆ :— **ಯಸ್ಮಿನ್** - ಯಾವ ಈ ಪ್ರಸಿದ್ಧವಾದ ಚಿತ್ರಕೂಟದಲ್ಲಿ, ಕಕುತ್ಸ್ಥ ವಂಶೋತ್ಪನ್ನನಾದ ಶ್ರೀರಾಮನು, **ಕುಬೇರ ಇವ ನಂದನೇ** - ನಂದನ ವನದಲ್ಲಿ, ಕುಬೇರನು ಹೇಗೆ ವಸಿಸುತ್ತಾನೋ, ಹಾಗೆ, **ವಸತಿ** - ವಸಿಸುತ್ತಾನೆ." **ಎಙ್ಗುರವಿಡತ್ತಿಲ್** - ಎಂದು ಮಹರ್ಷಿಯು ಹೇಳಿರುವ ಸ್ಥಳದಲ್ಲಿ, **ಭಗವದನುಷ್ಠಿತ ಕ್ಷೇತ್ರತ್ತಿನುಡೈಯ** – ಸರ್ವೇಶ್ವರನಿರುವ ದಿವ್ಯಕ್ಷೇತ್ರದ, **ಅಭಿಗಂತವ್ಯತ್ತೈ** - ಸರ್ವರೂ ಅಭಿಮಾನಿಸಿ ಹೊಂದತಕ್ಕ ಸ್ಥಿತಿಯು, "**ಸುಭಗ**" ವೆಂಬ, **ಶಬ್ದತ್ತಾಲೆ** - ಪ್ರಯೋಗದಿಂದ, **ಸೂಚಿಕ್ಕಪಟ್ಟದು** - ಸೂಚಿಸಲ್ಪಟ್ಟಿತು. "**ಮುನಯಶ್ಚ ಮಹಾತ್ಮಾನೋ ವಸತ್ಯಸ್ಮಿನ್ ಶಿಲೋಚ್ಚಯೇ**" ಎಂದರೆ ಈ ಪರ್ವತಾಗ್ರದಲ್ಲಿ ಮಹಾತ್ಮರಾದ ಮುನಿಗಳಿರುವದರಿಂದ ವಾಸಯೋಗ್ಯವೆಂದು ಭಾವಿಸಿ ಶ್ರೀರಾಮನು ಲಕ್ಷ್ಮಣನ ಮೂಲಕ ಆಶ್ರಮನಿರ್ಮಾಣ ಮಾಡಿಸಿ ವಾಸಮಾಡಿದ ಈ ಚಿತ್ರಕೂಟವು ಮಹಾಪುಣ್ಯಕರವಾದುದಾಗಿಯೂ, ಪ್ರಪನ್ನಜನಕ್ಕೆ ಅತಿ ಪ್ರಿಯವಾಗಿಯೂ ಮನೋಹರವಾಗಿಯೂ ವಾಸಯೋಗ್ಯವಾಗಿಯೂ ಇದೆ ಎಂಬ ಭಾವವು. ಇಲ್ಲಿ ಭಾಗವತಾಭಿಮಾನವುಳ್ಳ ಭಗವದಧಿಷ್ಠಿತ ಪ್ರದೇಶವೇ ವಾಸಯೋಗ್ಯವೆಂಬುವದು ಸ್ಥಾಪಿತವು. (೧೬೧೫ ನೆಯ ಪುಟ ನೋಡಿ).

ಈಗ ಸ್ವಾಮಿದೇಶಿಕರವರು ಉದಾಹರಿಸಿರುವ ನಾಲ್ಕು ಪ್ರಮಾಣಗಳಲ್ಲಿ ಮೊದಲನೆಯ ಪ್ರಮಾಣವೇನೋ ಶ್ರೀಭಾಷ್ಯಕಾರೋಕ್ತಿಯಾಗಿಯೂ, ಅರ್ಚಾವತಾರಾಧಿಷ್ಠಿತ ಕ್ಷೇತ್ರವಿಷಯವಾಗಿಯೂ, ಇರುವವರಿಂದೇನೋ ಪರಮಗ್ರಾಹ್ಯವು, ಇನ್ನು ಮೂರು ಪ್ರಮಾಣಗಳಲ್ಲಿ ಗೋಮಂತ ಪರ್ವತ ವಿಷಯವು ಪ್ರದೇಶಾಂತರ ವಿಷಯವಾದುದರಿಂದ ನಮಗೆ ಸಂಬಂಧಿಸಿದುದೇ ಅಲ್ಲವು. ಮಿಕ್ಕೆರಡೂ ವಿಭವಾವತಾರಿಗಳೇ ಆ ಕಾಲದಲ್ಲಿ ವಾಸಮಾಡುತ್ತಿದ್ದುದರಿಂದ ಮಾಹಾತ್ಮ್ಯೆಯು ಆ ಸ್ಥಳ

---

(೪) ರಾಮಾ. ಅಯೋಧ್ಯಾ. ೭೮-೧೨.

ಸ್ವಯಂ ವ್ಯಕ್ತ ಸೈದ್ಧ ವೈಷ್ಣವಂಗಳಿಜ್ಗ್ರ ಕ್ಷೇತ್ರ ವಿಶೇಷಜ್ಗಳ್ಯೆಯುಮ್
ಅವತ್ತಿನೆಲ್ಲೈಗಳಿಲ್ ಏತ್ತ ಚ್ಚುರುಕ್ಕಜ್ಗಳ್ಯೆಯುಮ್ ಪಿರಿಯಚ್ಚೊಲ್ಲಿ
(೫) **"ದುಷ್ಟೇಂದ್ರಿಯ ವಶಾಚ್ಚಿತ್ತಂ ನೃಣಾಂ ಯತ್ (ಕಿಲ್ಬಿಷೈ) ಕಲ್ಮಷೈ**

ಗಳಿಗೆ ಏರ್ಪಟ್ಟವು ಹೀಗಿರುವಲ್ಲಿ ಅರ್ಚಾವತಾರಾಧಿಷ್ಠಿತ ಪ್ರದೇಶಗಳಿಗೆ ಮಾಹಾತ್ಮ್ಯವನ್ನು ಬೋಧಿಸುವ ಪ್ರಮಾಣಗಳುಂಟೋ ಎಂದರೆ, ಅಂತಹ ಪ್ರಮಾಣಗಳನ್ನೂ ಉದಾಹರಿಸುತ್ತಾರೆ:—ಭಗವಚ್ಛಾಸ್ತ್ರದಲ್ಲೂ ಭಗವತ್ ಕ್ಷೇತ್ರವಾಸದ ಫಲವಿಶೇಷವನ್ನು ತೋರಿಸುವ ವ್ಯಾಜದಿಂದ ಅಂತಹ ಕ್ಷೇತ್ರವಾಸವೇ ಉಚಿತವೆಂಬದಾಗಿ ಹೇಳಲ್ಪಟ್ಟಿತೆಂದು ತಿಳಿಸುತ್ತಾರೆ. **ಶ್ರೀ ಸಾತ್ವತಾದಿಗಳಿಲುಮ್** - ಶ್ರೀ ಸಾತ್ವತಸಂಹಿತೆ ಮೊದಲಾದವುಗಳಲ್ಲಿ, **ಸ್ವಯಂ ವ್ಯಕ್ತ**- ಸರ್ವೇಶ್ವರ ಸಂಕಲ್ಪದಿಂದಲೇ ಸ್ವತಃ ಅರ್ಚಾವತಾರವಾಗಿ ಆವಿರ್ಭವಿಸಿರುವ ಸ್ಥಳಗಳು, **ಇವುಗಳು** ಯಾವುವೆಂದರೆ :—**ಆದ್ಯಂ ಸ್ವಯಮಿದಂ ವ್ಯಕ್ತಂ ವಿಮಾನಂ ರಂಗಸಂಜ್ಞಿಕಂ । ಶ್ರೀಮುಷ್ಣಂ ವೇಙ್ಕಟಾದ್ರಿಂ ಚ ಸಾಲಗ್ರಾಮಂ ಚ ನೈಮಿಶಂ । ತೋತಾದ್ರಿಂ ಪುಷ್ಕರಂಚೈವ ನರನಾರಾಯಣಾಹ್ವಯಂ । ಅಷ್ಟೌ ಮೇ ಮೂರ್ತಯ ಸ್ಸಂತಿ ಸ್ವಯಂ ವ್ಯಕ್ತಾ ಮಹೀತಲೇ ॥** ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆ, ಶ್ರೀರಂಗವೂ, ಶ್ರೀಮುಷ್ಣವೂ, ತಿರುಪತಿ ಬೆಟ್ಟವೂ, ಸಾಲಗ್ರಾಮವೂ, ನೈಮಿಶಾರಣ್ಯವೂ, ವಾನವಮಾಮಲೆಯೂ, ಪುಷ್ಕರವೂ, ಬದರಿಕಾಶ್ರಮವೂ, ಎಂಬದಾಗಿ ಎಂಟು ದಿವ್ಯಕ್ಷೇತ್ರಗಳು. ಇವುಗಳಲ್ಲಿ ತನ್ನ ದಿವ್ಯಮಂಗಳ ವಿಗ್ರಹ ರೂಪಗಳಿವೆ ಎಂದು ಸರ್ವೇಶ್ವರನೇ ಹೇಳಿರುತ್ತಾನೆ; **ಸೈದ್ಧ** - ಸಿದ್ಧರಿಂದ ಪ್ರತಿಷ್ಠಿತವಾದ ಸ್ಥಳಗಳು, **ವೈಷ್ಣವಜ್ಗಳ್** - ವೈಷ್ಣವ ಮಹಾಭಾಗವತರುಗಳಿಂದ ಆಗಮರೀತ್ಯಾ ಪ್ರತಿಷ್ಠಿತವಾದ ದೇವಾಲಯಗಳುಳ್ಳ, (ಕೆಲವು ದೇವತೆಗಳಿಂದ ಪ್ರತಿಷ್ಠಿತವಾದ ದೇವಾಲಯಗಳುಳ್ಳವು ದಿವ್ಯಕ್ಷೇತ್ರವೆನಿಸುತ್ತವೆ) **ಕ್ಷೇತ್ರವಿಶೇಷಜ್ಗಳ್ಯೆಯುಮ್** - ಮಹಾಕ್ಷೇತ್ರಗಳನ್ನೂ, **ಅವತ್ತಿಲ್** - ಆ ಕ್ಷೇತ್ರಗಳ, ಎಲ್ಲೆಗಳಲ್ಲಿರುವದರಿಂದುಂಟಾಗುವ ಫಲಗಳ, **ಏತ್ತಚ್ಚುರುಕ್ಕಜ್ಗಳ್ಯೆಯುಮ್**-ಉತ್ಕರ್ಷಾಪಕರ್ಷಗಳನ್ನೂ, **ಪಿರಿಯ ಚ್ಚೊಲ್ಲಿ** - ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿ, **"ನೃಣಾಂ** - ಮನುಷ್ಯರ, **ಯತ್** - ಯಾವ, **ಚಿತ್ತಂ** - ಮನಸ್ಸು, **ಇಂದ್ರಿಯ ವಶಾತ್**-ಹತ್ತು ಇಂದ್ರಿಯಗಳಿಗೂ ವಶವಾಗಿರುವದರಿಂದ, **ಕಿಲ್ಬಿಷೈಃ ಅಥವಾ ಕಲ್ಮಷೈಃ** - ಪಾಪಗಳಿಂದ ಅಥವಾ ದೋಷಗಳಿಂದ, **ವೃತಂ** - ಆವರಿಸಲ್ಪಟ್ಟಿರುವದೋ, **ತತ್** - ಅಂತಹ ಮನಸ್ಸೂ, **ಅಂತಕಾಲೇ** - ದೇಹಾವಸಾನಸಮಯ

---

(೫) ಶ್ರೀ ಸಾತ್ವ. ಸಂ. ೭. ೧೨೦.

ವೃತ್ತನ್ । ತದಂತಕಾಲೇ ಸಂಶುದ್ಧಿಂ ಯಾತಿ ನಾರಾಯಣಾಲಯೇ ॥" ಎನ್ರುವ್ವೋ ಕ್ಷೇತ್ರಙ್ಗಳಿಲೆಲ್ಲೈಕ್ಕುಳ್ಳೇ ವಸಿತ್ತವನುಕ್ಕು ದೇಹನ್ಯಾಸಕಾಲತ್ತಿಲೆ ವರುಮ್ ವಿಶೇಷಮ್ ಶೊಲ್ಲಪ್ಪಟ್ಟದು.

ಯಲ್ಲಿ, **ನಾರಾಯಣಾಲಯೇ** - ಶ್ರೀಮನ್ನಾರಾಯಣನಿಗೆ ಪ್ರಿಯವಾದ ದಿವ್ಯದೇಶದಲ್ಲಿ, ಎಂದರೆ ಅಲ್ಲಿ ವಸಿಸುವದರಿಂದ, **ಸಂಶುದ್ಧಿಂ** - ಪವಿತ್ರತೆಯನ್ನು ಎಂದರೆ ಪಾಪಗಳಿಂದ ನಿವೃತ್ತಿಯನ್ನು, **ಯಾತಿ** - ಹೊಂದುತ್ತದೆ" **ಎನ್ರು** - ಎಂಬದಾಗಿ, **ಅವ್ವೋ ಕ್ಷೇತ್ರಙ್ಗಳಿಲ್ ಎಲ್ಲೈಕುಳ್ಳೇ** - ಆಯಾ ದಿವ್ಯಕ್ಷೇತ್ರಗಳ ಎಲ್ಲೆಯಲ್ಲಿ, **ವಸಿತ್ತವನುಕ್ಕು** - ವಾಸಮಾಡಿದವನಿಗೆ, **ದೇಹನ್ಯಾಸ ಕಾಲತ್ತಿಲೆ**- ದೇಹಪರಿತ್ಯಾಗ ಮಾಡುವ ಕಾಲದಲ್ಲಿ, **ವರುಮ್**-ಉಂಟಾಗುವ, **ವಿಶೇಷಮ್** - ಮಹತ್ವವು, ಉತ್ಕರ್ಷವು, **ಶೊಲ್ಲಪ್ಪಟ್ಟದು** - ಹೇಳಲ್ಪಟ್ಟಿತು. ಭಗವತ್ ಕ್ಷೇತ್ರದಲ್ಲಿ ಮರಣವಾಗುವವನಿಗೆ ಪಾಪನಿವೃತ್ತಿಯುಂಟಾಗುತ್ತದೆ. ಈತನು ಹಿಂದಿನ ಪಾಪಕ್ಕೆ ಪರಿತಾಪಪಟ್ಟು ಮುಂದೆ ಅಂತಹ ಪಾಪಗಳಲ್ಲಿ ಪ್ರವರ್ತಿಸುವದಿಲ್ಲವೆಂಬ ದೃಢಮನಸ್ಸನಾಗಿ ಏನಾದರೂ ಸ್ವಲ್ಪ ಸುಕೃತ ಮಾಡಿದರೆ, "**ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ**" (ರಾ. ಅಯೋಧ್ಯಾ.) ಎಂದು ಹೇಳಿರುವ ಹಾಗೆ, ಅದರಿಂದ ಸಂತುಷ್ಟನಾದ ಸ್ವಾಮಿಯು "**ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ**" ಎಂದು ಹೇಳಿರುವ ಹಾಗೆ ಆತನ ಶತಾಪರಾಧಗಳನ್ನೂ ಮನ್ನಿಸಿಬಿಟ್ಟು ತನ್ನ ಸಾಕ್ಷಾತ್ಕಾರವನ್ನು ಕೊಡುವನೆಂಬ ತಾತ್ಪರ್ಯವು. ಆದರೆ ಮಹಾ ಪಾಪಿಗಳಾಗಿ ಅನೇಕರು ದಿವ್ಯದೇಶಗಳಲ್ಲೇ ವಸಿಸಿ ಸ್ವಾಮಿಯಲ್ಲಿ ಸಕ್ತವಾಗದ ಮನಸ್ಸುಳ್ಳವರಾಗಿ ಮರಣ ಹೊಂದುವರು. ಇವರುಗಳೂ ಕೂಡ ಪಾಪಗಳಿಂದ ನಿವೃತ್ತರಾಗಿ ಉತ್ತಮ ಲೋಕಗಳನ್ನು ಹೊಂದುವರೆಂಬರ್ಥವಲ್ಲವು. "**ಯಾದವಾದ್ರಿಗಿರಿಂ ದೃಷ್ಟ್ವಾ ದೂರಂ ಗಚ್ಛತಿ ದುಷ್ಕೃತಂ**" ಎಂದು ಹೇಳಿದರೆ, ಅಲ್ಲಿಗೆ ಯಾತ್ರೆಗಾಗಿ ಬರುವವರ ಸ್ವತ್ತನ್ನೇ ಸದಾ ಅಪಹರಿಸುವದಕ್ಕಾಗಿಯೇ ಅಲ್ಲಿ ವಾಸಮಾಡುವವನಿಗೂ, ದ್ರವ್ಯಕ್ಕಾಗಿ ಅಲ್ಲೇ ಕೊಲೆ ಮುಂತಾದ ಮಹಾ ಪಾತಕಗಳನ್ನು ಮಾಡುವವನಿಗೂ ಮರಣಕಾಲದಲ್ಲಿ ಪಾಪಪರಿಹಾರವಾಗುತ್ತದೆಂಬರ್ಥವಲ್ಲವು. ಅಂತಹ ಭಗವತ್‌ಕ್ಷೇತ್ರವಾಸವು, ಪರಮಾತ್ಮನಲ್ಲೇ ಮನಸ್ಸನ್ನು ಇಡಲು ಸಹಕಾರಿಯಾಗುವದರಿಂದಲೂ ಮೊದಲು ಅದು ದುಷ್ಟೇಂದ್ರಿಯಗಳಿಗೆ ವಶವಾಗಿ ಅನೇಕ ಪಾಪಗಳನ್ನು ಮಾಡಿದ್ದರೂ, ಇನ್ನು ತನಗೆ ದೇಹತ್ಯಾಗ ಕಾಲವು ಸಮೀಪಿಸಿತೆಂದು ಭಾವಿಸಿ, ಆಗ ಪಾಪ ನಿವಾರಣೆಗೆ ಏನು ಮಾಡಬೇಕೋ ಅದನ್ನು ಮಾಡಲು ಈ ನಾರಾಯಣಾಲಯವಾಸವು ಸಹಕಾರಿಯಾಗುವದರಿಂದಲೂ, ಈತನ ಮನಸ್ಸು, **ಸಂಶುದ್ಧಿಂ ಯಾತಿ** - ಪವಿತ್ರತೆಯನ್ನು

ಆಗ್ನೈಯರಾಲ್ "ಯತ್ಕಿಂಚಿದಪಿ ಕುರ್ವಾಣೋ ವಿಷ್ಣೋರಾಯತನೇ

ಹೊಂದುತ್ತದೆಂದು ಹೇಳಲ್ಪಟ್ಟಿತು. ಆದುದರಿಂದ **ಯಾದವಾದ್ರಿಗಿರಿಂದೃಷ್ಟ್ವಾ** ಎಂದರೆ ಯಾದವಾದ್ರಿಗಿರಿಯು ಲಕ್ಷ್ಮೀನಾರಾಯಣರಿಗೆ ಆವಾಸವೆಂದು ಪರಮ ಭಕ್ತಿ ವಿಶ್ವಾಸಗಳಿಂದ ಕಂಡವನಾದರೆ, ಆಗ ದುಷ್ಕೃತವೆಲ್ಲಾ ದೂರವಾಗುತ್ತವೆಂಬ ಭಾವವು. ಮೇಲೆ ಹೇಳಿದ ಪಾತಕಿಗಳು ಭಗವತ್‌ಕ್ಷೇತ್ರಗಳಲ್ಲಿ ಪಾತಕಗಳನ್ನು ಮಾಡುವದರಿಂದ ಇನ್ನೂ ಹೆಚ್ಚಾದ ಭಗವನ್ನಿಗ್ರಹಕ್ಕೆ ಪಾತ್ರರಾಗುತ್ತಾರೆಂದು ತಿಳಿಯತಕ್ಕದ್ದು; ಅಥವಾ ಇವರಲ್ಲೇ ಕೆಲವರು ಪ್ರಾರಬ್ಧದ ಫಲವಾಗಿ ಪಾಪಕರ್ಮವನ್ನು ಮಾಡಿ, ಕಡೆಗೆ ಪ್ರಾರಬ್ಧನಾಶದಿಂದ ಕೊನೆಗೆ ಯಾದವಾದ್ರೀಶನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಸದ್ಗತಿಯನ್ನು ಕೂಡ ಹೊಂದಬಹುದು; ಆದರೆ ಇಂತಹ ಸಂದರ್ಭವೇನೋ ಅತಿ ವಿರಳವು. ಈ ಮೇಲಿನ ಶ್ಲೋಕದಲ್ಲಿ ಚಿತ್ತವು **ದುಷ್ಟೇಂದ್ರಿಯ ವಶವೆಂದು** ಹೇಳಲ್ಪಟ್ಟಿರುತ್ತದೆ. ಇಂದ್ರಿಯಗಳು ದುಷ್ಟವೆಂದು ಏಕೆ ಹೇಳಲ್ಪಟ್ಟಿತೆಂದರೆ, **"ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ"** (ಗೀ. ೨. ೬೦) ಅಹಂಕಾರದಿಂದ ಮದಿಸಿ ಬಲವತ್ತರವಾದ ಇಂದ್ರಿಯಗಳು ಮನಸ್ಸನ್ನು ಬಲಾತ್ಕರಿಸಿ ವಶಮಾಡಿಕೊಳ್ಳುತ್ತವೆ. ಶ್ರುತಿಯಲ್ಲಿ ಇಂದ್ರಿಯಗಳೇ ಮದಿಸಿದ ಕುದುರೆಗಳೆಂದೂ, ಮನಸ್ಸೇ ಲಗಾಮೆಂದೂ, ಬುದ್ಧಿಯೇ ಸಾರಥಿಯೆಂದೂ ಹೇಳಲ್ಪಟ್ಟಿರುತ್ತದೆ. ಬುದ್ಧಿಯು ವಿವೇಕವಿಲ್ಲದೆ ಅಶಕ್ತ ಸಾರಥಿಯಾದರೆ ಮನಸ್ಸೆಂಬ ಲಗಾಮನ್ನು ಸಡಲುವಾಗಿ ಬಿಟ್ಟು, ಈ ಆತ್ಮವನ್ನು ಹಳ್ಳಕ್ಕೆ ಕೆಡವಿಬಿಡುವುದು. ಬುದ್ಧಿಯು ವಿವೇಕವುಳ್ಳದ್ದಾದರೆ ಸುಸಾರಥಿಯಾಗಿ ಮನಸ್ಸನ್ನು ಬಿಗಿಹಿಡಿದು, ಆ ದುಷ್ಟಾಶ್ವಗಳನ್ನು ನಿರೋಧಿಸಿ, ಆತ್ಮವನ್ನು ಕಾಪಾಡುವದು ಎಂಬ ಭಾವವು.

ಆಗಲಿ, ಭಗವದ್ಭಾಗವತಾಭಿಮಾನವುಳ್ಳ ಪುಣ್ಯಕ್ಷೇತ್ರಗಳಲ್ಲೇನೋ ಭಗವದ್ಭಾಗವತ ಕೈಂಕರ್ಯಾದಿಗಳನ್ನು ನಡೆಸುತ್ತಾ ಇರಬೇಕೆಂದು ಹೇಳಲ್ಪಟ್ಟಿರುವ ಉಪದೇಶವು ಪರಮಗ್ರಾಹ್ಯವಾದುದೇನೋ ಸರಿಯೇ. ವಾಚನಿಕ ಕಾಯಿಕ ಕೈಂಕರ್ಯ ಮಾಡಲು ಶಕ್ತಿಯುಳ್ಳವರೇನೋ ಅಲ್ಲಿ ವಸಿಸತಕ್ಕದ್ದು ಯುಕ್ತವು. ಅದಕ್ಕೂ ಸಾಮರ್ಥ್ಯವಿಲ್ಲದಿರುವವರು ಅಲ್ಲಿರಬೇಕೆಂಬ ಆವಶ್ಯಕತೆಯೇನು ಎಂದಾಕ್ಷೇಪ ಬಂದೀತೆಂದು ಭಾವಿಸಿ ಅಂತಹ ಪ್ರಪನ್ನರೂ ಕೂಡ ಅಂತಹ ಭಗವದ್ಭಾಗವತಾಭಿಮಾನವುಳ್ಳ ದಿವ್ಯ ಸ್ಥಳದಲ್ಲಿ ವಸಿಸುವದರಲ್ಲಿ ಪ್ರಯೋಜನ ಉಂಟೆಂದು ತಿಳಿಸುತ್ತಾರೆ.

ಆಗ್ನೈಯರಾಲ್ - ಭಗವದ್ಭಾಗವತ ಪ್ರಿಯವಾದ ದಿವ್ಯಕ್ಷೇತ್ರದಲ್ಲಿ ವಾಸವೇ ಈ ಪ್ರಪನ್ನನಿಗೆ ಸ್ವರೂಪೋಚಿತವಾದುದರಿಂದ, **ಯತ್ಕಿಂಚಿದಪಿ ಕುರ್ವಾಣಃ** -

ವಸೇತ್ । ನ ಕಿಂಚಿದಪಿ ಕುರ್ವಾಣೋ ವಿಷ್ಣೋರಾಯತನೇ ವಸೇತ್ ॥" ಎಜ್ಞ್ಗರಪಡಿಯೇ ಪ್ರವೃತ್ತಿ ನಿವೃತ್ತಿಗಳಾಲೆ ವಲ್ಲ ಕೈಙ್ಕರ್ಯತ್ತೈಪ್ಪಣ್ಣಿಕ್ಕೊಂಡು ಭಗವದ್ಭಾಗವತಾಭಿಮಾನ ವಿಷಯಮಾನ ಸತ್ತ್ವೋತ್ತರಕ್ಷೇತ್ರತ್ತಿಲೇ ವಸಿಕ್ಕೈ ಉಚಿತಮ್.

ಏನಾದರೂ ತನಗೆ ಶಕ್ಯವಾದ ಸ್ವಲ್ಪ ಮಾನಸಿಕ ವಾಚಸಿಕ ಕಾಯಿಕ ಕೈಙ್ಕರ್ಯಗಳನ್ನು ಮಾಡುತ್ತಾ, **ವಿಷ್ಣೋರಾಯತನೇ** - ವಿಷ್ಣು ದೇವಾಲಯವಿರುವ ದಿವ್ಯದೇಶದಲ್ಲಿ, **ವಸೇತ್** - ವಸಿಸತಕ್ಕದ್ದು; "**ಕಥಂ ಚಿದುಪಕಾರೇಣ ಕೃತೇನೈಕೇನ ತುಷ್ಯತಿ**" ಎಂದು ಹೇಳಿರುವ ಹಾಗೆ ಯತ್ಕಿಂಚಿತ್ ಯಾವ ವಿಧ ಭಗವತ್ಕೈಂಕರ್ಯ ಮಾಡಿದರೂ ಶ್ರಿಯಃಪತಿಯು ಪ್ರೀತನಾಗುವನು; ಯತ್ಕಿಂಚಿತ್ ಭಾಗವತ ಕೈಂಕರ್ಯ ಮಾಡಿದರೆ, ಈತನಿಗೆ ಮುಖ್ಯವಾದ ಭಾಗವತ ಪ್ರಸನ್ನತೆಯೂ, ತನ್ಮೂಲಕ ಭಗವತ್ಪ್ರೀತಿಯೂ ಉಂಟಾಗುತ್ತದೆಂಬ ಭಾವವು. **ನಕಿಂಚಿದಪಿ ಕುರ್ವಾಣಃ** - ಹಾಗೆ ಯಾವ ವಿಧವಾದ ಅನುಜ್ಞಾ ಕೈಂಕರ್ಯಗಳನ್ನು ಮಾಡಲು ಶಕ್ತನಲ್ಲದವನಾದರೂ, **ವಿಷ್ಣೋರಾಯತನೇ ವಸೇತ್** - ಅಂತಹ ವಿಷ್ಣ್ವಾಲಯವಿರುವ ಪುಣ್ಯಸ್ಥಳದಲ್ಲೇ ವಸಿಸತಕ್ಕದ್ದು. ಯಾವ ವಿಧಿವಿಹಿತ ಪ್ರವೃತ್ತಿರೂಪ ಕೈಂಕರ್ಯಗಳನ್ನು ಮಾಡಲು ಶಕ್ತಿಯಿಲ್ಲದಿದ್ದರೂ, ಶಾಸ್ತ್ರನಿಷಿದ್ಧವಾದ ನಿವೃತ್ತಿರೂಪ ಕೈಂಕರ್ಯಗಳನ್ನಾದರೂ ಮತ್ತು ಆಜ್ಞಾ ಕೈಂಕರ್ಯಗಳನ್ನು ನಡಿಸಿಕೊಂಡಾದರೂ ವಸಿಸತಕ್ಕದ್ದು. ಆದರಿಂದಲೇ ಸರ್ವೇಶ್ವರನು ಸುಪ್ರೀತನಾಗುವನು. ಹಾಗೆ ಕೆಲವು ಕಾಲ ವಸಿಸಿದರೆ ಸ್ವಾಮಿಕೃಪೆಯುಂಟಾಗಿ ವಿಹಿತ ಅನುಜ್ಞಾ ಕೈಂಕರ್ಯಗಳನ್ನು ಮಾಡಲು ಶಕ್ತಿಯೂ ಲಭಿಸಬಹುದು ಎಂಬ ತಾತ್ಪರ್ಯವು" **ಎಜ್ಞ್ಗರಪಡಿಯೇ**-ಎಂದು ಹೇಳಿರುವ ಹಾಗೆ. **ಪ್ರವೃತ್ತಿ ನಿವೃತ್ತಿಗಳಾಲೆ** - ಶಾಸ್ತ್ರವಿಹಿತ ಪ್ರವೃತ್ತಿರೂಪ ಕೈಂಕರ್ಯಗಳಿಂದಲೂ, ಶಾಸ್ತ್ರನಿಷಿದ್ಧವಾದವುಗಳ ಪರಿತ್ಯಾಗ ರೂಪ ಕೈಂಕರ್ಯಗಳಿಂದಲೂ. **ವಲ್ಲ** - ತನಗೆ ಶಕ್ಯವಾದ, **ಕೈಙ್ಕರ್ಯತ್ತೈಪ್ಪಣ್ಣಿಕೊಂಡು** - ಕೈಂಕರ್ಯವನ್ನು ಮಾಡಿಕೊಂಡು, ಭಗವದ್ಭಾಗವತಾಭಿಮಾನಕ್ಕೆ, **ವಿಷಯಮಾನ** - ಒಳಪಟ್ಟ, **ಸತ್ತ್ವೋತ್ತರ ಕ್ಷೇತ್ರತ್ತಿಲೆ** - ಸತ್ತ್ವಗುಣ ಪ್ರಾಚುರ್ಯವುಳ್ಳ ದಿವ್ಯಕ್ಷೇತ್ರದಲ್ಲಿ, **ವಸಿಕ್ಕೈ ಉಚಿತಮ್** - ಈ ಕೃತಕೃತ್ಯ ಪ್ರಪನ್ನನಿಗೆ ಸ್ವರೂಪಯೋಗ್ಯವಾದುದು. ಈ ಮೇಲಿನ ವಾಕ್ಯದಿಂದ ಈ ಅಧಿಕಾರದ ಮುಖ್ಯಾಭಿಪ್ರಾಯವಾದ ಭಗವದ್ಭಾಗವತಾಭಿಮಾನವುಳ್ಳ ದಿವ್ಯಕ್ಷೇತ್ರವಾಸವೇ ಪ್ರಪನ್ನನಿಗೆ ಯೋಗ್ಯವಾದುದೆಂದುಪದೇಶಿಸಲ್ಪಟ್ಟಿತು.

ಆದರೆ ಮಹಾಭಾಗವತನೊಬ್ಬನಿದ್ದರೂ ಸಾಕು: ಆತನ ಸಾನ್ನಿಧ್ಯದ ಪ್ರಭಾವದಿಂದ ಅಂತಹ ಪ್ರದೇಶವೂ ಯೋಗ್ಯವಾದುದೆಂದು ಹೇಳಲ್ಪಟ್ಟಿತಲ್ಲಾ

ಗತ್ಯಭಾವೇ ಮಹಾಭಾಗವತ ಮಾತ್ರಾಧಿಷ್ಠಿತ ದೇಶಸ್ಯ ಪ್ರಾಶಸ್ತ್ಯಂ.

(೧) "ನಿಗೃಹೀತೇಂದ್ರಿಯ ಗ್ರಾಮೋ ಯತ್ರ ಯತ್ರ ವಸೇನ್ನರಃ। ತತ್ರ ತತ್ರ ಕುರುಕ್ಷೇತ್ರಂ ನೈಮಿಶಂ ಪುಷ್ಕರಂ ತಥಾ ॥" ಎನ್ರು ಶೊಲ್ಲುಗಿರವಿದು ಗತ್ಯಂತರ ಮಿಲ್ಲಾದ ಪೋದು ಏದೇನು ಮೊರು ದೇಶತ್ತಿಲೆ ವಸಿತ್ತಾಲುಮ್, ಇವರ್ಗಳ ವಾಸತ್ತಾಲೆ ಅದ್ದೇಶಮುಮ್ ಪ್ರಶಸ್ತಮಾಮೆನ್ಗೈಕ್ಕಾಗ.

ಅದರಭಿಪ್ರಾಯ ಹೇಗೆ ಎಂದು ಪ್ರಶ್ನಿಸಿದರೆ, ಸಮಾಧಾನವನ್ನು ಮುಂದಿನ ವಾಕ್ಯದಿಂದ ಹೇಳುತ್ತಾರೆ. ಬೇರೆ ಗತಿಯಿಲ್ಲದೆ, ಅಂತಹ ಪುಣ್ಯಸ್ಥಳದಲ್ಲಿ ಹೋಗಿ ವಸಿಸಲಾರದವನಿಗೆ ಹೇಳಿದ ಮಾತೇ ವಿನಾ, ಭಗವದ್ಭಾಗವತರುಗಳಿಗೆ ಪ್ರಿಯವಾದ ಪುಣ್ಯಸ್ಥಳಗಳೇ ವಾಸಯೋಗ್ಯವೆಂಬುವದೇ ಸಿದ್ಧಾಂತವೆಂದು ತಿಳಿಸುತ್ತಾರೆ.

ಗತಿಯಿಲ್ಲದ ಪಕ್ಷ ಮಹಾಭಾಗವತರು ಮಾತ್ರವಿರುವ ಸ್ಥಳಕ್ಕೆ ಪ್ರಾಶಸ್ತ್ಯವು.

"ನಿಗೃಹೀತೇಂದ್ರಿಯ ಗ್ರಾಮಃ – ನಿಗ್ರಹಿಸಲ್ಪಟ್ಟ ಇಂದ್ರಿಯಸಮೂಹಗಳುಳ್ಳ, ಇಂದ್ರಿಯಗಳು, ಕರ್ಮೇಂದ್ರಿಯಗಳು ೫, ಜ್ಞಾನೇಂದ್ರಿಯಗಳು ೫, ಮನಸ್ಸು ೧, ಹೀಗೆ ಹನ್ನೊಂದೇಯಾದರೂ, ಅವುಗಳ ಹಾವಳಿ ಹೆಚ್ಚಾದುದರಿಂದ, ಇಂದ್ರಿಯಗ್ರಾಮವೆಂಬ ಪ್ರಯೋಗವು, ಹೀಗೆ ಇಂದ್ರಿಯಗಳನ್ನು ಯಾವನು ವಶಟಲ್ಲಿಟ್ಟಿರುತ್ತಾನೋ, ಅಂತಹ, **ನರಃ** - ಮನುಷ್ಯನು, **ಯತ್ರ ಯತ್ರ ವಸೇತ್** - ಎಲ್ಲೆಲ್ಲಿ ವಸಿಸುತ್ತಾನೋ, **ತತ್ರ ತತ್ರ** - ಅಲ್ಲೆಲ್ಲಾ, ಕುರುಕ್ಷೇತ್ರವು, ನೈಮಿಶಾರಣ್ಯವು, **ತಥಾ** - ಹಾಗೆಯೇ, ಪುಷ್ಕರವೆಂಬ ಸ್ವಯಂವ್ಯಕ್ತ ಕ್ಷೇತ್ರಗಳು, ಎಂದರೆ ಹಾಗೆ ಭಾವಿಸತಕ್ಕದ್ದೆಂಬ ಭಾವವು" ಎನ್ರು - ಎಂಬದಾಗಿ, **ಶೊಲ್ಲುಗಿರವಿದು** - ಹೇಳಿರುವ ಈ ಸೂಕ್ತಿಯು, **ಗತ್ಯಂತರಮಿಲ್ಲಾದಪೋದು** - ಬೇರೆ ಗತಿಯಿಲ್ಲದಾಗ, ಎಂದರೆ ಪುಣ್ಯಸ್ಥಳವಾಸಕ್ಕೆ ಅನುಕೂಲವಿಲ್ಲದಿರುವಾಗ, **ಏದೇನು ಮೊರು ದೇಶತ್ತಿಲೆ** - ಯಾವುದಾದರೂ ಒಂದು ಬೇರೆ ಸ್ಥಳದಲ್ಲಿ ವಾಸಮಾಡಿದರೂ, **ಇವರ್ಗಳ ವಾಸತ್ತಾಲೆ** – ಈ ಇಂದ್ರಿಯನಿಗ್ರಹ ಮಾಡಿ, "ವಶೇಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ" ಎಂದು ಗೀತೆಯಲ್ಲಿ ಹೇಳಿರುವ ಹಾಗೆ ಪ್ರತಿಷ್ಠಿತವಾದ ಪ್ರಜ್ಞೆಯುಳ್ಳ ಪರಮ ಭಾಗವತನು ಅಲ್ಲಿ ವಸಿಸುವದರಿಂದ, **ಅದ್ದೇಶಮುಮ್** – ಅಂತಹ ಸ್ಥಳವೂ ಕೂಡ, **ಪ್ರಶಸ್ತಮಾಮೆನ್ಗೈಕ್ಕಾಗ** - ಯೋಗ್ಯವಾಗುವದು ಎಂದು ತಿಳಿಸುವದಕ್ಕಾಗಿ ಹೇಳಿದುದು ಎಂಬ ಭಾವವು.

---

(೧) ಇತಿಹಾಸ ಸಮುಚ್ಚಯಂ ೨೭. ೧೮.

ಇದುಕ್ಕು ಶಾಂಡಿಲೀ ವೃತ್ತಾಂತ ಮುದಾಹರಣಮಾಗ ಕ್ಕಂಡುಕೊಳ್ಳದು. ಆಗೈಯಾಲ್ (೧) "ಜ್ಞಾನಸಮಕಾಲಮುಕ್ತಾಃ ಕೈವಲ್ಯಂ ಯಾತಿ ಗತ ಶೋಕಃ। ತೀರ್ಥೇ ಶ್ವಪಚಗೃಹೇವಾ ನಷ್ಟಸ್ಮೃತಿ ರಪಿ ಪರಿತ್ಯಜ್ಯ

ಮುಂದೆ ಅಂತಹ ಮಹಾಭಾಗವತನೊಬ್ಬನಾದರೂ ಇದ್ದರೂ ಅದಕ್ಕೂ ಪ್ರಾಶಸ್ತ್ಯವುಂಟೆಂಬುವದಕ್ಕೆ ಒಂದು ಉದಾಹರಣೆಯನ್ನೀಯುತ್ತಾರೆ. **ಇದುಕ್ಕು** - ಅಂತಹ ಸ್ಥಳಕ್ಕೂ ಪ್ರಾಶಸ್ತ್ಯ ಉಂಟೆಂಬುವದಕ್ಕೆ, **ಶಾಂಡಲೀ ವೃತ್ತಾಂತ್ತಂ** - ಶಾಂಡಲೀ ಎಂಬ ಮಹಾಭಾಗವತಳ ವೃತ್ತಾಂತವನ್ನು ಉದಾಹರಣವಾಗಿ, **ಕೆಂಡುಕೊಳ್ಳದು** - ತಿಳಿದುಕೊಳ್ಳತಕ್ಕದ್ದು. ಈ ಶಾಂಡಲೀ ವೃತ್ತಾಂತವು ಅಪರಾಧ ಪರಿಹಾರಾಧಿಕಾರದಲ್ಲೂ ಶ್ರೀ ದೇಶಿಕರು ಉದಾಹರಿಸಿರುತ್ತಾರೆ. ೧೫೭೭ನೆಯ ಪುಟ ನೋಡಿ. ಶಾಂಡಿಲೀ ಎಂಬ ಮಹಾಭಾಗವತೆಯು ಸಮುದ್ರದ್ವೀಪದ ಒಂದು ಪರ್ವತದಲ್ಲಿದ್ದುದನ್ನು ಶ್ರೀ ವೈನತೇಯರು ಕಂಡು, ಇಂತಹ ಹೀನದೇಶದಲ್ಲಿರಬಹುದೇ ಎಂದು ಮನಸ್ಸಿನಲ್ಲಿ ಎಣಿಸಿದ ಅಪರಾಧದಿಂದ ಅವರ ಪಕ್ಷಗಳು ಸುಟ್ಟು ಹೋಗಿ, ಕಡೆಗೆ ಈಕೆಯ ಪ್ರಸನ್ನತೆಯಿಂದ ಪುನಃ ಪಕ್ಷಗಳು ಮೊದಲಿನಂತೆ ಉಂಟಾದವೆಂಬುವದು ಇತಿಹಾಸವು.

ಮುಂದಿನ ವಾಕ್ಯದಿಂದ ಇನ್ನೊಂದಾಕ್ಷೇಪಕ್ಕೂ ಸಮಾಧಾನ ಹೇಳುತ್ತಾರೆ. ಪ್ರಪನ್ನನಾದವನಿಗೆ ದೇಹಪರಿತ್ಯಾಗವು ಎಂತಹ ಸ್ಥಳದಲ್ಲಿಯಾದರೂ ಚಿಂತೆಯಿಲ್ಲವೆಂದು ಹೇಳಿರುವಾಗ, ಭಗವದ್ಭಾಗವತಾಭಿಮಾನವುಳ್ಳ ಪುಣ್ಯಕ್ಷೇತ್ರವೇ ಉಚಿತವಾದ ವಾಸಸ್ಥಳವೆಂದು ಹೇಗೆ ಹೇಳಬಹುದು ಎಂದರೆ ಆ ಪ್ರಮಾಣವನ್ನುದಾಹರಿಸಿ ಅದಕ್ಕೆ ಸರಿಯಾದಭಿಪ್ರಾಯವನ್ನು ತಿಳಿಸುತ್ತಾರೆ

ಆಗೈಯಾಲೇ - ಗತ್ಯಂತರವಿಲ್ಲದಿರುವ ಸಂದರ್ಭದಲ್ಲಿ ಹೀನದೇಶ ವಾಸವೇ ಮಹಾಭಾಗವತನೊಬ್ಬನಿರುವದರಿಂದ ಪ್ರಶಸ್ತವೆಂದಾಗುವದರಿಂದ, ಹಾಗೆಯೇ, **"ಜ್ಞಾನಸಮಕಾಲಂ** – ಚನ್ನಾಗಿ ಜ್ಞಾನವಿರುವ ಸುಸಮಯದಲ್ಲೇ, **ಉಕ್ತ್ವಾ** - ದ್ವಯಮಂತ್ರವನ್ನುಚ್ಚರಿಸಿ, ಎಂದರೆ ಶರಣಾಗತಿಯನ್ನು ಮಾಡಿ, **ಗತಶೋಕಃ** - ಏನೊಂದೂ ದುಃಖವಿಲ್ಲದವನಾಗಿ, **ತೀರ್ಥೇ** - ಗಂಗಾ ಪ್ರಯಾಗಾದಿ ಮಹಾತೀರ್ಥಗಳಿರುವ ಸ್ಥಳದಲ್ಲಾಗಲಿ, **ಶ್ವಪಚಗೃಹೇವಾ** - ಚಂಡಾಲಗೃಹದಲ್ಲೇಯಾಗಲಿ, **ನಷ್ಟಸ್ಮೃತಿರಪಿ** – ಸಾಯುವಾಗ ಪ್ರಜ್ಞೆಯೇ ಇಲ್ಲದಿದ್ದರೂ ಕೂಡ, **ದೇಹಂ ಪರಿತ್ಯಜ್ಯ** - ದೇಹತ್ಯಾಗವನ್ನು ಮಾಡಿದರೂ, **ಕೈವಲ್ಯಂ** - ಇಲ್ಲಿ ಕೈವಲ್ಯವು ಮೋಕ್ಷವೆಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ, ಮೋಕ್ಷವನ್ನು,

(೧) ವರಾಹ ಪುರಾಣ.

ದೇಹಮ್ ॥" ಎನ್ರು ಶರೀರ ಪಾತತ್ತುಕ್ಕು ಒರುದೇಶ ವಿಶೇಷನಿಯಮು ಮಿಲ್ಲೈ ಎನ್ರದುವುಮ್ ಎಪ್ಪಡಿಕ್ಕುಮ್ ಫಲತ್ತಿಲ್ ಇಳವಿಲ್ಲೈ ಯೆನ್ಗೈ ಕ್ಕಾಗ.

ಯಾತಿ - ಹೊಂದುತ್ತಾನೆ" ಎನ್ರು-ಎಂಬದಾಗಿ, **ಶರೀರಪಾತತ್ತುಕ್ಕು** - ದೇಹ ತ್ಯಾಗಕ್ಕೆ, **ಒರುದೇಶ ವಿಶೇಷ ನಿಯಮುಮ್** - ಒಂದು ದಿವ್ಯದೇಶ ಸ್ಥಳವಾಗಿರ ಬೇಕೆಂಬ ಆವಶ್ಯಕತೆಯು, **ಇಲ್ಲೈ** - ಇಲ್ಲವು, **ಎನ್ರುದುವುಮ್** - ಎಂಬುವದೂ ಕೂಡ, **ಎಪ್ಪಡಿಕ್ಕುಮ್** - ಹೇಗೇಯಾಗಲಿ, **ಫಲತ್ತಿಲ್** - ಫಲದಲ್ಲಿ, **ಇಳ ವಿಲ್ಲೈ** - ಸಂಶಯವಿಲ್ಲವು, **ಯೆನ್ಗೈಕ್ಕಾಗ** - ಎಂದು ಹೇಳುವದಕ್ಕಾಗಿ, ಹೇಳಿದ ಮಾತಾಗಿದೆ ಎಂಬ ಭಾವವು. ಮೇಲಿನ ವರಾಹಪುರಾಣ ಶ್ಲೋಕವು, ಪ್ರಪನ್ನನು ಎಲ್ಲಿಯೇ ಮರಣ ಹೊಂದಲಿ, ಪುಣ್ಯಸ್ಥಳಗಳಲ್ಲೇಯಾಗಲಿ, ಚಂಡಾಲಗೃಹದಲ್ಲೇ ಯಾಗಲಿ, ಪ್ರಜ್ಞೆಯಿದ್ದು ಹರಿಸ್ಮರಣೆ ಮಾಡುತ್ತಲೇಯಾಗಲಿ, ಅಥವಾ ಪ್ರಜ್ಞೆ ಇಲ್ಲದೇನೇಯಾಗಲಿ ದೇಹತ್ಯಾಗ ಮಾಡಿದರೂ ಮೋಕ್ಷಪ್ರಾಪ್ತಿಯಲ್ಲಿ ಏನೂ ಸಂಶಯವಿಲ್ಲವೆಂದು ಹೇಳಿತೇ ವಿನಾ, ಪ್ರಪನ್ನನಿಗೆ ವಾಸಯೋಗ್ಯ ಸ್ಥಳವೆಂಬ ಪ್ರಶಂಸೆಯಲ್ಲಿ ಹೇಳಿದ ವಾಕ್ಯವಲ್ಲವು. ಎಂತಹ ಅವಸ್ಥೆಯಲ್ಲೇಯಾಗಲಿ ಎಂತಹ ಪ್ರದೇಶದಲ್ಲೇಯಾಗಲಿ ಮರಣವಾದರೂ, ಪ್ರಪನ್ನನಿಗೆ ಅನಂತರ ಮೋಕ್ಷಪ್ರಾಪ್ತಿ ಎಂಬುವದು ಸಿದ್ಧವೆಂಬ ಭಾವವು ಪ್ರಪನ್ನನ ದೇಹತ್ಯಾಗಕ್ಕೆ ದೇಶಕಾಲನಿಯಮ ಗಳೇನೂ ಇಲ್ಲವೆಂದು ಛಾಂದೋಗ್ಯದಲ್ಲಿ ಹೇಳಲ್ಪಟ್ಟಿರುತ್ತದೆ. **"ಸ್ವಯಂವ್ಯಕ್ತ ಕ್ಷೇತ್ರೇ ವಿಪಿನ ವಿಷಯೇವಾ ವಿಧಿವಶಾತ್ಪ್ರಶಸ್ತೇ ದುಷ್ಟೇವಾ ಕ್ವಚನ ಸಮ ಯೇ ತ್ಯಕ್ತ ವಪುಷಃ। ಮುಕುಂದ ಸ್ತ್ರಯ್ಯಂತ ಪ್ರಥಿತಮಹಿಮಾಸೋಯ ಮನಘಾ ಪ್ರಪನ್ನಾನುದ್ಧೃತ್ಯ ಸ್ವಪದ ಮನಪಾಯಂ ಗಮಯತಿ ॥"** ಎಂಬ ಶ್ಲೋಕವೂ ಈ ಮೇಲಿನ ಅಭಿಪ್ರಾಯವನ್ನೇ ಸಮರ್ಥನೆ ಮಾಡುತ್ತದೆ. "ದೋಷರಹಿತರಾದ ಪ್ರಪನ್ನರು ಸ್ವಯಂವ್ಯಕ್ತ ಕ್ಷೇತ್ರದಲ್ಲೇ ಆಗಲಿ ಅಥವಾ ಒಂದು ಅರಣ್ಯಪ್ರದೇಶದಲ್ಲೇಯಾಗಲಿ, ಪ್ರಶಸ್ತವಾದ ಸ್ಥಳದಲ್ಲೇ ಆಗಲಿ, ದುಷ್ಟ ವಾದ ಸ್ಥಳದಲ್ಲೇಯಾಗಲಿ, ಎಲ್ಲಿಯಾದರೂ ಒಂದು ಕಡೆ ಮರಣಕಾಲದಲ್ಲಿ ದೇಹ ಬಿಟ್ಟವರಾಗಲು, ಅವರನ್ನ ವೇದಗಳಲ್ಲಿ ಶ್ಲಾಘಿಸಲ್ಪಟ್ಟ ಮಹಿಮೆಯುಳ್ಳ ಅಂತಹ ಈ ಮುಕ್ತಿದಾಯಕನು ತನ್ನ ಸ್ಥಾನವಾದ ದಿವ್ಯ ವೈಕುಂಠವನ್ನು ಏನೊಂದೂ ವಿಘ್ನ ವಿಲ್ಲದೆ ಸೇರಿಸುವನು" ಎಂಬುವದು ಈ ಶ್ಲೋಕಾಭಿಪ್ರಾಯವು. ಈ ವಾಕ್ಯದಲ್ಲಿ "ಶರೀರಪಾತತ್ತುಕ್ಕು" ಎಂಬ ಪ್ರಯೋಗದಿಂದ ಮುಂದಿನ ಅಧಿಕಾರವಾದ ನಿರ್ಯಾಣಾಧಿಕಾರವು ಸೂಚಿತವಾಯಿತು.

ವಾಸಯೋಗ್ಯ ಪ್ರಧಾನ ದಿವ್ಯಕ್ಷೇತ್ರಾಣ್ಯಾಹುಃ.

ಆರಾದ ಪರುಳ ಮುದಮ್ ಪೊದಿನ್ದ ಕೋಯಿಲನ್ಬುಯತ್ತೋ ನಯೋದ್ಧಿಮನ್ನರ್ಕ್ಕಳಿತ್ತ ಕೋಯಿಲ್ । ತೋರಾದ ತನಿವೀರ್ರ ತೊ ಳುದ ಕೋಯಿಲ್ತುಣೈಯಾನ ವೀಡಣರ್ಕ್ಕು ತ್ತುಣೈಯಾಮ್ ಕೋಯಿಲ್॥ ಶೇರಾದ ಪಯನೆಲ್ಲಾಮ್ ಶೇರ್ಕ್ಕುಮ್ ಕೋಯಿಲ್ ಶೆಳುಮರೈಯಿರ ಮುದಲೆಳತ್ತು ಚೇರ್ನ್ದ ಕೋಯಿಲ್ । ತೀರಾದ ವಿನೈಯನೈತ್ತುಮ್

ವಾಸಯೋಗ್ಯವಾದ ಮುಖ್ಯ ದಿವ್ಯಕ್ಷೇತ್ರಗಳು ಯಾವುವೆಂದು ತಿಳಿಸುತ್ತಾರೆ.

ಮುಂದೆ ಮೂರು ಪಾಶುರಗಳಿಂದ ಪ್ರಪನ್ನನಿಗೆ ತುಂಬಾ ಪ್ರಿಯತಮಗಳಾದ ಮೂರು ಮಹಾಕ್ಷೇತ್ರಗಳನ್ನು ವರ್ಣಿಸುತ್ತಾರೆ. ಅವುಗಳಲ್ಲಿ ಸ್ವಯಂವ್ಯಕ್ತವಾದ ಶ್ರೀರಂಗ ವಿಮಾನ ಕ್ಷೇತ್ರವು ತುಂಬಾ ಮುಖ್ಯವಾದುದಾಗಿ, ಆ ಕಾರಣದಿಂದಲೇ ಶ್ರೀ ಯತಿವರ್ಯರು ಗದ್ಯದಲ್ಲಿ "ಅತ್ರೈವ ಶ್ರೀರಙ್ಗೇ ಸುಖಮಾಸ್ವ" ಎಂದು ಹೇಳಿರುವದರಿಂದ, ಹೀಗೆ ಅನೇಕ ಆಳ್ವಾರ್ ಆಚಾರ್ಯರುಗಳಿಗೆ ತುಂಬಾ ಪ್ರಿಯ ವಾದುದರಿಂದ, ಅದರ ಮಹಿಮೆಯನ್ನು ಕೊಂಡಾಡುತ್ತಾರೆ :—

ಅರ್ಥ :—ಆರಾದ - ಎಷ್ಟಾದರೂ ಸಾಕೆಂದೆನಿಸದ, **ಅರುಳ್** - ಕೃಪೆ ಯೆಂಬ, **ಅಮುದಮ್** - ಅಮೃತವು, **ಪೊದಿನ್ದ** - ತುಂಬಿ ಪ್ರವಹಿಸುವ, **ಕೋಯಿಲ್** - ವಿಮಾನವು, **ಕೋರ** ಎಂದರೆ ಸ್ವಾಮಿಯು, **ಇಲ್** - ಎಂದರೆ ಇರುವ ಸ್ಥಾನವು, ಆದುದರಿಂದ **ಕೋಯಿಲ್** ಎಂದರೆ ದೇವಾಲಯವು; **ಅನ್ಬುಯತ್ತೋರ** - ಅಂಬುಜಾಸನನಾದ ಚತುರ್ಮುಖನು, **ಅಯೋದ್ಧಿಮನ್ನರ್ಕು** - ಅಯೋಧ್ಯೆಯ ರಾಜರುಗಳಿಗೆ, **ಅಳಿತ್ತ** - ದಯಪಾಲಿಸಿದ, **ಕೋಯಿಲ್** - ದೇವಾಲಯವು, **ತೋರಾದ** - ಜಯಿಸಲಸಾಧ್ಯನಾದ, **ತನಿವೀರ್ರ** - ಅದ್ವಿತೀಯ ವೀರನಾದ ಶ್ರೀರಾಮನಿಂದ, **ತೊಳುದ ಕೋಯಿಲ್** - ಆರಾಧಿಸಲ್ಪಟ್ಟ ದೇವಾ ಲಯವು; **ತೊಣೆಯಾನ** - ಸಹಾಯಕನಾದ, **ವೀಡಣರ್ಕ್ಕು** - ವಿಭೀಷಣನಿಗೆ, **ತುಣೈಯಾಂ** - ಸಂಸಾರ ಭಯನಿವೃತ್ತಿಗೆ ಸಹಾಯಭೂತವಾದ, **ಕೋಯಿಲ್**- ದೇವಾಲಯವು; **ಶೇರಾದ**-ಪಡೆಯಲು ಕಷ್ಟವಾದ, **ಪಯನೆಲ್ಲಾಮ್**-ಚತುರ್ವಿಧ ಪುರುಷಾರ್ಥಗಳನ್ನೆಲ್ಲಾ, **ಶೇರ್ಕ್ಕುಂ ಕೋಯಿಲ್** - ಸೇರಿಸುವ ಎಂದರೆ ಉಂಟುಮಾಡುವ ದೇವಸ್ಥಾನವು; **ಶೆಳು** - ಶ್ಲಾಘ್ಯವಾದ ಅಥವಾ ಸಮೃದ್ಧಿ ಯಾದ ಎಂದರೆ ಅನಂತಗಳಾದ, **ಮರೈಯಿರ** - ವೇದಗಳ, **ಮುದಲೆಳತ್ತು** -

ತೀರಕ್ಕುನುಮ್ ಕೋಯಿಲ್, ತಿರುವರಙ್ಗಮೆನ ತ್ತಿಕಳುನ್ ಕೋಯಿಲ್ ತಾನೇ ॥

ಪ್ರಥಮಾಕ್ಷರನಾದ ಪ್ರಣವವು, ಚೇರ್ನ್ದ ಕೋಯಿಲ್ - ಸೇರಿರುವ ದೇವಾಲಯವು; ತೀರಾದ - ಪ್ರಾಯಶ್ಚಿತ್ತ ಮೂಲಕವಾಗಲಿ ಅಥವಾ ಅನುಭವಿಸಿಯಾಗಲಿ ಹೋಗಲಾಡಿಸಲು ಸಾಧ್ಯವಲ್ಲದ, ಐನ್ನೈ - ಪಾಪಗಳ, ಅನೈತ್ತುಮ್ - ಸಮಸ್ತವನ್ನು, ತೀರ್ಕುಮ್ ಕೋಯಿಲ್-ಹೋಗಲಾಡಿಸುವ ದೇವಾಲಯವು; ತಿರುವರಙ್ಗಮೆನ - ಶ್ರೀರಂಗವೆನ್ನುವ, ತಿಗಳುಮ್ - ಪ್ರಕಾಶಿಸುತ್ತಿರುವ, ಕೋಯಿಲ್ ತಾನೇ - ದೇವಾಲಯುವಷ್ಟೇ.

ತಾತ್ಪರ್ಯ :—ಶ್ರೀರಂಗಕ್ಷೇತ್ರ ಮಾಹಾತ್ಮ್ಯವನ್ನು ಪ್ರಥಮತಃ ಶ್ಲಾಘಿಸಲು ಕಾರಣವೇನೆಂದು ಪ್ರಶ್ನಿಸಬಹುದು. (೧) "**ಆದ್ಯಂ ಸ್ವಯಮ್ವ್ಯಕ್ತಂ ವಿಮಾನಂ ರಙ್ಗಸಂಜ್ಞಕಂ**" ಎಂದು ಸ್ವಯಂವ್ಯಕ್ತ ಸ್ಥಳಗಳಲ್ಲಿ ಆದಿ ಎಂದು ಹೇಳಿರುವದರಿಂದಲೂ, (೨) ಅದು ಅನೇಕ ಆಳ್ವಾರ್ ಆಚಾರ್ಯರುಗಳು ಅಭಿಮಾನಿಸಿದ ದಿವ್ಯ ಸ್ಥಳವಾದುದರಿಂದಲೂ, (೩) ನಮ್ಮ ಸಿದ್ಧಾಂತಸ್ಥಾಪಕರಾದ ಯತಿವರ್ಯರಿಗೆ ಬಹು ಪ್ರಿಯವಾದ ಸ್ಥಳವಾಗಿ, ಗದ್ಯದಲ್ಲಿ "**ಯಾವಚ್ಛರೀರಪಾತಮತ್ರೈವ ಶ್ರೀರಙ್ಗೇ ಸುಖಮಾಸ್ವ**" ಎಂದು ಹೇಳಿರುವದರಿಂದಲೂ, ದಿವ್ಯಕ್ಷೇತ್ರಗಳಲ್ಲಿ ಶ್ರೀರಂಗವಿಮಾನವು ತುಂಬಾ ಪ್ರಧಾನವೆಂದು ಭಾವಿಸಿ ಮೊದಲು ವರ್ಣಿಸುತ್ತಾರೆ.

ಆರಾದ ವರುಳ ಮುದವನ್ ಪೊದಿನ್ದ ಕೋಯಿಲ್ - ಇಲ್ಲಿ **ಆರಾದ** ಎಂಬುವದು ಅರುಳ್ ಎಂಬುವದಕ್ಕೆ ವಿಶೇಷಣವಾಗಿಯಾದರೂ, ಅಥವಾ **ಅಮುದನ್** ಎಂಬುವದಕ್ಕೆ ವಿಶೇಷಣವಾಗಿಯಾದರೂ, ಭಾವಿಸಬಹುದು. ಮೊದಲನೆಯ ಯೋಜನೆಯಾದರೆ, ಶ್ರೀರಂಗನಾಥನ ಕೃಪಾಪೀಯೂಷಪ್ರವಾಹವು, ಆರಾದ ಎಂದರೆ ಎಂದಿಗೂ ಬತ್ತಿಹೋಗದೇ ಇರುವಂಥಾದ್ದು ಎಂದೂ ಅರ್ಥ ಮಾಡಬಹುದು. ಆ ಕೃಪೆಯು ಅನೇಕ ಚೇತನರಿಗಾಗಿ ಉಪಯೋಗಿಸಲ್ಪಟ್ಟರೂ ಸ್ವಲ್ಪವಾಗಲಿ ಕಮ್ಮಿಯಾಗತಕ್ಕದ್ದಲ್ಲವು; ಅಥವಾ ಎರಡನೆಯ ಯೋಜನೆಯಲ್ಲಿ **ಅರುಳಮುದನ್** ಎಂದು ಕೃಪಾಮೃತರೂಪನಾದ ಶ್ರೀರಂಗನಾಥನೆಂದು ಹೇಳಿ ಆತನಿಂದ ತುಂಬಿರುವ ಕೋಯಿಲೆಂಬ ಅರ್ಥ ಹೇಳಿದರೆ, ಆತನನ್ನು ಎಷ್ಟು ಸೇವಿಸಿದರಾಗಲಿ, ಅನುಭವಿಸಿದರಾಗಲಿ. ನೋಡಿದರಾಗಲಿ ತೃಪ್ತಿಯೇ ಆಗುವದಿಲ್ಲವೆಂದೂ, ದೃಷ್ಟಿಗೆ ಆಸೇಚನಕವೆಂದೂ ಹೇಳಬಹುದು. ಆಸೇಚನಕವೆಂದರೆ "**ತದಾಸೇಚ**

ನಕೇಂ ತೃಪ್ತೇರ್ನಾಸ್ತ್ಯನ್ತೋ ಯಸ್ಯದರ್ಶನಾತ್" ಯಾವ ಪ್ರಿಯವಸ್ತುವನ್ನು ಎಷ್ಟು ನೋಡಿದರೂ ತೃಪ್ತಿಯಾಗದೆ ನೋಡುತ್ತಲೇ ಇರಬೇಕೆಂಬ ಆಶೆಯುಂಟಾಗುತ್ತದೋ ಅದು. ಇಲ್ಲಿ ಅಮುದನ್ ಎಂದು ಹೇಳಿರುವುದರ ಅಭಿಪ್ರಾಯವು, ಸಂಸಾರತಾಪತಪ್ತರಾದವರಿಗೆ ಪರಮಶಾಂತಿಯನ್ನೂ ನಿರ್ಭಯವನ್ನೂ ಕೊಡುವಂಥಾದ್ದು ಈ ರಂಗವಿಮಾನವು ಎಂಬದಾಗಿ ತೋರುತ್ತದೆ.

ಅಯೋಧ್ಯಿಮನ್ನರ್‌ಕ್ಕಳಿತ್ತ ಕೋಯಿಲ್ — ಈ ರಂಗವಿಮಾನವು ಇಕ್ಷ್ವಾಕು ವಂಶೀಯರಿಂದ ಆರಾಧಿಸಲ್ಪಟ್ಟಿದ್ದು. ಪಾದ್ಮಪುರಾಣದಲ್ಲಿ "ಯಾವಚ್ಚಂದ್ರಶ್ಚ ಸೂರ್ಯಶ್ಚ ಯಾವತ್ತಿಷ್ಠತಿ ಮೇದಿನೀ। ತಾವದ್ರಮಸ್ವ ರಾಜ್ಯಸ್ಥಃ ಕಾಲೇ ಮಮಪದಂ ವ್ರಜ। ಇತ್ಯುಕ್ತ್ವಾ ಪ್ರದದೌ ತಸ್ಮೈ ಸ್ವವಿಶ್ಲೇಷಾಸಹಿಷ್ಣವೇ। ಶ್ರೀರಙ್ಗಶಾಯಿನಂ ಸ್ವಾರ್ಚ್ಯಮಿಕ್ಷ್ವಾಕುಕುಲದೈವತಂ। ರಙ್ಗಂ ವಿಮಾನಮಾದಾಯ ಲಂಕಾಂ ಪ್ರಾಯಾದ್ವಿಭೀಷಣಃ" ಎಂಬ ಶ್ರೀರಾಮಚಂದ್ರೋಕ್ತಿಯು ಇರುವುದರಿಂದ, ಇದು ಅಯೋಧ್ಯೆಯ ರಾಜರಾದ ಇಕ್ಷ್ವಾಕು ಕುಲದವರಾರಾಧಿಸಿದ ಪರದೇವತೆಯು. ಈ ಶ್ಲೋಕಗಳಭಿಪ್ರಾಯವೇನೆಂದರೆ:—"ಓ ವಿಭೀಷಣನೇ, ಎಲ್ಲಿಯವರೆಗೂ ಸೂರ್ಯಚಂದ್ರರೂ ಭೂಮಿಯೂ ಇರುತ್ತವೆಯೋ ಅದುವರೆಗೂ ನೀನು ರಾಜ್ಯದಲ್ಲಿರುವವನಾಗಿ ವಿಹರಿಸು ಎಂದು ಹೇಳಿ ಶ್ರೀರಾಮನು ತನ್ನಿಂದ ಪೂಜಿಸಲ್ಪಟ್ಟ ಇಕ್ಷ್ವಾಕು ಕುಲದೇವತೆಯಾದ ಶ್ರೀರಂಗಶಾಯಿಯು ಇರುವ ರಂಗವಿಮಾನವನ್ನು ಆತನಿಗೆ ಕೊಟ್ಟನು. ಆ ವಿಮಾನವನ್ನು ತೆಗದುಕೊಂಡು ವಿಭೀಷಣನು ಲಂಕೆಯನ್ನು ಸೇರಿದನು" ಎಂದು ಹೇಳಲ್ಪಟ್ಟಿರುತ್ತದೆ. ಆದರೆ ಶ್ರೀಮದ್ರಾಮಾಯಣದಲ್ಲಿ ಶ್ರೀರಾಮಪಟ್ಟಾಭಿಷೇಕ ಸರ್ಗದಲ್ಲಿ "ಲಬ್ಧ್ವಾ ಕುಲಧನಂ ರಾಜಾ ಲಂಕಾಂ ಪ್ರಾಯಾದ್ವಿಭೀಷಣಃ" ಎಂದು ಇರುವುದರಿಂದ, ಇಲ್ಲಿ ಯಾವ ಕುಲಧನವೆಂದು ಸರಿಯಾಗಿ ಹೇಳದಿರುವುದರಿಂದ ಗೋವಿಂದ ರಾಜರೇ ಮೊದಲಾದವರು, ಇಕ್ಷ್ವಾಕು ಕುಲಧನವೆಂದೇ ಅರ್ಥಮಾಡಿ ಇಕ್ಷ್ವಾಕು ವಂಶೀಯರಿಂದ ಆರಾಧಿತನಾದ ಶ್ರೀರಂಗನಾಥನೆಂದು ಅರ್ಥ ಮಾಡಿರುತ್ತಾರೆ. ಶ್ರೀಮಾಹೇಶ್ವರತೀರ್ಥರಾದರೋ "ಕಿಂಚಾನ್ಯದ್ವಕ್ತುಮಿಚ್ಛಾಮಿ ರಾಕ್ಷಸೇಂದ್ರ ಮಹಾಬಲ। ಆರಾಧಯ ಜಗನ್ನಾಥಮಿಕ್ಷ್ವಾಕು ಕುಲದೈವತಂ॥" ಎಂದು ಉತ್ತರಕಾಂಡದಲ್ಲಿರುವುದರಿಂದ ಅವತಾರ ಸಮಾಪ್ತಿ ಕಾಲದಲ್ಲಿ ಈ ಇಕ್ಷ್ವಾಕು ಕುಲದೈವತರನ್ನು ಕೊಟ್ಟನೇ ವಿನಾ ಪಟ್ಟಾಭಿಷೇಕ ಸಮಯದಲ್ಲಿ ಇವನ್ನು ಕೊಡಲಿಲ್ಲವು; ಆದುದರಿಂದ, ಲಬ್ಧ್ವಾ ಕುಲಧನಂ, ಎಂದರೆ ವಿಭೀಷಣನ ಕುಲಧನವೆಂದಿಟ್ಟುಕೊಂಡು ಲಂಕಾರಾಜ್ಯವನ್ನು ಕೊಟ್ಟರು ಎಂದು ಹೇಳಬೇಕೆಂದು ತಿಳಿಸುತ್ತಾರೆ. ಈ ಅಭಿಪ್ರಾಯವು ಸರಿಯಾಗಿ ತೋರುವುದಿಲ್ಲವು. ಏಕೆಂದರೆ, ಲಂಕಾ ರಾಜ್ಯವಿಷಯದಲ್ಲಿ ಸಮುದ್ರ

ತರಣಕ್ಕೆ ಮುಂಚೆಯೇ ಲಂಕಾ ರಾಜ್ಯಾಭಿಷೇಕಮಾಡಿ, ಅದು ಹೇಗಾದರೂ ನೆರ ವೇರಬೇಕೇ ಎಂದು ಕಾದಿದ್ದು, ರಾವಣವಧಾ ನಂತರ ಲಂಕಾ ರಾಜ್ಯದಲ್ಲಿ ಆತ ನನ್ನು ಸುಪ್ರತಿಷ್ಠಿತನಾಗಿರುವದಕ್ಕಾಗಿ ಪುನಃ ರಾಜ್ಯಾಭಿಷೇಕ ಮಾಡಿಬಿಟ್ಟ ನಂತರ, ಪುನಃ ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲೂ ಅದನ್ನೇ ಕೊಟ್ಟನೆಂದರೆ, ಎಷ್ಟು ಸಲ ಒಂದೇ ಪದಾರ್ಥವನ್ನು ದಾನಮಾಡುವದು ಎಂಬಾಕ್ಷೇಪಕ್ಕೆ ಉತ್ತರವಿಲ್ಲದಾ ಗುತ್ತದೆ. ಅದೂ ಅಲ್ಲದೆ ಪಟ್ಟಾಭಿಷೇಕ ಕಾಲದಲ್ಲಿ ವಿಭೀಷಣನಿಗೆ ಏನನ್ನೂ ಕೊಟ್ಟು ಸನ್ಮಾನಿಸಲಿಲ್ಲವೆಂದೂ ಆಗುತ್ತದೆ. ಉತ್ತರ ರಾಮಾಯಣದಲ್ಲಿ ಹೇಳಿರು ವದೇನೆಂದರೆ :—"ಶಾಸಿತಸ್ತ್ವಂ ಸಖಿತ್ವೇನ ಕಾರ್ಯಂತೇ ಮಮ ಶಾಸನಂ । ಪ್ರಜಾಸ್ಸಂರಕ್ಷ ಧರ್ಮೇಣ ನೋತ್ತರಂ ವಕ್ತುಮರ್ಹಸಿ ॥" ಎಂದರೆ ನೀನು ನನ್ನಲ್ಲಿ ಹಿಂದೆ ಶರಣಾಗತಿ ಮಾಡಿ ಪರಮಪ್ರಪನ್ನನಾದುದರಿಂದ ನಿನ್ನನ್ನು ಪರಮ ಸಖನಾಗಿ ಭಾವಿಸುವೆನು, ಧರ್ಮಸಂಸ್ಥಾಪನೆಗಾಗಿ ನಾನು ಅವತರಿಸಿದವನಾದುದರಿಂ ದಲೂ ರಾಕ್ಷಸರಲ್ಲಿ ಧರ್ಮವು ಕಮ್ಮಿಯಾಗಿರುವದರಿಂದಲೂ, ನೀನು ಮಹಾಪ್ರಾಜ್ಞ ನಾಗಿ ಧರ್ಮಿಷ್ಠನಾದುದರಿಂದಲೂ, ಪ್ರಜಾಸ್ಸಂರಕ್ಷ ಧರ್ಮೇಣ, ಅಲ್ಲಿ ಪ್ರಜೆಗಳಾದ ರಾಕ್ಷಸರನ್ನು ಧರ್ಮದಿಂದ ಪರಿಪಾಲಿಸು, ನೀನು ನನ್ನನ್ನು ಬಿಟ್ಟಿರಲಾರೆ ಎಂಬುವದು ನನಗೆ ತಿಳಿಯುವದು ಆದರೂ ನಾನು ಹೇಳಿರುವದನ್ನು ನನ್ನ ಆಜ್ಞೆಯೆಂದು ಭಾವಿಸು. ಇದಕ್ಕೆ ಬದಲು ಹೇಳಬೇಡವೆಂದು ಹೇಳಿ, ಅನಂತರ "ಆರಾಧಯ ಜಗನ್ನಾಥ ಮಿಕ್ಷ್ವಾಕು ಕುಲದೈವತಂ । ಆರಾಧನೀಯ ಮನಿಶಂ ಸರ್ವೈ ರ್ದೇವೈ ಸ್ಸವಾಸವೈಃ ॥" ತಾವು ಕೊಟ್ಟ ಇಕ್ಷ್ವಾಕು ಕುಲಕ್ಕೆ ದೈವವಾದ, ಜಗ ತ್ತಿಗೆಲ್ಲಾ ನಾಥನಾದ. ಶ್ರೀರಂಗನಾಥನನ್ನು ಆರಾಧಿಸು, ಹಾಗೆ ಆರಾಧಿಸುವದ ರಿಂದ ನನ್ನೊಂದಿಗೆ ಇದ್ದು ನನ್ನನ್ನಾರಾಧಿಸಿದಂತೆ ಭಾವಿಸುವೆನೆಂಬಭಿಪ್ರಾಯವು. ಆ ಶ್ರೀರಂಗನಾಥನಾದರೋ ಅನಿಶಂ - ಯಾವಾಗಲೂ, ಸಮಸ್ತರಿಂದಲೂ ಇಂದ್ರನಿಂದೊಡಗೂಡಿದ ಸಮಸ್ತ ದೇವತೆಗಳಿಂದಲೂ ಆರಾಧಿಸಲು ಯೋಗ್ಯನಾದ ವನೆಂದು ಇಷ್ಟು ಮಾತ್ರ ಹೇಳಿರುವದರಿಂದ, ಇಲ್ಲಿಯೇ ಇದ್ದುಕೊಂಡು ಇಕ್ಷ್ವಾಕು ಕುಲದವರಿಗೆ ಸ್ವಾಮಿಯಾದ ಶ್ರೀರಂಗನಾಥನನ್ನು ಆರಾಧಿಸು ಎಂದು ಹೇಳಿದರೆ, ಆಗ ಕೊಟ್ಟಿರಬ ಮಹೇಶತೀರ್ಥರಭಿಪ್ರಾಯಕ್ಕೆ ಆಧಾರವಿಲ್ಲವು. ಪಾದ್ಮ ಪುರಾಣದಲ್ಲಿ ಹಾಗೆ ಹೇಳಿದೆಯಲ್ಲಾ ಎಂದರೆ ರಾಮಾಯಣಕ್ಕೆ ವಾಲ್ಮೀಕಿ ರಾಮಾ ಯಣವೇ ಮುಖ್ಯಾಧಾರವಾದುದರಿಂದ ಇತರ ರಾಮಾಯಣಗಳ ಪ್ರಶಂಸೆ ಬೇಕಿ ಲ್ಲವು. ಅದರೆ ಪಾದ್ಮಪುರಾಣದಿಂದ ಗ್ರಹಿಸತಕ್ಕ ಅಂಶವೇನೆಂದರೆ, ಇಕ್ಷ್ವಾಕು ಕುಲನಾಥನು ಶ್ರೀರಂಗನಾಥನೆಂಬಾದದು ತೋರಿಬರುತ್ತದೆ.

ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಿ ಈ ಇಕ್ಷ್ವಾಕು ಕುಲನಾಥನು ಶ್ರೀ ರಂಗನಾಥನೆಂದು ಸಾಕ್ಷಾತ್ತಾಗಿ ಹೇಳಿಲ್ಲವು. ಅಲ್ಲಿ ಉಪಯೋಗಿಸಿದ ಪದ:

ನಾರಾಯಣ, ಜಗನ್ನಾಥ ಶಬ್ದಗಳು. ಆರಾಧಯ ಜಗನ್ನಾಥಂ ಎಂದು ಶ್ರೀರಾಮನೇ ಹೇಳಿರುವದರಿಂದ, ಇಕ್ಷ್ವಾಕು ಕುಲನಾಥನು ಜಗನ್ನಾಥನೆಂದು ಹೇಳಲ್ಪಟ್ಟಿರುತ್ತದೆ. ಅಯೋಧ್ಯಾಕಾಂಡದಲ್ಲಿ ಶ್ರೀರಾಮನಿಗೆ ಯೌವರಾಜ್ಯಾಭಿಷೇಕವು ನಾಳೆ ನಡೆಯುತ್ತದೆಂದು ಕೇಳಿ **"ಪ್ರಾಣಾಯಾಮೇನ ಪುರುಷಂ ಧ್ಯಾಯಮಾನಾ ಜನಾರ್ದನಂ"** ಎಂದು ಕೌಸಲ್ಯೆಯು ಜನಾರ್ದನನನ್ನು ಆರಾಧಿಸಿದಳೆಂದು ಹೇಳಿರುತ್ತದೆ (ಅಯೋಧ್ಯಾ. ೪. ೩೩). ಹಾಗೆಯೇ ಇನ್ನೊಂದುಕಡೆಯಲ್ಲಿ ಕೌಸಲ್ಯೆಯು **"ಪ್ರಭಾತೇತ್ವಕರೋತ್ಪೂಜಾಂ ವಿಷ್ಣೋಃ ಪುತ್ರ ಹಿತೈಷಿಣೀ"** (ಅಯೋಧ್ಯಾ ೨೦. ೧೫) ಪುತ್ರನಿಗೆ ಸರ್ವಶ್ರೇಯಸ್ಸುಂಟಾಗಲೆಂದು ಕೌಸಲ್ಯೆಯು ವಿಷ್ಣುಪೂಜೆಯನ್ನು ಮಾಡಿದಳೆಂದು ಹೇಳಲ್ಪಟ್ಟಿರುತ್ತದೆ. ಸೀತಾರಾಮರಿಬ್ಬರೂ **"ಸಹಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್"** (ಅಯೋಧ್ಯಾ ೬. ೧) ಶ್ರೀಮನ್ನಾರಾಯಣನನ್ನು ಆರಾಧಿಸಿದರೆಂದು ಹೇಳಲ್ಪಟ್ಟಿರುತ್ತದೆ. ಈ ಜಗನ್ನಾಥ, ಜನಾರ್ದನ, ವಿಷ್ಣು, ನಾರಾಯಣ ಶಬ್ದಗಳೆಲ್ಲಾ ಶ್ರೀರಂಗನಾಥನನ್ನೇ ಬೋಧಿಸುತ್ತವೆಂದು ಅಂಗೀಕರಿಸುತ್ತಾರೆ. ಸ್ಥಲಪುರಾಣದಲ್ಲೂ ಶ್ರೀರಂಗನಾಥನು ವಿಭೀಷಣಾರಾಧ್ಯ ದೈವವೆಂದಿರುವದರಿಂದ ಇಕ್ಷ್ವಾಕು ಕುಲನಾಥನು ಶ್ರೀರಂಗನಾಥನೆಂದು ಹೇಳುವದರಲ್ಲಿ ಏನೊಂದೂ ವಿರೋಧವಿಲ್ಲವು. ಆದುದರಿಂದಲೇ **ತೋರಾದ ತನಿವೀರರ್ ತೊೞುದ ಕೋಯಿಲ್** ಎಂದು ಹೇಳಲ್ಪಟ್ಟಿರುತ್ತದೆ. "ಅಹೋ ವೀರ್ಯಂ ಅಹೋದಾಕ್ಷ್ಯಂ ವಿಷ್ಣೋರಿವ ಹಿದೃಶ್ಯತೇ" (ರಾಮಾ. ಅರ. ೩೦. ೩೬) ಎಂಬ ಮಹರ್ಷಿಗಳ ಉಕ್ತಿಪ್ರಕಾರವೂ, "ಸ್ಥಾತುಂ ನ ಶಕ್ತಾಸ್ಸಮರೇಷು ಸರ್ವೇ" (ಸುಂ. ೫೧) ಎಂಬ ಮಹಾಪ್ರಾಜ್ಞನಾದ ಆಂಜನೇಯೋಕ್ತಿ ಪ್ರಕಾರವೂ, ಅಂಗುಳ್ಯಗ್ರೇಣ ತಾನ್ ಹನ್ಯಾಂ ಇಚ್ಛನ್ ಹರಿಗಣೇಶ್ವರ ಎಂಬ ಸೂಕ್ತಿ ಪ್ರಕಾರವೂ, ಶ್ರೀರಾಮನು ತೋರಾದ ತನಿವೀರನು; ಅಸದೃಶವಾದ ವೀರ್ಯಪರಾಕ್ರಮಗಳುಳ್ಳವನು. ಅಂತವನಾರಾಧಿಸಿದ ಕೋಯಿಲ್ ಎಂದು ಹೇಳಿರುತ್ತಾರೆ.

ತುಣೈಯಾನ ವೀಡಣರ್ಕ್ಕು ತುಣೈಯಾಂ ಕೋಯಿಲ್ - **"ವಿಭೀಷಣ ಮಿಮಂ ಸೌಮ್ಯ ಲಂಕಾಯಾ ಮಭಿಷೇಚಯ । ಅನುರಕ್ತಂ ಚ ಭಕ್ತಂಚ ಮಮ ಚೈವೋಪಕಾರಿಣಂ ॥"** (ರಾಮಾ. ಯುದ್ಧ ೧೧೩. ೧೦) ಮತ್ತು **"ತವಾಪಿ ಮೇ ಪ್ರಿಯಂ ಕಾರ್ಯಂ ತ್ವತ್ಪ್ರಭಾವಾಚ್ಚ ಮೇಜಿತಂ"** ಎಂದು ಶ್ರೀರಾಮನು ವಿಭೀಷಣನನ್ನು ಮಹೋಪಕಾರಿಯಾಗಿ ಭಾವಿಸಿ, ಓ ವಿಭೀಷಣನೇ, ನಿನ್ನ ಪ್ರಭಾವದಿಂದ ನನಗೆ ಜಯವು ಪ್ರಾಪ್ತವಾದುದರಿಂದ ನಾನೂ ಕೂಡ ನಿನಗೆ ಹಿತವಾದ ಕಾರ್ಯವನ್ನು ಮಾಡತಕ್ಕದ್ದು ನನಗೆ ಕರ್ತವ್ಯವಾದುದೆಂದು ಹೇಳುವದರಿಂದ, **ತುಣೈಯಾನ ವೀಡಣರ್ಕ್ಕು** - ಪರಮ ಸ್ನೇಹಿತನಾದ

ವಿಭೀಷಣನೆಂಬ ಪ್ರಯೋಗವು. ಹೀಗೆ ಈ ಮಹೋಪಕಾರಕ್ಕೆ ಶ್ರೀರಾಮನು ಸರಿಯಾದ ಮಹೋಪಕಾರವನ್ನೇ ಎಣಿಸಿ ಸೀತಾದರ್ಶನಕ್ಕೆ ಮುಂದೆಯೇ ಲಂಕಾಭಿಷಿಕ್ತನನ್ನಾಗಿ ಮಾಡಿ, ಕೊನೆಗೆ ಆತನು ಮಾಡಿದ, **ನಿವೇದಯತ** ಎಂಬ ಶಬ್ದದಲ್ಲಿ ತೋರುವ ಆತ್ಮನಿವೇದನಕ್ಕನುಗುಣವಾಗಿ ಪರಮಪದವನ್ನು ಕೂಡ ಕೊಟ್ಟಿರುತ್ತಾನೆ. ಇದು ಶ್ರೀ ದೇಶಿಕರವರೇ ಅನುಗ್ರಹಿಸಿದ ಅಭಯ ಪ್ರದಾನ ಸಾರದಿಂದ ವ್ಯಕ್ತವು. ಆದುದರಿಂದಲೇ **ತುಣೈಯಾಂ ಕೋಯಿಲ್** ಎಂದು ಪ್ರಯೋಗಿಸಲ್ಪಟ್ಟಿತು **ಆರಾಧಯ ಜಗನ್ನಾಥಂ** ಎಂಬ ವಾಕ್ಯದಿಂದಲೇ ಮುಂದೆ ಸರ್ವಶ್ರೇಯಸ್ಸಿನ ಪ್ರಾಪ್ತಿಯುಂಟೆಂಬುವದು ವ್ಯಕ್ತವು. ಈ ಪಾಶುರದಲ್ಲಿ ಶ್ರೀ ರಂಗನಾಥನು ನಿತ್ಯವಿಭೂತಿಯಿಂದ ಹೊರಟು ಬ್ರಹ್ಮದೇವನ ಲೋಕದಲ್ಲಿ ಸ್ವಯಂವ್ಯಕ್ತವಾಗಿ ಆವಿರ್ಭವಿಸಿ, ಅಲ್ಲಿಂದ ಅಯೋಧ್ಯೆಗೆ ತೆರಳಿ, ಇಕ್ಷ್ವಾಕು ರಾಜರಿಗೆ ಕುಲದೈವವಾಗಿ, ಅನಂತರ ಶ್ರೀ ರಘುಕುಲನಾಯಕನಾದ ಶ್ರೀರಾಮನಿಂದಾರಾಧಿಸಲ್ಪಟ್ಟು, ಬಳಿಕ ಶ್ರೀ ವಿಭೀಷಣಾಳ್ವಾನಲ್ಲಿ ಸೇರಿ, ಆತನಿಂದ ಶ್ರೀರಂಗದಲ್ಲಿ ನೆಲಗೊಂಡನೆಂಬ **ಪುರಾಣೋಕ್ತಿ**ಯು ಸೂಚಿಸಲ್ಪಟ್ಟಿರುತ್ತದೆ.

ಈ ಶ್ರೀರಂಗನಾಥನು ಶ್ರೀ ವಿಭೀಷಣಾಳ್ವಾರಿಗೆ ಶ್ರೀರಾಮನಿಂದ ಕೊಡಲ್ಪಟ್ಟನೆಂಬುವದೇನೋ ಈ ಪೂರ್ವಕಥೆಯಿಂದ ಸಿದ್ಧವು. ಆದರೆ ಆತನು ಈ ಕಾವೇರೀ ಮಧ್ಯದಲ್ಲಿ ನಿಂತು ಪಾಮರರಿಗೆಲ್ಲಾ ಸೇವೆಯನ್ನೀಯುತ್ತಾ ಇರಲು ಕಾರಣವೇನೆಂದು ಪ್ರಶ್ನಿಸಿದರೆ, ವಿಭೀಷಣನು ಲಂಕೆಗೆ ಹೋಗುವಾಗ, ಈ ಕಾವೇರೀ ಮಧ್ಯ ದೇಶದಲ್ಲಿ ಚೋಳದೇಶದ ನಿಚುಳಾಪುರದ (ಇದಕ್ಕೆ ವರಯೂರೆಂದು ಈಗ ಹೆಸರು) ರಾಜನಾದ ಧರ್ಮವರ್ಮನೆಂಬುವನನ್ನು ಕಂಡು, ಆತನಿಂದ ಇಕ್ಷ್ವಾಕು ಕುಲ ರಾಜರಿಂದ ನಡಿಸಲ್ಪಡುತ್ತಿದ್ದ ರಥೋತ್ಸವವು ಇಲ್ಲಿಯೇ ನಡಿಸಿಕೊಡಬೇಕೆಂದು ಬಹಳವಾಗಿ ಪ್ರಾರ್ಥಿಸಲ್ಪಟ್ಟನು. ಈ ರಾಜನಿಗಾಗಿ, ಸರ್ವೇಶ್ವರನ ಆತನ ರಾಜ್ಯದಲ್ಲಿ ವಸಿಸುತ್ತೇನೆಂಬ ವಾಗ್ದಾನವಾಗಿತ್ತು. ಅದೂ ಅಲ್ಲದೆ, ಕಾವೇರೀ ನದಿಯು ಗಂಗೆಗಿಂತ ಅಧಿಕವೆಂದು ಹೇಳಿಸಿಕೊಳ್ಳಬೇಕೆಂದು ತಪಸ್ಸನ್ನು ಮಾಡಿದ್ದಳು. ಇವೆರಡು ಕಾರಣಗಳಿದ್ದುದರಿಂದ, ವಿಭೀಷಣನು ರಥೋತ್ಸವವನ್ನು ಅಲ್ಲೇ ನಡಿಸಲು ಒಪ್ಪಿಕೊಳ್ಳುವ ಹಾಗೆ ಸರ್ವೇಶ್ವರನು ಪ್ರೇರಿಸಿದನು. ರಥೋತ್ಸವಕ್ಕಾಗಿ ಅಲ್ಲೇ ಶ್ರೀರಂಗನಾಥನನ್ನು ೧೫ ದಿನಗಳು ಬಿಜಮಾಡಿಸಲು ಬಹು ಸಂಭ್ರಮದಿಂದ ರಾಜನು ಸಕಲವೈಭವಗಳಿಂದ ಉತ್ಸವಗಳನ್ನು ನೆರವೇರಿಸಿದನು. ಅಲ್ಲಿಂದ ಶ್ರೀರಂಗನಾಥನನ್ನು ಲಂಕೆಗೆ ಕರೆದುಕೊಂಡು ಹೋಗಲು, ಸರ್ವವಿಧ ಪ್ರಯತ್ನ ಮಾಡಿದರೂ, "**ನಾಶಕದ್ರಙ್ಗಮುದರ್ತುಮಪಿ ಸರ್ವ ಪ್ರಯತ್ನತಃ**" ಎಂದು ಸ್ವಾಮಿಯನ್ನು ಎತ್ತಲು ಸಾಧ್ಯವಾಗಲಿಲ್ಲವೆಂದು ಶ್ರೀರಂಗ ಮಾಹಾತ್ಮ್ಯದಲ್ಲಿ ಹೇಳಲ್ಪಟ್ಟಿರುತ್ತದೆ. ಅನಂತರ ವಿಭೀಷಣನು ತುಂಬಾ ವಿಷಾದವನ್ನು ಹೊಂದಿ,

ನನಗೆ ಮೋಕ್ಷಸಾಧನ ಮಾರ್ಗವು ಇಲ್ಲದೆ ವಿಕ್ಕಿಲ್ಲವನ್ನು ದಯಪಾಲಿಸಬಹುದೇ ಎಂದು ಶ್ರೀ ರಂಗನಾಥನಲ್ಲಿ ಅರಿಕೆ ಮಾಡಿಕೊಳ್ಳಲು, ಅದಕ್ಕೆ ಶ್ರೀ ರಂಗನಾಥನು "ಧರ್ಮಾಭಿಮುಖಮೇವಾತ್ರ ಕರಿಷ್ಯೇಹಂ ವಿಭೀಷಣ" ನಿನಗೆ ಅಭಿಮುಖವಾಗಿ ಎಂದರೆ ಪಶ್ಚಿಮಾಭಿಮುಖವಾಗಿ ಪಾಲಿಸುವೆನು ಎಂದು ಹೇಳಿ, ಸಮಾಧಾನಗೊಳಿಸಿ, ಅವನು ಮಾಡಿದ ಶರಣಾಗತಿಯನ್ನನುಸಂಧಾನ ಮಾಡುತ್ತಾ, ತನ್ನ ಕರ್ಮಗಳನ್ನೆಲ್ಲಾ ಪರಿತ್ಯಾಗ ಮಾಡಿ, ಆಜ್ಞಾನುಜ್ಞಾ ಕೈಂಕರ್ಯಗಳ ಫಲಸಂಗವನ್ನು ತ್ಯಜಿಸಿದರೆ ಮುಕ್ತಿಯುಂಟಾಗುವದೆಂದು ಹೇಳಲು, ಶ್ರೀ ರಂಗನಾಥನ ಅಪ್ಪಣೆಯನ್ನು ಹೊಂದಿ ಲಂಕೆಗೆ ತೆರಳಿದನೆಂಬ ಪ್ರಶಸ್ತೋಕ್ತಿಯಿರುತ್ತದೆ. ಆದುದರಿಂದ ಅವನು ಮಾಡಿರುವ ಶರಣಾಗತಿಯು ಸಾಂಗ ಶರಣಾಗತಿಯಾಗಿ ಸಮಸ್ತವಾದ ಫಲಗಳನ್ನೂ ಕೊಟ್ಟುದರಿಂದ ದೇಹಾವಸಾನವಾದ ಒಡನೆ ಪರಮಪದ ಪ್ರಾಪ್ತಿಯು ನಿಶ್ಚಯವು "ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ" ಎಂಬುವದು ಸಿದ್ಧವಾದುದರಿಂದ, ಶ್ರೀ ರಂಗನಾಥನನ್ನು ಸರಿಯಾಗಿ ಪ್ರಪನ್ನನಾಗಿ ಆಶ್ರಯಿಸಿದರೆ ಯಾವ ವಿಧ ಪುರುಷಾರ್ಥಗಳಿಗೆ ತಾನೇ ಕೊರತೆಯುಂಟು. ಆ ಕಾರಣದಿಂದ ಶೇರಾದ ಪಯನೆಲ್ಲಾಮ್ ಶೇರ್ಕ್ಕುಂ ಕೋಯಿಲ್ ಎಂದು ಹೇಳಿರುತ್ತಾರೆ. ಪುರುಷಾರ್ಥಗಳಲ್ಲೆಲ್ಲಾ ತುಂಬಾ ದುಷ್ಕರವಾದುದು ದಿವ್ಯದೇಶಪ್ರಾಪ್ತಿಯು. ಇದನ್ನು ಕೂಡ ತನ್ನ ಸೌಲಭ್ಯ ಸೌಶೀಲ್ಯಾದಿ ಗುಣಗಳಿಂದ ಪ್ರಪನ್ನನಿಗೆ ಕೊಡಲು ಸನ್ನದ್ಧನಾಗಿರುವಾಗ, ಇನ್ನು ಯಾವ ಪುರುಷಾರ್ಥಗಳನ್ನು ತಾನೇ ಕೊಡುವದಿಲ್ಲವು, ಆದುದರಿಂದ ಪಯನೆಲ್ಲಾಮ್ ಶೇರ್ಕ್ಕುಮ್ ಕೋಯಿಲ್ ಎಂದು ಹೇಳಿರುತ್ತಾರೆ.

ಈ ಶ್ರೀರಂಗ ವಿಮಾನಕ್ಕೆ ಇಷ್ಟೆಲ್ಲಾ ಮಹಾತ್ಮ್ಯೆಯಲ್ಲದೆ, ಇನ್ನೊಂದು ವಿಶೇಷವಾದ ಪ್ರಾಧಾನ್ಯ ಉಂಟೆಂದರೆ, ಇದರಿಂದ ಇತರ ಕ್ಷೇತ್ರಗಳಿಗಿಂತ ವಿಲಕ್ಷಣವಾದುದೆಂದು ತಿಳಿಯುತ್ತದೆ — ಪೆರಿಯ ಕೋಯಿಲ್ ನಾದಲೆತ್ತು ತಿರುವರಂಗ ಕೋಯಿಲ್, ಅನಂತಾವೈ ವೇದಾಃ ಎಂದು ಹೇಳಿರುವ ಹಾಗೆ ಸಮಸ್ತಗಳಾದ ವೇದಗಳ ಸ್ವರೂಪಭೂತವಾದ ಓಂ ಎಂಬ ಪ್ರಣವದ ಆಕಾರದಿಂದಲೂ ಅದರ ಅರ್ಥವನ್ನು ಪ್ರಕಾಶಪಡಿಸುವದರಿಂದಲೂ, ಅದರ ಸಂಬಂಧವುಳ್ಳದ್ದು. "ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ" ಎಂದು ಹೇಳಿದ ಹಾಗೆ ವೇದವನ್ನು ವ್ಯಾಪಿಸಿಕೊಂಡಿರುವದಾಗಲೂ, ಮುನಿಸುತಾಗಲೂ ಪ್ರಣವವನ್ನು ಹೇಳುತ್ತೇನೆಂಬ ಪ್ರತಿಜ್ಞೆಯುಂಟು ಹಾಗೆಯೇ "ಆದ್ಯಂ ತ್ರ್ಯಕ್ಷರಂ ಬ್ರಹ್ಮ ತ್ರಯೀ ಯಸ್ಮಿನ್ ಪ್ರತಿಷ್ಠಿತಾ" ಎಂದೂ ಹೇಳಲ್ಪಟ್ಟಿರುತ್ತದೆ. ಈ ಪ್ರಣವದ ಸ್ವರೂಪವಾಗಿ ನಾಲ್ಕು ವಿಧವಾದ ಗೋಪುರಗಳು ಪ್ರಕಾಶಿಸುತ್ತವೆಂದು ಹಿಂದಿನವರು ಹೇಳಲ್ಪಟ್ಟಿರುತ್ತದೆಯಷ್ಟೆ. ಅವುಗಳು ಯಾವುವೆಂದರೆ:— ಪರವ್ಯೂಹ (೧)

ಕಣ್ಣನಡಿಯಿಲ್ ಎಂಬುಕ್ಕು ಕ್ಕಾಟ್ಟುವರ್ ಶೆಪ್ಪು, ಕ್ಕಡು ಪಿನ್ನೈಯು

ಆದೀಶಾದಿಬಂತೆಂದೂ, (೨) ಪರಸ್ತಕ್ಕನೆಂಬತೂ, (೩) ಪರಂಜ್ಯೋತಿಯೆಂಬತೂ, (೪) ಶ್ರೀ ಮಹಾವಿಷ್ಣುವೆಂದೂ ಪ್ರಣವವು ಪ್ರಕಟಿಸುತ್ತದೆ. ಶ್ರೀರಂಗವಿಮಾನದಲ್ಲಿ ರಂಗೇಶ ನಿದ್ರಿಸುವನು. ಹೊರಗೆ ಆಕಾರವು ಪ್ರಣವರೂಪವಾದುದರಿಂದ ಆತನು ಈ ಪ್ರಮಾಣಗಳನ್ನನುಸರಿಸಿ ಸ್ಪಷ್ಟವಾಗಿ ಪ್ರಕಾಶಗೊಳ್ಳುತ್ತಿದೆ ಎಂಬ ಭಾವವು. “ವಿಮಾನಂ ಪ್ರಣವಾಕಾರಂ ವೇದಶೃಙ್ಗಂ ಮಹಾದ್ಭುತಂ । ಶ್ರೀರಙ್ಗಶಾಯೀ ಭಗವಾನ್ ಪ್ರಣವಾರ್ಥಪ್ರಕಾಶಕಃ ॥” ಎಂಬ ಮತ್ತು “ಪಶ್ಯೇ ಪ್ರಣವಾಕಾರಂ ಭಾಸ್ವಂ ರಂಗವಿಮಾನಕಂ” ಎಂಬ ಉಕ್ತಿಗಳು ಈ ಮೇಲಿನ ಅಭಿಪ್ರಾಯಗಳನ್ನು ಸೂಚಿಸುತ್ತವೆ.

ಈ ದೇವಾಲಯವು ಇನ್ನೂ ಎಂಥಾದ್ದೆಂದರೆ ತೀರಾಪನಿಸಯನ್ತ್ತುನರ್ ತೀರ್ಥಂ ಕೊಂಬಿಲ್ – ಆ ಶ್ರೀ ರಂಗನಾಥನ ಚರಣಸನ್ನಿಧಿಯಲ್ಲಿ ಸಕೃತ್ ಶರಣಾಗತಿಯನ್ನು ಅನುಷ್ಠಿಸಿದ ಪ್ರಪನ್ನನ ಸರ್ವ ಪಾಪಗಳನ್ನೆಲ್ಲಾ ಸುಲಭವಾಗಿ ಹೋಗಲಾಡಿಸುವಂಥಾದ್ದು. ಪಾಪಗಳೋ “ಯದ್ಬ್ರಹ್ಮಕಲ್ಪ ನಿಯುತಾನುಭವೇ ಪ್ಯನಾಶ್ಯಂ ತತ್ಕಿಲ್ಬಿಷಂ ಸೃಜತಿ ಜಂತುರಿಹಕ್ಷಣಾರ್ಧೇ” ಎಂದು ಹೇಳಿರುವ ಹಾಗೆ ಲೆಖ್ಖ ಮಾಡಲು ಕೂಡ ಕಷ್ಟವಾದವು. ಇಂತಹ ಪಾಪಗಳೆಲ್ಲಾ ಆತನ ಪಾದವನ್ನಾಶ್ರಯಿಸಿದರೆ “ಏವಂ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ” ಎಂದು ಹೇಳಿರುವ ಹಾಗೆ ಪಾಪಗಳೆಲ್ಲಾ ದಗ್ಧವಾಗಿಬಿಡುತ್ತವೆ.

ಇಷ್ಟೆಲ್ಲಾ ಮಾಹಾತ್ಮ್ಯವುಳ್ಳದ್ದು ತಿರುವರಙ್ಗಮೆನ ತ್ತಿಗಳುಮ್ ಕೋಯಿಲ್ – ಶ್ರೀರಂಗನಾಥನಿಂದ ಶಂಗೂಳಿಸುತ್ತಿರುವ ರಂಗವಿಮಾನವೆಂದು ವರ್ಣಿಸುತ್ತಾರೆ. ಶ್ರೀರಂಗವು ತುಂಬಾ ಹೃದ್ಯವಾದುದರಿಂದ “ರಂಗ ರಂಗವಿತಿ ಬ್ರೂಯಾತ್” ಎಂದು ಹೇಳಲ್ಪಟ್ಟಿರುತ್ತದೆ; ಮತ್ತು ಪ್ರತಿದಿನದ ಭಗವದಾರಾಧನ ಕಾಲದ ಶಾತ್ತುಮುರೈಯಲ್ಲಿ “ಶ್ರೀರಙ್ಗ ಶ್ರಿಯಮನುಪದ್ರವಾಮನುದಿನಂ ಸಂವರ್ಧಯ” ಎಂದು ರಂಗವಿಮಾನಕ್ಕೆ ಮಂಗಳಾಶಾಸನವು ಸರ್ವ ಶ್ರೀವೈಷ್ಣವ ಮಂಡಲಿಯಿಂದಲೂ ನಡೆಯುತ್ತಲಿದೆ.

ಅವತಾರಿಕೆ:—ಶ್ರೀ ರಂಗನಾಥನಿಗೆ ರಾಮನಾಥ್ಯಕತ್ವವೂ, ಶ್ರೀ ಶ್ರೀನಿವಾಸನಿಗೆ ಕೃಷ್ಣಾತ್ಮಕತ್ವವೂ, ಶ್ರೀಮನ್ನಾರಾಯಣನಿಗೆ ನೃಸಿಂಹಾತ್ಮಕತ್ವವೂ ಎಂಬ ಸಂಪ್ರದಾಯಾಭಿಪ್ರಾಯವಿರುವದರಿಂದ, ಶ್ರೀರಂಗನಾಥನನ್ನು ಸ್ತುತಿಸಿದ ನಂತರ, ಈ ಪಾಶುರ ಮೊದಲಿಗೆ ಶ್ರೀ ವೇಂಕಟಾದ್ರಿನಾಥನನ್ನು, ಮುಂದಿನ ಪಾಶುರದ ಮೊದಲ ಶ್ರೀ ಕಾಂಚೀನಾಥನನ್ನು ಸ್ತುತಿಸುತ್ತಾರೆ:—

ರಿರು ವಿನೈಯುಮ್ ಕಡಿಯುಮ್ ವೆರ್ಪ್ಪು । ತಿಣ್ಣಮಿದು ವೀಡೆನ್ನ ತ್ತಿಗಳುಮ್ ವೆರ್ಪ್ಪು, ತ್ತೆಳಿನ್ದ ಪೆರುಮ್ ತೀರ್ಥಙ್ಗಳ್ ಶೇ(ರ)ರಿನ್ದ ವೆರ್ಪ್ಪು ॥ ಪುಣ್ಣಿಯತ್ತಿನ್ ಪುಕಲಿದೆನ್ನ ಪುಗಳುಮ್ ವೆರ್ಪ್ಪು, ಪೊನ್ನುಲಗಿಲ್ಭೋಗಮೆಲ್ಲಾಮ್ ಪುಣರ್ಕ್ಕುಮ್ ವೆರ್ಪ್ಪು । ವಿಣ್ಣವರು ಮಣ್ಣವರುಮ್ ವಿರುಮ್ಬುಮ್ ವೆರ್ಪ್ಪು, ವೇಙ್ಗಡ ವೆರ್ಪ್ಪೆನ ವಿಳಙ್ಗುಮ್ ವೇದವೆರ್ಪ್ಪೇ ॥

ಅರ್ಥ :—ಕಣ್ಣನ್ - ಕೃಷ್ಣರೂಪಿಯಾಗಿ ಅತ್ಯಂತ ಮಹಿಮೆಯುಳ್ಳ ಶ್ರೀನಿವಾಸನ, ಅಡಿಯಿಣೈ - ಚರಣದ್ವಂದ್ವವನ್ನು, ಎಮಕ್ಕುಮ್ - ಅತ್ಯಲ್ಪರಾದ ನಮಗೆ (ಆತನೆಲ್ಲಿ ನಾವೆಲ್ಲಿ ಎಂಬ ಭಾವವು). ಕಾಟ್ಟುಮ್ - ಪ್ರತ್ಯಕ್ಷವಾಗಿ ತೋರಿಸುವ, ವೆರ್ಪ್ಪು - ಶೈಲವು; ಅಥವಾ, ಕಣ್ಣನ್ - ಕೃಷ್ಣನಾದ ಶ್ರೀನಿವಾಸನು, ಎಮಕ್ಕು - ಅತ್ಯಂತ ನಿಕೃಷ್ಟರಾದ ನಮಗೆ, ಅಡಿಯಿಣೈ - ಅತ್ಯಂತ ಸೌಲಭ್ಯದಿಂದಲೂ ಕೃಪೆಯಿಂದಲೂ ತನ್ನ ಪಾದದ್ವಂದ್ವವೇ ಎಲ್ಲರಿಗೂ ಉಪಾಯವೂ ಮತ್ತು ಉಪೇಯವೂ ಎಂದು, ಅವುಗಳನ್ನು, ಕಾಟ್ಟುಮ್ - ತನ್ನ ದಕ್ಷಿಣಕರದಿಂದ ಅಭಯ ಮುದ್ರೆಯಾಗಿ ತೋರಿಸುವ, ವೆರ್ಪ್ಪು - ಬೆಟ್ಟವು; ಕಡು ವಿನೈಯರ್ - ಕ್ರೂರಪಾಪಗಳನ್ನುಳ್ಳವರ, ಇರುವಿನೈಯುಮ್ - ಪುಣ್ಯಪಾಪರೂಪ ಎರಡು ವಿಧ ಪಾಪಗಳನ್ನೂ, ಕಡಿಯುಮ್ - ಸಂಹರಿಸುವ, ವೆರ್ಪ್ಪು-ಪರ್ವತವು; ಸಾರವಿವರಣೆ ವ್ಯಾಖ್ಯಾತೃವು, ಇರು - ಅಧಿಕವಾದ, ವಿನೈಯುಮ್ - ಪಾಪಗಳನ್ನು ಎಂದು ಅರ್ಥ ಬರೆದಿರುತ್ತಾರೆ. ತಿಣ್ಣಮ್ - ಸತ್ಯವಾಗಿಯೂ, ಇದು ವೀಡೆನ್ನ - ಇದು ದಿವ್ಯ ವೈಕುಂಠವೋ ಎಂಬದಾಗಿ, ತಿಗಳುಮ್ ವೆರ್ಪ್ಪು - ಪ್ರಕಾಶಿಸುವ ಪರ್ವತವು; ಇದು ಸತ್ಯವಾಗಿಯೂ ಭೂವೈಕುಂಠವೆಂಬಭಿಪ್ರಾಯವು; ತೆಳಿನ್ದ - ನಿರ್ಮಲವಾದ, ಪೆರುಮ್ ತೀರ್ಥಙ್ಗಳ್ - ಉತ್ಕೃಷ್ಟವಾದ ಆಕಾಶಗಂಗೆ, ಪಾಪನಾಶನೀ, ಪಾಂಡವ ತೀರ್ಥಗಳು. ಶೆರಿನ್ದ - ಸೇರಿರುವ, ವೆರ್ಪ್ಪು - ಪರ್ವತವು; ಪುಣ್ಯಯತ್ತಿನ್ ಪುಗಲ್ - ಪರಮ ನಿಶ್ರೇಯಸ್ಸನ್ನು ಹೊಂದಲು, ಮಾರ್ಗವು, ಅಥವಾ ಸಮಸ್ತ ವಿಧ ಶ್ರೇಯಸ್ಸನ್ನೂ ಪಡೆಯಲುಪಾಯವು. ಇದೆನ್ನ ಪುಗಳುಮ್ ವೆರ್ಪ್ಪು - ಇದೇ ಎಂದು ಹೊಗಳುವ ಪರ್ವತವು; ಪೊನ್ನುಲಗಿಲ್ - ಹಿರಣ್ಮಯವಾದ ಪುರನೆಂದು ಹೇಳಿಸಿಕೊಳ್ಳುವ ಪರಮಪದದ, ಭೋಗಮೆಲ್ಲಾಮ್ - ಸಂಪೂರ್ಣಾನಂದಾನುಭವರೂಪ ಭೋಗವನ್ನೆಲ್ಲಾ, ಪುಣರ್ಕ್ಕುಮ್ ವೆರ್ಪ್ಪು - ಇಲ್ಲಿಯೇ ಉಂಟುಮಾಡುವ ಪರ್ವತವು; ವಿಣ್ಣವರುಮ್ - ದೇವತೆಗಳೂ, ಮಣ್ಣವರುಮ್ - ಈ ಲೋಕದ ಮನುಷ್ಯರೂ ಸಹ, ವಿರಮ್ಬುಮ್ ವೆರ್ಪ್ಪು - ಆದರಿಸಿ ಸೇವಿಸತಕ್ಕ ಬೆಟ್ಟವು; ವೇಙ್ಗಡ ವೆರ್ಪ್ಪೆನ-

ಶ್ರೀ ವೇಂಕಟಾದ್ರಿ ಎಂದು ಕೊಂಡಾಡುವ ಹಾಗೆ, ವಿಳಙ್ಗುಮ್ - ಪ್ರಕಾಶಿಸುತ್ತಿರುವ, ವೇದವೆರ್ಪ್ಪೇ - ಋಗ್ವೇದ ಪ್ರಸಿದ್ಧವಾದ ಪರ್ವತವು.

ತಾತ್ಪರ್ಯ :—ತಿರುಮಲೆಯ ಪ್ರಭಾವವು ಲೋಕವಿಖ್ಯಾತವಾದುದರಿಂದ ಅಲ್ಲಿ ವಾಸಮಾಡುವವರಿಗುಂಟಾಗುವ ಪ್ರಯೋಜನಗಳನ್ನು ತಿಳಿಸುವವರಾಗಿ ವಾಸಯೋಗ್ಯ ದಿವ್ಯಸ್ಥಳಗಳಲ್ಲಿ ಎರಡನೆಯದೆಂದು ಕೊಂಡಾಡುತ್ತಾರೆ :—

ಕಣ್ಣನ್ ಅಡಿಯಿಣೈ ಯೆಮಕ್ಕು ಕಾಟ್ಟುಮ್ ವೆರ್ಪ್ಪು - ಶ್ರೀ ಕೃಷ್ಣನೇ ಶ್ರೀನಿವಾಸ ರೂಪವನ್ನು ತಾಳಿರುವನೆಂಬಭಿಪ್ರಾಯವು. ಆದುದರಿಂದ ಕಣ್ಣನ್ ಎಂಬ ಪ್ರಯೋಗವು ಶ್ರೀ ಕೃಷ್ಣನ ಪಾದದ್ವಂದ್ವವನ್ನು **"ಮಗ್ನಾನಾಂ ಭವಿನಾಂ ಸಮುತ್ತರಣಾಯ"** ಸಂಸಾರ ಸಾಗರದಲ್ಲಿ ಮುಳುಗಿರುವ ನಮಗೆ ಪರಮೋತ್ತಾರಕವೆಂದು ಪ್ರತ್ಯಕ್ಷವಾಗಿ ತೋರಿಸುವ ಅರ್ಚಾವತಾರಿಯಾದ ಶ್ರೀನಿವಾಸನನ್ನುಳ್ಳ ಪರ್ವತವೆಂದು ಅರ್ಥ ಮಾಡಬಹುದು. ಅಥವಾ ಶ್ರೀ ಕೃಷ್ಣರೂಪಿಯಾದ ಶ್ರೀನಿವಾಸನು ತನ್ನ ಭಕ್ತರಿಗೆ ಪರಮಹಿತವನ್ನುಪದೇಶಿಸುವನಾಗಿ ಭಯಪಡಬೇಡಿರಿ ಅಥವಾ ಶೋಕಿಸಬೇಡಿರಿ, ನೀವುಗಳು ನನ್ನ ಪಾದದ್ವಂದ್ವಗಳನ್ನೇ ಪರಮೋಪಾಯವೆಂದೂ, ಪರಮಪ್ರಾಪ್ಯವೆಂದೂ ಆಶ್ರಯಿಸಿ ಎಂದು ತನ್ನ ಕರಕಮಲದಿಂದ ತನ್ನ ಪಾದಗಳ ಕಡೆ ತೋರುವ ಹಾಗೆ ಅಭಯ ಮುದ್ರೆಯನ್ನು ಪ್ರದರ್ಶಿಸುವ ಶ್ರೀನಿವಾಸನನ್ನುಳ್ಳ ಪರ್ವತವೆಂದೂ ಅರ್ಥ ಮಾಡಬಹುದು.

ಕೊಡುವಿನೈಯರ್ ಇರುವಿನೈಯುಮ್ ಕಡಿಯುಮ್ ವೆರ್ಪ್ಪು - ಕ್ರೂರ ಪಾಪಗಳನ್ನು ಮಾಡಿದವರ ಎರಡುವಿಧಗಳಾದ ಪುಣ್ಯಪಾಪಗಳನ್ನು ನಾಶಮಾಡುವ ಪರ್ವತವು. ದಯಾಶತಕದಲ್ಲಿ ಶ್ರೀನಿವಾಸನ ದಯಾ ಮಾಹಾತ್ಮ್ಯೆಯನ್ನು ಕೊಂಡಾಡುವ ಸಂದರ್ಭದಲ್ಲಿ **"ವೃಷಗಿರಿ ಸವಿಧೇಷು ವ್ಯಾಜತೋ ವಾಸಭಾಜಾಂ । ದುರಿತಕಲುಷಿತಾನಾಂ ದೂಯಮಾನಾದಯೇ ತ್ವಮ್"** ॥ (೩೭) ಎಂದರೆ ಓ ಶ್ರೀನಿವಾಸದಯೆಯೇ! ವೃಷಗಿರಿಯ ಸಮೀಪ ಸ್ಥಳಗಳಲ್ಲಿ ದುಷ್ಕರ್ಮಗಳಿಂದ ದೋಷಪರಿಪುಷ್ಟರಾಗಿ ದೇಹಯಾತ್ರೆ ಮೊದಲಾದ ವ್ಯಾಜಮೂಲಕವಾಗಿಯಾಗಲಿ ವಾಸಮಾಡುವವರಿಗೆ ನೀನು ಪಶ್ಚಾತ್ತಾಪದಿಂದ ಅವರ ಪಾಪಗಳನ್ನೆಲ್ಲಾ ಪರಿಹರಿಸುವವಳಾಗಿದ್ದೀ ಎಂದು ಈ ಗ್ರಂಥಕರ್ತರೇ ಹೇಳಿರುತ್ತಾರೆ. ಪುಣ್ಯವೂ ಸಹ ಪಾಪಕ್ಕೆ ಸಮವಾದುದೆಂದೂ ದಿವ್ಯ ವೈಕುಂಠಪ್ರಾಪ್ತಿಗೆ ಪ್ರತಿಬಂಧಕವೆಂದೂ ಅನೇಕ ಸ್ಥಳಗಳಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. ಏಕೆಂದರೆ ಶ್ರುತಿಯು **"ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ"** ಎಂದು ಹೇಳಿರುತ್ತದೆ. ಹಾಗೆ ವ್ಯಾಜಮಾತ್ರದಿಂದಲ್ಲದೆ ಆತನನ್ನೇ ಧ್ಯಾನಿಸಿದರೆ **"ಅನ್ಯಾಹ**

ತಾನಿ ಕೃಷ್ಣಸ್ಯ ಚಕ್ರಾದೀನ್ಯಾಯುಧಾನಿ ತದಾ । ರಕ್ಷಂತಿ ಸಕಲಾಪದ್ಭ್ಯೋ ಯೇನ ವಿಷ್ಣುರುಪಾಸಿತಃ ॥" ಎಂದು ವಿಷ್ಣುಧರ್ಮದಲ್ಲಿ ಹೇಳಿರುವ ಹಾಗೆ, ಈ ಚೇತನನಿಗೆ ಮುಮುಕ್ಷುವಾದ ಅನಂತರ ಶರೀರವು ಆದರಿಂದುಂಟಾಗುವ ಇತರ ಆಪತ್ತುಗಳು, ಇವುಗಳೆಲ್ಲವನ್ನೂ ಶ್ರೀನಿವಾಸನ ದಿವ್ಯಾಯುಧಗಳು ರಕ್ಷಿಸುತ್ತವೆ. ವ್ಯಾಜಮಾತ್ರದಿಂದ ನಡೆಸಿದರೆ ಆತನಲ್ಲಿ ಭಕ್ತಿಯೂ ಕೂಡ ಕಾಲಕ್ರಮೇಣ ಬೆಳೆದುದಾಗಿ ಬರುವದು. ಶ್ರೀ ನಮ್ಮಾಳ್ವಾರ್ರವರು "ಕೆಡುಮಿಡರ್ ವಿಶ್ವಗಳ್ ತೀರ್ ವಾರುಸ್ತೇ ತಿರುವೇಙ್ಗಡತ್ತೆಂದುಯದಾನೇ" (೬. ೧೦. ೭) ಶಿಡಿ ಎಂದರೆ ಪಾಪವು. ಆ ಪಾಪದಿಂದುಂಟಾಗುವ ದುಃಖಗಳನ್ನೆಲ್ಲ ನಿವರ್ತಿಸುವ ದಿವ್ಯಾಯುಧವು ಈ ವೇಂಕಟಾದ್ರಿಯಲ್ಲಿ ಧರಿಸಿರುವ ಶ್ರೀನಿವಾಸನು ಎಂದು ಹೇಳಿರುತ್ತಾರೆ. ತಿಣ್ಣಮೆನ್ನು ನೀಳಕೈತ್ತಿಗಳುವನ್ ಚೆಲ್ವ - ಎಂಬುದರಲ್ಲಿ ದಾನ ಯಾವ ಪ್ರಯೋಜನಗಳು ಲಭಿಸುವವೋ ಅವುಗಳೆಲ್ಲ ಇಲ್ಲಿಯೇ ಉಂಟಾಗುತ್ತವೆಯಾದುದರಿಂದ ಇದೇ ಸತ್ಯನಾಗಿಯೂ ಭಾವ್ಯವೆಂದೇ ಎನ್ನುವ ಹಾಗೆ ಈ ಪರ್ವತವು ತೋರುತ್ತದೆ ಎಂದು ಹೇಳುತ್ತಾರೆ. ಸರ್ವೇಶ್ವರನನ್ನು ಪರಿಪೂರ್ಣನಿಂದ ಅನುಭವಿಸುವ ಪದವಾದುದರಿಂದ ಆತನಿಗೆ ಪ್ರೀತಿಯನ್ನುಂಟುಮಾಡುವ ಕೈಂಕರ್ಯ ಪ್ರಾಪ್ತಿಯೂ ಇಲ್ಲಿಯೇ ದೊರಕುವದರಿಂದ ಇದೂ ವೈಕುಂಠಸಮಾನವೇ ಎಂಬ ಭಾವವು. "ವೈಕುಂಠ ಮೇತತ್ಕರಪಲ್ಲವೇನ ಸಂದರ್ಶಯನ್ ಸರ್ವ ಸುರಾಸುರಾಣಾಂ । ಅಸ್ತೀಹ ಲಕ್ಷ್ಮ್ಯಾ ಸಹವಿಶ್ವಮೂರ್ತಿಃ ರಾಷ್ಟ್ರೇ ಪ್ರಜಾ ಸಂಜನ ಶೈಲ ಶೃಂಗೇ ॥" "ಇದೇ ವೈಕುಂಠವೆಂದೇ ತಾನು ಚಿಗುರಿನ ಸಮಾನವಾದ ತನ್ನ ಕೈಯಿಂದ ಎಲ್ಲಾ ದೇವತೆಗಳಿಗೂ ಅಸುರರಿಗೂ ಎದೆ ತೋರಿಸುವ ಹಾಗೆ ನಿಂತುಕೊಂಡಿರುತ್ತಾನೆ. ಸಮಸ್ತ ಜಗತ್ ರಕ್ಷಣಾರ್ಥವಾಗಿ ಸರ್ವಮಂಗಳಸ್ವರೂಪನಾದ ಮತ್ತು ಲಕ್ಷ್ಮಿಯನ್ನು ವಕ್ಷಸ್ಥಲದಲ್ಲಿ ಉಳ್ಳ ಈ ವಿಶ್ವಮೂರ್ತಿಯಾದ ಶ್ರೀನಿವಾಸನು ಅಂಜನಾದ್ರಿಯಲ್ಲಿ ವಿರಾಜಿಸುತ್ತಾನೆ" ಎಂದು ಹೇಳಿರುವ ಶ್ಲೋಕವು ಅನುಸಂಧೇಯವು. ಪರಮಪದದಲ್ಲಿ ಶ್ರೀಮನ್ನಾರಾಯಣನು ಹೇಗೆ ನಿತ್ಯಸೂರಿಗಳಿಂದ ಸೇವ್ಯನೋ ಹಾಗೆಯೇ ಇಲ್ಲಿಯೂ ಕೂಡ ಅವರುಗಳಿಂದ ಸೇವ್ಯನು; ಆದುದರಿಂದ ಶ್ರೀ ನಮ್ಮಾಳ್ವಾರ್ರವರು "ವಿಣ್ಣೋರ್ ಕ್ಕೊರ್ವನಾನೇ" ನಿತ್ಯಸೂರಿಗಳಿಗೆ ಸ್ವಾಮಿಯೇ "ಇಮೈಯೋರ್ ಅಧಿಪತಿಯೇ" ನಿತ್ಯಸೂರಿಗಳಿಗೆ ನಿರ್ವಾಹಕನೇ. "ಇಮೈಯೋರ್ಗಳ್ ಎಪ್ಪೊಳುದುಮ್ ನಿನ್ರು ಏತ್ತ" ನಿತ್ಯಸೂರಿಗಳು ಯಾವಾಗಲೂ ಸೇರಿದ್ದು ನಿನ್ನನ್ನು ಸ್ತೋತ್ರಮಾಡುತ್ತ, "ಅಮರರ್ ಮುನಿಗಣಙ್ಗಳ್ ವಿರುಮ್ಬುಮ್ ತಿರುವೇಙ್ಗಡತ್ತಾನೇ" ಇತ್ಯಾದಿ ಪ್ರಯೋಗಗಳನ್ನು ಶ್ರೀನಿವಾಸವಿಷಯವಾದ ಆರನೆಯ ಪತ್ತು ಹತ್ತನೆಯ ತಿರುವಾಯ್ ಮೊಳಿಯಲ್ಲಿ ಮಾಡಿರು

ತ್ತಾರೆ. ಅದರಿಂದಲೇ ದಾಂಡೆ ಪೊನ್ನುಲಗಾಳ್ ಭೋಗಮೆಲ್ಲಾಮ್ ಪುಣರ್ನ್ನಾಮ್ ವೆರ್ಪೆಂದೂ, ವಿಣ್ಣವರುಮ್ ಮಣ್ಣವರುಮ್ ವಿರುಮ್ಬುಮ್ ವೆರ್ಪೆಂದೂ ವರ್ಣ್ಣಿಸಿರುತ್ತಾರೆ.

ತೆಳಿನ್ದ ಪೆರುಮ್ ತೀರ್ತ್ತಙ್ಗಳ್ ಶೆರಿನ್ದ ವೆರ್ಪು - ಈ ಪರ್ವತದಲ್ಲಿ ಶ್ರೀನಿವಾಸ ಸನ್ನಿಧಿಗೆ ಸಮೀಪದಲ್ಲಿ ಗುಪ್ತಗಾಮಿನಿಯಾದ ಆಕಾಶಗಂಗೆಯೂ, ವೇಗದಿಂದ ಪ್ರವಹಿಸುವ ಪಾಪನಾಶನೀ ಎಂಬ ಜಲಪಾತವೂ ಇವೆ. ಆಕಾಶಗಂಗೆಯಿಂದ ದಿನವೂ ಸ್ವಾಮಿಯ ಅಭಿಷೇಕಕ್ಕಾಗಿ ರಜತಕುಂಭದಲ್ಲಿ ಸ್ವಚ್ಛಸ್ವಾದೂದಕವು ತರಲ್ಪಡುತ್ತದೆ. ಆ ಉದಕವು ಎಂಥಾದ್ದೆಂದರೆ "ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯ ಮನೋಯಥಾ" ಎಂದು ಮಹರ್ಷಿಯು ಹೇಳಿರುವ ಹಾಗೆ, ಸತ್ಪುರುಷನ ಮನಸ್ಸಿನ ಹಾಗೆ ತುಂಬಾ ನಿರ್ಮಲವಾಗಿರುವಂಥಾದ್ದು. ಆದುದರಿಂದ ತೆಳಿನ್ದ ಪೆರುಮ್ ತೀರ್ತ್ತಙ್ಗಳ್ ಎಂಬ ಪ್ರಯೋಗವು.

ಪುಣ್ಣಿಯತ್ತಿನ್ ಪುಗಲಿದೆನ್ನ ಪುಗುನ್ದವರ್ ವೆರ್ಪು - ಸಮಸ್ತ ಲೌಕಿಕ ಶ್ರೇಯಸ್ಸುಗಳಿಗೂ ಸಾಧನಭೂತವೆಂದು ತೋರುವ ಪರ್ವತವು. ಅನೇಕ ಮಕ್ಕಳಿಲ್ಲದವರು, ಕಣ್ಣು ಕಾಣದವರು, ವ್ಯಾಧಿಪೀಡಿತರಾದವರು. ಇನ್ನೂ ಅನೇಕ ವಿಧ ಆರ್ತರೆಲ್ಲಾ ಶ್ರೀನಿವಾಸನನ್ನಾಶ್ರಯಿಸಿ, ತಮ್ಮ ಕೋರಿಕೆಗಳನ್ನು ಪಡೆದವರಾಗಿ ಶ್ರದ್ಧಾಭಾವದಿಂದ ಬಹು ದೂರದಿಂದ ಬಂದು ಸ್ವಾಮಿಯನ್ನಾರಾಧಿಸಿ ಅವನಿಗೆ ಕೈಂಕರ್ಯವನ್ನು ಮಾಡಿ ಮನಸ್ಸಿನ ನೆಮ್ಮದಿಯನ್ನು ಹೊಂದಿ ತಮ್ಮ ತಮ್ಮ ಸ್ಥಳಗಳಿಗೆ ತೆರಳುತ್ತಾರೆಂಬುದು ಸರ್ವರಿಗೂ ವಿದಿತವಾದ ವಿಷಯವಾದುದರಿಂದ ಸರ್ವ ಶ್ರೇಯಸ್ಸಾಧನೆಗೂ ಸಾಧನವೆಂದು ಉದ್ಘೋಷಿಸುವ ಪರ್ವತವೆಂದು ಹೇಳಿರುತ್ತಾರೆ. ಹಾಗಾದರೆ ಸರ್ವಶ್ರೇಯಸ್ಸಾಧಕವಾದ ಧರ್ಮವಾದುದರಿಂದ, ಅದು "ಕೃಷ್ಣಂ ಧರ್ಮಂ ಸನಾತನಂ" ಎಂದು ಹೇಳಲ್ಪಟ್ಟಿರುವುದರಿಂದ, ಅಂತಹ ಧರ್ಮಮೂರ್ತಿಯಾದ ಶ್ರೀನಿವಾಸನೇ ಈ ಪರ್ವತದಲ್ಲಿ "ಪೂರಯಾಮೀ ಪರಮಾನಂದಂ ದದಾಮ್ಯೈಶ್ವರ್ಯಮುತ್ತಮಮ್। ಸ್ವಾಮಿ ಪುಷ್ಕರಿಣೀತೀರೇ ರಮಯಾ ಸಹ ಮೋದತೇ" ಎಂಬ ಸತ್ಸ್ತೋತ್ರದಂತೆ ವೈಕುಂಠವನ್ನು ಬಿಟ್ಟು (ಅಲ್ಲಿ ಇಲ್ಲ ಎಂಬುದಿಲ್ಲವಾದರೂ) ಈ ಸ್ವಾಮಿ ಪುಷ್ಕರಿಣೀ ತೀರವನ್ನಾಶ್ರಯಿಸಿ ಲಕ್ಷ್ಮಿಯೊಂದಿಗೆ ನಿತ್ಯವಾಸಮಾಡುತ್ತಿರುವನೆಂದು ಹೇಳಿರುವ ಹಾಗೆ ಪ್ರಸಿದ್ಧನೆಂದು ಹೇಳಲ್ಪಟ್ಟಿತು. ಆದುದರಿಂದ ಸರ್ವ ಶ್ರೇಯಸ್ಸಾಧನಭೂತವಾದುದು ಈ ಪರ್ವತವೆಂಬ ಭಾವವು.

ಈ ಪರ್ವತವು ಅನಾದ್ಯವಾದುದು. ಇದು ಋಗ್ವೇದದಲ್ಲಿ "ಅರಾಯಿ ಕಾಣೇ ವಿಕಟೇ ಗಿರಿಂ ಗಚ್ಛ ಸದಾನ್ವೇ" ಎಂದು ವೇದಪ್ರತಿಪಾದಿತ ಪರ್ವತವಾದುದರಿಂದ, ವಿಳಙ್ಗುಮ್ ವೇದವೆರ್ಪು ಎಂದು ಕೊಂಡಾಡಿರುತ್ತಾರೆ.

ಉತ್ತಮ ನಮರ್‌ತ್ತಲ ಮಮೈತ್ತದೋರೆಳಿಲ್‌ತನು ವುಯರ್‌ತ್ತ ಕಣೈಯಾಲ್ । ಅತ್ತಿರ ವರಕ್ಕರ್ ಮುಡಿಪತ್ತು ಮೊರುಕೊತ್ತೆನ ವುದಿರ್‌ತ್ತ (ವರುಳೋನ್) ತಿರಲೋನ್ । ಮತ್ತುರು ಮಿಗುತ್ತ ತ್ತಯಿರ್ ಮೊಯ್‌

ಇಂತಹ ವಿಶೇಷ ಮಾಹಾತ್ಮ್ಯೆಯುಳ್ಳ ತಿರುಮಲೆಯೂ ಪ್ರಪನ್ನನಿಗೆ ವಾಸ ಯೋಗ್ಯಸ್ಥಳವೆಂಬ ಭಾವವು.

ಅವತಾರಿಕೆ:—ಮುಂದೆ ಕಾಂಚೀಪುರವೂ ಕೂಡ ಭಗವದ್ಭಾಗವತರುಗಳಿಗೆ ತುಂಬಾ ಪ್ರಿಯವಾದ ಸ್ಥಳವಾದುದರಿಂದ ಅದೂ ಪ್ರಪನ್ನನಿಗೆ ವಾಸಯೋಗ್ಯವೆಂದು ತಿಳಿಸುತ್ತಾರೆ. ಇಲ್ಲಿರುವ ಅರ್ಚಾವತಾರವು ಶ್ರೀರಾಮರೂಪಿ ಎಂದೂ ಶ್ರೀ ಕೃಷ್ಣರೂಪಿ ಎಂದೂ ಅಭಿಪ್ರಾಯವಿರುವದರಿಂದ, ಪೂರ್ವಾರ್ಧದಿಂದ ಶ್ರೀರಾಮನಿಗೆ ಆವಾಸಭೂತವೆಂದೂ ಉತ್ತರಾರ್ಧದಿಂದ ಶ್ರೀಕೃಷ್ಣನಿಗೆ ಆವಾಸಭೂತವೆಂದೂ ಶ್ರೀಕಾಂಚೀ ನಗರದಲ್ಲಿರುವ ಹಸ್ತಿಗಿರಿಯನ್ನು ಕೊಂಡಾಡಿರುತ್ತಾರೆ.

ಅರ್ಥ:—**ಉತ್ತಮ** - ಶ್ರೇಷ್ಠವಾದ, "**ರಾಮ ರಾವಣಯೋರ್ಯುದ್ಧಂ ರಾಮ ರಾವಣಯೋರಿವ**" ರಾಮ ರಾವಣರ ಯುದ್ಧವು ಹೇಗಿತ್ತು ಎಂದರೆ ಅದಕ್ಕೆ ಸಮಾನವಾದುದಾಗಿ ಉಪಮಾನ ಹೇಳಲು ಸಾಧ್ಯವಿಲ್ಲವುದರಿಂದ, ರಾಮ ರಾವಣರ ಹಾಗೆಯೇ ಇತ್ತು ಎಂದು ಹೇಳಿರುವ ಹಾಗೆ, ಅಸದೃಶವಾದ ಎಂಬರ್ಥವು, **ಅಮರ್** – ಯುದ್ಧಮಾಡುವ, **ತಲತ್ತ್** - ಸ್ಥಳದಲ್ಲಿ. **ಅಮೈತ್ತದು** - ಯೋಗ್ಯವಾದ ಅಥವಾ ಸಾಕಾದ ಎಂದರೆ ಶತ್ರುನಾಶಕ ಶಕ್ತಿಯುಳ್ಳ, **ಓರ್** - ಅದ್ವಿತೀಯವಾದ, **ಎಳಿಲ್** - ಔಜ್ವಲ್ಯವನ್ನು ಹೊಂದಿದ, **ತನು** - ಧನುಸ್ಸಿನಲ್ಲಿ, **ಉಯರ್‌ತ್ತ** – ಏರಿಸಲ್ಪಟ್ಟ, **ಕಣೈಯಾಲ್** - ಬಾಣದ ದೆಸೆಯಿಂದ, **ಅತ್ತಿರ ವರಕ್ಕರ್** - ಅಸ್ತ್ರಬಲ ಹೊಂದಿದ ರಾವಣನ, "**ದ್ವಿಧಾ ಭಜ್ಯೇಯಮಪ್ಯೇವಂ ನನಮೇಯಂ ಕಥಂಚನ**" "ಎರಡು ತುಂಡಾಗಿ ಕತ್ತರಿಸಿದರೂ ಕೂಡ ನಾನು ಯಾರಿಗೂ ತಗ್ಗಿ ನಮಸ್ಕಾರಮಾಡೆನು" ಎಂದು ಪ್ರತಿಜ್ಞೆ ಮಾಡಿದ ರಾವಣನ, **ಮುಡಿ ಪತ್ತುಮ್** - ಹತ್ತು ತಲೆಗಳನ್ನೂ, **ಒರು ಕೊತ್ತೆನ** - ಒಂದೇ ಗೊಂಚಲು ಎಂದು ಹೇಳುವ ಹಾಗೆ **ವುದಿರ್‌ತ್ತ** - ನೆಲಕ್ಕೆ ಉದುರಿಸಿದ, **ತಿರಲೋನ್** - ಸಾಮರ್ಥ್ಯ ಹೊಂದಿದ ಶ್ರೀ ರಾಮಚಂದ್ರನಾಗಿ, **ಅರುಳೋನ್** - ಎಂಬ ಪಾಠವಾದರೆ, ಅಂತಹ ದುಷ್ಟನಿಗ್ರಹ ಮಾಡಿ ಲೋಕಕ್ಷೇಮವನ್ನುಂಟುಮಾಡಿದ ಪರಮ ಕೃಪಾಳುವಾದ ಶ್ರೀರಾಮನಾಗಿ ಎಂಬರ್ಥವು; ಮುಂದೆ ಕೃಷ್ಣಾವತಾರವಾಗಿ ಭಾವಿಸಿ ಸ್ತುತಿಸುತ್ತಾರೆ:—**ಮತ್ತುರು** - ಕಡೆಗೋಲಿನಿಂದ ಬಲವಾಗಿ ಕಡೆಯಲ್ಪ

ತ್ತ್ರ ವೆಣ್ಣೆಯುಂ ನೃತ್ತ್ರ ಉಣುಮತ್ತ್ರಿಕ್ಕ್ ಇದನೂ । ಅತ್ತಿಗಿರಿ ಪತ್ತ್ರರ್ ವಿನೈ ತೊತ್ತ್ರರವರುಕ್ಕ್ಕುಮ್ ಅಣಿಯುಕ್ಕಿರಿಯೇ ।

ಟ್ಟಿದುದರಿಂದ, ಮಿಗತ್ತ ಕಳಿಯ್ - ಆಧಿಕ್ಯವನ್ನು ಹೊಂದಿದ ಮೊಸರು, ಮೊಸರು ತುಂಬಾ ಗಟ್ಟಿಯಾಗಿದ್ದುದರಿಂದ ಬಲದಿಂದ ಕಡೆಯಲ್ಪಟ್ಟುದೆಂದು ಹೇಳಲ್ಪಟ್ಟಿತು. ಅಂತಹ ಮೊಸರನ್ನು ಕಡೆದರೆ ಅದು ಪುಷ್ಟಿಯಾಗುತ್ತದೆಂಬ ತಾತ್ಪರ್ಯವು, ಅಂತಹ ಮೊಸರಿನಲ್ಲಿ, ನೆಱುಂತ್ತ್ರ - ಉಂಟಾದ, ವೆಣ್ಣೆಯ್ - ಬೆಣ್ಣೆಯು, ನೃತ್ತ್ರ - ಯಶೋದೆಯೂ ಮತ್ತು ಇತರ ಗೋಪಿಕಾ ಸ್ತ್ರೀಯರೂ ಇಟ್ಟಿಂಥಾದ್ದನ್ನು, ಉಣುಮನ್ - ಭುಜಿಸುವ, ಅತ್ತ್ರಿಕ್ಕ - ಭಗವಾನ್ನನಾದ ಶ್ರೀಕೃಷ್ಣನೂ ಆಗಿ, ಇಂತಹ ನಾನು ಕೃಷ್ಣಾವತಾರಗಳನ್ನು ಮಾಡಿದ ಸರ್ವೇಶ್ವರನ, ಇದನಾಯನ್ - ವಾಸಸ್ಥನಾಗಿರುವ, ಅತ್ತಿಗಿರಿ - ಹಸ್ತಿಗಿರಿಯು ಕಾಂಚೀಪುರದಲ್ಲಿ ಶ್ರೀ ವರದನು ಬಿಜಮಾಡಿರುವ ಶ್ರೀ ಹಸ್ತಿಶೈಲವು, ಪತ್ತ್ರರ - ತನ್ನನ್ನಾಶ್ರಯಿಸಿದ ಭಕ್ತರ, ವಿನೈ - ಪಾಪಗಳನ್ನು, ತೊತ್ತ್ರರ - ಅವುಗಳೊಂದಿಗೆ ಸ್ವಲ್ಪವೂ ಸಂಬಂಧವಿಲ್ಲದ ಹಾಗೆ ಆಮೂಲಾಗ್ರವಾಗಿ, ಅರುಕ್ಕುಮ್ - ನಾಶಮಾಡುತ್ತದೆ. ಹಸ್ತಿಗಿರಿ ಪರ್ವತವೇ ನಾಶಮಾಡುತ್ತದೆಯಾದುದರಿಂದ, ಅತ್ತಿಗಿರಿ - ಈ ಶ್ರೀ ವರದನು ತನ್ನ ಭಕ್ತರ ಶತ್ರುಗಳನ್ನೂ ವಿರೋಧಿಗಳಾದ ಪಾಪಗಳನ್ನೂ ಪರಿಹರಿಸುವದಕ್ಕಾಗಿ ಧರಿಸಿದ ದಿವ್ಯಾಯುಧಭೂಷಣವಾದ ಚಕ್ರಾಯುಧವು, ಅಣಿಯೇ - ಇಲ್ಲಿ ಅಲಂಕಾರಪ್ರಾಯವಾದುದು ಮಾತ್ರವೇ. ಏಕೆಂದರೆ ಭಕ್ತರ ವಿರೋಧಿನಿಗ್ರಹವೆಲ್ಲಾ ಹಸ್ತಿಗಿರಿಯೇ ಮಾಡುವುದರಿಂದ, ಸ್ವಾಮಿ ಚಕ್ರವು ಅಲಂಕಾರಮಾತ್ರವೇ ಎಂಬಭಿಪ್ರಾಯವು.

ತಾತ್ಪರ್ಯವು. ಶ್ರೀ ಕಾಂಚೀ ವರದನನ್ನು ಶ್ರೀರಾಮನೆಂದು ಭಾವಿಸಿ ರಾವಣ ಸಂಹಾರಕನಾಗಿ ಸ್ತುತಿಸುತ್ತಾರೆ. ಶ್ರೀರಾಮ ರಾವಣರ ಯುದ್ಧವು ಅದ್ಭುತವಾದುದಾಗಿ ಅನುಪಮವಾದುದು, ಅದುದರಿಂದ ಉಪಮೆ ಅಸ್ತುರ್ - ಎಂದು ಹೇಳುತ್ತಾರೆ. ಅವರುಗಳ ಯುದ್ಧವು "ರಾಮರಾವಣಯೋರ್ಯುದ್ಧಂ" ಅದನು "ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ," ಗಗನ ಸಾಗರಗಳಿಗೆ ಉಪಮೆಯಾಗಿ ಮತ್ತೊಂದು ಇಲ್ಲದೆ ಗಗನವು ಗಗನದ ಹಾಗೆ ಸಾಗರವು ಸಾಗರದ ಹಾಗೆ ಎಂದು ಹೇಗೆ ಹೇಳಬೇಕಾಗುತ್ತದೋ, ಹಾಗೆಯೇ ಇವರುಗಳ ಯುದ್ಧವು ಬೇರೆ ಉಪಮೆ ಇಲ್ಲದುದರಿಂದ ಇವರ ಯುದ್ಧವು ಇವರ ಯುದ್ಧದ ಹಾಗೆ ಎಂದೇ ಹೇಳಬೇಕಾಗಿದೆ. ಅಂತಹ ಅದ್ಭುತವಾದ ಯುದ್ಧದಲ್ಲಿ ಧರಿಸಿದ

ಅದ್ಭುತವಾದ ತೇಜಸ್ಸುಳ್ಳ ಧನುಸ್ಸನ್ನು ಧರಿಸಿದನೆಂದು ಅಮೃತತ್ತ್ವದ ಓರ್ ಎಳಿಲ್ ತನು ಎಂಬುದರಿಂದ ತಿಳಿಯುತ್ತದೆ. ಹಿಂದೆ ಪೂರ್ವದಲ್ಲಿ ದೇವತೆಗಳಿಗಾಗಿ ವಿಷ್ಣುರುದ್ರರ ಸಾಮರ್ಥ್ಯ ಪರೀಕ್ಷಾರ್ಥವಾಗಿ ವಿಶ್ವಕರ್ಮನಿಂದ ಮಾಡಲ್ಪಟ್ಟ ಎರಡು ಧನುಸ್ಸುಗಳಲ್ಲಿ ಒಂದು ಶಿವನ ಧನುಸ್ಸು ವಿಷ್ಣುವಿನ ಧನುಸ್ಸಿನಿಂದ ಸ್ತಂಭೀಭೂತವಾಗಿ ಮಾಡಲ್ಪಟ್ಟುದರಿಂದ "ಜೃಂಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣು ಪರಾಕ್ರಮೈಃ । ಅಧಿಕಂ ಮೇನಿರೇ ವಿಷ್ಣುಂ ದೇವಾಸ್ಸರ್ಷಿಗಣಾಸ್ತದಾ ॥" ವಿಷ್ಣುವೇ ಅಧಿಕನೆಂದು ದೇವತೆಗಳೂ ಋಷಿಗಳೂ ತಿಳಿ ಹಿಗ್ಗಿದರು. ರುದ್ರನು ಆ ಧನುಸ್ಸನ್ನು ಜನಕವಂಶದವನಾದ ದೇವರಾತನಿಗೆ ಕೊಟ್ಟನು. ವಿಷ್ಣುವು ತನ್ನ ಧನುಸ್ಸನ್ನು ಋಚೀಕನೆಂಬ ಋಷಿಯ ಅಧೀನದಲ್ಲಿಟ್ಟನು. ಆ ರುದ್ರನ ಧನುಸ್ಸನ್ನು ಜನಕರಾಜನ ಸಭೆಯಲ್ಲಿ ಶ್ರೀರಾಮನು ವಿಷ್ಣ್ವವತಾರನಾದುದರಿಂದ ಬಹು ಸುಲಭವಾಗಿ ಮುರಿದು ಸೀತಾ ವಿವಾಹವನ್ನು ಮಾಡಿಕೊಂಡನು. ಋಚೀಕನಲ್ಲಿದ್ದ ವೈಷ್ಣವ ಧನುಸ್ಸು ಅವನ ಮಗ ಜಮದಗ್ನಿ ಮೂಲಕವಾಗಿ ಅವನ ಪುತ್ರನಾದ ಪರಶುರಾಮನಿಗೆ ಸೇರಿತು. ಶ್ರೀರಾಮನು ಶಿವ ಧನುಸ್ಸನ್ನು ಮುರಿದನೆಂದು ಕೇಳಿದ ಒಡನೆಯೇ, ಪರಶುರಾಮನು ಶ್ರೀರಾಮನೊಂದಿಗೆ ಸ್ಪರ್ಧೆಯುದ್ಧಕ್ಕೆ ಬಂದು, ಆ ವೈಷ್ಣವ ಧನುಸ್ಸನ್ನು ಬಗ್ಗಿಸಿ ತೋರಿಸಿ, ಇದಕ್ಕೆ ಹೆದೆಯನ್ನು ಕಟ್ಟಿ ಬಾಣಪ್ರಯೋಗವನ್ನು ಮಾಡಿದರೆ ಆಗ ನಿನ್ನ ದ್ವಂದ್ವ ಯುದ್ಧಕ್ಕೆ ಅರ್ಹನೆಂದು ಭಾವಿಸುವೆನೆನ್ನಲು, ಒಡನೆ ಶ್ರೀರಾಮನು ಧನುಸ್ಸನ್ನು ಬಗ್ಗಿಸಿ, ಹೆದೆಯನ್ನು ಏರಿಸಿ ಬಾಣವನ್ನೇರಿಸಲು, ಪರಶುರಾಮನು ತನ್ನ ಕಂಡು ಆ ಧನುಸ್ಸನ್ನೂ ಬಾಣಗಳನ್ನೂ ಶ್ರೀರಾಮನಲ್ಲೇ ಬಿಟ್ಟು, ಅವತಾರ ಸಮಾಪ್ತಿಗಾಗಿ ಮಹೇಂದ್ರಾದ್ರಿಗೆ ತೆರಳಿದನು. ಶ್ರೀರಾಮನು ಆ ಧನುಸ್ಸನ್ನು ವರುಣನಲ್ಲಿ ಕೊಟ್ಟಿದ್ದುದರಿಂದ ಅದು ಇಂದ್ರನ ಮೂಲಕ ಅಗಸ್ತ್ಯ ಮುನಿಯ ವಶಕ್ಕೆ ಬಂದಿತು. ಅದನ್ನು "ಇದಂ ದಿವ್ಯಂ ಮಹಚ್ಚಾಪಂ ಹೇಮವಜ್ರವಿಭೂಷಿತಂ । ವೈಷ್ಣವಂ ಪುರುಷವ್ಯಾಘ್ರ ನಿರ್ಮಿತಂ ವಿಶ್ವಕರ್ಮಣಾ ॥" ಎಂಬ ಶ್ಲೋಕ, ಮತ್ತು ಬ್ರಹ್ಮದತ್ತವಾದ ಬಾಣವನ್ನೂ ಶಕ್ತಿಯನ್ನೂ ಅಗಸ್ತ್ಯ ಮಹಾ ಮುನಿಯು "ಅಜಹಾರ ಶ್ರಿಯಂ ದೀಪ್ತಾಂ" ಎಂಬ ರೀತಿ ಶ್ರೀರಾಮನಿಗೆ ಕೊಟ್ಟಿದನು. ಹೀಗೆ ವೈಷ್ಣವ ಧನುಸ್ಸು ಶ್ರೀರಾಮನ ವಶವಾದುದರಿಂದ, ಅದರಿಂದಲೇ ರಾವಣ ವಧೆಯನ್ನು ಮಾಡಿದನಾದ್ದರಿಂದಲೇ, ಎಳಿಲ್ ತನು, ಮಹಾ ತೇಜಸ್ಸನ್ನು ಹೊಂದಿದ ಧನುಸ್ಸೆಂದು ಹೇಳಲ್ಪಟ್ಟಿತು. ಹೀಗೆ ಧನುಸ್ಸಿನ ಮೂಲಕವಾಗಿಯೇ ದೇವರನಾಗಿ ಶ್ರೀರಾಮನು "ಬ್ರಹ್ಮದತ್ತಂ ಮಹಾಬಾಣಂ ಅಮೋಘಂ ರಘುನಂದನಃ । ಬ್ರಹ್ಮಣಾ ನಿರ್ಮಿತಂ ಸ್ವರ್ಣಂ ಇಂದ್ರದತ್ತಂ ಮಹೌಜಸಾ" ಎಂದು

ಹೇಳಿದಂತೆ ಹಾಗೆ ಅವನ್ನು ರಾಜ [illegible] ಈ ಸ್ಥಳದಲ್ಲಿ [illegible]
ಸಹಿಸದೆ [illegible]. [illegible] ಗುರು [illegible]
[illegible] "[illegible]"
ಎಂಬ ಬಿರುದನ್ನು ಕೊಟ್ಟಿದ್ದಾರೆ. ಅಪ್ಪಳಾಯಿಗಳು ಶಕ್ತಿಯನ್ನು [illegible]
ಮಾಡಿ ಮೇಲೆ [illegible] ಧಾರೆಯಾಗಿ [illegible]
ಧರಿಸಿ ಚಕ್ರವನ್ನು [illegible] ಬಾಣಗಳು. ಆ ಶಕ್ತಿ
[illegible], ಆ ಚಕ್ರಗಳ [illegible] ಭೇದಿಸಿ [illegible]
ಮಾಡಿದರು. [illegible] ಪರಾಕ್ರಮವನ್ನು [illegible]. ಆತನ ಪರ [illegible]
ಗಳನ್ನು ಒಂದೇ ಸಲ ಒಂದು ಮರದ ಗೊಂಚಲನ್ನು ಭೇದಿಸುವ ಹಾಗೆ ನೆಲಕ್ಕೆ
ಬೀಳಿಸಿದ ಶ್ರೀರಾಮನು. ಇಂತಹ ಅಪ್ರತಿಮ [illegible] ಧೀರೋದಾತ್ತನು
[illegible] ಎಂದು ವರ್ಣಿಸುತ್ತಾರೆ

ಹಾಗೆ ಶ್ರೀರಾಮನೆಂದು ಭಾವಿಸಿ ಆತನ [illegible] ಚೇಷ್ಟಿತಗಳನ್ನು
ಕೊಂಡಾಡಿ [illegible] ಕೃಷ್ಣನೆಂಬ ಭಾವನೆಯಿಂದ ಆತನ ದಿವ್ಯಲೀಲೆಗಳನ್ನು ಪ್ರಶಂ
ಸಿಸುತ್ತಾರೆ. ಯಶೋದೆಯೂ ಮತ್ತು ಇತರ ಗೋಪಿಕಾ ಸ್ತ್ರೀಯರೂ ಘಟ್ಟಿಯಾಗಿ
ಬೆಣ್ಣೆ ಹಾಲಿನ [illegible] ಕರೆದು ತೆಗೆದ ನವನೀತವನ್ನು ಶ್ರೀಕೃಷ್ಣನ ಭಯ
[illegible] ಆತನಿಗೆ ಸಿಕ್ಕದ ಹಾಗೆ ನಲುವಿನ ಮೇಲೆ ಇಟ್ಟಿದ್ದರೂ, ಅದನ್ನೂ
ಒಡೆದ [illegible] ದೊಂದಿಗೆ ಮೆದ್ದನು. ಈ ಸಂದರ್ಭದಲ್ಲಿ ಶ್ರೀ ಕೂರೇಶರವರ
ಸುಂದರಬಾಹುಸ್ತವದ [illegible] ಶ್ಲೋಕವನು [illegible] :—

ಸಖ್ಯೇನ ಗವ್ಯ ಪಿಬತೋ ನಿಜಧಾಮ್ನಿ ಭೂಮನ್ ದಧ್ಯಸ್ತ್ರ ಸದ್ಮಸು ಕಿ
ಮರ್ಥ ಮುಪಾಹರಸ್ತ್ವಂ । ಸುಷ್ಠಂ [illegible] ಕಿಂ ವ್ಯಜಘಟೋ ಘಟಶೇಷ
ಮತ್ರ ಗೋಪೀಜನಸ್ಯ ಪರಿಹಾಸಪದಂ ಕಿಮಾಸೀಃ । "ನಿನಗೆ ಸ್ವಕೀಯ
ನಾದ ಯಶೋದೆಯ ಮನೆಯಲ್ಲೇ ಹಾಲು ಮೊಸರು ಬೆಣ್ಣೆ ಎಲ್ಲವೂ ಸಮೃದ್ಧಿಯಾ
ಗಿದ್ದರೂ ನೆರೆಹೊರೆಯವರ ಮನೆಯಲ್ಲಿ ಇವುಗಳನ್ನೇಕೆ ಕಳವು ಮಾಡಿದೆ? ಆಗಲಿ
ಹಾಗೆ ಬಚ್ಚಿಟ್ಟಿದ್ದನ್ನೇ ತಿಂದು, ನೀನು ತಿಂದು ಮಿಕ್ಕಿದುದನ್ನು ಗಡಿಗೆಯೊಂದಿಗೆ
ಅವರುಗಳ ಮುಂದೆಯೇ ಏಕೆ ಒಡೆದುಹಾಕಿದೆ? ಹಾಲು ಮೊಸರು ಬೆಣ್ಣೆ ಮುಂತಾ
ದುವನ್ನು ಮೈಮೇಲೆಲ್ಲಾ ಸವರಿಕೊಂಡು ಗೋಪೀಜನರ ಪರಿಹಾಸಕ್ಕೆ ಏಕೆ ಗುರಿ
ಯಾದೆ?" ಎಂದು ವರ್ಣಿಸುತ್ತಾರೆ. ಹಾಗೆ ಬೆಣ್ಣೆ ಮುಂತಾದುವು [illegible] ಮತ್ತು
ಇತರ ಗೋಪಿಯರ ಮನೆಯಲ್ಲಿ [illegible]. ಶ್ರೀಕೃಷ್ಣನಿಗೆ ಆಶ್ರಿತರಲ್ಲಿರುವ
ಪರಮ ಸೌಲಭ್ಯ ವಾತ್ಸಲ್ಯಗಳನ್ನು ನಿದರ್ಶಿಸುತ್ತವೆ. ರಾಮಾವತಾರದಲ್ಲಾಗಿ ಶರ
ಣಾಗತರ ರಕ್ಷಣವೂ, ಆವರುಗಳ ವಿರೋಧಿಗಳ ನಿರಸನವೂ, ಕೃಷ್ಣಾವತಾರದಲ್ಲಾಗಿ

ಆಶ್ರಿತರಲ್ಲಿ ವಿಶೇಷ ಪ್ರೇಮವೂ ಪ್ರದರ್ಶಿಸಲ್ಪಟ್ಟಿವೆ. ಎರಡು ಅವತಾರಗಳಲ್ಲಿಯೂ ತನಗೆ ಪ್ರಪನ್ನರ ರಕ್ಷಣವೇ ಮುಖ್ಯವೆಂಬ ತನ್ನ ಸಂಕಲ್ಪವನ್ನು ಅಭಯಂ ಸರ್ವ ಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ ಎಂದೂ "ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ" ಎಂಬ ಅಭಯೋಕ್ತಿಗಳಿಂದ ಮಹಾನುಭಾವನು ಪ್ರಕಟಿಸುತ್ತಾನೆ. ಹೀಗೆ ಪ್ರಕಟಿಸಿ ಮತ್ತು ಸೌಶೀಲ್ಯ, ಸೌಲಭ್ಯ, ವಾತ್ಸಲ್ಯ, ಕೃಪಾ ಪ್ರಭಾವಗಳಿಂದ ಗೃಧ್ರ, ವಾನರ, ವಾಯಸ, ರಾಕ್ಷಸಾದಿಗಳನ್ನು, ಗೋಪಿಕಾ ಸ್ತ್ರೀ, ಅಕ್ರೂರ, ಉದ್ಧವ ಮಾಲಾಕಾರಾದಿಗಳನ್ನು ಸಂರಕ್ಷಿಸಿದ ಮಹಾನುಭಾವನಾದುದರಿಂದ, ಅತ್ತ್ರ್ಯ ಪರಮಾಪ್ತನೆಂದು ಹೇಳಲ್ಪಟ್ಟಿರುತ್ತಾನೆ. "ರಾಮೋ ದ್ವಿರ್ನಾಭಿಭಾಷತೇ, ಶ್ರೀರಾಮನು ಎರಡು ಮಾತನ್ನಾಡುವವನಲ್ಲವು; ಸತ್ಯಸಂಕಲ್ಪನಾದುದರಿಂದ, "ದ್ಯೌಃ ಪತೇತ್ ಪೃಥಿವೀ ಶೀರ್ಯೇತ್ ಹಿಮವಾನ್ ಶಕಲೀ ಭವೇತ್ । ಶುಷ್ಯೇತ್ತೋಯನಿಧಿಃ ಕೃಷ್ಣೇ ನ ಮೇ ಮೋಘಂ ವಚೋ ಭವೇತ್ ॥" "ಓ ದ್ರೌಪದಿಯೇ, ಆಕಾಶವಾದರೂ ಕೆಳಕ್ಕೆ ಉರುಳೀತು, ಪೃಥಿವಿ ಶಿಥಿಲವಾದೀತು, ಹಿಮವತ್ಪರ್ವತವು ಚೂರುಚೂರಾದೀತು, ಸಮುದ್ರವು ಬತ್ತಿಹೋದೀತು, ನನ್ನ (ಶ್ರೀಕೃಷ್ಣನ) ವಾಕ್ಯವು ಎಂದಿಗೂ ವ್ಯರ್ಥವಾಗಲಾರದು ಎಂದು ಹೇಳಿದವನು. ಆದುದರಿಂದ ಪ್ರಪನ್ನರಿಗೆ ಆಪ್ತತಮನು. ಹಾಗೆಯೇ ಇನ್ನೊಂದು ಕಡೆಯಲ್ಲಿ, "ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಂ । ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ॥" ಎಂದರೆ ಶರಣಾಗತನ ಕೋರಿಕೆಯನ್ನು ನಡೆಸುವೆನೆಂಬ ಸಂಕಲ್ಪವು ನನ್ನ ಸ್ವಭಾವವಾದ್ದಕ್ಕಾಗಿ. ನನ್ನ ಪ್ರಾಣವನ್ನಾದರೂ ತೊರೆಯುವೆನು, ಪರಮಪ್ರಿಯಳಾದ ನಿನ್ನನ್ನಾದರೂ ಬಿಟ್ಟಗಲುವೆನು, ಲಕ್ಷ್ಮಣನನ್ನೂ ಕೂಡ ತ್ಯಜಿಸುವೆನು, ಇನ್ನು ಆ ಶರಣಾಗತರು ಬ್ರಹ್ಮವೇತ್ತೃಗಳಾದರೆ ಇನ್ನೂ ವಿಶೇಷವೇ, ಹೇಳತಕ್ಕದ್ದೇನಿದೆ ಎಂದು ಶ್ರೀರಾಮನು ಪ್ರಪನ್ನಜನರ ವಿಷಯದಲ್ಲಿ ತನ್ನ ಸಂಕಲ್ಪವನ್ನು ಸೀತೆಗೆ ತಿಳಿಸಿರುವುದರಿಂದ, ಆತನಿಗಿಂತ ಆಪ್ತರು ಇಲ್ಲವಾದುದರಿಂದ ಅತ್ತ್ರ್ಯ ಎಂದು ಪ್ರಯೋಗಿಸಿರುತ್ತಾರೆ. ಇಂತಹ ವಿಭವಾವತಾರಗಳಿಗೆ ಇದಂ - ವಾಚಸ್ಪತ್ಯವು ಈ ಹಸ್ತಿಗಿರಿಯವನಾದುದರಿಂದ ಪ್ರಪನ್ನಜನವಾಸಯೋಗ್ಯವೆಂಬ ಭಾವವು ಇಷ್ಟು ಮಾತ್ರವೇ ಅಲ್ಲವು. ಇಲ್ಲಿ ನಸುನಪದರಿಂದ ಪ್ರಪನ್ನನಿಗೆ ಬುದ್ಧಿಪೂರ್ವೋತ್ತರಾಘ ಸ್ಪೃಷ್ಟನಾದೀತೆಂಬ ಭಯಲೇಶವೂ ಇರುವುದಿಲ್ಲವು ಏಕೆಂದರೆ ಈ ಅತ್ತಿಗಿರಿ - ಹಸ್ತಿಗಿರಿಯು, ಪತ್ತರ್ ವಿನೈ ತೊತ್ತರವರುಕ್ಕುಮ್ - ಪ್ರಪನ್ನರ ಪಾಪಗಳನ್ನು ಆಮೂಲಾಗ್ರವಾಗಿ ಛೇದಿಸಿಬಿಡುತ್ತದೆ. ಆದುದರಿಂದ ಪ್ರಪನ್ನರ ವಿರೋಧಿವರ್ಗ ನಿವೃತ್ತಿಗೋಸ್ಕರ

ಸ್ವಾಮಿಯು ಕೈಯಲ್ಲಿ "ನಿಖಿಲದುಷ್ಕರ್ಮ ಕರ್ತನ" ಎಂದು ಸುದರ್ಶನಾಷ್ಟಕದಲ್ಲಿ ಹೇಳುವ ಹಾಗೆ, ಆಪಾಧವಾಗಿ ಆಭರಣರೂಪದಲ್ಲಿ ಧರಿಸಿರುವ ಸುದರ್ಶನ ಚಕ್ರವು, ಬೇ ಮಣಿಯು ಅಲಂಕಾರವೇ. ಭಕ್ತರ ಪಾಪನಿವರ್ತಕ ಕರ್ಮವನ್ನು ಹಸ್ತಿಗಿರಿಯೇ ನಡೆಸುವದರಿಂದ, ಚಕ್ರಾಪೇಕ್ಷೆಯಿಲ್ಲವೆಂಬ ಭಾವವು.

ಹೀಗೆ ಈ ಮೂರು ಪಾಶುರಗಳಿಂದ ಶ್ರೀರಂಗ, ತಿರುಮಲೆ, ಕಾಂಚೀಪುರಗಳ ಮಾಹಾತ್ಮ್ಯಗಳನ್ನು ವರ್ಣಿಸಿ ಇವುಗಳೇ ಪ್ರಪನ್ನನಿಗೆ ಪ್ರಧಾನವಾಸಯೋಗ್ಯ ಸ್ಥಳಗಳೆಂದುಪದೇಶಿಸಿರುತ್ತಾರೆ. ಹೀಗೆ ಮೂರು ಸ್ಥಳಗಳು ಮುಖ್ಯವೆಂದು ಹೇಳಿರುವದರಲ್ಲಿ ಇನ್ನೊಂದು ಸ್ವಾರಸ್ಯಾರ್ಥವು ತೋರಿಬರುತ್ತದೆ. ನಿತ್ಯಂತಚ್ಚರಣಾರವಿಂದ ಧ್ಯಾನಾಮೃತಾಸ್ವಾದಿಗಳಾದ ಪ್ರಪನ್ನರಿಗೆ ರಹಸ್ಯತ್ರಯವೇ ಪರಮಜೀವನವಾದುದರಿಂದ, ಈ ಮೂರು ಸ್ಥಳಗಳು ಈ ಮೂರು ರಹಸ್ಯಗಳ ಪ್ರತಿಪಾದಕಗಳೆಂದು ಈ ಮೂರು ಪಾಶುರಗಳಿಂದಲೂ ತೋರ್ಪಡಿಸಿರುತ್ತಾರೆ:—

(೧) ಆರಾದವರುಳಮುದಮ್ ಎಂಬ ಪಾಶುರದಲ್ಲಿ, ಶೆಳುಮರೈಯಿನ್ ಮೊದಲೆಳತ್ತು ಎಂಬುವದರಿಂದ ಮೂಲಮಂತ್ರದ ಪ್ರಣವಾರ್ಥವೂ, ತೀರಾದ ವಿನ್ನೈಯನ್ನೈತ್ತುಮ್ ತೀರ್ಕ್ಕುಂ ಕೋಯಿಲ್ ಎಂಬುವದರಿಂದ ಸಖಂಡ ನಮಶ್ಶಬ್ದಾರ್ಥವೂ, ಪೇಡಣರುಕ್ಕು ತುಣೈಯಾಂ ಕೋಯಿಲ್ ಎಂಬುವದರಿಂದ ಅಖಂಡ ನಮಶ್ಶಬ್ದಾರ್ಥವೂ, ಆರಾದವರುಳ ಮುದಮ್ ಎಂಬುವದರಿಂದ ನಾರಾಯಣ ಶಬ್ದಾರ್ಥವೂ, ತೊಳುದ ಕೋಯಿಲ್ ಎಂಬುದರಿಂದ ವ್ಯಕ್ತ ಚತುರ್ಥ್ಯರ್ಥವೂ ತೋರಿಬರುತ್ತವೆ.

(೨) ತಿರುಮಲೆ ಪಾಶುರದಲ್ಲಿ ದ್ವಯಮಂತ್ರದ ಪೂರ್ವಖಂಡದರ್ಥವು "ಪುಣ್ಣಿಯತ್ತಿನ್ ಪುಗುಲಿದೆನ್ನ ಪುಗಳೆಮ್ ವೆರ್ಪು" ಎಂಬುವದರಿಂದಲೂ, ಉತ್ತರ ಖಂಡಾರ್ಥವು "ಪೊನ್ನುಲಗಿಲ್ ಭೋಗಮೆಲ್ಲಾಮ್ ಪುಣರ್ಕುಮ್ ವೆರ್ಪು" ಎಂಬುವದರಿಂದಲೂ ಪ್ರದರ್ಶಿಸಲ್ಪಟ್ಟವು.

(೩) ಹಸ್ತಿಗಿರಿ ಪಾಶುರದಲ್ಲಿ ಶ್ರೀರಾಮಾವತಾರಿಯಾಗಿ ಪ್ರಪನ್ನರಿಗೆ ಪ್ರಬಲ ವಿರೋಧಿಯಾದ ದಶಶಿರೋರೂಪ ದಶೇಂದ್ರಿಯಗಳಿಂದುಂಟಾದ ಅನರ್ಥಗಳನ್ನು ಹೋಗಲಾಡಿಸುವ ಕೃಪಾಳು ಎಂದು ಹೇಳಿದುದರಿಂದಲೂ ಪತ್ತರ ವಿನ್ನೈತೊತ್ತುರವರುಕ್ಕುಮ್ ಎಂದು ಹೇಳಿರುವದರಿಂದಲೂ, ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎಂಬುವದರ ಅರ್ಥವೂ, ಪತ್ತರ ಎಂದು ಹೇಳಿರುವದರಿಂದ ಶರಣಂ ವ್ರಜ ಎಂಬುವದರ ಅರ್ಥವೂ ತೋರಿಬರುವದರಿಂದ, ಚರಮಶ್ಲೋಕಾಭಿಪ್ರಾಯವು ಉಪಪಾದಿತವಾಗಿರುತ್ತದೆ. ಚರಮಶ್ಲೋಕವೆನಿಸಿಗುವ ಅರ್ಜುನ ಲೀಲಾ ಸಾರಥಿಯಾದ ಶ್ರೀಕೃಷ್ಣನ ಅಮೋಘೋಕ್ತಿಯ ಹಾಗೆಯೇ ದಂಡಕಾರಣ್ಯ ತಪೋ

ತೇನಾರ್ ಕಮಲ ತ್ತಿರುಮಗಣಾತನ್ನಿಕಳ್‌ನ್ದುರೈಯುಮ್ ।
ವಾನಾಡು ಗನ್ನವರ್ ವೈಯತ್ತಿರುಪ್ಪಿಡಮ್ ವನ್ದರುಮ ॥

ಧನರ ಪರಮಪುರುಷನಾದ ಶ್ರೀರಾಮನೂ "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥" ಎಂಬ ಅಭಯೋಕ್ತಿಯನ್ನು ಹೇಳಿರುವುದರಿಂದ ಇದು ಶ್ರೀಮದ್ರಾಮಾಯಣ ಚರಮಶ್ಲೋಕವೆಂದು ಹೇಳಿಸಿಕೊಳ್ಳುತ್ತದೆ. ಹೀಗೆ ರಾಮಾವತಾರಿಯಾಗಿಯೂ, ಕೃಷ್ಣಾವತಾರಿಯಾಗಿಯೂ ತನ್ನ ದೃಢಸಂಕಲ್ಪವನ್ನು ಪ್ರಕಟಿಸಿದುದರಿಂದ ಆರ್ತ್ರಣ, ಪರಮಾಪ್ತವಾಕ್ಯವನ್ನುಪದೇಶಿಸಿದುದರಿಂದ ಪರಮಾಪ್ತನು ಎಂದು ಪ್ರಯೋಗಿಸಿರುತ್ತಾರೆ

ಮೇಲಿನ ಮೂರು ಶ್ಲೋಕಗಳಿಂದಲೂ ಭಾಗವತೋತ್ತಮರ ಭಗವತ್ ಕ್ಷೇತ್ರಗಳಲ್ಲಿ ಪ್ರಧಾನವಾದ ಮೂರು ಸ್ಥಳಗಳು, ಪ್ರಪನ್ನನಿಗೆ ದೇಹಾವಸಾನದವರೆಗೂ ಇರಲು ಯೋಗ್ಯವಾದ ಸ್ಥಳಗಳೆಂದು ಹೇಳಲ್ಪಟ್ಟವು. ಆದರೆ ದೇಹಯಾತ್ರೆ ಮೊದಲಾದ ಅನುಪಪತ್ತಿಗಳಿಂದ ಅಂತಹ ಸ್ಥಳಗಳಲ್ಲಿ ವಾಸಮಾಡಲು ಸಾಧ್ಯವಿಲ್ಲದೆ ಹೋದರೆ, ಆಗ ಭಗವಂತನಲ್ಲಿ ನ್ಯಸ್ತಭರರಾಗಿಯೂ ಮಹಾಪ್ರಾಜ್ಞರಾಗಿಯೂ ಇರುವ ಮಹಾ ಭಾಗವತರು ವಾಸಿಸುವ ಸ್ಥಳವೇ ಸಕಲ ಪುಣ್ಯಸ್ಥಳಗಳೂ ಪುಣ್ಯತೀರ್ಥಗಳೆಂದು ಒಂದು ಪಾಸುರದ ಮೂಲಕ, ಈ ಅಧಿಕಾರದಲ್ಲಿ ಉಪಪಾದಿಸಿದ ಅರ್ಥವನ್ನೇ, ಸಂಗ್ರಹಿಸುತ್ತಾರೆ. ಅಂಥಾವನು ವಾಸಿಸುವ ದೇಶವೇ, "ವಸಂತಿ ವೈಷ್ಣವಾ ಯತ್ರ ತತ್ರ ಸನ್ನಿಹಿತೋ ಹರಿಃ" ಎಲ್ಲಿ ವೈಷ್ಣವರು ವಾಸ ಮಾಡುತ್ತಾರೆಯೋ ಅಲ್ಲಿಯೇ ಶ್ರೀಹರಿಯು ಸಿದ್ಧವಾಗಿರುವನು ಎಂದೂ, "ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶಿನಂ । ಅನುವ್ರಜಾಮ್ಯಹ ನ್ನಿತ್ಯಂ ಪೂಯೇಯೇತ್ಯಂಘ್ರಿರೇಣುಭಿಃ" ಯಾವುದರಪೇಕ್ಷೆಯೂ ಇಲ್ಲದೆ, ಬಾಹ್ಯೇಂದ್ರಿಯ ಅಂತರಿಂದ್ರಿಯ ನೈರ್ಮಲ್ಯ ಹೊಂದಿ, ಯಾರನ್ನೂ ದ್ವೇಷಿಸದೆ ಎಲ್ಲರನ್ನೂ ಸಮವಾಗಿ ನೋಡುವ ಮಹಾನುಭಾವನನ್ನು ಸದಾ ಅನುಸರಿಸಿ ನಡೆಯುವೆನು, ಆತನ ಪಾದರಜಸ್ಸಿನಿಂದ ಪವಿತ್ರತೆಯನ್ನು ಹೊಂದುವೆನೆಂದು ಹೇಳಿರುವ ಹಾಗೆ, ಸರ್ವವಿಧ ಪುಣ್ಯಕ್ಷೇತ್ರಗಳೂ ಸೇರಿರುವ ಸ್ಥಳವೆಂದು ಭಾವಿಸತಕ್ಕದ್ದೆಂದು ಹೇಳುತ್ತಾರೆ.

ಅರ್ಥ :— ತೇನ್ - ಮಧುವಿನಿಂದ, ಆರ್ - ಪೂರ್ಣವಾದ, ಕಮಲ - ಪದ್ಮಸ್ಥಾನೀಯವಾದ, ತಾವರೇ ಪುಷ್ಪದಲ್ಲವತರಿಸಿದ, ತಿರುಮಗಳ್ - ನಾರೀಣಾಮುತ್ತಮಾ ವಧೂಃ ಎಂದು ಹೇಳಿರುವ ಹಾಗೆ, ಸ್ತ್ರೀಶ್ರೇಷ್ಠೆಯಾದ ಲಕ್ಷ್ಮಿಯು.

ಕಾನಾರಿಮುಯಮುಮ್ ಗಙ್ಗೈಯುಮ್ ಕಾವಿರಿಯುಮ್ ಕಡಲುಮ್।
ನಾನಾ ನಗರುಮುಮ್ ನಾಕಮುಮ್ ಕೂಡಿಯ ನನ್ನಿಲಮೇ ॥ ೭೫ ॥

ನಾಥನ್ - ಪತಿಯಾದ ನಾರಾಯಣನು, **ತಿಗಳ್‌ನ್ದು** - ಪ್ರಕಾಶಿಸುತ್ತಿರುವನಾಗಿ, ಸ್ವಯಂಪ್ರಕಾಶನಾಗಿ, **ತಿಗಳ್‌ನ್ದು** ಎಂಬುವದನ್ನು **ವಾನಾಡು**ವಿಗೆ ವಿಶೇಷಣವೆಂದು ಭಾವಿಸಿ, ಸ್ವಯಂಪ್ರಕಾಶವಾಗಿರುವ ಎಂದರ್ಥವನ್ನು ಹೇಳಬಹುದು **ಉರೈಯುಮ್** - ನಿತ್ಯವಾಸ ಮಾಡುವ, **ವಾನಾಡು** - ಪರಮಪದವನ್ನು, **ಉಗನ್ದವರ್** - ಪ್ರಯೋಜನಾಂತರಾಭಿಲಾಷೆಯಿಲ್ಲದೆ, ಅಲ್ಲಿ ಭಗವತ್ಕೈಂಕರ್ಯವನ್ನೇ ಪ್ರಾರ್ಥಿಸುವ ಮಹಾಭಾಗವತರಾದ ಪ್ರಪನ್ನರ, **ವೈಯ್ಯತ್ತು** - ಭೂಮಿಯಲ್ಲಿ, **ಇರುಪ್ಪಿಡಮ್** - ವಾಸಸ್ಥಾನವು, **ವನ್ದುರುಮು** - ಒಳ್ಳೆಯದಾದ ಧರ್ಮಕ್ಷೇತ್ರಗಳಾದ, ಎಂದರೆ ಶಾಸ್ತ್ರದ ವಿಧಿ ನಿಷೇಧ ವಾಕ್ಯಗಳಿಗನುಸಾರವಾಗಿ ಪ್ರವೃತ್ತಿನಿವೃತ್ತಿ ಧರ್ಮಗಳುಳ್ಳ ಎಂಬರ್ಥವು. ಇದು ಮುಂದೆ ಹೇಳುವ **ಕಾನಾರಿಮುಯಮುಮ್, ಗಙ್ಗೈಯುಮ್** ಎಂಬ ಎರಡಕ್ಕೂ ವಿಶೇಷಣವು **ಕಾನಾರಿಮುಯಮುಮ್** - ಕಾನ್, ಆರ, ಯಿಮಯಮುಮ್ ಕಾನನದಿಂದ ಪೂರ್ಣವಾದ ಹಿಮವತ್ಪರ್ವತವು ಇದರಿಂದ ಬದರಿಕಾಶ್ರಮವೂ; ಸಾರದೀಪಿಕಾ ಸಾರವರಣೆ ಮೊದಲಾದ ಎಲ್ಲಾ ವ್ಯಾಖ್ಯಾತೃಗಳು **ವನ್ದುರುಮು** ಎಂಬುದನ್ನು ಕಾನನಪೂರ್ಣವಾದ ಹಿಮವತ್ಪರ್ವತಕ್ಕೆ ಮಾತ್ರವೇ ವಿಶೇಷಣವಾಗಿ ಭಾವಿಸಿರುತ್ತಾರೆ; ಮುಂದೆ ಹೇಳಿರುವ ಪುಣ್ಯಸ್ಥಳಗಳೂ ಧರ್ಮಕ್ಷೇತ್ರಗಳಾದುದರಿಂದ, **ವನ್ದು**ರುಮು ಗಙ್ಗೈಯುಮ್, **ವನ್ದುರುಮು ಕಾವಿರಿಯುಮ್** ಎಂದು **ಅನ್ವಯಿಸಬಹುದು.** ಗಙ್ಗೈ**ಯುಮ್** - ಗಂಗಾತೀರ ಪುಣ್ಯಸ್ಥಳಗಳಾದ ಹರಿದ್ವಾರ, ಪ್ರಯಾಗ, ಕಾಶಿ ಮೊದಲಾದ ಪುಣ್ಯತೀರ್ಥಗಳೂ, **ಕಾವಿರಿಯುಮ್** - ಕಾವೇರೀ ನದಿಯ ತೀರಕ್ಷೇತ್ರಗಳಾದ ಶ್ರೀರಂಗ, ಶ್ರೀರಂಗಪಟ್ಟಣಾದಿ ದಿವ್ಯದೇಶಗಳೂ ಪುಣ್ಯತೀರ್ಥಗಳೂ, **ಕಡಲುಮ್** - ಸಮುದ್ರತೀರದಲ್ಲಿರುವ ಪುಣ್ಯಕ್ಷೇತ್ರಗಳಾದ ದರ್ಭಶಯನ, ಜನಾರ್ದನ, ಸೇತು ಮೊದಲಾದವುಗಳೂ. **ನಾನಾನಗರುಮುಮ್** - ಅವಂತೀ, ಮಥುರಾ, ಮಾಯಾ, ಮೊದಲಾದ ಅನೇಕ ದಿವ್ಯ ಕ್ಷೇತ್ರಗಳೂ, **ನಾಕಮುಮ್** - ಪರಮಪದವೂ, **ಕೂಡಿಯ** - ಇವೆಲ್ಲಾ ಒಟ್ಟಿಗೆ ಸೇರಿರುವ, **ನನ್ನಿಲಮೇ** - ಸರ್ವೋತ್ಕೃಷ್ಟವಾದ ದಿವ್ಯಸ್ಥಳವೆಂದೇ ಭಾವಿಸತಕ್ಕದ್ದು.

ತಾತ್ಪರ್ಯ :— ಭಗವದಭಿಮತವಾಗಿ ಭಾಗವತ ಪ್ರಾಚುರ್ಯವುಳ್ಳ ಸ್ಥಳವು ಪ್ರಪನ್ನನಿಗೆ ವಾಸಯೋಗ್ಯವಾಗಿ ಲಭಿಸಿದರೆ ಅತ್ಯುತ್ತಮವೆಂದು ಹೇಳಲ್ಪಟ್ಟಿತು.

ಇವೆರಡೂ ಸೇರಿರುವ ಸ್ಥಳವು ಅನುಕೂಲಿಸದಿದ್ದರೆ, ಕರ್ಮನಿಷ್ಠೆ ಜ್ಞಾನನಿಷ್ಠೆಗಳಿಂದ ಬೆಳಗುತ್ತಿರುವ ಒಬ್ಬ ಮಹಾಭಾಗವತನು ವಸಿಸುವ ಸ್ಥಳದಲ್ಲೇ ವಾಸ ಮಾಡುವದು ಯೋಗ್ಯವು. ಅಂತಹ ಭಾಗವತೋತ್ತಮನಿಂದ, **"ದರ್ಶನಾದೇವ ಸಾಧವಃ"** ಎಂದೂ, **"ಅಘಂ ನಿಪಶ್ಚಿ ತೋಘ್ನಂತಿ ಮುಹೂರ್ತ ಸೇವಯಾ"** ಎಂದೂ ಹೇಳಿರುವ ಹಾಗೆ, ಆ ಸ್ಥಳವು ತುಂಬಾ ಪವಿತ್ರವಾದುದು ಆಗುವದರಿಂದ, ಎಲ್ಲಾ ಧರ್ಮಕ್ಷೇತ್ರಗಳೂ ಪುಣ್ಯತೀರ್ಥಗಳೂ ಅಲ್ಲಿಯೇ ಸೇರಿವೆಯೆಂದು ಭಾವಿಸತಕ್ಕದ್ದು. ಸಮುದ್ರಸ್ನಾನ, ಗಂಗಾಸ್ನಾನ, ಕಾವೇರೀ ಸ್ನಾನ, ಮತ್ತು ನಾನಾ ನಗರಿಯಲ್ಲಿನ ಪುಣ್ಯಕ್ಷೇತ್ರಗಳ ವಾಸ ಇವುಗಳಿಂದೆಲ್ಲಾ ಉಂಟಾಗುವ ಫಲವು ಅಂತಹ ಭಾಗವತೋತ್ತಮನಿರುವ ಸ್ಥಳದಲ್ಲೇ ಲಭಿಸುತ್ತದೆ ಎಂಬ ಭಾವವು.

ತೇನಾರ್ ಕಮಲ ತ್ತಿರುಮಗಳ್ ನಾಥ್ರ. ಮಕರಂದ ರಸಪರಿಪೂರ್ಣವಾದ ಕಮಲದಲ್ಲಿ ಅವತರಿಸಿದವಳು ಲಕ್ಷ್ಮಿಯು ಎಂದು ಹೇಳಿರುವದರಿಂದ ಆಕೆಯು ಮಾರ್ದವ ಲಾವಣ್ಯಗಳಿಂದ ಕೂಡಿದವಳೆಂದೂ ಹಾಗೆಯೇ ಅನುಗ್ರಹ ಮೂರ್ತಿ ಎಂದೂ, ಅಜ್ಞಾತನಿಗ್ರಹಳೆಂದೂ ಹೇಳಲ್ಪಟ್ಟಿತು. **ತೇನಾರ್** ಎಂದು ಹೇಳಿರುವದರಿಂದ ಆವಳನ್ನಾಶ್ರಯಿಸಿದರೆ ಮನೋರಥ ಪೂರ್ಣವಾಗದೇ ಇರಲಾರದೆಂಬ ಭಾವವು. ಇಂತಹ ಪುರುಷಕಾರಭೂತಳಾದವಳಿಗೆ ನಾಥನಾದುದರಿಂದ, ಶ್ರೀಮನ್ನಾರಾಯಣನು ಶಾಸ್ತ್ರವಾಗಿ ಶಿಕ್ಷಿಸಬೇಕೆಂದಿದ್ದರೂ, ಲಕ್ಷ್ಮಿಯ ಮಾತಿಗೆ ಕಟ್ಟುಬಿದ್ದು, ಶಿಕ್ಷಿಸದೆ ರಕ್ಷಿಸುವನು. ಪ್ರಾಪ್ಯದೆಸೆಯಲ್ಲಿ ಪರಮಪದದಲ್ಲಿ ಲಕ್ಷ್ಮೀಯುಕ್ತನಾಗಿಯೇ ಯಾವಾಗಲೂ ಇರುವನೆಂಬುವದೂ ತಿರುಮಗಳ್ ನಾಥ್ರ ಎಂಬುವದರಿಂದ ತೋರಿಬರುತ್ತದೆ **ತಿರುಮಗಳ್ ನಾಥ್ರ** ವಾಸಮಾಡುವ ಪರಮಪದವೆಂದು ಹೇಳಿದುದರಿಂದ ದ್ವಯದ ಉತ್ತರ ಖಂಡಾರ್ಥವೂ ಶ್ರೀಮಚ್ಛಬ್ದಾರ್ಥವೂ ಸಹ ಸೂಚಿಸಲ್ಪಟ್ಟವು. ಇಂತಹ ಪ್ರಾಪ್ಯವಲ್ಲಿ ಅಭಿಲಾಷೆಯುಳ್ಳ ಪರಮ ಭಾಗವತರು ವಸಿಸುವ ಪುಣ್ಯಸ್ಥಳವೇ ಭಗವತ್ಕ್ಷೇತ್ರಗಳೂ, ಪುಣ್ಯಕ್ಷೇತ್ರಗಳೂ, ದಿವ್ಯ ವೈಕುಂಠವೂ ಎಲ್ಲವೂ ಎಂಬ ಭಾವವು ಹಾಗೆಯೇ ಅಂತಹ ಭಾಗವತೋತ್ತಮನು ವಸಿಸುವ ಸ್ಥಳವನ್ನು ಅಭೀತಿಸ್ತವದಲ್ಲೂ **"ತದಕ್ಷತತಪೋವನಂ ತದಚ ರಾಜಧಾನೀ ಸ್ಥಿರಾ ಸುಖಸ್ಯ ಸುಖಸೂಸ್ಪದಂ ಸುಚರಿತಸ್ಯ ದುರ್ಗಂ ಮಹತ್"** ಅದೇ ಬದರಿಕಾಶ್ರಮವೇ ಮೊದಲಾದ ತಪೋವನವೆಂದೂ, ಸರ್ವೇಶ್ವರನಿಗೆ ರಾಜಧಾನಿಯಾದ ನಿತ್ಯವಿಭೂತಿಯೆಂದೂ, ಭಗವದ್ವಿಷಯಾನುಭವಕ್ಕೆ ಯೋಗ್ಯವಾದ ಸ್ಥಳವೆಂದೂ. ಭಾಗವತೋತ್ತಮ ಧರ್ಮದ ನಿರ್ಭೀತವಾದ ದುರ್ಗಪ್ರದೇಶವೆಂದೂ ಹೇಳಿರುತ್ತಾರೆ. ಇಲ್ಲಿ **ತಿರುಮಗಳ್ ನಾಥ್ರ ತಿಗಳ್ನ್ದ ಉರೈಯುಮ್ ನಾನಾಡು** ಎಂದು ಪ್ರಾಪ್ಯದೆಶೆಯನ್ನು ಸೂಚಿಸಿರುವದರಿಂದ,

ಸಾ ಕಾಶೀತಿ ನ ಚಾಕಶೀತಿ ಭುವಿ ಸಾ ಯೋಧ್ಯೇತಿ ನಾಧ್ಯಾಸ್ಯತೇ ।

ಅವಕ್ಕೆ ಪೂರ್ವಭಾವಿಯಾದ ವಿಷಯವನ್ನು ತಿಳಿಸುವ ನಿರ್ಯಾಣಾಧಿಕಾರವು ಮುಂದೆ ಹೇಳಲ್ಪಡುವದೆಂಬುವದು ಸೂಚಿಸಲ್ಪಟ್ಟಿತು. ಹೀಗೆ ಭಾಗವತಾಧಿಷ್ಠಿತ ಸ್ಥಳವು ಪರಮ ಮಾಹಾತ್ಮ್ಯಯುಳ್ಳದು ಎಂಬುವ ಸಂದರ್ಭದಲ್ಲಿ "**ಯತ್ರ ಯತ್ರ ಚ ಮದ್ಭಕ್ತಾಃ ಪ್ರಶಾನ್ತಾಸ್ಸಮದರ್ಶಿನಃ । ಸಾಧವ ಸ್ಸಮುದಾಚಾರಾ ಸ್ತೇ ಪೂಯನ್ತೇಽಪಿ ಕೀಕಟಾಃ॥**" ಎಂಬ ಭಾಗವತ (೭. ೧೦. ೧೮) ಶ್ಲೋಕವು ಇಲ್ಲಿ ಅನುಸಂಧೇಯವು. ನರಹರಿಯು ಪ್ರಹ್ಲಾದನಿಗೆ ಹೇಳುತ್ತಾನೆ. ಎಲ್ಲೆಲ್ಲಿ ಬಾಹ್ಯೇಂದ್ರಿಯ ಅಂತರಿಂದ್ರಿಯಗಳನ್ನು ಜಯಿಸಿ, ಸಮಸ್ತ ಜಗತ್ತೂ ಭಗವದಾತ್ಮಕವಾದುದರಿಂದ ಸಮವಾಗಿ ನೋಡುತ್ತಾ, ಪರೋಪಕಾರಕರಾಗಿ ಆಚಾರ್ಯನಿಷ್ಠೆ ಜ್ಞಾನನಿಷ್ಠೆಗಳುಳ್ಳ ನನ್ನ ಭಕ್ತರು ವಸಿಸುತ್ತಾರೋ ಅವರೆಲ್ಲರೂ ಮ್ಲೇಚ್ಛದೇಶಗತರಾದರೂ ಹಾಗೆಯೇ ಅಲ್ಲಿ ಜನಿಸಿದರೂ ಪವಿತ್ರರೇ.

ಅವತಾರಿಕೆ:—ಮುಖ್ಯವಾಗಿ ಭಗವದ್ಭಾಗವತರಿಗೆ ಉಪಾದೇಯ ಸ್ಥಳವೇ ಕೃತಕೃತ್ಯನಾದ ಪ್ರಪನ್ನನಿಗೆ ದೇಹಾವಸಾನದವರೆಗೂ ವಾಸಯೋಗ್ಯಸ್ಥಳವೆಂದು ಹೇಳಿದರು. ಹಾಗೆ ಎರಡೂ ಲಭ್ಯವಾಗುವ ಸ್ಥಳದಲ್ಲಿರಲು ಅನುಕೂಲವಿಲ್ಲದಿದ್ದರೆ ಮಹಾ ಭಾಗವತೋತ್ತಮರಲ್ಲಿ ಒಬ್ಬನಾದರೂ ಇರುವ ಸ್ಥಳದಲ್ಲಿ ಆತನ ಪ್ರಸನ್ನತೆಯನ್ನು ಹೊಂದಿ ವಸಿಸಿದರೆ, ಸರ್ವಪುಣ್ಯಕ್ಷೇತ್ರ ಸರ್ವಪುಣ್ಯತೀರ್ಥಗಳಲ್ಲಿ ವಾಸ ಮಾಡಿದುದಕ್ಕೇನೂ ಕಮ್ಮಿಯಾಗುವದಿಲ್ಲವೆಂದುಪದೇಶಿಸಿದರು. ಈ ಎರಡನೇ ಅಭಿಪ್ರಾಯವನ್ನೇ ಸ್ಥಿರಪಡಿಸುವದಕ್ಕಾಗಿ, ಹಿಂದೆ "**ಪ್ರಾಯೋದೇಶಾ ಮುನಿಭಿರುದಿತಾಃ ಪ್ರಾಯಕೌಚಿತ್ಯವಂತಃ**" ಅಧಿಕಾರಾದಿ ಶ್ಲೋಕದಲ್ಲಿ ಅನ್ವಯರೀತಿಯಲ್ಲಿ ಹೇಳಿದುದನ್ನು, ಈಗ ವ್ಯತಿರೇಕ ರೀತ್ಯಾ ಹೇಳುವವರಾಗಿ, ಒಂದಾನೊಂದು ಕಾಲದಲ್ಲಿ ಭಗವದಧಿಷ್ಠಿತ ಪ್ರದೇಶವೆಂದು ಮಹಾಪ್ರಸಿದ್ಧಿಯನ್ನು ಭಾಗವತರಿಂದಲಾಗಲಿ ಋಷಿಗಳಿಂದಾಗಲಿ ಹೊಂದಿದ್ದರೂ, ಈಗ ಅಂತಹ ಭಾಗವತರುಗಳಿಗೆ ಅದು ಉಪಾದೇಯವಲ್ಲದೆ ಹೋದರೆ, ತಮಗೂ ಕೂಡ ಅಂತಹ ಪ್ರದೇಶವು ವಾಸಯೋಗ್ಯವಲ್ಲವೆಂದುಪದೇಶಿಸುತ್ತಾರೆ.

ಅರ್ಥತಾತ್ಪರ್ಯಗಳು:—**ವೈಕುಂಠಕಥಾ ಸುಧಾರಸಭುಜಾಂ**-ವೈಕುಂಠ-ಶ್ರೀಮನ್ನಾರಾಯಣನ, ಕಥಾ-ದಿವ್ಯಚೇಷ್ಟಿತಗಳ ಕಥಾರಸ, ಸುಧಾರಸಭುಜಾಂ-ಸುಧೆಯನ್ನು ಸೇವಿಸಿದ ಮಹನೀಯರಾದ ಮಹಾಭಾಗವತರುಗಳ, **ಚೇತಸೇ**-ಮನಸ್ಸಿಗೆ, **ಯಾ**-ಯಾವ ಪ್ರಸಿದ್ಧ ಸ್ಥಳವಾಗಲಿ **ನೋರೋಚೇತ**-ವಾಸ

ಸಾವಂತೀತಿ ನ ಕಲ್ಮಷಾ ದವತಿ ಸಾ ಕಾಂಚೀತಿ ನೋದಂಚ ತಿ । ಧತ್ತೇ ಸಾ ಮಧುರೇ ತಿ ನೋತ್ತ ಮಧುರಂ (ರಾಂ) ಮಾನ್ಯಾ ಪಿ ನಾನ್ಯಾ ಪುರೀ । ಯಾ ವೈಕುಂಠ ಕಥಾ ಸುಧಾರಸ ಭುಜಾಂ ರೋಚೇತ ನೋ ಚೇತಸೇ ॥ ೪೩ ॥

ರೋಗ್ಯವಾಗಿ ರುಚಿಸುವದಿಲ್ಲವೋ, **ಸಾ** - ಅಂತಹ ಸ್ಥಳವು, **ಕಾಶೀತಿ** - ಕೇವಲ ಪ್ರಸಿದ್ಧಿ ಹೊಂದಿದ ಗಂಗಾಸ್ನಾನಕ್ಕನುಕೂಲವಾದ ಕಾಶಿ ಎಂಬ ನಾಮಮಾತ್ರ ದಿಂದ, **ನಚಾಕಶೀತಿ** - ಪ್ರಕಾಶಿಸುವದಿಲ್ಲವು. **ಸಾ** - ಅಂತಹ ಸ್ಥಳವು, **ಭುವಿ**- ಭೂಮಿಯಲ್ಲಿ, **ಅಯೋಧ್ಯೇತಿ** - ಶ್ರೀರಾಮನ ಜನ್ಮಸ್ಥಳವೆಂಬುವದರಿಂದ ಪ್ರಸಿದ್ಧ ವಾಗಿ ಕೇವಲ ಅಯೋಧ್ಯೆ ಎಂಬ ಮಾತ್ರದಿಂದಲೇ, **ನಾಧ್ಯಾಸ್ಯತೇ** - ಪ್ರಪನ್ನ ರಿಂದ ವಸಿಸಲ್ಪಡುವದಿಲ್ಲವು, ಪಾಪಿಷ್ಠರಿಂದ ಜಯಿಸಲು ಸಾಧ್ಯವಿಲ್ಲವೆಂಬ ಹೆಸ ರನ್ನು ಹೊಂದಿದ್ದರೂ ಭಾಗವತರುಗಳಿಗೆ ಅದು ರುಚಿಸದಿದ್ದರೆ ಅದು ಪ್ರಪನ್ನ ರಿಗೂ ಗ್ರಾಹ್ಯವಲ್ಲವೆಂಬ ಭಾವವು; **ಸಾ** - ಅಂತಹ ಸ್ಥಳವು. **ಅವಂತೀತಿ** - ಒಂದಾನೊಂದು ಕಾಲದಲ್ಲಿ ಅವಂತೀ ಎಂದು ಪ್ರಸಿದ್ಧವಾದ ಹೆಸರನ್ನು ಹೊಂದಿ ದ್ದರೂ, ಆ ಕೇವಲ ನಾಮಮಾತ್ರದಿಂದಲೇ, **ನ ಕಲ್ಮಷಾದವತಿ** - ಪಾಪಗಳಿಂದ ರಕ್ಷಿಸಲಾರದು, **ಸಾ** - ಅಂತಹ ಸ್ಥಳವು. **ಕಾಂಚೀತಿ** - ಶ್ರೀ ವರದರಾಜರಿಂದ ಅಧಿ ಷ್ಠಿತವೆಂದು ಪ್ರಸಿದ್ಧಿಯನ್ನು ಹೊಂದಿದ ನಾಮಮಾತ್ರದಿಂದಲೇ. **ನೋದಂಚತಿ** - ಉತ್ಕೃಷ್ಟತೆಯನ್ನು ಹೊಂದುವದಿಲ್ಲವು. ಬರೀ ಭಗವದಧಿಷ್ಠಿತವಾದುದರಿಂದಲೇ ಅದಕ್ಕೆ ಉತ್ಕೃಷ್ಟತೆಯಿಲ್ಲವ; ಅದಕ್ಕೆ ಮಾಹಾತ್ಮ್ಯಯು ಗರುಡೋತ್ಸವಾದಿ ಕಾಲಗಳಲ್ಲಿಯೂ ಇತರ ಕಾಲಗಳಲ್ಲಿಯೂ ಸದಾ ಭಾಗವತಾಭಿಮತವುಳ್ಳದ್ದಾಗಿ ವೇದಘೋಷವೇನು, ದ್ರಾವಿಡ ವೇದಘೋಷವೇನು, ಇವುಗಳುಳ್ಳದ್ದಾಗಿರುವದರಿಂ ದಲೇ ಅದಕ್ಕೆ ಮಾಹಾತ್ಮ್ಯ ಎಂಬ ಭಾವವು; **ಸಾ** - ಅಂತಹ ಭಾಗವತಾಭಿ ಮಾನವಿಲ್ಲದ ಸ್ಥಳವು, **ಮಧುರೇತಿ** - ಶ್ರೀಕೃಷ್ಣ ಜನ್ಮಸ್ಥಳವಾಗಿ ಪ್ರಸಿದ್ಧಿಯನ್ನು ಹೊಂದಿದುದರಿಂದಲೇ ಕೇವಲ ಮಧುರೆ ಎಂಬ ಹೆಸರು ಮಾತ್ರದಿಂದಲೇ, **ಉತ್ತಮ ಧುರಂ** ಅಥವಾ **ಧುರಾಂ** - ದಿವ್ಯ ವೈಕುಂಠವನ್ನು ಹೊಂದಿಸುವ ಉತ್ತಮವಾದ ಭಾರವನ್ನು, ಅಥವಾ ದಿವ್ಯಕ್ಷೇತ್ರಗಳಲ್ಲಿ ಉತ್ತಮವೆಂಬ ಪ್ರಸಿದ್ಧಿ ಯನ್ನು, **ನಧತ್ತೇ** - ಧರಿಸಲಾರದು, ಹೊಂದಲಾರದು, **ಅನ್ಯಾಪುರೀ** - ಇವು ಗಳಲ್ಲಿ ಬಿಟ್ಟುಹೋದ ಮಾಯಾ ಎಂಬ ಪ್ರಸಿದ್ಧ ಪಟ್ಟಣವಾಗಲಿ, ಅಥವಾ ಇನ್ನಾವ ಪ್ರಸಿದ್ಧ ಪಟ್ಟಣವಾಗಲಿ, **ನಮಾನ್ಯಾ** - ಆದರಣೀಯವಲ್ಲವು, ಗ್ರಾಹ್ಯವಲ್ಲವ.

ಶ್ರೀಮುಷ್ಣಂ ವೇಙ್ಕಟಾದ್ರಿಂಚ ಸಾಲಗ್ರಾಮಂಚ ನೈಮಿಶಂ । ತೋತಾದ್ರಿಂ ಪುಷ್ಕರಂ ಚೈವ ನರನಾರಾಯಣಾಶ್ರಮಂ ॥ ಅಯೋಧ್ಯಾ ಮಧುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ । ಪುರೀ ದ್ವಾರವತೀ ಚೈವ ಸಪ್ತೈತಾ ಮುಕ್ತಿದಾಯಕಾಃ ॥ ಇವೇ ಮೊದಲಾದ ಕ್ಷೇತ್ರಗಳು ಮಹಾ ಪ್ರಸಿದ್ಧಿಯನ್ನು ಹೊಂದಿದವು. ಒಂದು ಕಾಲದಲ್ಲಿ ಪ್ರಸಿದ್ಧಿಯನ್ನು ಏಕೆ ಹೊಂದಿದವು ಎಂದರೆ ಆಗಲೂ ಭಾಗವತಾಗ್ರೇಸರರಿಗೆ ಅಭಿಮತವಾದುದರಿಂದಲೇ ಪ್ರಾಶಸ್ತ್ಯವು ಎಂದು ಅಧಿಕಾರದ ಆದಿ ಶ್ಲೋಕದಲ್ಲಿ ಹೇಳಿದರು. ಈ ಶ್ಲೋಕದಲ್ಲಿ ಹಿಂದೆ ಎಷ್ಟು ಪ್ರಸಿದ್ಧಿಯನ್ನು ಕೆಲವು ಕ್ಷೇತ್ರಗಳು ಹೊಂದಿದ್ದರೂ, ಈಗ ಅವುಗಳು ಮಹಾಭಾಗವತ ಪರಿಗ್ರಹವಿಲ್ಲದುದಾದರೆ ಗ್ರಾಹ್ಯವಲ್ಲವೆಂದು ಹೇಳುತ್ತಾರೆ. ಕಾಶೀ, ಅಯೋಧ್ಯಾ, ಅವಂತೀ, ಕಾಂಚೀ, ಮಧುರಾ, ಮಾಯಾ ಎಂಬುವ ಕ್ಷೇತ್ರಗಳೇನೋ ಮಹಾ ಪ್ರಸಿದ್ಧವಾದವುಗಳೇ. ಅವುಗಳಲ್ಲಿ ಯಾವುವಾದರೂ ಭಾಗವತಾಭಿಮಾನವನ್ನು ಕಳಕೊಂಡವಾದರೆ ಆಗ ಪ್ರಪನ್ನನಿಗೆ ಅವು ವಾಸಯೋಗ್ಯವಾಗುವದಿಲ್ಲವು. ಒಂದು ನಗರದಲ್ಲಿ ಒಂದು ವಿಷ್ಣ್ವಾಲಯವಿರಬಹುದು, ಅದರಿಂದಲೇ ಆ ನಗರವು ಪ್ರಪನ್ನನಿಗೆ ವಾಸಯೋಗ್ಯವಾಗುವದಿಲ್ಲವು. ಪರಮ ಭಾಗವತೋತ್ತಮನು ಒಬ್ಬನಾದರೂ ಅಲ್ಲಿ ಇದ್ದು ಆತನ ಸಾನ್ನಿಧ್ಯವನ್ನು ಹೊಂದಿ ಆತನ ಪ್ರಸನ್ನತೆಯನ್ನು ಸಂಪಾದಿಸಲನುಕೂಲವಿದ್ದರೆ ಅಂತಹ ಸ್ಥಳದಲ್ಲಿ ವಸಿಸಬಹುದೆಂಬುವದು ಮುಖ್ಯ ತಾತ್ಪರ್ಯವು. ಅದೇನು ಪರಮ ಭಾಗವತಾಭಿಮತವಾದ ಪ್ರದೇಶವೇ ವಸಿಸಲು ಯೋಗ್ಯವಾದುದು ಎಂದರೆ ಅವರು ವೈಕುಂಠಕಥಾಸುಧರಸ ಭುಜರು, ಸರ್ವೇಶ್ವರನ ದಿವ್ಯಚೇಷ್ಟೆಗಳ ಕಥಾಮೃತವನ್ನು ಆಸ್ವಾದನ ಮಾಡಿದವರು; ಕಥಾ ಸುಧಾರಸ ವೆಂದು ಹೇಳಿದುದ್ದರಿಂದ "ಕೋನಾಮ ತೃಪ್ಯೇದ್ರಸವಿತ್ಕಥಾಯಾಂ ಮಹತ್ತಮೈಕಾನ್ತ ಪರಾಯಣಸ್ಯ" (ಭಾಗ. ೧. ೧೮. ೧೪) ಎಂಬ ಉಕ್ತಿಯಲ್ಲಿ ತೋರಿಬರುವ, ಪರಮೋತ್ಕೃಷ್ಟನಾಗಿ ಪ್ರಾಪ್ಯನಾಗಿಯೂ ಪ್ರಾಪಕನಾಗಿಯೂ ಆಧಾರಭೂತನಾಗಿಯೂ ಇರುವ ಸರ್ವೇಶ್ವರನ ದಿವ್ಯಕಥಾ ಶ್ರವಣದಲ್ಲಿ ಎಷ್ಟು ಕೇಳಿದರೂ ಅವರಿಗೆ ಅತೃಪ್ತಿಯುಂಟೆಂಬ ಭಾವವು ತೋರಿಬರುತ್ತದೆ. ಕಥಾಸುಧಾರಸಭುಜಾಂ ಎಂದು ಹೇಳಿರುವದು ಶ್ರವಣ ಸಾರ್ಥಕ್ಯ ಮಾತ್ರವೇ ಅಲ್ಲದೆ ಇತರೇಂದ್ರಿಯಗಳ ಸಾರ್ಥಕ್ಯಕ್ಕೂ ಉಪಲಕ್ಷಣವಾಗಿ ಅವುಗಳ ಸಾರ್ಥಕ್ಯವನ್ನೂ ಹೊಂದಿದವರು ಎಂಬ ತಾತ್ಪರ್ಯವು ಅವರುಗಳು "ಸಮನಃ ಕೃಷ್ಣಪದಾರವಿಂದಯೋಃ ವಚಾಂಸಿ ವೈಕುಂಠ ಗುಣಾನುವರ್ಣನೇ" ಎಂದು ಹೇಳಿರುವ ಹಾಗೆ ಮನಸ್ಸನ್ನು ಶ್ರೀಕೃಷ್ಣನ ಪಾದಕಮಲಗಳಲ್ಲೂ, ಮಾತುಗಳನ್ನು ಮುಕುಂದನ ಗುಣಗಳ ವರ್ಣನೆಯಲ್ಲೂ ಇಟ್ಟವರು, ಮತ್ತು ಕರಯುಗ್ಮವನ್ನು

ಅವನ ಅರ್ಚನಾದಿಗಳಲ್ಲೂ, "**ಮುಕುಂದ ಲಿಙ್ಗಾಲಯ ದರ್ಶನೇ ದೃಶೌ**" ಕಣ್ಣುಗಳನ್ನು ಮುಕುಂದನ ಅರ್ಚಾವತಾರ ರೂಪದಲ್ಲಿರುವ ದಿವ್ಯಮಂಗಳ ವಿಗ್ರಹ ಮತ್ತು ಆತನ ಆಲಯ ದರ್ಶನದಲ್ಲೂ, ಘ್ರಾಣೇಂದ್ರಿಯವನ್ನು ಆತನ ಪಾದ ಕಮಲದಲ್ಲರ್ಪಿಸಿದ ತುಲಸೀ ಸೌರಭವನ್ನು ಆಘ್ರಾಣಿಸುವದರಲ್ಲೂ "**ಪಾದೌ ಹರೇಃ ಕ್ಷೇತ್ರ ಪಥಾನುಸರ್ಪಣೇ**" ಪಾದಗಳನ್ನು ಶ್ರೀ ಹರಿಯ ಆಲಯವನ್ನು ಕುರಿತು ಹೋಗುವದರಲ್ಲಿಯೂ, "**ಶಿರೋ ಹೃಷೀಕೇಶ ಪದಾಭಿವನ್ದನೇ**" ಶಿರಸ್ಸನ್ನು ಆತನ ಪಾದಕ್ಕೆ ಎರಗುವದರಲ್ಲಿಯೂ, ಹೀಗೆ ಸರ್ವಾವಯವಗಳಿಗೂ ಸಾರ್ಥಕ್ಯವನ್ನು ಕಲ್ಪಿಸಿಕೊಂಡ ಮಹಾನುಭಾವರು. ಇಂಥಾವರಿಗೆ ಯಾವ ಸ್ಥಳವಾಗಲಿ ಹಿಂದೆ ಎಷ್ಟು ಪ್ರಸಿದ್ಧಿಯನ್ನು ಹೊಂದಿದ್ದರೂ, ಈಗ ಗ್ರಾಹ್ಯವಲ್ಲವಾದುದಾದರೆ, ಪ್ರಪನ್ನನಿಗೂ ಕೂಡ ಗ್ರಾಹ್ಯವಲ್ಲವೆಂಬ ಭಾವವು. ಆದರೆ ಒಂದು ವಿಧ ಸಂದೇಹವು ಕೆಲವು ಪ್ರಪನ್ನರಿಗೆ ಇದರಿಂದ ಉಂಟಾಗಬಹುದು. ವೃತ್ತ್ಯರ್ಥವಾಗಿ ಒಬ್ಬ ಕೃತಕೃತ್ಯನಾದ ಪ್ರಪನ್ನನಿಗೆ ಭಗವದ್ಭಾಗವತ ಪ್ರಾಚುರ್ಯವುಳ್ಳ ಸ್ಥಳದಲ್ಲಾಗಲಿ, ಪರಮಭಾಗವತನೊಬ್ಬನಾದರೂ ಇರುವ ಸ್ಥಳವಲ್ಲಾಗಲಿ ಇರಲು ಅನುಕೂಲವಿಲ್ಲದೆ ಒಂದು ಕುಗ್ರಾಮದಲ್ಲಿ ವಸಿಸಿದನಾದರೆ ಆತನಿಗೇನಾದರೂ ಮೋಕ್ಷ ಪ್ರಾಪ್ತಿಯಲ್ಲಿ ಕುಂದುಕವೇ ಎಂದು ಪ್ರಶ್ನಿಸಬಹುದು. ಇದಕ್ಕೆ ಉತ್ತರವಾಗಿ ಆತನಿಗೂ ಕೂಡ ಮೋಕ್ಷಪ್ರಾಪ್ತಿಯಲ್ಲಿ ಸಂದೇಹವಿಲ್ಲವು. ಅಂಥಾವರಿಗೆ ಬುದ್ಧಿ ಪೂರ್ವೋತ್ತರಾಘವು ಉಂಟಾಗದೇ ಇರಲು ಯಾವದೊಂದು ಸಾಧನವೂ ಇರುವದಿಲ್ಲವು. ಅವರಿಗೆ ಜ್ಞಾನಸಂಪಾದನೆಗೂ ಅನುಕೂಲತೆ ಇರುವದಿಲ್ಲವು. ಆದುದರಿಂದ ಅಂಥಾವರೂ ಕೂಡ, ಸರ್ವ ಪ್ರಯತ್ನವನ್ನೂ ಮಾಡಿ ಮೇಲೆ ಹೇಳಿದ ಸ್ಥಾನ ವಿಶೇಷದಲ್ಲೇ ವಸಿಸುವದು ಯೋಗ್ಯವು.

ಇಂತು ಶ್ರೀಮದ್ರಹಸ್ಯತ್ರಯಸಾರದ ೧೯ನೆಯ ಅಧಿಕಾರವಾದ

ಸ್ಥಾ ನ ವಿ ಶೇ ಷಾ ಧಿ ಕಾ ರ ಕ್ಕೆ

ತಿರುನಾರಾಯಣಪುರಂ ವಿಜಯರಾಘವ ಶರ್ಮನ

ಆ ಚಾ ರ್ಯ ಹೃ ದ ಯಾ ನ್ವೇ ಷಿ ಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದುವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಶ್ರಿಯೈ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಅಥ ನಿರ್ಯಾಣಾಧಿಕಾರಃ ೨೦

ಮನಸಿ ಕರಣಗ್ರಾಮಂ ಪ್ರಾಣೇ ಮನಃ ಪುರುಷೇ ಚ ತಂ ।
ಝಟಿತಿ ಘಟಯನ್ ಭೂತೇಷ್ವೇನಂ ಪರೇ ಚ ತಮಾತ್ಮನಿ ॥

ಅವತಾರಿಕೆ. ಮುಮುಕ್ಷುವು ಸಾಙ್ಗಪ್ರಪದನಾನುಷ್ಠಾನವನ್ನು ಮಾಡಿದ ಮೊದಲು ದೇಹಾವಸಾನದವರೆಗೂ ಪ್ರಪನ್ನನು ವರ್ತಿಸುವ ರೀತಿಯನ್ನು ಹಿಂದಿನ ಏಳು ಅಧಿಕಾರಗಳಿಂದ ಉಪದೇಶಿಸಿದರು. ಪ್ರಥಮತಃ ಆತನು ಮೋಕ್ಷಪ್ರಾಪ್ತಿಗಾಗಿ ಇನ್ನೇನೂ ಮಾಡಬೇಕಾದುದಿಲ್ಲದುದರಿಂದ, ಕೃತಕೃತ್ಯನೆಂದೂ, ಆತನಿಗೆ ಸ್ವಸ್ವರೂಪ, ಉಪಾಯ, ಪುರುಷಾರ್ಥಗಳ ವಿಷಯದಲ್ಲಿ, ಸ್ವನಿಷ್ಠಾಭಿಜ್ಞಾನವಿರಬೇಕೆಂದೂ, ಕೃತಕೃತ್ಯನಾದರೂ ಆತನಿಗೆ **ಉತ್ತರ** ಕೃತ್ಯಗಳುಂಟೆಂದೂ, ಆ **ಕೃತ್ಯ**ಗಳಲ್ಲಿ ಪುರುಷಾರ್ಥಕಾಷ್ಠಾರೂಪವಾದುದು ಭಾಗವತಕೈಂಕರ್ಯವೆಂದೂ, ಇಂತಹ ಉತ್ತರ ಕೃತ್ಯಗಳಾದ ಆಜ್ಞಾನುಜ್ಞಾ ಕೈಂಕರ್ಯದಲ್ಲಿ ಶಾಸ್ತ್ರೀಯ ನಿಯಮನವಾವಶ್ಯಕವೆಂದೂ, ಕೃತಕೃತ್ಯನಾದ ನಂತರ ಅಪರಾಧಗಳು ಬಾರದಹಾಗೆ ಜಾಗರೂಕನಾಗಿರಬೇಕೆಂದೂ, ಒಂದುವೇಳೆ ಅವು ಬುದ್ಧಿಪೂರ್ವಕವಾಗಿ ಅಚಾತುರ್ಯದಿಂದ ಪ್ರಾಪ್ತವಾದರೆ ಪ್ರಾಯಶ್ಚಿತ್ತ ಮೂಲಕ ಪರಿಹಾರ ಮಾಡಿಕೊಳ್ಳಬೇಕೆಂದೂ, ಅಂತಹ ಅಪರಾಧಗಳು ಬಾರದಿರುವದಕ್ಕಾಗಿ ಈತನು ಭಗವದ್ಭಾಗವತಾಭಿಮಾನವುಳ್ಳ ಸ್ಥಳದಲ್ಲಿ ವಸಿಸಿ ಅವರುಗಳ ಪ್ರಸನ್ನತೆಯನ್ನು ಹೊಂದಬೇಕೆಂದೂ ಹೇಳಲ್ಪಟ್ಟಿತು. ಈ ಅಧಿಕಾರದಲ್ಲಿ ದೇಹಾವಸಾನಕಾಲದಲ್ಲಿ ಪ್ರಾಪ್ತವಾಗುವ ಪ್ರಕ್ರಿಯೆಯು ಹೇಳ

ಸ್ವವಿದ ವಿದುಷೋ ರಿತ್ಥಂ ಸಾಧಾರಣೇ ಸರಣೇ ರ್ಮು (ಖ್ಯೆಃ) ಖೇ ।
ನಯತಿ ಪರತೋ ನಾಡೀ ಭೇದೈ ರ್ಯಥೋಚಿತ ಮೀಶ್ವರಃ ॥೪೪॥

ಲ್ಪಡುತ್ತದೆ. ಈ ಪ್ರಕ್ರಿಯೆಗೆ ಪ್ರಪನ್ನೇತರರ ದೇಹಾವಸಾನಪ್ರಕ್ರಿಯೆಗಿಂತ ವಿಶಾದರೂ ವೈಲಕ್ಷಣ್ಯ ಉಂಟೋ? ಪ್ರಪನ್ನನಿಗೆ ಪಾಪಪುಣ್ಯವಿನಾಶಗಳು ಪ್ರಪದನ ಸಮಯದಲ್ಲಿಯೋ? ದೇಹಾವಸಾನ ಸಮಯದಲ್ಲಿಯೋ? ಪ್ರಪನ್ನನ ದೇಹಾವ ಸಾನಕ್ಕೆ ಕಾಲನಿಯಮಗಳೇನಾದರೂ ಉಂಟೋ? ಇಲ್ಲವೋ? ಯಾವ ಕಾಲದಲ್ಲಿ ಮರಣವಾದರೂ ಮುಕ್ತಿಯುಂಟೋ? ಅಂತಿಮಸ್ಮರಣೆಯುಂಟಾಗುತ್ತದೆಯೋ? ಅದು ಆವಶ್ಯಕವೋ? ಅದಿಲ್ಲದಿದ್ದರೆ ಪುನರ್ಜನ್ಮಪ್ರಾಪ್ತಿಯುಂಟೋ? ಇತ್ಯಾದಿ ವಿಷಯಗಳು ಈ ಅಧಿಕಾರದಲ್ಲಿ ಚರ್ಚಿಸಲ್ಪಡುತ್ತವೆ. ಪ್ರಥಮತಃ ಈ ಸಙ್ಗ್ರಹ ಶ್ಲೋಕದಿಂದ ನಿರ್ಯಾಣಕ್ರಮವನ್ನೂ, ಪ್ರಪನ್ನನ ನಿರ್ಯಾಣಕ್ರಮಕ್ಕೂ ತದಿತರರ ನಿರ್ಯಾಣಕ್ರಮಕ್ಕೂ ಇರುವ ವ್ಯತ್ಯಾಸವನ್ನೂ, ತಿಳಿಸುತ್ತಾರೆ :—

ಅರ್ಥ—**ಮನಸಿ** - ಮನಸ್ಸಿನಲ್ಲಿ, **ಕರಣಗ್ರಾಮಂ** – ಇಂದ್ರಿಯಗಳ ಸಮುದಾಯವನ್ನೂ, **ಝಟಿತಿ** - ಬೇಗ, **ಘಟಯನ್** - ಸೇರಿಸುವನಾಗಿ, **ಪ್ರಾಣೇ** - ಪಂಚವೃತ್ತಿಪ್ರಾಣದಲ್ಲಿ ಮನಸ್ಸನ್ನೂ, **ಘಟಯನ್** - ಸೇರಿಸುವನಾಗಿ **ತಂ** - ಆ ಪ್ರಾಣವನ್ನು, **ಪುರುಷೇ** - ಆತ್ಮನಲ್ಲೂ, **ಝಟಿತಿ ಘಟಯನ್** ಬೇಗ ಸೇರಿಸುವ ನಾಗಿ, **ಏನಂ** - ಹೀಗೆ ಈ ಕರಣಗ್ರಾಮ, ಮನಸ್ಸು, ಪ್ರಾಣಗಳಿಂದ ಸೂಕ್ಷ್ಮ ದೆಶೆ ಯಲ್ಲಿ ಯುಕ್ತನಾದ ಜೀವಾತ್ಮನನ್ನು, **ಭೂತೇಷು** - ಪಂಚಭೂತಗಳಿಂದ ಸೇರಿದ ಸೂಕ್ಷ್ಮಶರೀರದಲ್ಲೂ **ಘಟಯನ್**, ಮತ್ತು **ತಂ**-ಆ ಇಂದ್ರಿಯಗಳೂ, ಮನಸ್ಸೂ, ಭೂತಸೂಕ್ಷ್ಮಗಳಿಂದ ಸೇರಿದ ಆತ್ಮನನ್ನು, **ಪರೇಚ ಆತ್ಮನಿ** - ಪರಮಾತ್ಮನಾದ ಹಾರ್ದನಾಗಿ ಹೃದಯದಲ್ಲಿರುವ ತನ್ನಲ್ಲೂ, **ಘಟಯನ್**-ಸೇರಿಸುವನಾಗಿ, **ಇತ್ಥಂ**-ಈ ಮೇಲೆ ಹೇಳಿದ ಪ್ರಕಾರವಾಗಿ, **ಈಶ್ವರಃ** – ಸರ್ವೇಶ್ವರನು, **ಸ್ವವಿದವಿದುಷೋಃ** - **ಸ್ವವಿತ್** - ತನ್ನನ್ನು ತಿಳಿದ ಎಂದರೆ ಭಕ್ತಿಪ್ರಪತ್ತಿಮಾರ್ಗಗಳಿಂದ ಆಶ್ರಯಿಸಿದ ಪ್ರಪನ್ನರ, ಮತ್ತು **ಅವಿದುಷಃ** - ಹಾಗೆ ಪರಮಾತ್ಮನನ್ನು ತಿಳಿಯದೇ ಇರುವವರ ಹೀಗೆ ಎರಡು ವಿಧದವರಿಗೂ, **ಸರಣೇಃ** – ಮುಂದಕ್ಕೆ ಮಾರ್ಗವಾದ ಅರ್ಚಿರಾದಿ ಧೂಮಾದಿ ಮಾರ್ಗಗಳ, **ಮುಖೇ** - ಆರಂಭವು, **ಸಾಧಾರಣೇ ಸತಿ** - ಇಬ್ಬರಿಗೂ ಒಂದೇಯಾಗಿರಲಾಗಿ, ಎಂದರೆ ಸ್ಥೂಲಶರೀರವನ್ನು ದೇಹಾವಸಾನಕಾಲ ದಲ್ಲಿ ಬಿಟ್ಟು, ಪ್ರಪನ್ನರಿಗೆ ಅರ್ಚಿರಾದಿ ಮಾರ್ಗವೂ ಪ್ರಪನ್ನರಲ್ಲದವರಿಗೆ ಧೂಮಾದಿ ಮಾರ್ಗವೂ ಉಂಟಾಗುವದಕ್ಕೆ ಪೂರ್ವಭಾವಿಯಾದ ನಿರ್ಯಾಣಕ್ರಮವು ಇಬ್ಬರಿಗೂ

ಒಂದೇ ಸಮನಾಗಿರಲಾಗಿ ಎಂಬ ಭಾವವು, **ಪರತಃ** - ಹೀಗೆ ಪರಮಾತ್ಮನಲ್ಲಿ ಸೇರಿದ ನಂತರ, **ಯಥೋಚಿತಂ** - ಇಂತಹ ಪ್ರಪನ್ನ ಅಪ್ರಪನ್ನರಿಗೆ ಯೋಗ್ಯವಾದ, **ನಾಡೀಭೇದೈಃ** - ಪ್ರಪನ್ನರನ್ನು ಸುಷುಮ್ನಾ ನಾಡಿಯ ಮೂಲಕವಾಗಿಯೂ, ಇತರರನ್ನು ವಿಷಜ್ಞನಾಡಿಗಳ, ಸುತ್ತಲೂ ಇರುವ ನಾಡಿಗಳ, ಮೂಲಕವಾಗಿಯೂ, **ನಯತಿ** - ಕರೆದುಕೊಂಡು ಹೋಗುವನು ಎಂದರೆ ಹೋಗುವ ಹಾಗೆ ಮಾಡುವನು.

ತಾತ್ಪರ್ಯ—ಈ ಶ್ಲೋಕದ ಮೂಲಕ ಜೀವಾತ್ಮನು ತನ್ನ ಶರೀರವನ್ನು ಬಿಟ್ಟು ಹೊರಗೆ ಹೊರಡುವ ಪ್ರಕಾರವನ್ನು ತಿಳಿಸುತ್ತಾರೆ. ಈ ಕ್ರಮವು ಛಾಂದೋಗ್ಯದಲ್ಲೂ ಶಾರೀರಕ ಸೂತ್ರಗಳಲ್ಲೂ ಹೇಳಿರುವದರಿಂದ ಅವುಗಳನ್ನನುಸರಿಸಿ "ಮನಸಿಕರಣಗ್ರಾಮಂ" ಎಂದಾರಂಭಿಸಿ ಹೇಳುತ್ತಾರೆ. ಆ ಛಾಂದೋಗ್ಯ ಶ್ರುತಿಯು ಯಾವುದೆಂದರೆ "**ಅಸ್ಯ ಸೋಮ್ಯಪುರುಷಸ್ಯ ಪ್ರಯತಃ ವಾಙ್ಮನಸಿ ಸಂಪದ್ಯತೇ, ಮನಃಪ್ರಾಣೇ, ಪ್ರಾಣಸ್ತೇಜಸಿ, ತೇಜಃಪರಸ್ಯಾಂ ದೇವತಾಯಾಂ**" ಎಂದರೆ **ಪ್ರಯತಃ** - ಹೊರಟುಹೋಗುವ ಎಂದರೆ ದೇಹವನ್ನು ಬಿಟ್ಟುಹೋಗುವ, **ಪುರುಷಸ್ಯ** – ಪುರುಷನ, **ವಾಕ್** - ವಾಕ್ಕು, ಇದೂ ಮಿಕ್ಕ ಒಂಭತ್ತು ಬಾಹ್ಯೇಂದ್ರಿಯಗಳಿಗೂ ಉಪಲಕ್ಷಣವು, **ಮನಸಿ ಸಂಪದ್ಯತೇ**-ಮನಸ್ಸಿನಲ್ಲಿ ಹೋಗಿಸೇರುತ್ತವೆ. ಮನಸ್ಸು ಮುಖ್ಯಪ್ರಾಣನಲ್ಲೂ, ಪ್ರಾಣವು ಜೀವಾತ್ಮನಲ್ಲೂ ಹೀಗೆ ಹತ್ತು ಬಾಹ್ಯೇಂದ್ರಿಯಗಳೂ, ಮನಸ್ಸೂ, ಪ್ರಾಣವೂ ಸೇರಿದ ಜೀವಾತ್ಮನು **ತೇಜಸಿ** ಎಂದರೆ ಸೂಕ್ಷ್ಮರೂಪದಲ್ಲಿ ಶರೀರವಾಗಿರುವ ಪಂಚಭೂತದಲ್ಲೂ, ಅನಂತರ ಹೀಗೆ ಸೂಕ್ಷ್ಮಶರೀರ ಹೊಂದಿದ ಜೀವಾತ್ಮನು, **ಪರಸ್ಯಾಂ ದೇವತಾಯಾಂ** - ಹೃದಯ ಗುಹೆಯಲ್ಲಿಯೇ ಹಾರ್ದರೂಪಿಯಾದ ಪರಮಾತ್ಮನಲ್ಲೂ ಹೋಗಿ ಸೇರುತ್ತಾನೆ ಎಂಬುದು ಶ್ರುತ್ಯರ್ಥವು. ಇಷ್ಟು ಮಾತ್ರ ಗತಿಯು ಪ್ರಪನ್ನನಿಗೂ ಪ್ರಪನ್ನನಲ್ಲದವನಿಗೂ ಸಾಮಾನ್ಯವು. ಅನಂತರ ಪ್ರಪನ್ನನು ಸುಷುಮ್ನಾ ನಾಡಿಯ ಮೂಲಕ ಈ ಸ್ಥೂಲದೇಹವನ್ನು ಬಿಟ್ಟು ಅರ್ಚಿರಾದಿ ಗತಿಯನ್ನು ಹೊಂದುವನು ; ಪ್ರಪನ್ನನಲ್ಲದವನು ಇತರ ನಾಡಿಗಳ ಮೂಲಕ ಧೂಮಾದಿ ಗತಿಯನ್ನು ಹೊಂದುವನೆಂಬುದು ಈ ಶ್ಲೋಕದ ಸಂಗ್ರಹ ತಾತ್ಪರ್ಯವು.

ಶ್ರೀ ದೇಶಿಕರವರು ಈ ಶ್ಲೋಕದಲ್ಲಿ ಈ ಶ್ರುತ್ಯರ್ಥವು ಶ್ರೀ ಭಾಷ್ಯದ ೪ನೇ ಅಧ್ಯಾಯದ ೨ನೆಯ ಪಾದದ ಮೊದಲು ಆರು ಅಧಿಕರಣಗಳಲ್ಲಿ ಪ್ರತಿಪಾದಿತವಾಗಿರುವದನ್ನನುಸರಿಸಿ ಅಷ್ಟನ್ನೇ ಕೊಡಿಸಿರುತ್ತಾರೆ.

ವಾಙ್ಮನಸಿ ಎಂದರೆ ದೇಹಾವಸಾನದಲ್ಲಿ ವಾಕ್ಕು ಮನಸ್ಸಿನಲ್ಲಿ ಸೇರುತ್ತದೆ. ಶ್ರುತಿಯು **ಸಂಪದ್ಯತೇ** ಎಂದು ಪ್ರಯೋಗಿಸಿರುವದರಿಂದ ವಾಕ್ಕು ಮನಸ್ಸಿನಲ್ಲಿ

ಲೀನವಾಗುತ್ತದೆ ಎಂಬರ್ಥವನ್ನು ಹೇಳಕೂಡದೆಂದೂ, ವಾಗಿಂದ್ರಿಯಕ್ಕೆ ಮನಸ್ಸಿನೊಂದಿಗೆ ಸಂಘಟನೆಯುಂಟಾಗುತ್ತದೆಂದೂ ತಿಳಿಸುವದಕ್ಕಾಗಿ **ಝುಟಿತಿ ಘಟರ್ಯ** ಎಂದು ಈ ಶ್ಲೋಕದಲ್ಲಿ ಪ್ರಯೋಗಿಸಿರುತ್ತಾರೆ. ವಾಕ್ಕು ಮನಸ್ಸಿನಲ್ಲಿ ಸೇರುತ್ತದೆ ಎಂದರೆ ಮನಸ್ಸಿನ ವ್ಯಾಪಾರವೇನೋ ಉಂಟು, ವಾಕ್ಕಿನ ವ್ಯಾಪಾರ ನಿಂತುಹೋಯಿತು ಎಂಬರ್ಥವಲ್ಲವು. ವಾಗಿಂದ್ರಿಯವು, ಮನಸ್ಸೆಂಬ ಇಂದ್ರಿಯದೊಂದಿಗೆ ಸೇರಿಕೊಳ್ಳುತ್ತದೆಂಬ ಭಾವವು. ಶ್ರುತಿಯು ವಾಗಿಂದ್ರಿಯವನ್ನು ಹೇಳಿದುದು ಹತ್ತು ಬಾಹ್ಯೇಂದ್ರಿಯಗಳಿಗೂ ಉಪಲಕ್ಷಣವು. ಈ ಅಭಿಪ್ರಾಯವು, **"ವಾಙ್ಮನಸಿ ದರ್ಶನಾಚ್ಛಬ್ದಾಚ್ಚ"** ಮತ್ತು **"ಅತ ಏವ ಸರ್ವಾಣ್ಯನು"** ಎಂಬ ಎರಡು ವ್ಯಾಸಸೂತ್ರಗಳಿಂದಲೂ ಹೇಳಲ್ಪಟ್ಟಿತು. ಇವುಗಳನ್ನನುಸರಿಸಿ, ಇಲ್ಲಿ **"ಮನಸಿ ಕರಣಗ್ರಾಮಂ"** ಎಂದುಪದೇಶಿಸಿರುತ್ತಾರೆ **ಕರಣಗ್ರಾಮಂ** ಎಂಬುದರಿಂದ ದಶೇಂದ್ರಿಯಗಳೂ ಹೇಳಲ್ಪಟ್ಟವು.

ಛಾಂದೋಗ್ಯ ಶ್ರುತಿಯಲ್ಲಿ **ಮನಃಪ್ರಾಣೇ** ಎಂದು ಹೇಳಿರುವದನ್ನನುಸರಿಸಿ **ಶ್ರೀ** ದೇಶಿಕರವರೂ **ಪ್ರಾಣೇ ಮನಃ,** ಈ ಹತ್ತು ಇಂದ್ರಿಯಗಳಿಂದಲೂ ಸೂಕ್ಷ್ಮದೆಸೆಯಲ್ಲಿ ಸೇರಿದ ಮನಸ್ಸು ಮುಖ್ಯಪ್ರಾಣದಲ್ಲಿ ಹೋಗಿ ಸೇರುತ್ತದೆ. ಈ ಶ್ರುತ್ಯಭಿಪ್ರಾಯವು **"ತನ್ಮನಃ ಪ್ರಾಣ ಉತ್ತರಾತ್"** ಎಂಬ ವ್ಯಾಸ ಸೂತ್ರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. **ತನ್ಮನಃ** - ಹಾಗೆ ದಶೇಂದ್ರಿಯಗಳಿಂದ ಕೂಡಿದ ಮನಸ್ಸು, **ಪ್ರಾಣೇ** - ಪ್ರಾಣದಲ್ಲಿ ಸೇರುತ್ತದೆ ಏಕೆಂದರೆ **ಉತ್ತರಾತ್** - ಮುಂದೆ ಶ್ರುತಿಯು **ಮನಃಪ್ರಾಣೇ** ಎಂದು ಹೇಳಿರುವದರಿಂದ, ಎಂಬುವದು ಈ **ಸೂತ್ರಾರ್ಥವು.**

ಈ ದಶೇಂದ್ರಿಯ ಮನಸ್ಸಿನಿಂದ ಸೇರಿದ ಪ್ರಾಣವು ಮುಂದಕ್ಕೆ ಜೀವನೊಂದಿಗೆ ಸೇರುತ್ತದೆ ಎಂದು ತಿಳಿಸುವದಕ್ಕಾಗಿ, **ಪುರುಷೇಚ ತಂ** ಎಂದು ತಿಳಿಸಿರುತ್ತಾರೆ. ಆದರೆ ಛಾಂದೋಗ್ಯ ಶ್ರುತಿಯು **"ಪ್ರಾಣಸ್ತೇಜಸಿ"** ಪ್ರಾಣವು ತೇಜಸ್ಸೆಂದರೆ ಭೂತಸೂಕ್ಷ್ಮ, ಸೂಕ್ಷ್ಮದೆಸೆಯಲ್ಲಿರುವ ಪಂಚೇಂದ್ರಿಯದೊಂದಿಗೆ ಸೇರುತ್ತದೆಂದು ಹೇಳಿರುತ್ತದೆ. ಇದು ಶ್ರೀ ದೇಶಿಕೋಕ್ತಿಗೆ ವಿರುದ್ಧವಾಯಿತಲ್ಲಾ ಎಂದರೆ ಹಾಗಲ್ಲವು ಏಕೆಂದರೆ ಬೃಹದಾರಣ್ಯದಲ್ಲಿ **"ಏವ ಮೇವೇಮಮಾತ್ಮಾನಮನ್ತಕಾಲೇ ಸರ್ವೇ ಪ್ರಾಣಾ ಅಭಿಸಮಾಯನ್ತಿ, ತಮುತ್ಕ್ರಾಮನ್ತಂ ಪ್ರಾಣೋನುತ್ಕ್ರಾಮತಿ"** ಎಂಬ ಶ್ರುತಿಯಿಂದ ಪಂಚಪ್ರಾಣವೂ ಜೀವಾತ್ಮನಲ್ಲಿ ಸೇರುತ್ತದೆ ಎಂದು ಹೇಳಿರುವದರಿಂದ, ಶ್ರುತಿಗಳಿಗೆ ಅರ್ಥ ಹೇಳುವಾಗ ಪರಸ್ಪರ ವಿರೋಧವಿಲ್ಲದ ಹಾಗೆ ಅರ್ಥ ಹೇಳಬೇಕಾದುದು ಆವಶ್ಯಕವಾದುದರಿಂದ ವ್ಯಾಸಮಹರ್ಷಿಯು, **"ಸೋಧ್ಯಕ್ಷೇ ತದುಪಗಮಾದಿಭ್ಯಃ"** ಎಂಬ ಸೂತ್ರ

ದಿಂದ ಸಹ-ಇಂದ್ರಿಯಗಳಿಂದ ಸೇರಿದ ಮನೋವಿಶಿಷ್ಟವಾದ ಪ್ರಾಣವು, **ಅಧ್ಯಕ್ಷೇ ಕರಣಾಧಿಪೇ** - ಇಂದ್ರಿಯಗಳಿಗೆ ಯಜಮಾನನಾದ ಜೀವಾತ್ಮನಲ್ಲಿ ಸೇರುವಿಕೆಯನ್ನು ಶ್ರುತಿಯು ಹೇಳುತ್ತದೆಂದು ತಿಳಿಸಿರುತ್ತಾರೆ. ಶ್ರೀ ದೇಶಿಕರವರು ಈ ಬೃಹದಾರಣ್ಯಕ ಶ್ರುತಿಯನ್ನೂ ಈ ವ್ಯಾಸಸೂತ್ರವನ್ನೂ ಅನುಸರಿಸಿ "**ಪುರುಷೇಚ ತಂ ಘಟಯ**" ಎಂಬು ಹೇಳಿದುದೇನೋ ಸರಿಯೇ. ಆದರೆ ಛಾಂದೋಗ್ಯ ಶ್ರುತಿಯ ವಾಕ್ಯವಾದ "**ಪ್ರಾಣಸ್ತೇಜಸಿ**" ಎಂಬುದಕ್ಕೆ ಅವಿರೋಧಾರ್ಥವು ಹೇಗೆ ಎಂದರೆ ಅದಕ್ಕೆ ಪ್ರಾಣವೂ ಜೀವನನ್ನು ಹೊಂದಿ ತೇಜಸ್ಸನ್ನು ಸೇರುತ್ತದೆ ಎಂದು ಹೇಳುವದಕ್ಕೇನೂ ತೊಂದರೆಯಿಲ್ಲವು. ಹೇಗೆಂದರೆ ಯಮುನಾ ನದಿಯು ಗಂಗೆಯನ್ನು ಸೇರಿ ಸಮುದ್ರವನ್ನು ಹೊಂದಿದರೂ, ಯಮುನಾ ನದಿಯು ಸಮುದ್ರವನ್ನು ಸೇರುತ್ತದೆಂಬ ವಾಕ್ಯವೂ ಹೇಗೆ ಅದಕ್ಕೆ ವಿರೋಧವಲ್ಲವೋ, ಹಾಗೆಯೇ ಇಲ್ಲಿಯೂ ಎಂದು ಶ್ರೀ ಯತಿವರ್ಯರು ಅಭಿಪ್ರಾಯಪಟ್ಟಿರುತ್ತಾರೆ. ಅದೂ ಅಲ್ಲದೆ ಆ ಶ್ರುತಿವಾಕ್ಯವೇ ಜೀವನಿರ್ಯಾಣ ಕ್ರಮವನ್ನು ಬೋಧಿಸುವದರಿಂದ ತೇಜಶ್ಶಬ್ದದಿಂದ ಭೂತಸೂಕ್ಷ್ಮವು ಜೀವನಿಗೆ ಶರೀರವಾಗುತ್ತದೆಂದು ಭಾವಿಸತಕ್ಕದ್ದು.

ಅಲ್ಲಿಂದ ಮುಂದಕ್ಕೆ ಗತಿಯನ್ನು ತಿಳಿಸಲು ಹೊರಟು **ಘಟಯ ಭೂತೇಷ್ವೇನಂ** ಎಂಬುದರಿಂದ, ಹೀಗೆ ಇಂದ್ರಿಯಗಳು, ಮನಸ್ಸು, ಪ್ರಾಣನೊಂದಿಗೆ ಸೇರಿದ ಜೀವಾತ್ಮನು ಸೂಕ್ಷ್ಮದೆಶೆಯಲ್ಲಿರುವ ಪಂಚಭೂತಗಳೊಂದಿಗೆ ಸೇರುತ್ತಾನೆಂದು, ಬೋಧಿಸಿರುತ್ತಾರೆ. ಇದನ್ನೇ ವ್ಯಾಸಸೂತ್ರವಾದ "**ಭೂತೇಷು ತಚ್ಛ್ರುತೇಃ**" ಎಂಬುದು ಬೋಧಿಸುತ್ತದೆ. ಆದುದರಿಂದ ಛಾಂದೋಗ್ಯದ ತೇಜಶ್ಶಬ್ದವು ತೇಜಸ್ಸನ್ನು ಮಾತ್ರ ಬೋಧಿಸುವದಲ್ಲವು, ಅದು ಪೃಥಿವೀ ಅಪ್ತೇಜೋವಾಯ್ವಾದಿ ಸರ್ವಭೂತಗಳಿಗೆ ಉಪಲಕ್ಷಣವಾಗಿ ಭೂತಸೂಕ್ಷ್ಮವನ್ನು ತಿಳಿಸುತ್ತದೆಂಬು ಭಾವಿಸತಕ್ಕದ್ದು. ಹಾಗೆಯೇ ಬೃಹದಾರಣ್ಯಕ ಶ್ರುತಿಯಿರುವದರಿಂದ ಭೂತಸೂಕ್ಷ್ಮವನ್ನು ಶರೀರವಾಗಿ ಹೊಂದುವದಕ್ಕಾಗಿ, ಈ ಇಂದ್ರಿಯಗಳು ಮನಸ್ಸು ಪ್ರಾಣದಿಂದ ಸೇರಿದ ಜೀವಾತ್ಮನು ಆ ಭೂತಸೂಕ್ಷ್ಮದೊಂದಿಗೆ ಸೇರುವನೆಂದು ಹೇಳಲ್ಪಟ್ಟಿತು. "**ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ**" ಎಂಬ ಗೀತಾ ಶ್ಲೋಕಾನುಸಾರ ಮುಂದಿನ ನಾಡಿಗಳ ಮೂಲಕ ಅರ್ಚಿರಾದಿ ಧೂಮಾದಿ ಮಾರ್ಗ ಗತಿಗಳಿಗೆ ಬೇಕಾದ ಕರಣವನ್ನೂ, ಅಧಿಷ್ಠಾನವಾದ ಭೂತಸೂಕ್ಷ್ಮವನ್ನೂ ಈ ಕರ್ತಾವಾದ ಜೀವಾತ್ಮನು ಹೊಂದುತ್ತಾನೆಂಬ ಭಾವವು.

ಅಲ್ಲಿಂದ ಈ ಜೀವಾತ್ಮನು **ಪರೇಚ ಆತ್ಮನಿ** - ಪರಮಾತ್ಮನಾದ ತನ್ನಲ್ಲಿ ಸನ್ನಿವಿಷ್ಟನನ್ನು, **ಘಟಯ** - ಸೇರಿಸುವನೆಂಬುದು ಹೇಳಲ್ಪಟ್ಟಿತು. ಛಾಂದೋಗ್ಯವೂ ಹಾಗೆಯೇ "**ತೇಜಃ ಪರಸ್ಯಾಂ ದೇವತಾಯಾಂ**" ಇವುಗಳೊಂದಿಗೆ

ಸೇರಿದ ಭೂತಸೂಕ್ಷ್ಮವು ಪರಮಾತ್ಮನಲ್ಲಿ ಹೋಗಿ ಸೇರುತ್ತದೆ ಎಂದು ಹೇಳಿದರೂ, ತೇಜಸ್ಸೊಂದಕ್ಕೇ ಶರೀರವಾಗಲು ಸಾಮರ್ಥ್ಯವಿಲ್ಲದುದರಿಂದ ಎಲ್ಲಾ ಭೂತಸೂಕ್ಷ್ಮವೂ ಹೇಳಲ್ಪಟ್ಟಿತೆಂದು ಇನ್ನೊಂದು ಬ್ರಹ್ಮಸೂತ್ರದಿಂದ ವಿಶದೀಕರಿಸುತ್ತಾರೆ. ಆದೂ ಅಲ್ಲದೆ ಜೀವಾತ್ಮನ ಪ್ರವೇಶವಿಲ್ಲದೆ ಭೂತಸೂಕ್ಷ್ಮಕ್ಕೆ ಪರಮಾತ್ಮನನ್ನು ಹೋಗಿ ಸೇರುವ ಪ್ರವೃತ್ತಿ ಇಲ್ಲವಾದುದರಿಂದ, ಭೂತಸೂಕ್ಷ್ಮಶರೀರಕನಾದ ಜೀವನೇ ಪರಮಾತ್ಮನೊಂದಿಗೆ ಸಂಪತ್ತಿಯನ್ನು ಹೊಂದುವನೆಂದು ಭಾವಿಸತಕ್ಕದ್ದು. ಹೀಗೆ ಜೀವಾತ್ಮನು ಪರಮಾತ್ಮನಲ್ಲಿ ಸೇರಿದುದು ಸ್ವರೂಪೈಕ್ಯರೂಪಲಯವೋ ಇಲ್ಲವೇ ಹಿಂದೆ ಹೇಳಿದ ಸಂಪತ್ತಿಯೋ, ಎಂಬ ಸಂದೇಹದಲ್ಲಿ ಸಂಪತ್ತಿಮಾತ್ರವೇ ಎಂದು **"ಅವಿಭಾಗೋ ವಚನಾತ್"** ಎಂಬ ಸೂತ್ರದಲ್ಲಿ ಹೇಳಲ್ಪಟ್ಟಿರುತ್ತದೆ. **ವಾಙ್ಮನಸಿ ಸಂಪದ್ಯತೇ** ಎಂಬಲ್ಲಿ ಎರಡೂ ಒಟ್ಟಿಗೆ ಸೇರಿ ಭಾಗವಿಲ್ಲದಹಾಗೆ ಇರುವಿಕೆಯು ; ಏಕೆಂದರೆ **ವಚನಾತ್** ಶ್ರುತಿಯಲ್ಲಿ ಸಂಪದ್ಯತೇ ಎಂಬ ಅನುಷಂಗ ವಚನವಿರುವದರಿಂದ ಲೀನವೆಂಬರ್ಥವಲ್ಲವು. ಹೀಗೆ ಸಂಪತ್ತಿಯನ್ನು ಹೇಳಿರುವದರಿಂದ ಇಲ್ಲಿಯೇ ಜೀವನು ಜೀವನ್ಮುಕ್ತಿಯನ್ನು ಹೊಂದಿದನು ಎಂಬರ್ಥವಲ್ಲವು. ಏಕೆಂದರೆ ಇದು ಪ್ರಪನ್ನನ ವಿಷಯದಲ್ಲಿ ಮಾತ್ರವೇ ಹೇಳಲ್ಪಟ್ಟಿದ್ದರೆ ಒಂದು ವೇಳೆ ಹಾಗೆ ಅರ್ಥಮಾಡಬಹುದಿತ್ತು, ಇದು ಪ್ರಪನ್ನ ಮತ್ತು ಅಪ್ರಪನ್ನ ಸಾಮಾನ್ಯವಾಕ್ಯವೆಂದು **"ಸಮಾನಾಚಾ ಸೃತ್ಯುಪಕ್ರಮಾತ್"** ಎಂಬ ಸೂತ್ರದಲ್ಲಿ ಹೇಳಲ್ಪಟ್ಟಿರುತ್ತದೆ. ಇದನ್ನೇ ಇಲ್ಲಿಯೂ **"ಸ್ವವಿದ ವಿದುಷೋರಿತ್ಥಂ ಸಾಧಾರಣೇ ಸರಣೇರ್ಮುಖೇ"** ಎಂಬುದರಿಂದುಪದೇಶಿಸಿರುತ್ತಾರೆ. **ಆಸೃತ್ಯುಪಕ್ರಮಾತ್,** ಸೃತಿ ಎಂದರೆ ಗಮನವು, ಆದುದರಿಂದ ಅರ್ಚಿರಾದಿ ಗಮನವು ಪ್ರಪನ್ನನಿಗೆ ಪ್ರಾರಂಭವಾಗುವವರೆಗೂ, ಪ್ರಪನ್ನನಿಗೂ ಪ್ರಪನ್ನನಲ್ಲದವನಿಗೂ, **ಸಮಾನಾಚ - ಸಮಾನವಾದುದೇ.**

ಹೀಗೆ ಇಂದ್ರಿಯ ಮನಃ ಪ್ರಾಣಗಳಿಂದ ಯುಕ್ತನಾದ ಜೀವನು ಭೂತಸೂಕ್ಷ್ಮ ಶರೀರವನ್ನು ಹೊಂದಿ ಪರಮಾತ್ಮ ಸಂಪತ್ತಿಯನ್ನು ಹೊಂದಿದ ನಂತರ, **"ನಯತಿ ಪರತೋ ನಾಡೀಭೇದೈರ್ಯಥೋಚಿತ ಮೀಶ್ವರಃ"** ಆತನನ್ನು ಸರ್ವೇಶ್ವರನು ಈತನ ಯೋಗ್ಯತಾನುಸಾರವಾಗಿ ನಾಡೀಭೇದಗಳ ಮೂಲಕ ಕರೆದುಕೊಂಡು ಹೋಗುತ್ತಾನೆ. ಇದಕ್ಕೆ ಪ್ರಮಾಣವು **"ಶತಂಚೈಕಾಚ ಹೃದಯಸ್ಯ ನಾಡ್ಯಸ್ತಾಸಾಂ ಮೂರ್ಧಾನಮಭಿನಿಸ್ಸೃತೈಕಾ। ತಯೋರ್ಧ್ವಮಾಯನ್ನಮೃತತ್ವಮೇತಿ ವಿಷ್ವಙ್ಙನ್ಯಾ ಉತ್ಕ್ರಮಣೇ ಭವನ್ತಿ ॥"** (ಕಠ. ೨. ೬. ೧೬) ಎಂಬ ಕಠಶ್ರುತಿಯು. ಹೃದಯದ ಮುಖ್ಯನಾಡಿಗಳು ನೂರೊಂದು. ಅವುಗಳಲ್ಲಿ ಒಂದು ಶಿರಸ್ಸನ್ನು ವ್ಯಾಪಿಸಿರುತ್ತದೆ. ಆ ಒಂದಾದ ಸುಷುಮ್ನಾ ನಾಡೀ ಮೂಲಕ

ನಿರ್ಯಾಣಸ್ಯ ವಿಳಂಬಾವಿಳಂಬ ಹೇತವಃ

ಇಪ್ಪಡಿ (೧) "ಲೋಕವಿಕ್ರಾನ್ತ ಚರಣೌ ಶರಣಂತೇಽವ್ರಜಂ ವಿಭೋ"

ವಾಗಿ ಊರ್ಧ್ವಗತಿಯುಳ್ಳವನಾಗಿ ದೇಹವನ್ನು ಬಿಟ್ಟುಹೊರಟು ಅರ್ಚಿರಾದಿ ಮಾರ್ಗ ಮೂಲಕ ಹೋಗುವನಾಗಿ ಮೋಕ್ಷವನ್ನು ಹೊಂದುವನು. ಇತರ ನಾನಾ ವಿಧವಾಗಿ ಹೊರಟುಹೋಗಿರುವ ನೂರು ನಾಡಿಗಳು ನಾನಾ ವಿಧವಾದ ಸಂಸಾರ ಹೊಂದಲು ಕಾರಣವಾದ ಉತ್ಕ್ರಮಣಗಳಿಗೆ ಧೂಮಾದಿ ಮಾರ್ಗ ಮೂಲಕವಾಗಿ ಕಾರಣವಾಗುತ್ತವೆ, ಎಂದರೆ ಇತರ ನಾಡಿಗಳ ಮೂಲಕ ಉತ್ಕ್ರಮಣ ಉಂಟಾದವರಿಗೆ ಧೂಮಾದಿ ಮಾರ್ಗವು ಪ್ರಾಪ್ತವಾಗಿ ಪುನರ್ಜನ್ಮ ಉಂಟಾಗುತ್ತದೆಂಬ ಭಾವವು. ಆದರೆ ಹೀಗೆ ಇಂದ್ರಿಯಗಳು ಮನಸ್ಸಿನಲ್ಲೂ, ಮನಸ್ಸು ಪ್ರಾಣನಲ್ಲೂ, ಪ್ರಾಣವು ಆತ್ಮನಲ್ಲೂ, ಆತ್ಮವು ಭೂತಸೂಕ್ಷ್ಮದಲ್ಲೂ, ಇವುಗಳೆಲ್ಲಾ ಸೇರಿದ ಆತ್ಮಾ ಪರಮಾತ್ಮನಲ್ಲೂ ಹೋಗಿ ಸೇರುತ್ತದೆ ಎಂದು ಹೇಳಿರುವದರಿಂದ, ಇವೆಲ್ಲಾ ತುಂಬಾ ಕಾಲವಿಳಂಬದಿಂದ ಉಂಟಾಗುತ್ತದೆಂದು ಭಾವಿಸಬಹುದು. ಹಾಗಲ್ಲದೆ ಉತ್ಕ್ರಮಣ ಕಾಲದಲ್ಲಿ ಇವೆಲ್ಲಾ ಬಹು ಶೀಘ್ರವಾಗಿ ಉಂಟಾಗುತ್ತದೆಂದು ತಿಳಿಸುವದಕ್ಕಾಗಿ ಝುಟಿತಿ ಘಟರ್ಯ ಎಂದು ಪ್ರಯೋಗಿಸಿರುತ್ತಾರೆ.

ಹೀಗೆ ಇಷ್ಟು ಶಾಸ್ತ್ರಪಙ್ತಿಗಳ ಅಭಿಪ್ರಾಯಗಳನ್ನೆಲ್ಲಾ ಮನಸ್ಸಿನಲ್ಲಿಟ್ಟವರಾಗಿ ಈ ಶ್ಲೋಕದಿಂದ ಅರ್ಚಿರಾದಿ ಧೂಮಾದಿ ಗತಿಗಳಿಗೆ ಮುಂಚೆ ಪ್ರಪನ್ನ ಅಪ್ರಪನ್ನರಿಬ್ಬರಿಗೂ ಸಾಧಾರಣವಾದ ಉತ್ಕ್ರಮಣ ಕ್ರಮವನ್ನು ನಿರೂಪಿಸಿರುತ್ತಾರೆ.

ಹೀಗೆ ಸಂಗ್ರಹ ಶ್ಲೋಕದಲ್ಲಿ ಹೇಳಲ್ಪಟ್ಟ ದೇಹಾವಸಾನದಲ್ಲುಂಟಾಗುವ ನಿರ್ಯಾಣಕ್ರಮವು, ಯಾವಾಗ ಪ್ರಪನ್ನನಿಗೆ ಉಂಟಾಗುತ್ತದೆಂಬುದನ್ನು ಪ್ರಥಮತಃ ಚರ್ಚಿಸುವರಾಗಿ, ಎಂತಹ ಅಧಿಕಾರಿಗೆ ಇದು ವಿಳಂಬವಿಲ್ಲದೆಯೂ ಎಂತಹ ಅಧಿಕಾರಿಗೆ ವಿಳಂಬದಿಂದಲೂ ಪ್ರಾಪ್ತವಾಗುತ್ತದೆಂದು ಚರ್ಚಿಸಿ, ಆ ವಿಳಂಬಾವಿಳಂಬಕ್ಕೆ ಕಾರಣವನ್ನು ಹಿಂದೆ ಅಪರಾಧಪರಿಹಾರಾಧಿಕಾರದಲ್ಲಿ ಹೇಳಿದುದನ್ನೇ ಪುನಃ ಜ್ಞಾಪಕ ಕೊಡುತ್ತಾರೆ.

ಪ್ರಪನ್ನನ ನಿರ್ಯಾಣದ ವಿಳಂಬಾವಿಳಂಬಕ್ಕೆ ಕಾರಣಗಳು.

ಮೊದಲು ನಿರ್ಯಾಣವಿಳಂಬವಿಲ್ಲದವರು ಯಾರೆಂದು ತಿಳಿಸಿ, ಅವರು ಸರ್ವೇಶ್ವರನಿಗೆ ಪರಮಪ್ರಿಯರಾದ ಅಧಿಕಾರಿಗಳೆಂದು ತಿಳಿಸುತ್ತಾರೆ. ಇಪ್ಪಡಿ – ಈ

(೧) ಜಿತನ್ತಾ ಸ್ತೋತ್ರವು.

ಎನ್ರಿರ್ವ ಕಾಲ್ಕೈಪ್ಪಿಡಿಕ್ಕ, (೨) "ಹಸ್ತಾವಲಂಬನೋ ಹ್ಯೇಕೋ ಭಕ್ತಿ ಕ್ರೀತೋ ಜನಾರ್ದನಃ" ಎಙ್ಗುರಪಡಿಯೇ ಇವನೈ ಕ್ಕೈಪ್ಪಿಡಿತ್ತು (೩) "ರಾಜಾಧಿರಾಜ ಸ್ಸರ್ವೇಷಾಂ" ಎಙ್ಗುರಪಡಿಯೇ, ಉಭಯ ವಿಭೂತಿ ನಾಥನಾನ ಸರ್ವೇಶ್ವರರ್ ತಾನುಗನ್ದದೊರು ನಿಲತ್ತಿಲೆ ವೈಕ್ಕ, ಅಭಿಷಿಕ್ತೈಯಾನ ಮಹಿಷಿಯೈಪ್ಪೋಲೆ ಬಹುಮತ (ಮಾಯ್) ನಾಯ್‌ತ್ತರ್ ಪರ ಮೈಕಾಂತಿತ್ವತ್ತುಕ್ಕು ಅನುರೂಪಮಾನ ವೃತ್ತಿಯೊಡೇ ಪೋರುಮಿವ್ವಧಿ

ಪ್ರಕಾರವಾಗಿ ಹಿಂದಿನ ಅಧಿಕಾರಗಳಲ್ಲಿ ಉಪಪಾದಿಸಿದ ಹಾಗೆ ಇದಕ್ಕೆ "ಪೋರು ಮಿವ್ವಧಿಕಾರೀ" ಎಂಬುವವರೊಂದಿಗೆ ಅನ್ವಯವು. "ಹೇ ವಿಭೋ – ಓ ಸ್ವಾಮಿಯೇ, ಲೋಕವಿಕ್ರಾನ್ತ ಚರಣೌ - ತ್ರಿವಿಕ್ರಮಾವತಾರಿಯಾಗಿ ಸರ್ವ ಲೋಕವನ್ನೂ ಆಕ್ರಮಿಸಿದ ಎರಡು ಪಾದಗಳನ್ನೂ, ಶರಣಂ – ಉಪಾಯವಾಗಿ, ಅವ್ರಜಂ - ಹೊಂದಿದೆನು" ಎನ್ರು - ಎಂದು, ಇರ್ವ - ಈ ಮೋಕ್ಷಾರ್ಥಿಯು, ಕಾಲ್ಕೈಪಿಡಿಕ್ಕ – ಕಾಲನ್ನು ಹಿಡಿದುಕೊಂಡರೆ ಎಂದರೆ ಶರಣಾಗತನಾದರೆ, "ಹಸ್ತಾವಲಂಬನೋಹಿ - ಕೈಹಿಡಿದು ಎತ್ತುವವನಾದರೋ, ಏಕಃ-ಒಬ್ಬನಾದ, "ಭಕ್ತಿಕ್ರೀತಃ - ಭಕ್ತಿಗೆ ಮಾರಲ್ಪಟ್ಟವನಾದ, ಎಂದರೆ ಭಕ್ತಿಯಿಂದ ಸ್ವಾಧೀನ ನಾಗುವ, ಜನಾರ್ದನಃ - ಮಹಾ ವಿಷ್ಣುವು, (ಈತನು ಪ್ರಳಯ ಕಾಲದಲ್ಲಿ ಚೇತನ ರನ್ನು ಪೀಡಿಸುವನು ಎಂದರೆ ಸೂಕ್ಷ್ಮಾವಸ್ಥೆಯನ್ನು ಹೊಂದುವಹಾಗೆ ಮಾಡು ವನು, ಆದರಿಂದ ಜನಾರ್ದನನೆಂದು ಹೆಸರು)" ಎಙ್ಗುರಪಡಿಯೇ ಎಂದು ಹೇಳಿ ರುವ ಹಾಗೆ, ಇವನೈ ಕೈಪಿಡಿತ್ತು - ಈ ಪ್ರಪನ್ನನನ್ನು ಕೈಹಿಡಿದು ಎತ್ತಿ, "ಸರ್ವೇಷಾಂ - ಸಮಸ್ತರಿಗೂ, ರಾಜಾಧಿರಾಜಃ - ರಾಜರುಗಳಿಗೂ ಕೂಡ ರಾಜ ನಾದ ಚಕ್ರವರ್ತಿಯು" ಎಂದು ಹೇಳಿರುವ ಹಾಗೆ, ಉಭಯ ವಿಭೂತಿನಾಥ ನಾನ - ಸೃಷ್ಟಿಸ್ಥಿತಿಲಯಗಳಿಗೆ ವಶವಾದ ಲೀಲಾವಿಭೂತಿಯೂ, ಹಾಗೆ ವಶವಾಗದ ನಿತ್ಯವಾದ ನಿತ್ಯವಿಭೂತಿಯೂ ಇವೆರಡಕ್ಕೂ ಸ್ವಾಮಿಯಾಗಿ ನಿಯಾಮಕನಾದ ಸರ್ವೇಶ್ವರನು, ತಾನುಗನ್ದದೊರು ನಿಲತ್ತಿಲೆ - ತಾನು ಅತ್ಯಂತಾಭಿಮಾನದಿಂದ ತನಗಿಷ್ಟಪಟ್ಟ ಸ್ಥಿತಿಯಲ್ಲಿ, ವೈಕ್ಕ - ಇಡಲು, ಅಭಿಷಿಕ್ತೈಯಾನ ಮಹಿಷಿಯೈ ಪ್ಪೋಲೆ – ಅಭಿಷೇಕ ಮಾಡಲ್ಪಟ್ಟ ಪಟ್ಟ ಮಹಿಷಿಯಂತೆ, ಬಹುಮತ ನಾಯ್ - ಸರ್ವೇಶ್ವರನ ಪ್ರೀತಿಗೆ ಪಾತ್ರನಾಗಿ, ತರ್ ಪರಮೈಕಾಂತಿತ್ವತ್ತುಕ್ಕು ಅನುರೂಪಮಾನ ವೃತ್ತಿಯೊಡೆ - ಭಕ್ತಿಜ್ಞಾನಗಳ ವಿನಾ ಇನ್ನಾವುದನ್ನೂ

(೨) ವಿಷ್ಣುಧರ್ಮ ೩.೨೪. (೩) ಭಾರತ.

ಅಪೇಕ್ಷಿಸದಿರುವ ತನ್ನ ವೈರಾಗ್ಯಕ್ಕೆ ಅನುಗುಣವಾದ ಅನುಷ್ಠಾನದೊಂದಿಗೆ, ಇವ್ವಧಿಕಾರೀ - ಈ ಕೃತಕೃತ್ಯನಾದ ಪ್ರಪನ್ನನು, **ಪೋರುವರ್** - ವರ್ತಿಸತಕ್ಕದ್ದು. ಕೃತಕೃತ್ಯನು ಹೇಗೆ ವರ್ತಿಸತಕ್ಕದ್ದೆಂದು ಹಿಂದಿನ ಎಂಟು ಅಧಿಕಾರಗಳಲ್ಲಿ ಹೇಳಿದುದನ್ನೇ ಸಂಗ್ರಹವಾಗಿ ಈ ವಾಕ್ಯದಿಂದ ಜ್ಞಾಪಕ ಕೊಡುತ್ತಾರೆ. **ಕಾಲೈ ಪಿಡಿಕ್ಕ** ಎಂಬುವದರಿಂದ ಸಾಙ್ಗಪ್ರಪದನಾಧಿಕಾರಾರ್ಥವು ಹೇಳಲ್ಪಟ್ಟಿತು. **ಇವನೈ ಕೈಪಿಡಿತ್ತು** ಎಂಬುವದರಿಂದ ರಕ್ಷ್ಯವಸ್ತುವೆಂದು ಸರ್ವೇಶ್ವರನು ಸ್ವೀಕರಿಸಿದನೆಂಬರ್ಥವು ತೋರಿಬರುವದರಿಂದ ಕೃತಕೃತ್ಯಾಧಿಕಾರಾರ್ಥವು ಬೋಧಿಸಲ್ಪಟ್ಟಿತು. ಇಲ್ಲಿ **ಲೋಕವಿಕ್ರಾನ್ತಚರಣೌ** ಎಂಬುವದರಿಂದ ಸರ್ವೇಶ್ವರನ ನಿರ್ಹೇತುಕ ಕೃಪೆಯೂ, ಆತನು ಸರ್ವಲೋಕ ಶರಣ್ಯನೆಂಬುವದೂ, ಸರ್ವರೂ ತನ್ನನ್ನು ಆಶ್ರಯಿಸಬೇಕೆಂಬ ಸರ್ವೇಶ್ವರನ ಕುತೂಹಲವೂ ಪ್ರದರ್ಶಿಸಲ್ಪಟ್ಟವು. **ವಿಭೋ** ಎಂಬುವ ಸಂಬೋಧನೆಯಿಂದ ಆತನು ಸ್ವಾಮಿ, ನಾವು ಆತನಿಗೆ ಸ್ವಂ, ಆತನಿಗೆ ಶೇಷಭೂತರು ಎಂಬುದು ಹೇಳಲ್ಪಟ್ಟಿತು. **ಹಸ್ತಾವಲಂಬನ** ಎಂಬುವ ಪ್ರಯೋಗದಿಂದ, **ಮಗ್ನಾನಾಂ ಭವಿನಾಂ ಭವಾರ್ಣವಸಮುತ್ತಾರಾಯ ನಾರಾಯಣಃ,** ಸಂಸಾರಸಮುದ್ರದಲ್ಲಿ ಮುಳುಗಿ ಒದ್ದಾಡುತ್ತಿದ್ದಾರಲ್ಲಾ, ಇವರು ನನ್ನನ್ನಾಶ್ರಯಿಸಿದವರಾದುದರಿಂದ ಇವರನ್ನು ಕೈಹಿಡಿದು ಎತ್ತುವದು ತನ್ನ ಕರ್ತವ್ಯವೆಂದು ಭಾವಿಸುವವನೆಂದು ಹೇಳಲ್ಪಟ್ಟಿತು. ಅದೇನು ಹಾಗೆ ಎಂದರೆ ಆತನು **ಭಕ್ತಿಕ್ರೀತಃ** - ಭಕ್ತಿಗೆ ಮಾರಲ್ಪಟ್ಟವನು, ವಶ್ಯನು, ಭಕ್ತಪರಾಧೀನನೆಂಬ ಭಾವವು. ಇಲ್ಲಿ ಹಾಗೆ ಕೈಹಿಡಿದು ಎತ್ತುವನು "**ಏಕಃ**" ಎಂದು ಹೇಳಿರುವದರಿಂದ ಜನಾರ್ದನನಾದ ಶ್ರೀಮನ್ನಾರಾಯಣನಲ್ಲದೆ ಇತರರಿಗೆ ಅಂತಹ ಶಕ್ತಿಯಿಲ್ಲವೆಂಬ ಭಾವವು; ಬ್ರಹ್ಮರುದ್ರೇಂದ್ರಾದಿಗಳಾಶ್ರಯವು ಪ್ರಪನ್ನನಿಗೆ ಸುತರಾಂ ಯೋಗ್ಯವಲ್ಲವೆಂಬ ಭಾವವೂ ಪ್ರದರ್ಶಿಸಲ್ಪಟ್ಟಿತು. **ಕೈಪಿಡಿತ್ತು** ಎಂಬುವದರಿಂದ ಆತನೇ ಪುರುಷಸೂಕ್ತದಲ್ಲಿ ಹೇಳಿರುವ ಹಾಗೆ ಪುರುಷನಾಗಿ, "ಸ್ತ್ರೀಪ್ರಾಯಮಿತರತ್" ಎಂಬ ಹೇಳಿಕೆಗೆ ಅನುಸಾರವಾಗಿ ಸ್ತ್ರೀಯಾದುದರಿಂದ, ಈ ಚೇತನನ ಪಾಣಿಗ್ರಹಣವನ್ನು ಮಾಡಿ, ಪತಿಯು ಪಾರತಂತ್ರ್ಯವನ್ನು ಹೊಂದಿರುವ ಅಬಲೆಯಾದ ಮಹಾಪತಿವ್ರತೆಯನ್ನು ರಕ್ಷಿಸುವ ತೆರದಿ ರಕ್ಷಿಸುವನೆಂಬ ಭಾವವು ತೋರಿಬರುತ್ತದೆ. "**ಪ್ರಿಯೋ ಹಿ ಜ್ಞಾನಿನೋತ್ಯರ್ಥ ಮಹಂ ಸಚ ಮಮ ಪ್ರಿಯಃ**" (ಗೀ. ೭ ೧೭.) ನಾನು ಜ್ಞಾನಿಗೆ ಅತ್ಯಂತ ಪ್ರಿಯನು, ಆತನಾದರೋ ನನಗೂ ಪ್ರಿಯನು ಎಂದು ಶ್ರೀಕೃಷ್ಣನೇ ಹೇಳಿರುತ್ತಾನೆ. ಆದುದರಿಂದಲೇ ಮುಂದೆ **ಅಭಿಷಿಕ್ತೈಯಾನ ಮಹಿಷಿಯ್ಯೈಪ್ಪೋಲೆ** ಎಂಬ ದೃಷ್ಟಾಂತವನ್ನು ಸೂಚಿಸಿರುತ್ತಾರೆ. ಪತಿವ್ರತೆಯು ಹೇಗೆ ಪತಿಗೆ ವಿಧೇಯಳಾಗಿ, ಪರಮಪಾರತಂತ್ರ್ಯವನ್ನು ವಹಿಸಿ, ಆತನೇ ಪರಮಗತಿ

ಯಾಗಿ ಭಾವಿಸಿ, ತದೇಕಚಿತ್ತಳಾಗಿ, ತದೇಕಭೋಗ್ಯಳಾಗಿ, ಪತಿ ಕೈಂಕರ್ಯವೇ ಸರ್ವಸಂಪತ್ತೆಂದು ಭಾವಿಸುವಳೋ, ಹಾಗೆಯೇ ಪ್ರಪನ್ನನೂ ಸರ್ವೇಶ್ವರನ ವಿಷಯದಲ್ಲಿ ಎಲ್ಲಾ ದರಲ್ಲೂ ಪರಮಪಾರತಂತ್ರ್ಯವನ್ನು ವಹಿಸಿದವನಾಗಿ, ತದನನ್ಯಗತಿಕನಾಗಿ, ತದೇಕಚಿತ್ತನಾಗಿ, ತದೇಕ ಭೋಗ್ಯನಾಗಿ, ಸದಾ ತತ್ಕೈಂಕರ್ಯನಿರತನಾಗಿರತಕ್ಕದ್ದೆಂಬುದು ಸೂಚಿಸಲ್ಪಟ್ಟಿತು. ಇದರಿಂದ ಸ್ವನಿಷ್ಠಾಭಿಜ್ಞಾನ, ಉತ್ತರಕೃತ್ಯಾಧಿಕಾರಗಳ ಅರ್ಥವು ವ್ಯಕ್ತವು. ತಾನುಗನ್ನದೊರುನಿಲತ್ತಿಲೆ ಎಂಬಲ್ಲಿ ನಿಲಕಬ್ಬವು ಸ್ಥಾನವಿಶೇಷಕ್ಕೂ ಅರ್ಥವಾಗುವದರಿಂದ ದೇವತಾಂತರ ಸಂಬಂಧಗಳಿರುವ ಸ್ಥಳದಲ್ಲಿ ನಿಲ್ಲಿಸದೆ ತನಗಭಿಮತವಾಗಿರುವ ಭಗವದ್ಭಾಗವತ ಪ್ರಾಚುರ್ಯವಿರುವ ಸ್ಥಳದಲ್ಲಿ "ವೃತ್ತಿಂ ಕಲ್ಪಿತವಾನ್ ಪ್ರಭುಃ" ಎಂದು ಹೇಳಿರುವ ಹಾಗೆ ವೃತ್ತಿಯನ್ನು ಕಲ್ಪಿಸಿ ನಿಲ್ಲಿಸುವನೆಂಬ ಸ್ಥಾನವಿಶೇಷಾಧಿಕಾರಾರ್ಥವು ಪ್ರದರ್ಶಿಸಲ್ಪಟ್ಟಿತು. ಇಲ್ಲಿ ಸರ್ವೇಶ್ವರನು ಉಭಯವಿಭೂತಿನಾಥನೆಂದು ಏಕೆ ಹೇಳಲ್ಪಟ್ಟನೆಂದರೆ, ಈ ಲೋಕವೂ, ದಿವ್ಯವೈಕುಂಠವೂ, ಎರಡೂ ಆತನ ವಿಭೂತಿಗಳೇಯಾದುದರಿಂದಲೂ ಈತನು ಪರತಂತ್ರನಾಗಿ, ಆತನು ಸ್ವತಂತ್ರನಾದುದರಿಂದಲೂ ಈತನನ್ನು ಸರ್ವೇಶ್ವರನು ಎಲ್ಲಿ ಇಡಲಿಷ್ಟವೋ ಅಲ್ಲಿ ಇಡಬಹುದು. ಐಹಿಕದಲ್ಲಿ ಜಿಹಾಸೆಯುಳ್ಳವನಿಗೆ ಇಲ್ಲಿಯೂ ಕೂಡ ಪರಮಪದದಲ್ಲಿ ಲಭಿಸುವ ಆನಂದ ಕೈಂಕರ್ಯಾದಿಗಳು ಸ್ವಲ್ಪ ಮಟ್ಟಿಗೆ ಲಭಿಸುತ್ತವೆಯಾದುದರಿಂದ ಸರ್ವೇಶ್ವರನು ಇಲ್ಲಿಯೇ ಕೆಲವುಕಾಲವಿಟ್ಟರೆ ಅದೂ ಈತನಿಗೆ ಸಮ್ಮತವೇ ಸರಿ ಎಂಬ ಭಾವದಿಂದ ಹಾಗೆ ಹೇಳಲ್ಪಟ್ಟಿತು. ಈತನು "ಭಾವೋ ನಾನ್ಯತ್ರ ಗಚ್ಛತಿ" ಎಂದು ಹೇಳಿರುವ ಹಾಗೆ ಅರ್ಚಾವತಾರಿಯಾದ ಸರ್ವೇಶ್ವರನಲ್ಲೇ ಚಿತ್ತವೃತ್ತಿಯುಳ್ಳವನಾದುದರಿಂದ, ಇಲ್ಲಿನ ವಾಸಕ್ಕೂ ದಿವ್ಯ ವೈಕುಂಠ ವಾಸಕ್ಕೂ ಏನೊಂದೂ ವ್ಯತ್ಯಾಸವಿಲ್ಲದೆ ಸ್ವಾಮ್ಯಭಿಮತಾನುಸಾರವಿರಲು ಸಮ್ಮತಿಸುವನೆಂಬ ಭಾವವು ಬಹುಮತೆನಾಯ್ ಎಂಬುದರಿಂದ ಸರ್ವೇಶ್ವರನ ಅನುಗ್ರಹವನ್ನು ಮುಖ್ಯವಾಗಿ ಈತನು ಹೊಂದಬೇಕೆಂದೂ ಬುದ್ಧಿಪೂರ್ವೋತ್ತರಾಘಗಳಿಂದ ಆತನ ನಿಗ್ರಹಕ್ಕೆ ಪಾತ್ರನಾಗಕೂಡದೆಂದು ಅಪರಾಧಪರಿಹಾರಾಧಿಕಾರಾರ್ಥವು ಇಲ್ಲಿ ತೋರಿಬರುತ್ತದೆ. ಸರ್ವೇಶ್ವರನು ಇತರರನ್ನು ಬಿಟ್ಟು ಈತನನ್ನು ಬಹುಮಾನಿಸುವದು ಯುಕ್ತವಾದುದೆಂಬಭಿಪ್ರಾಯವೂ ಬಹುಮತನಾಯ್ ಎಂಬುವದರಿಂದ ತೋರಿಬರುತ್ತದೆ. ತನ್ ಪರನ್ನೈಕಾಂತಿತ್ವಕ್ಕೆ ಅನುರೂಪವಾದ ವೃತ್ತಿ ಎಂದು ಹೇಳಿರುವದರಿಂದ, ಆ ವೃತ್ತಿಯು ಆಜ್ಞಾನುಜ್ಞಾ ಕೈಂಕರ್ಯಗಳಾಗುವದರಿಂದ ಶಾಸ್ತ್ರೀಯನಿಯಮನಾಧಿಕಾರಾರ್ಥವೂ, ಮತ್ತು ಭಗವತ್ಕೈಂಕರ್ಯವೂ ತತ್ಪರಾಕಾಷ್ಠೆಯಾದ ಭಾಗವತ ಕೈಂಕರ್ಯವೂ ಮತ್ತು ಅವರುಗಳ ಪ್ರಸನ್ನತೆಯ ಸಂಪಾದನೆಯೂ ಆಗು

ಕಾರೀ. ಇಪ್ಪಡಿಪ್ಪಟ್ಟ ಅಧಿಕಾರಿಗಳಿಲೇ ಪ್ರಾರಬ್ಧ ದುಷ್ಕೃತ ವಿಶೇಷ ವೈಚಿತ್ರ್ಯಯಾಲೆ ವರುಮ್ ಅಹಂಕಾರ ಮಮಕಾರಗಳೆನ್ನ, ಅವ್ವೈಯುಡಿಯಾಕ ವರುಮ್ ಅಪಚಾರಙ್ಗಳೆನ್ನ, ಪ್ರಯೋಜನಾಂತರ ರುಚಿಯೆನ್ನ, ಅದಡಿಯಾಗ ಸಂಭಾವಿತಮಾನ ದೇವತಾಂತರ ಸ್ಪರ್ಶಮೆನ್ನ, ಬುದ್ಧಿ

ವಶರಿಂದ ಪುರುಷಾರ್ಥಕಾಷ್ಠಾಧಿಕಾರದಭಿಪ್ರಾಯವೂ ಸೂಚಿಸಲ್ಪಟ್ಟಿತು. ಈ ವಿಧವಾಗಿ ಈ ಕೃತಕೃತ್ಯನಾದ ಪ್ರಪನ್ನನು ದೇಹಾವಸಾನದವರೆಗೂ ವರ್ತಿಸತಕ್ಕದ್ದೆಂದುಪದೇಶಿಸಿದರು.

ಈ ಕೃತಕೃತ್ಯರಾದ ಪ್ರಪನ್ನರು ಹಿಂದೆ ಹೇಳಿದ ರೀತಿಯಲ್ಲೇನೋ ಇರತಕ್ಕದ್ದು. ಆದರೆ ಪ್ರಾರಬ್ಧ ಪಾಪವಿಶೇಷವು ಕೆಲವರ ವಿಷಯದಲ್ಲಿ ಪ್ರಬಲವಾಗಿ ಕೆಲವು ವೈಪರೀತ್ಯಗಳುಂಟಾಗುತ್ತವೆಂದೂ, ಇನ್ನು ಕೆಲವರಿಗೆ ಕೆಲವು ಸುಕೃತಾದಿ ಕಾರಣಗಳಿಂದ ಅಂತಹ ವೈಪರೀತ್ಯಗಳುಂಟಾಗದೇ ಇರುವದರಿಂದ, ಮೊದಲನೆಯವರಿಗೆ ನಿರ್ಯಾಣಕ್ಕೆ ವಿಳಂಬವೂ, ಎರಡನೆಯವರಿಗೆ ಅವಿಳಂಬವೂ ಉಂಟಾಗುತ್ತದೆಂದುಪದೇಶಿಸುತ್ತಾರೆ. ಕೆಲವರಿಗೆ ವಿಳಂಬವುಂಟೆಂದು ಹೇಳಿತಲ್ಲಾ, ಆ ವಿಳಂಬವೇನು ಕಲ್ಪಾಂತಪರ್ಯಂತವೇ? ಜನ್ಮಾಂತ ಪರ್ಯಂತವೇ? ಕೆಲವರಿಗೆ ವಿಳಂಬವಿಲ್ಲವೆಂದು ಹೇಳಲ್ಪಟ್ಟಿತಲ್ಲಾ, ಅದೇನು ಉತ್ತರ ಕ್ಷಣವಲ್ಲೇ? ಅಥವಾ ಶರೀರಾವಸಾನದಲ್ಲಿಯೇ? ಈ ಪ್ರಶ್ನೆಗಳಿಗೂ ಸಮಾಧಾನವನ್ನು ದಯಪಾಲಿಸುತ್ತಾರೆ. ಇಪ್ಪಡಿಪ್ಪಟ್ಟ ಅಧಿಕಾರಿಗಳಿಲೇ - ಇಂತಹ ಕೃತಕೃತ್ಯರಾದ ಅಧಿಕಾರಿಗಳಲ್ಲಿ, ಪ್ರಾರಬ್ಧ ದುಷ್ಕೃತ ವಿಶೇಷ ವೈಚಿತ್ರ್ಯಯಾಲೇ - ಪ್ರಾರಬ್ಧವು ಅಭ್ಯುಪಗತ, ಅನಭ್ಯುಪಗತವೆಂದು ಎರಡು ವಿಧವೆಂಬದಾಗಿ ಹಿಂದೆಯೇ ಹೇಳಲ್ಪಟ್ಟಿತು. ಅನಭ್ಯುಪಗತವು ಇನ್ನೂ ಪ್ರಾರಂಭವಾಗಲಿಲ್ಲವಾದದರಿಂದ, ಇಲ್ಲಿ ಪ್ರಾರಬ್ಧವೆಂದರೆ ಅಭ್ಯುಪಗತ ಪ್ರಾರಬ್ಧವು, ಅದರ, ದುಷ್ಕೃತ ವಿಶೇಷ - ಪಾಪಾಂಶದ, ವೈಚಿತ್ರ್ಯಯಾಲೇ - ವಿಚಿತ್ರತೆಯಿಂದ, ವಿಜಾತೀಯವಾದದೆಂಬ ಭಾವವು, ವರುಮ್ - ಉಂಟಾಗುವ, ಅಹಂಕಾರ ಮಮಕಾರಗಳೇನು, ಅವ್ವೈಯುಡಿಯಾಗ - ಆ ಅಹಂಕಾರ ಮಮಕಾರಗಳ ಮೂಲಕವಾಗಿ, ವರುಮ್ ಅಪಚಾರಙ್ಗಳೆನ್ನ - ಉಂಟಾಗುವ ಭಗವದ್ಭಾಗವತ ಅಪಚಾರಗಳೇನು. ಪ್ರಯೋಜನಾಂತರ ರುಚಿಯೆನ್ನ - ಬೇರೆ ಪ್ರಯೋಜನಗಳಾದ ಅರ್ಥ ಕಾಮಗಳ ರೂಪವಾದ ಐಹಿಕಪ್ರಯೋಜನಗಳಲ್ಲಿ ಆಶೆ ಏನು, ಅದಡಿಯಾಕ ಸಂಭಾವಿತಮಾನ ದೇವತಾಂತರ ಸ್ಪರ್ಶಮೆನ್ನ - ಆ ಐಹಿಕ ಪ್ರಯೋಜನದ ಆಶೆ ಮೂಲಕ ಉಂಟಾಗುವ ಅನ್ಯದೇವತಾ

ದೌರ್ಬಲ್ಯಮೆನ್ನ, ಅದಡಿಯಾಗ ವರುಮ್ ಉಪಾಯಾಂತರ ಪ್ರತ್ಯಾಶೆಯೆನ್ನ, ಇವ್ವೈಪರೀತ್ಯಮ್ ಪಿರನ್ದವರ್‌ಗಳುಕ್ಕುಮ್, ಇವೈ ಪಿರಿವಾದೆ ಪ್ರಾರಬ್ಧ ಸುಕೃತ ವಿಶೇಷತ್ತಾಲುಮ್, ಪೂರ್ವಪ್ರಪತ್ತಿಯಿಲ್ ಫಲಸಙ್ಕಲ್ಪ ವಿಶೇಷತ್ತಾಲುಮ್, ಛಿದ್ರಮಿಲ್ಲಾದ ಕೈಙ್ಕರ್ಯತ್ತಿಲೆ ಪ್ರತಿಷ್ಠಿತರಾಯ್ ಪ್ಪೋಪನ್ದವರ್‌ಗಳುಕ್ಕುಮ್, ಸಂಸಾರತ್ತಿಲ್ ನಿನ್ರುಮ್ ನಿರ್ಯಾಣತ್ತುಕ್ಕು ವಿಳಂಬಾ ವಿಳಂಬಙ್ಗಳಿಲ್ ನಿಲೈ ಇರುಕ್ಕುಮ್‌ಪಡಿ, ಎಙ್ಗನೇ ಎನ್ನಿಲ್.

ಸಂಬಂಧವೇನು, ಸ್ಪರ್ಶವೆಂದು ಹೇಳಿರುವದರಿಂದ ಅನ್ಯದೇವತಾಸ್ಪೃಕ್ತೇ ಪ್ರಪನ್ನನಿಗೆ ಸರ್ವಾತ್ಮನಾ ಕೂಡದೆಂಬ ಭಾವವು ತೋರಿಬರುತ್ತದೆ, **ಬುದ್ಧಿದೌರ್ಬಲ್ಯಮೆನ್ನ** - ವಿಶ್ವಾಸ ಕಮ್ಮಿಯಾಗೋಣವೇನು, **ಅದಡಿಯಾಗ ವರುಮ್ ಉಪಾಯಾಂತರ ಪ್ರತ್ಯಾಶೆಯೆನ್ನ** - ಪ್ರಪದನವು ಕಾರ್ಯಕಾರಿಯಾಗುತ್ತದೋ ಇಲ್ಲವೋ ಎಂಬದಾಗಿ ವಿಶ್ವಾಸವು ಯಾವಾಗ ಕಮ್ಮಿಯಾಯಿತೋ ತನ್ಮೂಲಕವಾಗಿ ಉಂಟಾಗುವ ಬೇರೆ ಉಪಾಯವೆಂದರೆ ಉಪಾಸನೆ ಮಾಡಬೇಕೆಂಬ ಅಪೇಕ್ಷೆಯೇನು, **ಇವ್ವೈಪರೀತ್ಯಮ್ ಪಿರನ್ದವರ್‌ಗಳುಕ್ಕುಮ್** - ಇಂತಹ ಅಪರಾಧ ಪ್ರಾಪ್ತಿ ಉಂಟಾದವರಿಗೆ, **ಸಂಸಾರತ್ತಿಲ್ ನಿನ್ರುಮ್ ನಿರ್ಯಾಣತ್ತುಕ್ಕು ವಿಳಂಬತ್ತಿಲ್ ನಿಲೈ ಯಿರುಕ್ಕುಂಪಡಿ** - ಎಂಬುದರೊಂದಿಗೆ ಅನ್ವಯವು, ಈ ಜನ್ಮದಿಂದ ನಿರ್ಯಾಣಕ್ಕೆ ವಿಳಂಬಾವಿಳಂಬ ಉಂಟಾಗುವದರ ಪ್ರಕಾರವೂ, ಹೇಗೆ ಎಂಬುದನ್ನು ತಿಳಿಸುತ್ತಾರೆ. ಮುಂದೆ ಯಾರಿಗೆ ವಿಳಂಬವಿಲ್ಲವೆಂದರೆ ಹೇಳುತ್ತಾರೆ:—**ಇವೈ ಪಿರಿವಾದೆ** - ಈ ಅಹಂಕಾರ ಮಮಕಾರಗಳೂ, ಅಪಚಾರಗಳೂ, ಐಹಿಕಗಳಲ್ಲಿ ಮಮತೆಯೂ, ದೇವತಾಂತರ ಭಜನವೂ, ಬುದ್ಧಿದೌರ್ಬಲ್ಯವೂ, ಉಪಾಯಾಂತರ ಪರಿಗ್ರಹವೂ, ಇವುಗಳು ಯಾವುವೂ ಉಂಟಾಗದೆ, **ಪ್ರಾರಬ್ಧ ಸುಕೃತ ವಿಶೇಷದಿಂದ, ಪೂರ್ವಪ್ರಪತ್ತಿಯಿಲ್** - ಮೊದಲು ಪ್ರಪತ್ತ್ಯನುಷ್ಠಿಸುವ ಕಾಲದಲ್ಲೇ, **ಫಲಸಙ್ಕಲ್ಪ ವಿಶೇಷತ್ತಾಲುಮ್** - ಬುದ್ಧಿಪೂರ್ವೋತ್ತರಾಘಕ್ಕೆ ಕಾರಣಭೂತವಾದ ಪ್ರಾರಬ್ಧಪಾಪಾಂಶವೂ ನಷ್ಟವಾಗಬೇಕೆಂಬ ಫಲಕ್ಕಾಗಿ ಮಾಡಿದ ಸಙ್ಕಲ್ಪ ವಿಶೇಷದಿಂದ, **ಛಿದ್ರಮಿಲ್ಲಾದ ಕೈಙ್ಕರ್ಯತ್ತಿಲೇ** - ಉಪಚಾರಾಪದೇಶೇನ ಕೃತಾನಹರಹರ್ಮಯಾ । ಅಪಚಾರಾನಿಮಾನ್ ಸರ್ವಾನ್ ಕ್ಷಮಸ್ವ ಪುರುಷೋತ್ತಮ ಎಂಬ ವಾಕ್ಯದಲ್ಲಿ ತೋರಿಬರುವ ಹಾಗೆ ಅಪಚಾರಗಳಿಲ್ಲದ ಕೈಙ್ಕರ್ಯವಲ್ಲಿ, **ಪ್ರತಿಷ್ಠಿತರಾಯ್** - ದೃಢಾಸಕ್ತಿಯುಳ್ಳ, **ಪೋನ್ದವರ್‌ಗಳುಕ್ಕುಮ್** - ಪ್ರವೃತ್ತಿಯುಳ್ಳವರಿಗೆ, **ಸಂಸಾರತ್ತಿಲ್ ನಿನ್ರು ನಿರ್ಯಾಣತ್ತುಕ್ಕು** - ಈ ಜನ್ಮ

ದಿಂದ ನಿರ್ಯಾಣಕ್ಕೆ, ಅವಿಳಂಬಙ್ಗಳಿಲ್ ನಿಲ್ಶೈ ಯಿರುಕ್ಕಂಪಡಿ - ವಿಳಂಬವಿಲ್ಲ ದಿರುವವರ ಪ್ರಕಾರವೂ, ಎಙ್ಗನೇ ಎನ್ನಿಲ್ - ಹೇಗೆಂದರೆ, ಮುಂದೆ ಹೇಳು ತ್ತಾರೆ.

“ತಾವದಾರ್ತಿ ಸ್ತಥಾ ವಾಂಛಾ ತಾವನ್ಮೋಹಃ ತಥಾ ಸುಖಂ । ಯಾವನ್ನಯಾತಿ ಶರಣಂ ತ್ವಾಮಶೇಷಾಘನಾಶನಂ ॥” ಎಂಬ ಪ್ರಮಾಣ ದಲ್ಲಿ ಶರಣ ಹೊಂದಿದ ಒಡನೆಯೇ ಫಲಪ್ರಾಪ್ತಿಯು ಎಂದು ತೋರಬಹುದು. (ಈ ಶ್ಲೋಕದ ಸರಿಯಾದ ಅರ್ಥಕ್ಕೆ ೮೪೦ನೆಯ ಪುಟ ನೋಡಿ) “ತನೂಕೃತ್ಯಾ ಖಿಲಂ ಪಾಪಂ ಮಾಮಾಪ್ನೋತಿ ನರಶ್ಶನೈಃ । ಅಥೋಪಾಯ ಪ್ರಸ ಕ್ತೋಪಿ ಭುಕ್ತ್ವಾ ಭೋಗಾನನಾಮಯಾನ್ । ಅನ್ತೇ ವಿರಕ್ತಿ ಮಾಸಾದ್ಯ ವಿಶತೇ ವೈಷ್ಣವಂ ಪದಂ ॥” ಎಂಬುವ ಪ್ರಮಾಣದಲ್ಲಿ ವಿಳಂಬವು ತೋರಿಬರು ತ್ತದೆ. (೧೫೩೧ನೆಯ ಪುಟ ನೋಡಿ) ಹೀಗೆ ಪ್ರಮಾಣಗಳು ವಿಳಂಬಾವಿಳಂಬ ಗಳನ್ನು ಬೋಧಿಸುವ ಹಾಗೆ ತೋರುತ್ತವೆ. ಇವುಗಳ ಸರಿಯಾದಭಿಪ್ರಾಯಗಳೇ ನೆಂಬುದನ್ನು ತಿಳಿಸುವರಾಗಿ ಈ ಮೇಲಿನ ವಾಕ್ಯಮೂಲಕವಾಗಿ, ಹೀಗೆ ಪ್ರಪತ್ತ್ಯ ನುಷ್ಠಿಸಿದವರಲ್ಲಿ ಯಾರಿಗೆ ನಿರ್ಯಾಣಕ್ಕೆ ವಿಳಂಬ ಉಂಟೆಂದೂ, ಯಾರಿಗೆ ವಿಳಂಬ ವಿಲ್ಲವೆಂದೂ ಉಪದೇಶಿಸುತ್ತಾರೆ. ಪ್ರಾರಬ್ಧದಲ್ಲಿ ಕೆಲವರಿಗೆ ದುಷ್ಕೃತವಿಶೇಷ ವುಂಟು. ಕೆಲವರಿಗೆ ಸುಕೃತವಿಶೇಷವುಂಟು ದುಷ್ಕೃತವಿಶೇಷವಿದ್ದವರು, ಈ ದುಷ್ಕೃತವು ಬುದ್ಧಿಪೂರ್ವೋತ್ತರಾಘಗಳನ್ನುಂಟುಮಾಡದ ಹಾಗೆ, ಪ್ರಪದನಕಾಲ ದಲ್ಲೇ ದುಷ್ಕೃತನಾಶಕ್ಕಾಗಿ ಸಙ್ಕಲ್ಪಿಸಿ ಅನುಷ್ಠಿಸಬೇಕಾಗಿತ್ತು. ಹಾಗೆ ಅನುಷ್ಠಿ ಸದೇ ಇದ್ದವರಿಗೆ ಬುದ್ಧಿಪೂರ್ವೋತ್ತರಾಘಗಳು ಪ್ರಾಪ್ತವಾಗುವ ಕ್ರಮವನ್ನು ಬೋಧಿಸುತ್ತಾರೆ. ಮೊದಲು ಅಹಂಕಾರ ಮಮಕಾರಗಳೂ, ತನ್ಮೂಲಕ ಭಗವ ದ್ಭಾಗವತಾಪಚಾರಗಳೂ, ಐಹಿಕಾಸಕ್ತಿಗಳೂ, ತತ್ಪ್ರಾಪ್ತಿಗಾಗಿ ಅನ್ಯದೇವತಾ ಭಜನವೂ, ಮಹಾವಿಶ್ವಾಸನಾಶವೂ, ಆ ಕಾರಣದಿಂದ ಅನ್ಯೋಪಾಯಾವಲಂಬ ನವೂ ಉಂಟಾಗುತ್ತವೆಂದೂ ತಿಳಿಸಿ, ಆ ಕಾರಣದಿಂದ ಅಂತಹ ಪ್ರಾರಬ್ಧ ದುಷ್ಕೃ ತವಿರುವಧಿಕಾರಿಗಳಿಗೆ ನಿರ್ಯಾಣಕ್ಕೆ ಕೆಲವರಿಗೆ ವಿಳಂಬವು ಉಂಟಾಗುತ್ತದೆಂಬ ಅಭಿಪ್ರಾಯವು. ಹಾಗಲ್ಲದೆ ಮೊದಲು ಪ್ರಪದನ ಮಾಡುವಾಗಲೇ ಪ್ರಾರಬ್ಧ ದುಷ್ಕೃತವಿನಾಶಕ್ಕೂ ಸಙ್ಕಲ್ಪಿಸಿದ್ದರಾಗಲಿ, ಅಥವಾ ಪ್ರಾರಬ್ಧದಲ್ಲಿ ದುಷ್ಕೃತ ವಿಲ್ಲದೆ ಸುಕೃತವೇ ಇರುವವರಿಗಾಗಲಿ, ಇಂತಹ ವಿಪರೀತಗಳು ಯಾವುವೂ ಪ್ರಾಪ್ತವಾಗುವದಿಲ್ಲವಾದುದರಿಂದ ವಿಳಂಬವೇ ಇಲ್ಲವೆಂದು ಹೇಳುತ್ತಾರೆ.

ಕೆಲವರಿಗೆ ವಿಳಂಬ ಉಂಟು ಎಂದು ಹೇಳಿದರೆ, ಆ ವಿಳಂಬವೇನು ಜನ್ಮಾಂ ತರ ಕಲ್ಪಾಂತರ ಪರ್ಯಂತವೇ ? ಇಲ್ಲವೇ ದೇಹಾವಸಾನದಲ್ಲೇ ವಿಳಂಬವೇ ? ಎಂಬ

ವಿಳಂಬ ಹೇತುಭೂತ ವೈಪರೀತ್ಯಾನಾಂ ಪರಿಹಾರಕ್ರಮಃ

ಇ(ಅ)ವ್ವಿಡತ್ತಿಲವರ್ಗಳುಕ್ಕು ಚಾರ್ವಾದಿಗಳಕ್ಕು ಪ್ಪೋಲೆ ನಿಲೈನಿನ್ರ ಅಹಙ್ಕಾರ ಮಮಕಾರಙ್ಗಳ್ ಪುಗಿರಾದು. ಅವಹಿತರಾಯ್ ನಡಪ್ಪಾ

ಪ್ರಶ್ನೆಯು ನ್ಯಾಯವಾದುದು. ಅದಕ್ಕೆ ಉತ್ತರವು ಈ ದೇಹಾವಸಾನಕ್ಕೇ ವಿಳಂಬವೇ ವಿನಾ, ಸರಿಯಾಗಿ ಪ್ರಪದನಾನುಷ್ಠಾನ ಮಾಡಿದ ಅಧಿಕಾರಿಗೆ ಜನ್ಮಾಂತರಗಳಿಲ್ಲವೆಂದು ಹೇಳುತ್ತಾರೆ ಹಾಗಾದರೆ ಆ ಅಪರಾಧಗಳ ಪರಿಹಾರ ಹೇಗೆ ಎಂದು ಮುಂದೆ ಕೇಳಬೇಕಾಗುತ್ತದೆ. ಆದುದರಿಂದ ಈ ಅಹಂಕಾರ ಮಮಕಾರವೇ ಮೊದಲಾದ ಕ್ರಮವಾಗಿ ಪ್ರಾಪ್ತವಾಗುವ ವೈಪರೀತ್ಯಗಳ ಪರಿಹಾರ ಹೇಗೆ ಎಂಬುವದನ್ನೂ ಸಹ ಬೋಧಿಸುತ್ತಾರೆ. ಆದುದರಿಂದ ಹಿಂದಿನ ವಾಕ್ಯದಲ್ಲಿ ನಿಲೈನಿನ್ರ - ಎಂದು ಹೇಳಿದುದರಭಿಪ್ರಾಯವು, ಆ ಕಾಲವಿಳಂಬವು ಎಷ್ಟರಮಟ್ಟಿಗೆ ಮತ್ತು ಆ ವಿಳಂಬ ಕಾರಣಗಳ ಪರಿಹಾರ ಹೇಗೆಂಬುದನ್ನು ಸೂಚಿಸುವಂಥಾದ್ದಾಗಿದೆ.

ಇನ್ನು ಕೆಲವು ಸುಕೃತಿಗಳಿಗೆ ವಿಳಂಬವಿಲ್ಲವೆಂದರೆ, ಭರನ್ಯಾಸ ಮಾಡಿದ ಉತ್ತರ ಕ್ಷಣದಲ್ಲಿಯೇ ? ಅಥವಾ ದೇಹಾವಸಾನಾನಂತರವೇ ? ಎಂಬ ಪ್ರಶ್ನೆಯು ಯುಕ್ತವಾದುದು. ಆರ್ತನಾದರೆ ಒಡನೆಯೂ, ದೃಪ್ತನಾದರೆ ಪ್ರಾರ್ಥಿಸಿದ ಹಾಗೆ ದೇಹಾವಸಾನದಲ್ಲೂ ನಿರ್ಯಾಣವು ಪ್ರಾಪ್ತವಾಗುತ್ತದೆಂದು ಉಪದೇಶಿಸುತ್ತಾರೆ

ವಿಳಂಬಕ್ಕೆ ಕಾರಣಗಳಾದ ದೋಷಗಳ ಪರಿಹಾರ ಕ್ರಮವು.

ಮೊದಲು ಅಹಂಕಾರ ಮಮಕಾರಗಳ ಪರಿಹಾರವು ಈ ಅಧಿಕಾರಿಗಳಿಗೆ ನಿರ್ಯಾಣಕಾಲದೊಳಗೇನೆ ಉಂಟಾಗುವ ಕ್ರಮವನ್ನು ಸೂಚಿಸುತ್ತಾರೆ :— ಇವ್ವಿಡತ್ತಿಲ್ - ಈ ಸಂದರ್ಭದಲ್ಲಿ, ಅವರ್ಗಳುಕ್ಕು - ಆ ಪ್ರಾರಬ್ಧ ಮುಸ್ತ್ಯತೇರುವ ಪ್ರಪನ್ನರಿಗೆ, ಚಾರ್ವಾದಿಗಳುಕ್ಕುಪ್ಪೋಲೆ - ತಾನಲ್ಲದೆ ಬೇರೆ ಪರಮಾತ್ಮನಿಲ್ಲವೆಂದೂ, ಈ ಲೋಕವಲ್ಲದೆ ಬೇರೆ ಇನ್ನು ಸ್ವರ್ಗ ವೈಕುಂಠಾದಿಗಳು ಯಾವವೂ ಇಲ್ಲವೆಂದೂ, ಹೇಳುವ ನಾಸ್ತಿಕರ ಹಾಗೆ. ನಿಲೈ ನಿನ್ರ ಅಹಂಕಾರ ಮಮಕಾರಙ್ಗಳ್ ಪುಗಿರಾದು - ಸ್ಥಿರವಾಗಿ ನಿಲ್ಲುವ ಅಹಂಕಾರ ಮಮಕಾರಗಳು ಪ್ರವೇಶಿಸಲಾರವು. ನಾಸ್ತಿಕನಾದರೋ ಪರಮಾತ್ಮನೇ ಇಲ್ಲವೆಂದು ಹೇಳುವದರಿಂದ ಅಂಥಾವನಲ್ಲಿ ಅಹಂಕಾರ ಮಮಕಾರಗಳು ಸ್ಥಿರವಾಗಿ ನಿಲ್ಲಬಹುದು. ಋಣಂ ಕೃತ್ವಾ

ರಿಡರುನಾಪ್ಪೋಲೆ ಎಜ್ಗನು ನೊರುಕ್ಕಾಲ್ ವರುಮ್; ಅಹಂಕಾರ ಮಮಕಾರಙ್ಗಳ್ ವಿವೇಕಾವಧಿಗಳಾಯ್ ಪಿನ್ಬುತ್ತ ತೆಳಿವಾಲೇ ಕಳಿನ್ದು ಪೋಮ್. ಅಪರಾಧಙ್ಗಳ್ ಪಿರಿನ್ದಾಲ್ ಕ್ಷಾಮಣಾವಧಿಯಾಯುಮ್, ಶಿಕ್ಷಾವಧಿಯಾಯುಮ್, ಕೋಲಿನ ಕಾಲತ್ತುಕ್ಕುಳ್ಳೇ ಅಪರಾಧ ನಿಸ್ತಾರಮ್ ಪಿರುಕ್ಕುಂಪಡಿ ಅಪರಾಧ ಪರಿಹಾರಾಧಿಕಾರತ್ತಿಲೇ ಶೊನ್ನೋಮ್.

ಘೃತಂ ಪಿಬೇತ್ ಎಂಬುದು ಆತನ ಸಿದ್ಧಾಂತವಾದುದರಿಂದ ಅಹಂಕಾರ ಮಮಕಾರಗಳು ಉಂಟು. ಆದರೆ ಈ ಪ್ರಪನ್ನನು ಸರ್ವೇಶ್ವರನ ಅನುಗ್ರಹವನ್ನು ಹೊಂದಿರುವದರಿಂದ ಈತನಲ್ಲಿ ಅವು ಸ್ಥಿರವಾಗಿ ನೆಲಿಸಲಾರವೆಂಬ ಭಾವವು. ಈತನ ನಿರ್ಯಾಣಕಾಲದವರೆಗೂ ಅನುಸರಿಸಿಕೊಂಡು ಬರಲಾರವು ಏಕೆಂದರೆ ಭಗವದನುಗ್ರಹವಿರುವದರಿಂದ ಅವು ನಿವರ್ತಿಸುತ್ತವೆ ಎಂಬುದು ಮುಖ್ಯ ತಾತ್ಪರ್ಯವು ಇರಲಾರವೆಂಬುದು ಕೈಮುತಿಕ ನ್ಯಾಯಸಿದ್ಧವು **ಅವಹಿತರಾಯ್ ನಡಪ್ಪಾರ್** - ಸಾವಧಾನದಿಂದ ನಡೆಯುವರು, ಜಾಗರೂಕತೆಯಿಂದ ನಡೆಯುವರೆಂಬರ್ಥವು, **ಇಡರುವಾಪ್ಪೋಲೆ** - ಎಡವುವ ಹಾಗೆ, **ಎಜ್ಗನು ಒರಕ್ಕಾಲ್** - ಎಲ್ಲೋ ಒಂದು ಕಾಲದಲ್ಲಿ, **ವರುಮ್** - ಬರಬಹುದು. ಈ ಅಹಂಕಾರ ಮಮಕಾರಗಳು, **ವಿವೇಕಾವಧಿಗಳಾಯ್** - ವಿವೇಕ ಹುಟ್ಟುವ ತನಕ ಇರುವವುಗಳಾಗಿ, **ಪಿನ್ಬುತ್ತ ತೆಳಿವಾಲೇ** - ಆಮೇಲೆ ಉಂಟಾದ ತತ್ವಜ್ಞಾನದಿಂದ, **ಕಳಿನ್ದು ಪೋಮ್** - ನಾಶವಾಗಬಹುದು. **ಅಪರಾಧಙ್ಗಳ್ ಪಿರಿನ್ದಾಲ್** - ಇಂತಹ ದೋಷಗಳು ಪ್ರಾಪ್ತವಾದರೆ, **ಕ್ಷಾಮಣಾವಧಿಯಾಯುಮ್** - ಕ್ಷಮಾಪಣೆ ಪ್ರಾರ್ಥನೆಯನ್ನೇ ಅವಧಿಯಾಗಿ ಉಳ್ಳದ್ದಾಗಿಯೂ ಎಂದರೆ ಸರ್ವೇಶ್ವರನನ್ನು ಕ್ಷಮಿಸು ಎಂದು ಪ್ರಾರ್ಥಿಸಿದ ಒಡನೆಯೇ ಈ ಅಹಂಕಾರ ಮಮಕಾರ ರೂಪ ದೋಷವು ತೊಲಗುತ್ತದೆಂಬ ಭಾವವು. **ಶಿಕ್ಷಾವಧಿಯಾಯುಮ್** - ಹಾಗೆ ಅನುತಾಪಾದಿಗಳೊಂದಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಸರ್ವೇಶ್ವರನು ಕೊಡುವ ಅಲ್ಪಶಿಕ್ಷೆಯೇ ಅವಧಿಯಾಗಿಯೂ, ಎಂದರೆ ಹಾಗೆ ಅಲ್ಪಶಿಕ್ಷೆಯನ್ನನುಭವಿಸಿದ ಒಡನೆಯೇ ಅವು ತೊಲಗುತ್ತವೆಂಬ ಭಾವವು; **ಕೋಲಿನ ಕಾಲತ್ತುಕ್ಕುಳ್ಳೇ** - ದೇಹಾವಸಾನವಾದ ಒಡನೆಯೋ ಹೇಗೋ ತಾನು ಅಪೇಕ್ಷಿಸಿದ ಕಾಲದೊಳಗೇನೋ, **ಅಪರಾಧ ನಿಸ್ತಾರಮ್ ಪಿರಕ್ಕುಮ್ಪಡಿ** - ಈ ಅಹಂಕಾರ ಮಮಕಾರ ರೂಪದೋಷ ನಿವೃತ್ತಿಯು ಉತ್ಪತ್ತಿಯುಂಟಾಗುವ ಕ್ರಮವನ್ನು, ಅಪರಾಧ ಪರಿಹಾರಾಧಿಕಾರದಲ್ಲಿ, **ಶೊನ್ನೋಮ್** - ಹೇಳಿದೆವು. ಪ್ರಾರಬ್ಧ ದುಷ್ಕೃತ

ಮೋಕ್ಷಮ್ ಪೆರುಗೈಕ್ಕು ಕಾಲವಿಶೇಷಮ್ ಕುರಿಯಾದೆ ಪ್ರಪನ್ನರಾನಾರ್ಕ್ಕುಪ್ಪತ್ತು (೧) "ಅಪಾಯಾ (ವಿರತಃ) ದ್ವಿರತೆಶ್ಯಶ್ವನ್ಮಾಂಚೈವ ಶರಣಂ

ಮೂಲಕ ಪ್ರಾಪ್ತವಾಗುವ ಅಹಂಕಾರ ಮಮಕಾರಗಳು ಸ್ಥಿರವಾಗಿ ಈ ಪ್ರಪನ್ನನಲ್ಲಿ ನಿಲ್ಲಲಾರವೆಂದು ಹೇಳುತ್ತಾರೆ. ಚಾರ್ವಾಕನಿಗಾದರೆ ಸ್ಥಿರವಾಗಿ ನಿಲ್ಲಬಹುದು. ಈ ಪ್ರಪನ್ನನಿಗಾದರೆ ಭಗವದನುಗ್ರಹ ಮಹಿಮೆಯಿಂದ ಇಂತಹ ಅಹಂಕಾರ ಮಮಕಾರಗಳು ಎಲ್ಲೋ ಒಂದು ಕಾಲದಲ್ಲಿ ಉಂಟಾಗಬಹುದು. ಉಂಟಾದಗೂ ಶೀಘ್ರ ನಿವೃತ್ತಿಯುಂಟೆಂದು ಹೇಳುತ್ತಾರೆ. ಪರಿತಾಪ ಹುಟ್ಟಿ ಪ್ರಾಯಶ್ಚಿತ್ತ ಮೂಲಕ ಕ್ಷಮಾಪಣೆಯನ್ನು ಕೇಳಿಕೊಂಡ ಒಡನೆಯೇ ನಿವರ್ತಿಸಬಹುದು. ಹಾಗೆ ಕ್ಷಮಾಪಣೆಯನ್ನು ಪ್ರಾರ್ಥಿಸದಿದ್ದರೆ ಅಲ್ಪಶಿಕ್ಷೆಯಿಂದ ನಿವರ್ತಿಸಬಹುದು. ಅಥವಾ ಸ್ವಲ್ಪಕಾಲವಿದ್ದು ವಿವೇಕ ಉಂಟಾದ ಒಡನೆಯೇ ನಿವರ್ತಿಸಿಹೋಗಬಹುದು. ಆದುದರಿಂದ ಈತನು ದೇಹಾವಸಾನದಲ್ಲಿ ಮೋಕ್ಷವನ್ನು ಪ್ರಾರ್ಥಿಸಿದ್ದಲ್ಲಿ, ಅಷ್ಟರೊಳಗೇ ಇವೆಲ್ಲಾ ಕಳೆದುಹೋಗಿ ಪ್ರಪನ್ನನ ಪ್ರಾರ್ಥನೆಗೆ ಅನುಸಾರವಾಗಿ ನಿರ್ಯಾಣವುಂಟಾಗಲು ಅಭ್ಯಂತರವಿಲ್ಲವೆಂದು ಹೇಳಿರುತ್ತಾರೆ. ಈ ಪ್ರಪನ್ನನು ಪ್ರಪತ್ತಿ ಕಾಲದಲ್ಲಿ ಪ್ರಾರ್ಥಿಸಿದ ಕಾಲಕ್ಕೆ ಮೇಲೆ ವಿಳಂಬವಿಲ್ಲವೆಂಬುದು ಮುಖ್ಯಾಭಿಪ್ರಾಯವು. ಸತ್ಯವ್ರತನಲ್ಲಿ ಮಾಡಿದ ಶರಣಾಗತಿ ಸಙ್ಕಲ್ಪಾನುಗುಣ ಆ ಸತ್ಯಸಙ್ಕಲ್ಪನು ನಡಿಸಿಕೊಡದೇ ಇರನು. ಈ ಅಭಿಪ್ರಾಯಗಳು ಹಿಂದೆಯೇ ಅಪರಾಧ ಪರಿಹಾರಾಧಿಕಾರದಲ್ಲಿ ಹೇಳಿದುದನ್ನು ಜ್ಞಾಪಕ ಕೊಟ್ಟಿರುತ್ತಾರೆ.

ನಿರ್ಯಾಣಕಾಲದ ವಿಳಂಬಕ್ಕೆ ಕಾರಣಗಳು.

ಹಾಗಾದರೆ ಈ ಸಂದರ್ಭದಲ್ಲೂ ವಿಳಂಬ ಉಂಟಾಗದಿದ್ದರೆ, "ಅಪಾಯಾ ವಿರತಃ" ಎಂಬ ಲಕ್ಷ್ಮೀತಂತ್ರ ಪ್ರಮಾಣದಲ್ಲಿ ವಿಳಂಬ ಹೇಳಿದೆಯಲ್ಲಾ, ಅದರ ತಾತ್ಪರ್ಯವೇನೆಂದರೆ, ಅದನ್ನು ಮುಂದಿನ ವಾಕ್ಯದಿಂದ ಬೋಧಿಸುತ್ತಾರೆ. ಮೋಕ್ಷಕ್ಕೆ ಕಾಲವನ್ನು ನಿರ್ದೇಶಿಸಿ ಪ್ರಾರ್ಥಿಸಿದವನಿಗೆ, ಅದಕ್ಕೆ ಮೇಲೆ ವಿಳಂಬ ವಿಲ್ಲವೆಂದು ಹಿಂದಿನ ವಾಕ್ಯದಿಂದ ಹೇಳಿದರು. ಈ ಮುಂದಿನ ವಾಕ್ಯದಿಂದ ಹಾಗೆ ಕಾಲವಿಶೇಷವನ್ನು ನಿರ್ದೇಶಿಸದೆ ಪ್ರಪದನ ಮಾಡಿದವರಿಗೆ ವಿಳಂಬ ಉಂಟಾಗುತ್ತದೆಂದೂ ಲಕ್ಷ್ಮೀತಂತ್ರ ಪ್ರಮಾಣವು ಅಂತಹ ಪ್ರಪನ್ನರನ್ನು ಕುರಿತದ್ದೆಂದೂ ಉಪದೇಶಿಸಿರುತ್ತಾರೆ. ಮೋಕ್ಷಮ್ ಪೆರುಗೈಕ್ಕು - ಮೋಕ್ಷವನ್ನು ಹೊಂದುವ

(೧) ಲಕ್ಷ್ಮೀತಂತ್ರ. ೧೭. ೧೦೨.

**ಗತಃ। ತನೂಕೃತ್ಯಾಖಿಲಂ ಪಾಪಂ ಮಾಮಾಪ್ನೋತಿ ನರಶ್ಶನೈಃ।"
ಎನ್ನು ಶೊಲ್ಲುಗಿರದು.**

ದಕ್ಕೆ. **ಕಾಲವಿಶೇಷಂ ಕುರಿಯಾದೆ** - ಇಂತಹ ಕಾಲವೆಂದು ಪ್ರಾರ್ಥಿಸದೆ, **ಪ್ರಪನ್ನರಾನಾರೈಪ್ಪತ್ತಿ**-ಭರನ್ಯಾಸವನ್ನು ಮಾಡಿದವರನ್ನು ಕುರಿತು "**ಅಪಾಯಾ ವಿರತಃ**" ಎನ್ನು ಶೊಲ್ಲುಗಿರದು-ಎಂದು ಹೇಳುತ್ತದೆ. ಆ ಶ್ಲೋಕಾರ್ಥವೇನೆಂದರೆ:—**ಅಪಾಯಾ ವಿರತಃ** ಎಂಬ ಪಾಠವಾದರೆ, **ಮಾಂ ಶರಣಂಗತೋಽಪಿ** - ನನ್ನನ್ನು ಶರಣುಹೊಂದಿದರೂ ಕೂಡ, **ಶಶ್ವತ್** - ಶರಣುಹೊಂದಿದ ನಂತರ ಬಾರಿ ಬಾರಿಗೂ, **ಅಪಾಯ**-ಮಾಡಲ್ಪಟ್ಟ ಅಪರಾಧಗಳಿಂದ, **ಅವಿರತಶ್ಚೇತ್**-ಕೂಡಿದವನಾದರೆ, **ಸ ನರಃ** - ಅಂತಹ ಮನುಷ್ಯನು, **ಅಖಿಲಂ ಪಾಪಂ ತನೂಕೃತ್ಯ**-ಅದಕ್ಕಾಗಿ ಪ್ರಾಯಶ್ಚಿತ್ತ ಮಾಡದಿದ್ದರೆ ಆ ಸರ್ವಪಾಪವನ್ನೂ ಅನುಭವಿಸುವದರಿಂದ ಕ್ಷೀಣವಾಗುವಹಾಗೆ ಮಾಡಿಕೊಂಡು ಎಂದರೆ ನಾಶಮಾಡಿಕೊಂಡು, **ಶನೈಃ**-ಕಾಲವಿಳಂಬದಿಂದ, **ಮಾಮಾಪ್ನೋತಿ** - ನನ್ನನ್ನು ಹೊಂದುವನು. "**ಅಪಾಯಾದ್ವಿರತಃ**" ಎಂಬ ಪಾಠವಾದರೆ, ಅಪಾಯಗಳಿಂದ ಎಂದರೆ ಅಪರಾಧಗಳಿಂದ, **ವಿರತಸ್ಸನ್** - ಬಿಡಲ್ಪಟ್ಟವನಾಗಿ, ಎಂದು ಅರ್ಥ ಹೇಳತಕ್ಕದ್ದು. ಇಲ್ಲಿ ವಿಳಂಬವೆಂಬುದು ಈ ಜನ್ಮದಲ್ಲಿಯೇ, ಅಥವಾ ಇನ್ನೊಂದು ಜನ್ಮವುಂಟಾಗುವ ಹಾಗೂ ವಿಳಂಬವಾಗಬಹುದೋ ಎಂಬಂಶವು ಹೇಳಲ್ಪಡಲಿಲ್ಲವು. ಸಾರಾಸ್ವಾದಿನಿ ವ್ಯಾಖ್ಯಾತೃವು ಮುಂದಿನ ವಾಕ್ಯದ ವ್ಯಾಖ್ಯಾನದಲ್ಲಿ ಪ್ರಯೋಜನಾಂತರ ರುಚಿಯು ನಶಿಸಿಹೋಗದೆ ಇದ್ದ ಪಕ್ಷದಲ್ಲಿ, ಕಾಲನಿಷ್ಕರ್ಷೆಯಿಲ್ಲದೆ ಸುಮ್ಮನೆ ಪ್ರಪದನ ಮಾಡಿದವನಿಗೆ ಜನ್ಮಾಂತರ ವಿಳಂಬವೂ ಉಂಟಾಗಬಹುದೆಂದು ಅಪ್ಪಣೆ ಕೊಡಿಸಿರುತ್ತಾರೆ. ಹಿಂದಿನ ವಾಕ್ಯದಲ್ಲಿ ಪ್ರಪನ್ನನಿಗೆ ಅಹಂಕಾರ ಮಮಕಾರಗಳು ಪ್ರಾಪ್ತವಾಗುವದೇ ಇಲ್ಲವೆಂದೂ, ಒಂದುವೇಳೆ ಪ್ರಾಪ್ತವಾದರೂ, ವಿವೇಕಾವಧಿಯಾಗಲಿ, ಕ್ಷಾಪಣಾವಧಿಯಾಗಲಿ, ಶಿಕ್ಷಾವಧಿಯಾಗಲಿ ಇರುವದಾಗಿ, ಆತನು ದೇಹಾವಸಾನದಲ್ಲೇ ಮೋಕ್ಷವನ್ನು ಅಪೇಕ್ಷಿಸಿದ್ದರೆ ವಿಳಂಬಕ್ಕೆ ಕಾರಣವಿಲ್ಲವೆಂದು ಹೇಳಿದರು. ಆದರೆ ಲಕ್ಷ್ಮೀತಂತ್ರವಾಕ್ಯವು ವಿಳಂಬ ಉಂಟೆಂದು ಹೇಳುತ್ತದೆಯಲ್ಲಾ ಎಂದರೆ ಮೇಲೆ ಹೇಳಿದ ಪ್ರಕಾರ ಕಾಲವನ್ನು ಕುರಿತು ಭರನ್ಯಾಸಮಾಡದೇ ಸುಮ್ಮನೆ ಭರನ್ಯಾಸ ಮಾಡಿದ್ದರೆ, ಆಗ ವಿಳಂಬ ಉಂಟಾಗಬಹುದೆಂದು ಉಪದೇಶಿಸಿದರು. ಹೀಗೆ ಅಹಂಕಾರ ಮಮಕಾರಗಳ ವಿಷಯದಲ್ಲಿ ಯಾವ ಸಂದರ್ಭದಲ್ಲಿ ಅವಿಳಂಬವೂ, ಯಾವ ಸಂದರ್ಭದಲ್ಲಿ ವಿಳಂಬವೆಂಬುವದನ್ನು ಹೇಳಿದರು.

ಪ್ರಯೋಜನಾನ್ತರರುಚ್ಯಾಃ ವಿಳಂಬಾವಿಳಂಬ ಹೇತುತ್ವಂ.

ಮುಮುಕ್ಷುವಾಯಿಳಿನ್ದವನಾಗ್ಗೈಯಾಲೆ ಪ್ರಯೋಜನಾನ್ತರ ರುಚಿ ನಿಲ್ಲೈನಿರ್ಕ ಉಣ್ಡಾಗಾದು. ಉಭಯಭಾವನರ್ಕ್ಕುಪ್ಪೋಲೆ ಮೋಕ್ಷರುಚಿಯೋಡೇ ಕೂಡ ಪ್ರಯೋಜನಾಂತರ ರುಚಿಯುಮ್ ಕಲನ್ದುವನ್ದಾಲ್, ಇವನುಕ್ಕು ಹಿತಪರನಾನ ಈಶ್ವರನ್ (೧) "ಯಾಚಿತೋಽಪಿ ಸದಾಭಕ್ತೈ

ಪ್ರಯೋಜನಾನ್ತರ ರುಚಿಗೆ ವಿಳಂಬಾವಿಳಂಬಗಳು ಯಾವ ಸಂದರ್ಭದಲ್ಲಿ ?

ಮುಂದೆ ಎರಡನೆಯ ವಿಧ ದೋಷವಾದ ಪ್ರಯೋಜನಾಂತರ ರುಚಿ ಎಂದರೆ ಐಶ್ವರ್ಯಾದಿ ಕಾಮನೆಗಳು ಪ್ರಾಪ್ತವಾದರೆ ವಿಳಂಬಾವಿಳಂಬಗಳುಂಟೋ ಎಂಬ ವಿಷಯವನ್ನು "**ಮುಮುಕ್ಷುವಾಯ್**" ಎಂದಾರಂಭಿಸಿ ಚರ್ಚಿಸುತ್ತಾರೆ. **ಮುಮುಕ್ಷುವಾಯಿಳಿನ್ದವನಾಗ್ಗೈಯಾಲೆ** - ಮೋಕ್ಷಾರ್ಥಿಯಾಗಿ ಪ್ರವರ್ತಿಸಿದವನಾದುದರಿಂದ ಎಂದರೆ ಭರನ್ಯಾಸ ಮಾಡಿರುವದರಿಂದ, **ಪ್ರಯೋಜನಾನ್ತರ ರುಚಿ** - ಮೋಕ್ಷವಲ್ಲದ ಇತರ ಪುರುಷಾರ್ಥಗಳಲ್ಲಿ ಅಭಿರುಚಿಯು, ಆಸೆಯು, **ನಿಲ್ಲೈನಿರ್ಕ ಉಣ್ಡಾಗಾದು** - ಸ್ಥಿರವಾಗಿ ಈ ಪ್ರಪನ್ನಾಧಿಕಾರಿಯಲ್ಲಿ ನಿಲ್ಲಲಾರದು. ಏನೋ ಒಂದು ಸಮಯದಲ್ಲಿ ಉಂಟಾಗಬಹುದು. ಆದರೆ ಆ ಉಪಭೋಗವು ಅಲ್ಪಾಸ್ಥಿರವಾದುದರಿಂದಲೂ ದುಃಖೋದರ್ಕತ್ವ, ದುಃಖಮಿಶ್ರತ್ವಾದಿ ದೋಷಯುಕ್ತವಾದುದರಿಂದಲೂ, ಮೋಕ್ಷವು ಸ್ಥಿರವಾಗಿ ನಿರತಿಶಯ ಸುಖ ರೂಪವಾದುದರಿಂದಲೂ, ಈ ಪ್ರಯೋಜನಾಂತರದಲ್ಲಿ ಮಮತೆಯು ಶೀಘ್ರವಲ್ಲೇ ತೊಲಗುತ್ತದೆಂಬ ಭಾವವು ಆದುದರಿಂದ ಇಂತಹ ಸಂದರ್ಭದಲ್ಲೂ ವಿಳಂಬಕ್ಕೆ ಕಾರಣವಿಲ್ಲವೆಂಬುದು ಮುಖ್ಯ ತಾತ್ಪರ್ಯವು. ಆಗಲಿ ಮೋಕ್ಷದಲ್ಲೂ ರುಚಿಯುಂಟು, ಇತರ ಪ್ರಯೋಜನಗಳಾದ ಧರ್ಮಾರ್ಥಕಾಮುಗಳಲ್ಲೂ ಅಭಿರುಚಿಯುಂಟು, ಅಂಥಾವರಿಗೆ ಹೇಗೆ? ವಿಳಂಬ ಉಂಟೇ ಇಲ್ಲವೇ ? ಎಂದರೆ, ಹೇಳುತ್ತಾರೆ. **ಉಭಯ ಭಾವನರ್ಕ್ಕುಪ್ಪೋಲೆ** - ಐಹಿಕ ಕರ್ಮಗಳಲ್ಲೂ ಬ್ರಹ್ಮಪ್ರಾಪ್ತಿಯಲ್ಲೂ ರುಚಿಯುಳ್ಳ ಬ್ರಹ್ಮರುದ್ರಾದಿಗಳ ಹಾಗೆ, **ಮೋಕ್ಷರುಚಿಯೋಡೇ ಕೂಡ** - ಮೋಕ್ಷದಲ್ಲಿ ಅಭಿಲಾಷೆಯೊಂದಿಗೆ, **ಪ್ರಯೋಜನಾಂತರ ರುಚಿಯುಮ್** - ಬೇರೆ ಪ್ರಯೋಜನಗಳಾದ ಧರ್ಮಾರ್ಥಕಾಮುಗಳಲ್ಲೂ ಅಭಿಲಾಷೆಯು, **ಕಲನ್ದು ವನ್ದಾಲ್** - ಸೇರಿಬಂದರೆ,

(೧) ವಿಷ್ಣುಧರ್ಮ.

ನ್ನರ್ಹಿತಂ ಕಾರಯೇದ್ಧರಿಃ" । (೧) ಯಸ್ಯಾನುಗ್ರಹಮಿಚ್ಛಾಮಿ ಧನಂತಸ್ಯ ಹರಾಮ್ಯಹಂ ಇತ್ಯಾದಿಗಳಿಲುಮ್, ಕುಂಡಧಾರೋಪಾಖ್ಯಾನಾದಿಗಳಿಲುಮ್, ಶೊಲ್ಲುಗಿರಪಡಿಯೇ ಶಿಲಪ್ರಯೋಜನಾಂತರಙ್ಗಳೈಕ್ಕೊಡಾದೆ ಕಣ್ಣಳಿತ್ತುಮ್, ಶಿಲವತ್ತಿಲೆ ಅಲ್ಪಾಸ್ಥಿರತ್ವ ದುಃಖಮಿಶ್ರತ್ವಾದಿ ವಿವೇಕತ್ತಾಲೆ ಇವರ್ಗ ತನುಕ್ಕು ಅರುಚಿಯೈ ವಿಳೈಪ್ಪಿತ್ತುಮ್, ಸೌಭರಿ ಕುಚೇಲಾ

ಇವನುಕ್ಕು - ಇಂತಹ ಪ್ರಪನ್ನನಿಗೆ, **ಹಿತಪರನಾನ ಈಶ್ವರ್ಗ** - ಯಾವಾಗ ಶರಣಾಗತಿಯನ್ನು ಮಾಡಿದನೋ ಒಡನೆಯೇ ತನ್ನವನೆಂದು ಭಾವಿಸಿ ಹಿತಮಾಡುವವರಲ್ಲೇ ಆಸಕ್ತಿಯುಳ್ಳ ಸರ್ವೇಶ್ವರನು "**ಯಾಚಿತೋಪಿ ಸದಾಭಕ್ತೈಃ** - ಭಕ್ತರುಗಳಿಂದ ಹಿತಾಹಿತಗಳೆಂಬ ವಿವೇಕವಿಲ್ಲದೆ ಅಹಿತವು ಸದಾ ಯಾಚಿಸಲ್ಪಟ್ಟರೂ, **ಹರಿಃ** - ಪಾಪಹರನಾದ ಸರ್ವೇಶ್ವರನು, **ಅಹಿತಂ** - ಅಹಿತವಾದುದನ್ನು, **ನಕಾರಯೇತ್** - ಮಾಡುವದಿಲ್ಲವು. ಪ್ರಪನ್ನನಾದ ನಂತರ ಆತನು ಭಗವಂತನಿಗೆ ಇಷ್ಟನಾದುದರಿಂದ ಆತನು ಬುದ್ಧಿಯಿಲ್ಲದೆ ಒಂದು ವೇಳೆ ಅಹಿತವಾದುದನ್ನು ಕೇಳಿಕೊಂಡರೂ ಸರ್ವೇಶ್ವರನು ಪರಮಹಿತೈಷಿಯಾಗಿ ಅದನ್ನು ಕೊಡುವದಿಲ್ಲವೆಂಬ ಭಾವವು," ಎಂಬ, ಮತ್ತು "**ಯಸ್ಯ** - ಯಾವನಿಗೆ, **ಅನುಗ್ರಹಮಿಚ್ಛಾಮಿ** - ಅನುಗ್ರಹವನ್ನು ಸಙ್ಕಲ್ಪಿಸಿರುವೆನೋ, **ತಸ್ಯ** - ಅವನ, **ಧನಂ** - ಧನವನ್ನೂ ಅಥವಾ ಪರಮಧನವಾಗಿ ಭಾವಿಸುವ ಆತನ ಪ್ರಿಯವಸ್ತುವನ್ನು, **ಅಹಂ ಹರಾಮಿ** – ನಾನು ಅಪಹರಿಸುವೆನು ಎಂದರೆ ನನ್ನ ಸಙ್ಕಲ್ಪದಿಂದಲೇ ಹೋಗಲಾಡಿಸುವೆನು, ಎಂಬುದು ಸರ್ವೇಶ್ವರನ ವಾಕ್ಯವು. ಅದೇತಕ್ಕೆ ಹಾಗೆ ಹೋಗಲಾಡಿಸುವದೆಂದರೆ, ಅವುಗಳೆಲ್ಲಾ ನಶ್ವರವಾದವು, ಅವುಗಳಲ್ಲಿ ಮಮತೆ ಕೂಡದೆಂದು ವೈರಾಗ್ಯವು ತಲೆದೋರುವದಕ್ಕಾಗಿ ಎಂಬ ಭಾವವು" ಎಂಬ, **ಇತ್ಯಾದಿಗಳಿಲುಮ್** - ಇಂತಹ ಪ್ರಮಾಣಗಳಲ್ಲೂ, ಮತ್ತು ಕುಂಡಧಾರೋಪಾಖ್ಯಾನವೇ ಮೊದಲಾದವುಗಳಲ್ಲೂ, **ಶೊಲ್ಲುಗಿರಪಡಿಯೇ** - ಹೇಳಿರುವ ಮೇರಿಗೆ, **ಶಿಲಪ್ರಯೋಜನಾನ್ತರಙ್ಗಳೈ ಕೊಡಾದೆ** - ಯಾಚಿಸಿದರೂ ಇಂತಹ ಕೆಲವು ಪ್ರಯೋಜನಾಂತರಗಳನ್ನು ಕೊಡದೆ, **ಕಣ್ಣಳಿತ್ತುಮ್**-ಉಪೇಕ್ಷಿಸಿಯೂ, ಮತ್ತು **ಶಿಲವತ್ತಿಲೆ**-ಇನ್ನು ಕೆಲವು ಪ್ರಯೋಜನಾಂತರಗಳಲ್ಲಿ, **ಅಲ್ಪಾಸ್ಥಿರತ್ವ**-ತುಚ್ಛವಾಗಿರುವದೇನು, ಅಸ್ಥಿರವಾಗಿರುವದೇನು, **ಆದಿ** - ಇವೇ ಮೊದಲಾದವುಗಳಿಂದುಂಟಾಗುವ, **ವಿವೇಕತ್ತಾಲೆ** - ವಿವೇಕದಿಂದ, **ಇವರ್ಗ ತನಕ್ಕು** - ಈ

---

(೧) ಭಾಗವತ.

ದಿಗಳಕ್ಕುವ್ವೋಲೆ ಶಿಲಭೋಗಙ್ಗಳೈ ಕೊಡುತ್ತು ತಾನೇ ಯಲವುರನ್ನು ವಿಡಪ್ಪಣ್ಣಿಯುಮ್ ವಿಡುಗೈಯಾಲೇ ಮೋಕ್ಷಕಾಲಮ್ ಕುರಿತ್ತು ಪ್ರಪತ್ತಿ ಪಣ್ಣಿನವನುಕ್ಕು ಅಕ್ಕಾಲತ್ತುಕ್ಕುಳ್ಳೇ ಪ್ರಯೋಜನಾನ್ತರ ವೈಮುಖ್ಯಂ ಪಿರನ್ದು ವಿಡಮ್.

ಪ್ರಪನ್ನನಿಗೆ, ಅರುಚಿಯೈ ವಿಳೈವಿತ್ತುಮ್ - ಆ ಪ್ರಯೋಜನಾಂತರಗಳಲ್ಲಿ ಜಿಹಾಸೆಯನ್ನುಂಟುಮಾಡಿ, ಅಥವಾ ವೃದ್ಧಿಪಡಿಸಿಯೂ, ಸೌಭರಿ ಮತ್ತು ಕುಚೇಲರೇ ಮೊದಲಾದವರ ಹಾಗೆ, **ಶಿಲಭೋಗಙ್ಗಳೈ ಕೊಡುತ್ತು** - ಸಂಸಾರಸುಖ, ಧನ ಪಸನಾದಿಗಳಾದ ಕೆಲವು ಭೋಗಗಳನ್ನು ಕೊಟ್ಟು ತಾನೇ, **ಅಲವುರನ್ನು ವಿಡಪ್ಪಣ್ಣಿಯುಮ್** - ತಾವೇ ಜುಗುಪ್ಸೆ ಹೊಂದಿ ತಟಸ್ಥರಾಗಿಯೂಗುವ ಹಾಗೆ ಮಾಡಿಯೂ, **ವಿಡುಗೈಯಾಲೆ** - ಬಿಡುವದರಿಂದ, **ಮೋಕ್ಷಕಾಲವನ್ನು ಕುರಿತು ಪ್ರಪತ್ತಿ ಮಾಡಿದವನಿಗೆ, ಅಕ್ಕಾಲತ್ತುಕ್ಕುಳ್ಳೇ** - ತಾನು ಅಪೇಕ್ಷಿಸಿದ ಕಾಲದ ಒಳಗೇನೆ, **ಪ್ರಯೋಜನಾನ್ತರ ವೈಮುಖ್ಯಮ್ ಪಿರನ್ದುವಿಡುಮ್** - ಮೋಕ್ಷೇತರ ಪ್ರಯೋಜನಗಳಲ್ಲಿ ಜಿಹಾಸೆಯು ಹುಟ್ಟಿಬಿಡುತ್ತದೆ. ಪ್ರಥಮತಃ ಪ್ರಪನ್ನಾಧಿಕಾರಿಗೆ ಪ್ರಯೋಜನಾಂತರದಲ್ಲಿ ಅಭಿರುಚಿಯುಂಟಾಗುವದಿಲ್ಲವೆಂದು ಹೇಳಿದರು. ಆತನು ಪರಮಪದವೇ ಪರಮನಿಶ್ರೇಯಸ್ಸು ಎಂದು ಭಾವಿಸಿರುವವರಿಂದ ಅಂತಹ ಆಶೆಯು ಆತನಲ್ಲಿ ನೆಲಸಲು ಸಾಧ್ಯವಿಲ್ಲವೆಂಬ ಭಾವವು. ಆದರೆ ಬ್ರಹ್ಮರುದ್ರೇಂದ್ರಾದಿಗಳಿದ್ದಾರೆ; ಅವರು ಪ್ರಪನ್ನರೂ ಹೌದು, ಐಹಿಕ ವ್ಯಾಪಾರಗಳಾದ ಸೃಷ್ಟಿಲಯಾದಿಗಳೇನು, ಇನ್ನೂ ರಾಜಸ ತಾಮಸರೂಪ ಕಾರ್ಯಗಳೇನು ಹೀಗೆ ಮೋಕ್ಷರುಚಿಯೂ ಪ್ರಯೋಜನಾಂತರರುಚಿಯೂ ಎರಡೂ ಅವರಿಗೆ ಉಂಟು. ಅವರಿಗೆ ಇರುವ ಹಾಗೆ ಇತರ ಪ್ರಪನ್ನರಿಗೂ ಇರಬಹುದಲ್ಲಾ ಅಂತಹ ಸಂದರ್ಭದಲ್ಲಿ ಹೇಗೆ ಎಂದು ಪ್ರಶ್ನಿಸಿದರೆ ಉತ್ತರವನ್ನು ಹೇಳುತ್ತಾರೆ:—

(ಅ) ಕಾಲವನ್ನು ಕುರಿತು ಶರಣಾಗತಿ ಮಾಡಿದ್ದರೆ, ಅಂಥಾವನ ವಿಷಯದಲ್ಲಿ ಹಿತವನ್ನೇ ಮಾಡಬೇಕೆಂಬ ಕೋರಿಕೆಯುಳ್ಳ ಸರ್ವೇಶ್ವರನು,

೧. ಅಹಿತವಾದ ಆತನ ಕೋರಿಕೆಯನ್ನು ಕೊಡದೆ ಕಾಪಾಡುವನು.

ಅಥವಾ,

೨. ಪ್ರಯೋಜನಾಂತರದಲ್ಲಿ ಜಿಹಾಸೆ ಹುಟ್ಟುವದಕ್ಕಾಗಿ ಆತನಿಗೆ ತುಂಬಾ ಮಮತೆಯುಳ್ಳ ದ್ರವ್ಯಾದಿಗಳನ್ನು ಅಪಹರಿಸಿಬಿಡುವನು.

ಇದಕ್ಕೆ ದೃಷ್ಟಾಂತವು ಕಂಡಾಧಾರೋಪಾಖ್ಯಾನವೆಂದು ಹೇಳಿದರು. ಅಥವಾ

೩. ಈ ಪ್ರಯೋಜನಾಂತರಗಳು ಅಲ್ಪಾಸ್ಥಿರವಾದವು, ದುಃಖಮಿಶ್ರವಾದವು ಎಂಬ ವಿವೇಕ ಹುಟ್ಟಿಸುವನು. ಅಥವಾ

೪. ಕೆಲವು ದಿನ ಅವರಿಗೆ ಉಪಭೋಗಗಳನ್ನುಂಟುಮಾಡಿ, ಅನಂತರ ಅವುಗಳಲ್ಲಿ ಜಿಹಾಸೆಯನ್ನುಂಟುಮಾಡುವನು. ಇದಕ್ಕೆ ದೃಷ್ಟಾಂತಗಳು, ಸೌಭರಿ ಕುಚೇಲರು.

ಹೀಗೆ ಕಾಲವನ್ನುದ್ದೇಶಿಸಿ ಭರನ್ಯಾಸ ಮಾಡಿದವನಿಗೆ ಪ್ರಯೋಜನಾಂತರದಲ್ಲಿ ಆಶೆಯನ್ನು ಬಿಡಿಸಿ, ವಿಳಂಬವಿಲ್ಲದೆ ಆತನು ಕೋರಿದ ಕಾಲದಲ್ಲೇ ನಿರ್ಯಾಣವನ್ನುಂಟುಮಾಡಿ, ಮೋಕ್ಷವನ್ನು ಕೊಡುವನು ಎಂಬ ತಾತ್ಪರ್ಯವು.

(ಆ) ಹಾಗೆ ಕಾಲವನ್ನು ಕುರಿತು ಶರಣಾಗತಿ ಮಾಡದಿದ್ದರೆ, ಅಂಥಾವನಿಗೆ ವೈರಾಗ್ಯ ಹುಟ್ಟುವ ತನಕವೂ ಕಾಲವಿಳಂಬ ಉಂಟೆಂದು ಮುಂದಿನ ವಾಕ್ಯದಿಂದ ಸಪ್ರಮಾಣವಾಗಿ ಉಪದೇಶಿಸುತ್ತಾರೆ.

ನಾಹಿತಂ ಕಾರಯೇದ್ಧರಿಃ - ಸರ್ವೇಶ್ವರನು ತನ್ನ ನಿರ್ಹೇತುಕ ಕೃಪೆಯಿಂದ ನಮಗೆ ಕರಣಕಳೇಬರ ಯೋಗವನ್ನು ಕೊಟ್ಟು, ಸಚ್ಛಾಸ್ತ್ರವನ್ನು ದಯಪಾಲಿಸಿ, ಅವುಗಳನ್ನುಪದೇಶಿಸುವ ಸದ್ಗುರುಗಳು ಈ ಪೃಥಿವಿಯಲ್ಲವತರಿಸುವ ಹಾಗೆ ಮಾಡಿ, ಚೇತನರು ತನ್ನನ್ನು ಶರಣುಹೊಂದಿ ತನ್ನನ್ನು ಬಂದು ಸೇರಿಯಾರೇ ಎಂದು ಅವಸರ ಪ್ರತೀಕ್ಷೆಯುಳ್ಳಿರುವನು. ಇಂತಹ ಕೃಪಾಸಾಗರನು ಎಂದಿಗಾದರೂ ಅಹಿತವನ್ನು ಮಾಡಿಯಾನೇ ? ಎಂದಿಗೂ ಇಲ್ಲವೆಂಬ ಭಾವವು. ಆದರೆ ಅನೇಕ ಕೆಟ್ಟ ಜಂತುಗಳಾದ ವ್ಯಾಘ್ರ ಹಾವು ಮುಂತಾದವುಗಳನ್ನು ಸೃಷ್ಟಿಸಿರುವದಿಲ್ಲವೇ ? ಅನೇಕ ಕೆಟ್ಟವರು ಹುಟ್ಟಿ ಈ ಲೋಕದ ಜನರು ಕೆಡುವಹಾಗೆ ಮಾಡುವದಿಲ್ಲವೇ ? ಅನೇಕ ಕೆಟ್ಟಶಾಸ್ತ್ರಗಳೂ, ರಾಜಸ ತಾಮಸಪುರಾಣಗಳೂ ನಿರ್ಮಿತವಾಗಿಲ್ಲವೇ? ಇವುಗಳನ್ನುಪದೇಶಿಸಿ ಬುದ್ಧಿ ಕೆಡಿಸುತ್ತಾ ತಾವು ತತ್ತ್ವದರ್ಶಿಗಳೆಂದು ಹೇಳಿಕೊಳ್ಳುವ ಹಾಗೆ ಮಾಡಿಲ್ಲವೇ ? ಇವೆಲ್ಲಾ ಅಹಿತ ಕಾರ್ಯಗಳಲ್ಲವೇ ? ಎಂಬಾಕ್ಷೇಪ ಉಂಟಾಗಬಹುದು. ಇವೆಲ್ಲಾ ಕರ್ಮಾನುಗುಣ ಶಾಸ್ತಾವಾಗಿರುವ ಸ್ವಾಮಿಗೆ ಅವರವರ ದುಷ್ಕರ್ಮಾನುಗುಣ ದುಃಖಪ್ರಾಪ್ತಿಗೋಸ್ಕರ ಸಾಧನಗಳು ಅಪರಾಧಾನುಗುಣವಾಗಿ ಶಿಕ್ಷಿಸುವ ನ್ಯಾಯಾಧಿಪತಿಗೆ ಜೈಲು ಮುಂತಾದವುಗಳು ಹೇಗೆ ಸಾಧನಗಳೋ ಹಾಗೆಯೇ ಸರ್ವೇಶ್ವರನೂ ಕೆಲವು ಸಾಧನಗಳನ್ನು ಅಪರಾಧಿಗಳ ಶಿಕ್ಷೆಗಾಗಿ ಕಲ್ಪಿಸಿಕೊಂಡಿರುತ್ತಾನೆ. ನ್ಯಾಯಾಧಿಪತಿಯು ಅಪರಾಧಿಗಳನ್ನು ಶಿಕ್ಷಿಸುವದರಿಂದ ಹೇಗೆ

ನಿಷ್ಕರುಣಿಯಲ್ಲವೋ, ಅಹಿತ ಮಾಡುವನಲ್ಲವೋ, ಹಾಗೆಯೇ ಸರ್ವೇಶ್ವರನೂ ಅಲ್ಲವೆಂಬ ಭಾವವು. ಮುಂದಕ್ಕೆ ಆತನು ಸುಕೃತ ಮಾಡಲು ಪ್ರಾರಂಭಿಸಿದರೆ, ಆತನಿಗೆ ಹಿತಮಾಡಲುಪಕ್ರಮಿಸಿ, ಆತನು ತನ್ನನ್ನಾಶ್ರಯಿಸುವ ಹಾಗೆ ಮಾಡಿ ಕಾಪಾಡುವನು ಎಂಬ ಭಾವವು. ಆದುದರಿಂದ ಆತನು ಎಂದಿಗೂ **ನಾಹಿತಂ ಕಾರಯೇದ್ಧರಿಃ** ಎಂದು ಹೇಳಲ್ಪಟ್ಟಿರುತ್ತದೆ.

ಕುಂಡಧಾರೋಪಾಖ್ಯಾನ ಸಙ್ಗ್ರಹವು:—ಒಬ್ಬ ಬಡ ಬ್ರಾಹ್ಮಣನು ಯಜ್ಞಗಳನ್ನು ಮಾಡಬೇಕೆಂಬ ಅಪೇಕ್ಷೆಯುಳ್ಳವನಾಗಿ ದೇವತೆಗಳನ್ನು ಕುರಿತು ತಪಸ್ಸನ್ನು ಮಾಡಿದನು ಅದು ಕಾರ್ಯಕಾರಿಯಾಗದಿರಲು, ಆಮೇಲೆ ಒಂದು ದಿನ ಕುಂಡಧಾರರೆಂಬುವರನ್ನು ಕಂಡು, ಇವನೀಗ ನನ್ನ ಮನೋರಥವನ್ನು ಪೂರ್ಣ ಮಾಡುವನು ಎಂದು ಭಾವಿಸಿ, ಆ ಕುಂಡಧಾರರನ್ನು ಅರ್ಘ್ಯ ಪಾದ್ಯ ಗಂಧ ಧೂಪ ದೀಪಾದಿಗಳಿಂದ ಅರ್ಚಿಸಿ ತನ್ನ ಪ್ರಾರ್ಥನೆಯನ್ನು ಅರಿಕೆಮಾಡಿಕೊಂಡನು. ಆಗ **“ ಆಶಾಯಾ ಸ್ತನಯೋಽಧರ್ಮಃ ಕ್ರೋಧೋಽಸೂಯಾ ಸುತ ಸ್ಸ್ಮೃತಃ ”** ಎಂದು ಈ ಬ್ರಾಹ್ಮಣನಿಗೆ ಉಪದೇಶಿಸಿ, ಅನಂತರ ಒಂದು ದಿನ ಕುಂಡಧಾರರು ತಮ್ಮ ಮಾಹಾತ್ಮ್ಯೆಯಿಂದ ಈತನಿಗೆ ಸ್ವಪ್ನ ಉಂಟಾಗುವ ಹಾಗೆ ಮಾಡಿದರು. ಆ ಸ್ವಪ್ನದಲ್ಲಿ ಅನೇಕರು ಕುಶಾಸನದಲ್ಲಿರುವವರಾಗಿ ತಪಸ್ಸು ಮಾಡುತ್ತಾ, ಮಾಣಿಭದ್ರನೆಂಬ ದೇವತೆಯ ಮೂಲಕ ಅನೇಕ ವರಗಳನ್ನು ಪಡೆಯುತ್ತಿರುವ ಸಮಯದಲ್ಲಿ, ಈ ಕುಂಡಧಾರರೂ ಸಹ ಹಾಗೆಯೇ ಮಾಣಿಭದ್ರ ದೇವತೆಗೆ ನಮಿಸಿ, ತನ್ನ ಶಿಷ್ಯನಾದ ಬ್ರಾಹ್ಮಣನಿಗೆ ಧನವನ್ನೀಯಬೇಕೆಂದು ಪ್ರಾರ್ಥಿಸಿದುದಲ್ಲದೆ, ಆತನಿಗೆ ಈ ಧನಾಶೆಯು ತೊಲಗಿ ಧರ್ಮದಲ್ಲಿ ಮನಸ್ಸುಂಟಾಗುವ ಹಾಗೂ ಆಶೀರ್ವದಿಸಬೇಕೆಂದು ಕೇಳಿಕೊಳ್ಳಲು, ಹಾಗೇ ಆಗಲೆಂದು ದೇವತೆಯು ವರವನ್ನು ಕೊಡಲು, ಈ ಸ್ವಪ್ನದಿಂದ ಬ್ರಾಹ್ಮಣನಿಗೆ ಜ್ಞಾನೋದಯವಾಗಿ ಧನಾಶೆಯನ್ನು ತೊರೆದು ಧರ್ಮದಿಂದ ಜೀವಿಸುವೆನೆಂದು ವನಕ್ಕೆ ತಪಸ್ಸಿಗಾಗಿ ಹೋದನು. ಕೆಲವು ಕಾಲಾನಂತರ ಕುಂಡಧಾರರು ಆ ಬ್ರಾಹ್ಮಣೋತ್ತಮನಿಗೆ ಕಾಣಿಸಿಕೊಂಡು, ಓ ಬ್ರಾಹ್ಮಣೋತ್ತಮನೇ, ನಿನಗೆ ದಿವ್ಯ ಚಕ್ಷುಸ್ಸನ್ನಿತ್ತಿರುವೆನು, ನೀನು ದ್ರವ್ಯವನ್ನಪೇಕ್ಷಿಸಿದೆಯಲ್ಲವೇ? ಪುಷ್ಕಳ ದ್ರವ್ಯವಿದ್ದ ರಾಜರುಗಳ ಗತಿಯನ್ನು ನೋಡು. ಮಹಾಪಾಪಿಗಳಾಗಿ ನರಕಭಾಕ್ಕುಗಳಾಗಿದ್ದಾರೆ. ಆದುದರಿಂದ ಕಾಮಾರ್ಥಿಗಳಿಗೆಲ್ಲಾ ಪರಮ ನಿಶ್ರೇಯಸ್ಸಿನ ದ್ವಾರವು ಮುಚ್ಚಿರುವುದನ್ನು ನೀನೇ ನೋಡು. ಈ ಕಾಮನೆಗೆ ಅನುಬಂಧಿಗಳು ಕ್ರೋಧ, ಲೋಭ, ಮದ, ಮಾತ್ಸರ್ಯ, ಭಯಾದಿಗಳು ಎಂದು ಹೇಳಿ, ನಿನಗೆ ಬೇಕಾದರೆ ಧನಸಮೃದ್ಧಿಯನ್ನೀಯುವ ಶಕ್ತಿ ನನಗುಂಟು. ಅಪೇಕ್ಷೆಯಿದ್ದರೆ ಕೊಡುವೆನು, ಎನಲು, ಅದಕ್ಕೆ ಬ್ರಾಹ್ಮಣೋತ್ತಮನು ಅವರ

ಪಾದಕ್ಕೆರಗಿ, "**ಧರ್ಮೇತು ಪರಮಂ ಸುಖಂ**" ಎಂಬ ಪರಮತತ್ವವನ್ನು ಬೋಧಿಸಿ ಅನುಗ್ರಹಿಸಿ ಕಾಪಾಡಿದಿರಿ, ನನಗೆ ಈಗ ಧನವು ಬೇಕಾಗಿಲ್ಲವೆಂದು ವಿಪ್ರವರನು ಅರಿಕೆ ಮಾಡಿಕೊಳ್ಳಲು, ಬ್ರಾಹ್ಮಣನನ್ನು ಹರಿಸಿ ಕುಂಡಧಾರರು ಅಂತರ್ಧಾನವನ್ನು ಹೊಂದಿದರು. (ಭಾರತ, ಶಾಂತಿಪರ್ವ, ೨೭೨ನೆಯ ಅಧ್ಯಾಯ)

ಸೌಭರಿ ವೃತ್ತಾಂತವು, ವಿಷ್ಣು ಪುರಾಣದ ಚತುರ್ಥಾಂಶ ದ್ವಿತೀಯಾಧ್ಯಾಯದಲ್ಲಿ ಹೇಳಲ್ಪಟ್ಟಿರುತ್ತದೆ ಈ ಋಷಿಯು ನೀರಿನಲ್ಲಿದ್ದು ತಪಸ್ಸು ಮಾಡುತ್ತಾ ಹೀಗೆ ಹನ್ನೆರಡು ವರ್ಷ ವಾಸವಾಗಿದ್ದನು. ಹೀಗಿರುವಾಗ ಪ್ರತಿದಿನವೂ ಆ ನೀರಿನಲ್ಲಿದ್ದ ಒಂದು ದೊಡ್ಡ ಮೀನು ದಾರ ಪುತ್ರ ಪೌತ್ರಾದಿಗಳೊಂದಿಗೆ ವಿನೋದವಾಗಿ ರಮಿಸುವದನ್ನು ನೋಡುತ್ತಿದ್ದುದರಿಂದ ಸಂಗದೋಷದಿಂದ ತಾನೂ ಹೀಗೆಯೇ ಕನ್ಯಾರತ್ನವನ್ನು ಮದುವೆ ಮಾಡಿಕೊಂಡು ಪುತ್ರ ಪೌತ್ರಾದಿಗಳೊಂದಿಗೆ ಸೇರಿ ಸಂಸಾರಭೋಗವನ್ನನುಭವಿಸಬೇಕೆಂಬ ಕಾಮನೆಯುಂಟಾಯಿತು. ಆಗ ಚಕ್ರವರ್ತಿಯಾಗಿದ್ದ ಮಾಂಧಾತರಾಯನಲ್ಲಿ ಹೋಗಿ ನಿನಗಿರುವ ಐವತ್ತು ಕನ್ಯಾರತ್ನಗಳಲ್ಲಿ ಒಬ್ಬಳನ್ನು ನನಗೆ ಕೊಡು ಎಂದು ಪ್ರಾರ್ಥಿಸಿದನು. ರಾಜನು ಈ ವೃದ್ಧ ಋಷಿಗೆ ತನ್ನ ಕನ್ಯೆಯನ್ನು ಕೊಡಲು ಇಷ್ಟವಿಲ್ಲದೆ, ತನ್ನ ಕನ್ಯೆಗಳಲ್ಲಿ ಯಾರಾದರೂ ಒಪ್ಪಿದರೆ ವಿವಾಹ ಮಾಡಿಕೊಡುವೆನೆಂದು ಹೇಳಿದನು. ಅದಕ್ಕಾ ಮಹರ್ಷಿಯು ಸಮ್ಮತಿಸಿ, ಬಹು ಲಾವಣ್ಯಯುಕ್ತವಾದ ಶರೀರವನ್ನು ಧರಿಸಿ, ಐವತ್ತು ಕನ್ನಿಕೆಯರೂ ತನ್ನನ್ನು ಮೋಹಿಸುವಹಾಗೆ ಮಾಡಿಕೊಂಡು, ಈ ಐವತ್ತು ಪತ್ನಿಯರಿಗೂ ಸರ್ವವಿಧ ಭೋಗದ್ರವ್ಯಗಳನ್ನು ಕಲ್ಪಿಸಿಕೊಟ್ಟು ಅವರೊಂದಿಗೆ ರಮಿಸಿ, ನೂರೈವತ್ತು ಪುತ್ರರನ್ನೂ ಪೌತ್ರರನ್ನೂ ಪಡೆದು ಸುಖದಿಂದಿದ್ದು ಅನಂತರ ಜಿಹಾಸೆ ಹುಟ್ಟಿ, ತನ್ನ ಅವಿವೇಕವನ್ನು ನಿಂದಿಸಿಕೊಂಡು ಹೇಳುತ್ತಾರೆ:— "**ಪೂರ್ಣೇಷು ಪೂರ್ಣೇಷು ಪುನರ್ನವಾನಾ ಮುತ್ಪತ್ತಯಸ್ಸಂತಿ ಮನೋರಥಾನಾಂ,** ಐಹಿಕ ಮನೋರಥಗಳು ಪೂರ್ಣಪೂರ್ಣವಾದಹಾಗೆಲ್ಲಾ ಪುನಃ ಪುನಃ ಉತ್ಪತ್ತಿಯುಳ್ಳವುಗಳು," ಆದುದರಿಂದ ಅವುಗಳಿಗೆ ಅಂತ್ಯವೇ ಇಲ್ಲವು, "**ನಿಸ್ಸಂಗತಾ ಮುಕ್ತಿಪದಂ,**" ಮುಕ್ತಿಗೆ ನಿಸ್ಸಂಗತ್ವವೇ ಹೇತುವು, "**ಸಂಗಾದಶೇಷಾಃ ಪ್ರಭವಂತಿ ದೋಷಾಃ**" ಸಂಗದಿಂದಲೇ ಎಲ್ಲಾ ದೋಷಗಳು ಎಂದು ತಿಳಿದವರಾಗಿ, **ಆರಾಧಯಿಷ್ಯೇ ತಪಸೈವ ವಿಷ್ಣುಮ್** ತಪಸ್ಸಿನಿಂದ ಶ್ರೀ ಮಹಾವಿಷ್ಣುವನ್ನಾರಾಧಿಸುವೆನೆಂದು, ವನಕ್ಕೆ ಪತ್ನಿಯರೊಂದಿಗೆ ತೆರಳಿ, ಅವರನ್ನು ಅನಂತರ ತ್ಯಜಿಸಿ, ಯತ್ಯಾಶ್ರಮವನ್ನು ಕೈಕೊಂಡು ಅಚ್ಯುತಪದವನ್ನು ಸೇರಿದರು.

ಕುಚೇಲೋಪಾಖ್ಯಾನವು. ಭಾಗವತಾಗ್ರೇಸರರಾಗಿಯೂ ಬ್ರಹ್ಮವಿತ್ತಮರಾಗಿಯೂ ಶ್ರೀಕೃಷ್ಣನಿಗೆ ಪ್ರಿಯಸಖರಾಗಿಯೂ ಕುಚೇಲರೆಂಬುವರೊಬ್ಬರಿದ್ದರು,

ಮಹಾಪತಿವ್ರತೆಯಾದ ಇವರ ಪತ್ನಿಯು ಇವರನ್ನು ಕುರಿತು, ದಾರಿದ್ರ್ಯವು ಪೂರಾ ಬಾಧಿಸುತ್ತಿರುವದರಿಂದ ಸರ್ವ ಪುರುಷಾರ್ಥದಾಯಕನಾದ ಶ್ರೀಕೃಷ್ಣನಲ್ಲಿಗೆ ಹೋಗಿ, ಬೇಡಿದರೆ ಪುಷ್ಕಳದ್ರವ್ಯವು ಸಿಕ್ಕಬಹುದು ಎಂದು ಹೇಳಿದಳು. ಶ್ರಿಯಃ ಪತಿಯನ್ನು ಹೋಗಿ ನೋಡಿ ನಮಿಸಿ ದೇಹಸಾರ್ಥಕ್ಯವನ್ನು ಹೊಂದಿ ಬರುವ ಸುಕೃತವು ಲಭಿಸಿತಲ್ಲಾ ಎಂದು ಕುಚೇಲರು ಪರಮಹರ್ಷಿತರಾಗಿ, ಪತ್ನಿಯು ನೆರೆಮನೆಯಿಂದ ತಂದುಕೊಟ್ಟ ಅವಲಕ್ಕಿಯನ್ನು ಉಪಾಯನವಾಗಿ ತೆಗೆದುಕೊಂಡು ದ್ವಾರಕಿಗೆ ಹೋಗಿ ಶ್ರೀ ಕೃಷ್ಣನ ದಿವ್ಯಮಂಗಳ ವಿಗ್ರಹವನ್ನು ಕಂಡು ಪರವಶರಾಗಿರುವಾಗ, ಶ್ರೀಕೃಷ್ಣನು ಓಡಿಬಂದು ಗಾಢಾಲಿಂಗನವನ್ನು ಮಾಡಿಕೊಂಡು ಆತನನ್ನು ಮಂಚದಲ್ಲಿ ಕೂಡಿಸಿ, ಅರ್ಘ್ಯಪಾದ್ಯಾದಿ ಸಮಸ್ತೋಪಚಾರಗಳನ್ನೂ ಹೊಂದಿ, ಅನಂತರ ಕುಶಲಪ್ರಶ್ನೆಗಳೂ ಒಟ್ಟಿಗೆ ಇಬ್ಬರೂ ಸಾಂದೀಪಿನೀ ಎಂಬ ಗುರುಗಳಲ್ಲಿ ವಾಸಮಾಡಿದಾಗ ನಡೆದ ಬಾಲ್ಯದ ದಿವ್ಯಚೇಷ್ಟಿತಗಳ ಕಥಾಪ್ರಸಂಗವೂ, ಜರಗಿದ ನಂತರ, ಸರ್ವೇಶ್ವರನು ಈ ವಿರಕ್ತಶಿಖಾಮಣಿಯನ್ನು ಕುರಿತು "**ಕಿಮುಪಾಯನಮಾನೀತಂ ಬ್ರಹ್ಮನ್**" ಓ, ಬ್ರಹ್ಮವಿತ್ತಾದ ಪ್ರಿಯಸಖನೆ, ಮಿತ್ರನಿಗಾಗಿ ಉಪಾಯನವೇನನ್ನು ತಂದಿದ್ದೀ ಎಂದು ಪ್ರಶ್ನಿಸಲು, ಎಲ್ಲಾ ಶ್ರೀಕೃಷ್ಣನದೇಯಾಗಿ, ಅಂತಹ ರಾಜಾಧಿರಾಜನಿಗೆ ಕೊಡಲೂ ಕೂಡ ಯೋಗ್ಯವಾದುದಲ್ಲದುದರಿಂದ ಲಜ್ಜೆಯಿಂದ ತಲೆಬಾಗಿ ನಿಂತಿರಲು ಆಗ "**ಅಣ್ವಪ್ಯುಪಾಹೃತಂ ಭಕ್ತೈಃ ಪ್ರೇಮ್ಣಾ ಭೂರ್ಯೇವ ಮೇ ಭವೇತ್ । ಭೂರ್ಯಪ್ಯಭಕ್ತೋಪಹೃತಂ ನಮೇ ತೋಷಾಯ ಕಲ್ಪತೇ ॥**" ಎಂದರೆ ಭಕ್ತರುಗಳು ಎಷ್ಟು ಅಲ್ಪವಾದುದನ್ನು ತಂದುಕೊಟ್ಟರೂ ಅದು ಅವರುಗಳ ಪ್ರೀತ್ಯತಿಶಯದಿಂದ ನನಗೆ ಸಮೃದ್ಧಿಯಾಗುತ್ತದೆ. ಇದಕ್ಕೆ ವಿದುರಾನ್ನವು ನಿದರ್ಶನವು. ಅಭಕ್ತರುಗಳು ಎಷ್ಟು ಸಮೃದ್ಧಿಯಿಂದ ತಂದುಕೊಟ್ಟರೂ ನನಗೆ ತೃಪ್ತಿಯಾಗದು, ಎಂದೂ, ಇದಕ್ಕೆ ನಿದರ್ಶನವು, ದುರ್ಯೋಧನನು ಸರ್ವಸಮೃದ್ಧಿಯಿಂದ ಕೃಷ್ಣಾತಿಥ್ಯಕ್ಕಾಗಿ ಮಾಡಿದ ಏರ್ಪಾಡು, "**ಅಶ್ನಾಮಿ ಪ್ರಯತಾತ್ಮನಃ**" ಎಂದೂ ಹೇಳಿರುವ ಹಾಗೆ, ಶ್ರೀ ಕೃಷ್ಣನು ತಾನೇ ಆತನ ಹರಕು ಬಟ್ಟೆಯ ಗಂಟನ್ನು ಬಿಚ್ಚಿ, ಒಂದು ಹಿಡಿ ಅವಲಕ್ಕಿಯನ್ನು ಪರಮಸಂತೋಷದಿಂದ ಪರಿಗ್ರಹಿಸಿದನು. ಶ್ರೀಕೃಷ್ಣ ರುಕ್ಮಿಣಿಯವರು ಮಾಡಿದ ವಿಧವಿಧವಾದ ಸತ್ಕಾರಗಳನ್ನು ಹೊಂದಿದವನಾಗಿ ಕುಚೇಲನು ಮಾರನೇ ದಿನ ತನ್ನ ಊರಿಗೆ ಹಿಂತಿರುಗಿ ಪ್ರಯಾಣಮಾಡಿದನು. ಶ್ರೀ ಕೃಷ್ಣನು ತನ್ನ ಸರ್ವಜ್ಞತೆಯಿಂದ ಕುಚೇಲಪತ್ನಿಯ ಇಂಗಿತವನ್ನು ತಿಳಿದವನಾದರೂ, ದ್ರವ್ಯವನ್ನೇನೂ ಕೊಡಲಿಲ್ಲವು. ಮಹಾ ವಿರಕ್ತಾಗ್ರೇಸರನು ಕೇಳಲಿಲ್ಲವು. "**ಅಧನೋಯಂ ಧನಂ ಪ್ರಾಪ್ಯ ಮಾದ್ಯನ್ನುಚ್ಚೈರ್ನಮಾಂ ಸ್ಮರೇತ್ । ಇತಿ ಕಾರುಣಿಕೋ**

ನೂನಂ ಧನಂ ಮೇ ಭೂರಿನಾ ದದಾತ್ ॥ ನನ್ನಂತಹ ದರಿದ್ರನು ಧನವನ್ನು ಹೊಂದಿದರೆ ತುಂಬಾ ಗರ್ವಿತನಾಗಿ ತನ್ನನ್ನು ಸ್ಮರಿಸದೆ ಹೋಗುವನೆಂದೆಣಿಸಿ, ಪರಮ ಕಾರುಣಿಕನು ನನಗೆ ಹೆಚ್ಚಾಗಿ ದ್ರವ್ಯವನ್ನು ಕೊಡಲಿಲ್ಲವು" ಎಂದು ಹರ್ಷ ಗೊಂಡವನಾಗಿ, ದರಿದ್ರನಾದ ನಾನೆಲ್ಲಿ, ಸಕಲಲೋಕ ಸಾರ್ವಭೌಮನಾದ ಶ್ರೀಕೃಷ್ಣ ನೆಲ್ಲಿ, ಅಂಥಾವನು ಲಕ್ಷ್ಮಿಗೆ ಆವಾಸಯೋಗ್ಯವಾದ ವಕ್ಷಸ್ಥಳದಲ್ಲಿ ನನ್ನನ್ನು ಬಿಗಿ ದಪ್ಪಿದನೇ, ನನಗಿಂತ ಸುಕೃತಿಯು ಯಾರು ಎಂದು ಪರಮಾನಂದಭರಿತನಾಗಿ, ಸ್ವಸ್ಥಾನವನ್ನು ಸೇರಲು, ಮನೆಯು ದಿವ್ಯಪ್ರಾಸಾದವಾಗಿ, ಭಾರ್ಯೆಯು ಸರ್ವಾಭರಣ ಪೀತಾಂಬರಾದಿಗಳಿಂದ ಭೂಷಿತಳಾಗಿ, ಮನೆಯಲ್ಲಿ ಸರ್ವಸಮೃದ್ಧಿಯುಂಟಾಗಿರುವ ದನ್ನು ನೋಡಿ ವಿಸ್ಮಿತನಾಗಿ, ಇದೆಲ್ಲಾ ಶ್ರೀಕೃಷ್ಣ ಪರಮಾತ್ಮನ ಲೀಲೆಯೆಂದು ಭಾವಿಸಿ, ಈ ಸಮೃದ್ಧಿಗೆ ಮನಗೊಡದೆ ವಿರಕ್ತನಾಗಿಯೇ ಇದ್ದುಕೊಂಡು, ಪರಮಾತ್ಮ ನನ್ನು ಧ್ಯಾನಿಸುತ್ತಾ ದೇಹಾವಸಾನದಲ್ಲಿ ಮೋಕ್ಷವನ್ನು ಹೊಂದಿದನು. ಈ ಇತಿಹಾಸದಲ್ಲಿ ಮುಖ್ಯವಾಗಿ ಗ್ರಹಿಸತಕ್ಕದ್ದು ಸ್ವಾಮಿಯು ತನ್ನ ನಿರ್ಹೇತುಕ ಕೃಪೆಯಿಂದ ನಮಗೆ ಸಮೃದ್ಧಿಯನ್ನು ಕೊಟ್ಟರೂ, ಅದರಿಂದ ಮದಾಂಧರಾಗಿ ಆತನನ್ನು ಸ್ಮರಿಸದೆ ಇರಕೂಡದೆಂದೂ, ಕೃತಜ್ಞತಾ ಭಾವದಿಂದ ಇನ್ನೂ ಆತನನ್ನು ವಿಶೇಷವಾಗಿ ಆರಾಧಿಸಿಕೊಂಡು, **"ವಿಷಯಾನ್ಜಾಯಯಾ ತ್ಯಕ್ಷ್ಯನ್ಬುಭುಜೇ ನಾತಿ ಲಂಪಟಃ"** ವಿಷಯಗಳಲ್ಲಿ ಆಶೆಯನ್ನು ತೊರೆಯುತ್ತಾ ಅವುಗಳಲ್ಲಿ ಅತಿ ಲಂಪಟನಾಗದೆ ತನ್ನ ಹೆಂಡತಿ ಮಕ್ಕಳೊಂದಿಗೆ ಸಂಸಾರದಲ್ಲಿ ಲಿಪ್ತನಾಗದೆ ಅನುಭವಿಸತಕ್ಕದ್ದೆಂಬುವದು. ಈ ಮಹಾಭಾಗವತ ಬ್ರಾಹ್ಮಣನ ಕಾಲು ತೊಳೆಯುವದೇ ಮೊದಲಾದ ಉಪಚಾರಗಳಿಂದ ಶ್ರೀಕೃಷ್ಣನು ನಮಗೆ ಬೋಧಿಸಿರುವ ಮುಖ್ಯೋಪದೇಶವು ಏನೆಂದರೆ :—

ತಸ್ಯೈವ ದೇವದೇವಸ್ಯ ಹರೇರ್ಯಜ್ಞಪತೇಃ ಪ್ರಭೋಃ ।
ಬ್ರಾಹ್ಮಣಾಃ ಪ್ರಭವೋ, ದೈವಂ ನತೇಭ್ಯೋ ವಿದ್ಯತೇ ಪರಂ ॥

ಭಗವಂತನು ತಾನೇ ನಿಸ್ಸಮಾಭ್ಯಧಿಕನಾಗಿದ್ದರೂ, ತಾನೇ ದೇವದೇವನಾಗಿ ಸಮಸ್ತಕ್ಕೂ ಪ್ರಭುವಾಗಿದ್ದರೂ, ತಾನೇ ಸರ್ವ ಕರ್ಮಾರಾಧ್ಯನಾಗಿದ್ದರೂ, ಆತನು ಮಹಾಭಾಗವತರಾದ ಬ್ರಹ್ಮವಿತ್ತುಗಳನ್ನು ತನಗೆ ಪ್ರಭುಗಳನ್ನಾಗಿಯೂ, ಅವರುಗಳಿಗಿಂತ ಪರದೈವವು ಬೇರೆ ಇಲ್ಲವೆಂದು ಭಾವಿಸುವನು ಎಂಬುದು. ಹೀಗಿರುವಲ್ಲಿ ನಾವುಗಳು ಅಂತವರನ್ನು ಪರದೈವವೆಂದು ಭಾವಿಸಬೇಡವೇ ?

ಈ ಅದ್ಭುತವಾದ ಉತ್ತಮಶ್ಲೋಕ ಚಾರಿತ್ರದಿಂದಲೂ, ಸೌಭರಿ ವೃತ್ತಾಂತದಿಂದಲೂ, ಸರ್ವೇಶ್ವರನು ತಾನೇ "ಶಿಲಭೋಗಜ್ಞಳ್ಳಿಕೊಡುತ್ತ ತಾನೇ ಅಲ

ಮುಕ್ತ್ಯೈಯುವನುಕ್ಕ್ಯಮ್ (೧) "ಅಥೋಽಪಾಯ ಪ್ರಸಕ್ತೋಽಪಿ ಭುಕ್ತ್ವಾ ಭೋಗಾನ ನಾಮಯಾರ್ನ್ । ಅಂತೇ ವಿರಕ್ತಿ ಮಾಸಾದ್ಯ ವಿಶತೇ ವೈಷ್ಣವಂಪದಂ", ಎಬ್ಬುರಪಡಿಯೇ ವೈರಾಗ್ಯಾವಧಿ ವಿಳಂಬಮಾಯಿರುಕ್ಕ್ಯುಮ್.

ಮರನ್ದು ವಿಡಪ್ಪೆಣ್ಣುಯುಮ್" ಎಂಬುವದರಿಂದ ಆ ಭೋಗಗಳಲ್ಲಿ ಜಿಹಾಸೆ ಉಂಟುಮಾಡುವನೆಂಬುದು ನಿದರ್ಶಿಸಲ್ಪಟ್ಟಿತು.

ಮುಂದೆ ಕಾಲವನ್ನು ಕುರಿತು ಭರನ್ಯಾಸ ಮಾಡದೆ ಸುಮ್ಮನೆ ಭರನ್ಯಾಸ ಮಾಡಿದವನಿಗೆ ಪ್ರಯೋಜನಾಂತರಾಸಕ್ತಿಯುಂಟಾದರೆ ಹೇಗೆ ಎಂಬುವದನ್ನು ತಿಳಿಸುತ್ತಾರೆ:—ಮುಕ್ತ್ಯೈಯುವನಕ್ಕ್ಯುಮ್ - ಇತರರಾದ, ಕಾಲವನ್ನುದ್ದೇಶಿಸಿ ಶರಣಾಗತಿ ಮಾಡದೇ ಇರುವ, ಪ್ರಪನ್ನನಿಗೂ ಕೂಡ, "ಅಥ - ಅನಂತರ, ಪ್ರಪದನಾನಂತರ, ಉಪಾಯ ಪ್ರಸಕ್ತೋಽಪಿ - ಪ್ರಯೋಜನಾಂತರಕ್ಕಾಗಿ, ಸಾಧನವನ್ನವಲಂಬಿಸಿದರೂ ಕೂಡ, ಎಂದರೆ ಕಾಮ್ಯಕರ್ಮಗಳನ್ನು ಮಾಡಿದರೂ, ಅನಾಮಯಾರ್ನ್ - ನಿರುಪದ್ರವಗಳಾದ ಎಂದರೆ ಅಧರ್ಮಗಳಿಗೆ ಒಳಗಾಗದೆ ನಿರ್ದುಷ್ಟಗಳಾದ, ಭೋಗಾರ್ನ್ - ಐಹಿಕ ಭೋಗಗಳನ್ನು, ಭುಕ್ತ್ವಾ - ಅನುಭವಿಸಿ, ಅಂತೇ - ಕಡೆಗೆ, ವಿರಕ್ತಿಮಾಸಾದ್ಯ-ವಿರಕ್ತಿ ಭಾವವನ್ನು ಹೊಂದಿ, ವೈಷ್ಣವಂ ಪದಂ - ವಾಸುದೇವನ ದಿವ್ಯ ವೈಕುಂಠವನ್ನು, ವಿಶತೇ - ಪ್ರವೇಶಿಸುವನು" ಎಬ್ಬುರಪಡಿಯೇ - ಎಂದು ಹೇಳಿರುವ ಹಾಗೆ, ವೈರಾಗ್ಯಾವಧಿ - ವೈರಾಗ್ಯವು ಹುಟ್ಟುವ ತನಕ, ವಿಳಂಬಮಾಯಿರುಕ್ಕ್ಯುಮ್ - ವಿಳಂಬವಾಗುತ್ತದೆ, ಮೋಕ್ಷಪ್ರಾಪ್ತಿಗೆ ವಿಳಂಬವೆಂಬ ಭಾವವು. ಈ ಕಾಲವನ್ನುದ್ದೇಶಿಸದೆ ಶರಣಾಗತಿ ಮಾಡಿದವನಿಗೆ, ವಿರಕ್ತಿ ಉಂಟಾಗುವವರೆಗೂ ದೇಹಾವಸಾನದ ವಿಳಂಬವೇ, ಅಥವಾ ದೇಹಾವಸಾನದವರೆಗೂ ವಿರಕ್ತಿಯುಂಟಾಗದೆ ಹೋದರೆ, ಮುಂದಿನ ಜನ್ಮದಲ್ಲಾದರೂ ವಿರಕ್ತಿ ಹೊಂದುವವರೆಗೂ ವಿಳಂಬವೇ ಎಂಬುವ ಸಂದೇಹದಲ್ಲಿ, ಹಿಂದಿನ ವಾಕ್ಯದಲ್ಲಿ ಅಕ್ಕಾಲತ್ತಿಲ್ ಪ್ರಯೋಜನಾಂತರ ವೈಮುಖ್ಯಮ್ ಪಿರನ್ದು ವಿಡುಮ್ ಎಂದು ವಿಕಲ್ಪಿಸಿರುವದರಿಂದ, ಈ ಸಂದರ್ಭದಲ್ಲಿ ಹಾಗಲ್ಲವೆಂದು ತೋರಿಬರುವುದರಿಂದ ಜನ್ಮಾಂತರ ವಿಳಂಬವಾದರೂ ಆಗಬಹುದೆಂದು ತೋರಿಬರುತ್ತದೆ. ಸ್ವಾರಸ್ಯಾದಿಸಿ ವ್ಯಾಖ್ಯಾತೃವು ಹೀಗೆಯೇ ಅಭಿಪ್ರಾಯಪಡುತ್ತಾರೆ. ಸಾರವಿವರಣೆಯವರು ಈ ವಾಕ್ಯವು ಅನಿಯತಾಯುಸ್ಸುಗಳ ಪರವಾದುದೆಂದೂ,

---

(೧) ಲಕ್ಷ್ಮೀತಂತ್ರ ೧೭. ೧೦೩.

ದೇವತಾನ್ತರ ಸ್ಪರ್ಶೇ ವಿಳಂಬಾವಿಳಂಬ ಕಥನಂ

ದೇವತಾನ್ತರಸ್ಪರ್ಶಮುಣ್ಡಾಯಿತ್ತಾಗಿಲುಮ್ ಸರ್ವೇಶ್ವರನ್ ವಿದೇಸು ಮೊರುನಾಳಿಲೆ ಶ್ರುತ್ಯುಕ್ತಮಾನ ಪಡಿಯೇ ಪರಮೈಕಾನ್ತಿಗಳೋಡೆ ಶೇರ್ತ್ತು ಲಜ್ಜಾವಧಿಯಾಗತ್ತಿರುತ್ತಿ ಇವನುಡೈಯ ವ್ಯಭಿಚಾರತ್ತೈ

ಇದರ ಹಿಂದಿನ ವಾಕ್ಯವು ನಿಯತಾಯುಸ್ಸುಗಳ ಪರವೆಂದೂ ಹೇಳಿರುತ್ತಾರೆ. ಮಿಕ್ಕವರೇನನ್ನೂ ಹೇಳಲಿಲ್ಲವು.

ದೇವತಾಂತರ ಸ್ಪರ್ಶ ಪ್ರಾಪ್ತಿಯಲ್ಲಿ ವಿಳಂಬಾವಿಳಂಬದ ಕಥನವು.

ದೇವತಾಂತರ ಸ್ಪರ್ಶ ಮುಣ್ಡಾಯಿತ್ತಾಗಿಲುಮ್ - ಅನ್ಯದೇವತಾ ಸಂಬಂಧವು ಉಂಟಾದುದೇಯಾದರೆ, ಸರ್ವೇಶ್ವರನು, **ವಿದೇಸು ಮೊರು ನಾಳಿಲೆ** - ಯಾವುದಾದರೂ ಒಂದು ಕಾಲದಲ್ಲಿ, ಎಂದರೆ ದೇಹಾವಸಾನದೊಳಗೆ ತೋರಿದ ಕಾಲದೊಳಗೆ, **ಶ್ರುತ್ಯುಕ್ತಮಾನಪಡಿಯೇ** - ಶ್ರುತಿಯಲ್ಲಿ ಹೇಳಿರುವ ಹಾಗೆ, **ಪರಮೈಕಾನ್ತಿಗಳೋಡೆ ಶೇರ್ತ್ತು** - ಪರಮೈಕಾನ್ತಿಗಳಾದ ಮಹಾ ಭಾಗವತರೊಂದಿಗೆ ಸೇರಿಸಿ, **ಲಜ್ಜಾವಧಿಯಾಗತ್ತಿರುತ್ತಿ** - ಹಿಂದೆ ಹೀಗೆ ಮಾರ್ಗ ತಪ್ಪಿ, ಪ್ರಪನ್ನನಾದವನು ಅನ್ಯದೇವತಾ ಭಜನ ಮಾಡಬಹುದೇ ಎಂಬ ನಾಚಿಕೆಯು ಉಂಟಾಗುವದೇ ಅವಧಿಯು, ಅದು ಉಂಟಾಯಿತೋ ಇಲ್ಲವೋ, ಒಡನೆ ಆತನನ್ನು, **ತಿರುತ್ತಿ**-ಅನ್ಯದೇವತಾ ಭಜನದಿಂದ ಹಿಂತಿರುಗಿಸಿ, **ಇವನುಡೈಯ ವ್ಯಭಿಚಾರತ್ತೈ** - ಈತನು ತನ್ನ ಪತಿಯನ್ನು ಬಿಟ್ಟು ಅನ್ಯದೇವತಾವಲಂಬನ ಮಾಡಿದ ದೋಷವನ್ನು, ಪ್ರಪನ್ನನು ಪತಿವ್ರತಾ ಸ್ತ್ರೀಯ ಹಾಗೆ ತನ್ನ ಪತಿಯಾದ ಶ್ರೀಮನ್ನಾರಾಯಣನನ್ನೇ ನಂಬಿಕೊಂಡಿರಬೇಕು, ಹಾಗಲ್ಲದೆ ಬ್ರಹ್ಮರುದ್ರಾದಿಗಳನ್ನು ನಂಬಿದರೆ ವ್ಯಭಿಚಾರದೋಷಕ್ಕೆ ಒಳಗಾಗುವನೆಂಬ ಭಾವವು. **ಶೀರ್‌ಕ್ಕುಮ್**- ಅಲ್ಪ ದಂಡನೆ ಮೂಲಕ ಕ್ಷಮಿಸಿ ಹೋಗಲಾಡಿಸುವನು. ಶ್ರೀ ಮಹಾವಿಷ್ಣುವೇ ನನಗೆ ಗತಿಯು, ಅನ್ಯಾನ್ಯ ಗತಿಯಿಲ್ಲವೆಂದು ಹೇಳಿ, ಸ್ವರೂಪಕ್ಕೆ ಹಾನಿಕರವಾಗಿ ಅನ್ಯದೇವತಾ ಭಜನ ಮಾಡಿದೆನೇ ಎಂಬ ಲಜ್ಜೆಯು ಸ್ವಾಮಿ ಕೃಪೆಯಿಂದ ಪ್ರಾಪ್ತವಾಗಿ, ಅದಕ್ಕಾಗಿ ಆತನು ಪ್ರಾಯಶ್ಚಿತ್ತ ಮಾಡಿಕೊಂಡರೆ ಮನ್ನಿಸಿಬಿಟ್ಟು, ಹಾಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ಅಲ್ಪ ದಂಡನೆ ವಿಧಿಸಿ, ಕೋರಿದ ಕಾಲದಲ್ಲೇ ನಿರ್ಯಾಣ ಮೂಲಕ ಮೋಕ್ಷವನ್ನೀಯುವನೆಂಬ ಭಾವವು. ಈ ಅರ್ಥವು ಸಹ ಶ್ರುತಿಸಿದ್ಧವಾದುದೆಂದು ಹೇಳುತ್ತಾರೆ ಆ ಶ್ರುತಿಗಳು ಯಾವುವೆಂದರೆ:-

೧. **ಸಂಧಾಂಚಯಸ್ತಾಂ ಸಂದಧೇ ಬ್ರಹ್ಮಣ್ಯೈಷಃ, ರಮತೇ ತಸ್ಮಿನ್ನುತ ಜೀರ್ಣೇಶಯಾನೇ, ನೈನಂ ಜಹಾತ್ಯಹಸ್ಸುಪೂರ್ವ್ಯೇಷು** (ತೈ. ಆರ. ೩. ೧೪) ಎಂದರೆ, ಯಾವನು ಪರಮಾತ್ಮನೊಂದಿಗೆ **ಸಂಬಂಧವನ್ನು** ಬೆಳಸಿದನೋ, ಅವನು ಆ ಪರಮಾತ್ಮನಲ್ಲಿ, ದೇಹವು ಜೀರ್ಣವಾಗಿ ಮರಣ ಹೊಂದಿದಮೇಲೆ ರಮಿಸುವನು, ಇದಕ್ಕೆ ಮುಂದಿನ ಹಾಗೆ ಈತನನ್ನು ಆ ಪರಮಾತ್ಮನು ತ್ಯಜಿಸುವದಿಲ್ಲವು. ಸಾರದೀಪ ಸಾರಾಸ್ವಾದಿನಿ ಸಾರವಿವರಣೆ ವ್ಯಾಖ್ಯಾತೃಗಳು ಹೀಗೆ ಅಭಿಪ್ರಾಯ ಪಟ್ಟಿರುತ್ತಾರೆ. ಸಾರಪ್ರಕಾಶಿಕೆ ಮತ್ತು ಸಾರವಿವರಣೆಯವರೂ ಜಾನಶ್ರುತಿರೈಕ್ವರ ಸಂವಾದವು ಶ್ರುತಿಯಲ್ಲಿ ಹೇಳಿರುವದೇ ಈ ಪ್ರಕರಣದ ಶ್ರುತಿ ಪ್ರಮಾಣವೆಂದು ತಿಳಿಸುತ್ತಾರೆ. ಆದರೆ ಜಾನಶ್ರುತಿಗೆ ದೇವತಾಂತರಸಂಬಂಧವೂ ಇಲ್ಲವು. ಆತನು ರೈಕ್ವರ ಸಮಾಗಮವನ್ನು ಹೊಂದುವದಕ್ಕೆ ಮುಂಚೆ ಭರನ್ಯಾಸವನ್ನು ಮಾಡಿಯೂ ಇರಲಿಲ್ಲವು. ಜಾನಶ್ರುತಿ ವೃತ್ತಾಂತಕ್ಕೆ ನೇಯ ಪುಟ ನೋಡಿ. ಪರಮೈಕಾಂತಿಗಳೊಡು ಶೇರ್ತ್ತು ಎಂಬುವದಕ್ಕೆ "**ಯೇತತ್ರ ಬ್ರಾಹ್ಮಣಾಸ್ಸಮ್ಮರ್ಶಿನಃ ಯುಕ್ತಾ ಆಯುಕ್ತಾಃ ಅಲೂಕ್ಷಾಧರ್ಮಕಾಮಾಸ್ಯುಃ, ಯಥಾತೇ ತೇಷು ವರ್ತೇರನ್, ತಥಾ ತೇಷು ವರ್ತೇಥಾಃ**" ಹೀಗೆಯೇ "**ನ ಖಲು ಭಾಗವತಾ ಯಮವಿಷಯಂ ಗಚ್ಛಂತಿ**" ಎಂದು ಹೇಳಿರುವದೂ ಕೂಡ ಅನ್ಯದೇವತಾಭಜನ ಮಾಡದೇ ಇರುವ ಸರಿಯಾದ ಉಪಾಯನಿಷ್ಠರನ್ನು ಕುರಿತೇ ಹೇಳಿದುದು ಎಂದು ತಿಳಿಯತಕ್ಕದ್ದು. ಈ ಶ್ರುತ್ಯಭಿಪ್ರಾಯವು ದೇವತಾಂತರ ಸಂಬಂಧವು ಸ್ಥಿರವಾಗಿ ನಿಲ್ಲದೆ, ನಿರ್ಯಾಣ ಕಾಲದ ಒಳಗಾಗಿ ಲಜ್ಜಾಪ್ರಾಪ್ತವಾದವನ ವಿಷಯವು. ಆದರೆ ಇನ್ನು ಬೇರೆ ಶ್ರುತಿಗಳು "**ಯೋ ವೈ ಸ್ವಾಂ ದೇವತಾಮತಿಯಜತೇ ಪ್ರಸ್ವಾಯೈ ದೇವತಾಯೈ ಚ್ಯವತೇ ನಪರಾಂ ಪ್ರಾಪ್ನೋತಿ ಪಾಪೀಯರ್ಾ ಭವತಿ.**" "**ಧ್ಯಾಯತೇರ್ಚಯತೇ ಯೋನ್ಯಂ ವಿಷ್ಣುಲಿಙ್ಗಮುಪಾಶ್ರಿತಃ । ಕಲ್ಪಕೋಟಿಶತೇನಾಪಿ ಗತಿಸ್ತಸ್ಯ ನ ವಿದ್ಯತೇ**" ಎಂದರೆ "ಯಾವನೊಬ್ಬನು ತಾನು ಆಶ್ರಯಿಸಿದ ಪರದೇವತೆಯನ್ನು ಬಿಟ್ಟು ಅನ್ಯದೇವತೆಯನ್ನು ಆರಾಧಿಸುತ್ತಾನೋ, ಅವನು ಮೊದಲಾಶ್ರಯಿಸಿದ ಪರದೇವತೆಯಿಂದ ಜಾರಿಬೀಳುವನು, ಎಂದರೆ ಆತನು ಇವನನ್ನು ರಕ್ಷಿಸನು ಎಂಬ ಭಾವವು; ಅಂಥಾವನು ಪ್ರಾಪ್ಯವನ್ನು ಹೊಂದುವದಿಲ್ಲವು. ಅಪರಾಧಿಯಾಗಿ ಜನ್ಮಾಂತರವನ್ನು ಹೊಂದುವನು" ಮತ್ತು "ವಿಷ್ಣುವಿನ ದಿವ್ಯಮಂಗಳ ವಿಗ್ರಹವನ್ನು ಆಶ್ರಯಿಸಿದವನು ಎಂದರೆ ಧ್ಯಾನಿಸಿ ಅರ್ಚಿಸಬೇಕಾದವನು, ಬೇರೇ ದೇವತೆಯನ್ನು ಧ್ಯಾನಿಸಿ ಪೂಜಿಸಿದರೆ, ಕಲ್ಪಕೋಟಿ ಶತವಾದರೂ ಆತನಿಗೆ ಉತ್ತಮಗತಿಯಿಲ್ಲವು." ಶ್ರೀಮಾನ್ ಶೆಟ್ಟಿಲೂರು ನರಸಿಂಹಾಚಾರ್ಯರು ಈ ಸಂದರ್ಭದಲ್ಲಿ ಉದಾಹರಿಸಿರು

ತೀರ್ಕ್ಕುಮ್ ; ಶಿಲರ್ಕ್ಕು ದೇವತಾಂತರ ಸ್ಪರ್ಶಮ್ ನಿಲೈನಿರ್ಕ್ಕುಮಾಗಿಲ್ ಮುನ್ಬು ಉಪಾಯಸ್ಪರ್ಶಮಿಲ್ಲೈ ; ಮೇಲ್ ನರಕಾದಿಗಳು ಮುಣ್ಡೆನ್ರರಿಯು

ವದು, **"ಅಧಿಯಜೇತ ನಿಜಾಂಯದಿ ದೇವತಾಮುಭಯತಶ್ಚ್ಯವತೇ ಜುಷತೇಪ್ಯಘಂ"** (ಯಾದವಾಭ್ಯುದಯ ೬) ಎಂದರೆ ತನ್ನ ಸ್ವಂತದೇವತೆಯಾದ ಸರ್ವೇಶ್ವರನನ್ನು ತ್ಯಜಿಸಿ ಇತರ ದೇವತೆಯನ್ನು ಭಜಿಸುತ್ತಾನೋ, ಆತನು ಎರಡು ಕಡೆಯಿಂದಲೂ ಶ್ರೇಯಸ್ಸಿಲ್ಲವದನಾಗುತ್ತಾನೆ, ಶಕ್ತಿಯುಳ್ಳ ಸರ್ವೇಶ್ವರನೂ ಕೈಬಿಡುತ್ತಾನೆ ; ಆ ಅನ್ಯದೇವತೆಗೆ ಪುರುಷಾರ್ಥವನ್ನು ಕೊಡುವ ಶಕ್ತಿಯೇ ಇರುವದಿಲ್ಲ ; ಹೀಗೆ ಭಿನ್ನಾಭಿಪ್ರಾಯಗಳಿವೆಯಲ್ಲಾ, ಅದು ಹೇಗೆ ಎಂದರೆ, ಇದು ದೇವತಾಂತರ ಸಂಬಂಧವು ನೆಲೆಯಾಗಿ ನಿಂತವನ ವಿಷಯವೆಂದೂ, ಹಾಗೆ ನೆಲೆಯಾಗಿ ನಿಂತಿದ್ದರೆ, ಅಂಥಾವನಿಗೆ ಭರನ್ಯಾಸರೂಪೋಪಾಯದ ಸಂಬಂಧವೂ ಸರಿಯಾಗಿ ಉಂಟಾಗಿಲ್ಲವೆಂದು ಭಾವಿಸತಕ್ಕದ್ದೆಂದೂ ಅಂಥಾವನಿಗೆ ನರಕಪ್ರಾಪ್ತಿಯಾದರೂ ಆಗಬಹುದೆಂದೂ, ಮುಂದೆ ತಿಳಿಸುತ್ತಾರೆ. ಈತನಿಗೆ ವಿವೇಕೋತ್ಪತ್ತಿಯೂ ಲಜ್ಜೆಯೂ ಉಂಟಾಗದೇ ಇರುವದಕ್ಕೆ ಕಾರಣವು, ಭಗವದನುಗ್ರಹವಿಲ್ಲದಿರುವದು ; ಯಾವಾಗ ಭಗವದನುಗ್ರಹವಿಲ್ಲವೋ ಆಗ ಭರನ್ಯಾಸವೇ ಸಿದ್ಧಿಸಲಿಲ್ಲವೆಂಬ ಭಾವವು.

ಶಿಲರ್ಕ್ಕು-ಕೆಲವರಿಗೆ, ದೇವತಾಂತರ ಸಂಬಂಧವು, **ನಿಲೈನಿರ್ಕ್ಕುಮಾಗಿಲ್**-ಸ್ಥಿರವಾಗಿ ಕೊನೆವರೆಗೂ ನಿಂತಿದುದಾದರೆ, ಮುನ್ಬು **ಉಪಾಯಸ್ಪರ್ಶಮಿಲ್ಲೈ** - ಮೊದಲು ಭರನ್ಯಾಸ ಸಂಬಂಧವೇ ಉಂಟಾಗಲಿಲ್ಲವೆಂದು ಹೇಳತಕ್ಕದ್ದು, ಏಕೆಂದರೆ ಅನ್ಯದೇವತೆಯನ್ನು ಹುಡುಕಿಕೊಂಡು ಹೋದುದರಿಂದ ಮಹಾ ವಿಶ್ವಾಸವೆಂಬಂಗವೇ ಇಲ್ಲವಾದುದರಿಂದ ಪ್ರಪತ್ತಿ ನಿಷ್ಪತ್ತಿಯೇ ಆಗಲಿಲ್ಲವೆಂಬ ತಾತ್ಪರ್ಯವು. ಮೇಲ್ - ಇದೂ ಅಲ್ಲದೆ ಮುಂದಕ್ಕೆ ನರಕಾದಿಗಳೂ, **ಉಂಡೆನ್ರರಿಯಲಾಮ್**-ಉಂಟೆಂದು ತಿಳಿಯಬಹುದು. ಇದಕ್ಕೆ ಪ್ರಮಾಣವೇನೆಂದರೆ **"ಯೋವೈಸ್ವಾಂ ದೇವತಾಂ"** ಇತ್ಯಾದಿ ಮೇಲೆ ಉದಾಹರಿಸಿರುವ ಶ್ರುತಿಗಳು. ನರಕಪ್ರಾಪ್ತಿಯೂ ಉಂಟಾಗಬಹುದೆಂದು ಹೇಳಿರುವದರಿಂದ, ಹಾಗೆ ನರಕವು ಪ್ರಾಪ್ತವಾಗದಿದ್ದರೂ ಜನ್ಮಾಂತರಾದಿ ಶಿಕ್ಷೆಗಳೂ ಉಂಟೆಂಬುದು ಕೈಮುತಿಕ ನ್ಯಾಯಸಿದ್ಧವು ಎಂಬ ಭಾವವು. ಮೊದಲುಪಾಯವಾದ ಪ್ರಪತ್ತಿಯು ಕೈಗೂಡಿದ್ದರೆ, ಶ್ರಿಯಃಪತಿಯನ್ನು ಬಿಟ್ಟು ಎಂದೆಂದಿಗೂ ಹೋಗದಿರುವನು. ಯಾವಾಗ ಬಿಟ್ಟೇ ಹೋದನೋ ಆಗ ಪ್ರಪತ್ತಿಯು ಮಹಾ ವಿಶ್ವಾಸವಿಲ್ಲದುದರಿಂದ ಕೈಗೂಡಲೇ ಇಲ್ಲವೆಂಬ ಭಾವವು.

ಆದರೆ, ಇವನಿಗೆ ಮಹಾವಿಶ್ವಾಸದ ನ್ಯೂನತೆಯಿಂದೇನೋ ಅನ್ಯದೇವತಾ

ಲಾಮ್. ಇವನುಕ್ಕು ಭಗವದ್ವಿಷಯತ್ತಿಲ್ ಕೃತಾಂಶಮ್, ಎನ್ರೇನು ಮೊರುನಾಳ್ ಉಪಾಯನಿಷ್ಪತ್ತಿಯೈಪ್ಪಣ್ಣಿ ಕಾರ್ಯಕರಮಾಮ್.

ಸಂಬಂಧ ಪ್ರಾಪ್ತಿಯುಂಟಾಯಿತು. ಶರಣಾಗತಿ ಮಾಡಬೇಕೆಂಬ ಅಭಿಮುಖ್ಯತೆಯನ್ನು ಪ್ರದರ್ಶನೆ ಮಾಡಿರುವದೂ, ಪಂಚಸಂಸ್ಕಾರವನ್ನು ಹೊಂದಿರುವದೂ, ಪ್ರಪತ್ತಿಯ, ಇತರ ಅಂಗಗಳಾದ ಅನುಕೂಲ್ಯ ಸಂಕಲ್ಪಾದಿಗಳನುಗುಣವಾಗಿ ಪ್ರವೃತ್ತಿಯೂ ಇವೆಲ್ಲಾ ಹಾಗಾದರೆ ವ್ಯರ್ಥವೋ ಎಂದರೆ, ಅದಕ್ಕೆ ಸಮಾಧಾನ ಹೇಳುತ್ತಾರೆ. ಇದು ವ್ಯರ್ಥವಾಗುವದಿಲ್ಲವೆಂದೂ ಯಾವತ್ತಾದರೂ ಒಂದು ದಿನ ಉಪಾಯವು ಸಂಪೂರ್ಣವಾಗುವ ಹಾಗೆ ಮಾಡಿ ಕಾರ್ಯಕಾರಿಯಾಗುವ ಹಾಗೆ ಮಾಡುತ್ತವೆಂದು ತಿಳಿಸುತ್ತಾರೆ:—

ಇವನಕ್ಕು - ಈ ಅನ್ಯದೇವತಾಸಂಬಂಧವು ಸ್ಥಿರವಾಗಿ ನೆಲಸಿರುವವನಿಗೆ, **ಭಗವದ್ವಿಷಯ ಕೃತಾಂಶಮ್** - ಭಗವತ್ಸನ್ನಿಧಿಯಲ್ಲಿ ಮಾಡಿದ ಉಪಾಯ ನಿಷ್ಪತ್ತಿಯುಂಟಾಗದ ಈ ಅನುಷ್ಠಾನಾಂಶವು, **ಎನ್ರೇನು ಮೊರುನಾಳ್**-ಯಾವಾಗಲಾದರೂ ಒಂದು ದಿನವೆಂದರೆ, ಈ ಜನ್ಮದಲ್ಲೋ, ಮುಂದಿನ ಜನ್ಮಗಳಲ್ಲೋ ಒಂದು ದಿನ, **ಉಪಾಯ ನಿಷ್ಪತ್ತಿಯೈ** - ಸರ್ವೇಶ್ವರನ ಕೃಪೆಯಿಂದ ಉಪಾಯ ಸಂಪೂರ್ಣತೆಯನ್ನು, **ಪಣ್ಣಿ** - ಮಾಡಿ, **ಕಾರ್ಯಕರಮಾಮ್** - ಪ್ರಯೋಜನರೂಪವಾಗುವದು, ಮೋಕ್ಷದಾಯಕವಾಗುವದು. ಗೀತೆಯಲ್ಲಿ "**ನೇಹಾಭಿ ಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ । ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್**" (ಗೀ. ೨. ೪೦) ಎಂಬಂತೆ ಪ್ರಾರಂಭಿಸಿ ಮುಗಿಸದ ಸತ್ಕಾರ್ಯವು ನಿಷ್ಫಲವಾದುದಾಗುವದಿಲ್ಲವು, ಪ್ರಾರಂಭಿಸಿ ನಿಂತುಹೋದರೂ ಪ್ರತ್ಯವಾಯವಿಲ್ಲವು; ಸುಕೃತ ಕರ್ಮದ ಸ್ವಲ್ಪಾಂಶವಾದರೂ ಮಹತ್ತಾದ ಸಂಸಾರಭಯದಿಂದ ರಕ್ಷಿಸುತ್ತದೆ" ಎಂದು ಹೇಳಿರುವದರಿಂದ ಯಾವಾಗಲಾದರೂ ಈ ಆರಂಭಿಸಿದ ಪ್ರಪದನವು ಸದ್ಯದಲ್ಲಿ ನಿಷ್ಪನ್ನವಾಗದಿದ್ದರೂ ಕಾಲಾನುಕಾಲದಲ್ಲಿ ಫಲಕಾರಿಯಾಗಲು ಸಂದೇಹವಿಲ್ಲವೆಂಬ ತಾತ್ಪರ್ಯವು. ಯೋಗಮೂಲಕವಾಗಿಯೂ ಪರಬ್ರಹ್ಮನನ್ನು ಹೊಂದಬೇಕೆಂಬುವನಿಗೂ ಪ್ರಾರಂಭಿಸಿದ ಕೆಲಸವು ಕಾರಣಾಂತರದಿಂದ ನಿಂತುಹೋದರೂ "**ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ**" (ಗೀ ೬ ೧೦) ಶ್ರುತಿಯಿಂದ ಯೋಗಾರಂಭವನ್ನು ಮಾಡಿ ನಿಲ್ಲಿಸಿಬಿಟ್ಟ ಮೋಕ್ಷಕಾಂಕ್ಷಿಗೆ ದುರ್ಗತಿ ಎಂಬುವದಿಲ್ಲವು. ಇನ್ನಾನೊಂದು ಕಾಲದಲ್ಲ "**ಬುದ್ಧಿಸಂಯೋಗಂ ಲಭತೇ**" ಯೋಗವಿಷಯಕವಾದ ಬುದ್ಧಿಯೋಗವನ್ನು ಹೊಂದಿ,

ಬುದ್ಧಿ ದೌರ್ಬಲ್ಯಸ್ಯ ಉಪಾಯಾನ್ತರ ಪ್ರತ್ಯಾಶಾಯಾಶ್ಚ ವಿಳಂಬಾವಿಳಂಬ ಹೇತುತ್ವಂ

ಮಹಾ ವಿಶ್ವಾಸಮ್ ಪೂರ್ಣಮಾಗ ಪ್ಪಿರನ್ದು ಪ್ರಪತ್ತಿ ಪಣ್ಣಿನಾರ್ಕ್ಕು ಬುದ್ಧಿ ದೌರ್ಬಲ್ಯಮುಮ್ ಉಪಾಯಾನ್ತರ ಪ್ರತ್ಯಾಶೈಯುಮ್ ಪಿರವಾದು. ಇವೈ ಪಿರನ್ದವರ್‌ಗಳುಕ್ಕು ಮುನ್ಬು ಪಿರನ್ದ ವಿಶ್ವಾಸಮ್ ಮಂದಮಾಯಿರುಕ್ಕುಮ್. ಇವರ್‌ಗಳೈಯುಮ್ ಸರ್ವೇಶ್ವರನ್ ಮಹಾವಿಶ್ವಾಸಾವಧಿಯಾಗ ತಿರುತ್ತಿ ಪೂರ್ಣಪ್ರಪತ್ತಿ ನಿಷ್ಠರಾಕ್ಕುಮ್.

"ತತೋಯಾಂತಿ ಪರಾಂಗತಿಂ" ಅನಂತರ ಸದ್ಗತಿಯನ್ನು ಹೊಂದುವನೆಂದು ಹೇಳಲ್ಪಟ್ಟಿರುವದು, ಈ ಪ್ರಪತ್ತಿಯಿಂದ ಜಾರಿದವನಿಗೂ ಅನ್ವಯಿಸುತ್ತದೆಂದು ಭಾವಿಸತಕ್ಕದ್ದು.

ಮುಂದೆ ಬುದ್ಧಿ ದೌರ್ಬಲ್ಯಕ್ಕೂ ಉಪಾಯಾನ್ತರ ಪ್ರತ್ಯಾಶೆಗೂ ವಿಳಂಬಾವಿಳಂಬಗಳು ಯಾವ ಸಂದರ್ಭದಲ್ಲಿ.

ಮಹಾವಿಶ್ವಾಸಮ್ ಪೂರ್ಣಮಾಗಪಿರನ್ದು - ಸರ್ವೇಶ್ವರನು ಎಂದಿಗೂ ರಕ್ಷಿಸದೇ ಇರುವನಲ್ಲವೆಂಬ ಮಹಾವಿಶ್ವಾಸವು ಸಂಪೂರ್ಣವಾಗಿ ಉಂಟಾಗಿ, ಪ್ರಪತ್ತಿ ಪಣ್ಣಿನಾರ್ಕ್ಕು - ಪ್ರಪತ್ತಿಯನ್ನನುಷ್ಠಿಸಿದವರಿಗೆ, ಬುದ್ಧಿ ದೌರ್ಬಲ್ಯವೂ, ಉಪಾಯಾನ್ತರ ಪ್ರತ್ಯಾಶೈಯುಮ್ - ಇನ್ನೊಂದುಪಾಯವಾದ ಭಕ್ತ್ಯುಪಾಯದಲ್ಲಿ ಆಶೆಯು, ಪಿರವಾದು - ಹುಟ್ಟಲಾರದು. ಈ ಲಘುವಾದ ಉಪಾಯದಿಂದಲೇ ಸಮಸ್ತವೂ ಸಾಧ್ಯವೆಂದು ಪೂರ್ಣ ನಂಬಿಕೆ ಇರುವವನು ಇನ್ನ್ಯಾವ ಉಪಾಯವನ್ನಾದರೂ ಅವಲಂಬಿಸುವನೇ ಎಂಬ ಭಾವವು. ಇವೈ ಪಿರನ್ದವರ್‌ಗಳುಕ್ಕು - ಈ ಬುದ್ಧಿದೌರ್ಬಲ್ಯವೂ ಉಪಾಯಾಂತರ ಪ್ರತ್ಯಾಶೆಯೂ ಹುಟ್ಟಿದವರಿಗೆ, ಮುನ್ಬು ಪಿರನ್ದ ವಿಶ್ವಾಸಮ್ - ನೆಲವನ್ನು ಪ್ರಪದನ ಮಾಡುವ ಕಾಲದಲ್ಲಿ ಹುಟ್ಟಿದ ಮಹಾ ವಿಶ್ವಾಸವು, ಮಂದಮಾಯಿರುಕ್ಕುಮ್- ಅಲ್ಪವಾಗಿರುತ್ತದೆ ಎಂದರೆ ಕ್ಷೀಣವಾಗಿರುತ್ತದೆ; ಇವರ್‌ಗಳೈಯುಮ್ - ಇವರನ್ನೂ, ಸರ್ವೇಶ್ವರನು, ಮಹಾ ವಿಶ್ವಾಸಾವಧಿಯಾಗ - ಮಹಾ ವಿಶ್ವಾಸವು ಪುನಃ ಪ್ರಾಪ್ತವಾಗುವದೇ ಅವಧಿಯಾಗಿ, ಎಂದರೆ ಅದು ಹುಟ್ಟುವವರೆಗೂ ವಿಳಂಬವು ಪ್ರಾಪ್ತವಾಗುತ್ತದೆಂಬ ಭಾವವು, ತಿರುತ್ತಿ - ಅಲ್ಪದಂಡನೆಯ ಮೂಲಕ

ವೈಪರೀತ್ಯ ರಹಿತಾನಾಂ ವಿಳಂಬ ಶಙ್ಕಾಪಿ ನಾಸ್ತಿ

ಇವ್ವೈಪರೀತ್ಯಙ್ಗಳೊನ್ರುಮ್ ಪಿರವಾದೆ ನಡನ್ದವರ್‍ಗಳುಕ್ಕು ವಿಳಂಬಾದಿ ಶಙ್ಕೈಯುಮ್ ಕೂಡ ಇಲ್ಲೈ; ಇವರ್‍ಗಳುಕ್ಕು ಇಚ್ಛಾವಧಿ ವಿಳಂಬಮ್; ಇವರ್‍ಗಳ್ ಕೋಲಿನ ಎಲ್ಲೈಯಿಲ್ ಮೋಕ್ಷ ಮವಿನಾಭೂತಮ್. ಇನ್ನಿಷ್ಟೈಯೆಪ್ಪೆತ್ತ ಇವ್ವಧಿಕಾರಿ (೧) "ಕಡೈತ್ತಲೈ

ತಿದ್ದಿ ಹಿಂತಿರುಗಿಸಿ, ಪೂರ್ಣಪ್ರಪತ್ತಿನಿಷ್ಠರಾಕ್ಕುಮ್-ಸಂಪೂರ್ಣವಾಗಿ ಪ್ರಪತ್ತಿಯಲ್ಲಿ ಆಸಕ್ತಿಯುಳ್ಳವರ ಹಾಗೆ ಮಾಡುವನು. ಈ ಸಂದರ್ಭದಲ್ಲಿ ಪ್ರಪದನಾನುಷ್ಠಾನ ಕಾಲದಲ್ಲಿ ಮಹಾ ವಿಶ್ವಾಸಾದಿ ಎಲ್ಲಾ ಅಂಗಗಳೂ ಇರುವದರಿಂದ ದೇಹಾವಸಾನದಲ್ಲಿ ಮೋಕ್ಷವೆಂಬುವದು ಸಿದ್ಧವು ಎಂಬ ತಾತ್ಪರ್ಯವು.

ಇಂತಹ ವೈಪರೀತ್ಯಗಳಿಲ್ಲದವರಿಗೆ ವಿಳಂಬಾ ಶಙ್ಕೆ ಕೂಡ ಇಲ್ಲವು.

ಈ ವೈಪರೀತ್ಯಙ್ಗಳೊನ್ರುಮ್ ಪಿರವಾದೆ - ಈ ಮೇಲೆ ಹೇಳಿದ ಅಹಂಕಾರ ಮಮಕಾರಗಳು ಪ್ರಯೋಜನಾಂತರರುಚಿ, ಇವೇ ಮೊದಲಾದ ವಿಪರೀತ ಪ್ರವೃತ್ತಿಗಳೊಂದೂ ಹುಟ್ಟದಹಾಗೆ, **ನಡನ್ದವರ್‍ಗಳುಕ್ಕು** - ಪ್ರವೃತ್ತಿಯುಳ್ಳ ಪ್ರಪನ್ನರಿಗೆ, ವಿಳಂಬವೇ ಮೊದಲಾದವುಗಳ ಶಂಕೆಯೂ ಕೂಡ, **ಇಲ್ಲೈ**-ಇಲ್ಲವು. ಹಾಗಾದರೆ ಪ್ರಪತ್ತಿಯಾದ ಒಡನೆಯೇ ಮೋಕ್ಷವೋ ಎಂದರೆ, ಹಾಗೆ ಆರ್ತನಾಗಿ, ಇಲ್ಲಿರುವದು ಅಗ್ನಿಮಧ್ಯದಲ್ಲಿರುವ ಹಾಗೆ ದುಸ್ಸಹವಾಗಿ ಎಣಿಸಿ ಒಡನೆಯೇ ನಿರ್ಯಾಣದಿಂದ ಮೋಕ್ಷ ಬೇಕೆಂದಪೇಕ್ಷಿಸುವವರಿಗೆ ಹಾಗೆಯೇ ಪ್ರಾರಬ್ಧವೂ ನಶಿಸಿ ಒಡನೆಯೇ ಮೋಕ್ಷಪ್ರಾಪ್ತಿಯೂ, ಹಾಗಲ್ಲದೆ ಇನ್ನು ಮುಂದೆ ಇರುವ ಆಯುಸ್ಸಿನಲ್ಲಿ ಸ್ವಾಮಿಯು ಕುಚೇಲರಿಗಿತ್ತ ಹಾಗೆ ದಯಪಾಲಿಸಿದ ಭೋಗಗಳನ್ನು ಅವುಗಳಲ್ಲಿ ಲಿಪ್ತನಾಗದೆ ಅನುಭವಿಸಿ ದೇಹಾವಸಾನದಲ್ಲಿ ಮೋಕ್ಷ ಬೇಕೆಂಬ ದೃಪ್ತನಿಗೂ ಆತನ ಇಚ್ಛಾನುಸಾರವೂ ನಡೆಯುತ್ತದೆಂದೂ, "ಇವರ್‍ಗಳುಕ್ಕು" ಎಂದು ಆರಂಭಿಸಿ ತಿಳಿಸುತ್ತಾರೆ. **ಇವರ್‍ಗಳುಕ್ಕು** - ಇಂತಹ ವೈಪರೀತ್ಯಗಳಿಲ್ಲದಿರುವ ಪ್ರಪನ್ನರಿಗೆ, **ಇಚ್ಛಾವಧಿ ವಿಳಂಬಮ್** - ಇವರ ಇಷ್ಟಾನುಸಾರವಾಗಿ ವಿಳಂಬವು; ಆರ್ತನಾಗಿ ವಿಳಂಬ ಬೇಡವೆಂಬುವನಿಗೆ ವಿಳಂಬವಿಲ್ಲವು; ದೇಹಾವಸಾನದವರಿಗೂ ವಿಳಂಬ ಬೇಕೆಂಬುವರಿಗೆ ಹಾಗೆಯೇ ಸರ್ವೇಶ್ವರನು ನಡಿಸಿಕೊಡುವನು;

---

(೧) ತಿರುಮಾಲೈ ೩೮.

ಮತ್ತು ಪ್ರಪದನಕಾಲದಲ್ಲಿ ಕಾಲವನ್ನುದ್ದೇಶಿಸದೆ ಜನ್ಮಾಂತರ ವಿಳಂಬವನ್ನು ಇವರ್ಗಳ್ - ಇಂತಹ ಪ್ರಪನ್ನರು, ಕೋಲಿನ ಎಲ್ಲೈಯಿಲ್ - ಅಪೇಕ್ಷಿಸಿದ ಅವಧಿಗನುಸಾರವಾಗಿ, ಮೋಕ್ಷನುವಿನಾಭೂತಮ್-ಮೋಕ್ಷವು ತಪ್ಪದೆ ಸಿದ್ಧವು. ಶರಣಾಗತಿ ಕಾಲದಲ್ಲಿ, ಯಾವ ಕಾಲದಲ್ಲಿ ಮೋಕ್ಷ ಬೇಕೆಂದಪೇಕ್ಷಿಸಿದ್ದನೋ, ಆ ಪ್ರಕಾರವಾಗಿ, ಆ ಕಾಲಕ್ಕೇನೇ ತಪ್ಪದೆ ಮೋಕ್ಷವು ಲಭಿಸುತ್ತದೆ ಎಂಬ ತಾತ್ಪರ್ಯವು. ಪ್ರಪದನವಾದ ಒಡನೆಯೇ ಅಪೇಕ್ಷಿಸಿದರೂ ಹಾಗೆಯೇ ನಡಿಸಿಕೊಡುವನು. ಪ್ರಪದನಕಾಲದಲ್ಲಿ ದೇಹಾವಸಾನದಲ್ಲೆಂದು ಸಂಕಲ್ಪಿಸಿ ವಿವೇಕಶೂನ್ಯನಾಗಿ ಜನ್ಮಾಂತರದಲ್ಲಿ ಮೋಕ್ಷಾಪೇಕ್ಷೆಯುಂಟಾದರೂ, ಸತ್ಯಸಂಕಲ್ಪನು, ದೇಹಾವಸಾನ ಸಂಕಲ್ಪವನ್ನು ಮನಸ್ಸಿನಲ್ಲಿಟ್ಟು ಹಾಗೆಯೇ ನಡೆಸುವನು. ಈತನು ಈಶ್ವರನಿಗೆ ಅಭಿಮತನಾಗಿರುವವರಿಂದ ವಿವೇಕಶೂನ್ಯನಾಗಿ ಅಹಿತವನ್ನಪೇಕ್ಷಿಸಿದರೂ ಹಿತವನ್ನೇ ಮಾಡುವನು. ಹಾಗಲ್ಲದೆ,

ಈ ವೈಪರೀತ್ಯಗಳುಂಟಾದ ಸಂದರ್ಭದಲ್ಲಿ ಯಾವ ಸಂದರ್ಭದಲ್ಲಿ ವಿಳಂಬವು ಯಾವ ಸಂದರ್ಭದಲ್ಲಿಲ್ಲವೆಂದು ಚರ್ಚಿಸಿದ ಸಂದರ್ಭಗಳಲ್ಲಿ, ಎಲ್ಲೋ ಕೆಲವು ಸಂದರ್ಭಗಳಲ್ಲಿ ಮಾತ್ರ ವಿಳಂಬವುಂಟಾಗುತ್ತದೆಂದೂ, ಮಿಕ್ಕ ಸಂದರ್ಭಗಳಲ್ಲೆಲ್ಲಾ ಸರ್ವೇಶ್ವರನೇ ಪರಿಹಾರವನ್ನುಂಟುಮಾಡುತ್ತಾನೆಂದೂ ಹೇಳಲ್ಪಟ್ಟಿತು. ವಿಳಂಬಗಳು ಯಾವ ಸಂದರ್ಭದಲ್ಲೆಂದರೆ :—

೧. ಪ್ರಪದನ ಕಾಲದಲ್ಲಿ ಕಾಲವನ್ನುದ್ದೇಶಿಸಿ ಸಂಕಲ್ಪಿಸದೇ ಇರುವ ಸಂದರ್ಭದಲ್ಲಿ ಈ ವೈಪರೀತ್ಯಗಳು ಪ್ರಾಪ್ತವಾದರೆ ವಿಳಂಬವು.
೨. ಪ್ರಯೋಜನಾಂತರ ರುಚಿಯುತ್ಪನ್ನವಾದರೆ ವೈರಾಗ್ಯಾವಧಿ ವಿಳಂಬವು
೩. ದೇವತಾಂತರ ಸಂಬಂಧವು ನೆಲೆಯಾಗಿ ನಿಂತುಬಿಟ್ಟರೆ ವಿಳಂಬವು.

ಹೀಗೆ ಎಲ್ಲೋ ಕೆಲವು ಸಂದರ್ಭಗಳಲ್ಲಿ ಮಾತ್ರ ವಿಳಂಬವೂ, ಇನ್ನು ಮಿಕ್ಕ ಸಂದರ್ಭಗಳಲ್ಲಿ ಈ ವೈಪರೀತ್ಯಗಳ ಪರಿಹಾರದೊಂದಿಗೆ ವಿಳಂಬವಿಲ್ಲದಿರೋಣವು, ಭಗವಂತನಲ್ಲಿ ಶರಣಾಗತಿಯನ್ನನುಷ್ಠಿಸಿ ಪ್ರಪನ್ನನು ಸರ್ವೇಶ್ವರನಿಗೆ ತುಂಬಾ ಅಭಿಮತನೆನಿಸಿ, ಆತನನುಗ್ರಹಕ್ಕೆ ಪಾತ್ರನಾದ ಮಾಹಾತ್ಮ್ಯೆ ಎಂದು ಮುಂದಿನ ವಾಕ್ಯದಿಂದುಪದೇಶಿಸುತ್ತಾನೆ:—ಇನ್ನಿಷ್ಠೈಯ್ಯೈಪ್ಪತ್ತ-ಹೀಗೆ ಯಾವುದೊಂದೂ ವೈಪರೀತ್ಯಗಳಿಗವಕಾಶವಿಲ್ಲದಂತೆ ಪ್ರವೃತ್ತಿ ನಿಷ್ಠೆಯನ್ನು ಹೊಂದಿದ, ಇನ್ನಧಿಕಾರೀ - ಈ ಭರನ್ಯಾಸವನ್ನು ಯಥಾಶಾಸ್ತ್ರವಾಗಿ ಅನುಷ್ಠಿಸಿ ಕೃತಕೃತ್ಯನಾದ ಪ್ರಪನ್ನನು "ಕಣ್ಣೈತ್ತಲೆ ಇರುನ್ದು ನಿನ್ನ ಆಲಯದ ಕಡೇ ಬಾಗಲಿನಲ್ಲಿ ಕಾದಿದ್ದು ವಾಳುಮರ್ - ಬದುಕುವ ಕೋನ್ಪುರ್ರ್ - ಕರ್ಮಯೋಗಾದಿಗಳಿಂದ ಕೂಡಿದ ಉಪಾಸನೆಯನ್ನವಲಂಬಿಸಲಶಕ್ತರಾಗಿ ಪ್ರಪದನಾನುಷ್ಠಾನ ಮಾಡಿದ ಪ್ರಪನ್ನರನ್ನು

ಯಿರುನ್ದು ವಾಳುಮ್ ಕೋಮ್ಬರ್ಕ್ಕೆಯುಕತ್ತಿ" ಎಙ್ಗಿರಪಡಿಯೇ ಶ್ರೀಯಃ ಪತಿಯಾನ ಸರ್ವೇಶ್ವರನುಕ್ಕು ಸರ್ವದಾಽಭಿಮತನಾಯಿರುಕ್ಕುಮ್.

ಉಗತ್ತಿ ಪೋಲುಮ್ ಎಂದು ಮುಂದಿದೆ, ಅತ್ಯಂತ ಸ್ತೋತ್ರ ಮಾಡುತ್ತೀ ಯಲ್ಲವೇ'' ಎಙ್ಗಿರಪಡಿಯೇ ಎಂದು ತೊಂಡರಡಿಪ್ಪೊಡಿಯಾಳ್ವಾರ್ರವರು ತಿರು ಮಾಲೆಯಲ್ಲಿ ಹೇಳಿರುವ ಹಾಗೆ, ಶ್ರಿಯಃಪತಿಯಾದ ಸರ್ವೇಶ್ವರನಿಗೆ, ಸರ್ವದಾಽಭಿ ಮತನಾಯಿರುಕ್ಕುಮ್ - ಯಾವಾಗಲೂ ತುಂಬಾ ಪ್ರಿಯನಾಗಿರುವನು. ಈ ಪೂರಾ ಪಾಶುರವು ಯಾವುದೆಂದರೆ :—

ಮೇಂ ಪೊರುಳ್ಪೋಗ ವಿಟ್ಟುಮೆಯ್ ಮ್ಮೈಯ್ಯೆ ಮಿಗವುಣರ್ನ್ದು
ಆಂ ಪರಿ ಶರಿನ್ದು ಕೊಂಡು ಐಂಬುಲನಗತ್ತಡಕ್ಕಿ
ಕಾಂಬರತ್ತಲ್ಲೈ ಶಿರೈತ್ತುನ್ನಡತ್ತಲ್ಲೈ ಯಿರುನ್ದು ವಾಳುಮ್
ಶೋಂಬರ್ಕೈಯುಗತ್ತಿ ಪೋಲುಮ್ ಶೂಳ್ಪುನ ಲರಙ್ಗತ್ತಾನೇ ॥೩೮॥

"ಓ, ಕಾವೇರೀ ನದಿಯಿಂದ ಸುತ್ತಲ್ಪಟ್ಟ ಶ್ರೀರಂಗ ಕ್ಷೇತ್ರದಲ್ಲಿ ಪವಡಿಸಿರುವ ಶ್ರೀ ರಂಗನಾಥನೇ, ಪ್ರತ್ಯೇಕಿಸಲಸಾಧ್ಯವಾದ ಪ್ರಕೃತಿ ಸಂಬಂಧವನ್ನು ಸವಾಸನವಾಗಿ ಹೋಗಲಾಡಿಸಿ, ಈ ಆತ್ಮತತ್ವ ಯಾಥಾತ್ಮ್ಯವನ್ನು ಚನ್ನಾಗಿ ಪರಿಶೀಲನೆ ಮಾಡಿ, ಪ್ರಾಪ್ಯವಾದ ಪುರುಷಾರ್ಥವನ್ನರಿತು, ಐದು ಇಂದ್ರಿಯಗಳನ್ನೂ ವಿಷಯಗಳಲ್ಲಿ ಪ್ರವರ್ತಿಸದ ಹಾಗೆ ನಿರೋಧಿಸಿ, ಉಪಸನಾದಿ ಉಪಾಯಾಂತರಗಳಲ್ಲಿ ತನಗೇನೂ ಸಂಬಂಧವಿಲ್ಲದೆ, ತನ್ನ ಪಾಪಗಳೆಲ್ಲಾ ನಾಶವಾಗುವ ಹಾಗೆ ನಿನ್ನ ಆಲಯದ ಕೊನೆಯ ಬಾಗಲನ್ನು ಕಾದುಕೊಂಡು, ಬದುಕಬೇಕೆಂಬಾಶೆಯಿಂದ ನಿನ್ನಲ್ಲಿ ಭರ ನ್ಯಾಸ ಮಾಡಿ ಕೃತಕೃತ್ಯರಾದ ಅಶಕ್ತರನ್ನು ನೀನು ನಿನಗೆ ತುಂಬಾ ಪ್ರಿಯರೆಂದೂ ಉದಾರರೆಂದೂ ಸ್ತೋತ್ರಮಾಡುತ್ತೀಯಲ್ಲವೇ" ಈ ವೈಪರೀತ್ಯಾದಿಗಳೊಂದೂ ಇಲ್ಲದ ಪ್ರಪನ್ನನು ಶ್ರೀಯಃಪತಿಗೆ ತುಂಬಾ ಪ್ರಿಯನು. ಇದಕ್ಕೆ ರಾಮಾಯಣ ದಲ್ಲಿ ಅನೇಕ ನಿದರ್ಶನಗಳುಂಟು. ಶರಣಾಗತ ಪ್ರಪನ್ನರು ತಮಗೆ ಸೀತೆಗಿಂತ ಪ್ರಿಯರೆಂದು ಶ್ರೀರಾಮನು ಹೇಳಿಕೊಂಡಿರುತ್ತಾನೆ :—"ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾಸೀತೇ ಸಲಕ್ಷ್ಮಣಾಂ । ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ" ಶರಣಾಗತರಕ್ಷಣೆಗಾಗಿ ಜೀವವನ್ನಾದರೂ ತೊರೆ ಯುವೆನು, ಓ ಸೀತೆಯೇ ನಿನ್ನನ್ನಾದರೂ ಲಕ್ಷ್ಮಣನೊಂದಿಗೆ ತ್ಯಜಿಸುವೆನು, ಆ ಶರಣಾಗತರು ಬ್ರಹ್ಮವಿತ್ತುಗಳಾದರೆ ಇನ್ನು ಹೇಳತಕ್ಕದ್ದೇನಿದೆ, ಎಂದು ಹೇಳಿ ರುತ್ತಾನೆ." ಹೀಗೆ ಶರಣಾಗತರಾದ ಋಷಿಗಳ ಸಂರಕ್ಷಣಾರ್ಥವಾಗಿಯೇ ವನಕ್ಕೆ

ಪ್ರಪನ್ನ ವಿಷಯೇ ಭಗವದನುಗ್ರಹ ಪರಂಪರಾಃ

ಇವನ್ನಿರತ್ತಿಲ್ ನಿರುಪಾಧಿಕ ಸರ್ವಶೇಷಿಯಾಯ್, ನಿರುಪಾಧಿಕ

ಬಂದು, ಸೀತೆಯನ್ನು ತನ್ನ ಸಂಕಲ್ಪಾನುಸಾರ ಕಳೆದುಕೊಂಡಿರುತ್ತಾನೆ. ಹಾಗೆಯೇ ಸುಗ್ರೀವನೂ, ನೀಚನಾದ ರಾವಣನ ಪ್ರಥಮದರ್ಶನದಲ್ಲೇ, ಇವನೇ ತನ್ನ ಪರಮ ಮಿತ್ರನ ದಾರಚೋರನು ಎಂದು ಕೋಪಗೊಂಡು, ಒಂದೇ ಸಲಕ್ಕೆ ನೆಗೆದು ರಾವಣ ನಲ್ಲಿಗೆ ಸೇರಿ ಎದೆಯ ಮೇಲೆ ಗುದ್ದಲು, ರಾವಣನ ಮಕುಟವು ಕೆಳಗೆ ಬಿದ್ದು, ಅನಂತರ ಇಬ್ಬರಿಗೂ ದ್ವಂದ್ವಯುದ್ಧ ಪ್ರಾರಂಭವಾಗಲು, ಶತ್ರುಸೈನ್ಯ ಮಧ್ಯೇ ಒಬ್ಬನೇ ಹೀಗೆ ಯುದ್ಧ ಮಾಡಿದುದು ತುಂಬಾ ಅಪಾಯಕರವಾದುದಾಗಿ ತಪ್ಪಿಸಿ ಕೊಂಡು ಸುಗ್ರೀವನು ಶ್ರೀರಾಮಸನ್ನಿಧಿಗೆ ಬಂದು ಸೇರಲು, ಶ್ರೀರಾಮಪ್ರಭುವು ಹೇಳುತ್ತಾನೆ:—**"ತ್ವಯಿಕಿಂಚಿತ್ಸಮಾಪನ್ನೇ ಕಿಂಕಾರ್ಯಂ ಸೀತಯಾಮಮ"** **"ಈಗ ಇಷ್ಟು** ಮಹಾಪ್ರಯತ್ನವೂ ಸೀತೆಗಾಗಿಯೇ, ಈ ಪ್ರಯತ್ನದಲ್ಲಿ ಓ ಸುಗ್ರೀ ವನೇ, ನಿನಗೂ ಏನಾದರೂ ಸ್ವಲ್ಪ ವಿಪತ್ತು ಪ್ರಾಪ್ತವಾದುದಾದರೆ, ನನಗೆ ಸೀತೆ ಯಿಂದೇನು?" ಎಂದು ಹೇಳಿಕೊಂಡಿರುತ್ತಾನೆ. ಆದುದರಿಂದ ಪ್ರಪನ್ನರು ಸರ್ವೇ ಶ್ವರನಿಗೆ ತುಂಬಾ ಅಭಿಮತರು. ಆದುದರಿಂದ ಅವರನ್ನು (೧) **"ಉದಾರಾ ಸ್ಸರ್ವ ಏವೈತೇ ಜ್ಞಾನೀತ್ವಾತ್ಮೈವ ಮೇ ಮತಂ"** ಪರಮೋದಾರರೆಂದೂ (೨) **"ಯೋಮದ್ಭಕ್ತಸ್ಸಮೇ ಪ್ರಿಯಃ"** ಅಂತವನು ತುಂಬಾ ಪ್ರಿಯನೆಂದೂ ಸರ್ವೇಶ್ವರನು ಕೊಂಡಾಡಿರುತ್ತಾನೆ.

ಪ್ರಪನ್ನನ ವಿಷಯದಲ್ಲಿ ಶ್ರಿಯಃಪತಿಯು ಮಾಡುವ ಅನುಗ್ರಹ ಪರಂಪರೆಗಳು.

ಮುಂದೆ "ಇವನ್ನಿರತ್ತಿಲ್" ಎಂದು ಪ್ರಾರಂಭಿಸಿ ಪ್ರಪನ್ನನಿಗೆ ಶ್ರಿಯಃ ಪತಿಯು, ನಿರ್ಯಾಣಕ್ಕೆ ಪೂರ್ವಭಾವಿಯಾಗಿಯೂ, ನಿರ್ಯಾಣಕಾಲದಲ್ಲೂ, ಆಮೇಲೂ ಮಾಡುವ ಉಪಕಾರ ಪರಂಪರೆಗಳನ್ನೆಲ್ಲಾ ಒಂದು ದೊಡ್ಡ ವಾಕ್ಯದ ಮೂಲಕ ಪ್ರಮಾಣಗಳಿಂದಲೂ, ತದನುಗುಣವಾದ ಆಚಾರ್ಯಸೂಕ್ತಿಗಳಿಂದಲೂ ತಿಳಿಸು ತ್ತಾರೆ. ವಾಕ್ಯವು ದೊಡ್ಡದಾದುದರಿಂದ ಭಿನ್ನವಾಕ್ಯಗಳಾಗಿ ಭಾವಿಸಬಹುದು. (೧) **ಇವನ್ನಿರತ್ತಿಲ್** - ಇಂತಹ ಪ್ರಪನ್ನನ ವಿಷಯದಲ್ಲಿ, **ನಿರುಪಾಧಿಕ ಸರ್ವ ಶೇಷಿಯಾಯ್** - ತಂದೆ ಮೊದಲಾದವರ ಹಾಗೆ ಸೋಪಾಧಿಕಶೇಷಿಯಲ್ಲದೆ, ಸಹಜವಾಗಿಯೇ ನಮಗೆ ಶೇಷಿಯಾಗಿ, ನಾವು ಸ್ವತಃ ಶೇಷಭೂತರಾದುದರಿಂದ,

(೧) ಗೀ. ೭.೧೮. (೨) ಗೀ. ೧೦.೧೬.

ಸ್ವತಂತ್ರನಾಯ್, ಸತ್ಯಸಙ್ಕಲ್ಪನುಮಾನ ಸರ್ವೇಶ್ವರನ್ ಸರ್ವಭಯಙ್ಗಳು ಕ್ಕುಮ್ ಕಾರಣಮಾನ ನಿಗ್ರಹ ಸಙ್ಕಲ್ಪತ್ತೈ (೧) "ತದಧಿಗಮ ಉತ್ತರ ಪೂರ್ವಾಘಯೋಃ ರಶ್ಲೇಷವಿನಾಶೌ, ತದ್ವ್ಯಪದೇಶಾತ್" ಎನ್ಗಿರಪಡಿಯೇ ಸದ್ವಾರಕ ಪ್ರಪತ್ತಿನಿಷ್ಠನುಕ್ಕು ಉಪಾಸನ ಪ್ರಾರಂಭತ್ತಿಲ್ಪೋಲೆ ಪ್ರಪತ್ತಿ ವಾಕ್ಯೋಚ್ಚಾರಣತ್ತಿಲ್ ಪ್ರಥಮಕ್ಷಣತ್ತಿಲೆ ವಿಲಕ್ಕಿ, (೨) ಇವನ್ನೈಯುಮ್

ಆತನು ನಮಗೆ ನಿರುಪಾಧಿಕ ಶೇಷಿಯು, ನಿರುಪಾಧಿಕ ಸ್ವತಂತ್ರನಾಯ್ - ಆತನು ಇನ್ನಾರಿಗೂ ಅಧೀನನಲ್ಲದೆ, ನಿರುಪಾಧಿಕ ಸ್ವತಂತ್ರನಾಗಿ, ಸತ್ಯ ಸಂಕಲ್ಪನಾದ ಸರ್ವೇಶ್ವರನು ಸಮಸ್ತ ಭಯಗಳಿಗೂ ಕಾರಣಭೂತವಾದ ಸರ್ವೇಶ್ವರನ ನಿಗ್ರಹ ಸಙ್ಕಲ್ಪವನ್ನು, ಇದಕ್ಕೆ ಮುಂದೆ ಇರುವ ವಿಲಕ್ಕಿ ಎಂಬುವ ದರಲ್ಲಿರುವ ಕ್ರಿಯೆಯೊಂದಿಗೆ ಅನ್ವಯವು, "ತದಧಿಗಮೇ - ಆ ಬ್ರಹ್ಮವಿದ್ಯೆಯ ಅನುಷ್ಠಾನರೂಪವಾದ ಉಪಾಸನೆಯು ಉಂಟಾದ ಒಡನೆಯೇ, ಉತ್ತರಪೂರ್ವಾಘಯೋಃ ಅಶ್ಲೇಷವಿನಾಶೌ - ವಿದ್ಯಾರಂಭವಾದವೇಲೆ ಪ್ರಾಪ್ತವಾಗುವ ಪುಣ್ಯ ಪಾಪಗಳು ಲೇಪಿಸದೇ ಇರೋಣವೂ, ವಿದ್ಯಾರಂಭಕ್ಕೆ ಮುಂಚೆಯಿದ್ದ ಪುಣ್ಯ ಪಾಪಗಳ ನಾಶವೂ, ಉಂಟಾಗುತ್ತವೆ; ಏಕೆಂದರೆ ತದ್ವ್ಯಪದೇಶಾತ್ - ಹಾಗೆ ಶ್ರುತಿಯಲ್ಲಿ ಹೇಳಿರುತ್ತದೆ. ಯಾವ ಶ್ರುತಿಯಲ್ಲಿ ಎಂದರೆ, "ತದ್ಯಥೈಷೀಕಾತೂಲ ಮಗ್ನೌ ಪ್ರೋತಂ ಪ್ರದೂಯೇತ ಏವಂ ಹಾಸ್ಯಸರ್ವೇ ಪಾಪ್ಮಾನಃ ಪ್ರದೂಯಂತೇ" (ಛಾಂ. ೪. ೧೪ ೩.) ಇಷೀಕವೆಂಬ ಮುಂಜೇ ಹುಲ್ಲಿನಲ್ಲಿರುವ ಹತ್ತಿಯು ಅಗ್ನಿಯಲ್ಲಿಟ್ಟರೆ ಒಡನೆ ಎಲ್ಲವೂ ಹತ್ತಿ ಹೇಗೆ ಉರಿದುಹೋಗುತ್ತೆಯೋ, ಹಾಗೆಯೇ ಉಪಾಸನಪೂರ್ವಕವಾದ ಪ್ರಾಣಾಗ್ನಿಹೋತ್ರಾನುಷ್ಠಾನದಿಂದ ಆತನ ಸರ್ವ ಪಾಪಗಳೂ ಉರಿದುಹೋಗುತ್ತವೆ ಎಂಬ ಮತ್ತು "ತದ್ಯಥಾ ಪುಷ್ಕರ ಪಲಾಶ ಆಪೋನಶ್ಲಿಷ್ಯನ್ತೇ ಏವಮೇವಂ ವಿದಿಪಾಪಂ ಕರ್ಮ ನ ಶ್ಲಿಷ್ಯತೇ" (ಛಾಂ. ೪. ೧೪. ೩) ಪದ್ಮಪತ್ರದಲ್ಲಿ ನೀರು ಹೇಗೆ ಅಂಟುವದಿಲ್ಲವೋ ಹಾಗೆಯೇ ಬ್ರಹ್ಮವಿತ್ತಾದ ಉಪಾಸಕನಲ್ಲಿ ಪುಣ್ಯಪಾಪಗಳು ಅಂಟುವದಿಲ್ಲವು, ಎಂಬ ಶ್ರುತಿಗಳು ಹೇಳುತ್ತವೆ." ಎನ್ಗಿರಪಡಿಯೇ-ಎಂದು ಹೇಳಿರುವ ಹಾಗೆ; ಸದ್ವಾರಕ ಪ್ರಪತ್ತಿನಿಷ್ಠನುಕ್ಕು - ಭಕ್ತ್ಯುಪಾಯನಿಷ್ಠನಾದ ಉಪಾಸಕನಿಗೆ, ಉಪಾಸನ ಪ್ರಾರಂಭತ್ತಿಲ್ಪೋಲೆ-ಉಪಾಸನ ಪ್ರಾರಂಭದಲ್ಲಿ ಹೇಗೋ ಹಾಗೆಯೇ, ಪ್ರಪತ್ತಿ ವಾಕ್ಯೋಚ್ಚಾರಣತ್ತಿಲ್ - ಚರಮನ್ಯಾಸ ರೂಪವಾದ ಪ್ರಪತ್ತಿ ಮಾತ್ರವಾದ

---

(೧) ಬ್ರ. ಸೂ. ೪. ೧. ೧೩.

ದ್ವಯೋಚ್ಚಾರಣವಾದ. ಪ್ರಥಮಕ್ಷಣತ್ತಿಲೇ ಎಂಬಲ್ಲಿ ಕ್ಷಣದಲ್ಲೇ ಹೀಗೆ ಹೇಳಿರುವುದ ರಿಂದ ಉಕ್ತಿನಿಷ್ಠೆಯುಳ್ಳವರಲ್ಲೇ ಆಚಾರ್ಯಮೂಲಕ ಈಗ ಪ್ರಪನ್ನರಾಗುವ ಸಾಧಾರಣ ವಾಗಿ ಪ್ರಪತ್ತಿಯೆಂಬುದು ಸೂಚಿತವಾಯಿತು. ವಿಲಕ್ಕಿ-ಯೋಗಮುಳ್ಳ; ಇದು ಪ್ರಥಮೋಪಕಾರದ, ಇಲ್ಲಿ ನಿರುಪಾಧಿಕ ಸರ್ವಶೇಷಿ ಎಂದು ವಿಶೇಷಣವನ್ನು ಸರ್ವೇಶ್ವರನಿಗೆ ಕೊಟ್ಟಿರುವದು, ನಾವು ಸ್ವತಃ ದಾಸಭೂತರಾದ ಪ್ರಯುಕ್ತ, ತಾನೇ ಸ್ವತಂತ್ರನಿ ರಕ್ಷಿಸುವ ಭಾರವು ಸರ್ವಶೇಷಿಯದೆಂದೂ, ಹಾಗೆ ರಕ್ಷಿಸುವದು ತನಗೇ ಪ್ರಯೋಜನವೆಂದೂ ಸೂಚಿಸುವದಕ್ಕಾಗಿ ಎಂದು ಭಾವಿಸತಕ್ಕದ್ದು. ನಿರುಪಾಧಿಕ ಸ್ವತಂತ್ರನಾಗಿ ಎಂದು ಹೇಳಿರುವದರಿಂದ ಗುರುತರ ಭಕ್ತಿನಿಷ್ಠಾಪೇಕ್ಷೆಯಾ ಲಘು ತರ ಭರನ್ಯಾಸಕ್ಕೆ ಕ್ಷಿಪ್ರಫಲಪ್ರದತ್ವವು ಸರಿಯೋ ಎಂಬಾಕ್ಷೇಪಕ್ಕೆ ಕಾರಣವಿಲ್ಲವು; ಮನಸ್ಸು ಕರಣೆಯನ್ನು ತೋರಿಸಲು ಸಾಮರ್ಥ್ಯವಿದ್ದರೂ ಸ್ವಾತಂತ್ರ್ಯವಿಲ್ಲದಿದ್ದರೆ ಕಾರ್ಯಕಾರಿಯಾಗದುದರಿಂದ ಹಾಗೆ ಪ್ರಯೋಗವು. “ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ” ಎಂಬ ಭರನ್ಯಾಸಕಾಲದ ವಾಗ್ದಾನವು ಎಂದಿಗೂ ತಪ್ಪಿ ದ್ದಲ್ಲವು. “ಅನೃತಂ ನೋಕ್ತಪೂರ್ವಂಮೇ ನಚವಕ್ಷ್ಯೇ ಕದಾಚನ” ಎಂದು ಹೇಳಿರುವ ಹಾಗೆ ಆಡಿದ ಭಾಷೆಗೆ ತಪ್ಪುವವನಿಲ್ಲವೆಂದು ತೋರಿಸುವದಕ್ಕಾಗಿ ಸತ್ಯ ಸಂಕಲ್ಪನೆಂಬ ಪ್ರಯೋಗವು. ವೇದಾಂತವಿದ್ಯೆಗಳಾದ ಉಪಾಸನೆಗಳಿಗೆ ಯಾವ ಫಲವೋ ನ್ಯಾಸವಿದ್ಯೆಗೂ ಅದೇ ಫಲವೆಂದು “ವಿಕಲ್ಪೋಽವಿಶಿಷ್ಟಫಲತ್ವಾತ್” ಎಂಬ ಬ್ರಹ್ಮಸೂತ್ರಪ್ರಕಾರ ಏರ್ಪಡುವದರಿಂದ, “ತದಧಿಗಮೇ” ಎಂಬ ಸೂತ್ರ ವೂ ನ್ಯಾಸವಿದ್ಯೆಗೂ ಅನ್ವಯಿಸುತ್ತದೆಂಬಭಿಪ್ರಾಯದಿಂದ. “ಉಪಾಸನ ಪ್ರಾರಂ ಭತ್ತಿಲ್ಪೋಲೆ” ಎಂಬ ಪ್ರಯೋಗವು. ಕೆಲವರು ಶ್ರೀ ಯತಿರಾಜರು ರಚಿಸಿರುವ ಶರಣಾಗತಿ ಗದ್ಯವನ್ನು ಪಠಿಸಿ, ಪ್ರತಿದಿನವೂ ಸ್ವಾಮಿಸನ್ನಿಧಿಯಲ್ಲಿ ಶರಣಾಗತಿ ಯನ್ನು ಮಾಡಿದರೇನೆ ಪಾಪಗಳ ಪರಿಹಾರವು ಇಲ್ಲವಾದರೆ ಇಲ್ಲವೆಂಬಭಿಪ್ರಾಯ ಪಡುತ್ತಾರೆ; ಇದು ಸರಿಯಲ್ಲವೆಂಬುವದು, ಈ ಪಾಪಗಳನ್ನು ಪ್ರಥಮಕ್ಷಣತ್ತಿಲೇ ವಿಲಕ್ಕಿ ಎಂಬುವದರಿಂದ ಸಿದ್ಧವು. ಇಲ್ಲಿ ಪ್ರಥಮ ಕ್ಷಣತ್ತಿಲೇ ಎಂಬಲ್ಲಿ ಸರಿ ಯಾಗಿ ಬಾಲ್ಯನಾಗಲಿ ಪಾಮರನಾಗಲಿ ಯಾವ ಕ್ಷಣವೆಂಬಭಿಪ್ರಾಯದಿಂದಲ್ಲವು; ಭರನ್ಯಾಸವಾದ ಒಡನೆಯೇ ಎಂಬರ್ಥದಲ್ಲಿ ಉಪಯೋಗಿಸಿದುದಾಗಿದೆ, ಏಕೆಂದರೆ ಒಂದು ಕ್ಷಣದಲ್ಲೇ ಭರನ್ಯಾಸ ಪ್ರಕ್ರಿಯೆಯೆಲ್ಲಾ ಸಾಂಗವಾಗಿ ನಡೆಯಲಾರದುದ ರಿಂದ ಕ್ಷಿಪ್ರವೆಂಬಭಿಪ್ರಾಯದಲ್ಲಿ ಕ್ಷಣಶಬ್ದವು ಉಪಯೋಗಿಸಲ್ಪಟ್ಟಿರುತ್ತದೆ. ಅದೂ ಅಲ್ಲದೆ ಉಪಾಸನಪ್ರಾಯವಾದುದು ಅನುವೃತ್ತಿಯುಂಟು, ಹಾಗಿದ್ದರೂ ಉಪಾಸನ ಪ್ರಾರಂಭ ದಲ್ಲೇ ಪ್ರತಿಬಂಧಕ ಪಾಪನಾಶವೆಂದು ಹೇಳಿರುವಾಗ, ಇದು ಅನುವೃತ್ತಿಯಿಲ್ಲದೆ ಸಕೃದನುಷ್ಠೇಯವಾಗಿರುವದರಿಂದಲೂ ಹಾಗೆ ಪ್ರಯೋಗವು. ಭರನ್ಯಾಸವಾದ

ಇವನುಡೈಯ ಅನುಬನ್ಧಿಗಳೈಯುಮ್ ನಿತ್ಯಸೂರಿಗಳ್ ಕೋರ್ವೈಯಿಲೇ ಕೋತ್ತಾಲುಮ್ ಆವಲ್‌ಕೆಡಾದೆ ಆಶ್ರಿತಾಪರಾಧ ರಾಶಿಗಳಿಲುಣ್ಡದು ರುಕ್ಕಾಟ್ಟಾದೇ ವಯಿರುದಾರಿಯಾಯ್, ಅನುಬಂಧಿಗಳುಡೈಯ ಬುದ್ಧಿಪೂರ್ವಾಪರಾಧಙ್ಗಳುಕ್ಕುಮ್ ಅನುತಾಪಾದಿಗಳಾಲೇ ನಿಸ್ತಾರಮ್ ಪಣ್ಣಿವಿಕ್ಕುಂಪಡಿಕ್ಕೀಡಾದ ಅನುಗ್ರಹ ಸಙ್ಕಲ್ಪತ್ತೈಪ್ಪಣ್ಣಿ,

---

ಉತ್ತರಕ್ಷಣದಲ್ಲೇ, ಈತನ ಪ್ರಾರಬ್ಧದ ವಿನಾ ಪೂರ್ವಾಘಕ್ಕೆಲ್ಲಾ ನಾಶವೂ, ಉತ್ತರಾಘಕ್ಕೆ ಅಬುದ್ಧಿಪೂರ್ವಕವಾದುದಕ್ಕೆ ನಿರ್ಲೇಪವೂ ಹೇಳಲ್ಪಟ್ಟಿತು; ಇದು ಅಪರಾಧ ಪರಿಹಾರಾಧಿಕಾರದಲ್ಲಿ **ಪ್ರಾರಬ್ಧೇತರ** ಎಂಬ ಶ್ಲೋಕದಲ್ಲೂ ಅಧಿಕಾರದ ಉಪಪಾದನದಲ್ಲೂ ಹೇಳಲ್ಪಟ್ಟಿರುತ್ತದೆ. (೨) ಎರಡನೆಯ ಉಪಕಾರವೇನೆಂಬುದನ್ನು **ಇವನೈಯುಮ್** ಎಂದಾರಂಭಿಸಿ **ಸಙ್ಕಲ್ಪತ್ತೈಪ್ಪಣ್ಣಿ** ಎಂದು ಪೂರೈಸಿ ಹೇಳುತ್ತಾರೆ. ಸರ್ವೇಶ್ವರನನುಗ್ರಹವು ಪ್ರಪನ್ನನಿಗೆ ಮಾತ್ರವೇ ಅಲ್ಲವು. ಪ್ರಪನ್ನನ ಭರನ್ಯಾಸದಲ್ಲಿ ಅಂತರ್ಗತರಾದ ದಾರ ಪುತ್ರಾದಿಗಳೂ ಕೂಡ ಅನುಗ್ರಹವನ್ನು ಹೊಂದುವರೆಂದು ಹೇಳುತ್ತಾರೆ:— **ಇವನೈಯುಮ್ ಇವನುಡೈಯುವನುಬನ್ಧಿಗಳೈಯುಮ್** - ಈ ಪ್ರಪನ್ನನನ್ನೂ ಮತ್ತು ಈತನ ಭರನ್ಯಾಸದಲ್ಲಿ ಅಂತರ್ಭೂತರನ್ನೂ, ನಿತ್ಯಸೂರಿಗಳ, **ಕೊರ್ವೈಯಿಲ್** - ಪಙ್ಕ್ತಿಯಲ್ಲಿ, **ಕೋತ್ತಾಲುಮ್** - ಸೇರಿಸಿದರೂ, **ಆವಲ್ ಕೆಡಾದೇ** - ಶ್ರದ್ಧಾತಿಶಯವು ಕೆಡದೆ, **ಆಶ್ರಿತಾಪರಾಧರಾಶಿಗಳಿಲ್** - ಆಶ್ರಯಿಸಿದ ಆತ್ಮಾತ್ಮೀಯ ವರ್ಗದ ಪಾಪಸಮೂಹಗಳಲ್ಲಿ, **ಉಣ್ಡದುರುಕಾಟ್ಟಾದೆ** - ಭುಜಿಸಿದುದನ್ನು ತೋರ್ಪಡಿಸದೆ ಎಂದರೆ ಆ ಪಾಪಸಮೂಹಗಳನ್ನೆಲ್ಲಾ ನುಂಗಿದುದನ್ನು, ನಾಶಮಾಡಿದುದನ್ನು ಹೊರಪಡಿಸದೆ, **ವಯಿರುದಾರಿಯಾಯ್** - ಹೊಟ್ಟೆ ತುಂಬಿಕೊಳ್ಳುವನಾಗಿ, ಆಶ್ರಿತಾಪರಾಧಗಳನ್ನು ಬೇಸರವಿಲ್ಲದೆ ಎಷ್ಟು ನುಂಗಿದರೂ ತುಂಬದ ಹೊಟ್ಟೆಯುಳ್ಳವನಾಗಿ, **ಅನುಬಂಧಿಗಳೊಡೈಯ** - ಈ ಪ್ರಪನ್ನನ ಆತ್ಮೀಯರ, **ಬುದ್ಧಿಪೂರ್ವಾಪರಾಧಙ್ಗಳುಕ್ಕು** - ಬುದ್ಧಿಪೂರ್ವಕ ಮಾಡಿದ ಪಾಪಗಳಿಗೆ, **ನಿಸ್ತಾರಮ್ ಪಣ್ಣಿವಿಕ್ಕುಮ್ ಪಡಿ** - ಪರಿಹಾರವನ್ನು ಮಾಡಿಸುವ ಹಾಗೆ, ಹೇಗೆ ಪರಿಹಾರವೆಂದರೆ, ಅನುತಾಪ, ಉಪರಮ, ಪ್ರಯತನ, ಪ್ರಾಯಶ್ಚಿತ್ತಗಳ ಮೂಲಕವಾಗಿ ಪರಿಹಾರ ಮಾಡಿಕೊಳ್ಳುವದಕ್ಕೆ, **ಈಡಾನ** - ಅನುಗುಣವಾದ, **ಸಙ್ಕಲ್ಪತ್ತೈಪ್ಪಣ್ಣಿ** - ಸಂಕಲ್ಪವನ್ನು ಮಾಡಿ; ಸರ್ವೇಶ್ವರನು ತನ್ನ ತಿರುವಡಿಯನ್ನಾಶ್ರಯಿಸಿದ ಪ್ರಪನ್ನನಿಗೆ ಮಾತ್ರವೇ ಅಲ್ಲದೆ ಆತನ ಭರನ್ಯಾಸದಲ್ಲಿ ಅಡಗಿದ ಅನುಬಂಧಿಗಳಿಗೂ ಕೂಡ ಅನುಗ್ರಹ

ಮಾಡಬೇಕೆಂದು ಕಂಕಣಬದ್ಧನಾಗಿ, ಶ್ರದ್ಧಾಯುಕ್ತನಾಗಿದ್ದಾನೆಂದು ಹೇಳುತ್ತಾರೆ:—ಕಥಂಚಿದುಪಕಾರರೂಪದಲ್ಲಿ ತನ್ನನ್ನಾಶ್ರಯಿಸಿದುದರಿಂದ ಸಂತೋಷಗೊಂಡವನಾಗಿ, ಆತನ ಮತ್ತು ಆತನನುಬಂಧಿಗಳ **"ನಸ್ಮರತ್ಯಪಕಾರಾಣಾಶತಮಪ್ಯಾತ್ಮವತ್ತಯಾ"** (ರಾ ಅಯೋಧ್ಯಾ) ಎಂದು ಹೇಳಿರುವ ಹಾಗೆ ಅಸಂಖ್ಯಾಕವಾದ ಪಾಪಸಮೂಹಗಳನ್ನು ಪರಿಗಣಿಸದೆ ಅವುಗಳನ್ನೆಲ್ಲಾ ನಾಶಮಾಡಿಬಿಡುವನು. ಈ ಅಭಿಪ್ರಾಯವನ್ನು, **ಉಣ್ಣದುರು ಕಾಟ್ಟಾದೆ ವಯರುದಾರಿಯಾಯ್** - ಇಂತವರ ಪಾಪರಾಶಿಗಳನ್ನು ಎಷ್ಟು ತಿಂದರೂ ಆತನಿಗೆ, ಗೋಪಿಯರ ಮನೆಯ ಬೆಣ್ಣೆ ತಿಂದಹಾಗೆ ಹೊಟ್ಟೆ ತುಂಬದೆಂದು ಹೇಳಿದ್ದಾರೆ. ಸ್ವಾಮಿಯವರು ಈ ಅಭಿಪ್ರಾಯವನ್ನೇ ದಯಾಶತಕದಲ್ಲಿ ಉಪಪಾದಿಸಿರುತ್ತಾರೆ :—

"ಮಯಿತಿಷ್ಠತಿ ದುಷ್ಕೃತಾಂ ಪ್ರಧಾನೇ
ಮಿತದೋಷಾ ನಿತರಾ ನ್ವಿಚನ್ವಿತೀ ತ್ವಂ ।
ಅಪರಾಧ ಗಣೈರಪೂರ್ಣ ಕುಕ್ಷಿಃ
ಕಮಲಾಕಾನ್ತದಯೇ ಕಥಂ ಭವಿತ್ರೀ ॥ ೨೯ ॥

"ಓ ಲಕ್ಷ್ಮೀಕಾಂತನಾದ ಶ್ರೀನಿವಾಸನ ದಯೆಯೇ, ಲೆಖ್ಖವಿಲ್ಲದೆ ಅಪರಾಧ ಸಮೂಹವನ್ನು ಮಾಡಿದ ನಾನು ಮುಖ್ಯವಾಗಿ ಇರುವಾಗಲೇ, ಅಲ್ಪಸ್ವಲ್ಪ ಅಪರಾಧಮಾಡಿದವರನ್ನು ನೀನು ಹುಡುಕಿಕೊಂಡು ಹೋಗುತ್ತೀಯೆ. ಅಪರಾಧ ಸಮೂಹಗಳಿಂದಲೂ ತುಂಬದ ಹೊಟ್ಟೆಯನ್ನು ಹೊಂದಿದವನು ನೀನು ಹೇಗಾದೆಯೋ ತಿಳಿಯದು' ಎಂಬುವದು ಈ ಶ್ಲೋಕಾಭಿಪ್ರಾಯವು. ಸರ್ವೇಶ್ವರನ ಅನುಗ್ರಹ ಮಾಹಾತ್ಮ್ಯೆಯನ್ನು ಹೀಗೆ ಕೊಂಡಾಡಿರುತ್ತಾರೆ. **ನಿತ್ಯಸೂರಿಗಳ ಕೋರ್ವೈಯಲಿಕೋತ್ತಾಲುಮ್** ಎಂದು ಏತಕ್ಕೆ ಹೇಳಲ್ಪಟ್ಟಿತೆಂದರೆ, **ಶರಣಾ** ಗತಿ ಕಾಲದಲ್ಲಿ ಪ್ರಪನ್ನನು ಆತ್ಮಾತ್ಮೀಯರನ್ನು ಕುರಿತು ಶರಣಾಗತಿಯನ್ನು ಮಾಡಿದನು. ಅದಕ್ಕೆ ಕಟ್ಟುಬಿದ್ದು **"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ। ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ"** ಎಂದು ಹೇಳಿರುವ ಹಾಗೆ ಅಭಯವನ್ನು **ದೇಹಿ** ಎಂದವರಿಗೆ **ದದಾಮಿ** ಎಂದು ಹೇಳಿದ ಉದಾರಿಯು ಸರ್ವೇಶ್ವರನು, ಅನಂತರ ನೋಡುವಾಗ ಇವನೂ, ಈತನನುಬಂಧಿಗಳೂ ತನ್ನ ಕೃಪೆಗೆ ಅಷ್ಟು ಯೋಗ್ಯರಲ್ಲದೇ ಇದ್ದಾರಲ್ಲಾ ಎಂದೇನಾದರೂ ಸರ್ವೇಶ್ವರನು ಯೋಚಿಸಿಯಾನೋ ಎಂದರೆ, ಹಾಗೆ ಎಂದಿಗೂ ಇಲ್ಲವು. ಅವರನ್ನು ನಿತ್ಯಸೂರಿಗಳ ಪಜ್'ಗೆ ಸೇರಿಸಿದುದು ಆ ಶರಣಾಗತಿಯನ್ನನುಷ್ಠಿಸಿದ ದಿನವೇ. ಇದು ಸಿದ್ಧವು ಎಂದು ತಿಳಿಸುವದಕ್ಕಾಗಿಯೇ **"ಕೋರ್‌ವೈಯಿಲೇ ಕೋತ್ತಾಲುಮ್ ಆನಿಲ್ ಕೆಡಾದೇ"** ಎಂಬ ಪ್ರಯೋಗವು. ವಾಗ್ದಾನ ಮಾಡಿದ್ದೇನೋ

(೩) "ವಿಣ್ಣುಲಗವ್ ತರುವಾನಾಯ್ ವಿರೈಕಿನ್ರಾ಼ನ್" ಎಙ್ಗಳ್ ಪಡಿಯೇ ಇವನಿಕ್ಕೈನ್ವಿಳಂಬಕ್ಕುಕ್ಕು ತಾನ್ ಸಾನುಶಯನಾಯ್ ತ್ವರಿತ್ತು

ಉಂಟು, ಇಷ್ಟು ಕೆಟ್ಟವರೆಂದು ಯೋಚಿಸಲಿಲ್ಲವೆಂದೇನಾದರೂ ಈತನಿಗೆ ಅವರ ವಿಷಯದಲ್ಲಿ ಶ್ರದ್ಧೆಯು ಕಮ್ಮಿಯಾದೀತೋ? ಎಂದರೆ ಹಾಗೆ ಎಂದಿಗೂ ಶ್ರದ್ಧೆಯು ಕುಂದದು ಎಂದು ಹೇಳುವದಕ್ಕಾಗಿ, ಅವಿಲ್ ಕೆಡಾದೆ ಎಂದು ಹೇಳಿರುತ್ತಾರೆ. ಈ ಶ್ರದ್ಧೆಯಿಂದ ಅವರುಗಳಿಗೆ ಎಷ್ಟು ಪಾಪರಾಶಿ ತಾನೇ ಇರಕೂಡದು, ಅವೆಲ್ಲವನ್ನೂ ಪಕಾಪೋಶನದಲ್ಲಿ ನುಂಗಿಬಿಟ್ಟು ಇನ್ನೂ ಹೊಟ್ಟೆ ತುಂಬಲಿಲ್ಲವೆಂದು ಹೇಳುವ ಮಹಾ ಕೃಪಾಳುವು ಎಂದು ಹೇಳಿರುತ್ತಾರೆ ಈ ಪ್ರಪನ್ನನಿಗೂ ತದನುಬಂಧಿಗಳಿಗೂ ಬುದ್ಧಿಪೂರ್ವೋತ್ತರಾಘಗಳು ಒಂದು ವೇಳೆ ಪ್ರಾಪ್ತವಾದರೆ ಅನುತಾಪಾದಿಗಳ ಮೂಲಕ ಪರಿಹಾರಮಾಡಿಸಿಯೋ, ಅಲ್ಪದಂಡನೆಯ ಮೂಲಕವೋ, ಹೇಗೋ, ಅಂತು ಸರ್ವಾಪರಾಧ ಪರಿಹಾರ ಮೂಲಕ ಅನುಗ್ರಹ ಮಾಡಬೇಕೆಂಬ ಸಂಕಲ್ಪ ಮಾಡುತ್ತಾನೆಂಬುವದು ಎರಡನೆಯ ಉಪಕಾರವು.

ಮೂರನೆಯ ಉಪಕಾರವು :—"ವಿಣ್ಣುಲಗವ್ - ಪರಮಪದವನ್ನು, ತರುವಾನಾಯ್ - ಕೊಡಲಿಚ್ಛೆಯುಳ್ಳವನಾಗಿ, ವಿರೈಕಿನ್ರಾನ್ - ನಾನು ತ್ವರೆ ಪಡಿಸುವದಕ್ಕೆ ಬದಲಾಗಿ ಆತನೇ ತ್ವರೆ ಪಡಿಸುತ್ತಾನೆ" ಎಙ್ಗಳ್ ಪಡಿಯೇ - ಎಂದು ಹೇಳಿರುವ ಹಾಗೆ, ಇವನಿಕ್ಕೈನ್ - ಈ ಪ್ರಪನ್ನನು ಅಪೇಕ್ಷಿಸಿದ ವಿಳಂಬಕ್ಕೆ, ತಾನ್ ಸಾನುಶಯನಾಯ್ - ಸರ್ವೇಶ್ವರನು ಪಶ್ಚಾತ್ತಾಪವನ್ನು ಹೊಂದಿದವನಾಗಿ, ತ್ವರಿತ್ತು - ಮೋಕ್ಷ ಕೊಡಲು ಅವಸರಪಟ್ಟು; ಸರಿಯಾಗಿ ನೋಡಿದರೆ ಒಬ್ಬನನ್ನು ನಾವು ಆಶ್ರಯಿಸಿದರೆ, ನಾವು ಅವನಲ್ಲಿಗೆ ಪದೇಪದೇ ಹೋಗಿ, ಜ್ಞಾಪಕ ಕೊಟ್ಟು, ಕೆಲಸದ ಫಲವುಂಟಾಗುವ ತನಕವೂ ತ್ವರೆಗೊಳಿಸಬೇಕು; ಆದರೆ ಸರ್ವೇಶ್ವರನನ್ನು ಒಂದು ಕ್ಷಣಕಾಲದ ಭರನ್ಯಾಸ ಮೂಲಕ ಆಶ್ರಯಿಸಿಬಿಟ್ಟರೆ, ಮುಂದಕ್ಕೆ ನಾವೇನೂ ಮಾಡತಕ್ಕದ್ದಿಲ್ಲವು, ಸರ್ವಭಾರವನ್ನೂ ಅನಂತರ ತಾನೇ ವಹಿಸಿ, ಈತನ ಮನೋರಥವು ಸಿದ್ಧಿಸುವ ತನಕ ತಾನೇ ಸರ್ವ ಪ್ರಯತ್ನ ಮಾಡುತ್ತಾ, ಆತನಿಗೆ ವಿಳಂಬದಿಂದ ಮೋಕ್ಷಪ್ರಾಪ್ತಿಯಾಗಲಿ ಎಂದಿದ್ದರೂ ಬಿಡದೆ ಸರ್ವೇಶ್ವರನೇ ತ್ವರೆ ಮಾಡುವನೆಂದು ಹೇಳಲ್ಪಟ್ಟಿತು. ಮೇಲಿನ ಪಾಶುರವನ್ನು ಈ ಅಭಿಪ್ರಾಯ ಸಮರ್ಥನೆಗಾಗಿ ಉದಾಹರಿಸಿರುತ್ತಾರೆ. ಆ ಪಾಶುರವ್ಯಾವುದೆಂದರೆ :—

(೩) ತಿರುವಾಯ್ಮೊಳಿ ೧೦. ೬. ೩.

(೪) "ಇರುಳ್ ತರುಮಾಞಾಲತ್ತುಳಿನಿ ಪ್ಪಿರವಿಯಾರ್ ವೇಣ್ಡೇನ್"

"ನಣ್ಣಿನ ನಾರಾಯಣನ್ನೈ ನಾಮಙ್ಗಳ್ ಪಲಶೊಲ್ಲಿ,
ಮಣ್ಣುಲಗಿಲ್ ವಳವಿುಕ್ಕ ವಾಟ್ಟಾಱಾನ್ ವನ್ದಿನ್ರು ।
ವಿಣ್ಣುಲಗಮ್ ತರುವಾನಾಯ್ ವಿರೈಕಿನ್ರಾನ್ ವಿಧಿವಕೈಯೇ
ಯೆಣ್ಣಿನ ವಾಱಾಕಾ ವಿಕ್ಕರುಮಙ್ಗಳೆನ್ನೆಞ್ಜೇ ॥

ಇದರರ್ಥವು:—ಓ ಎನ್ನೆಂಜೇ - ನನ್ನ ಮನಸ್ಸೇ, ಪಲನಾಮಂಗಳ್ ಶೊಲ್ಲಿ ಕೆಲವು ಅಷ್ಟಾಕ್ಷರಾದಿಗಳನ್ನು ಹೇಳಿ, ನಾರಾಯಣನನ್ನು, ನಣ್ಣಿನಮ್- ಸರ್ವಸ್ಯ ಶರಣಂ ಸುಹೃತ್ ಎಂದು ಭಾವಿಸಿ, "ನಮೋ ನಾರಾಯಣಾಯೇತಿ ಮನ್ತ್ರಸ್ಸರ್ವಾರ್ಥ ಸಾಧಕಃ" ಎಂದು ಹೇಳಿರುವ ಮೇರಿಗೆ, ಆತನನ್ನು ಆಶ್ರಯಿಸಿ ದೆವು, ಮಣ್ಣುಲಗಿಲ್ - ಈ ಭೂಲೋಕದಲ್ಲಿ, ವಳಮ್ ಮಿಕ್ಕ - ದಯಾ ಮೊದಲಾದ ಕಲ್ಯಾಣಗುಣಗಳುಳ್ಳ ಸಂಪತ್ತಿನ ಅತಿಶಯ ಹೊಂದಿದ, ವಾಟ್ಟಾ ತ್ತಾನ್ - ತಿರುವಾಟ್ಟಾತ್ತೆಂಬ ಊರಲ್ಲಿ ಬಿಜಮಾಡಿಸಿರುವ ಶ್ರಿಯಃಪತಿಯು, ವನ್ದು ಇನ್ರು - ಬಂದು ಈಗ, ವಿಣ್ಣುಲಕಮ್ - ಪರಮಪದವನ್ನು, ವಿಧಿವ ಗಿಯೇ ತರುವಾನಾಯ್ - ನಮ್ಮ ಬಿಡುಮನವೆಂದು ಭಾವಿಸಿ ಎಂದರೆ ನಮ್ಮ ಪ್ರಾರ್ಥನೆಯನ್ನೇ ಒಂದು ಆಜ್ಞೆಯಾಗಿ ಶಿರಸಾವಹಿಸಿ ಕೊಡಲು ಇಷ್ಟವುಳ್ಳವನಾಗಿ, ವಿರೈಕಿನ್ರಾನ್ - ನಾವು ತ್ವರೆ ಮಾಡುವುದಕ್ಕೆ ಮುಂಚೆ ಅವನೇ ತ್ವರೆಪಡಿಸು ವನು, ಇಕ್ಕರುಮಙ್ಗಳ್ - ಈ ಕಾರ್ಯಗಳು, ಎಣ್ಣಿನವಾರಾಕಾ - ನಾವು ಯೋಚಿ ಸಿದ ಹಾಗೆ ಆಗದು, ಎಂದರೆ ನಾವು ಆತನಿಗೆ ತೊಂದರೆ ಕೊಟ್ಟು ನಮ್ಮ ಕೆಲಸವಾ ಗುವದಕ್ಕಾಗಿ ಆತನನ್ನು ತ್ವರೆಪಡಿಸಬೇಕೆಂದಿದ್ದೆವು, ಅದಕ್ಕೆ ಬದಲಾಗಿ ಯಾವಾಗ ಆತನ ಮೇಲೆ ಭಾರವನ್ನು ಹಾಕಿದೆವೋ, ಆಗ ಎಲ್ಲವನ್ನೂ ತಾನೇ ವಹಿಸಿಕೊಂಡು ನಮ್ಮನ್ನೇ ತ್ವರೆಗೊಳಿಸುವನೆಂಬ ಭಾವವು.

(೪) ಮುಂದಿನ ವಾಕ್ಯಖಂಡದಿಂದ ನಾವು ಸರ್ವೇಶ್ವರನಿಗೆ ಶೇಷತ್ವವನ್ನು ಪ್ರದರ್ಶಿಸಿ ದಾಸಭೂತರೆಂದು ಹೇಳಿಕೊಂಡು ಆತನ ಪಾದವನ್ನು ಯಾವಾಗ ಆಶ್ರ ಯಿಸಿಬಿಟ್ಟೆವೋ ಆಗ ಪರನು ಸ್ವತಂತ್ರನಾದವನು ನಮಗೆ ಪರತಂತ್ರನಾಗಿ ನಮಗೆ ಯಾವುದು ಹಿತವೋ ಅದನ್ನು ತಾನೇ ಯೋಚಿಸಿ, ಆ ಹಿತವಾದುದನ್ನೇ ನಾವು ಅಂಗೀಕರಿಸುವ ಹಾಗೆ ಮಾಡುವನೆಂದು ಹೇಳುತ್ತಾರೆ:—ಇರುಳ್ ತರುಮ್ - ರಜಸ್ತಮೋಗುಣಗಳ ವಿಜೃಂಭಣೆಯಾದ ಅಜ್ಞಾನವನ್ನು ಕೊಡುವ, ಮಾ-

(೪) ತಿರುವಾಯ್ಮೊಳಿ ೧೦. ೬. ೧ ಮತ್ತು ೧೦. ೧೦. ೨.

ಎನ್ರುವರ್, "ವಾಯುವರ್ ಶಿಯರ್‌ಯೇಲೆನ್ನೈ" ಎನ್ರುವರ್ ಶೊಲ್ಲುಗಿರ ಪಡಿಯೇ ಇವನುಕ್ಕು ಇಶೈವೈಯುಣ್ಡಾಕ್ಕಿ, (೧) "ಉೞ ತಿರುವಾರ್

ಮಹತ್ತಾದ, ಞಾಲತ್ತುಳ್ - ಈ ಲೀಲಾವಿಭೂತಿಯಲ್ಲಿ, ಇನಿ - ಸರ್ವೇಶ್ವರನ ಕಟಾಕ್ಷದಿಂದ ತತ್ವಜ್ಞಾನ ಉಂಟಾದ ನಂತರ, ಪಿರಿವಿ - ಪುನರ್ಜನ್ಮವನ್ನು, ಯರ್ಾೞ ವೇಣ್ಡೋೞ - ನಾನಪೇಕ್ಷಿಸುವದಿಲ್ಲವು" ಎನ್ರು - ಎಂದೂ, "ವಾಯುಂ ಶಿಯರ್‌ಯೇ ಲೆನ್ನೈ" - "ನನ್ನನ್ನು ಮುಂಚಿನ ಹಾಗೆ ವಂಚಿಸಿದಿರಪ್ಪಾ" ಎನ್ರುವರ್ - ಎಂದು, ಹೇಳಿರುವ ಹಾಗೆ, ಇವನಿಗೆ - ಈ ಪ್ರಪನ್ನನಿಗೆ, ಇಶೈವೈ ಯುಂಡಾಕ್ಕಿ - ಶೀಘ್ರವಲ್ಲೇ ಮೋಕ್ಷಪ್ರಾಪ್ತಿಯಲ್ಲಿ ಅಂಗೀಕಾರ ಉಂಟಾಗುವ ಹಾಗೆ ಮಾಡಿ;

ಈ ಎರಡು ಪಾಶುರಗಳು ಯಾವುವೆಂದರೆ:—

"ಅರುಳ್ ಪೆರುವಾರಡಿಯಾರ್ ತನ್ನುಡಿಯನೇರ್ಕ್ಕು, ಆಳಿಯಾ ।
ನರುಳ್ ತರುವಾನನ್ಮೈ ಕಿನ್ರಾನದು ನಮದುವಿದಿವಗೈಯೇ ॥
ಇರುಳ್ ತರುಮಾಞಾಲತ್ತುಳಿನಿ ಪಿರವಿಯರ್ಾೞ ವೇಣ್ಡೋೞ ।
ಮರುಳೊಳಿ ನೀಮಡ ನೆಂಜೇ ವಾಟ್ಟಾಱಾನಡಿ ವಣಙ್ಗೇ ॥"

ಎಂದರೆ, ಅರುಳ್ ಪೆರುವಾರಡಿಯಾರ್ ತಮ್ - ಭಗವದನುಗ್ರಹವನ್ನು ಹೊಂದುವ ಶೇಷತ್ವ ಜ್ಞಾನ ಮೂಲಕ ದಾಸಭೂತರೆಂದು ಹೇಳಿಕೊಳ್ಳುವ ಭಾಗ ವತರಿಗೆ, ಅಡಿಯಾರ್ಕ್ಕು - ದಾಸಭೂತರಾದ ನಮಗೆ, ಆಳಿಯರ್ಾೞ - ಅಂಥಾವ ರನ್ನು ಕಾಪಾಡತಕ್ಕವನಾಗಿ ಚಕ್ರಧರನಾದ ಸ್ವಾಮಿಯು, ಅರುಳ್ ತರುವರ್ಾೞ - ಕೃಪೆ ಮಾಡಲುದ್ಯುಕ್ತನಾಗಿರುವನು; ಅದು ನಮದು ವಿದಿವಗೈಯ್ಯೆ - ಹಾಗೆ ಕೃಪೆ ಮಾಡುವದು ಸ್ವತಂತ್ರನಾಗಿ ತನ್ನಿಷ್ಟದಂತಲ್ಲವು, "ಆಜ್ಞಾಪಯ ಯಥೇ ಷ್ಟಂಮ್ಮೈ" ಎಂದು ಶ್ರೀರಾಮನು ವಿಶ್ವಾಮಿತ್ರರನ್ನು ಪ್ರಾರ್ಥಿಸಿದ ಹಾಗೆ ನಮ್ಮ ನಿಯಮನ ಪ್ರಕಾರ ನಮಗೆ ಪರತಂತ್ರನಾಗಿ ನಡೆಸುವನು; ಇರುಳ್ ತರುಮಾ ಞಾಲತ್ತುಳಿನಿ ಪಿರವಿಯರ್ಾೞ ವೇಂಡೇೞ - ಈ ಅಜ್ಞಾನ ಭೂಯಿಷ್ಠವಾದ ಈ ವಿಶಾಲವಾದ ಲೀಲಾವಿಭೂತಿಯಲ್ಲಿ ಪುನರ್ಜನ್ಮವನ್ನು, ಸರ್ವೇಶ್ವರನ ಕೃಪಯಾ ಈ ಬುದ್ಧಿಯೋಗ ವಿವೇಕಗಳುಂಟಾದ ನಂತರ ಪ್ರಾರ್ಥಿಸುವದಿಲ್ಲವು; ಓ ಮಡ ನೆಂಜೇ - ಓ ಬುದ್ಧಿಯಿಲ್ಲದ ಚಪಲವಾದ ಮನಸ್ಸೇ, ಮರುಳ್ ನೀ ಒಳಿ - ಅರ್ಚ್ಯಾವತಾರಿಯಾಗಿ ಸ್ವಾಮಿಯು ಇಲ್ಲಿಯೇ ಇರುವಾಗ ಇಲ್ಲಿಯೇ ಇದ್ದು

---

(೧) ತಿರು. ೧೦. ೬ ೧.

(ವೈತ್ತು) ಪತ್ತು ಮಾಲ್ಯೆ ನಙ್ಗೈ ನಾಶಮ್ ಶೆಯ್ ಪೂಙ್ಗುಳಲಾಳ್ ತಿರು

ಕೈಂಕರ್ಯ ಮಾಡುವದು ಸಾಲದೇ ಎಂಬ ಭ್ರಮೆಯನ್ನು ಬಿಟ್ಟುಬಿಡು; ವಾಟ್ಟಾ ಱ್ರಾಱ ನಡಿವಣಙ್ಗೇ-ತಿರುವಾಟ್ಟಾರಲ್ಲಿ ಬಿಜಮಾಡಿಸಿರುವ ಶ್ರೀ ಕೇಶವಸ್ವಾಮಿಯ ಶ್ರೀಪಾದವನ್ನು ಆಶ್ರಯಿಸು. ಹೀಗೆ ತಮ್ಮ ಮನಸ್ಸಿಗೆ ಆಳ್ವಾರ್ರವರುಪದೇಶಿಸಿರುತ್ತಾರೆ.

(೧) ಮಾಯಙ್ಗಿಯ್ಯೇ ಲೆನ್ನೈ ಯುನ್ನಿರು ಮಾರ್ವತ್ತುಮಾಲ್ಯೆನಙ್ಗೈ ।
ನಾಶಂಙ್ಗಿಯ್ ಪೂಙ್ಗುಳಲಾಳ್ ತಿರುವಾಣೈ ನಿನ್ನಾಣೈ ಕಣ್ಡಾಯ್ ।
ನೇಶಙ್ಗಿಯ್‌ದು ನ್ನೋಡೆನ್ನೈಯು ಯಿರ್ಶ್ವೇರಿನ್ರಿಯೊನ್ರಾಗವೇ ।
ಕೂಶಙ್ಗಿಯ್ಯಾದು ಕೊಣ್ಡಾಯೆನ್ನೈಕ್ಕೊಳ್ವಿಕಿಂಳ್ವಾಯ್ ವನ್ನನ್ನೇ॥

ಇದರರ್ಥವು:---ಮಾಯಙ್ಗಿಯ್ಯೇಲೆನ್ನೈ - ನಿನ್ನನ್ನು ಬಿಟ್ಟು ಒಂದು ಕ್ಷಣವೂ ಇರಲಿಷ್ಟವಿಲ್ಲದ ನನ್ನನ್ನು ಇನ್ನು ಮುಂದೆಯಾದರೂ ವಂಚಿಸಬೇಡ ವೈಯ್ಯ, ಉರ್ ತಿರುಮಾರ್ವತ್ತುಮಾಲ್ಯೆ - ಹಾಗಿಲ್ಲದೆ ನಾನು ಸ್ವತಂತ್ರನು, ಇಷ್ಟಬಂದಹಾಗೆ ಮಾಡುವೆನೆಂದರೆ, ನಿನಗೆ, (೨ "ಅಪ್ರಮೇಯಂ ಹಿ ತತ್ತೇಜಃ ಯಸ್ಯಸಾ ಜನಕಾತ್ಮಜಾ" ಎಂದೂ, ೩) "ವಿಷ್ಣೋಶ್ಶ್ರೀಃ" ಎಂದೂ, ಹೇಳಿರುವ ಹಾಗೆ, ನಿನಗೂ ಕೂಡ ಸಂಪದ್ರೂಪವಾಗಿರುವ, ಮತ್ತು ನಿನ್ನ ವಕ್ಷಸ್ಥಳವನ್ನಾಶ್ರಯಿಸಿದ, ಮಾಲೆಯ ಹಾಗೆ ಅಲಂಕಾರಭೂತಳಾಗಿ, ನಙ್ಗೈ - ನಿನ್ನ ಹಾಗೆಯೇ ಅನುರೂಪರೂಪಗುಣವಿಭವೈಶ್ವರ್ಯಾದಿಗಳಿಂದ ಯುಕ್ತಳಾದ, ನಾಶಮ್ ಶೆಯ್ - ಶ್ರುತಿಯಲ್ಲಿ "ಸರ್ವಗಂಧಃ" ಎಂದು ಹೇಳಿಸಿಕೊಳ್ಳುವ ಹಾಗೆ, ನಿನ್ನ ದಿವ್ಯಮಂಗಳ ವಿಗ್ರಹಕ್ಕೆ ಪರಿಮಳರೂಪವಾದ ಅಥವಾ ಪುಷ್ಪಕ್ಕೆ ಒಳ್ಳೇ ಪರಿಮಳವೋಪಾದಿಯಲ್ಲಿ ಭೋಗ್ಯತೆಯನ್ನು ಕೊಡುವ, ಪೂಙುಳಲಾಳ್ - ವಿಲಕ್ಷಣವಾದ ಕುರುಳಗಳನ್ನು ಹೊಂದಿದ, ತಿರು ಆಣೈ - ಲಕ್ಷ್ಮೀದೇವಿಯ ಮೇಲೆ ಆಣೆಯು, ನಿ೯ ಆಣೆ ಕಂಡಾಯ್ - ಸರ್ವಾಧಿಕನಾಗಿ ಸರ್ವಕಾರಣಭೂತನಾಗಿರುವ ನಿನ್ನ ಮೇಲೆಯು ಆಣೆಯು, ಇದನ್ನು ನೀನು ತಿಳಿಯುವದು; ನನ್ನನ್ನು ಬಿಟ್ಟು ನೀನು ಹೇಗೆ ಇರುತ್ತೀ ನೋಡುತ್ತೇನೆಂಬ ಭಾವವು. ನೇಶಮ್ ಶೆಯ್‌ದು - ಸರ್ವಸ್ಯ ಶರಣಂ ಸುಹೃತ್ತೆಂದೂ, "ತ್ವಯಿ ಕಿಂಚಿತ್ಸಮಾಪನ್ನೇ ಕಿಂಕಾರ್ಯಂ ಸೀತಯಾ ಮಮ" ಸೀತೆಗಿಂತಲೂ ಹೆಚ್ಚಾದ ಮಮತೆಯು ನಿನ್ನಲ್ಲಿ ಎಂದು ಹೇಳುತ್ತಾ, ಹೀಗೆ ನನ್ನೊಂದಿಗೆ ಸ್ನೇಹವನ್ನು ಬೆಳಸಿ, ಉನ್ನೋಡು ಎನ್ನೇ -

(೧) ತಿರು. ೧೦. ೧೦. ೨. (೨) ರಾಮಾ ಆರ, ೩೭. ೧೮. (೩) ವಿ. ಪು. ೧. ೮.

ವಾಣ್ಣೈ ನಿನ್ನಾಣೈ" ಎನ್ರು ಇವರ್ ತಾರ್ ತ್ವರಿತ್ತು ವಳ್ಳಿಕ್ಕುನ್ನುಡಿ ಪಣ್ಣಿ, (೧) "ಶರಣಮಾಗುಮ್ ತನತಾಳಡೈನ್ದಾರ್ಕ್ಕೆಲ್ಲಾಮ್ ಮರಣಮಾನಾಲ್

ಹೇಯಪ್ರತ್ಯನೀಕನಾದ ನಿನ್ನೊಂದಿಗೆ ಸೇರುವುದರಿಂದ ಕೂಡಿದ ನನ್ನನ್ನು. ಉಯಿರ್ ವೇರೆನ್ರಿ ಒನ್ರಾಕವೇ - ಜ್ಞಾನೈಕಾಕಾರತೆ ಮೊದಲಾದ ಗುಣಾಷ್ಟಕಗಳಿಂದ ಸಮುಭಾವದಿಂದ ಅಪೃಥಕ್ಸಿದ್ಧ ವಿಶೇಷವಾಗಿ, ಕೂಶಮ್ ಶೆಯ್ದ್ಯಾದು ಕೊಂಡಾಯ್ - ನನ್ನ ನಿಕೃಷ್ಟತೆಗಾಗಿ ಸ್ವಲ್ಪವೂ ಸಂಕೋಚಪಡದೆ ನನ್ನನ್ನು ಅಂಗೀಕರಿಸಿರುತ್ತೀಯೆ. ಎನ್ನೈಪ್ಪುನ್ನು ಕೂವಿಕ್ಕೊಳ್ಳಾಯ್ - ನನ್ನನ್ನು ಬಂದು ಕರೆದು ಕೊಂಡು ಹೋಗಬೇಕಪ್ಪಾ, ಅಂದೋ - ಇದಕ್ಕಾಗಿ ತ್ವರೆ ಮಾಡುವುದು ನಿನ್ನ ಕೆಲಸವಲ್ಲವೇ ? ಅಯ್ಯೋ, ಇದಕ್ಕೆ ನಾನು ಅಪೇಕ್ಷಿಸಬೇಕೇ ? ಎಂಬ ತಾತ್ಪರ್ಯವು" ಎನ್ರು - ಎಂಬುದಾಗಿ, ಇವರ್ ತಾರ್ - ಈ ಪ್ರಪನ್ನನು ತಾನೇ, ತ್ವರಿತ್ತು- ತ್ವರೆಯನ್ನು ಮಾಡಿ, ವಳ್ಳಿಕ್ಕುಂಪಡಿ ಪಣ್ಣಿ-ಹಿಂದೆ ವಿಳಂಬವನ್ನಪೇಕ್ಷಿಸಿದವನು ಈಗ ಬೇಗ ಪರಮಪದವನ್ನು ಕೊಟ್ಟ ಹೊರತು ಬಿಡುವದಿಲ್ಲವು ಎಂದು ಶ್ರಿಯಃಪತಿಯು ಶ್ರೀಪಾದವನ್ನು ಕಟ್ಟಿಕೊಂಡು ನಿರ್ಬಂಧಿಸುವ ಹಾಗೆ ಮಾಡಿಸಿ ; ಮುಂದೆ ತನಗೆ ಸಮನಾದನೆಂದು ಭಾವಿಸಿ ದಿವ್ಯ ವೈಕುಂಠವನ್ನೂ ಕೊಡುವನು ಎಂದು ಹೇಳುತ್ತಾರೆ. ಈ ಪೂರಾ ಪಾಸುರವು ಯಾವುದೆಂದರೆ :—

ಶರಣಮಾಗುನ್ದನ ತಾಳಡೈನ್ದಾರ್ಕ್ಕೆಲ್ಲಾಮ್,
ಮರಣಮಾನಾಲ್ ವೈಗುನ್ದಂ ಕೊಡುಕ್ಕುಂಪಿರಾನ್ ।
ಅರಣಮೈನ್ದ ಮದಿಳ್ ಶೂಳ್ ತಿರುಕ್ಕಣ್ಣಪುರ,
ತ್ತರಣಿಯಾಳನ್ ತನತನ್ಬರ್ ಕ್ಕನ್ಬಾಗುಮೇ ॥

"ತನತಾಳಡೈನ್ದಾರ್ ಕೆಲ್ಲಾಮ್ ಶರಣಮಾಗುಮ್ - ಭಕ್ತಿಮಾರ್ಗದಲ್ಲಶಕ್ತರಾಗಿ, ತನ್ನ ಪಾದಕಮಲಗಳನ್ನಾಶ್ರಯಿಸಿ ಭರನ್ಯಾಸ ಮಾಡಿದ ಸಮಸ್ತರಿಗೂ ತಾನೇ ಉಪಾಯಭೂತನಾಗಿ, ಮರಣಮಾನಾಲ್ - ದೇಹಾವಸಾನದಲ್ಲಿ, ವೈಗುನ್ದಮ್ ಕೊಡುಕ್ಕುಮ್ ಪಿರಾನ್ - ದಿವ್ಯ ವೈಕುಂಠವನ್ನು ಕೊಡುವ ಮಹೋಪಕಾರಕನು. ಅರಣಮೈನ್ದ-ರಕ್ಷಣಾರ್ಥವಾಗಿ ನಿರ್ಮಿಸಲ್ಪಟ್ಟ, ಮದಿಳ್ ಶೂಳ್ ತಿರುಕ್ಕಣಪುರತ್ - ಪ್ರಾಸಾದಗಳಿಂದ ಕೂಡಿದ ತಿರುಕ್ಕಣ್ಣಪುರದ, ತರಣಿಯಾಳನ್ - ಭೂಮಿದೇವಿಯ ಪತಿಯು, ಅಥವಾ ಭೂಮಿಯಾದ ಲೀಲಾ ವಿಭೂತಿಯ ನಿರ್ವಾಹಕನು ಎಂದರೆ ಬದ್ಧರಾದ ಚೇತನರಿಗೆ ಸಂರಕ್ಷಕನು, ತನ

---

(೧) ತಿರು. ೯. ೧೦. ೫.

ವೈಗುನ್ನವರ್ ಕೊಡುಕ್ಕುಮವರ್ ಪಿರಾನ್” ಎಙ್ಗಿರಪಡಿಯೇ ಇವರ್ ಕೋಲುದಲುಕ್ಕೇಡಾಗ ಪ್ರಾರಬ್ಧ ಶರೀರಾವಸಾನತ್ತಿಲೆ ಪರಮಪದ ಯುಂಡಾಕ್ಕುವದಾಕ ಕೋಲಿ, (೨) ಪೊನ್ನುಮಿರುಮ್ಬುಮಾನ ವಿಲಙ್ಗುಗಳ್ ಪೋಲೆ ಬಂಧಕಙ್ಗಳಾನ ಪೂರ್ವೋತ್ತರ ಪುಣ್ಯಪಾಪಙ್ಗಳೈಯುಮ್ ಪ್ರಾರಬ್ಧಕಾರ್ಯಮಾನ ಶರೀರತ್ತಿಲಿವನಿಟ್ಟವಂಶ ಮೊಳಿಯುಮೇಲುಳ್ಳ ಕೊತ್ತೈ

ತನ್ನೈರುಕ್ಕು - ತನ್ನ ತಿರುವಡಿಯಲ್ಲಿ ಭಕ್ತಿ ವಿಶ್ವಾಸವುಳ್ಳವರಿಗೆ, ಅನ್ಬಾಗುಮ್- ಅತಿ ಪ್ರವಣನಾಗುವನು ಎಂಬುವದು ಈ ಪಾಶುರಾರ್ಥವು.” ಎಙ್ಗಿರಪಡಿಯೇ- ಎಂದು ಹೇಳುವ ಹಾಗೆ, ಇವರ್ ಕೋಲುದಲುಕ್ಕೇಡಾಗ - ಈ ಪ್ರಪನ್ನನ ಇಷ್ಟಾನುಸಾರವಾಗಿ ಪ್ರಾರಬ್ಧ ಶರೀರಾವಸಾನತ್ತಿಲೇ - ಈ ಪ್ರಾರಬ್ಧ ಕರ್ಮಾನುಗುಣವಾಗಿ, ಉಂಟಾದ ದೇಹವಿಯೋಗದಲ್ಲಿ, ಪರಮಪದ ಪ್ರಾಪ್ತಿಯುಂಡಾಕ್ಕುವದಾಕ ಕೋಲಿ - ಪರಮಪದ ಪ್ರಾಪ್ತಿಯುಂಟಾಗುವ ಹಾಗೆ ಸಂಕಲ್ಪಿಸಿ. ಈ ಪಿಲಿತ್ತು, ಪಣ್ಣಿ, ತ್ವರಿತ್ತು, ಕೋಲಿ, ಈ ಕೃದ್ವ್ಯಾಚಿಗಳಿಗೆಲ್ಲಾ ಸರ್ವೇಶ್ವರನ್ ಎಂಬುದು ಕರ್ತೃಪದವು.

ಇನ್ನು ಮುಂದೆ ನಿರ್ಯಾಣಕಾಲದಲ್ಲಿ ಎಂದರೆ ದೇಹಾವಸಾನ ಕಾಲದಲ್ಲಿ ಮಾಡುವ ಉಪಕಾರಗಳನ್ನೆಲ್ಲಾ ವಿವರಿಸುತ್ತಾರೆ:— ಮೊದಲು ಇವನ ಪುಣ್ಯಪಾಪಗಳು ವಿನಾಶಗುತ್ತವೆಂಬುವದನ್ನು ಹೇಳುತ್ತಾರೆ:– **ಪೊನ್ನುಮಿರುಮ್ಬುಮಾನ ವಿಲಙ್ಗುಗಳ್ ಪೋಲೆ** - ಚಿನ್ನದಿಂದಲೂ ಕಬ್ಬಿಣದಿಂದಲೂ ಮಾಡಿದ ಬೇಡಿಗಳ ಹಾಗೆ, **ಬಂಧಕಙ್ಗಳಾನ** - ಪುನಃ ಸಂಸಾರಕ್ಕೆ ಕಾರಣಭೂತಗಳಾದ, **ಪೂರ್ವೋತ್ತರ ಪುಣ್ಯಪಾಪಙ್ಗಳೈಯುಮ್** - ಭರನ್ಯಾಸಕ್ಕೆ ಮುಂದೆ ಮಾಡಿದ ಪುಣ್ಯಪಾಪಗಳನ್ನೂ ಮತ್ತು ಅನಂತರ ಮಾಡಿದ ಪುಣ್ಯಪಾಪಗಳನ್ನೂ, ಪುಣ್ಯಪಾಪಗಳೆರಡೂ ಬಂಧಕಗಳು, ಪುಣ್ಯವು ಪಾಪದಷ್ಟು ಕ್ರೂರವಲ್ಲದೆ, ಸ್ವರ್ಗಾದಿ ಭೋಗಪ್ರದವಾದುದರಿಂದ ಚಿನ್ನದ ಬೇಡಿ ಎಂದೂ, ಪಾಪವು ಕ್ರೂರವಾಗಿ ದುಃಖಪ್ರದವಾದುದರಿಂದ ಕಬ್ಬಿಣದ ಬೇಡಿ ಎಂದೂ ಹೇಳಲ್ಪಟ್ಟಿತು; ಉಪಕಾರ ಪರಂಪರೆಗಳನ್ನು ಇಲ್ಲಿ ಹೇಳಬೇಕಾಗಿರುವದರಿಂದ ಅಪರಾಧ ಪರಿಹಾರಾಧಿಕಾರದಲ್ಲಿ ಹೇಳಲ್ಪಟ್ಟ ಅಂಶವನ್ನೇ ಇಲ್ಲಿ ಪ್ರಸಕ್ತಕ್ಕೆ ಹೇಳುತ್ತಾರೆ; ಹೀಗೆ **ಪೂರ್ವೋತ್ತರ** ಪುಣ್ಯಪಾಪಗಳನ್ನೂ ಮತ್ತು **ಪ್ರಾರಬ್ಧ ಕಾರ್ಯಮಾನ ಶರೀರತ್ತಿಲಿವನಿಟ್ಟ ವಂಶಂ** - ಪ್ರಾರಬ್ಧಕಾರ್ಯವಾದ ಈ ಶರೀರಾರಂಭಕವಾದ ಕರ್ಮದಲ್ಲಿ ಇವನು ಒಪ್ಪಿಕೊಂಡ ಅಭ್ಯುಪಗತ ಪ್ರಾರಬ್ಧವೆಂಬ ಅಂಶವು, **ಒಳಿಯ** - ಹೋಗಲಾಗಿ,

ಯುಮ್ (೧) "ಪೋಯ ಪಿಳ್ಳೈಯುಮ್ ಪುಕುತರವಾಯ್ ನಿನ್ರನವುಮ್ ತೀಯಿನಿಲ್‌ತ್ತೂ ಶಾಕುಮ್" ಎಙ್ಗುರಪಡಿಯೇ ಮುನ್ನೇ ಇವನೋಡು ತ್ತುವಕ್ಕರುತ್ತು ವೈಕ್ಕೈಯಾಲೆ ಶರೀರಪಾತತ್ತುಕ್ಕು ನಿನೈಪ್ಪಿಟ್ಟ ಸಮಯಮ್ ವನ್ದವಾರೇ, (೩) "ಪ್ರಿಯೇಷು ಸ್ವೇಷು ಸುಕೃತಮಪ್ರಿಯೇಷು ಚ ದುಷ್ಕೃತಮ್ । ವಿಸೃಜ್ಯ ಧ್ಯಾನಯೋಗೇನ ಬ್ರಹ್ಮಾಪ್ಯೇತಿ ಸನಾ

ಮೇಲುಳ್ಳ ಕೂತ್ತೈಯುಮ್ - ಮೇಲುಳ್ಳ ಕೂರು ಎಂದರೆ ಅನಭ್ಯುಪೆಗತರೂಪವಾದ ಜನ್ಮಾಂತರಕ್ಕೆ ಕಾರಣವಾದ ಮಿಕ್ಕ ಎಲ್ಲಾ ಭಾಗವು, ಇದನ್ನೂ, ಇದಕ್ಕೆ ತುವಕ್ಕರುತ್ತು ಎಂದು ಮುಂದಿರುವದರೊಂದಿಗೆ ಅನ್ವಯವು, "ಪೋಯ ಪಿಳ್ಳೈಯುಮ್ - ಪೂರ್ವಾಘಗಳೂ, ಪುಕುದರವಾನ್ನಿನ್ರನವುಮ್ - ಉತ್ತರಾಘಗಳೂ, ತೀಯಿನಲ್ - ಬೆಂಕಿಯಲ್ಲಿ, ದೂಶು - ಅರಳೆಯು, ಹತ್ತಿಯು, ಆಗುಮ್ - ಆಗುವದು," ಇದು ಶ್ರುತ್ಯರ್ಥವನ್ನು ಒಳಗೊಂಡಿರುತ್ತದೆ. (೨) "ತದ್ಯಥೈಷೀಕಾತೂಲ ಮಗ್ನೌಪ್ರೋತಂ ಪ್ರದೂಯೇತ, ಏವಂ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ," "ಇಷೀಕವೆಂಬ ಮುಂಜೀ ಹುಲ್ಲಿನಲ್ಲಿರುವ ಹತ್ತಿಯು ಅಗ್ನಿಯಲ್ಲಿಟ್ಟರೆ ಒಡನೆ ಹೇಗೆ ದಗ್ಧವಾಗಿ ಹೋಗುತ್ತದೋ, ಹಾಗೆಯೇ ಪ್ರಪನ್ನನ ಸರ್ವ ಪಾಪಗಳೂ ದಗ್ಧವಾಗುತ್ತವೆ" ಎಂಬುದು ಈ ಶ್ರುತ್ಯರ್ಥವು ಎಙ್ಗುರಪಡಿಯೇ - ಎಂದು ಹೇಳುವ ಹಾಗೆ, ಮುನ್ನೇ - ಪ್ರಪತ್ತಿ ವಾಕ್ಯೋಚ್ಚಾರಣ ಕಾಲದಲ್ಲೇ, ಇವನೋಡು - ಈ ಜೀವಾತ್ಮನೊಂದಿಗೆ, ತುವಕ್ಕರುತ್ತು - ಆ ಪೂರ್ವೋತ್ತರಾಘಗಳ ಸಂಬಂಧವನ್ನು ಛೇದಿಸಿ, ವೈಕ್ಕೈಯಾಲೇ - ಇಟ್ಟಿದ್ದರಿಂದ, ಶರೀರಪಾತತ್ತುಕ್ಕು - ದೇಹಾವಸಾನಕ್ಕೆ, ನಿನೈಪ್ಪಿಟ್ಟ ಸಮಯಂ ವನ್ದವಾರೇ - ಸಂಕಲ್ಪಿಸಿದ ಕಾಲವು ಒದಗಿದ ಒಡನೆಯೇ, "ಸ್ವೇಷು ಪ್ರಿಯೇಷು - ಪ್ರಪನ್ನನಲ್ಲಿನ ತನ್ನ ಸಂಬಂಧಿಗಳಾದ ಇಷ್ಟರಲ್ಲಿ ಸುಕೃತವನ್ನೂ, ಅಪ್ರಿಯೇಷು - ತನ್ನ ಶತ್ರುಗಳಲ್ಲಿ, ದುಷ್ಕೃತವನ್ನೂ, ವಿಸೃಜ್ಯ - ಬಿಟ್ಟು, ಧ್ಯಾನಯೋಗೇನ - ಭಕ್ತಿಯೋಗದಿಂದ, ಸನಾತನಂ - ಅನಾದಿಯಾದ, ಬ್ರಹ್ಮ - ಪರಬ್ರಹ್ಮವನ್ನು, ಅಪ್ಯೇತಿ - ಹೋಗಿ ಸೇರುವನು ಎಂದರೆ ಹೊಂದುವನು ಎಂಬ ಭಾವವು" ಪ್ರಪತ್ತಿಯಾದ ಒಡನೆಯೇ ಸರ್ವೇಶ್ವರನು ಸಂಕಲ್ಪಿಸುವದೇನೆಂದರೆ, ಶರಣಾಗತನಾದುದರಿಂದ ನನಗೆ ತುಂಬಾ ಪ್ರಿಯನಾದ ನಿನ್ನ ಪುಣ್ಯಪಾಪಗಳೆಲ್ಲಾ ನನ್ನಿಂದ ನಿಗ್ರಹಕ್ಕೆ ಕಾರಣವಾಗಿದ್ದರೂ, ದೇಹಾವಸಾನ ಕಾಲದಲ್ಲಿ ನಿನಗೆ ಯಾವ

(೧) ತಿರುಪ್ಪಾವೈ ೫. (೨) ಛಾಂ. ೫. ೨೪. ೩. (೩) ಮನುಸ್ಮೃತಿ ೬. ೭೯.

ಪಾಪಗಳಿಂದ ನಿಗ್ರಹವಾಗಲಿ ಭಯವಾಗಲಿ ಉಂಟಾಗದ ಹಾಗೆ ಮಾಡುವೆನು ಎಂಬದಾಗಿ ಶ್ರುತಿಯು **"ದ್ವಿಷನ್ತಃ ಪಾಪಕೃತ್ಯಾಂ ಸುಹೃದಃ ಸಾಧುಕೃತ್ಯಾಂ"** ಎಂದು ಹೇಳಿರುವದರಿಂದ ಈತನ ಸುಕೃತವೆಲ್ಲಾ ಪ್ರಪನ್ನರಲ್ಲದ ಇಷ್ಟಜನದಲ್ಲೂ, ದುಷ್ಕೃತವೆಲ್ಲಾ ದ್ವೇಷಿಗಳಲ್ಲೂ ಹೋಗಿ ಸೇರುತ್ತವೆಂದು ಹೇಳಿದಭಿಪ್ರಾಯವೇ ಈ ಸ್ಮೃತಿಯಲ್ಲೂ ಹೇಳಲ್ಪಟ್ಟಿತು. ಹೀಗೆ ದೇಹಾವಸಾನಕಾಲದಲ್ಲಿ ಸುಕೃತ ದುಷ್ಕೃತಗಳಾದ ಇವುಗಳು ಮಿತ್ರದ್ವೇಷಿಗಳಲ್ಲಿ ಹೋಗಿ ಸೇರಿದರೆ, ಪ್ರಪತ್ತಿ ಅನುಷ್ಠಿಸಿದ ಒಡನೆಯೇ ಉತ್ತರ ಪೂರ್ವಾಘಗಳಿಗೆ (ಅಘಶಬ್ದದಿಂದ ಪುಣ್ಯಪಾಪಗಳೆರಡೂ ಹೇಳಲ್ಪಟ್ಟವು) ಅಶ್ಲೇಷವಿನಾಶಗಳು ಹೇಳಲ್ಪಟ್ಟವಲ್ಲಾ, ಈ ವಾಕ್ಯಗಳಿಗೆ ಪರಸ್ಪರ ವಿರೋಧವೇ ಎಂದರೆ ವಿರೋಧವೇನೂ ಇಲ್ಲವು ಸರ್ವೇಶ್ವರನು ಭರನ್ಯಾಸ ಕಾಲದಲ್ಲೇ ಈ ಅಶ್ಲೇಷವಿನಾಶಗಳನ್ನು ಸಂಕಲ್ಪಿಸಿಬಿಡುವನು. ಆ ಸಂಕಲ್ಪಾನುಸಾರವಾಗಿ, ಪುಣ್ಯಗಳು ಇಷ್ಟರಲ್ಲೂ, ಪಾಪಗಳು ದ್ವೇಷಿಗಳಲ್ಲೂ ಹೋಗಿ ಸೇರುತ್ತವೆ ಎಂಬ ಭಾವವು. ಶ್ರೀ ದೇಶಿಕರವರೇ ಬರೆದಿರುವ **ಪರಮಪದ ಸೋಪಾನ** ವೆಂಬ ಗ್ರಂಥದ ಆರನೆಯ ಉತ್ಕ್ರಮಣಪರ್ವದಲ್ಲಿ **"ವೈಗುನ್ದವುಮ್ ಕೊಡುರ್ಕ್ಕುಮ್ ಪಿರಾನ್ ಇವನುಕ್ಕು ಅಡಿಯಿಲೆ** (ಭರನ್ಯಾಸ ಕಾಲದಲ್ಲಿ) **ಅಶ್ಲೇಷ ವಿನಾಶ ವ್ಯಪದೇಶ ವಿಷಯಙ್ಗಳಾಯ್‌ಕ್ಕೊಂಡು ಮೂರ ನಿನ್ರೆ ಪಿಟ್ಟುಕ್ಕಿಡನ್ದ ಉತ್ತರಪೂರ್ವ ಪುಣ್ಯಪಾಪಙ್ಗಳೈ ಮಾತ್ತಿ, "ಪ್ರಿಯೇಷು ಸ್ವೇಷು ಸುಕೃತಂ ಅಪ್ರಿಯೇಷು ಚ ದುಷ್ಕೃತಂ" ಇತ್ಯಾದಿಗಳಿನ್ಪಡಿಯೇ ನಾಟ್ಟಿಲುಳ್ಳ ಪಾವಮೆಲ್ಲಾಮ್ ಶುಮ್ಮೆನಾದೆ ಕೈವಿಟ್ಟೋಡಿ ದೂರ್‌ಗಳ್ ಪಾಯ್‌ನ್ದನವೇ ಎನ್ರುಮ್‌ಪಡಿ, ಅನುಕೂಲ ಪ್ರತಿಕೂಲರುಡೈಯ ವಾನುಕೂಲ್ಯ ಪ್ರಾತಿಕೂಲ್ಯಙ್ಗಳುಕ್ಕುಮ್ ಫಲಂ ಕೊಡುತ್ತು"** ಎಂದು ಉಪದೇಶಿಸಿರುತ್ತಾರೆ. ಆದುದರಿಂದ ಅಶ್ಲೇಷ ವಿನಾಶಗಳುಂಟಾಗಲೆಂದು ಸರ್ವೇಶ್ವರನು ಸಂಕಲ್ಪಿಸಿದುದು, ದೇಹಾವಸಾನ ಕಾಲದಲ್ಲಿ ಅವುಗಳು ಹೀಗೆ ಪರಿಣಾಮ ಹೊಂದಿ, ಇತರರಿಗೆ ಸುಖದುಃಖ ಹೇತುಗಳಾಗಿ ಪರಿಣಮಿಸುತ್ತವೆಂಬುವದೀಗ ತಾತ್ಪರ್ಯವು." **ಎನ್ರುಮ್** - ಎಂದೂ, **"ನಮ್ಮ್ ಪೋಲ್** - ಯಮುನ ಹಾಗೆ, **ವೀಟ್ಟುಮುಕ್ಕುಮ್** - ಸಂಸಾರಸಮುದ್ರದಲ್ಲಿ ಬೀಳಿಸಿ ಆಕ್ರಮಿಸುವ, **ನಾಟ್ಟಿಲುಳ್ಳ ಪಾವಮೆಲ್ಲಾ** - ಶಾಸ್ತ್ರದಲ್ಲಿ ಪ್ರಸಿದ್ಧವಾದ ಎಲ್ಲಾ ಪಾಪವನ್ನೂ ಅಥವಾ ಲೋಕದ ಎಲ್ಲಾ ಪಾಪವನ್ನೂ, **"ನನಿಂದಿತಂ ಕರ್ಮತದಸ್ತಿ ಲೋಕೇ ಸಹಸ್ರಶೋ"** ಎಂದು ಆಳವಂದಾರ್ರವರು ಹೇಳಿರುವ ಹಾಗೆ ಆದರೂ ಆಗಬಹುದು ; **ಶುಮ್ ಎನಾದೆ** - ಶುಮ್ ಎಂದು ಉಸಿರುಬಿಡದೆ, **ಕೈವಿಟ್ಟೋಡಿ** - ಕೈತಪ್ಪಿಸಿಕೊಂಡು ಓಡಿಹೋಗಿ, **ತೂರುಗಳ್** - ಗಿಡಗಳನ್ನು, ಅಥವಾ ಸಂಸಾರಿ

ತನಂ ॥" ಎನ್ರುಮ್, (೧) ನಮ್ಮರ್ ಪೋಲ್ ವೀಳ್ ತಮುಕ್ಕು ನಾಟ್ಟಿ ಉಳ್ಳ ಪಾವಮೆಲ್ಲಾಮ್ ಶುಮ್ಮನಾತೇ ಕೈವಿಟ್ಟೋಡಿ ತ್ತೂರುಗಳ್ ಪಾಯ್ ನ್ದನವೇ" ಎನ್ರು ಸ್ಮರ್ತ್ತಾಕ್ಕಳ್ ಶೊನ್ನ ಉಪನಿಷದರ್ಥತ್ತಿನ್ಪಡಿಯೇ ಇವನುಕ್ಕು ಅನುಕೂಲ ಪ್ರತಿಕೂಲರಾಯಿರುನ್ದುಳ್ಳ ಇರಣ್ಡು ತಿರುಗಿಲುಮ್ ಇವರ್ ಪಕ್ಕಲ್ ಆನುಕೂಲ್ಯ ಪ್ರಾತಿಕೂಲ್ಯಙ್ಗಳುಕ್ಕು ಫಲಮಾಕ ವಶಲ್ ಒಳನ್ದೇರಿಡುಗಿರದೆನ್ನುಮ್ ಪಡಿ ಪಣ್ಣಿ,

---

ಗಳನ್ನು, ಪಾಯ್‌ನ್ದನವೇ - ಆಶ್ರಯಿಸುತ್ತವೆ; ಇದು ಪಾಶುರದ ಉತ್ತರಾರ್ಧವು ಪೂರ್ವಾರ್ಧವು :—

ಎಮ್ಮಾನಾರ್ ಕುಲದೈವ ಮೇ ಯೆನ್ನುಡೈ ನಾಯಕನೇ।
ನಿನ್ನುಳೆನಾಯ್ ಪ್ಪೆಱ್ಱನನ್ಮೈಯಿವ್ವುಲಗಿನಿಲಾರ್ ಪೆರುವಾರ್॥

ಎಂದರೆ ತಾಯಿಯು ಸ್ತನ್ಯದ ಹಾಗೆ ಜ್ಞಾನಮೂಲಕ ಶಕ್ತಿಯನ್ನಿತ್ತವನೇ, ರಾಜನ ಹಾಗೆ ನನ್ನ ಸ್ವಾತಂತ್ರ್ಯವನ್ನು ಹೋಗಲಾಡಿಸಿದವನೇ, ನನ್ನ ಕುಲಕ್ಕೆ ಪರದೇವತೆಯೇ ಎಂದರೆ ನಮಗೆಲ್ಲಾ ಸಾಧನರೂಪನೇ, ನನಗೆ ನಿಯಾಮಕನೇ, ಪ್ರಾಪ್ಯದಲ್ಲಿ ಕೈಬ್ಬರ್ಯಕೊಟ್ಟು ನಿಯಾಮಿಸುವನೇ, "ಗರ್ಭಭೂತಾಸ್ತಪೋಧನಾಃ" ಎಂದು ಹೇಳುವಹಾಗೆ ನಿನ್ನ ಛಿಮಾನದಲ್ಲಿ ಸೇರಿದವನಾಗಿ ಹೊಂದಿದ ಮಹತ್ತ್ವವು ಇದು ಈ ಸಂಸಾರ ದೆಶೆಯಲ್ಲಿ ಯಾರಿಗೆ ಈ ಸುಕೃತವು ಲಭಿಸುತ್ತದೆ? ಇದು ಅಲಭ್ಯವಾದುದು ನನಗೀಗ ಲಭ್ಯವಾಯಿತು ಅಲ್ಲವೇ? ಇಂತಹ ಉಪಕಾರ ಪಡೆದವರುಂಟೋ? ಎಂಬುದು ಇದರ ತಾತ್ಪರ್ಯವು." ಎನ್ರುಮ್ - ಎಂದು, ಸ್ಮರ್ತ್ತಾಕ್ಕಳ್ - ಶ್ರುತ್ಯರ್ಥವನ್ನು ಉಪಬ್ರಹ್ಮಣ ಮಾಡಿರುವ ಸ್ಮೃತಿಕರ್ತರುಗಳು, ದ್ರಾವಿಡ ಪ್ರಬಂಧಕರ್ತೃಗಳೂ ಶ್ರುತ್ಯರ್ಥವನ್ನು ಪಬ್ರಹ್ಮಣ ಮಾಡಿರುವದರಿಂದ "ಸ್ಮರ್ತ್ತಾಕ್ಕಳ್" ಎಂದು ಇಲ್ಲಿ ಪ್ರಯೋಗವು **ಶೊನ್ನ ಉಪನಿಷದರ್ಥತ್ತಿನ್ ಪಡಿಯೇ** - ಹೇಳಿದ ಉಪನಿಷತ್ತಿನ ಅರ್ಥದಹಾಗೆ, ಯಾವ ಉಪನಿಷತ್ತೆಂದರೆ:- **ಸುಹೃದಸ್ಸಾದುಕೃತ್ಯಾಂ ದ್ವಿಷನ್ತಃ ಪಾಪಕೃತ್ಯಾಂ**" ಎಂಬ ಶಾಟ್ಯಾಯನ ವಾಕ್ಯದ ಅರ್ಥವೆಂದು ಭಾವವು, **ಇವನುಕ್ಕು** - ಈ ದೇಹಾವಸಾನ ಸನ್ನಿಹಿತವಾಗಿರುವ ಪ್ರಪನ್ನನಿಗೆ, **ಅನುಕೂಲ ಪ್ರತಿಕೂಲರಾಯಿರುನ್ದುಳ್ಳ** - ಪ್ರಪನ್ನರಲ್ಲಿರುವ ಇಷ್ಟರೂ ಮತ್ತು ದ್ವೇಷಿಗಳಾಗಿರುವ, **ಇರಣ್ಡು ತಿರಕಿಲುಮ್** - ಎರಡು ಪಕ್ಷದಲ್ಲೂ, **ಇವರ್ ಪಕ್ಕಲ್** - ಈ ಪ್ರಪನ್ನಾಧಿಕಾರಿಯ ವಿಷಯದಲ್ಲಿ. **ಆನು**

---

(೧) ಪೆಂ. ತಿರು. ೫. ೪. ೩.

ಕೂಲ್ಯ ಪ್ರಾತಿಕೂಲ್ಯಙ್ಗಳುಕ್ಕು - ಅವರು ಮಾಡಿದ ಅನುಕೂಲ ಪ್ರತಿಕೂಲ ಪ್ರವೃತ್ತಿಗಳಿಗೆ, ಫಲಮಾಗ - ಪ್ರತಿಫಲವಾಗಿ, ಅಶಲ್ ಪಿಳನ್ದೇರಿಡುಗಿರ, ಪಿಳನ್ದು - ಇರುವ ಸ್ಥಳದಿಂದ ವಿಶ್ಲೇಷವನ್ನು ಹೊಂದಿ, ಎಂದರೆ ಈ ಪ್ರಪನ್ನನನ್ನು ಬಿಟ್ಟು, ಅಶಲ್ - ಇತರರಲ್ಲಿ ಎಂದರೆ ಇಷ್ಟರು ಶತ್ರುಗಳಲ್ಲಿ, ಏರಿಡುಗಿರಮು - ಆರೋಪಿಸುತ್ತದೆ, ಎನ್ನುಮ್ ಪಡಿ ಪಣ್ಣಿ - ಎಂದು ಹೇಳುವ ಹಾಗೆ ಮಾಡಿ; ಇದು ಐದನೆಯ ಉಪಕಾರವು. ಈತನು ಹಿಂದೆ ಪ್ರಪದನ ಮಾಡಿದ ಕಾಲದಲ್ಲೇ ಸರ್ವೇಶ್ವರನು ತನ್ನ ಪ್ರಿಯಭಕ್ತನಿಗೆ ಹಿತವನ್ನು ಮಾಡಬೇಕೆಂದುದ್ದೇಶಿಸಿ ಉತ್ತರಪೂರ್ವಾಘಗಳ ಅಶ್ಲೇಷ ವಿನಾಶವನ್ನು ಸಙ್ಕಲ್ಪಿಸಿಬಿಡುವನು. ಹೀಗೆ ಅಶ್ಲೇಷ ವಿನಾಶವನ್ನು ಹೊಂದುವ ಪುಣ್ಯಪಾಪಗಳಿಗೆ ಬೇರೇ ವಿಧವಾಗಿ ವಿನಿಯೋಗವನ್ನು ಸರ್ವೇಶ್ವರನು ಉದ್ದೇಶಿಸಿರುವದರಿಂದ, ಹಾಗೆ ಅವುಗಳನ್ನು ಈ ಪ್ರಪನ್ನನ ದೇಹಾವಸಾನ ಕಾಲದಲ್ಲಿ, ವಿನಿಯೋಗಿಸುವನು. ಹೇಗೆಂದರೆ:—ಪುಣ್ಯಕರ್ಮಗಳೆಲ್ಲಾ ಈತನಿಗೆ ಹಿತೈಷಿಗಳಾದ ಅಪ್ರಪನ್ನರಲ್ಲೂ, ಹಾಗೆಯೇ ಈತನಿಗೆ ದ್ವೇಷಿಗಳಾದ ಅಪ್ರಪನ್ನರಲ್ಲೂ ಹೋಗಿ ಸೇರುವ ಹಾಗೆ ಮಾಡುವನು. ವಿಭೀಷಣನಿಗೆ ರಾಜ್ಯಾಭಿಷೇಕವು ಸಮುದ್ರತರಣಕ್ಕೆ ಮುಂಚೆಯೇ ಉದ್ದೇಶಿಸಲ್ಪಟ್ಟು ರಾವಣ ವಧಾನಂತರ ಪ್ರಾಪ್ತವಾದ ಹಾಗೆ, ಪಾಪಗಳ ಅಶ್ಲೇಷ ವಿನಾಶಗಳ ಉದ್ದೇಶ್ಯವು ಭರಸಮರ್ಪಣ ಕಾಲದಲ್ಲೂ, ಆ ಸಂಕಲ್ಪವು ನೆರವೇರುವದು ರಾವಣ ರೂಪಸ್ಥೂಲ ದಶೇಂದ್ರಿಯಾದಿಗಳು ತೊಲಗಿದ ನಂತರ ಎಂದರೆ ದೇಹಾವಸಾನದಲ್ಲೂ ಆಗಲು ಕಾರಣವೇನೆಂದು ಕೇಳಬಹುದು. ಕೆಲವರು ಪ್ರಪದನ ಕಾಲದಲ್ಲಿ ಇಷ್ಟರಾದವರು ಅನಂತರ ದ್ವೇಷಿಗಳಾಗಿಯೂ, ದ್ವೇಷಿಗಳಾದವರು ಇಷ್ಟರಾಗಿಯೂ ಆಗಬಹುದು; ಮತ್ತು ಕೆಲವರು ಆ ಕಾಲದಲ್ಲಿ ಅಪ್ರಸನ್ನರಾಗಿರುವವರು ಅನಂತರ ಪ್ರಸನ್ನರಾಗಬಹುದು; ಆಗ ಪುನಃ ಬದಲಾಯಿಸಬೇಕಾದೀತು; ಆದುದರಿಂದ ಈ ಪುಣ್ಯಪಾಪಗಳ ವಿನಿಯೋಗವು ದೇಹಾವಸಾನದಲ್ಲೇ ಶ್ರಿಯಃಪತಿಯು ನಡಿಸುವನೆಂಬ ಭಾವವು. ಆದುದರಿಂದಲೇ "**ಶರೀರಪಾತತ್ತುಕ್ಕು ನಿಶ್ಚೈಪ್ಪಿಟ್ಟ ಸಮಯಮ್ ವನ್ದಪಾರೇ**" ಎಂಬ ಪ್ರಯೋಗವು ಈ ತಮ್ಮ ಉಪದೇಶವನ್ನು ಸಪ್ರಮಾಣವಾಗಿ ದಯಪಾಲಿಸಿರುತ್ತಾರೆ. ಅದಕ್ಕಾಗಿ ಉಪನಿಷದ್ವಾಕ್ಯವನ್ನೂ, ಅವುಗಳ ಉಪಬ್ರಹ್ಮಣಗಳಾದ ಮನುಸ್ಮೃತಿ ವಾಕ್ಯವನ್ನೂ, ಪೆರಿಯಾಳ್ವಾರ್ ತಿರುಮೊಳಿ ವಾಕ್ಯವನ್ನೂ ಉದಾಹರಿಸುತ್ತಾರೆ. ಪಾಪವು ಹೇಗೆ ಬಂಧಕವೋ ಪುಣ್ಯವೂ ಹಾಗೆಯೇ ಬಂಧಕವು ಎಂದು ಹೇಳುವದಕ್ಕಾಗಿ **ಪೊನ್ನುವಿರುಮ್ಬುಮಾನ ವಿಲಙ್ಗುಗಳ್ ಪೋಲೆ** ಎಂಬ ಪ್ರಯೋಗವು; ಪುಣ್ಯವು ಸ್ವಲ್ಪ ದುಃಖಮಿಶ್ರವಾದ ಸುಖದಾಯಕವಾದುದರಿಂದ ಚಿನ್ನದ ಬೇಡಿಯು, ಪಾಪವು ಪೂರಾ ದುಃಖಫಲವನ್ನು ಕೊಡುವದ

ನಿರ್ಯಾಣಸ್ಯ ದೇಶ ಕಾಲ ನಿಯಮೋ ನಾಸ್ತಿ

(೬) "ದಿವಾಚ ಶುಕ್ಲಪಕ್ಷಶ್ಚ ಉತ್ತರಾಯಣ ಮೇವ ಚ । ಮುಮೂರ್ಷತಾಂ ಪ್ರಶಸ್ತಾನಿ" ಎನ್ರು ಸ್ಮೃತಿಯಿಲುಮ್, ಜ್ಯೋತಿಶ್ಶಾಸ್ತ್ರತ್ತಿಲ್ ನಿರ್ಯಾಣ ಪ್ರಕರಣತ್ತಿಲುಮ್, ಫಲಾಂತರ ಪ್ರಸಕ್ತರೈಯುಮ್ ಮೋಕ್ಷೋಪಾಯ ಪೂರ್ತಿಯಿಲ್ಲಾದಾರೈಯುಮ್, ಪತ್ತ ಚೊಲ್ಲುಮ್ ಕಾಲ ನಿಯಮಮ್ ಮನ್ರಿಕ್ಕೆ (೧) "ನಿಶಿನೇತಿ ಚೇನ್ನ ಸಂಬಂಧಸ್ಯ ಯಾವ

ದಂದ ಕಷ್ಟಿಣವ ಬೇಡಿಯು, ಉಪವಾಸ ಇವುಗಳಿಗೆ ಕೊಡಲ್ಪಟ್ಟವು.

ಪ್ರಪನ್ನನ ನಿರ್ಯಾಣಕ್ಕೆ ದೇಶಕಾಲಾದಿ ನಿಯಮಗಳಿಲ್ಲವು.

(೬) ಹೀಗೆ "ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂದು ಲೀಲಾಸಾರಥಿಯಾಗಿ ದಯ ಪಾಲಿಸಿದ ಅಮೋಘ ವಾಕ್ಯವನ್ನು ನಡಿಸಿಕೊಟ್ಟು ಆಮೇಲೆ ಮಾಡುವ ಉಪಕಾರವನ್ನು ತಿಳಿಸುತ್ತಾರೆ: — ದಿವಾಚ- ಹಗಲೂ, ಶುಕ್ಲಪಕ್ಷವೂ, ಉತ್ತರಾಯಣವೂ ಕೂಡ, ಮುಮೂರ್ಷತಾಂ- ಕೃತಕೃತ್ಯನಾಗಿ, ಸಾಯಲಪೇಕ್ಷೆಯುಳ್ಳವನಿಗೆ, ಪ್ರಶಸ್ತಾನಿ- ಶ್ರೇಷ್ಠವಾದವು; ಮುಂದಕ್ಕೆ "ವಿಪರೀತಂತು ಗರ್ಹಿತಂ" ಎಂಬುವದು ನಾಲ್ಕನೇ ಪಾದವು; ಹಾಗಲ್ಲದೆ ರಾತ್ರಿಯೂ, ಕೃಷ್ಣಪಕ್ಷವೂ, ದಕ್ಷಿಣಾಯನವಲ್ಲೂ ಮರಣವು ನಿಂದಿತವಾದುದು ಎಂಬ ಭಾವವು. ಮನುಷ್ಯರಿಗೆ ಹಗಲೂ, ಪಿತೃಗಳಿಗೆ ಶುಕ್ಲಪಕ್ಷವೂ, ದೇವತೆಗಳಿಗೆ ಉತ್ತರಾಯಣವೂ ಹಗಲಾದುದರಿಂದ ಪ್ರಶಸ್ತವು; ಮನುಷ್ಯರ ರಾತ್ರಿಕಾಲವೂ, ಪಿತೃಗಳ ರಾತ್ರಿಯಾದ ಕೃಷ್ಣಪಕ್ಷವೂ, ದೇವತೆಗಳ ರಾತ್ರಿಯಾದ ದಕ್ಷಿಣಾಯನವೂ ಪ್ರಶಸ್ತವಲ್ಲವೆಂಬ ಭಾವವು, ಎನ್ರುಮ್ - ಎಂಬದಾಗಿ, ಸ್ಮೃತಿಯಿಲುಮ್ - ಧರ್ಮ್ಯವ ಬೃಹ್ಮಣವಾದುದರಿಂದ ಸ್ಮೃತಿ ಎಂದು ಹೇಳಿಸಿಕೊಳ್ಳುವ ಭಾರತದಲ್ಲೂ, ಜ್ಯೋತಿಶ್ಶಾಸ್ತ್ರದ ನಿರ್ಯಾಣ ಪ್ರಕರಣದಲ್ಲೂ, ಫಲಾಂತರ ಪ್ರಸಕ್ತರೈಯುಮ್ - ಮೋಕ್ಷವಲ್ಲದ ಇತರ ಪ್ರಯೋಜನಾಪೇಕ್ಷೆಯುಳ್ಳವರನ್ನೂ, ಮೋಕ್ಷೋಪಾಯವಾದ ಭಕ್ತಿ ಪ್ರಪತ್ತಿಗಳ, ಪೂರ್ತಿ ಇಲ್ಲಾದಾರೈಯುಮ್ - ಅನುಷ್ಠಾನ ಪೂರ್ತಿಯಾಗದೇ ಇರುವವರನ್ನೂ, ಪತ್ತ - ಕುರಿತು, ಚೊಲ್ಲುಮ್ ಕಾಲನಿಯಮುಮ್ - ಹೇಳುವ ಕಾಲನಿಯಮವಾಗಿರತಕ್ಕದ್ದು, ಅನ್ರಿಕ್ಕೇ- ಹಾಗಲ್ಲದೆ, "ನಿಶಿನೇತಿಚೇನ್ನ ಸಂಬಂಧಸ್ಯ ಯಾವದ್ದೇಹ ಭಾವಿತ್ವಾದ್ದರ್ಶಯತಿಚ" ಎಂಬ ಬ್ರಹ್ಮಸೂತ್ರದಲ್ಲೂ,

---

(೬) ಭಾರ. ಆನು. ೨೨೨. ೩೧. (೧) ಶಾ ರೂ ೪. ೨ ೧೮.

ದ್ಧೇಹ ಭಾವಿತ್ವಾತ್" ಎನ್ನುವರ್, (೨) "ಅತಶ್ಚಾಯನೇಽಪಿ ದಕ್ಷಿಣೇ" ಎನ್ನುವರ್, ಕೊಲ್ಲುಗಿರಪಡಿಯೇ ಮನುಷ್ಯ ಪಿತೃದೇವತೆಗಳುಕ್ಕೆಯು ಪಗಲ್ ಗಳಿಲೇಯಾದಲ್, ರಾತ್ರಿಗಳಿಲೇಯಾದಲ್, ತಾಁ ಸಙ್ಕಲ್ಪಿತ್ತ

"ಅತಶ್ಚಾಯನೇಽಪಿ ದಕ್ಷಿಣೇ" ಎಂದೂ, ಕೊಲ್ಲುಗಿರಪಡಿಯೇ - ಹೇಳಿರುವ ಹಾಗೆ, ಮನುಷ್ಯ ಪಿತೃದೇವತೆಗಳ, ಪಗಲ್ ಗಳಿಲೆಯಾದಲ್ - ಹಗಲುಗಳಲ್ಲೇ ಯಾಗಲಿ, ಎಂದರೆ ಹಗಲು, ಶುಕ್ಲಪಕ್ಷ, ಉತ್ತರಾಯಣಗಳಲ್ಲೇಯಾಗಲಿ, ಅಥವಾ ರಾತ್ರಿಗಳಿಲೇಯಾದಲ್ - ರಾತ್ರಿಗಳಾದ ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನಗಳ ಲ್ಲೇಯಾಗಲಿ, ಮುಂದೆ ನಿರ್ಯಾಣ ಉಂಟಾಗುತ್ತದೆಂದು ಹೇಳಿ, ಆ ನಿರ್ಯಾಣ ಕ್ರಮ ವನ್ನು ವಿವರಿಸುತ್ತಾರೆ. ಈ ವಾಕ್ಯಖಂಡಾಭಿಪ್ರಾಯವೇನೆಂದರೆ, "ದಿವಾ ಚ ಶುಕ್ಲಪಕ್ಷಶ್ಚ" ಎಂಬ ಭಾರತ ವಚನವು ಸಾಯುವದಕ್ಕೆ ಪ್ರಶಸ್ತವಾದ, ಅಪ್ರ ಶಸ್ತವಾದ ಕಾಲಗಳನ್ನು ಹೇಳುತ್ತದೆ. ಈ ವಚನವೇನು ಪ್ರಪನ್ನನನ್ನು ಕುರಿತು ಹೇಳಿದುದೇ, ಅಲ್ಲವೇ ಇತರರನ್ನುದ್ದೇಶಿಸಿ ಹೇಳಿದುದೇ ಎಂಬ ಪ್ರಶಂಸೆ ಯಲ್ಲಿ, ಇದು ಪ್ರಪನ್ನನನ್ನು ಕುರಿತು ಹೇಳಿದುವಲ್ಲವೆಂದೂ ಇತರರನ್ನು ಕುರಿತು ಹೇಳಿದುದೇ ಎಂದು ಶ್ರೀ ಭಾಷ್ಯದಲ್ಲಿ ಸಿದ್ಧಾಂತಿಸಲ್ಪಟ್ಟಿರುತ್ತದೆ. ಆದುದ ರಿಂದ ಹೀಗೆ ಕಾಲನಿಯಮವನ್ನು ಭಾರತದಲ್ಲೂ ಜ್ಯೋತಿಶ್ಶಾಸ್ತ್ರದಲ್ಲೂ ಹೇಳಿರು ವದು "ಫಲಾಂತರ ಪ್ರಸಕ್ತರ್ಕ್ಕೆಯುಮ್, ಮೋಕ್ಷೋಪಾಯ ಪೂರ್ತಿಯಿ ಲ್ಲಾದಾರ್ಕ್ಕೆಯುಮ್" ಕುರಿತು ಹೇಳಲ್ಪಟ್ಟಿತೆಂದುಪದೇಶಿಸಿರುತ್ತಾರೆ. ಏತಕ್ಕೆ ಇವು ಪ್ರಶಸ್ತವೂ ನಿಂದಿತಗಳೂ, ಎಂದರೆ ಮೋಕ್ಷಪ್ರಾಪ್ತಿಗೆ ಸುತರಾಂ ಅಲ್ಲವು, ಏಕೆಂದರೆ ಇವರುಗಳಿಗೆ ಉಪಾಯಪೂರ್ತಿಯಿಲ್ಲದುದರಿಂದ ಮೋಕ್ಷಪ್ರಾಪ್ತಿಗೆ ಇನ್ನೂ ಅನುಕೂಲವೇ ಇಲ್ಲವು, ಇತರ ಉತ್ಕೃಷ್ಟ ಫಲಪ್ರಾಪ್ತಿಗೆ ಹೇತುವಾಗಿ ಪ್ರಶಸ್ತವೂ, ನಿಕೃಷ್ಟ ಫಲಪ್ರಾಪ್ತಿಗಳಿಗೆ ಹೇತುವಾಗಿ ಗರ್ಹಿತವೂ ಎಂಬ ಭಾವವು. ಹಾಗಾದರೆ ಮೋಕ್ಷಾರ್ಥಿಗಳಾದ ಭಕ್ತ ಪ್ರಪನ್ನರುಗಳಿಗೆ ಹೇಗೆ ಎಂದರೆ ಮಹರ್ಷಿಯು, "ನಿಶಿ ನೇತಿ ಚೇನ್ನ...." ಎಂಬ ಸೂತ್ರದಲ್ಲೂ, "ಅತಶ್ಚಾಯನೇಽಪಿ ದಕ್ಷಿಣೇ" ಎಂಬ ಸೂತ್ರದಲ್ಲೂ, ಅಂತಹ ಕಾಲನಿಯಮಗಳೇನೂ ಪ್ರಪನ್ನರಿಗಿಲ್ಲವೆಂದು ಸ್ಥಾಪಿಸಿರುತ್ತಾರೆ. ಇವುಗಳ ಅರ್ಥವೇನೆಂದರೆ:—ನಿಶಿ ನೇತಿ ಚೇನ್ನ - ರಾತ್ರಿ ಯಲ್ಲಿ ಮೃತನಾದ ಪ್ರಪನ್ನನಿಗೆ ಬ್ರಹ್ಮಪ್ರಾಪ್ತಿಯಿಲ್ಲವೆಂದು ಹೇಳುವದು ಸರಿಯ ಲ್ಲವು : ಏಕೆಂದರೆ, ಸಂಬಂಧಸ್ಯ ಯಾವದ್ದೇಹ ಭಾವಿತ್ವಾತ್ - ಅಸಂಭವದೇ

(೨) ಬ್ರ. ಸೂ. ೪. ೨. ೧೯.

ಇರುವ ಕರ್ಮ ಸಂಬಂಧವೆಲ್ಲಾ ಈ ವಿದ್ಯಾ ಮಾಹಾತ್ಮ್ಯೆಯಿಂದಲೇ ನಷ್ಟವಾಗುವದರಿಂದಲೂ, ಮತ್ತು ಆರಬ್ಧವಾದ ಕರ್ಮ ಸಂಬಂಧವೆಲ್ಲಾ ದೇಹಾವಸಾನದಲ್ಲಿ ನಷ್ಟವಾಗುವದರಿಂದಲೂ, ಹೀಗೆ ಪುಣ್ಯಪಾಪ ಸಂಬಂಧವೆಲ್ಲಾ ದೇಹಪಾತದಲ್ಲಿ ನಷ್ಟವಾಗುವದರಿಂದ, ರಾತ್ರಿಯಲ್ಲಿ ಪ್ರಪನ್ನನಿಗೆ ಮರಣ ಕೂಡದೆಂಬ ನಿಯಮವು ಸರಿಯಲ್ಲವು. **ತದ್ದರ್ಶಯತಿಚ** - ಶ್ರುತಿಯೂ ಕೂಡ ಈ ಅಭಿಪ್ರಾಯವನ್ನೇ ತೋರಿಸುತ್ತದೆ. **"ತಸ್ಯತಾವದೇವಚಿರಂ ಯಾವನ್ನವಿಮೋಕ್ಷ್ಯೇಽಥಸಂಪತ್ಸ್ಯೇ"** ಯಾವ ಪ್ರಪನ್ನನಿಗೆ ಎಲ್ಲಿಯವರೆಗೆ ದೇಹಸಂಬಂಧವು ಬಿಡಲಿಲ್ಲವೋ ಅಲ್ಲಿಯವರೆಗೇನೆ ವಿಳಂಬವು, ಅನಂತರ ಅವನಿಗೆ ಮೋಕ್ಷಪ್ರಾಪ್ತಿಯೆಂದು ಶ್ರುತಿಯು ಹೇಳುತ್ತದೆ. ಮುಂದಿನ ಸೂತ್ರವಾದ **"ಅತಶ್ಚಾಯನೇಪಿ ದಕ್ಷಿಣೇ"** ಎಂಬ ಸೂತ್ರದಲ್ಲಿ, ದಕ್ಷಿಣಾಯನದಲ್ಲಿ ಮೃತನಾದ ಪ್ರಪನ್ನನಿಗೆ ಮೋಕ್ಷ ಉಂಟೋ ಇಲ್ಲವೋ ಎಂಬ ವಿಷಯವು ಚರ್ಚಿಸಲ್ಪಟ್ಟು, ದಕ್ಷಿಣಾಯನದಲ್ಲಿ ಮೃತನಾದರೂ ಮೋಕ್ಷ ಉಂಟೆಂದು ಸ್ಥಾಪಿಸಲ್ಪಟ್ಟಿರುತ್ತದೆ. ಆದರೆ **"ಅಥಯೋ ದಕ್ಷಿಣೇ ಪ್ರಮೀಯತೇ ಪಿತೄಣಾಮೇವ ಮಹಿಮಾನಂಗತ್ವಾ ಚನ್ದ್ರಮಸಸ್ಸಾಯುಜ್ಯಂ"** (ತೈ. ನಾ. ೫೨. ೩) "ಯಾರು ದಕ್ಷಿಣಾಯನದಲ್ಲಿ ಮೃತಿ ಹೊಂದುವರೋ ಅವರು ಚಂದ್ರಸಾಯುಜ್ಯವನ್ನು ಹೊಂದಿ ಪಿತೃಲೋಕವನ್ನು ಹೊಂದುವರು" ಎಂದೂ, ಹಾಗೆ ಚಂದ್ರಸಾಯುಜ್ಯವನ್ನು ಹೊಂದಿದವರಿಗೆ ಪುನರಾವೃತ್ತಿಯುಂಟೆಂದು ಹೇಳಿದೆಯಲ್ಲಾ ಎಂದರೆ ಪ್ರಪನ್ನನಾದ ಬ್ರಹ್ಮವಿತ್ತು ಚಂದ್ರಸಾಯುಜ್ಯವನ್ನು ಹೊಂದಿ, ವಿಶ್ರಾಂತನಾಗಿ ಮುಂದೆ ಪ್ರಯಾಣ ಮಾಡಿ ಪರಬ್ರಹ್ಮಪ್ರಾಪ್ತಿಯನ್ನು ಹೊಂದುವನೆಂಬ ಭಾವವು. ಆದರೆ ಛಾಂದೋಗ್ಯದಲ್ಲಿ ದಕ್ಷಿಣಾಯನ ಮರಣವು ನಿಷೇಧಿಸಲ್ಪಟ್ಟಿದೆಯಲ್ಲಾ ಎಂದರೆ ಅದೂ ಕೂಡ ಅಪ್ರಪನ್ನನನ್ನು ಕುರಿತು ಹೇಳಿದುದೆಂದು ಭಾವಿಸತಕ್ಕದ್ದು. **ಅತಶ್ಚ** - ಆ ಕಾರಣದಿಂದ, ಯಾವ ಕಾರಣದಿಂದೆಂದರೆ ಹಿಂದಿನ ಸೂತ್ರದಲ್ಲಿ ನಿಶಿಯಲ್ಲಿ ಮೃತನಾದ ಪ್ರಪನ್ನನಿಗೂ ಕೂಡ ಬ್ರಹ್ಮಪ್ರಾಪ್ತಿಯುಂಟೆಂದು ಶ್ರುತಿಯಲ್ಲಿ ಹೇಳಿರುವ ಕಾರಣದಿಂದಲೇ, **ಅಯನೇಪಿ ದಕ್ಷಿಣೇ** - ದಕ್ಷಿಣಾಯನದಲ್ಲಿ ಪ್ರಪನ್ನನು ಮೃತನಾದರೂ ಕೂಡ ಪರಬ್ರಹ್ಮಪ್ರಾಪ್ತಿಯುಂಟು.

ಇದರ ಮೇಲೆ ಇನ್ನೊಂದು ಪೂರ್ವಪಕ್ಷವನ್ನೂ ತರಬಹುದು. ಗೀತೆಯಲ್ಲಿ ೮ನೆಯ ಅಧ್ಯಾಯದಲ್ಲಿ **"ಯತ್ರ ಕಾಲೇ ತ್ವನಾವೃತ್ತಿಂ ಆವೃತ್ತಿಂಚೈವ ಯೋಗಿನಃ । ಪ್ರಯಾತಾ ಯಾನ್ತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ"** ಎಂದು ಶ್ರೀಕೃಷ್ಣನು ಹೇಳಿ, ಮುಂದಕ್ಕೆ **"ಅಗ್ನಿರ್ಜ್ಯೋತಿರಹಶ್ಶುಕ್ಲಃ ಷಣ್ಮಾಸಾ ಉತ್ತರಾಯಣಂ । ತತ್ರ ಪ್ರಯಾತಾ ಗಚ್ಛನ್ತಿ ಬ್ರಹ್ಮ ಬ್ರಹ್ಮ**

ವಿದೋ ಜನಾಃ ॥" ಎಂದು ಹೇಳಿ, ಅನಂತರ "ಧೂಮೋ ರಾತ್ರಿ ಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ । ತತ್ರ ಚಾಂದ್ರಮಸಂ ಜ್ಯೋತಿಃ ಯೋಗೀಪ್ರಾಪ್ಯ ನಿವರ್ತತೇ ॥ ಶುಕ್ಲ ಕೃಷ್ಣೇ ಗತೀಹ್ಯೇತೇ" ಎಂದು ಉತ್ತರವನ್ನು ದಯಪಾಲಿಸಿರುತ್ತಾನೆ. ಈ ಶ್ಲೋಕಗಳಿಗೆ ಅರ್ಥವನ್ನು ಕೆಲವರು, "ಯಾವ ಕಾಲಗಳಲ್ಲಿ ಯೋಗಿಗಳು ದೇಹತ್ಯಾಗ ಮಾಡಿದರೆ ಅನಾವೃತ್ತಿಯಾಗಲಿ ಆವೃತ್ತಿಯಾಗಲಿ ಉಂಟಾಗುತ್ತದೋ ಅಂತಹ ಕಾಲಗಳು ಯಾವುವೆಂದು ನಿನಗೆ ತಿಳಿಸುವೆನೆಂದು ಅರ್ಜುನನಿಗೆ ಹೇಳಿ ಅನಾವೃತ್ತಿಗೆ ದೇಹತ್ಯಾಗವು ಹಗಲು, ಶುಕ್ಲ ಪಕ್ಷ, ಉತ್ತರಾಯಣಗಳಲ್ಲಿ ಆಗಬೇಕೆಂದೂ, ಆವೃತ್ತಿಗೆ ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನಗಳಲ್ಲೂ ಆಗಬೇಕೆಂದು ಹೇಳುವರು. ಈ ಅಭಿಪ್ರಾಯವು ಮೇಲೆ ವಿವರಿಸಲ್ಪಟ್ಟ ಶಾರೀರಕ ಸೂತ್ರಾಭಿಪ್ರಾಯಕ್ಕೆ ವಿರೋಧವಾದುದಾಗುತ್ತದೆ. ಎರಡನ್ನು ಬರೆದವರೂ ಶ್ರೀ ವ್ಯಾಸಮಹರ್ಷಿಯೇಯಾದುದರಿಂದ, ಹೀಗೆ ವಿರುದ್ಧಾರ್ಥಗಳನ್ನು ಜ್ಞಾನದೀಪ್ತಿಯಿಂದ ವಿರಾಜಿಸುವರಾಗಿ "ವ್ಯಾಸಾಯ ವಿಷ್ಣುರೂಪಾಯ" ಎಂದು ಹೇಳಿಸಿಕೊಳ್ಳುವ ಬ್ರಹ್ಮವಿದಗ್ರೇಸರರು ಎಂದಿಗೂ ಹೇಳಲಾರರು. ಆದುದರಿಂದ ಈ ಶ್ಲೋಕಗಳಿಗೆ ಶಾರೀರಕ ಸೂತ್ರಾಭಿಪ್ರಾಯಾನುಸಾರವಾಗಿ ಅರ್ಥ ಹೇಳತಕ್ಕದ್ದು. ಅಂತಹ ಸಮಂಜಸಾರ್ಥವನ್ನು ಶ್ರೀ ಭಾಷ್ಯಕಾರರು ದಯಪಾಲಿಸಿರುತ್ತಾರೆ. ಅವರಭಿಪ್ರಾಯವೇನೆಂದರೆ :—ಕಾಲಶಬ್ದವು ಕಾಲಾಭಿಮಾನ ದೇವತೆಗಳನ್ನು ಹೇಳುವದರಿಂದಲೂ, ಆ ದೇವತೆಗಳ ಮೂಲಕವಾಗಿ ದೇಹಾವಸಾನವನ್ನು ಹೊಂದಿದ ಆತ್ಮನು ಹೋಗುವದರಿಂದಲೂ, ಇಲ್ಲಿ ಕಾಲಶಬ್ದವು ಆತ್ಮನು ಹೋಗುವ ಗತಿಯನ್ನು ಬೋಧಿಸುತ್ತದೆ. ಯೋಗಿನಃ ಎಂದರೆ ಇಲ್ಲಿ ಮೋಕ್ಷಕ್ಕಾಗಿ ಯೋಗದಲ್ಲಿರುವನನ್ನು ಮಾತ್ರವೇ ಬೋಧಿಸಲಿಲ್ಲವು, ನಾನಾವಿಧ ಉಪಾಸಕರು ಬೋಧಿಸಲ್ಪಟ್ಟರು. ಯಾವ ಮಾರ್ಗದಿಂದ ಹೋಗಿ ಅನಾವೃತ್ತಿಯನ್ನೂ, ಯಾವ ಮಾರ್ಗದಿಂದ ಆವೃತ್ತಿಯನ್ನೂ ಸಹ ಹೊಂದುವರೋ ಅಂತಹ ಮಾರ್ಗಗಳು ಯಾವುವೆಂಬುದನ್ನು ಹೇಳುವೆನು, ಓ ಭರತಕುಲಶ್ರೇಷ್ಠನಾದ ಅರ್ಜುನನೇ ಕೇಳು ಎಂಬುದು "ಯತ್ರಕಾಲೇ" ಎಂಬ ಶ್ಲೋಕಾಭಿಪ್ರಾಯವು. ಮೊದಲು ಅರ್ಚಿರಾದಿ ಗತಿಯನ್ನು "ಅಗ್ನಿರ್ಜ್ಯೋತಿಃ" ಎಂಬ ಶ್ಲೋಕದಿಂದ ವಿವರಿಸಿ, ಇದಕ್ಕೆ ಅನಾವೃತ್ತಿಯನ್ನು ಹೇಳುತ್ತಾರೆ. ಮೋಕ್ಷಾರ್ಥಿಯಾದ ಉಪಾಸಕನಿಗೆ, ಅರ್ಚಿರ್ಜ್ಯೋತಿಃ - ಅಗ್ನಿರೂಪವಾದ ಜ್ಯೋತಿಸ್ಸು, ಇದರಿಂದ ಅರ್ಚಿಯು ಹೇಳಲ್ಪಟ್ಟಿತು, ಅಹಸ್ಸು, ಶುಕ್ಲಪಕ್ಷ, ಉತ್ತರಾಯಣ, ಈ ಕಾಲಾಭಿಮಾನ ದೇವತೆಗಳ ಮೂಲಕ ಗತಿಯುಳ್ಳ. ಬ್ರಹ್ಮವಿದೋ ಜನಾಃ - ಬ್ರಹ್ಮವಿತ್ತುಗಳು. ಬ್ರಹ್ಮ ಗಚ್ಛನ್ತಿ - ಪರಬ್ರಹ್ಮವನ್ನು ಹೊಂದುವರು. ಇದಕ್ಕೆ ದೇವಯಾನವೆಂದು

ಸಮಯತ್ತಿಲೇ, (೩) "ಅಪ್ರಚ್ಯುತ ಪೂರ್ವ ಸಂಸ್ಕಾರ ಮನೋರಥ" ನಾನ್ಪುಡಿಪಣ್ಣಿ, ತತ್ಕಾಲೇ.

ಹೆಸರು. ಮುಂದಿನ ಶ್ಲೋಕದಿಂದ ಧೂಮಾದಿ ಗತಿಯು ಹೇಳಲ್ಪಡುತ್ತದೆ. **ಧೂಮಃ** - ಹೊಗೆಯೂ, ರಾತ್ರಿಯೂ, ಕೃಷ್ಣಪಕ್ಷವೂ, ಉತ್ತರಾಯಣವೂ, ಈ ದೇವತೆಗಳ ಮೂಲಕ ಹೋಗುವ, **ಯೋಗೀ** - ಉಪಾಸಕನು, **ಚಾಂದ್ರಮಸಂ ಜ್ಯೋತಿಃ** - ಚಂದ್ರಲೋಕವನ್ನು, **ಪ್ರಾಪ್ಯ** - ಹೊಂದಿ, **ನಿವರ್ತತೇ** - ಹಿಂತಿರುಗಿ ಬರುವನು. ಹೀಗೆ **ಶುಕ್ಲ ಕೃಷ್ಣ ಗತೀಹ್ಯೇತೇ** - ದೇವಯಾನವಾದ ಅರ್ಚಿರಾದಿ ಗತಿಯೊಂದು, ಪಿತೃಯಾಣವಾದ ಧೂಮಾದಿ ಗತಿಯೊಂದು, ಹೀಗೆ ಎರಡು ಮಾರ್ಗಗಳು ದೇಹಾವಸಾನ ಉಂಟಾದವನಿಗೆ ಎಂದು ಹೇಳಲ್ಪಟ್ಟಿರುತ್ತದೆ. ಇದರಿಂದ ಕಾಲವೆಂದರೆ ಕಾಲಾಭಿಮಾನ ದೇವತೆಯು ಮಾರ್ಗವೆಂದೇ ಅರ್ಥ ಹೇಳತಕ್ಕದ್ದು. ಕಾಲಶಬ್ದವು ಕಾಲವನ್ನೇ ಬೋಧಿಸುವುದಾದರೆ ಗತಿಯೊಂದಿಗೆ ಸಾಮಾನಾಧಿಕರಣ್ಯವೂ, ಯದಾ ತದಾ ಎಂದು ಹೇಳದೆ ಯತ್ರ ತತ್ರ ಎಂದು ಪ್ರದೇಶ ಬೋಧಕತ್ವವೂ ಕೂಡುವದಿಲ್ಲವು. ಆದರೆ ಭೀಷ್ಮಾದಿಗಳು ದೇಹತ್ಯಾಗಕ್ಕೆ ಉತ್ತರಾಯಣ ಕಾಲ ನಿರೀಕ್ಷಣೆ ಮಾಡಿದರೆಂದು ಇದೆಯಲ್ಲಾ ಎಂದರೆ ಅವರು ಯೋಗಪ್ರಭಾವಮೂಲಕ ತಮ್ಮಿಷ್ಟಾನುಸಾರ ಮರಣಹೊಂದುವರಾದ ಪ್ರಯುಕ್ತ ಧರ್ಮಪ್ರವರ್ತನೆಗಾಗಿ ಉತ್ತರಾಯಣಪ್ರಾಶಸ್ತ್ಯವನ್ನು ಪ್ರಕಟಿಸುವದಕ್ಕಾಗಿ ಹಾಗೆ ನಿರೀಕ್ಷಿಸಿದರು. ಅದು ಅವರಿಗೆ ಆವಶ್ಯಕವಲ್ಲವು.

ಆದುದರಿಂದ ಪ್ರಪನ್ನನ ನಿರ್ಯಾಣಕ್ಕೆ ಕಾಲನಿಯಮಗಳು ಯಾವವೂ ಇಲ್ಲವು. ಹಾಗೆಯೇ ದೇಶ, ರೀತಿ ಇವುಗಳ ನಿಯಮವೂ ಇಲ್ಲವೆಂದು ಮುಂದೆ ಉಪದೇಶಿಸಲ್ಪಡುತ್ತದೆ. ಆ ಕಾರಣದಿಂದ, ಪಗಲ್‌ಗಳಿಲೇಯಾದಲ್, ರಾತ್ರಿಗಳಿಲೇ ಯಾದಲ್ ಎಂದು ಯಾವದಾದರೂ ಆಗಬಹುದೆಂದು ಹೇಳಿರುತ್ತಾರೆ. ತಾನ್ ಸಙ್ಕಲ್ಪಿತ್ತ ಸಮಯತ್ತಿಲೇ - ಈಶ್ವರನಾದ ತಾನು ಸಂಕಲ್ಪಿಸಿದ ಸಮಯದಲ್ಲಿ **ಅಪ್ರಚ್ಯುತ** - ಜಾರಿಹೋಗದ ಎಂದರೆ ತಪ್ಪಿಹೋಗದ, **ಪೂರ್ವ ಸಂಸ್ಕಾರ** - ಹಿಂದೆ ಇದ್ದ, ಸರ್ವೇಶ್ವರನಿಗೆ ಕೈಂಕರ್ಯ ಮಾಡಬೇಕೆಂಬ ಸಂಸ್ಕಾರವೇನು, **ಮನೋರಥನಾನ್ಪುಡಿ** - ಮೋಕ್ಷ ಬೇಕೆಂಬಾಶೆಯೇನು, ಇವುಗಳನ್ನು ನೆನಪಾಗಿ **ಪಣ್ಣಿ** - **ಮಾಡಿ**, ಎಂದರೆ ಅವುಗಳು ಮರೆತುಹೋಗದ ಹಾಗೆ ಮಾಡಿ ; ಹೀಗೆ ಈ ಆರು ವಿಧ ಉಪಕಾರಗಳನ್ನು ನಿರ್ಯಾಣಕ್ಕೆ ಪೂರ್ವಭಾವಿಯಾಗಿ ಈ ಪ್ರಪನ್ನನಿಗೆ ಉಂಟುಮಾಡುವನೆಂದು ಹೇಳಿ ಮುಂದೆ ನಿರ್ಯಾಣಕ್ರಮವನ್ನೂ ಆ ಕಾಲದಲ್ಲಿ

(೩) ಶ್ರೀ ಭಾಷ್ಯಕಾರರ ಶರಣಾಗತಿ ಗದ್ಯ.

ನಿರ್ಯಾಣಕ್ರಮಃ ; ಸರ್ವೇಶ್ವರಸ್ಯ ಮಹೋಪಕಾರಾಶ್ಚ.

(೧) ಶಿರೈ ಕಿಡನ್ದ ರಾಜಕುಮಾರ್ಱ ತಿರತ್ತಿಲ್ ಪ್ರಸನ್ನನಾನ ರಾಜಾ, ವಿಲಙ್ಗು ವೆಟ್ಟಿ ಶಿರೈಕ್ಕೂಡತ್ತಿಲ್ ನಿನ್ಱುಮ್ ಕೊಣ್ಡು ಪುಱಪ್ಪಡುಮಾಪ್ಪೋಲೆ ಪ್ರಶಸ್ತಾಪ್ರಶಸ್ತ ನಿಯಮಮಱ ತತ್ಕಾಲೋಪಸ್ಥಿತಮಾಯಿರುಪ್ಪದೇದೇನುಮೊರು ಶರೀರವಿಶ್ಲೇಷ ನಿಮಿತ್ತತ್ತೈಯುಂಡಾಕ್ಕಿ,

---

ಮಾಡುವ ಸರ್ವೇಶ್ವರನ ಮಹೋಪಕಾರಗಳನ್ನೂ ತಿಳಿಸುತ್ತಾರೆ.

ನಿರ್ಯಾಣಕ್ರಮವೂ, ಆ ಕಾಲದಲ್ಲಿ ಸರ್ವೇಶ್ವರನ ಮಹೋಪಕಾರವೂ.

(೨) ಈ ಏಳನೆಯ ಉಪಕಾರ ನಿರೂಪಣವನ್ನು ಒಂದು ದೃಷ್ಟಾಂತ ಮೂಲಕ ತಿಳಿಸುತ್ತಾರೆ:—ಒಂದು ವೇಳೆ ದುರ್ಮರಣಾದಿಗಳು ಪ್ರಾಪ್ತವಾದರೆ, ಅವು ದುಷ್ಟಫಲಸೂಚಕವಲ್ಲವೇ? ಇತರಾಧಿಕಾರಿಗಳಿಗೆ ಹಾಗೆ, ಪ್ರಪನ್ನನಿಗೆ ಹಾಗಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಆದರೆ ಪ್ರಪನ್ನನಿಗೆ ಯೋಗ್ಯವಾದ ಶರೀರವಿಶ್ಲೇಷಕ್ರಮದಿಂದ ನಿರ್ಯಾಣವನ್ನುಂಟುಮಾಡುವದು ಕೃಪಾಸಾಗರನ ಕರ್ತವ್ಯವಲ್ಲವೇ ಎಂದರೆ ಇಂತಹ ನಿರ್ಯಾಣಕ್ರಮವೂ ಪ್ರಾರಬ್ಧಾನುಗುಣವಾಗಿ ಈಶ್ವರಸಙ್ಕಲ್ಪದಿಂದ ನಡೆಯುವದರಿಂದ, ದೇಹಾವಸಾನವು ಪ್ರಶಸ್ತವಾದುದೇಯಾಗಲಿ ಅಪ್ರಶಸ್ತವಾದುದೇಯಾಗಲಿ ಆಗಬಹುದೆಂದು ಮುಂದಿನ ವಾಕ್ಯದಿಂದ ತಿಳಿಸಿ, ಫಲದಲ್ಲೇನೂ ವ್ಯತ್ಯಾಸವಿಲ್ಲವೆಂದುಪದೇಶಿಸುತ್ತಾರೆ :—

ಶಿರೈ ಕಿಡನ್ದ - ಕಾರಾಗೃಹದಲ್ಲಿರುವ, **ರಾಜಕುಮಾರ್ಱ ತಿರತ್ತಿಲ್** - ರಾಜಪುತ್ರನ ವಿಷಯದಲ್ಲಿ, **ವಿಲಙ್ಗು ವೆಟ್ಟಿ** - ಬೇಡಿಯನ್ನು ಛೇದಿಸಿ, **ಶಿರೈಕೂಡತ್ತಿಲ್ ನಿನ್ಱುಮ್** - ಕಾರಾಗೃಹದ ದೆಸೆಯಿಂದ, **ಪುಱಪ್ಪಡುಮಾಪ್ಪೋಲೆ** - ಹೊರಗೆ ಹೊರಟುಬರುವ ಹಾಗೆ, **ಪ್ರಶಸ್ತಾಪ್ರಶಸ್ತ ನಿಯಮಮಱ** - ಈ ದೇಶಕಾಲಗಳು ಪ್ರಶಸ್ತವಾದವು, ಇವು ಪ್ರಶಸ್ತವಲ್ಲವೆಂಬ ನಿಯಮಗಳೇನೂ ಇಲ್ಲದೆ, **ತತ್ಕಾಲೋಪಸ್ಥಿತಮಾಯಿರುಪ್ಪದು** - ಆ ನಿರ್ಯಾಣಕಾಲಕ್ಕೆ ಒದಗಿರುವದು, **ಏದೇನುಮೊರು** - ಯಾವುದಾದರೂ ಒಂದು **ಶರೀರ ವಿಶ್ಲೇಷ ನಿಮಿತ್ತತ್ತೈಯುಂಡಾಕ್ಕಿ** - ಈ ಸ್ಥೂಲದೇಹವನ್ನು ಬಿಟ್ಟುಹೋಗಲು ಒಂದು ಕಾರಣ (ವ್ಯಾಜ) ವನ್ನುಂಟುಮಾಡಿ, ಈ ಮೇಲಿನ ವಾಕ್ಯಖಂಡದಿಂದ ಪ್ರಪನ್ನನ ದೇಹತ್ಯಾಗಕ್ಕೆ ದೇಶ, ಕಾಲ, ರೀತಿಗಳು ಪ್ರಶಸ್ತವಾದವುಗಳಾಗಿಯೇ ಇರಬೇಕೆಂಬ ನಿಯಮವಿಲ್ಲವೆಂದುಪದೇಶಿಸಿರುತ್ತಾರೆ. ಪ್ರಪನ್ನನಾದ ಪ್ರಯುಕ್ತ “ಅಹಂ

ವಿದ್ವದವಿದ್ವತ್ಸಾಧಾರಣೋತ್ಕ್ರಾಂತಿ ಕ್ರಮಃ.

(೮) ವಾಗಾದಿಗಳಾನ ಬಾಹ್ಯೇಂದ್ರಿಯಙ್ಗಳ್ ಪತ್ತೈಯುಮ್

ಸ್ಮರಾಮಿ ಮದ್ಭಕ್ತಂ" ಎಂದು ವರಾಹ ಚರಮಶ್ಲೋಕದಲ್ಲಿ ಹೇಳಿರುವ ಹಾಗೆ ಸರ್ವೇಶ್ವರನು ಸ್ಮರಿಸುವದರಿಂದ ಈತನನ್ನು ಅಪ್ರಚ್ಯುತ ಪೂರ್ವಸಂಸ್ಕಾರ ಮನೋರಥನನ್ನಾಗಿ ಮಾಡುವನು. ಹಿಂದೆ ಉಂಟಾಗಿದ್ದ ಭಗವತ್ಕೈಂಕರ್ಯದಲ್ಲೂ ಮೋಕ್ಷಪ್ರಾಪ್ತಿಯಲ್ಲೂ ಅಭಿರುಚಿಯು ತಪ್ಪದ ಹಾಗೆ ಮಾಡುವನು. ಈತನಿಗೆ ಸ್ಥೂಲದೇಹ ಬಂಧವನ್ನು ತಪ್ಪಿಸಿ ಪುನಃ ಬಂಧವುಂಟಾಗದ ಹಾಗೆ ಮಾಡತಕ್ಕದ್ದು ಈ ಮುಕ್ತೋಪಕಾರಕನ ಕರ್ತವ್ಯವು. ಆದುದರಿಂದ ಸ್ಥೂಲದೇಹ ವಿಯೋಗಕ್ಕೆ ಪ್ರಪನ್ನನಿಗೆ ಯಾವುದೊಂದು ದೇಶಕಾಲ ರೀತಿಗಳ ನಿಯಮವೂ ಇಲ್ಲವು ಅಂತೂ ದೇಹವು ತೊಲಗಿ ಹೋಗುವದಕ್ಕೆ ಒಂದು ಕಾರಣ ಬೇಕು, ಅದು ಪ್ರಶಸ್ತವಾದ ದೇಶಕಾಲ ರೀತಿಗಳೇ ಆಗಲಿ, ಪ್ರಶಸ್ತವಲ್ಲವುಗಳೇ ಆಗಲಿ ಚಿಂತೆಯಿಲ್ಲವು ಇದಕ್ಕೆ ಒಂದು ನಿದರ್ಶನವನ್ನು ಸೂಚಿಸಿರುತ್ತಾರೆ ರಾಜಕುಮಾರನಾದರೂ ಏನೋ ತಪ್ಪು ಮಾಡಿದುದರಿಂದ ಕಾರಾಗೃಹದಲ್ಲಿಟ್ಟು ರಾಜನು ಬೇಡಿ ಹಾಕಿಸಿರುತ್ತಾನೆ. ಈಗ ರಾಜನನುಗ್ರಹ ಪ್ರಾಪ್ತವಾದುದರಿಂದ, ಆ ಬೇಡಿಯನ್ನು ಕತ್ತರಿಸಿ ಕಾರಾಗೃಹದಿಂದ ಹೊರಗೆ ಬಿಡುವ ಕಾಲವು ಒದಗಿರುವಾಗ, ಆ ಬೇಡಿಯನ್ನು ಕಡಿದುಹಾಕಲು, ಇದು ಪ್ರಶಸ್ತ ಕಾಲ ದೇಶ ರೀತಿ ಎಂದೂ, ಇದಲ್ಲವೆಂದೂ, ಯೋಚಿಸುವ ಆವಶ್ಯಕತೆ ಹೇಗೆ ಯಿಲ್ಲವೋ, ಹಾಗೆಯೇ ರಾಜರಾಜನಾದ ಸರ್ವೇಶ್ವರನ ನಿಗ್ರಹಕ್ಕೆ ಪಾತ್ರನಾಗಿ ಸಂಸಾರ ಬಂಧಕ್ಕೆ ಸಿಲುಕಿದ ಜೀವಾತ್ಮನಿಗೆ ಆ ರಾಜಾಧಿರಾಜನ ಕೃಪೆಯು ಒದಗಿ ಸಂಸಾರಬಂಧವೆಂಬ ಬೇಡಿಯ ವಿಚ್ಛೇದನವು ಯಾವ ದೇಶದಲ್ಲಿ ಯಾವ ಕಾಲದಲ್ಲಿ ಯಾವ ರೀತಿಯಲ್ಲಿ ಪ್ರಾಪ್ತವಾದರೂ ಏನೂ ವ್ಯತ್ಯಾಸವಿಲ್ಲವೆಂಬ ಭಾವವು.

ಹೀಗೆ ಉಪೋದ್ಘಾತ ರೂಪದಲ್ಲಿ ಈ ಅಧಿಕಾರಕ್ಕೆ ಸಂಬಂಧಪಟ್ಟವುಗಳನ್ನೆಲ್ಲಾ ಸೂಚಿಸಿ, ಪ್ರಕೃತ ಅಧಿಕಾರಾರ್ಥವಾದ ನಿರ್ಯಾಣಕ್ರಮವನ್ನು ವಿಶದವಾಗಿ ತಿಳಿಸುತ್ತಾರೆ :—

ಪ್ರಪನ್ನಾಪ್ರಪನ್ನರುಗಳಿಗೆ ಸಾಧಾರಣವಾದ ಉತ್ಕ್ರಾಂತಿ ಕ್ರಮವು.

(೮) **ವಾಗಾದಿಗಳಾನ**-ವಾಕ್ಕೇ ಮೊದಲಾದ, **ಬಾಹ್ಯೇಂದ್ರಿಯಙ್ಗಳ್**-ಕರ್ಮೇಂದ್ರಿಯಗಳೆಂದೂ ಬಾಹ್ಯೇಂದ್ರಿಯಗಳೆಂದೂ ಹೀಗೆ ಹತ್ತನ್ನೂ ಮನಸ್ಸಿನಲ್ಲಿ

ಮನಸ್ಸಿಲೇ ಶೇರ್ತ್ತು, ಇಪ್ಪಡಿ ಕರ್ಮಜ್ಞಾನೇಂದ್ರಿಯಙ್ಗಳೆಲ್ಲಾ ತ್ತೋಡು ಮ್ ಕೂಡಿನ ಮನಸ್ಸೈ ಪ್ರಾಣವಾಯುವೋಡೆ ಶೇರ್ತ್ತು, ಇಪ್ಪಡಿ ಪದಿನೊರು ಇಂದ್ರಿಯಙ್ಗಳೋಡುಮ್ ಕೂಡಿನ ಪ್ರಾಣವಾಯುವೈ ಜೀವನೋಡುಶೇರ್ತ್ತು, ಪ್ರಾಣೇಂದ್ರಿಯಸಂಯುಕ್ತನಾನ ಜೀವನೈ ತ್ರಿಸ್ಥೂಣಕ್ಷೋಭದಶೈಯಿಲೇ ಸ್ಥೂಲದೇಹತ್ತಿಲ್ ನಿನ್ರುಮ್ ಕಡೈನ್ದೆಡುತ್ತ ಪಂಚಭೂತಸೂಕ್ಷ್ಮಙ್ಗಳೋಡೆ ಶೇರ್ತ್ತು, ಇಪ್ಪಡಿ ಇಂದ್ರಿಯಪ್ರಾಣಭೂತಸೂಕ್ಷ್ಮಸಂಯುಕ್ತನಾನ ಜೀವನೈ ನಿಸರ್ಗ ಸೌಹಾರ್ದಮುಡೈಯ ಹಾರ್ದ

ಸೂಕ್ಷ್ಮದೆಶೆಯಲ್ಲಿ ಸೇರಿಸಿ, **ಇಪ್ಪಡಿ** - ಈ ರೀತಿಯಲ್ಲಿ, **ಕರ್ಮಜ್ಞಾನೇಂದ್ರಿಯಙ್ಗಳೆಲ್ಲಾ ತ್ತೋಡುಮ್** - ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಇವುಗಳೊಂದಿಗೆ ಸೇರಿದ ಮನಸ್ಸನ್ನು, **ಪ್ರಾಣವಾಯುವೋಡೆ ಶೇರ್ತ್ತು**- ಪ್ರಾಣವಾಯುವಿನೊಂದಿಗೆ ಸೇರಿಸಿ, **ಇಪ್ಪಡಿ ಪದಿನೊರು ಇಂದ್ರಿಯಙ್ಗಳೋಡುಮ್ ಕೂಡಿನ ಪ್ರಾಣವಾಯುವೈ** - ಹೀಗೆ ಈ ಹನ್ನೊಂದು ಇಂದ್ರಿಯಗಳಿಂದಲೂ ಕೂಡಿದ ಪ್ರಾಣವಾಯುವನ್ನು, **ಜೀವನೋಡು ಶೇರ್ತು** - ಜೀವಾತ್ಮನೊಂದಿಗೆ ಸೇರಿಸಿ, **ಪ್ರಾಣೇನ್ದ್ರಿಯ ಸಂಯುಕ್ತನಾನ ಜೀವನೈ** - ಹೀಗೆ ಪ್ರಾಣ, ಹನ್ನೊಂದು ಇಂದ್ರಿಯಗಳೂ ಇವುಗಳಿಂದ ಸೇರಿದ ಜೀವಾತ್ಮನನ್ನೂ, **ತ್ರಿಸ್ಥೂಣ ಕ್ಷೋಭ ದಶೈಯಿಲೇ** - ತ್ರಿಸ್ಥೂಣವೆಂದರೆ ಬೆನ್ನಿನಲ್ಲಿರುವ ವಂಶವೆಂದು ಹೆಸರುಳ್ಳ ಮುಖ್ಯವಾದ ಮೂರಾದ ಎಲುಬು, ಅದಕ್ಕುಂಟಾಗುವ ಕ್ಲೇಶದ ದೆಶೆಯಲ್ಲಿ, **ಸ್ಥೂಲ ದೇಹತ್ತಿಲ್ ನಿನ್ರುಮ್** - ಈಗ ನಾವು ಹೊಂದಿರುವ ಸ್ಥೂಲದೇಹದಿಂದ (ಕಣ್ಣಿಗೆ ಕಾಣುವ ದೇಹವು ಸ್ಥೂಲದೇಹವೆಂದೂ ಕಣ್ಣಿಗೆ ಕಾಣದಿರುವ ದೇಹವು ಸೂಕ್ಷ್ಮದೇಹವೆಂದೂ ಎನಿಸುತ್ತವೆ ;) **ಕಡೈನ್ದೆಡುತ್ತ** - ಮಥನ ಮಾಡಿ ತೆಗೆದ, **ಪಂಚಭೂತಸೂಕ್ಷ್ಮಙ್ಗಳೋಡು ಶೇರ್ತ್ತು** - ಸೂಕ್ಷ್ಮದೆಶೆಯಲ್ಲಿರುವ ಪಂಚಭೂತಗಳೊಂದಿಗೆ ಸೇರಿಸಿ, **ಇಪ್ಪಡಿ** - ಈ ಮೇಲೆ ಹೇಳಿದ ಪ್ರಕಾರವಾಗಿ, **ಇಂದ್ರಿಯ** - ಏಕಾದಶೇಂದ್ರಿಯಗಳೇನು, **ಪ್ರಾಣ** - ಪಂಚಪ್ರಾಣವೇನು. **ಭೂತಸೂಕ್ಷ್ಮ** - ಪಂಚಭೂತಗಳು ಅತಿ ಸೂಕ್ಷ್ಮದೆಶೆಯಲ್ಲಿರುವವುಗಳೇನು, ಇವುಗಳಿಂದೆಲ್ಲಾ, **ಸಂಯುಕ್ತನಾನ ಜೀವನೈ**- ಸೇರಿದ ಜೀವಾತ್ಮನನ್ನು, **ನಿಸರ್ಗ ಸೌಹಾರ್ದಮುಡೈಯ** - ಏನೊಂದೂ ವ್ಯಾಜದಿಂದಲ್ಲದೆ ಸ್ವಾಭಾವಿಕವಾಗಿಯೇ **ಸರ್ವಸ್ಯಶರಣಂ ಸುಹೃತ್** ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಸದಾ ಮೈತ್ರೀಭಾವವನ್ನು ಹೊಂದಿ ಹಿತವನ್ನು ಮಾಡುತ್ತಿರುವ, ಆ ಕಾರಣದಿಂದಲೇ, **ಹಾರ್ದನಾನ ತನ್ ಪಕ್ಕಲಿಲೇ** - ಹೃದಯಾಯತನದಲ್ಲೇ ಹಾರ್ದನ

ನಾನ ತ್ತ ಪಕ್ಕಲಿಲೇ ಇಳೈಪ್ಪಾತ್ತಿ, ಇಪ್ಪಡಿ ಸ್ಥೂಲಶರೀರತ್ತಿಲ್ ನಿನ್ರು ವ್ ವಿದ್ವದವಿದ್ವತ್ಸಾಧಾರಣಮಾನ ಉತ್ಕ್ರಾಂತಿ ಕ್ರಮತ್ತೈ ನಡತ್ತಿ,

---

ತಾರಿಯಾಗಿ ಬಿಜ ಮಾಡಿಸಿರುವ ತನ್ನಲ್ಲೇ, **ಇಳೈಪ್ಪಾತ್ತಿ** - ಉತ್ಕ್ರಮಣ ಕಾಲದ ಆಯಾಸ ಪರಿಹಾರ ಮಾಡಿ, **ಇಪ್ಪಡಿ** - ಈಗ ಮೇಲೆ ವಿವರಿಸಿದ ರೀತಿಯಲ್ಲಿ, **ಸ್ಥೂಲಶರೀರತ್ತಿಲ್ ನಿನ್ರುಮ್** - ಈಗ ಕಣ್ಣಿಗೆ ಕಾಣುವ ಸ್ಥೂಲವಾದ ಶರೀರದ ದೆಸೆಯಿಂದ, **ವಿದ್ವದವಿದ್ವತ್ಸಾಧಾರಣಮಾನ** - ಭಕ್ತಿಪ್ರಪತ್ತ್ಯುಪಾಯಾನುಷ್ಠಾನ ಮಾಡಿದ ಬ್ರಹ್ಮವಿತ್ತಾದ ಪ್ರಪನ್ನನಿಗೂ ಅಪ್ರಪನ್ನನಿಗೂ ಸಾಧಾರಣವಾದ, **ಉತ್ಕ್ರಾಂತಿ ಕ್ರಮತ್ತೈ ನಡತ್ತಿ** - ಮೇಲೆ ವಿವರಿಸಿದ ಹಾಗೆ ದೇಹವನ್ನು ಬಿಟ್ಟುಹೋಗುವ ಕ್ರಮವನ್ನು ನಡೆಸಿಕೊಟ್ಟು; ಈ ಭೂತಕೃದ್ವಾಚಿಗಳಿಗೆಲ್ಲಾ "**ಸರ್ವೇಶ್ವರನ್**" ಎಂಬುವದೇ ಕರ್ತೃಪದವು. ಈ ಮೇಲಿನ ಅನೆಯ ವಾಕ್ಯಖಂಡದಿಂದ ಪ್ರಪನ್ನನಿಗೂ ಅಪ್ರಪನ್ನನಿಗೂ ಸಮವಾದ ಉತ್ಕ್ರಾಂತಿ ಕ್ರಮವನ್ನುಪದೇಶಿಸುತ್ತಾರೆ:—ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಹೀಗೆ ದಶೇಂದ್ರಿಯಗಳೂ ಮನಸ್ಸಿನಲ್ಲಿ ಸೂಕ್ಷ್ಮದೆಶೆಯಲ್ಲಿ ಸರ್ವೇಶ್ವರ ಸಂಕಲ್ಪದಿಂದ ಹೋಗಿ ಸೇರುತ್ತವೆ. **ವಾಗಾದಿಗಳಾನ ಬಾಹ್ಯೇಂದ್ರಿಯಙ್ಗಳ್ ಪತ್ತೈಯುಮ್ ಮನಸ್ಸಿಲೆ ಶೇರ್‌ತು** ಎಂಬುದು **ಮನಸಿಕರಣಗ್ರಾಮಂ** ಎಂದು ಸಂಗ್ರಹಶ್ಲೋಕದಲ್ಲಿರುವದರ ವ್ಯಾಖ್ಯಾನವು; ಇದು "**ವಾಙ್ಮನಸಿ ದರ್ಶನಾಚ್ಛಬ್ದಾಚ್ಚ**" (ಶಾ. ಸೂ. ೪. ೨. ೧) ಮತ್ತು "**ಅತ ಏವ ಸರ್ವಾಣ್ಯನು**" (ಶಾ. ಸೂ. ೪. ೨. ೨) ಎಂಬೆರಡು ಸೂತ್ರಗಳಭಿಪ್ರಾಯವಾಗಿರುತ್ತದೆ. ಅಲ್ಲಿಂದ ಈ ಹತ್ತು ಇಂದ್ರಿಯಗಳಿಂದ ಸೇರಿದ ಮನಸ್ಸು, ಈ ಹನ್ನೊಂದೂ ಪಂಚಪ್ರಾಣದೊಂದಿಗೆ ಸೂಕ್ಷ್ಮದೆಶೆಯಲ್ಲಿ ಸೇರುತ್ತದೆಂದು "**ಇಪ್ಪಡಿ ಪದನೊರು ಇಂದ್ರಿಯಙ್ಗಳೋಡುಮ್ ಕೂಡಿನಮನಸ್ಸೈ ಪ್ರಾಣವಾಯುವೋಡೆ ಶೇರ್‌ತ್ತು**" ಎಂಬುವದರಿಂದ ತಿಳಿಸುತ್ತಾರೆ. ಇದು **ಪ್ರಾಣೇ ಮನಃ** ಎಂಬ, ಮತ್ತು "**ತನ್ಮನಃ ಪ್ರಾಣ ಉತ್ತರಾತ್**" (ಶಾ. ಸೂ. ೪. ೨. ೩) ಎಂಬ ಸೂತ್ರಗಳ ವ್ಯಾಖ್ಯಾನವು. ಅಲ್ಲಿಂದ ಹೀಗೆ ಇಂದ್ರಿಯ ಮನಸ್ಸಿನಿಂದ ಶೇರಿದ ಪ್ರಾಣವು ಸೂಕ್ಷ್ಮದೆಶೆಯಲ್ಲಿ ಜೀವನನ್ನು ಸೇರುತ್ತದೆಂದು ಹೇಳುತ್ತಾರೆ. ಇದು **ಪುರುಷೇ ಚ ತಂ** ಎಂಬ ಸಂಗ್ರಹಶ್ಲೋಕದ, ಮತ್ತು "**ಸೋಧ್ಯಕ್ಷೇ ತದುಪಗಮಾದಿಭ್ಯಃ**" (ಶಾ. ಸೂ. ೪. ೨. ೪) ಎಂಬುವದರ ವ್ಯಾಖ್ಯಾನವು. ಅಲ್ಲಿಂದ ಮುಂದೆ, **ಈ** ಇಂದ್ರಿಯಗಳು, ಮನಸ್ಸು, **ಪ್ರಾಣಗಳಿಂದ** ಸೇರಿದ ಜೀವಾತ್ಮನು **ಪಂಚಭೂತ**

ವಿದ್ವದ ವಿದ್ವನ್ನಾಡೀಪ್ರವೇಶಕ್ರಮೋ ವ್ಯತ್ಯಾಸಃ

(೯) "ಅನನ್ತಾ ರಶ್ಮಯ ಸ್ತಸ್ಯ ದೀಪವದ್ಯ ಸ್ಸ್ಥಿತೋಹೃದಿ । ಸಿತಾ

ಸೂಕ್ಷ್ಮಗಳೊಂದಿಗೆ ಸೇರುತ್ತದೆಂದು "ಭೂತೇಷ್ವೇನಂ" ಎಂಬುದನ್ನೂ "ಭೂತೇಷು ತಚ್ಛ್ರುತೇಃ" (ಶಾ. ಸೂ. ೪. ೨. ೫) ಎಂಬ ಸೂತ್ರವನ್ನೂ ವ್ಯಾಖ್ಯಾನ ಮಾಡಿ, ಜೀವನ್ನೈ ಪಂಚಭೂತ ಸೂಕ್ಷ್ಮಙ್ಗಳೋಡೆ ಶೇರ್‌ತ್ತು - ಎಂಬುದರ ಮೂಲಕ ತಿಳಿಸಿರುತ್ತಾರೆ. ಅಲ್ಲಿಂದ ಇಂದ್ರಿಯ, ಮನಸ್ಸು, ಪ್ರಾಣ, ಭೂತ ಸೂಕ್ಷ್ಮಗಳಿಂದ ಸೇರಿದ ಜೀವಾತ್ಮನು ಪರಮಾತ್ಮನಲ್ಲಿ ಸೇರುವನೆಂದು, ಜೀವನ್ನೈ ತ್ತ್ ಪಕ್ಕಲಿಲ್ಯೈ ಇಳೈಪ್ಪಾತ್ತಿ - ಎಂಬುದರ ಮೂಲಕ ಸೂಚಿಸುತ್ತಾರೆ. ಇದು "ಪರೇಚ ತಮಾತ್ಮನಿ" ಎಂಬುದರ ಮತ್ತು "ತೇಜಃಪರಸ್ಯಾಂ ದೇವತಾಯಾಂ" ಎಂಬ ಛಾಂದೋಗ್ಯ ಶ್ರುತಿ ಮತ್ತು "ತಾನಿಪರೇ ತಥಾಹ್ಯಾಹ" (ಶಾ. ಸೂ. ೪. ೨. ೧೪) ಎಂಬ ಸೂತ್ರಗಳಿಂದಲೂ ವ್ಯಕ್ತಪಡುತ್ತದೆ. ಈ ಪರಮಾತ್ಮನಲ್ಲಿ ಸೇರುವದೇನು ಜೀವನಿಗೆ ಜೀವನ್ಮುಕ್ತಿಯೋ ಅಥವಾ ಸ್ವರೂಪೈಕ್ಯವೇ ಇತ್ಯಾದಿ ಪೂರ್ವಪಕ್ಷಗಳು ಬಂದೀತಾಗಿ "ಅವಿಭಾಗೋ ವಚನಾತ್" ಎಂಬ (ಶಾ. ಸೂ. ೪. ೨. ೧೫) ಸೂತ್ರದಲ್ಲಿ ಬೇರೆಯಾಗದ ಹಾಗೆ ಅಪೃಥಕ್ಸಿದ್ಧವಿಶೇಷಣ ರೂಪದಲ್ಲಿ ಸೇರಿರುತ್ತವೆ ಎಂದು ಹೇಳಿರುತ್ತವೆ. ಹಾಗೆ ಸೇರಿರಲು ಕಾರಣವೇನೆಂದರೆ "ಇಳೈಪ್ಪಾತ್ತು" ವದಕ್ಕಾಗಿ ಎಂದು ಹೇಳಿರುತ್ತಾರೆ, ಎಂದರೆ ಆಗಿನ ದೇಹಾಯಾಸವು ಶಾಂತವಾಗುವುದಕ್ಕಾಗಿ. ಹೀಗೆ ಇವೆಲ್ಲವೂ ಒಟ್ಟಿಗೆ ಸೂಕ್ಷ್ಮ ದೆಸೆಯಲ್ಲಿ ಪರಮಾತ್ಮನೊಂದಿಗೆ ಸೇರುವ ತನಕ ನಡೆಯುವ ಕ್ರಮವು ಪ್ರಪನ್ನಾಪ್ರಪನ್ನ ಸಾಮಾನ್ಯ ವಿಷಯವೆಂದು ಹೇಳಿರುತ್ತಾರೆ. ನಾಡಿಯ ಮೂಲಕ ಸೂಕ್ಷ್ಮ ಶರೀರಯುಕ್ತನಾದ ಜೀವನು ಹಾರ್ದನಾದ ಪರಮಾತ್ಮನನ್ನು ಬಿಟ್ಟು ನಾಡಿಯ ಮೂಲಕ ಹೊರಗೆ ಹೊರಡುವ ತನಕ ಪ್ರಾಪ್ತವಾಗುವ ಉತ್ಕ್ರಾಂತಿ ಕ್ರಮವು ಇಬ್ಬರಿಗೂ ಸಮಾನವೆಂದು ತಿಳಿಸಿರುತ್ತಾರೆ ಇದು "ಸಮಾನಾಚಾ ಸೃತ್ಯುಪಕ್ರಮಾದಮೃತತ್ವಂ ಚಾನುಪೋಷ್ಯ" (ಶಾ. ಸೂ. ೪. ೨. ೭) ಎಂಬ ಸೂತ್ರದಭಿಪ್ರಾಯವು. ಆಸೃತ್ಯುಪಕ್ರಮಾತ್ - ಪ್ರಪನ್ನನಿಗೆ ಅರ್ಚಿರಾದಿ ಗತಿಯು ಪ್ರಾರಂಭವಾಗುವ ತನಕ, ಸಮಾನಾಚ - ವಿದ್ವದವಿದ್ವತ್ಸಾಧಾರಣವಾದುದೆಂಬಭಿಪ್ರಾಯವು.

---

(೯) ಯಾಜ್ಞ. ಸ್ಮೃ. ೪. ೧೧೬-೯.

ಸಿತಾಃ ಕದ್ರು ನೀಲಾಃ ಕಪಿಲಾಃ ಪೀತಲೋಹಿತಾಃ । ಊರ್ಧ್ವಮೇಕಸ್ಸ್ಥಿತ ಸ್ತೇಷಾಂ ಯೋಭಿತ್ವಾ ಸೂರ್ಯಮಂಡಲಮ್ । ಬ್ರಹ್ಮಲೋಕಮತಿಕ್ರಮ್ಯ

ಪ್ರಪನ್ನನಿಗೂ ಅಪ್ರಪನ್ನನಿಗೂ ನಾಡೀಪ್ರವೇಶದಲ್ಲಿರುವ ವ್ಯತ್ಯಾಸವು.

(೯) ಹಿಂದೆ ಪ್ರಪನ್ನನಿಗೂ ಅಪ್ರಪನ್ನನಿಗೂ ಸಮಾನವಾದ ಉತ್ಕ್ರಾಂತಿ ಕ್ರಮವು ಹೇಳಲ್ಪಟ್ಟಿತು. ಪರಮಾತ್ಮನೊಂದಿಗೆ ಸೇರಿಯಿದ್ದ, ಈ ಇಂದ್ರಿಯ. ಮನಸ್ಸು, ಪ್ರಾಣ, ಭೂತಸೂಕ್ಷ್ಮಗಳೊಂದಿಗೆ ಸೇರಿದ ಜೀವಾತ್ಮನು, ದೇಹವನ್ನು ಬಿಟ್ಟು ಹೊರಡುವಾಗ ನಾಡೀ ಮೂಲಕ ಹೊರಗೆ ಬರುವನು. ನಾಡಿಗಳು ೧೦೧ ಎಂದೂ, ಅವುಗಳಲ್ಲಿ ಒಂದು ಸುಷುಮ್ನಾ ಎಂದೂ ಅದರ ಮೂಲಕವಾಗಿ ಪ್ರಪನ್ನನಾದ ಚೇತನನು ಅರ್ಚಿರಾದಿ ಮಾರ್ಗದ ಮೂಲಕ ಪರಮಪದಕ್ಕೆ ಹೋಗುವನೆಂದೂ, ಇನ್ನು ನೂರು ನಾಡಿಗಳ ಮೂಲಕ ಹೊರಗೆ ಬಂದ ಅಪ್ರಪನ್ನ ಚೇತನರು ಧೂಮಾದಿ ಮಾರ್ಗವನ್ನು ಹೊಂದಿ ಪುನಃ ಬಂಧವನ್ನೇ ಹೊಂದುವರೆಂದೂ ಸಂಗ್ರಹಶ್ಲೋಕದಲ್ಲಿ **"ನಯತಿ ಪರತೋ ನಾಡೀಭೇದೈ ರ್ಯಥೋಚಿತ ಮೀಶ್ವರಃ"** ಎಂಬ ಭಾಗವನ್ನು ಮುಂದಿನ ವಾಕ್ಯಖಂಡದಿಂದ ವ್ಯಾಖ್ಯಾನಮಾಡುವವರಾಗಿ, ಅದಕ್ಕೆ ಸ್ಮೃತಿಪ್ರಮಾಣವನ್ನು ಉದಾಹರಿಸಿ, ಸರ್ವೇಶ್ವರನ ಈ ಒಂಬತ್ತು ವಿಧ ಉಪಕಾರ ಪರಂಪರೆಗಳನ್ನು ಬೋಧಿಸುವ ಮಹಾವಾಕ್ಯವನ್ನು ನಿಗಮನ ಮಾಡಿ ಹೇಳುತ್ತಾರೆ. ಶ್ರೀ ಯಾಜ್ಞವಲ್ಕ್ಯರು ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲದ ಹಾಗೆ ಶ್ರುತ್ಯುಪಬ್ರಹ್ಮಣ ಮಾಡಿರುವದರಿಂದ ಅವರಭಿಪ್ರಾಯವನ್ನು ಉದಾಹರಿಸುತ್ತಾರೆ:—**ಯಃ** - ಯಾವ ಜೀವಾತ್ಮನು, **ದೀಪವತ್** - ದೀಪದ ಹಾಗೆ, **ಹೃದಿ** - ಹೃದಯಕಮಲದಲ್ಲಿ, ಸ್ಥಿತಃ - ಇರುತ್ತಾನೋ, **ತಸ್ಯ** - ಹಾಗೆ ಧರ್ಮಭೂತಜ್ಞಾನದಿಂದ ಪ್ರಕಾಶಿಸುವ ಜ್ಞಾನಸ್ವರೂಪನಾದ ಆತ್ಮನಿಗೆ, **ಅನಂತಾ ರಶ್ಮಯಃ** - ಅನೇಕ ಹೃದಯಕ್ಕೆ ಸಂಬಂಧಪಟ್ಟ ನಾಡಿಗಳುಂಟು; **ಅವುಗಳಲ್ಲಿ** ಕೆಲವು, ಸಿತಾಃ - ಬೆಳ್ಳಗಿರುವವು, ಇನ್ನು ಕೆಲವು, ಅಸಿತಾಃ-ಕಪ್ಪಾದವು, **ಕದ್ರು ನೀಲಾಃ** - ಕೆಲವು ಊದಾ ಬಣ್ಣವಾದವು, ಕೆಲವು ನೀಲೀ ಬಣ್ಣವಾದವು, **ಕಪಿಲಾಃ** - ಕೆಲವು ಬೂದು ಬಣ್ಣವಾದವು, **ಪೀತಾಃ** - ಕೆಲವು ಹಳದಿ ಬಣ್ಣವಾದವು, **ಲೋಹಿತಾಃ** - ಕೆಲವು ಕೆಂಪು ಬಣ್ಣದವು, **ತೇಷಾಂ**-ಅವುಗಳಲ್ಲಿ, **ಯಃ** - ಯಾವ ಪ್ರಸಿದ್ಧವಾದ, **ಏಕಃ** - ಒಂದಾದ, **ಊರ್ಧ್ವಂ** - ಮೇಲಕ್ಕೆ ಹರಡಿದುದಾಗಿ, ಸ್ಥಿತಃ - ಇರುತ್ತದೋ, **ತೇನ** - ಆ ನಾಡಿಯಿಂದ, ಇದಕ್ಕೆ **ಸುಷುಮ್ನಾ**

ತೇನ ಯಾಂತಿ ಪರಾಂಗತಿಮ್ । ಯದಸ್ಯಾನ್ಯದ್ರಶ್ಮಿಶತ ಮೂರ್ಧ್ವಮೇವ ವ್ಯವಸ್ಥಿತಮ್ । ತೇನ ದೇವ ಶರೀರಾಣಿ ಸಧಾಮಾನಿ ಪ್ರಪದ್ಯತೇ । ಯೇ ನೈಕ ರೂಪಾಶ್ಚಾಧಸ್ತಾ ದ್ರಶ್ಮಯೋಽಸ್ಯಮೃದುಪ್ರಭಾಃ । ಇಹ ಕರ್ಮೋಪ ಭೋಗಾಯ ತೈಸ್ಸಂಸರತಿ ಸೋಽವಶಃ” ಎಙ್ಗರ ಪಡಿಯೇ ಕಳ್ಳರ್ ಕೊಣ್ಡು ಪೋಮ್ ವಳಿಗಳ್ಪೋಲೆ, ಆತ್ಮಾಪಹಾರಿಗಳ್ ಸ್ವರ್ಗ ನರಕಙ್ಗಳುಕ್ಕು ಪ್ಪೋಮ್ ಮಾರ್ಗಾಂತರಙ್ಗಳುಕ್ಕು ಮುಖಙ್ಗಳಾನ ನಾಡೀವಿಶೇಷಙ್ಗಳಿಲ್ ಪೋಗಾದ ಪಡಿ ವಳಿ ವಿಲಕ್ಕಿ ಅರ್ಚಿರಾದಿ ಮಾರ್ಗತ್ತುಕ್ಕು ಮುಖಮಾನ

ಎಂದು ಹೆಸರು, **ತೇನ** - ಆದರಿಂದ, ಸೂರ್ಯಮಂಡಲವನ್ನು, **ಭಿತ್ವಾ** - ಭೇದಿಸಿ, ಎಂದರೆ ಪ್ರವೇಶಿಸಿ, ತನ್ಮೂಲಕವಾಗಿ, ಬ್ರಹ್ಮಲೋಕವನ್ನು, **ಅತಿಕ್ರಮ್ಯ** - ದಾಟಿ, **ಪರಾಂಗತಿಂ** - ಶ್ರೇಷ್ಠವಾದ ಗತಿಯನ್ನು ಎಂದರೆ ವೈಕುಂಠ ಲೋಕವನ್ನು, **ಯಾತಿ** - ಹೊಂದುವನು ; **ಅಸ್ಯ** - ಈ ಜೀವಾತ್ಮನಿಗೆ, **ಯತ್** - ಯಾವ, **ಅನ್ಯತ್** - ಇತರವಾದ, **ರಶ್ಮಿ ಶತಂ** - ನಾನಾ ಬಣ್ಣದ ನಾಡಿಗಳ ನೂರು, **ಊರ್ಧ್ವಮೇವ** - ಅವುಗಳೂ ಮೇಲಕ್ಕೆ ಹರಡುವವುಗಳಾಗಿ, **ವ್ಯವಸ್ಥಿತಂ** - ಇರುತ್ತದೋ, **ತೇನ** - ಆದರಿಂದ, **ಸಧಾಮಾನಿ** - ಆಯಾಯ ಲೋಕಗಳಿಂದ ಸೇರಿದ, **ದೇವಶರೀರಾಣಿ** - ಆಯಾಯ ದೇವತೆಗಳಿಗೆ ಯೋಗ್ಯವಾದ ಶರೀರ ಗಳನ್ನು, **ಪ್ರಪದ್ಯತೇ** - ಹೊಂದುವನು ; **ಯೇ** - ಯಾವ, **ನೈಕರೂಪಾಃ** - ಅನೇಕ ಬಣ್ಣಗಳುಳ್ಳ, **ಮೃದುಪ್ರಭಾಃ** - ಅಲ್ಪವಾದ ಪ್ರಕಾಶವುಳ್ಳ, **ರಶ್ಮಯಃ**- ನಾಡಿಗಳು, **ಅಸ್ಯ** - ಈ ಜೀವಾತ್ಮನಿಗೆ, **ಅಧಸ್ತಾತ್** - ಕೆಳಗೆ ಪ್ರಸರಿಸುವದಾಗಿ ವೆಯೋ, **ತೈಃ** - ಅವುಗಳ ಮೂಲಕವಾಗಿ, **ಸಃ** - ಆ ಜೀವಾತ್ಮನು, **ಅವಶಃ** - ಕರ್ಮವಶ್ಯನಾದವನಾಗಿ, **ಇಹ** - ಈ ಲೋಕದಲ್ಲೇ, **ಕರ್ಮೋಪಭೋಗಾಯ** - ಆ ಕರ್ಮಫಲಗಳನ್ನನುಭವಿಸುವದಕ್ಕಾಗಿ, **ಸಂಸರತಿ** - ಬದ್ಧಜೀವನಾಗಿ ಹುಟ್ಟು ವನು.” **ಎಙ್ಗರಪಡಿಯೇ** - ಎಂದು ಸ್ಮೃತಿಯಿಲೆ **ಹೇಳಿರುವ** ಹಾಗೆ, **ಕಳ್ಳರ್ ಕೊಂಡು ಪೋಮ್ ವಳಿಗಳ್ ಪೋಲೆ** - ಕಳ್ಳರು ಹೋಗುವ ಮಾರ್ಗಗಳ ಹಾಗೆ, **ಆತ್ಮಾಪಹಾರಿಗಳ್** - ಸರ್ವೇಶ್ವರನ ಸ್ವತ್ತಾದ ಜೀವಾತ್ಮರುಗಳನ್ನು ತಮ್ಮ ದೆಂದು ಭಾವಿಸುವ ಆತ್ಮಚೋರರು, ಸ್ವರ್ಗನರಕಗಳಿಗೆ **ಪೋಮ್ ಮಾರ್ಗಾಂತ ರಂಗಳುಕ್ಕು** - ಹೋಗುವ ಬೇರೆ ಮಾರ್ಗಗಳಿಗೆ, **ಮುಖಙ್ಗಳಾನ** - ದ್ವಾರ ಗಳಾದ **ನಾಡೀ ವಿಶೇಷಙ್ಗಳಿಲ್** - ಈ ನೂರು ವಿಷ್ವಙ್ನಾಡಿಗಳಲ್ಲಿ, **ಪೋಗಾದ ಪಡಿ** - ಹೋಗದಹಾಗೆ, **ವಳಿವಿಲಕ್ಕಿ** - ಆ ಮಾರ್ಗಗಳಿಂದ ತಪ್ಪಿಸಿ, **ಅರ್ಚಿರಾದಿ**

ಶತಾಧಿಕ್ಕೈ ಯಾನ ಬ್ರಹ್ಮನಾಡಿ (ಯಿಲ್) ಯಾಲೇ ಪ್ರವೇಶಿಪ್ಪಿತ್ತು ಸೂರ್ಯ ಕರಾ (ಕಿರಣಾ)ವಲಮ್ಬಿಯಾಯ್‌ಕ್ಕೊಂಡು ಪುರಪ್ಪಡುವ್ಪಡಿ ಪಣ್ಣುಮ್.

ಮಾರ್ಗತ್ತುಕ್ಕು - ಅರ್ಚಿರಾದಿ ಮಾರ್ಗಕ್ಕೆ, **ಮುಖಮಾನ** - ದ್ವಾರವಾದ, **ಶತಾಧಿಕ್ಕೈಯಾನ** - ನೂರೊಂದನೆಯದಾದ, **ಬ್ರಹ್ಮನಾಡಿಯಾಲೇ** - ಬ್ರಹ್ಮವಿತ್ತಾದವನು ಹೋಗುವ ನಾಡಿಯಾದ ಸುಷುಮ್ನಾ ನಾಡೀ ಮೂಲಕವಾಗಿ, **ಪ್ರವೇಶಿಪ್ಪಿತ್ತು** - ಪ್ರವೇಶಮಾಡುವಹಾಗೆ ಮಾಡಿ, **ಸೂರ್ಯಕರಾ (ಕಿರಣಾ) ವಲಂಬಿಯಾಯ್** - ಸೂರ್ಯಕಿರಣವನ್ನು ಅವಲಂಬಿಸಿದವನಾಗಿಕ್ಕೊಂಡು, **ಪುರಪ್ಪಡುವ್ಪಡಿ ಪ್ಪಣ್ಣುಮ್** - ಹೊರಟುಹೋಗುವ ಹಾಗೆ ಈಶ್ವರಸಙ್ಕಲ್ಪವು ಮಾಡುವದು ಎಂಬ ಭಾವವು. **ಪಣ್ಣುಮ್** ಎಂಬುವದಕ್ಕೆ ಕರ್ತೃಪದವು ೧೯೮ನೆಯ ಪುಟದಲ್ಲಿ, ವಾಕ್ಯಾದಿಯಲ್ಲಿರುವ **ಸತ್ಯಸಙ್ಕಲ್ಪನುಮಾನ ಸರ್ವೇಶ್ವರನ್** ಎಂಬುವದು.

ಈ ವಾಕ್ಯಶೇಷದಿಂದ ದೇಹಾವಸಾನಕಾಲದಲ್ಲಿ ಈ ಜೀವನಿಗೆ ಪರಮಾತ್ಮ ಸಂಪತ್ತಿಯಾದ ನಂತರ ಉಂಟಾಗುವ ಕ್ರಮವನ್ನು ತಿಳಿಸುತ್ತಾರೆ. ಪರಮಾತ್ಮ ಸಂಪತ್ತಿಯಿಂದ ಮುಂದಕ್ಕೆ ಪ್ರಪನ್ನನಿಗೂ ಅಪ್ರಪನ್ನನಿಗೂ ಮಾರ್ಗಗಳು ಭಿನ್ನವಾದವು ಎಂದು ತಿಳಿಸುತ್ತಾರೆ. ಹೃದಯಕ್ಕೆ ಸೇರಿದ ನಾಡಿಗಳು ೧೦೧. ಅದರಲ್ಲಿ ಒಂದಕ್ಕೆ ಸುಷುಮ್ನಾನಾಡಿ (ಬ್ರಹ್ಮನಾಡಿ) ಎಂದು ಹೆಸರು. ಇದು ಊರ್ಧ್ವವಾಗಿ ಪ್ರಸರಿಸಿರುತ್ತದೆ. ಇದರ ಮೂಲಕವಾಗಿ ಇಂದ್ರಿಯ, ಮನಸ್ಸು, ಪ್ರಾಣ, ಭೂತಸೂಕ್ಷ್ಮ ಇವುಗಳಿಂದ ಸೇರಿರುವ ಜೀವಾತ್ಮನು, ಸೂರ್ಯರಶ್ಮಿಯನ್ನು ಹೊಂದಿ, ಸೂರ್ಯನ ಮೂಲಕ ಅರ್ಚಿರಾದಿ ಗತಿಯನ್ನು ಹೊಂದುವನು. ಇದು ಭಕ್ತ್ಯುಪಾಯನಿಷ್ಠನಿಗೂ ನ್ಯಾಸವಿದ್ಯಾನಿಷ್ಠನಿಗೂ ಸಹ ಸಮಾನವಾದ ಮಾರ್ಗವು. ಪ್ರಪನ್ನರಲ್ಲದ ಇತರರಾದ, ಇಂದ್ರಿಯ, ಮನಸ್ಸು, ಪ್ರಾಣ, ಭೂತಸೂಕ್ಷ್ಮಗಳಿಂದ ಸೇರಿದ ಚೇತನರು ಇತರ ನೂರು ನಾಡಿಗಳಲ್ಲಿ ಯಾವುದು ತಮ್ಮ ಮುಂದಿನ ಪ್ರಾರಬ್ಧಕರ್ಮಾನುಭವಕ್ಕೆ ಯೋಗ್ಯವೋ ಅದರ ಮೂಲಕ ಹೊಟು ಧೂಮಾದಿ ಮಾರ್ಗವನ್ನು ಹೊಂದಿ ಪುನಃ ಬಂಧಗಳಿಗೆ ಸಿಕ್ಕುತ್ತಾರೆ. ಕೆಲವರಿಗೆ ದೇವಲೋಕ ಪ್ರಾಪ್ತಿಯೂ, ಕೆಲವರಿಗೆ ನರಕವೂ, ಕೆಲವರಿಗೆ ಪುನಃ ಈ ಮರ್ತ್ಯಲೋಕ ಪ್ರಾಪ್ತಿಯೂ ಉಂಟಾಗುತ್ತದೆಂದು ಹೇಳಲ್ಪಟ್ಟಿರುತ್ತದೆ. ಇವರಿಗೆ ಪ್ರಾಪ್ತವಾಗುವ ಮಾರ್ಗಗಳು ಕಳ್ಳರು ಹೋಗುವ ಮಾರ್ಗಗಳು. ಇವರು ಕಳ್ಳರು ಹೇಗೆ ಎಂದರೆ ಸ್ವಾಮಿ ಸ್ವತ್ತಾದ ಆತ್ಮಾವನ್ನು ಅವನ ಚರಣಾರವಿಂದದಲ್ಲಿ ಅರ್ಪಿಸಿ ಭರನ್ಯಾಸ ಮಾಡದೇ ಇದ್ದವರೆಂದು ತಿಳಿಸುತ್ತಾರೆ. ಆದುದರಿಂದಲೇ ಅಂತಹ ಮಾರ್ಗ

ಗಳನ್ನು ಕಳ್ಳರ್ ಕೊಣ್ಡುಪೋನ್ ವಳಿಗಳ್ ಪೋಲೆ ಆತ್ಮಾಪಹಾರಿಗಳ್ ಪೋಮ್ ಮಾರ್ಗಾಂತರಙ್ಗಳ್ ಎಂದು ಹೇಳಲ್ಪಟ್ಟವು. ಆ ಕಳ್ಳರ ದಾರಿಗಳು ಯಾವುವೆಂದರೆ ಇನ್ನು ನೂರು ನಾನಾ ಬಣ್ಣದ ನಾಡಿಗಳು. ಈ ಅಪ್ರಪನ್ನರನ್ನು ಆತ್ಮಾಪಹಾರಿಗಳೆಂದು ಹೇಳಲು ಪ್ರಮಾಣವು:-"ಯೋನ್ಯಥಾಸಂತಮಾತ್ಮಾನ ಮನ್ಯಥಾ ಪ್ರತಿಪದ್ಯತೇ। ಕಿಂತೇನ ನ ಕೃತಂ ಪಾಪಂ ಚೋರೇಣಾತ್ಮಾಪ ಹಾರಿಣಾ" ಎಂಬ ಶ್ರೀ ವ್ಯಾಸೋಕ್ತಿಯು, ಸರ್ವೇಶ್ವರನಿಗೆ ಶೇಷಭೂತವಾದ ಆತ್ಮ ವನ್ನು ತನಗೆ ಸ್ವತಂತ್ರವೆಂದು ಭಾವಿಸುವನಾದುದರಿಂದ ಆತ್ಮಾಪಹಾರಿಯು. ಈ ಸಂದರ್ಭದಲ್ಲಿ ಸತ್ಯಸಙ್ಕಲ್ಪನ ಮಹೋಪಕಾರವೇನೆಂದರೆ, ಈ ಭರನ್ಯಾಸವನ್ನನು ಷ್ಠಿಸಿದವನನ್ನು ಇತರ ನೂರು ನಾಡಿಗಳ ಮೂಲಕ ಕಳ್ಳ ದಾರಿಗಳಲ್ಲಿ ಹೋಗದ ಹಾಗೆ ಮಾಡಿ, ರಾಜಮಾರ್ಗವಾದ ಸುಷುಮ್ನಾನಾಡಿಯ ಮೂಲಕ ಹೋಗುವ ಹಾಗೆ ಮಾಡಿ, ಅಲ್ಲಿಂದ ಮುಂದಕ್ಕೆ ಸೂರ್ಯಕಿರಣಗಳ ಮೂಲಕ ಸೂರ್ಯನನ್ನು ಹೊಂದಿ ಅಲ್ಲಿಂದ ಮುಂದಕ್ಕೆ ಅರ್ಚಿರಾದಿ ಗತಿಯನ್ನು ಹೊಂದುವ ಹಾಗೆ ಮಾಡುವನು. ಈ ಅರ್ಚಿರಾದಿ ಗತಿಯು ಮುಂದಿನ ಗತಿ ಚಿನ್ತನಾಧಿಕಾರದಲ್ಲಿ ಉಪಪಾದಿಸಲ್ಪಡುತ್ತದೆ. ಸೂರ್ಯರಶ್ಮಿಯ ಮೂಲಕ ಸೂರ್ಯನನ್ನು ಸೇರುವನೆಂದು "ಅಥತೈರೇವ ರಶ್ಮಿಭಿಃ ಊರ್ಧ್ವಮಾಕ್ರಮತೇ" ಶರೀರವನ್ನು ಬಿಟ್ಟು ಹೊರಟ ಚೇತನನು ಆ ಸೂರ್ಯ ಕಿರಣಗಳ ಮೂಲಕವೇ ಮೇಲಕ್ಕೆ ಹೋಗುವನು ಎಂದು ಛಾಂದೋಗ್ಯದಲ್ಲೂ (೮-೬-೫) ಮತ್ತು "ರಶ್ಮ್ಯನುಸಾರೀ" ಎಂಬ ಶಾರೀರಕಸೂತ್ರದಲ್ಲೂ (೪-೨-೧೭) ಹೇಳಲ್ಪಟ್ಟಿರುತ್ತದೆ. ರಾತ್ರಿ ಮೃತನಾದ ಪ್ರಪನ್ನನಿಗೆ ಹೇಗೆ? ಆಗ ಸೂರ್ಯಕಿರಣ ಗಳಿರುವದಿಲ್ಲವಲ್ಲಾ ಎಂದರೆ ದುರ್ದಿನದಲ್ಲಿ ಸೂರ್ಯರಶ್ಮಿಯುಂಟೆಂದು ಹೇಗೆ ಭಾವಿಸ ಬಹುದೋ, ಹಾಗೆಯೇ ಆಗಲೂ ಕೂಡ ಸೂಕ್ಷ್ಮವಾಗಿ ಉಂಟೆಂದು ಭಾವಿಸ ಬಹುದು. ಈ ಸುಷುಮ್ನಾ ನಾಡಿಗೂ ಸೂರ್ಯರಶ್ಮಿಗೂ ಸಂಬಂಧವಿರುವದರಿಂದ ಆ ಬ್ರಹ್ಮನಾಡಿಯಿಂದ ಸೂರ್ಯಕಿರಣದವಲಂಬನವು ಉಂಟಾಗುತ್ತದೆಂದು ಹೇಳಿರು ತ್ತಾರೆ. ಹಾಗೆ ಸಂಬಂಧ ಉಂಟೆಂದು ಛಾಂದೋಗ್ಯದಲ್ಲೇ ಹೇಳಲ್ಪಟ್ಟಿರುತ್ತದೆ.

ಪ್ರಪನ್ನನಿಗೆ ಅನ್ತಿಮಸ್ಮೃತಿಯು ಆವಶ್ಯಕವೆಂಬ ನಿರ್ಬಂಧವಿಲ್ಲವು.

ಹೀಗೆ ನಿರ್ಯಾಣಕ್ರಮದಲ್ಲಿ ಪ್ರಪನ್ನನಿಗೂ ಅಪ್ರಪನ್ನನಿಗೂ ಸಾಧಾರಣವಾದ ಭಾಗವನ್ನು ತಿಳಿಸಿ, ಅನಂತರ ಅವರುಗಳಿಗೆ ನಾಡೀಮೂಲಕ ಉಂಟಾಗುವ ಭಿನ್ನಗತಿಗಳೂ ತಿಳಿಸಲ್ಪಟ್ಟವು. ಮುಂದೆ ಅನ್ತಿಮ ಸ್ಮೃತಿ ವಿಚಾರವು ಚರ್ಚಿಸ ಲ್ಪಡುತ್ತದೆ. ಭಗವದ್ಗೀತಾದಿಗಳಲ್ಲಿ ಬ್ರಹ್ಮವಿತ್ತಿಗೆ ಅನ್ತಿಮಸ್ಮೃತಿಯು ಇರಬೇ ಕೆಂದು ಹೇಳಿರುತ್ತದೆಯಲ್ಲಾ, ಹಾಗೆ ಅನ್ತಿಮಸ್ಮೃತಿ ಇಲ್ಲದ ಪ್ರಪನ್ನನಿಗೆ ಪುನರಾ

ಪ್ರಪನ್ನಸ್ಯ ಅನ್ತಿಮ ಸ್ಮೃತೇ ರನಪೇಕ್ಷಿತತ್ವಮ್.

ಆಳವಾ ನಂತಿಮದಶೈಯಿಲೆ ವಿಡಾಯಿನಾಲೆ ನಾಕ್ಕೊಟ್ಟಿ ಎಂಬೆರುಮಾನಾರ್ ತಿರುವಡಿಗಳೈ ಪ್ಪಿಡಿಕ್ಕ, ಇವರಪ್ಪೋದು ಆಳ್ವಾರ್ ಶೆವಿಯಿಲೆ ದ್ವಯತ್ತೈ ಅರುಳಚ್ಚೆಯ್ಯ, ಇಪ್ಪೇರು ನಮುಕ್ಕು ವರುಗೈ ಯರಿದು ನಾಮೆನ್ನ ಶೆಯ್ಯಕ್ಕಡ ವೋಮೆನ್ರು ಅಪ್ಪೋದು ಸೇವಿತ್ತಿರುನ್ದ ಮುದಲಿಗಳ್

ವರ್ತ್ತಿಯೇ ಹೇಗೆ ಎಂಬ ಶಂಕಾ ಸಮಾಧಾನಾರ್ಥವಾಗಿ ಶ್ರೀ ಕೂರೇಶರ ಅಂತಿಮ ದೆಶೆಯಲ್ಲಿ ನಡೆದ ಒಂದು ವೃತ್ತಾಂತವನ್ನು ಉದಾಹರಿಸುತ್ತಾರೆ. ಅಂತಿಮ ಸ್ಮೃತಿ ಎಂದರೇನೆಂಬುದನ್ನು ಮುಂದೆ ತಿಳಿಸುತ್ತಾರೆ. ದೇಹಾವಸಾನಕಾಲದಲ್ಲಿ ಇಂದ್ರಿಯಗಳ ವ್ಯಾಪಾರ ನಿಂತುಹೋಗಿ, ಮನಸ್ಸಿನ ವ್ಯಾಪಾರ ನಿಲ್ಲುವದಕ್ಕೆ ಮುಂಚಿನ ದೆಶೆಯಲ್ಲಿ ಶ್ರಿಯಃಪತಿಯನ್ನು ಸ್ಮರಿಸೋಣವು. **ಆಳವಾರ್** - ಎಂದರೆ ಶ್ರೀ ಭಾಷ್ಯಕಾರರ ಪ್ರಿಯಶಿಷ್ಯರಾದ ಕೂರೇಶರಿಗೆ ಹೆಸರು, ಇವರ ಪೂರ್ಣವಾದ ಹೆಸರು **ಕೂರತ್ತಾಳ್ವಾರ್.** ಕಾಂಚೀಪುರದ ಹತ್ತಿರವಿರುವ ಕೂರೆಂಬ ಗ್ರಾಮದಲ್ಲಿ ಅವತರಿಸಿದವರಾದುದರಿಂದ **ಕೂರತ್ತಾಳ್ವಾರ್** ಎಂಬದಾಗಿ ಹೆಸರು. ಇವರಿಗೆ ಶ್ರೀವತ್ಸಾಂಕಮಿಶ್ರರೆಂದೂ ಹೆಸರು ಉಂಟು; ಈ ಕೂರೇಶರ **ಅನ್ತಿಮ ದಶೈಯಿಲೆ** – ದೇಹಾವಸಾನ ಸಮಯದಲ್ಲಿ, **ವಿಡಾಯಿನಾಲೆ** - ಆಯಾಸದಿಂದ, **ನಾಕ್ಕೊಟ್ಟಿ** - ನಾಲಿಗೆಯು ಒಣಗಿಹೋಗಿರುವದರಿಂದ ಅಂಗಳಿಗೆ ಅಂಟಿಕೊಂಡು ಹೋಗಿರುವದರಿಂದ ಮಾತಾಡಲು ಶಕ್ತಿಯಿಲ್ಲದಿರುವಾಗ, **ಎಂಬೆರುಮಾನಾರ್ ತಿರುವಡಿಗಳೈಪ್ಪಿಡಿಕ್ಕ** - ತಮ್ಮ ಗುರುವಾದ ಯತಿರಾಜರ ಚರಣಾರವಿಂಡಗಳನ್ನು ಕೈಯಿಂದ ಹಿಡಿದುಕೊಳ್ಳಲು, **ಇವರಪ್ಪೋದು** - ಈ ಯತಿರಾಜರು ಆ ಸಮಯದಲ್ಲಿ, **ಆಳ್ವಾರ್ ಶೆವಿಯಲೆ** - ಶ್ರೀ ಕೂರೇಶರ ಕಿವಿಯಲ್ಲಿ, **ದ್ವಯತ್ತೈ ಅರುಳಚ್ಚೆಯ್ಯ** – ದ್ವಯಮಂತ್ರವನ್ನು ಕೃಪಯಾ ಉಚ್ಚರಿಸಲಾಗಿ, **ಅಪ್ಪೋದು** - ಆ ದ್ವಯಮಂತ್ರೋಚ್ಚಾರಣ ಸಮಯದಲ್ಲಿ, **ಸೇವಿತ್ತಿರುನ್ದ ಮುದಲಿಗಳ್** - ಶ್ರೀ ಭಾಷ್ಯಕಾರರನ್ನು ಸೇವಿಸುತ್ತಿದ್ದ ಜ್ಞಾನವೃದ್ಧರಾದ ಶಿಷ್ಯರುಗಳು, **ಇಪ್ಪೇರು** - ತಮ್ಮಂಥಾ ಗುರುಗಳು ಶಿಷ್ಯನಿಗೆ ಅಂತಿಮದೆಶೆಯಲ್ಲಿ ಕಿವಿಯಲ್ಲಿ ದ್ವಯಮಂತ್ರವನ್ನುಪದೇಶಿಸುವ ಪರಮ ಸುಕೃತವು, **ನಮುಕ್ಕು**- ನಮ್ಮಂತಹ ಭಾಗ್ಯಹೀನರಿಗೆ, **ವರುಗೈ** - ಪ್ರಾಪ್ತವಾಗುವದು, **ಅರಿದು** - ದುರ್ಲಭವು, ಆದುದರಿಂದ, **ನಾಮ್** - ನಾವುಗಳು, **ಎನ್ನ ಶೆಯ್ಯಕ್ಕಡವೋಮ್** -

ಕಲಜ್ಗ, ಇವರುಗಳಭಿಪ್ರಾಯತ್ತೈ ತಿರುವುಳ್ಳವ್ ಪತ್ತಿ ಆಳ್ವಾರ್ ಪ್ರಕೃತಿಯರಿಯಿರಾರ್‌ಗಳೋ? ಇನ್ನವಸ್ಥೈಯಿಲಿ ವರುಕ್ಕಿದು ಕರ್ಪೂರತ್ತೈಯುಮ್ ಖಂಡಶರ್ಕರೈಯೈಯುಂ ಮಿಟ್ಟ ಮಾತ್ರಮನ್ರೋ? ನಾಮಿದು ಉಪಾಯತ್ತುಕ್ಕು (ಪರಿಕರವಾಗ) ಉಪಕಾರಕವಾಗ ಚ್ಚೆಯ್‌ದೋಮಲ್ಲೋಮೆನ್ರರುಳಿಚ್ಚೆಯ್ಯ, ಮುದಲಿಗಳ್ ತೆಳಿನ್ದು ನಿರ್ಭರರಾನಾರ್‌ಗಳ್.

ಏನನ್ನು ಮಾಡಲು ಸಾಧ್ಯವು: ಎಂದರೆ ಏನೂ ಇಲ್ಲವೆಂಬ ಭಾವವು, **ಎನ್ರು**-ಎಂಬುದಾಗಿ, **ಮುದಲಿಗಳ್ ಕಲಜ್ಗ**-ಈ ಪೂಜ್ಯರಾದ ಶಿಷ್ಯರುಗಳು ದೈನ್ಯದಿಂದಲೂ ವ್ಯಸನದಿಂದಲೂ ಖಿನ್ನರಾಗಿರಲಾಗಿ, **ಇವರುಗಳಭಿಪ್ರಾಯತ್ತೈ**-ಈ ಶಿಷ್ಯರಭಿಪ್ರಾಯವನ್ನು, **ತಿರುವುಳ್ಳವ್‌ಪ್ಪತ್ತಿ** - ಗ್ರಹಿಸಿದವರಾಗಿ, **ಆಳ್ವಾರ್ ಪ್ರಕೃತಿ**-ಈ ಆಳ್ವಾರವರ ಸ್ವಭಾವವನ್ನು, ಅದು ಯಾವುದೆಂದರೆ, ಈ ಆಳ್ವಾರವರೇ ತಾವು ಬರೆದ ಸುಂದರ ಬಾಹುಸ್ತವದಲ್ಲಿ, **"ಶ್ರೀರಜ್ಗಧಾಮನಿ ಯಥಾ ಪುರಮೇಷ ಸೋಽಹಂ। ರಾಮಾನುಜಾರ್ಯ ವಶಗಃ ಪರಿವರ್ತಿಷೀಯ"**(ಸುಂದರಸ್ತವ ೧೨೯) ಎಂದರೆ ಶ್ರೀರಜ್ಗಕ್ಷೇತ್ರದಲ್ಲಿ ಶ್ರೀ ರಾಮಾನುಜಮುನಿಗಳಿಗೆ ಪ್ರಿಯಶಿಷ್ಯನಾಗಿದ್ದಂಥಾ ಆ ನಾನು ಮೊದಲಿನಂತೆಯೇ ಆ ಗುರುಗಳಿಗೇ ವಶನಾಗಿ ವರ್ತಿಸಬೇಕು ಎಂದು ಹೇಳಿಕೊಂಡಿರುವ ಹಾಗೆ, ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿ ಮೊದಲಾದುದೆಲ್ಲಾ ಆಚಾರ್ಯಾಧೀನವೆಂದು ನಂಬಿ ನಿರ್ಭರರಾಗಿರುವ ಸ್ವಭಾವವು, ಇದು ಸಾರಾಸ್ವಾದಿನಿಯವರ ಅಭಿಪ್ರಾಯವು, ಸಾರಪ್ರಕಾಶಿಕಾ ಸಾರವಿವರಣೆಯವರುಗಳು, ನನ್ನ (ಶ್ರೀ ಭಾಷ್ಯಕಾರರ) ಮೂಲಕವಾಗಿ ಸಮಸ್ತ ಅರ್ಥವನ್ನೂ ಶ್ರೀ ಕೂರೇಶರು ಗ್ರಹಿಸಿದವರಾದರೂ ಪುನಃಪುನಃ ಅದನ್ನೇ ಕೇಳಬೇಕೆಂಬಭಿಲಾಷೆಯುಳ್ಳೋಣವೇ ಶ್ರೀ ಕೂರೇಶರ ಸ್ವಭಾವವೆಂದು ವ್ಯಾಖ್ಯಾನ ಮಾಡಿರುತ್ತಾರೆ. ಮೊದಲನೆಯ ವ್ಯಾಖ್ಯಾನದಲ್ಲಿ ಗುರುವಿನಲ್ಲಿ ಸರ್ವ ಪಾರತಂತ್ರ್ಯವೂ, ಎರಡನೆಯದರಲ್ಲಿ ದ್ವಯಮಂತ್ರೋಪದೇಶವೂ ಭರನ್ಯಾಸಕಾಲದಲ್ಲಿ ಮಾಡಲ್ಪಟ್ಟಿದ್ದರೂ, ತದನುಸಂಧಾನರೂಪದಲ್ಲಿ ಈಗಲೂ ಗುರುಮುಖೇನ ಕೇಳಬೇಕೆಂಬ ಕುತೂಹಲವೂ ನಿದರ್ಶಿಸಲ್ಪಟ್ಟಿತು. ಈ ಎರಡನೆಯ ಅರ್ಥವು ಪ್ರಕರಣಕ್ಕೆ ತುಂಬಾ ಸಂಬಂಧಪಟ್ಟದುದಾಗಿದೆ; ಇಂತಹ ಆಳ್ವಾರವರ ಅಭಿಪ್ರಾಯವನ್ನು, **ಅರಿಯಿರಾರ್‌ಗಳೋ** - ನಿಮಗೆ ತಿಳಿಯದೇ? ಎಂದು ಶ್ರೀ ಭಾಷ್ಯಕಾರರು ಹೇಳಿ, ಪುನಃ ಉಪದೇಶಿಸುತ್ತಾರೆ; **ಇನ್ನವಸ್ಥೈಯಿಲ್** - ಈ ಚರಮದೆಶೆಯಲ್ಲಿ **ಅವರುಕ್ಕು** - ಕೂರತ್ತಾಳ್ವಾರವರಿಗೆ, **ಇದು** - ಈಗ ನಾವು ಅವರ ಕಿವಿಯಲ್ಲಿ ದ್ವಯಮಂತ್ರವನ್ನುಚ್ಚರಿಸಿದುದು, **ಕರ್ಪೂರತ್ತೈ**

ಯುಮ್ ಖಂಡ ಶರ್ಕರೈಯೈಯುಮ್ - ಪಚ್ಚಕರ್ಪೂರವನ್ನೂ ಕಲ್ಲುಸಕ್ಕರೆಯನ್ನೂ, **ಇಟ್ಟಮಾತ್ರಮನ್ನೋ** - ಬಾಯಲ್ಲಿ ಇಟ್ಟಹಾಗಲ್ಲವೇ? ಎಂದರೆ ಒಣಗಿಕೊಂಡು ಬಂದ ಬಾಯಲ್ಲಿ ಇವುಗಳನ್ನಿಟ್ಟರೆ ಶ್ರಮಪರಿಹಾರವಾಗಿ ಬಾಯಲ್ಲಿ ದ್ರವ ಹೇಗೆ ಉಂಟಾಗುತ್ತದೋ ಹಾಗೆ, ಈ ದ್ವಯೋಚ್ಚಾರಣೆಯನ್ನು ಅವರ ಕಿವಿಯಲ್ಲಿ ಗುರುವಾದ ನಾನು ಬಂದು ಉಚ್ಚರಿಸುವುದರಿಂದ, ಅವರಿಗೆ ದೇಹೋತ್ಕ್ರಮಣದ ಆಯಾಸವು ಪರಿಹಾರವಾಗಲಿ ಎಂಬಭಿಪ್ರಾಯದಿಂದ ಮಾಡಿದುದೆಂಬ ಭಾವವು; ಮುಂದೆ ನೀವು ಅಭಿಪ್ರಾಯಪಟ್ಟಹಾಗಲ್ಲವೆಂದುಪದೇಶಿಸುತ್ತಾರೆ :— **ನಾಮ್** - ನಾವು, ಇದು - ಹೀಗೆ ಕಿವಿಯಲ್ಲಿ ಮಾಡಿದ ದ್ವಯೋಚ್ಚಾರಣವು, **ಉಪಾಯತ್ತುಕ್ಕು** - ಹಿಂದೆ ಮಾಡಿದ ಭರನ್ಯಾಸಕ್ಕೆ, **ಪರಿಕರಮಾಗ** - ಅಂಗವೆಂದು ಭಾವಿಸಿ, ಅಥವಾ, **ಉಪಕಾರಕಮಾಗ** - ಸಹಾಯರೂಪವಾದುದೆಂದು ಭಾವಿಸಿ, **ಶೆಯ್ದೋಮಲ್ಲೋಮ್** - ಮಾಡಿಮದಲ್ಲವು, ಎನ್ರು - ಎಂಬದಾಗಿ, **ಅರುಳಿಚ್ಚೆಯ್ಯ** - ಕೃಪೆಮಾ ಶ್ರೀ ಯತಿರಾಜರುಪದೇಶಿಸಲಾಗಿ, **ಮುದಲಿಗಳ್** - ಆ **ಪೂಜ್ಯರಾದ** ಶಿಷ್ಯರು, **ತೆಳಿನ್ದು** - ತಮ್ಮ ಸಂದೇಹವನ್ನು ಹೋಗಲಾಡಿಸಿಕೊಂಡು, **ನಿರ್ಭರರಾನಾರ್ಗಳ್** - ತಾವು ಮಾಡಿದ ಭರನ್ಯಾಸವಲ್ಲಿ ದೃಢನಂಬಿಕೆಯುಳ್ಳವರಾದರು. ಶ್ರೀ ಆಳ್ವಾರ್ ಕಿವಿಯಲ್ಲಿ ಚರಮದೆಶೆಯಲ್ಲಿ ಶ್ರೀ ಭಾಷ್ಯಕಾರರು ದ್ವಯೋಚ್ಚಾರಣೆ ಮಾಡಿದುದು ತಾವು ಮಾಡಿರುವ ಭರನ್ಯಾಸಕ್ಕೆ ತುಂಬಾ ಉಪಕಾರವೆಂದು ಭಾವಿಸಿ, ತಮಗೂ ಶ್ರೀ ಯತಿವರ್ಯರು ಜೀವಂತರಾಗಿರುವಾಗಲೇ ದೇಹೋತ್ಕ್ರಮಣವು ಪ್ರಾಪ್ತವಾದರೆ ಇಂತಹ ಭಾಗ್ಯವು ಲಭಿಸುವುದು, ಅಂತಹ ಭಾಗ್ಯವು ತಮಗಿಲ್ಲವೇ ಎಂದು ಖಿನ್ನರಾಗಿರಲು, ಅದನ್ನು ಕಂಡು ಶ್ರೀ ಭಾಷ್ಯಕಾರರು ತಮ್ಮ ಶಿಷ್ಯರುಗಳು ಈ ದ್ವಯೋಚ್ಚಾರಣೆಯ ಪ್ರಯೋಜನವನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲವೆಂದು ಭಾವಿಸಿ, ಓ ಶಿಷ್ಯರುಗಳೇ ಇದರಭಿಪ್ರಾಯವನ್ನು ತಿಳಿಸುವೆನು ಕೇಳಿ. ಶ್ರೀ ಕೂರೇಶರಿಗೆ ನಾನುಪದೇಶಿಸಿದ ಅರ್ಥವನ್ನು ಪದೇ ಪದೇ ಕೇಳಿದರೂ ತೃಪ್ತಿಯಿಲ್ಲದೆ ಪುನಃ ಪುನಃ ಕೇಳಲು ಕುತೂಹಲವುಳ್ಳವರು. ಈ ಅಭಿಪ್ರಾಯವನ್ನು ತಿಳಿದ ನಾನು, ಅವರಿಗೆ ಭರನ್ಯಾಸ ಕಾಲದಲ್ಲುಪದೇಶಿಸಿದ ಕರಣಮಂತ್ರವಾದ ಈ ದ್ವಯಮಂತ್ರವನ್ನು ಪುನಃ ಈ ಚರಮದೆಶೆಯಲ್ಲಿ ಅವರ ಕಿವಿಯಲ್ಲಿ ಹೇಳಿದರೆ, ಆ ಭರನ್ಯಾಸಕಾಲದ ಸ್ಮೃತಿಯು ಅವರಿಗುಂಟಾಗಿ ಅದರಿಂದ ಸುಪ್ರೀತರಾಗುವದರಿಂದ ಅವರಿಗೆ ಈ ಚರಮದೆಶೆಯ ಆಯಾಸವು ಪರಿಹಾರವಾಗುತ್ತದೆಂದು ಭಾವಿಸಿ ನಡಿಸಿದೆನೇ ವಿನಾ, ಈ ದ್ವಯೋಚ್ಚಾರಣೆಯು ಆ ಭರನ್ಯಾಸೋಪಾಯಕ್ಕೆ ಅಂಗವಾಗಿಯಾಗಲಿ ಅಥವಾ ಉಪಕಾರಕವಾಗಿಯಾಗಲಿ ಮಾಡಲಿಲ್ಲವೆಂದು ಹೇಳಿದರು ಈ ಉಪದೇಶವನ್ನು ಕೇಳಿದ

ಒಡನೆಯೇ ಆ ಶಿಷ್ಯರಿಗಿದ್ದ ಖೇದವು ತೊಲಗಿ ನಿರ್ಭರರಾದರೆಂದು ಇಲ್ಲಿ ಹೇಳಲ್ಪಟ್ಟಿರುತ್ತದೆ. ಈ ವೃತ್ತಾಂತದಿಂದ ನಾವು ಗ್ರಹಿಸತಕ್ಕದ್ದೇನೆಂದರೆ:—"ಪ್ರಪನ್ನನಿಗೆ ಚರಮದೆಶೆಯಲ್ಲಿ ಅಂತಿಮ ಸ್ಮೃತಿಯು ಆವಶ್ಯಕವೆಂಬ ವಾದವು ಕೂಡುವದಿಲ್ಲವು ಕರುಣಾಸಾಗರನು ಪ್ರಪನ್ನನಲ್ಲಿರುವ ಪ್ರೀತ್ಯತಿಶಯದಿಂದ "ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂಗತಿಂ" ಎಂಬ ಶ್ರೀ ವರಾಹ ಪುರಾಣದಲ್ಲಿರುವ ಸರ್ವೇಶ್ವರ ವಾಕ್ಯಾನುಸಾರವಾಗಿ, ದೇಹೋತ್ಕ್ರಮಣ ಕಾಲದಲ್ಲಿ ತಾನೇ ಅಂತಿಮ ಸ್ಮೃತಿಯನ್ನುಂಟುಮಾಡಬಹುದು" ಎಂಬುದು

ಈ ವೃತ್ತಾಂತವು ಶ್ರೀಮತ್ತೃತೀಯ ಬ್ರಹ್ಮತಂತ್ರಸ್ವತಂತ್ರ ಸ್ವಾಮಿಯವರನುಗ್ರಹಿಸಿದ ಮೂವ್ವಾಯಿರಪ್ಪಡಿ ಗುರುಪರಂಪರಾಸಾರದಲ್ಲಿಲ್ಲವು. ಬಹುಶಃ ಬಿಟ್ಟುಹೋಗಿರಬಹುದು. ಪ್ರಪನ್ನಾಮೃತದಲ್ಲಿ ಈ ವೃತ್ತಾಂತವು ಸ್ವಲ್ಪ ವ್ಯತ್ಯಾಸವಾಗಿ ಹೇಳಲ್ಪಟ್ಟಿರುತ್ತದೆ. ವ್ಯತ್ಯಾಸವೇನೆಂದು ತಿಳಿಯಬೇಕೆಂಬ ಕುತೂಹಲವಿರುವವರು ಕೂರೇಶ ಪರಮಪದಪ್ರಾಪ್ತಿಯನ್ನು ಬೋಧಿಸುವ ೫೬ನೆಯ ಅಧ್ಯಾಯವನ್ನು ಅವಲೋಕಿಸಬಹುದು. ಪ್ರಕೃತ ಪ್ರಕರಣಕ್ಕೆ ಬೇಕಾದ ಅಂಶವು ಇಲ್ಲಿ ಸೂಚಿಸಲ್ಪಡುತ್ತದೆ:—

ತಚ್ಛ್ರುತ್ವಾ ಲಕ್ಷ್ಮಣಾಚಾರ್ಯಃ ಕೂರೇಶ ಮಿದ ಮಬ್ರವೀತ್ ।
ವೈಕುಂಠೇ ತತ್ರ ಕೂರೇಶ ನಾಶಾಸ್ತ್ರಂ ನವ್ಯತಿಕ್ರಮಃ ॥
ಇಹಲೀಲಾ ವಿಭೂತ್ಯಾಂತು ಶಾಸ್ತ್ರಮಾರ್ಗ ಪ್ರವರ್ತನಂ ।
ತತೋ ವಿಷಣ್ಣಃ ಕೂರೇಶಃ ಶೇಷತ್ವಂ ವೀಕ್ಷ್ಯ ವಿಸ್ಮಿತಃ ॥
ದ್ವಯೋಪದೇಶಮಕರೋ ತ್ತಸ್ಯ ಕರ್ಣೇ ಯತೀಶ್ವರಃ ।
ಅಥ ತತ್ರ ಸ್ಥಿತಾ ಸ್ಸರ್ವೇ ವೈಷ್ಣವಾಸ್ತೇನ ಶಙ್ಕಿತಾಃ ॥
ಯತೀಂದ್ರಂ ತಂ ಮಹಾತ್ಮಾನಂ ವಚನಂ ಚೇದಮಬ್ರುವನ್ ।
ವೈಷ್ಣವಾನಾಂ ಪ್ರಪನ್ನಾನಾಂ ನಕರ್ತವ್ಯಾಂತಿಮಸ್ಮೃತಿಃ ॥
ಬಹುಧ್ಭಿಃ ಬಹುಳಂ ಚೋಕ್ತಂ ಶಾಸ್ತ್ರೈರೇವಂ ಯತೀಶ್ವರ ।
ದ್ವಯೋಪದೇಶಂ ಯೋಗೀಂದ್ರ ತೇನೈವ ಭವತಾಧುನಾ ॥
ಅನ್ತಕಾಲೇ ಕೃತಂ ತಸ್ಮೈ ಕೂರೇಶಾಯ ಮಹಾತ್ಮನೇ ।
ತೇಷಾಂ ತದ್ವಚನಂ ಶ್ರುತ್ವಾ ಯತೀಂದ್ರಃ ಪ್ರಾಹತಾನ್ ಪ್ರತಿ ॥
ಕರ್ಪೂರ ಘುಟಿಕಾ ಭಾವಾತ್ ರಾಜಪುತ್ರಸ್ಯ ವೈಷ್ಣವಾಃ ।
ಸಂಶೋಷ್ಯತೇ ಯಥಾ ಜಿಹ್ವಾ ದ್ವಯಾಭಾವಾ ತ್ತಥಾಸ್ಯಹಿ ॥

ಎಂಬುದಾಗಿ ಇಲ್ಲಿ ಇರುತ್ತದೆ. ಇದರರ್ಥವೇನೆಂದರೆ:—ಶ್ರೀ ಯತಿವರ್ಯರು ತಮ್ಮ ಪ್ರಿಯಶಿಷ್ಯರಾದ ಕೂರೇಶರ ಮಾತನ್ನು ಕೇಳಿ, "ನೀನು ವೈಕುಂಠದಲ್ಲಿರುವ ನಿತ್ಯ

ಸೂರಿಗಳು ಶಾಸ್ತ್ರಾತಿಕ್ರಮವನ್ನು ಮಾಡುವರೆಂದು ಹೇಳಿದಹಾಗಲ್ಲವು. ವೈಕುಂಠದಲ್ಲಿರುವ ನಿತ್ಯಸೂರಿಗಳು ಮೊದಲಾದವರಿಗೆ ಶಾಸ್ತ್ರವು ಬೇಕಿಲ್ಲವು. ಏಕೆಂದರೆ ಅವರಿಗೆ ಶಾಸ್ತ್ರವ್ಯತಿಕ್ರಮವಾಗಿ ನಡಿಯೋಣವೇ ಇಲ್ಲವು. ಈ ಲೀಲಾವಿಭೂತಿಯಲ್ಲಿಯಾದರೋ ಹಾಗಲ್ಲವು. ಶಾಸ್ತ್ರವ್ಯತಿಕ್ರಮವಿರುವದರಿಂದ ಶಾಸ್ತ್ರ ಬೇಕು, ಅದಕ್ಕನುಗುಣವಾಗಿ ನಡೆಯಬೇಕಾದುದು ಆವಶ್ಯಕವು" ಎಂದು ಉಪದೇಶಿಸಿದರು. ಇದರಿಂದ ಕೂರೇಶರಿಗೆ ಶೇಷತ್ವವು ಮನಸ್ಸಿಗೆ ಚನ್ನಾಗಿ ಹಿಡಿದು ಆಶ್ಚರ್ಯಭರಿತರಾಗಿರುವಾಗ ಶ್ರೀ ಯತಿವರ್ಯರು ಆ ಕೂರೇಶರ ಕಿವಿಯಲ್ಲಿ ದ್ವಯಮಂತ್ರವನ್ನುಪದೇಶಿಸಿದರು. ಅಲ್ಲಿ ಹತ್ತಿರ ನೆರೆದಿದ್ದ ನಿಜ ಶಿಷ್ಯಮಂಡಲಿಗೆ ಸೇರಿದ ಶ್ರೀ ವೈಷ್ಣವೋತ್ತಮರು ಅದನ್ನು ಕಂಡು ಸಂದೇಹವುಳ್ಳವರಾಗಿ, ತಮ್ಮ ಗುರುಗಳಾದ ಯತೀಂದ್ರರನ್ನು ಕುರಿತು ಪ್ರಶ್ನಿಸಿದರೇನೆಂದರೆ, "ತಾವು ಅನೇಕಾವರ್ತಿ ಶಾಸ್ತ್ರದಲ್ಲಿ ಅಂತಿಮಸ್ಮೃತಿ ಬೇಕಿಲ್ಲವೆಂದು ಹೇಳಿದೆ ಎಂದುಪದೇಶಿಸಿದುದನ್ನು ಕೇಳಿದೆವು. ಹೀಗಿರಲು ತಾವು ಈಗ ಈ ಮಹಾತ್ಮರಾದ ಕೂರೇಶರಿಗೆ ಅಂತಿಮಸ್ಮೃತಿಯುಂಟಾಗುವ ಹಾಗೆ ದ್ವಯೋಪದೇಶವನ್ನು ಮಾಡಿದಿರಲ್ಲಾ ಅದು ಹೇಗೆ" ಎನ್ನಲು, ಅದಕ್ಕಾ ಯತಿವರ್ಯರು, ಓ ವೈಷ್ಣವಾಗ್ರೇಸರರೇ, ರಾಜಪುತ್ರನಿಗೆ ಗಂಟಲು ಒಣಗಿದ ಕಾಲದಲ್ಲಿ ಪಚ್ಚಕರ್ಪೂರ ಗುಳಿಗೆ ಹೇಗೋ, ಹಾಗೆಯೇ ಪ್ರಪನ್ನರಾದ ಈ ಕೂರೇಶರಿಗೆ ದ್ವಯೋಚ್ಚಾರಣೆಯು" ಎಂದು ಸಮಾಧಾನ ಹೇಳಿದರು. ಅನುಕೂಲವಾದಾಗಲೆಲ್ಲಾ ಪ್ರಪನ್ನನು ದ್ವಯೋಚ್ಚಾರಣೆ ಮಾಡತಕ್ಕದ್ದೆಂದು ಹಿಂದೆಯೇ ತಿಳಿಸಲ್ಪಟ್ಟಿರುತ್ತದೆಯಷ್ಟೆ. ಹಾಗೆ ತನಗೆ ಮಾಡಲು ಸಾಧ್ಯವಿಲ್ಲದ ಪ್ರಪನ್ನನಿಗೆ ಅಂತಿಮಕಾಲ ದ್ವಯೋಚ್ಚಾರಣವು ಆಪ್ಯಾಯನವು ಎಂಬ ಭಾವವು. ಉಪಾಯವೆಂದಿಗೂ ಅಲ್ಲವೆಂಬುದು ಮುಖ್ಯ ತಾತ್ಪರ್ಯವು. ಆದುದರಿಂದಲೇ ಅದರ ಆವಶ್ಯಕತೆ ಇಲ್ಲವು.

ಕೆಲವರು ಆಳ್ವಾರ್ ಅಂತಿಮ ದೆಶೆಯಲ್ಲಿ ನಡಿಸಿದ ದ್ವಯೋಚ್ಚಾರಣೆಯ ವೃತ್ತಾಂತವನ್ನು ಮನಸ್ಸಿನಲ್ಲಿಟ್ಟು, ಅಂತಿಮ ಸ್ಮೃತಿಯು ಆವಶ್ಯಕವೆಂಬ ಪೂರ್ವಪಕ್ಷವನ್ನು ತರುವರು. ಅದನ್ನು ಖಂಡಿಸುವದಕ್ಕಾಗಿಯೂ ತಮ್ಮಭಿಪ್ರಾಯದ ಸಮರ್ಥನೆಗಾಗಿಯೂ ಶ್ರೀ ಭಾಷ್ಯಕಾರರೇ ತಮ್ಮ ಶಿಷ್ಯರಿಗೆ ಉಪದೇಶಿಸಿದುದನ್ನು ನಮ್ಮ ಅವಗಾಹನೆಗೆ ತಂದಿರುತ್ತಾರೆ. ಇದರಿಂದ ಅಂತಿಮ ಸ್ಮೃತಿಯು ನಿರಪೇಕ್ಷವಾದುದೆಂಬುದು ಸುವ್ಯಕ್ತವು.

ಮುಂದಿನ ವಾಕ್ಯದಿಂದ ಈ ಮೇಲೆ ಹೇಳಿದುದನ್ನೇ ಕೆಲವು ಪ್ರಮಾಣಗಳೊಂದಿಗೆ ನಿಗಮನ ಮಾಡಿ ಹೇಳುತ್ತಾರೆ:—ಆಗೈಯಾಲ್ - ಹೀಗೆ ಶ್ರೀ ಭಾಷ್ಯಕಾರರ ಉಪದೇಶ ಮೂಲಕ, ಅನ್ತಿಮಸ್ಮೃತಿಯು ಉಪಾಯವಾಗುವದಿಲ್ಲವಾ

ಆಗೈಯಾಲೇ "ನಷ್ಟಸ್ಮೃತಿರಪಿ ಪರಿತ್ಯಜನ್ ದೇಹಂ" ಎನ್ರುಂ (೧) "ಸ್ಥಿತೇ ಮನಸಿ ಸುಸ್ವಸ್ಥೇ" ಎಙ್ಗಿರ ಶ್ಲೋಕದ್ವಯತ್ತಿಲುಂ, (೨) "ತುಪ್ಪುಡೈಯಾರೈ ಯಡೈವದೆಲ್ಲಾಮ್" ಎಙ್ಗಿರಪಾಟ್ಟಿಲುಂ ಶೊಲ್ಲುಗಿರಪಡಿಯೇ, ಪ್ರಪನ್ನನುಕ್ಕನ್ತಿಮಸ್ಮೃತ್ಯಾದಿಗಳಿಲ್ ನಿರ್ಬಂಧಮಿಲ್ಲೈ.

ದುದರಿಂದ, "ನಷ್ಟಸ್ಮೃತಿಃ" ಎಂಬ ಶ್ಲೋಕದಲ್ಲೂ, "ಸ್ಥಿತೇ ಮನಸಿ ಸುಸ್ವಸ್ಥೇ" ಎಂದಾರಂಭಿಸಿ ಹೇಳಿರುವ, **ಶ್ಲೋಕದ್ವಯತ್ತಿಲುಮ್** - ಎರಡು ಶ್ಲೋಕದಲ್ಲೂ, "**ತುಪ್ಪುಡೈಯಾರ್**" ಎಂಬ ಪಾಶುರದಲ್ಲೂ ಸಹ, **ಶೊಲ್ಲುಗಿರಪಡಿಯೇ** - ಹೇಳಿರುವ ಹಾಗೆ, ಪ್ರಪನ್ನನಿಗೆ, ಅಂತಿಮ ಸ್ಮೃತ್ಯಾದಿಗಳ, **ನಿರ್ಬಂಧಮಿಲ್ಲೈ** - ನಿರ್ಬಂಧವೇನೂ ಇರುವದಿಲ್ಲವು ಎಂದರೆ ಅಂತಿಮಸ್ಮೃತ್ಯಾದಿಗಳು ಆವಶ್ಯಕವಿಲ್ಲವೆಂಬ ಭಾವವು ಇಲ್ಲಿ **ಆದಿ** ಶಬ್ದದಿಂದ ನಾಮಸಂಕೀರ್ತನಾದಿಗಳು ಸೂಚಿಸಲ್ಪಟ್ಟವು ಈ ಶ್ಲೋಕಗಳೂ ಪಾಶುರವೂ ಯಾವುವೆಂದರೆ:—

"ನಷ್ಟಸ್ಮೃತಿಃ" ಶ್ಲೋಕವು:—"ತೀರ್ಥೇ ಶ್ವಪಚಗೃಹೇ ವಾ ನಷ್ಟಸ್ಮೃತಿರಪಿ ಪರಿತ್ಯಜನ್ ದೇಹಂ । ಜ್ಞಾನ ಸಮಕಾಲ ಮುಕ್ತ್ವಾ ಕೈವಲ್ಯಂ ಯಾತಿ ಗತಶೋಕಃ" ಎಂದರೆ, **ತೀರ್ಥೇ** - ಪುಣ್ಯತೀರ್ಥಗಳಲ್ಲಾಗಲಿ, **ಶ್ವಪಚಗೃಹೇವಾ** - ನಾಯಿಯನ್ನು ಬೇಯಿಸಿ ತಿನ್ನುವ ಚಂಡಾಲನ ಮನೆಯಲ್ಲಿಯೇ ಆಗಲಿ, **ಇ**ವರಿಂದ ಪ್ರದೇಶ ನಿರ್ಬಂಧವು ಇಲ್ಲವೆಂದು ತೋರುತ್ತದೆ. ಹಿಂದೆಯೇ ಕಾಲನಿಯಮವಿಲ್ಲವೆಂದು ಹೇಳಿರುತ್ತಾರೆ. ಈಗ ಅಂತಿಮ ಸ್ಮೃತಿಯೂ ಬೇಕಿಲ್ಲವೆಂದು ಹೇಳಲ್ಪಡುತ್ತದೆ. **ನಷ್ಟಸ್ಮೃತಿರಪಿ**-ಪ್ರಜ್ಞೆಯು ಇಲ್ಲದಿದ್ದರೂ ಎಂದರೆ ಆ ಕಾರಣದಿಂದ ಭಗವಂತನನ್ನು ಸ್ಮರಿಸದಿದ್ದರೂ, **ದೇಹಂ ಪರಿತ್ಯಜನ್**-ದೇಹವನ್ನು ಪರಿತ್ಯಾಗ ಮಾಡುವವನಾಗಿ, **ಜ್ಞಾನಸಮಕಾಲಮುಕ್ತ್ವಾ**-ಜ್ಞಾನವು ಸರಿಯಾಗಿರುವ ಕಾಲದಲ್ಲಿ, **ಉಕ್ತ್ವಾ** ದ್ವಯೋಚ್ಚಾರಣೆಯನ್ನು ಮಾಡಿ, **ಕೈವಲ್ಯಂ**-ಮೋಕ್ಷವನ್ನು. **ಗತಶೋಕಃ**-ಏನೊಂದೂ ಶೋಕವಿಲ್ಲದವನಾಗಿ, **ಯಾತಿ**-ಹೊಂದುವನು.

ಇಲ್ಲಿ **ನಷ್ಟಸ್ಮೃತಿರಪಿ** ಎಂದು ಹೇಳಿರುವದರಿಂದ ಅಂತಿಮ ಸ್ಮೃತಿಯು ಆವಶ್ಯಕವಿಲ್ಲವು ವರಾಹಪುರಾಣದ ಎರಡು ಶ್ಲೋಕಗಳು ಯಾವುವೆಂದರೆ:—

ಸ್ಥಿತೇ ಮನಸಿ ಸುಸ್ವಸ್ಥೇ ಶರೀರೇ ಸತಿ ಯೋ ನರಃ ।
ಧಾತುಸಾಮ್ಯೇ ಸ್ಥಿತೇ ಸ್ಮರ್ತಾ ವಿಶ್ವರೂಪಂ ಚ ಮಾಮಜಂ ।
ತತಸ್ತಂ ಮ್ರಿಯಮಾಣಂತು ಕಾಷ್ಠಪಾಷಾಣಸನ್ನಿಭಂ ।
ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂಗತಿಂ ॥

---

(೧) ವರಾಹಪುರಾಣ. (೨) ಪೆರಿ. ತಿರು. ೪. ೧೦ ೧.

"ಮನಸ್ಸು ಶಾಂತತೆಯನ್ನೂ, ಶರೀರವು ಧಾತುಸಾಮ್ಯವನ್ನೂ ಹೊಂದಿರುವಾಗಲೇ ಯಾವ ಮನುಷ್ಯನಾಗಲಿ ಜನ್ಮಾದಿಗಳಿಲ್ಲದೆ ನಿತ್ಯನಾದ ವಿಶ್ವರೂಪನಾದ ನನ್ನನ್ನು ಸ್ಮರಿಸುವನೋ, ಅಂತಹ ನನ್ನ ಭಕ್ತನನ್ನು, ಆತನ ದೇಹವಿಯೋಗಕಾಲದಲ್ಲಿ ಮರದ ತುಂಡಿಗೂ ಕಲ್ಲಿಗೂ ಸಮಾನನಾಗಿ ಜ್ಞಾನವಿಲ್ಲದೆ ಬಿದ್ದಿರುವವನನ್ನು ನಾನು ಸ್ಮರಿಸುವನಾಗಿ, ಎಂದರೆ ಅವನು ನನ್ನನ್ನು ಸ್ಮರಿಸುವ ಹಾಗೆ ಮಾಡುವದೇ ಮೊದಲಾದ ಕೃಪೆಯನ್ನು ಮಾಡುವ ಸಮಯವೆಂದು ತಿಳಿದವನಾಗಿ, ಆತನಿಗೆ ಉತ್ತಮ ಗತಿಯನ್ನು ಹೊಂದಿಸುವುದಕ್ಕಾಗಿ ಕರೆದುಕೊಂಡುಹೋಗುವೆನು." ಇದಕ್ಕೆ ವರಾಹ ಚರಮಶ್ಲೋಕವೆಂಬ ಪ್ರಸಿದ್ಧಿಯುಂಟು. ಈ ಶ್ಲೋಕಾಭಿಪ್ರಾಯವನ್ನೇ ಶ್ರೀ ದೇಶಿಕರವರೇ ಅವರು ಬರೆದಿರುವ ಅಭೀತಿಸ್ತವದ ೬ನೆಯ ಶ್ಲೋಕವಾದ "ಸ್ಥಿತೇ ಮನಸಿ ವಿಗ್ರಹೇ" ಎಂಬ ಶ್ಲೋಕದಲ್ಲೂ ಉಪಪಾದಿಸಿರುತ್ತಾರೆ ದಾಸನು ಬರೆದಿರುವ ಅಭೀತಿಸ್ತವ ವ್ಯಾಖ್ಯಾನವನ್ನು ಪರಾಂಬರಿಸಬಹುದು. ಇಲ್ಲಿ **ಕಾಷ್ಠಪಾಷಾಣ ಸನ್ನಿಭಂ** ಎಂದು ಹೇಳಿರುವದರಿಂದ ಜ್ಞಾನವಿಲ್ಲದೆ ಇಂದ್ರಿಯವ್ಯಾಪಾರಗಳೆಲ್ಲಾ ನಿಂತುಹೋಗಿ ಸರ್ವೇಶ್ವರನನ್ನು ಸ್ಮರಿಸದೇ ಇದ್ದರೂ ದಿವ್ಯವೈಕುಂಠವನ್ನು ಹೊಂದಿಸುವನೆಂದು ಸರ್ವೇಶ್ವರನೇ ಹೇಳಿರುವದರಿಂದ ಅಂತಿಮ ಸ್ಮೃತಿಯು ಆವಶ್ಯಕವಿಲ್ಲವು.

ಪೆರಿಯಾಳ್ವಾರ್‌ರವರ ಪಾಶುರವು:—

ತುಪ್ಪುಡೈಯಾರೈ ಯಡೈವದೆಲ್ಲಾ ಞ್ಞೋರ್ ವಿಡತ್ತು ತ್ತುಣೈಯಾವರೆನ್ರೇ । ಒಪ್ಪಿಲೇ ನಾಗಿಲು ನಿನ್ನಡೈನ್ದೇ ನಾನೈಕ್ಕು ನೀಯರುಳ್ ಶೆಯ್‌ದನ್ಮೈಯಾಲ್ ॥ ಎಯ್‌ಪ್ಪೆನ್ನೈ ವನ್ದು ನಲಿಯುವಪ್ಪೋದಙ್ಗದು ನಾನುನ್ನೈ ನಿನೈಕ್ಕಮಾಟ್ಟೇನ್ । ಅಪ್ಪೋದೈಕ್ಕಿಪ್ಪೋದೇ ಶೊಲ್ಲಿವೈತ್ತೇ ನರಙ್ಗತ್ತರವಣೈಪ್ಪಳ್ಳಿಯಾನೇ ॥ (೪. ೧೦. ೧.)

ಇದರರ್ಥವೇನೆಂದರೆ:—ತುಪ್ಪುಡೈಯಾರೈ - ಶಕ್ತಿಯುಳ್ಳವರನ್ನು. ಅಡೈವದು - ಆಶ್ರಯಿಸುವದು, ಈ ಸಂದರ್ಭದಲ್ಲಿ ರಕ್ಷಣ ಸಾಮರ್ಥ್ಯವನ್ನು ಹೊಂದಿರುವ ಸರ್ವೇಶ್ವರನನ್ನು ಆಶ್ರಯಿಸುವದು, ಇಲ್ಲಿ ಬಹುವಚನವು ಪೂಜ್ಯತೆಯನ್ನು ಸೂಚಿಸುತ್ತದೆ. ಈ ರಕ್ಷಣ ಸಾಮರ್ಥ್ಯವು "**ನ ಸಂಪದಾಂ ಸಮಾಹಾರೇ ವಿಪದಾಂ ವಿನಿವರ್ತನೇ । ಸಮರ್ಥೋ ದೃಶ್ಯತೇ ಕಶ್ಚಿತ್ ತಂ ವಿನಾ ಪುರುಷೋತ್ತಮಂ**" ಎಂದರೆ "ಸರ್ವ ಶ್ರೇಯಸ್ಸನ್ನುಂಟುಮಾಡುವದರಲ್ಲೂ ಸಮಸ್ತ ವಿಪತ್ತುಗಳನ್ನು ಹೋಗಲಾಡಿಸುವದರಲ್ಲೂ ಆ ಶ್ರಿಯಃಪತಿಯಾದ ಪುರುಷೋತ್ತಮನನ್ನು ಬಿಟ್ಟರೆ ಬೇರೆ ಯಾರೊಬ್ಬ ಸಮರ್ಥರೂ ಇಲ್ಲವು" ಎಂದೂ ಮತ್ತು "**ನಹಿ ಪಾಲನ ಸಾಮರ್ಥ್ಯ ಮೃತೇ ಸರ್ವೇಶ್ವರಂ ಹರಿಂ**" "ಸರ್ವೇಶ್ವರನಾದ

ಶ್ರೀಹರಿಯನ್ನು ಬಿಟ್ಟರೆ ಬೇರೆ ಯಾರಿಗೂ ರಕ್ಷಿಸುವ ಸಾಮರ್ಥ್ಯವಿಲ್ಲವು” ಎಂದೂ ಹೇಳಿರುವ ಹಾಗೆ ಶ್ರಿಯಃಪತಿಗೆ ಮಾತ್ರವೇ ಆ ಸಾಮರ್ಥ್ಯವು ಎಂಬ **ಭಾವವು**; **ಎಲ್ಲಾ ಶೋರ್‌ವಿಡತ್ತು** - ದಶೇಂದ್ರಿಯಂಗಳಿಂದ ಕೂಡಿದ ಮನಸ್ಸು ಎಲ್ಲವೂ ತಮ್ಮ ವ್ಯಾಪಾರವನ್ನು ತೊರೆದ ಸಮಯದಲ್ಲ ಎಂದರೆ ಅಂತಿಮ ಸಮಯದಲ್ಲಿ ದೇಹವು ಕಾಷ್ಠಪಾಷಾಣಸದೃಶವಾಗಿ ಬಿದ್ದಿರುವಾಗ, **ತುಣ್ಯೆಯಾವರೆನ್ರೇ** - **“ಅಹಂ ಸ್ಮರಾಮಿ ಮದ್ಭಕ್ತಂ”** ಎಂದು ಹೇಳಿರುವ ಸ್ವೋಕ್ತಿಗೂ, **“ಮಾ ಶುಚಃ”** ಎಂಬ ಸ್ವೋಕ್ತಿಗೂ ಅನುಸಾರವಾಗಿ ನೀವು ಅಂತಹ ಕಷ್ಟದಶೆಯಲ್ಲಿ ರಕ್ಷಕರಾಗುವಿರೀ ಎಂದೇ, **ಒಪ್ಪಿಲೇನಾಗಿಲುಮ್** - **“ಜ್ಞಾಜ್ಞೌ ಅಜಾವೀಶ ನೀಶೌ”** ಎಂಬ ಶ್ರುತಿಯಲ್ಲಿ ತೋರುವ ಹಾಗೂ, **“ಅಹಮಸ್ಮ್ಯಪರಾಧ ಚಕ್ರವರ್ತೀ”** ಎಂಬಲ್ಲಿ ಹೇಳಿರುವ ಹಾಗೂ, ನಾನು ಅಪರಾಧ ಚಕ್ರವರ್ತಿಯಾಗಿಯೂ ನೀನು ಕಲ್ಯಾಣಗುಣಗಳಲ್ಲಿ ಸಾರ್ವಭೌಮನಾಗಿಯೂ ಹೀಗೆ ನಿನ್ನ ಕೃಪೆಗೆ ಯೋಗ್ಯತೆಯಿಲ್ಲದಿದ್ದರೂ ಕೂಡ, **ನಿನ್ನಡೈನ್ದೇಱ** - ನಿನ್ನ ಪಾದಾರವಿಂದವನ್ನಾಶ್ರಯಿಸಿದೆನು. ಹೀಗೆ **ಪೂರ್ಣ** ನಂಬಿಕೆಯಿಂದ ರಕ್ಷಿಸುವನೆಂದು ಆಶ್ರಯಿಸಿದೆಯಲ್ಲಾ, ನಾವು ಹಾಗೆ ರಕ್ಷಿಸಿದುದನ್ನು ಎಲ್ಲಿ ಕಂಡಿರುವಿರಿ ಎಂದರೆ ಅದಕ್ಕೆ ಹೇಳುತ್ತಾರೆ:—**ಆನೈಕ್ಕು ನೀಯರುಳ್ ಶೆಯ್ದ ಮೈಯಾಲ್** - ನೀವು ಆನೆಗೆ ಕೃಪೆ ಮಾಡಿರುವದರಿಂದ, ತಿರ್ಯಕ್ಕಾದ ಗಜೇಂದ್ರನಿಗೆ ಉಂಟಾದ ಆರ್ತಿಯನ್ನೂ ಅನನ್ಯಗತಿತ್ವವನ್ನೂ ಕಂಡು ಹೋಗಲಾಡಿಸಿದುದರಿಂದ ಎಂಬ ಭಾವವು. ಆದರೆ ಹಾಗೆ ಆನೆಗೆ ಆರ್ತಿ ಬಂದಾಗ ಪ್ರಾರ್ಥಿಸಿದ ಹಾಗೆ ನಿನಗೂ ಆರ್ತಿ ಒದಗಿ ಪ್ರಾರ್ಥಿಸಿದರೆ ರಕ್ಷಿಸುವೆನು ಎಂದೇನಾದರೂ ಹೇಳುವಿರಾದರೆ, ಹಾಗೆ ಆಗುವದಿಲ್ಲವು, ನನಗೆ ಆರ್ತಿ ಬಂದಾಗ, **ಐಯ್‌ಪ್ಪೈನ್ನೈವನ್ದು ನಲಿಯುನ್ಪೋದು ಅಜಕ್ಕಿದುಮ್ ನಾನುನ್ನೈ ನಿನೈಕ್ಕಮಾಟ್ಟೇಱ** - ವಾತ ಪಿತ್ತ ಶ್ಲೇಷ್ಮಾಧಿಕ್ಯದಿಂದ ಕ್ಲೇಶಪಡುತ್ತಿರುವ ಕಾಲದಲ್ಲಿ ನಿಮ್ಮನ್ನು ಸ್ಮರಿಸುವದು ಅಸಾಧ್ಯವು, ಹಾಗಾದರೆ ಏನು ಮಾಡುತ್ತೀ ಎಂದು ಕೇಳುತ್ತೀರೋ ಹೇಳುವೆನು ಲಾಲಿಸಿ ; **ಅಪ್ಪೋದೈಕ್ಕಿಪ್ಪೋದೆ ಸೊಲ್ಲಿವೈತ್ತೇಱ** - ಹಾಗೆ ಕರಣಕಳೇಬರಗಳ ವ್ಯಾಪಾರವೆಲ್ಲಾ ಕುಂದಿ ಹೋಗಿರುವ ಆ ಕಾಲಕ್ಕೆ ಬದಲಾಗಿ ಈಗ ದೇಹೇಂದ್ರಿಯ ದಾರ್ಢ್ಯವಿರುವಾಗಲೇ ನಿಮ್ಮನ್ನ ಆಶ್ರಯಿಸಿ ಸ್ತೋತ್ರಮಾಡಿ ದ್ವಯೋಚ್ಚಾರಣಾದಿಗಳನ್ನು ಮಾಡಿರುವೆನು. ಆಗಲಿ ನೀನೀಗ ಮಾಡಿದ್ದಕ್ಕಾಗಿ ಆಗ ರಕ್ಷಿಸಬೇಕೆಂಬ ನಿರ್ಬಂಧವೇನೆಂದು ಕೇಳುವಿರೋ ? **ಅರಙ್ಗತ್ತರವಣೈಪ್ಪಳ್ಳಿಯಾನೇ** - ಹೀಗೆ ನಮ್ಮಂಥಾವರನ್ನು ರಕ್ಷಿಸಬೇಕೆಂಬ ವ್ರತವನ್ನಾಚರಿಸಿ, ಬಹು ದೂರದಲ್ಲಿರುವ ಕ್ಷೀರಸಮುದ್ರವನ್ನು ಬಿಟ್ಟು ಬಂದು, ಅಲ್ಲಿ ತಾವಿರುವ ಅಸ್ಮಾದೃಶವಾದ ವೈಭವವನ್ನು ನಮಗೆ

ತಿಳಿಯಪಡಿಸುವುದಕ್ಕಾಗಿ ಈ ಕಾವೇರೀ ಮಧ್ಯದೇಶವಾದ ಶ್ರೀರಂಗದಲ್ಲಿ ಶೇಷ ಪರ್ಯಂಕದಲ್ಲಿ ಶಯನಿಸಿದ್ದೀರಲ್ಲವೇ ಎಂಬಭಿಪ್ರಾಯದಿಂದ ಸಂಬೋಧನೆ ಮಾಡಿರುತ್ತಾರೆ.

ಹಾಗೆಯೇ ಕುಲಶೇಖರಾಳ್ವಾರ್ಗಳೂ "**ಕೃಷ್ಣ ತ್ವದೀಯ ಪದ ಪಙ್ಕಜ ಪಂಜರಾನ್ತಮದ್ಯೈವ ಮೇ ವಿಶತು ಮಾನಸ ರಾಜಹಂಸಃ । ಪ್ರಾಣ ಪ್ರಯಾಣ ಸಮಯೇ ಕಫ ವಾತಪಿತ್ತೈಃ ಕಣ್ಠಾವರೋಧನ ವಿಧೌ ಸ್ಮರಣಂ ಕುತಸ್ತೇ**" ಎಂಬಲ್ಲಿ ಈ ಅಭಿಪ್ರಾಯವನ್ನೇ ತಿಳಿಸಿರುತ್ತಾರೆ. ಓ ಕೃಷ್ಣನೇ, ನನ್ನ ಮನಸ್ಸೆಂಬ ರಾಜಹಂಸ ಪಕ್ಷಿಯು ನಿನ್ನ ಪಾದಕಮಲ ಪಂಜರದೊಳಗೆ ಈಗಲೇ ಎಂದರೆ ದೇಹೇಂದ್ರಿಯಗಳೆಲ್ಲಾ ದೃಢವಾಗಿರುವಾಗಲೇ ಪ್ರವೇಶಿಸಲಿ. ಇಲ್ಲಿ ಪಕ್ಷಿಯು ಪಂಜರಪ್ರವೇಶ ಸಾಮ್ಯವನ್ನು ಏಕೆ ಹೇಳಿದರೆಂದರೆ ಪಂಜರಸ್ಥ ಪಕ್ಷಿಯು ಹೇಗೆ ಅತ್ತಿತ್ತ ಓಡಾಡದೆ ಪಂಜರದಲ್ಲೇ ಇರುತ್ತದೆಯೋ, ಹಾಗೆಯೇ ತಮ್ಮ ಮನಸ್ಸು ಚಂಚಲವಾಗಿ ಐಹಿಕ ಭ್ರಮಣೆಯಿಲ್ಲದೆ ಸದಾ ಕೃಷ್ಣ ಪದಪಂಕಜದಲ್ಲೇ ಸಕ್ತವಾಗಿರಲೆಂಬ ಭಾವವು. ಮನಸ್ಸನ್ನು ಶುಕಾದಿ ಇತರ ಪಕ್ಷಿಗಳಿಗೆ ಹೋಲಿಸದೆ ರಾಜಹಂಸಪಕ್ಷಿಗೆ ಏಕೆ ಹೋಲಿಸಿದರೆಂದರೆ ಮನಸ್ಸು ಇಂದ್ರಿಯಗಳೆಲ್ಲಕ್ಕೂ ಅಧಿಪತಿಯಾಗಿ ರಾಜನಹಾಗೆ ತನ್ನ ವಶ ಮಾಡಿಕೊಂಡು, "**ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ**" ಎಂದು ಹೇಳಿರುವ ಹಾಗೆ, ಮೋಕ್ಷಕ್ಕೂ ಕೂಡ ಅದೇ ಕಾರಣಭೂತವಾದುದರಿಂದ ಮಾನಸ ರಾಜಹಂಸಃ ಎಂಬ ಪ್ರಯೋಗವು ಯಾವಾಗ ಅದು ಮೋಕ್ಷಮಾರ್ಗಕ್ಕೆ ಸಹಕಾರಿಯಾಯಿತೋ ಆಗ ರಾಜಹಂಸವೆಂದು ಹೇಳಿಸಿಕೊಳ್ಳಲು ಏನೊಂದೂ ಅಭ್ಯಂತರವಿಲ್ಲವು. ಏಕೆ ಈಗಲೇ ಪ್ರವೇಶ ಮಾಡಬೇಕೆಂದರೆ :—ಕಫ, ವಾತ, ಪಿತ್ತಗಳ ಆಧಿಕ್ಯದಿಂದ ಗಂಟಲಲ್ಲಿ ಮಾತು ಕೂಡ ಹೊರಡದಿರುವ, ದೇಹಾವಸಾನದ ದುಸ್ಥಿತಿಯಲ್ಲಿ, ಕರುಣಾನಿಧಿಯಾದ ನಿನ್ನ ಅಂತಿಮ ಸ್ಮರಣೆಗೆ ಅವಕಾಶವೆಲ್ಲಿರುತ್ತದೆ ಎಂದು ಹೇಳಿರುತ್ತಾರೆ.

ಆಗಲಿ, ಹೀಗೆ ಅಂತಿಮಸ್ಮೃತಿಯ ನಿರ್ಬಂಧವಿಲ್ಲದಿದ್ದರೆ, ಶ್ರೀ ಯತಿವರ್ಯರೇ ಶರಣಾಗತಿ ಗದ್ಯದಲ್ಲಿ ಅನ್ತಿಮಸ್ಮೃತಿಯು ಇರಬೇಕೆಂದು ಹೇಳಿದ ಹಾಗೆ ತೋರುತ್ತದಲ್ಲಾ, ಅದಕ್ಕೆ ನಿರ್ವಾಹ ಹೇಗೆ? ಎಂದರೆ ಆ ಪ್ರಕರಣವನ್ನು ಉದಾಹರಿಸಿ ಅದಕ್ಕೆ ಬೇರೇ ವಿಧವಾಗಿ ನಿರ್ವಾಹ ಮಾಡಿ ಬೋಧಿಸುತ್ತಾರೆ. ಶ್ರೀ ಭಾಷ್ಯಕಾರರಿಗೆ ಶ್ರೀ ಕಾಂಚೀಪೂರ್ಣರ ಮತ್ತು ಶ್ರೀ ವರದರಾಜರ ಕೃಪೆಗಳ ಮೂಲಕ ಪ್ರಾಪ್ತವಾದ ಷಡರ್ಥದಲ್ಲಿ ಅಂತಿಮ ಸ್ಮೃತಿಯು ಅನಾವಶ್ಯಕವೆಂಬುವದೂ ಒಂದಾಗಿರುವಾಗ, ಈ ಸಂದರ್ಭದಲ್ಲಿ ಶ್ರೀ ಯತಿವರ್ಯರು ಅದಕ್ಕೆ ವಿರೋಧವಾಗಿ

ಅಸ್ಮಿನ್ನರ್ಥೇ ಗದ್ಯವಾಕ್ಯಸ್ಯಾ ವಿರೋಧಿತ್ವಮ್.

(೧) "ಶರೀರಪಾತ ಸಮಯೇತು ಕೇವಲಂ ಮದೀಯ ಯೈವ ದಯಯಾತಿ ಪ್ರಬುದ್ಧೋ ಮಾಮೇವಾವಲೋಕಯನ್ನಪ್ರಚ್ಯುತ ಪೂರ್ವ

ಅನುಗ್ರಹಿಸುವನೇ? ಎಂದಿಗೂ ಇಲ್ಲವು. ಆದುದರಿಂದ ಅದಕ್ಕೆ ನಿರ್ವಾಹ ಹೇಗೆಂಬುವದನ್ನುಪದೇಶಿಸುತ್ತಾರೆ.

ಈ ವಾಕ್ಯವು ಶ್ರೀ ಭಾಷ್ಯಕಾರರ ಶರಣಾಗತಿ ಪ್ರಾರ್ಥನೆಗಳಾದ ನಂತರ ಶ್ರೀ ರಂಗನಾಥನು ತನ್ನ ಭಕ್ತಾಗ್ರೇಸರರನ್ನು ಕುರಿತು ಹೇಳುವದಾಗಿರುತ್ತದೆ:— **ಶರೀರಪಾತಸಮಯೇತು** - ಶರೀರಾವಸಾನ ಕಾಲದಲ್ಲಾದರೋ, ಇಲ್ಲಿ **'ತು'** ಶಬ್ದದಿಂದ ಕೃಪಾಲವಾಲನ ತತ್ಕಾಲದ ವಿಶೇಷ ಕೃಪೆಯು ದ್ಯೋತಿತವು, ಅಥವಾ ಇಂದ್ರಿಯ ಮನಸ್ಸು ಮೊದಲಾದವುಗಳು ವಿಶ್ರಾಂತಿಯನ್ನು ಹೊಂದುವದರಿಂದ ಕಾಷ್ಠಪಾಷಾಣಗಳಿಗೆ ಸಮಾನವಾಗಿ ದೇಹವು ಬಿದ್ದಿರುವಾಗ ಜ್ಞಾನವುಳ್ಳವನಾಗಿರುವದು ಅಶಕ್ಯವೆಂಬ ಭಾವವನ್ನು ಇದು ಸೂಚಿಸುತ್ತದೆ, **ಕೇವಲಂ**-ಪೂರ್ವಾಭ್ಯಾಸವೇನೂ ಬೇಕಾಗದಿರುವ ಬಗೆ, **ಮದೀಯಯೈವ ದಯಯಾ** - ನನ್ನ ಸಂಬಂಧವಾದ ದಯೆಯಿಂದಲೇ, ಇನ್ನಾರ ದಯೆಯೂ ಬೇಕಿಲ್ಲವೆಂಬ ಭಾವವು, ಆ ಕಾರಣದಿಂದಲೇ ಏವ ಎಂಬವಧಾರಣವು, ಅಥವಾ ದಯೆ ಎಂಬುದು ನನಗೆ ನಿರುಪಾಧಿಕವಾದುದೆಂಬ ಭಾವವೂ ತೋರಿಬರುತ್ತದೆ, ತನ್ನ ದಯೆ ಮಾತ್ರವೇ ಸಾಕು ಎಂದು ಹೇಳಿರುವದರಿಂದ ಪುಣ್ಯಕ್ಷೇತ್ರವಾಸ, ಪುಣ್ಯತೀರ್ಥಸ್ನಾನ, ದ್ವಯಾರ್ಥಾನುಸಂಧಾನ ಮುಂತಾದುವೂ ಬೇಕಿಲ್ಲವೆಂಬದೂ ತೋರಿಬರುತ್ತದೆ ; ಮತ್ತು ಆ ಕಾಲದಲ್ಲಿ ಈತನ ಪ್ರಾರ್ಥನೆಯೂ ಕೂಡ ಬೇಕಿಲ್ಲವೆಂಬುದೂ ಸೂಚಿತವಾಯಿತು, **ಅತಿ ಪ್ರಬುದ್ಧಃ** - ಶರೀರ ತ್ಯಾಗ ಮಾಡುವದಕ್ಕಿಂತ ಮುಂಚೆ ಹೇಗೆ ಜ್ಞಾನ ವಿಶಿಷ್ಟನೋ ಹಾಗೆಯೇ ತುಂಬಾ ಜ್ಞಾನವುಳ್ಳವನಾಗಿ, ಅಥವಾ ಆವಾಗಿದ್ದುದಕ್ಕಿಂತಲೂ ಹೆಚ್ಚು ಜ್ಞಾನವುಳ್ಳವನಾಗಿ, ಅಥವಾ ಮುಂದೆ ಉಂಟಾಗುವ ದಿವ್ಯ ಜ್ಞಾನ ಸೂಚಕನಾಗಿ ಅತಿ ಪ್ರಬುದ್ಧನಾಗಿ, **ಮಾಮೇವಾವಲೋಕಯನ್** - ನನ್ನನ್ನೇ ನೋಡುವವನಾಗಿ ಎಂದರೆ ನನ್ನ ದಿವ್ಯಮಂಗಳ ವಿಗ್ರಹವನ್ನೇ ಸಾಕ್ಷಾತ್ಕರಿಸಿದವನಾಗಿ, ಅಥವಾ ಅನುಸಂಧಾನ ಮಾಡುವವನಾಗಿ, ಇಲ್ಲಿ ಏವ ಎಂಬ **ಅವಧಾರಣ**ದಿಂದ, ಇಲ್ಲಿ ಕಾಣುವ ಸಮಸ್ತ ವಸ್ತುಗಳೂ ಸರ್ವೇಶ್ವರನಿಗೆ ಅಪೃಥಕ್ಸಿದ್ಧವಿಶೇ

---

(೧) ಶರಣಾಗತಿ ಗದ್ಯ.

ಸಂಸ್ಕಾರ ಮನೋರಥಃ" ಎನ್ರುರುಳಿಚ್ಚೆಯ್‌ದದು ಇವ್ವಚನಙ್ಗಳುಕ್ಕು ಅವಿರುದ್ಧಮಾಗ ವೊರು ಪ್ರಕಾರತ್ತಾಲೇ ನಿರ್ವಾಹ್ಯಮ್ :—ಎಙ್ಗನೇ ಯೆನ್ನಿಲ್ :—

ಷಣವೆಂಬ ಜ್ಞಾನದಿಂದ ಎಲ್ಲಾದರಲ್ಲೂ ಸರ್ವೇಶ್ವರನೇ **"ವೃಕ್ಷೇ ವೃಕ್ಷೇ ಚ ಪಶ್ಯಾಮಿ ಚೀರಕೃಷ್ಣಾಜಿನಾಂಬರಂ"** ಎಂದರೆ "ಪ್ರತಿಯೊಂದು ವೃಕ್ಷದಲ್ಲೂ ನಾರುಮಡಿ ಧರಿಸಿದ ಶ್ರೀರಾಮನೇ ಕಣ್ಣಿಗೆ ಕಾಣುತ್ತಿದ್ದಾನೆ" ಎಂಬ ಮಾರೀಚೋಕ್ತಿಯ ಹಾಗೆ ತೋರುವವನಾಗಿ ಎಂಬರ್ಥವು, **ಅಪ್ರಚ್ಯುತ ಪೂರ್ವ ಸಂಸ್ಕಾರ ಮನೋರಥಃ** - ಜಾರಿ ಬೀಳದ ಅಥವಾ ನಾಶಹೊಂದದ ಪೂರ್ವ ಸಂಸ್ಕಾರ ಮೂಲವಾದ ಪ್ರಾಪ್ತಿಮನೋರಥವುಳ್ಳವನಾಗಿ, ಎಂದರೆ ಸರ್ವೇಶ್ವರನೇ ಪರಮಪ್ರಾಪ್ಯವೆಂಬ ಶಾಸ್ತ್ರಜನ್ಯವಾದ ಅನುಭವ ಸಂಸ್ಕಾರಕ್ಕೆ ಈ ಅಂತಿಮ ದೆಶೆಯಲ್ಲುಂಟಾಗುವ ದೇಹತ್ಯಾಗ ಕ್ಲೇಶಗಳಿಂದೇನೂ ಚ್ಯುತಿಯಿಲ್ಲವೆಂದೂ, ಆಗ ಈ ದೇಹತ್ಯಾಗ ಮಾಡುವ ಪ್ರಪನ್ನನಿಗೆ ಅನುಬಂಧಿಗಳಲ್ಲಿರುವ ಪ್ರೀತಿಯೂ ಕೂಡ ಏನೂ ಮಾಡಲಾರದೆಂದೂ ಹೇಳಲ್ಪಟ್ಟಿತು **ಎನ್ರುರುಳಿಚ್ಚೆಯ್‌ದದು** - ಎಂದು ಕೃಪೆಯಾ ಹೇಳಿರುವದು, **ಇವ್ವಚನಙ್ಗಳುಕ್ಕು** - ಹಿಂದಿನ ಭಾಷ್ಯಕಾರಸೂಕ್ತಿ, ವರಾಹಪುರಾಣೋಕ್ತಿ, ಪೆರಿಯಾಳ್ವಾರ್‌ರವರ ಪಾಶುರಗಳಿಗೂ, **ಅವಿರುದ್ಧಮಾಗ** - ವಿರೋಧವುಂಟಾಗದ ಹಾಗೆ, **ಒರು ಪ್ರಕಾರತ್ತಾಲೇ ನಿರ್ವಾಹ್ಯಮ್** - ಒಂದು ವಿಧವಾಗಿ ನಿರ್ವಹಿಸತಕ್ಕದ್ದಾಗಿರುತ್ತದೆ. ಪ್ರಪನ್ನನಿಗೆ ಅಂತಿಮ ಸ್ಮೃತಿಯ ಆವಶ್ಯಕತೆಯಿಲ್ಲವೆಂಬಭಿಪ್ರಾಯಕ್ಕೆ ವಿರೋಧವಿಲ್ಲದ ಹಾಗೆ ಈ ಗದ್ಯವಾಕ್ಯಕ್ಕೆ ಅರ್ಥವನ್ನು ಹೇಳತಕ್ಕದ್ದು. ಶ್ರೀ ಭಾಷ್ಯಕಾರರ ಷಡರ್ಥಪ್ರಾಪ್ತಿ ಆಳ್ವಾರ್ ಅಂತಿಮ ಕಾಲಾಭಿಪ್ರಾಯಗಳಿಂದ ಅವರಭಿಪ್ರಾಯವು ಅಂತಿಮ ಸ್ಮರಣವು ಅನಪೇಕ್ಷಿತವೆಂದೇ ಆಗಿರುವಾಗ ಇಲ್ಲಿ ಅದಕ್ಕೆ ವಿರುದ್ಧವಾಗಿ ಅಭಿಪ್ರಾಯಪಡುವರೇ ? ಎಂದಿಗೂ ಇಲ್ಲವು. ಆದುದರಿಂದ ಬೇರೇ ವಿಧವಾಗಿ ಪೂರ್ವಾಭಿಪ್ರಾಯಕ್ಕೆ ವಿರೋಧವಿಲ್ಲದ ಹಾಗೆ ಅನ್ವಯಿಸತಕ್ಕದ್ದೆಂಬ ಭಾವವು. **ಎಙ್ಗನೇ ಯೆನ್ನಿಲ್**- ಅದು ಹೇಗೆ ಎಂದರೆ :—

ಆದುದರಿಂದ ಈ ಗದ್ಯವಚನಕ್ಕೆ ಬೇರೇ ವಿಧವಾಗಿ ನಿರ್ವಾಹ ಮಾಡಬೇಕೆಂದೆಣಿಸಿ ಕೆಲವರು ಒಂದು ವಿಧವಾಗಿಯೂ ಇನ್ನು ಕೆಲವರು ಇನ್ನೊಂದು ವಿಧವಾಗಿಯೂ ನಿರ್ವಾಹ ಮಾಡುತ್ತಾರೆ. ಮೊದಲು ಕೆಲವಾಚಾರ್ಯರಭಿಪ್ರಾಯವನ್ನು ತಿಳಿಸಿ, ಅದರಿಂದುಂಟಾಗುವ ಅನುಪಪತ್ತಿಯನ್ನು ಪ್ರದರ್ಶಿಸಿ, ಅದಕ್ಕೆ

ಗದ್ಯವಾಕ್ಯಸ್ಯ ಪರೋಕ್ತಾರ್ಥೇ ಅನುಪಪತ್ತಿ ಪ್ರದರ್ಶನಮ್

ಗದ್ಯತ್ತಿಲರುಳಿಚ್ಚೆಯ್‌ಗಿರ ಅಂತಿಮಸ್ಮೃತಿ (ಇನ್ನಂತಿಮಸ್ಮೃತಿಯೈಯುಮ್) ಉಪಾಯಫಲಮಾಗಕ್ಕೊಳ್ಳಿ ಪ್ರಪನ್ನರಾನವರ್‌ಗಳುಕ್ಕು ವರಕ್ಕಡವದೆನ್ರು ಶಿಲ ಆಚಾರ್ಯರ್‌ಗಳ್ ನಿರ್ವಹಿಪ್ಪಾರ್‌ಗಳ್ ; ಇಪ್ಪಡಿಯಾಗಿ

ಅನಂತರ ಸರಿಯಾದಭಿಪ್ರಾಯವು ಯಾವುದೆಂದು ತಿಳಿಸುತ್ತಾರೆ. ೧. "ನಷ್ಟಸ್ಮೃತಿಃ" ಮೊದಲಾದ ಪ್ರಮಾಣಗಳಿಂದ ಅಂತಿಮಸ್ಮೃತಿ ಅನಾವಶ್ಯಕವೆಂಬುವದು, ಅನ್ತಿಮ ಸ್ಮೃತಿಯನ್ನು ಭರನ್ಯಾಸಫಲವಾಗಿ ಅಪೇಕ್ಷಿಸದೇ ಇರುವ ಪ್ರಪನ್ನನ ವಿಷಯವಾದವುಗಳು ; ಈ ಗದ್ಯವಾಕ್ಯವಾದರೋ ಅಂತಿಮ ಸ್ಮೃತಿಯನ್ನು ಭರನ್ಯಾಸಫಲವಾಗಿ ಅಪೇಕ್ಷಿಸಿದ ಪ್ರಪನ್ನ ವಿಷಯವು ; ಎಂಬದಾಗಿ ಕೆಲವಾಚಾರ್ಯರುಗಳು ಅಭಿಪ್ರಾಯಪಡುವರೆಂದು ಹೇಳಿ ಅದು ಸರಿಯಾದಭಿಪ್ರಾಯವಾಗಲಾರದೆಂಬುದಕ್ಕೆ ಅನುಪಪತ್ತಿಯನ್ನು ಅದರ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ :—

ಈ ಗದ್ಯವಾಕ್ಯಕ್ಕೆ ಕೆಲವಾಚಾರ್ಯರಭಿಪ್ರಾಯದಲ್ಲಿ ತೋರುವ ಅನುಪಪತ್ತಿಯು.

ಗದ್ಯತ್ತಿಲ್ ಅರುಳಿಚ್ಚೆಯ್‌ಗಿರ-ಈ ಮೇಲೆ ಉದಾಹರಿಸಿದ ಗದ್ಯವಾಕ್ಯದಲ್ಲಿ ಹೇಳಿರುವ ಅನ್ತಿಮಸ್ಮೃತಿಯು, ಫಲಮಾಗಕ್ಕೊಳ್ಳಿ-ತಾನನುಷ್ಠಿಸಿದ ಭರನ್ಯಾಸಕ್ಕೆ ಇದೂ ಕೂಡ ಫಲವಾಗಬೇಕೆಂದು ಪ್ರಾರ್ಥಿಸಿ, ಪ್ರಪನ್ನರಾನವರ್‌ಗಳುಕ್ಕು-ಭರನ್ಯಾಸಾನುಷ್ಠಾನ ಮಾಡಿದವರಿಗೆ, ವರಕ್ಕಡವದೆನ್ರು - ಬರತಕ್ಕದ್ದಾಗಿರುತ್ತದೆಂದು, ಶಿಲ ಆಚಾರ್ಯರ್‌ಗಳ್ ನಿರ್ವಹಿಪ್ಪಾರ್‌ಗಳ್ - ಕೆಲವು ಆಚಾರ್ಯರುಗಳು ಅಭಿಪ್ರಾಯಪಡುವರು ; ಎಂದರೆ ಶ್ರೀ ಯತಿವರ್ಯರ ಈ ಗದ್ಯವಾಕ್ಯದಲ್ಲಿ ಅತಿಪ್ರಬುದ್ಧೋ ಮಾಮೇವಾವಲೋಕಯೇ ಎಂಬಲ್ಲಿ ತೋರುವ ಅನ್ತಿಮಸ್ಮೃತಿ ಪ್ರಾಪ್ತಿಯು, ಪ್ರಪನ್ನನಾದವನು ತಾನು ಮಾಡಿದ ಪ್ರಪತ್ತಿಯ ಕಾಲದಲ್ಲೇ ಅಂತಿಮ ಸ್ಮೃತಿಯು ತನಗೆ ಪ್ರಪತ್ತಿಯ ಫಲವಾಗಿ ಉಂಟಾಗಬೇಕೆಂದು ಪ್ರಾರ್ಥಿಸಿದ ಅಧಿಕಾರಿಗೆ ಮಾತ್ರ ಉಂಟಾಗುತ್ತದೆಂದು ಕೆಲವಾಚಾರ್ಯರು ಅಭಿಪ್ರಾಯಪಡುತ್ತಾರೆ. ಇದರಿಂದ "ನಷ್ಟಸ್ಮೃತಿರಪಿ" ಇತ್ಯಾದಿ ಪ್ರಮಾಣಗಳಲ್ಲಿ ತೋರುವ ಅಂತಿಮ ಸ್ಮೃತಿಯ ಅನಾವಶ್ಯಕತೆಯು, ಅಂತಿಮ

ಲೊರು ಶರೀರತ್ತಿಲುಮ್ ಅನ್ತಿಮ ಮಾನ ಪ್ರತ್ಯಯಮ್ ನಿರ್ವಿಷಯಮಾಯಿರಾನ್ಮೈಯಾಲ್ ಇದು ಭಗವದ್ವ್ಯತಿರಿಕ್ತ ವಿಷಯತ್ತಿಲೇ ಪೋಮಾಗಿಲ್; (೧) "ಯಂ ಯಂ ವಾಪಿ ಸ್ಮರನ್ ಭಾವಮ್" ಎಙ್ಗಿರ ಕಣಕ್ಕಿಲೇ ವಿಪರೀತ ಫಲಮಾಮ್.

ಸ್ಮೃತಿಯು ಪ್ರಪತ್ತಿಫಲವಾಗಿ ಉಂಟಾಗಬೇಕೆಂದು ಪ್ರಾರ್ಥಿಸದೇ ಇರುವ ಪ್ರಪನ್ನನ ವಿಷಯವಾದುದು ಎಂಬಭಿಪ್ರಾಯವಾಗುತ್ತದೆ. ಹೀಗೆ ಹೇಳುವವರಿಂದ ಎರಡಕ್ಕೂ ವಿರೋಧವಿಲ್ಲದ ಹಾಗೆ ಅನ್ವಯಿಸಿದುದೇನೋ ಆಯಿತು. ಆದರೆ ಹೀಗೆ ಅಭಿಪ್ರಾಯಪಟ್ಟರೆ ಒಂದು ಪ್ರತ್ಯವಾಯ ಉಂಟಾಗುತ್ತದೆಂದು ಹೇಳುತ್ತಾರೆ:— **ಇಪ್ಪಡಿಯಾಗಿಲ್** - ಪ್ರಪತ್ತಿಫಲವಾಗಿ ಅಪೇಕ್ಷಿಸಿದರೆ ಅಂತಿಮ ಸ್ಮೃತಿಯುಂಟಾಗುತ್ತದೆ, ಹಾಗಪೇಕ್ಷಿಸದೇ ಇದ್ದರೆ ಉಂಟಾಗುವದಿಲ್ಲವೆಂದು ಹೇಳಿದರೆ, **ಒರು ಶರೀರತ್ತಿಲುಮ್** - ಹಾಗಪೇಕ್ಷಿಸದೇ ಇರುವ ಯಾವನೊಬ್ಬ ಪ್ರಪನ್ನನ ಶರೀರದಲ್ಲೂ, ಅಂತಿಮ ಪ್ರತ್ಯಯವು, **ನಿರ್ವಿಷಯಮಾಯಿರಾನ್ಮೈಯಾಲ್** - ಯಾವದೊಂದು ವಸ್ತುವನ್ನಾಗಲಿ ಉದ್ದೇಶಿಸದೆ, ಎಂದರೆ ಯಾವುದಾದರೂ ಒಂದು ವಸ್ತುವನ್ನುದ್ದೇಶಿಸಿಯೇ ಉಂಟಾಗುವದರಿಂದ, **ಇದು** - ಈ ಅಂತಿಮ ಪ್ರತ್ಯಯವು, **ಭಗವದ್ವ್ಯತಿರಿಕ್ತ ವಿಷಯತ್ತಿಲೇ ಪೋಮಾಗಿಲ್** - ಸರ್ವೇಶ್ವರನನ್ನು ಕುರಿತಲ್ಲದೆ ಬೇರೆ ವಿಷಯವನ್ನು ಕುರಿತದ್ದಾಗಿಹೋದರೆ, **"ಯಂ ಯಂ ವಾಪಿ ಸ್ಮರನ್ ಭಾವಮ್" ಎಙ್ಗಿರ ಕಣಕ್ಕಿಲೇ** - ಎಂದು ಗೀತಾಶ್ಲೋಕದಲ್ಲಿ ಹೇಳಿರುವ ಹಾಗೆ, **ವಿಪರೀತ ಫಲಮಾಮ್** - ವ್ಯತ್ಯಸ್ತಫಲವಾಗುತ್ತದೆ, ಎಂದರೆ ಪ್ರಪನ್ನನಿಗೆ ದೇಹಾವಸಾನಾನಂತರ ಮೋಕ್ಷಪ್ರಾಪ್ತಿಗೆ ಬದಲಾಗಿ ಬೇರೆ ಜನ್ಮವೂ ಪ್ರಾಪ್ತವಾಗಬಹುದು. ಆದಿ ಭರತರಿಗೆ ದೇಹಾವಸಾನ ಕಾಲದಲ್ಲಿ ಮೃಗಶಾಬವನ್ನು (ಜಿಂಕೆ ಮರಿ) ಸ್ಮರಿಸುತ್ತಿದ್ದುದರಿಂದ ಮೃಗಜನ್ಮವೇ ಹೇಗೆ ಪ್ರಾಪ್ತವಾಯಿತೋ ಹಾಗೆ ಎಂಬ ಭಾವವು. ಗೀತಾ ಪ್ರಾರಾ ಶ್ಲೋಕವು:—

> "ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಳೇಬರಂ ।
> ತಂ ತಮೇವೈತಿ ಕೌಂತೇಯ ಸದಾ ತದ್ಭಾವ ಭಾವಿತಃ ॥"

ಹೇ ಕೌಂತೇಯ - ಓ ಅರ್ಜುನನೇ, **ಅಂತೇ** - ದೇಹಾವಸಾನ ಕಾಲದಲ್ಲಿ, **ಯಂ ಯಂ ವಾಪಿ** - ಯಾವಯಾವುದನ್ನು, **ಸ್ಮರನ್** - ಸ್ಮರಿಸುತ್ತಾ, **ಕಳೇಬರಂ**

---

(೧) ಗೀತೆ. ೮. ೬.

ತ್ಯಜತಿ - ದೇಹವನ್ನು ಬಿಡುವನೋ, ಸದಾ ತದ್ಭಾವ ಭಾವಿತಃ - ಸದಾ ಆ ಆ ಆಕಾರವುಳ್ಳ ವಸ್ತುವನ್ನೇ ಧ್ಯಾನಿಸುತ್ತಿರುವದರಿಂದ, ತಂ ತಮೇವ - ಆ ಆ ಆಕಾರವುಳ್ಳ ವಸ್ತುವಿನ ಜನ್ಮವನ್ನೇ, ಏತಿ - ಹೊಂದುವನು ಇಲ್ಲಿ ತದ್ಭಾವ ಎಂದು ಇರುವದರಿಂದ ಆದಿ ಭರತರು ಮೃಗರೂಪವನ್ನು ಹೊಂದಿದರು ಎಂದು ಹೇಳಿದರೆ ಮೃಗದೊಡನೆ ಸ್ವರೂಪೈಕ್ಯವನ್ನು ಹೊಂದಿದರೆಂದು ಹೇಗೆ ಹೇಳಲಾಗುವದಿಲ್ಲವೋ ಹಾಗೆಯೇ, ಮಾಮೇವ ಸ್ಮರನ್ ಮದ್ಭಾವಂ ಯಾತಿ ಎಂದು ಸರ್ವೇಶ್ವರನು ಹೇಳಿದರೆ, ನನ್ನೊಂದಿಗೆ ಸ್ವರೂಪೈಕ್ಯ ಹೊಂದುವನೆಂಬ ಶಾಂಕರಾಭಿಪ್ರಾಯವು ಸಮಂಜಸವಲ್ಲವೆಂಬುದನ್ನೂ ಸಹ ಈ ಶ್ಲೋಕದಿಂದ ಗ್ರಹಿಸಬಹುದು. ಆದರೆ ಇದು ಈ ಪ್ರಕರಣಕ್ಕೆ ಬೇಕಾದುದಲ್ಲದಿದ್ದರೂ ಶ್ಲೋಕಾಭಿಪ್ರಾಯವನ್ನು ತಿಳಿಸುವಾಗ ಸಮಂಜಸಾರ್ಥವನ್ನು ತಿಳಿಸುವದು ಆವಶ್ಯಕವು. ಇಲ್ಲಿ "ಯಂ ಯಂ" ಎಂದು ಹೇಳಿರುವದೇನು ಸಾರ್ವತ್ರಿಕವಾಗಿ ಎಲ್ಲರನ್ನೂ ಕುರಿತು ಹೇಳಿದುದೇ ಅಥವಾ ಯಾವುದಾದರೂ ಅಧಿಕಾರಿ ವಿಶೇಷವನ್ನು ಕುರಿತು ಹೇಳಿದುದೇ ಎಂಬ ಚರ್ಚೆಯಲ್ಲಿ ಶ್ರೀ ಭಾಷ್ಯಕಾರರು ಮೂರು ವಿಧ ಅಧಿಕಾರಿಗಳನ್ನು ಕುರಿತು ಹೇಳಿದುದೆಂದು ಸಂಕ್ಷೇಪವಾಗಿ ಹೇಳಿರುತ್ತಾರೆ. ಇವರುಗಳು ಯಾರೆಂದರೆ:—(೧) ಐಶ್ವರ್ಯ, (೨) ಕೈವಲ್ಯ, (೩) ಭಗವತ್ಪ್ರಾಪ್ತಿಯನ್ನು ಅಪೇಕ್ಷಿಸುವವರು, ಇದಕ್ಕಾಗಿ ಇವರುಗಳು ಭಕ್ತಿಯೋಗನಿಷ್ಠರಾಗಿರುವವರು. ಆದುದರಿಂದ ಇದು ಭಕ್ತ್ಯುಪಾಯ ನಿಷ್ಠರನ್ನು ಕುರಿತು ಹೇಳಿದುದೆಂದು ತಿಳಿಯತಕ್ಕದ್ದು. ಸ್ವತಂತ್ರ ಪ್ರಪತ್ತಿ ನಿಷ್ಠನನ್ನು ಕುರಿತು ಹೇಳಿದುದಲ್ಲವು.

ಈ ಮೇಲಿನ ವಾಕ್ಯಾಭಿಪ್ರಾಯವು ಏನೆಂದರೆ:—ಅಂತಿಮ ಸ್ಮೃತಿಯನ್ನಪೇಕ್ಷಿಸಿ ಪ್ರಪದನ ಮಾಡಿದವರಿಗೆ ಅದರ ಫಲವಾಗಿ ಅಂತಿಮಸ್ಮೃತಿಯು ಪ್ರಾಪ್ತವಾಗುತ್ತದೆಂದು ಹೇಳಿದರೆ, ಹಾಗೆ ಅಂತಿಮ ಸ್ಮೃತಿಯು ಪ್ರಪತ್ತಿಯ ಫಲವಾಗಿ ಅಪೇಕ್ಷಿಸದೇ ಭರನ್ಯಾಸ ಮಾಡಿದವನಿಗೆ ಭಗವದ್ವಿಷಯವಾದ ಅಂತಿಮಸ್ಮೃತಿಯು ಉಂಟಾಗದೇ ಹೋಗಬಹುದೆಂದು ಏರ್ಪಟ್ಟಿತು. ಆ ಸಂದರ್ಭದಲ್ಲಿ ಅಂತಿಮ ಸ್ಮೃತಿಯು ನಿರ್ವಿಷಯವಾಗಿ ಬೇರೆ ಇರುವದಿಲ್ಲವು ಮನೆಯಲ್ಲಿರುವ ಒಂದು ಗೋವನ್ನು ಕುರಿತು ಅನ್ತಿಮ ಸ್ಮೃತಿಯುಂಟಾಗಿ ಒಬ್ಬ ಪ್ರಪನ್ನನಿಗೆ ದೇಹ ವಿಯೋಗ ಉಂಟಾದರೆ, ಈ ೧೬ನೇ ಶ್ಲೋಕದ ಪ್ರಕಾರ ಈ ಪ್ರಪನ್ನನಿಗೆ ಮೋಕ್ಷ ತಪ್ಪಿಹೋಗಿ, ಗೋಜನ್ಮ ಪ್ರಾಪ್ತವಾಗಬೇಕಾಗುತ್ತದೆ. ಇದರಿಂದ ಪ್ರಪದನ ಶಾಸ್ತ್ರಕ್ಕೆ ಅನುಪಪತ್ತಿ ಕಲ್ಪಿಸಿದ ಹಾಗೆ ಆಗುತ್ತದೆಂಬ ಭಾಸವು. ಹೀಗೆ ಪ್ರಪದನ ಶಾಸ್ತ್ರಕ್ಕೆ ವಿರುದ್ಧವಾದಭಿಪ್ರಾಯವುಂಟಾಗುವದರಿಂದ ಈ ಗದ್ಯವಾಕ್ಯಕ್ಕೆ ಸರಿಯಾದಭಿಪ್ರಾಯವನ್ನು ಮುಂದೆ ತಿಳಿಸುತ್ತಾರೆ.

ಗದ್ಯವಾಕ್ಯಸ್ಯ ಸ್ವಾಭಿಮತಾಭಿಪ್ರಾಯ ಕಥನಮ್.

ಆನ ಪಿನ್ಪು, ಗದ್ಯತ್ತಿಲೇ ಅರುಳಿಚ್ಚೆಯ್ದ ಪಡಿಯೇ ಸ್ವತಂತ್ರಪ್ರಪತ್ತಿ ನಿಷ್ಠನುಕ್ಕು ಭಗವದ್ವಿಷಯತ್ತಿಲ್ ಅನ್ತಿಮ ಪ್ರತ್ಯಯಮ್ ಅವಶ್ಯಮ್ ವರುಮ್.

ಗದ್ಯವಾಕ್ಯಕ್ಕೆ ಸಮಂಜಸವಾದ ಅಭಿಪ್ರಾಯವು.

ಆನ ಪಿನ್ಪು. ಈ ಕೆಲವಾಚಾರ್ಯರುಗಳ ಅಭಿಪ್ರಾಯದಿಂದ ವಿರೋಧ ಉಂಟಾಗುವದರಿಂದ, **ಗದ್ಯತ್ತಿಲೇ ಅರುಳಿಚ್ಚೆಯ್ದ ಪಡಿಯೇ** - ಗದ್ಯದಲ್ಲಿ ಶ್ರೀ ಯತಿವರ್ಯರು ಕೃಪಯಾ ಅನುಗ್ರಹಿಸಿರುವ ಹಾಗೆ, **ಸ್ವತಂತ್ರ ಪ್ರಪತ್ತಿ ನಿಷ್ಠನುಕ್ಕು** - ಭಕ್ತಿ ಮಾರ್ಗದಲ್ಲಿನ ಹಾಗೆ ಅಂಗವಾಗಿ ಪ್ರಪತ್ತಿ ಮಾಡದೆ, ಅಂಗಿಯಾಗಿ ಭರನ್ಯಾಸ ಮಾಡಿದ ಪ್ರಪನ್ನನಿಗೆ, ಭಗವದ್ವಿಷಯದಲ್ಲಿ, **ಅನ್ತಿಮ ಪ್ರತ್ಯಯಮ್** - ಅನ್ತಿಮ ಸ್ಮೃತಿಯು, **ಅವಶ್ಯಮ್ ವರುಮ್** - ಸರ್ವೇಶ್ವರ ಕೃಪೆಯಿಂದ ಅಗತ್ಯವಾಗಿ ಉಂಟಾಗಬಹುದು. **ಅಹಂ ಸ್ಮರಾಮಿ ಮದ್ಭಕ್ತಮ್** ಎಂದು ವರಾಹ ಚರಮಶ್ಲೋಕೋಕ್ತಿಯ ಪ್ರಕಾರ, ಈ ಪ್ರಪನ್ನನಲ್ಲಿರುವ ಪ್ರೀತ್ಯತಿಶಯದಿಂದ ಅನ್ತಿಮ ಸ್ಮೃತಿಯನ್ನು ಸರ್ವೇಶ್ವರನೇ ಉಂಟುಮಾಡುತ್ತೇನೆಂದು ಹೇಳಿಕೊಂಡಿರುತ್ತಾನೆಂಬುದು ಆ ವಾಕ್ಯಾಭಿಪ್ರಾಯವು. ಇದನ್ನೇ ಶ್ರೀ ದೇಶಿಕರವರು ಅಭೀತಿಸ್ತವದ ೬ನೇ ಶ್ಲೋಕದಲ್ಲಿ "ಸ್ವಯಂ ವಿಹಿತಸಂಸ್ಮೃತಿಃ" ಎಂದರೆ "ತನ್ನ ಸ್ಮರಣೆಯನ್ನು ಅನ್ತಿಮ ದೆಶೆಯಲ್ಲಿ ಮಾಡುವ ಹಾಗೆ ತಾನೇ ಮಾಡಿ" ಎಂಬುದರಿಂದ ಉಪಪಾದಿಸಿರುತ್ತಾರೆ. ಶರಣಾಗತನ ವಿಷಯದಲ್ಲಿ ಸರ್ವೇಶ್ವರನಿಗೆ ಪರಮ ಕೃಪೆಯಾದುದರಿಂದ ಆತನಿಗೆ ಉಪಕಾರ ಮಾಡುವ ಕಾಲ ಒದಗಿತೆಂದು ತಿಳಿದು ತಾನೇ ಅನ್ತಿಮ ಸ್ಮೃತಿಯುಂಟಾಗುವ ಹಾಗೆ ಮಾಡುವನೆಂಬ ಭಾವವು.

ಹೀಗೆ ಪ್ರಪನ್ನ ಪರಿತ್ರಾಣದಲ್ಲಿ ಬದ್ಧಕಂಕಣನಾದ ಕರುಣಾಸಾಗರನು ಆತನಿಗೆ ದೇಹವಿಯೋಗ ಕಾಲದಲ್ಲಿ ತನ್ನ ವಿಷಯವಾದ ಅನ್ತಿಮ ಸ್ಮೃತಿಯು ಅವಶ್ಯವಾಗಿ ಬರುವ ಹಾಗೆ ತಾನೇ ಮಾಡಿದುದಾದರೆ, **"ನಷ್ಟಸ್ಮೃತಿರಪಿ"** ಇತ್ಯಾದಿ ವಚನಗಳು ಅನ್ತಿಮ ಸ್ಮೃತಿಯೇ ಬೇಕಾಗಿಲ್ಲವೆಂದು ಹೇಳುವವೆಯಲ್ಲಾ, ಅವುಗಳಿಗೆ ನಿರ್ವಾಹ ಹೇಗೆ? **ಈ ನಷ್ಟಸ್ಮೃತ್ಯಾದಿ** ವಚನಗಳೂ ಮತ್ತು ಗದ್ಯವಾಕ್ಯವೂ ಸಹ ಸಾರ್ವತ್ರಿಕವಾಗಿ ತೋರುತ್ತದೆಯಲ್ಲವೇ ಎಂದರೆ, ಆ ವಚನ

"ನಷ್ಟಸ್ಮೃತಿರಪೀ"ತ್ಯಾದಿಗಳ್, ಶ್ರೀ ಗೀತೈಯಿಲ್ ಅಷ್ಟಮಾಧ್ಯಾಯತ್ತಿಲುಮ್, (೧) "ಯಂ ಯೋಗಿನಃ ಪ್ರಾಣವಿಯೋಗಕಾಲೇ ಯತ್ನೇನ ಚಿತ್ತೇ ವಿನಿವೇಶಯಂತಿ" ಇತ್ಯಾದಿಗಳಿಲುಮ್ ಸ್ವಯತ್ನಸಾಧ್ಯಮಾಗ ವಿಧಿತ್ತ ಕಟ್ಟಳೆಯಿಲೈ ಉಪಾಯಮಾಕ ಅನ್ತಿಮ ಸ್ಮೃತಿ ವೇಣ್ಡಾ ವೆಙ್ಗರನ ವೆನ್ರು ಶಿಲ ಆಚಾರ್ಯರ್‌ಗಳ್ ಅನುಸಂಧಿಪ್ಪರ್‌ಗಳ್.

ಗಳಿಗೆ ಸರಿಯಾದ ಉಪಪತ್ತಿಯನ್ನು ಹೇಳಿ, ಅದು ಸಂತ್ಸಂಪ್ರದಾಯದಿಂದುಂಟಾದುದೆಂದೂ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

"ನಷ್ಟಸ್ಮೃತಿರಪಿ," ಇತ್ಯಾದಿಗಳ್ - ಎಂಬಿವೇ ಮೊದಲಾದುವುಗಳು, ಮೊದಲಾದವು ಎಂಬುವುದರಿಂದ ಮೇಲೆ ಉದಾಹರಿಸಿರುವ ವರಾಹ ಪುರಾಣ ಚರಮಶ್ಲೋಕವಾದ "ಅಹಂ ಸ್ಮರಾಮಿ ಮದ್ಭಕ್ತಂ" ಎಂಬ ವಚನವೂ ಹೇಳಲ್ಪಟ್ಟವು, ಇವುಗಳು ಏನನ್ನು ತಿಳಿಸುತ್ತವೆ ಎಂದರೆ ಉಪದೇಶಿಸುತ್ತಾರೆ, **ಶ್ರೀ ಗೀತೈಯಿಲ್ ಅಷ್ಟಮಾಧ್ಯಾಯತ್ತಿಲುಮ್** - ಶ್ರೀ ಭಗದ್ಗೀತೆಯ ಎಂಟನೆಯ ಅಧ್ಯಾಯ.ದಲ್ಲೂ, ಮತ್ತು **"ಯಂ ಯೋಗಿನಃ"** ಎಂಬ ಶಾಂತಿಪರ್ವದ ಶ್ರೀ ಭೀಷ್ಮನಿರ್ಯಾಣ ಪ್ರಕರಣದಲ್ಲಿ ಹೇಳಲ್ಪಟ್ಟ ಶ್ಲೋಕದಲ್ಲೂ, **ಇತ್ಯಾದಿಗಳಿಲುಮ್**- ಇವೇ ಮೊದಲಾದ ವಾಕ್ಯಗಳಲ್ಲಿ, **ಸ್ವಯತ್ನ ಸಾಧ್ಯಮಾಗ** – ತನ್ನ ಪ್ರಯತ್ನದಿಂದ ಸಾಧಿಸಲು ಯೋಗ್ಯವೆಂದು, **ವಿಧಿತ್ತ** - ವಿಧಿಸಿದ, **ಕಟ್ಟಳೆಯಿಲೆ** - ಕ್ರಮ ಪ್ರಕಾರ, **ಉಪಾಯಮಾಗ** - ಸಾಧ್ಯೋಪಾಯಕ್ಕೆ ಸೇರಿದುದಾಗಿ, ಎಂದರೆ ಆ ಶ್ಲೋಕಗಳಲ್ಲಿ ಅನ್ತಿಮ ಸ್ಮೃತಿಯು ಉಪಾಯರೂಪದಲ್ಲಿ ಆವಶ್ಯಕವೆಂದು ಹೇಳಿರುವ ಹಾಗೆ, **ಅನ್ತಿಮಸ್ಮೃತಿ ವೇಣ್ಡಾ ವೆಙ್ಗರನ** - ಸ್ವತಂತ್ರಪ್ರಪತ್ತಿಯನ್ನೆನುಷ್ಠಿಸಿದ ಪ್ರಪನ್ನನಿಗೆ ಅನ್ತಿಮ ಸ್ಮೃತಿಯು ಆವಶ್ಯಕವಿಲ್ಲವೆಂದು, **ಎನ್ರು** - ಎಂಬದಾಗಿ, **ಶಿಲ ಆಚಾರ್ಯರ್‌ಗಳ್** - ವಿಷಯಗಳನ್ನು ಚೆನ್ನಾಗಿ ವಿಮರ್ಶಿಸಿ ತಿಳಿಯುವ ಕೆಲವು ಆಚಾರ್ಯರುಗಳು, **ಅನುಸಂಧಿಪ್ಪಾರ್‌ಗಳ್** - ಅಭಿಪ್ರಾಯಪಡುವರು, ಇದೇ ಸರಿಯಾದಭಿಪ್ರಾಯವೆಂಬ ಅನುಸಂಧಾನವುಳ್ಳವರೆಂಬ ಭಾವವು. ಈ ವಾಕ್ಯದಿಂದ ಪರಸ್ಪರ ವಿರೋಧಾಭಿಪ್ರಾಯಗಳುಳ್ಳ ಈ ವಾಕ್ಯಗಳಿಗೆ ವಿರೋಧವಿಲ್ಲದ ಹಾಗೆ ಸಮಂಜಸಾಭಿಪ್ರಾಯಗಳನ್ನು ತಮ್ಮ ಆಚಾರ್ಯಕೋಟಿಗೆ ಸೇರಿದ ಕೆಲವು ಮಹನೀಯರುಗಳಭಿಪ್ರಾಯದಿಂದ ತಿಳಿಸಿ, ಭಕ್ತಿಮಾರ್ಗಕ್ಕೂ ಸ್ವತಂತ್ರ ಪ್ರಪತ್ತಿಗೂ ಇರುವ ವೈಲಕ್ಷಣ್ಯವನ್ನು ತೋರಿಸಿ, ಭಕ್ತಿಮಾರ್ಗದಲ್ಲಿ ಅಧಿಕಾರಿಗೆ

---

(೧) ಭಾರತ ಶಾಂತಿ. ೪೭. ೧೪೩.

ಅನ್ತಿಮ ಸ್ಮೃತಿಯು ಆವಶ್ಯಕವೆಂದು ಗೀತೆಯ ಎಂಟನೆಯ ಅಧ್ಯಾಯದಲ್ಲೂ, ಭೀಷ್ಮ ನಿರ್ಯಾಣ ಪ್ರಕರಣ ಶ್ಲೋಕದಲ್ಲೂ ಹೇಳಲ್ಪಟ್ಟಿದೆ ಎಂದೂ, ಭರನ್ಯಾಸದಲ್ಲಿ ಅಧಿಕಾರಿಗೆ ಅನ್ತಿಮ ಸ್ಮೃತಿ ಬೇಕಿಲ್ಲವೆಂದೂ "ನಷ್ಟಸ್ಮೃತಿರಪಿ" ಎಂಬ ಶ್ಲೋಕದಲ್ಲೂ "ಅಹಂ ಸ್ಮರಾಮಿ ಮದ್ಭಕ್ತಂ" ಎಂಬ ವರಾಹ ಚರಮ ಶ್ಲೋಕದಲ್ಲೂ ಹೇಳಲ್ಪಟ್ಟಿವೆ ಎಂಬುವದು ಮುಖ್ಯ ಸಾರಾಂಶವು. ಶ್ರೀ ಗೀತೆಯ ಎಂಟನೆಯ ಅಧ್ಯಾಯದ ಶ್ಲೋಕವು ಯಾವುದೆಂದರೆ:—ಸಾರಪ್ರಕಾಶಿಕಾ ಸಾರಾಸಾರ ವಿವರಣೆ ವ್ಯಾಖ್ಯಾತೃಗಳು "ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ । ಯಃ ಪ್ರಯಾತಿ ತ್ಯಜನ್ ದೇಹಂ ಸಯಾತಿ ಪರಮಾಗತಿಂ" (ಗೀ. ೮. ೧೩) ಎಂಬುವ ಶ್ಲೋಕವನ್ನುದಾಹರಿಸಿರುತ್ತಾರೆ. ಇದರರ್ಥವೇನೆಂದರೆ:—ಓಂ ಎಂಬದಾಗಿ ಪರಬ್ರಹ್ಮವಾದ ನನ್ನನ್ನು ಬೋಧಿಸುವ ಒಂದಕ್ಷರದ ಮಂತ್ರವನ್ನು ಉಚ್ಚರಿಸುತ್ತಾ, ನನ್ನನ್ನೇ ಸ್ಮರಿಸುತ್ತಾ, ಯಾವನು ದೇಹವನ್ನು ತ್ಯಜಿಸಿ ಹೋಗುವನೋ, ಆತನು ಸರ್ವಶ್ರೇಷ್ಠವಾದ ಗತಿಯನ್ನು ಎಂದರೆ ಈ ಪ್ರಕೃತಿಯಿಂದ ಬಿಡಲ್ಪಟ್ಟ ಅಪ್ರಾಕೃತವಾದ, ನನಗೆ ಸಮಾನವಾದ ಆಕಾರವುಳ್ಳ ಪುನರಾವೃತ್ತಿಯಿಲ್ಲದ ಸ್ಥಿತಿಯನ್ನು ಹೊಂದುವನೆಂಬ ಭಾವವು. "ಯಂ ಯೋಗಿನಃ" ಎಂಬ ಶಾಂತಿಪರ್ವ ಶ್ಲೋಕಾರ್ಥವು ಉಪಾಸನೆಯನ್ನು ಮಾಡುವವರು, ಪ್ರಾಣವಿಯೋಗ ಕಾಲೇ - ಪಂಚವೃತ್ತಿ ಪ್ರಾಣವು ಸ್ಥೂಲ ಶರೀರವನ್ನು ತ್ಯಜಿಸುವ ಕಾಲದಲ್ಲಿ, ಯತ್ನೇನ - ತನ್ನ ಪ್ರಯತ್ನಮೂಲಕವಾಗಿ, ಚಿತ್ತೇ - ಮನಸ್ಸಿನಲ್ಲಿ, ಯಂ - ಯಾವ ಪರಮಾತ್ಮನನ್ನು, ವಿನಿವೇಶಯನ್ತಿ - ಇಟ್ಟುಕೊಳ್ಳುತ್ತಾರೋ," ಇದು ಪೂರ್ವಾರ್ಧವು. ಉತ್ತರಾರ್ಧವು "ಸ ತಂ ಪುರಸ್ತಾದ್ಧರಿಮೀಕ್ಷಮಾಣಃ ಪ್ರಾಣಾಂ ಜಹೌ ಪ್ರಾಪ್ತ ಫಲೋ ಹಿ ಭೀಷ್ಮಃ ॥ ತಂ - ಅಂತಹ ಪರಮಾತ್ಮನಾದ, ಹರಿಂ - ಶ್ರೀ ಹರಿಯನ್ನು, ಎದುರಿಗೆ ನೋಡುವವನಾಗಿ, ಆ ಭೀಷ್ಮಾಚಾರ್ಯರು ಹೊಂದಿದ ಮೋಕ್ಷಫಲವುಳ್ಳವರಾಗಿ ಪ್ರಾಣವನ್ನು ಬಿಟ್ಟರು. ಹಿ ಎಂಬುವದರಿಂದ ಇದು ನಿಸ್ಸಂಶಯವಾದ ವಿಷಯವೆಂಬ ಭಾವವು" ಎಂದಿರುತ್ತದೆ. ಇದು ಶ್ರೀ ಭೀಷ್ಮರು ಪ್ರಾಣತ್ಯಾಗ ಮಾಡುವ ಪ್ರಕಾರದ ವರ್ಣನಾ ಪ್ರಕರಣವು.

ಈ ಮೇಲೆ ಉದಾಹರಿಸಿದ ಪ್ರಮಾಣಗಳಲ್ಲಿ ಅನ್ತಿಮ ಸ್ಮೃತಿಯು ಸರ್ವ ಪ್ರಯತ್ನದಿಂದಲೂ ಉಂಟಾಗುವ ಹಾಗೆ ಉಪಾಸಕನು ಮಾಡತಕ್ಕದ್ದೆಂಬುದು ತೋರಿಬರುತ್ತದೆ. ಈ ಭರನ್ಯಾಸಾನುಷ್ಠಾನ ಮಾಡಿದ ಅಧಿಕಾರಿಯು ವಿಷಯದಲ್ಲಾದರೋ, ಇಂತಹ ಪ್ರಯತ್ನಪೂರ್ವಕವಾದ ಅನ್ತಿಮ ಸ್ಮೃತಿಯು ಆವಶ್ಯಕತೆಯಿರುವದಿಲ್ಲವೆಂದು ಕೆಲವಾಚಾರ್ಯರುಗಳು ಅಭಿಪ್ರಾಯಪಡುವರು ಎಂಬ ಭಾವವು.

ಗದ್ಯವಾಕ್ಯಾಭಿಪ್ರಾಯಃ, ಅನ್ತಿಮಸ್ಮೃತಿ ನಿರೂಪಣಮ್

(೧) "ಕೇವಲಂ ಮದೀಯ ಯೈವದಯಯಾ" ಎನ್ರಿರೇ ಇಜ್ಞರುಳಿಚ್ಚೆಯ್ದುದು. ಅನ್ತಿಮಸ್ಮೃತಿ ಯಾವದು? ರಾಗಾದಿಗಳುಪಶಾನ್ತ

ಸರ್ವೇಶ್ವರನು ತಾನೇ ಈ ಪ್ರಪನ್ನನಲ್ಲಿರುವ ವಿಶೇಷಾನುರಾಗದಿಂದ ಅನ್ತಿಮಸ್ಮೃತಿಯನ್ನುಂಟುಮಾಡುತ್ತಾನೆ. ಆತನ ಕೃಪಾಪ್ರಭಾವದ ಮಾಹಾತ್ಮ್ಯಯಿಂದುಂಟಾಗಬಹುದೆಂದಿಂಗ ಶ್ರೀ ಯತಿವರ್ಯರು ಹಿಂದೆ ಉದಾಹರಿಸಿದ ಗದ್ಯವಾಕ್ಯದಲ್ಲಿ ಹೇಳಿರುವದು ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಅನ್ತಿಮಸ್ಮೃತಿಯು ಉಪಾಯರೂಪವಲ್ಲ ಅವಶ್ಯಕವೆಂದೇನೂ ಹೇಳಲಿಲ್ಲವು. ಕೇವಲ ಆತನ ದಯೆಯಿಂದ ಅದು ಲಭಿಸುತ್ತದೆಂದು ಹೇಳಿದರೆಂದುಪದೇಶಿಸುತ್ತಾರೆ.

ಗದ್ಯ ವಾಕ್ಯಾಭಿಪ್ರಾಯವು. ಅನ್ತಿಮ ಸ್ಮೃತಿ ಎಂಬುದರರ್ಥವು.

ಹೀಗೆ ಕೆಲವಾಚಾರ್ಯರು ಅನ್ತಿಮ ಪ್ರತ್ಯಯದಾವಶ್ಯಕತ್ವವು ಭರನ್ಯಾಸನಿಷ್ಠನಿಗೆ ಬೇಕಿಲ್ಲವೆಂಬಭಿಪ್ರಾಯವು ಸತ್ಸಂಪ್ರದಾಯದಿಂದ ಬಂದದ್ದೆಂದು ಹೇಳಲು ಏನಾದರೂ ಸಾಧಕವುಂಟೋ ಎಂದು ಕೇಳಿದರೆ, ಶ್ರೀ ಭಾಷ್ಯಕಾರರಭಿಪ್ರಾಯವೇ ಹಾಗೆ ಎಂದು ತೋರಿಸಿ ಈ ಅಭಿಪ್ರಾಯವೇ ಉಪಾದೇಯವೆಂದು ತೋರ್ಪಡಿಸುತ್ತಾರೆ:—

ಕೇವಲಂ ಮದೀಯಯೈವ ದಯಯಾ - ಬರೀ ನನ್ನ (ಸರ್ವೇಶ್ವರನ) ದಯೆಯ ಮಾತ್ರದಿಂದಲೇ, ದೇಹಾವಸಾನ ಕಾಲದಲ್ಲಿ, ತುಂಬಾ ಜ್ಞಾನವಿರುವನಾಗಿ ನನ್ನನ್ನೇ ದೃಷ್ಟಿಸಿ ನೋಡುತ್ತಾ ಎಂದು ಮುಂದೆ ಇರುತ್ತದೆ, **ಎನ್ರಿರೇ ಇಜ್ಞರುಳಿಚ್ಚೆಯ್‌ದದು** - ಎಂದಲ್ಲವೇ, ಎಂದರೆ ಈ ಸಂದರ್ಭದಲ್ಲಿ ಸ್ವತಂತ್ರಪ್ರಪನ್ನನ ವಿಷಯದಲ್ಲಿ ಹೇಳಿರುವದು." ಈ ವಾಕ್ಯಾಭಿಪ್ರಾಯವೇನೆಂದರೆ, ಜ್ಞಾನವಾಗಿದ್ದುಕೊಂಡು ಸರ್ವೇಶ್ವರನ ಅನ್ತಿಮಸ್ಮೃತಿಯುಂಟಾಗುವದು, ಸಂಪೂರ್ಣವಾಗಿ ಸರ್ವೇಶ್ವರನ ದಯೆಯೇ ವಿನಾ ಬೇರೆಯಲ್ಲವು ಇಲ್ಲಿ **ಕೇವಲಂ ದಯೆ** ಎಂದು ಹೇಳಿರುವದರಿಂದ, ಈತನ ಪ್ರಯತ್ನವು ಈಷದಪಿ ಬೇಕಿಲ್ಲವೆಂಬ ಭಾವವು. ಮದೀಯಯೈವ ದಯಯಾ ಎಂಬಲ್ಲಿ ಏವಕಾರವಿರುವದರಿಂದ ಇನ್ನು ಯಾರ ದಯೆಯೂ ಬೇಕಿಲ್ಲವು, ಅಂತಹ ಇತರರ ದಯೆಯಿಂದ ಅನ್ತಿಮ

---

(೧) ಶರಣಾಗತಿ ಗದ್ಯ.

ಮಾನಾಲ್ ಮನಸ್ಸು ಉಪಶಾನ್ತಮಾವದರ್ಕ್ಕು ಮುನ್ಬೇ ಪಿರಿಪ್ಪದೊರು ಸ್ಮೃತಿ. ಇದು ಅರುಗಿರುನ್ದಾರ್ಕ್ಕು ತ್ತೆರಿಯಾದು (೧) " ದೃಶ್ಯತೇಹಿ

ಸ್ಮೃತಿಯು ಉಂಟಾಗುವದೂ ಇಲ್ಲವೆಂಬ ಭಾವವು. ಹಾಗಾದರೆ ಅನ್ತಿಮಸ್ಮೃತಿಯಲ್ಲಿ ಈ ಪ್ರಪನ್ನನ ಪ್ರಯತ್ನವು ಸ್ವಲ್ಪವೂ ಬೇಕಿಲ್ಲವೋ ಎಂದರೆ, ಬೇಕಿಲ್ಲವೆಂದು ಹೇಳುವದಕ್ಕಾಗಿ ಅನ್ತಿಮಸ್ಮೃತಿ ಶಬ್ದಾರ್ಥವೇನೆಂಬುವದನ್ನು ಮುಂದೆ ಉಪದೇಶಿಸುತ್ತಾರೆ:—ಅನ್ತಿಮ ಸ್ಮೃತಿಯಾವದು - ಅನ್ತಿಮ ಸ್ಮೃತಿಯೆಂಬುದು ಹಾಗಾದರೆ ಯಾವುದು? ವಾಗಾದಿಗಳುಪಶಾನ್ತಮಾನಾಲ್ - ವಾಕ್ಕು ಮೊದಲಾದ ದಶೇಂದ್ರಿಯಗಳು ಪ್ರವೃತ್ತಿ ಇಲ್ಲದವುಗಳಾಗಿ, ಮನಸ್ಸು ಉಪಶಾನ್ತಮಾವದರ್ಕ್ಕು ಮುನ್ಬೇ - ಮನಸ್ಸಿನ ವ್ಯಾಪಾರವು ನಿಂತುಹೋಗುವದಕ್ಕೆ ಮುಂಚೆಯೇ, ಪಿರಪ್ಪದೊರು ಸ್ಮೃತಿ - ಉಂಟಾಗುವ ಸ್ಮರಣೆಯು, ಎಂದರೆ ಪ್ರಪನ್ನನ ವಿಷಯದಲ್ಲಿ ಭಗವದನುಗ್ರಹದಿಂದುಂಟಾಗುವ, ಮನಸ್ಸಿನ ಸ್ಥೈರ್ಯದಿಂದುಂಟಾಗುವ ಸ್ಮರಣೆಯು. ಇದರಿಂದ ಅನ್ತಿಮ ಸ್ಮೃತಿಯು ಸರ್ವೇಶ್ವರನ ವಿಷಯವಾಗಿಯಾದರೂ ಅಥವಾ ಐಹಿಕ ವಿಷಯವಾಗಿಯಾದರೂ ಇರಬಹುದು. ಭರನ್ಯಾಸನಿಷ್ಠನಿಗೆ ಕೇವಲ ಸರ್ವೇಶ್ವರ ಕೃಪೆಯಿಂದ ಅನ್ತಿಮ ಸ್ಮೃತಿಯು ಸರ್ವೇಶ್ವರ ವಿಷಯವಾಗಬಹುದು. ಇತರ ಅಧಿಕಾರಿಗಳಿಗೆ ಐಹಿಕವಿಷಯವಾದುದಾಗಬಹುದು. ಆದರೆ ಭರನ್ಯಾಸನಿಷ್ಠನಿಗೆ ಭಗವದೈಕಾಂತ್ಯವು ಸದಾ ಇರುವದೂ ಅಲ್ಲದೆ, ದೇಹತ್ಯಾಗಾನಂತರವೂ ಇರುತ್ತದೆಯಾದುದರಿಂದ ಅನ್ತಿಮವಾದುವೆಂದು ಹೇಗೆ ಹೇಳಬಹುದೆಂದಾಕ್ಷೇಪಿಸಿದರೆ, ಸ್ಥೂಲ ಶರೀರಕನಾಗಿರುವ ದೆಶೆಯಲ್ಲಿ ವಾಗಾದಿ ಇಂದ್ರಿಯಗಳ ಉಪರತಿಯುಂಟಾಗಿ ಇನ್ನೂ ಮನಸ್ಸಿನ ಉಪರತಿಯುಂಟಾಗುವದಕ್ಕಿಂತ ಮುಂಚಿತವಾಗಿ ಉಂಟಾಗುವ ಸ್ಮೃತಿ ಎಂದು ಹೇಳಲ್ಪಟ್ಟಿತು. ಆದುದರಿಂದ ಅಂತಿಮವೆಂದರೆ ಬದ್ಧದೆಶೆಯಲ್ಲೇ ಇಂದ್ರಿಯಾಧೀನಜ್ಞಾನಗಳಲ್ಲೇ, ಅನ್ತಿಮವೆಂಬ ಭಾವವು. ಹೀಗೆ ಅನ್ತಿಮ ಸ್ಮೃತಿಯು ಸರ್ವೇಶ್ವರ ಕೃಪೆಯಿಂದ ನಿಯತವಾಗಿ ಉಂಟಾಗುತ್ತದೆಂಬಭಿಪ್ರಾಯವಾದರೆ, ಹತ್ತಿರದ್ದವರಿಗೇನಾದರೂ ಗೊತ್ತಾಗುತ್ತದೋ ಎಂದರೆ, ಏನೋ ಒಂದು ವಿಧವಾದ ಅನ್ತಿಮ ಸ್ಮೃತಿಯುಂಟಾಯಿತೆಂಬುದನ್ನು ಊಹಿಸಬಹುದೇ ವಿನಾ, ಇಂತಹ ಅನ್ತಿಮ ಸ್ಮೃತಿಯುಂಟಾಯಿತೆಂದು ಸಮೀಪಸ್ಥರೂ ಕೂಡ ತಿಳಿಯಲಾರರೆಂದುಪದೇಶಿಸುತ್ತಾರೆ. ಇದು - ಈ ಅನ್ತಿಮಸ್ಮೃತಿಯು, ಎಂದರೆ ಇದು ಇಂಥಾದ್ದೆಂಬುವದು,

(೧) ಶ್ರೀಭಾಷ್ಯಂ ೪. ೨. ೧.

ವಾಗಿಂದ್ರಿಯ ಉಪರತೇಽಪಿ ಮನಃ ಪ್ರವೃತ್ತಿಃ" ಎಙ್ಗಿರ ಭಾಷ್ಯಮುಮ್
ಏದೇನು ಮೊರು ಲಿಙ್ಗತ್ತಾಲೆ ಒರು ಮನಃ ಪ್ರವೃತ್ತಿ ಇವನುಕ್ಕುಣ್ಡೆನ್ರಿ

ಅರುಗಿರುನ್ದಾರ್ಕ್ಕು - ದೇಹಾವಸಾನ ಕಾಲದಲ್ಲಿ ಸಮೀಪವರ್ತಿಗಳಾದವರಿಗೂ, **ತೆರಿಯಾದು** - ಗೊತ್ತಾಗುವದಿಲ್ಲವು. ಇಂತಹ ಅನ್ತಿಮ ಸ್ಮೃತಿಯುಂಟಾಯಿತೆಂದು ಆ ಸಮಯದಲ್ಲಿ ಹತ್ತರವಿದ್ದ ಜನಗಳಿಗೂ ಕೂಡ ಗೊತ್ತಾಗುವದಿಲ್ಲವು. ಮಾತು ಮೊದಲಾದ ಇಂದ್ರಿಯಗಳೆಲ್ಲಾ ನಿಂತುಹೋಗಿರುವದರಿಂದ ಇಂತಹ ಅನ್ತಿಮ ಸ್ಮೃತಿಯೆಂದು ಆ ಪ್ರಪನ್ನನು ಹೇಳಲಾರನಾದುದರಿಂದ ಬಾಹ್ಯಚಿಹ್ನೆಗಳಿಂದ ತಿಳಿದುಕೊಳ್ಳುವದು ಸಾಧ್ಯವಲ್ಲವೆಂಬ ಭಾವವು.

ಆದರೆ, ವಾಗಾದಿ ಇಂದ್ರಿಯಗಳುಪಶಾನ್ತಿಯಾದ ನಂತರವೂ ಮನಸ್ಸಿನ ಪ್ರವೃತ್ತಿಯುಂಟೋ ಎಂದರೆ ಉಂಟು ಎಂದು ತಿಳಿಸುವದಕ್ಕಾಗಿ ಶ್ರೀ ಭಾಷ್ಯಕಾರರ ಸೂಕ್ತಿಯನ್ನುದಾಹರಿಸಿ, ಇಂತಹ ವಿಷಯವಾದ ಸ್ಮೃತಿ ಎಂದು ಗೊತ್ತಾಗದಿದ್ದರೂ ಯಾವದಾದರೂ ಒಂದು ಹೇತುವಿನಿಂದ ಸ್ಮೃತಿಯುಂಟೆಂಬುದನ್ನು ಮಾತ್ರ ಊಹಿಸಬಹುದೆಂದು ತಿಳಿಸುತ್ತಾರೆ:—**ವಾಗಿಂದ್ರಿಯ ಉಪರತೇಽಪಿ** - ವಾಗಿಂದ್ರಿಯದ ವ್ಯಾಪಾರವು ನಿಂತುಹೋದರೂ ಕೂಡ, **ಮನಃ ಪ್ರವೃತ್ತಿಃ** - ಮನಸ್ಸಿನ ವ್ಯಾಪಾರವು, **ದೃಶ್ಯತೇಹಿ** - ತೋರಿಬರುತ್ತದೆಯಷ್ಟೇ." **ಎಙ್ಗಿರ ಭಾಷ್ಯಮುಮ್** - ಎನ್ನುವ ಶ್ರೀ ಯತಿವರ್ಯರ ವ್ಯಾಖ್ಯಾನವೂ, **ಏದೇನು ಮೊರು ಲಿಙ್ಗತ್ತಾಲೇ** - ಯಾವುದಾದರೂ ಒಂದು ಬಾಹ್ಯ ಚಿಹ್ನೆಯಿಂದ, **ಒರು ಮನಃಪ್ರವೃತ್ತಿಯುಣ್ಡೆನ್ರು** - ಯಾವುದೋ ಒಂದು ವಿಧವಾದ ಮನಸ್ಸಿನ ಪ್ರವೃತ್ತಿಯುಂಟೆಂದು, **ಅರುಗಿರ ವಳವೈ** - ತಿಳಿಯಬಹುದೆಂಬುದಷ್ಟು ಮಾತ್ರವನ್ನು, **ಚೊಲ್ಲುಗಿರದಾಗವುಮಾಮ್**-ಹೇಳುವದರಲ್ಲಿ **ಉದ್ದೇಶ್ಯವು**. ಮನಃಪ್ರವೃತ್ತಿ ಇಂಥಾದ್ದೆಂದು ಸ್ಪಷ್ಟವಾಗಿ ತಿಳಿಯುವದು ಅಸಾಧ್ಯವಾದರೂ, ವಾಗಾದಿಗಳ ವ್ಯಾಪಾರ ನಿಂತುಹೋದ ನಂತರವೂ ಮನಸ್ಸಿನ ವ್ಯಾಪಾರ ಉಂಟೆಂಬುದನ್ನು ಮಾತ್ರ ನಾವು ಗ್ರಹಿಸಬಹುದೆಂದು ಶ್ರೀ ಯತಿವರ್ಯರಭಿಪ್ರಾಯವೇ ವಿನಾ, ಅನ್ತಿಮ ಸ್ಮೃತಿ ಇಂಥಾದ್ದೆಂದು ಹೇಳಬಹುದೆಂದು ತಿಳಿಸಲಿಲ್ಲವು. ಆದುದರಿಂದ ತಾವು ಸಮೀಪಸ್ಥರಿಗೂ ಕೂಡ ಈ ಅನ್ತಿಮ ಸ್ಮೃತಿ ಇಂಥಾದ್ದೆಂದು ಹೇಳಿರುವದು ಶ್ರೀ ಭಾಷ್ಯಕಾರರ ಈ ಉಕ್ತಿಗೆ ವಿರೋಧವಾದುದೇನೂ ಇಲ್ಲವು. ಈ ವಾಕ್ಯವು "**ವಾಙ್ಮನಸಿ ದರ್ಶನಾಚ್ಛಬ್ದಾಚ್ಚ**" ಎಂಬ ಸೂತ್ರದಲ್ಲಿ (೪. ೨. ೧.) **ದರ್ಶನಾತ್** ಎಂಬುದರ ವ್ಯಾಖ್ಯಾನವಾಗಿರುತ್ತದೆ. ವಾಕ್ಕು ಮನಸ್ಸಿನಲ್ಲಿ ಸ್ವರೂಪೈಕ್ಯವನ್ನು ಹೊಂದುವದಿಲ್ಲವು,

ಗಿರ ವಳವ್ವೈ ಚೊಲ್ಲುಗಿರದಾಗವುಮಾವ್, ತನಕ್ಕು ಶಿಲವ್ಯಾಧ್ಯಾದ್ಯವಸ್ಥೈಗಳಿಲ್ ಕಂಡ ಪಡಿಯ್ಯೆ ಚೊಲ್ಲುಗಿರದಾಗವುಮಾವ್.

ಏಕೆಂದರೆ ಮನಸ್ಸು ವಾಗಾದಿಗಳಿಗೆ ಕಾರಣವಲ್ಲವು. ವಾಙ್ಮನಸಿ ಸಂಪದ್ಯತೇ ಎಂದು ಶ್ರುತಿಯಿರುವದರಿಂದ ವಾಗಾದಿ ಇಂದ್ರಿಯಗಳು ಸೂಕ್ಷ್ಮದೆಶೆಯಲ್ಲಿ ಹೋಗಿ ಮನಸ್ಸಿನಲ್ಲಿ ಸೇರಿಕೊಳ್ಳುತ್ತವೆ ಎಂದುಪಪಾದಿಸುವ ಪ್ರಕರಣದಲ್ಲಿ ಈ "ದೃಶ್ಯತೇಹಿ" ಎಂಬ ವಾಕ್ಯವನ್ನು ಪ್ರಯೋಗಿಸುತ್ತಾರೆ. ದೃಶ್ಯತೇಹಿ ಎಂದು ಪ್ರಯೋಗಿಸಿರುವ ಸಂದರ್ಭದಲ್ಲಿ ಹಾಗೆ ತೋರಿಬರುವದೇನು ಇತರ ಚೇಷ್ಟೆಗಳ ಚಿಹ್ನೆಯಿಂದ ಊಹೆಯೋ, ಇಲ್ಲವೇ ಪ್ರತ್ಯಕ್ಷದಿಂದಲೇ? ಅಥವಾ ದೃಶ್ಯತೇಹಿ ಎಂಬುದು ಇತರರಿಗೆ ಗೋಚರವಾದ ಹಾಗೆಯೋ, ಇಲ್ಲವೇ ತನಗೆ ಗೋಚರವಾದ ಹಾಗೆಯೋ ಎಂಬ ವಿಕಲ್ಪಗಳಲ್ಲಿ ಎರಡು ವಿಧವಾಗಿಯೂ ಆಗಬಹುದೆಂದು ತಿಳಿಸುತ್ತಾರೆ. ಸಮೀಪಸ್ಥರು ಆತನಿಗೆ ವಾಗಿಂದ್ರಿಯವಿಲ್ಲದಿದ್ದರೂ ಆತನ ಕೈ ಆಡಿಸುವದೇ ಮೊದಲಾದ ಬಾಹ್ಯ ಚೇಷ್ಟೆಗಳ ಮೂಲಕವೂ ಗ್ರಹಿಸಬಹುದು. ಅಥವಾ ತಾನೇ ಪ್ರತ್ಯಕ್ಷವಾಗಿಯೂ ಗ್ರಹಿಸಬಹುದು ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:—**ತನಕ್ಕು** - ತನಗೆ, **ಶಿಲ ವ್ಯಾಧ್ಯಾದ್ಯವಸ್ಥೈಗಳಿಲೇ** - ಕೆಲವು ರೋಗ ಮೊದಲಾದವು ಪ್ರಾಪ್ತವಾದ ಅವಸ್ಥೆಗಳಲ್ಲಿ **ಕಣ್ಡ ಪಡಿಯೇ**- ವಾಗಿಂದ್ರಿಯದ ವ್ಯಾಪಾರ ನಿಂತುಹೋಗಿದ್ದರೂ ಮನೋವ್ಯಾಪಾರವಿತ್ತೆಂಬಂಶವನ್ನು ಕಂಡಹಾಗೆ, **ಚೊಲ್ಲುಗಿರದಾಗವುಮಾವ್** - ಹೇಳುತ್ತದೆಂದಾಗಲಿ ಆಗಬಹುದು. ಕೆಲವರಿಗೆ ತುಂಬಾ ಕಾಯಿಲೆಯಾಗಿ ಮಾತು ಕೂಡ ನಿಂತುಹೋಗಿ ಜ್ಞಾನ ಉಂಟಾಗಿ ಬದುಕಿಕೊಳ್ಳಬಹುದು. ಅಂತವರ ಮೂಲಕವಾಗಿಯಾಗಲಿ ವಾಗಿಂದ್ರಿಯ ವ್ಯಾಪಾರವಿಲ್ಲದ ಸ್ಥಿತಿಯಲ್ಲೂ ಮನಸ್ಸಿನ ಪ್ರವೃತ್ತಿ ಇತ್ತೆಂಬಂಶವನ್ನು ತಿಳಿಯಬಹುದು ಆದುದರಿಂದಲೇ ಶ್ರೀ ಭಾಷ್ಯಕಾರರು ದೃಶ್ಯತೇಹಿ ಎಂಬಲ್ಲಿ ಹಿ ಎಂಬ ಶಬ್ದದಿಂದ ಇದು ಸಿದ್ಧವಾದ ವಿಷಯವೆಂದು ತೋರ್ಪಡಿಸಿರುತ್ತಾರೆ.

ಆದುದರಿಂದ ಪ್ರಪನ್ನನಾಗಿ ಮುಕ್ತನಾಗುವವನಿಗೂ ಅನ್ತಿಮ ಸ್ಮೃತಿಯುಂಟೆಂದು ಒಪ್ಪತಕ್ಕದ್ದೆಂಬ ಭಾವವು. ಆ ಅನ್ತಿಮ ಸ್ಮೃತಿಯು ಕೇವಲ ಸರ್ವೇಶ್ವರ ಕೃಪೆಯಿಂದ ಆ ಶ್ರಿಯಃಪತಿಯನ್ನೇ ಸ್ಮರಿಸುವಂಥಾದ್ದೆಂಬುದು ಪ್ರಮಾಣಗಳಿಂದ ತೋರಿಬರುತ್ತದೆ. ಹಾಗೆಯೇ ಉಂಟಾಗುತ್ತದೆಂದು ಸಮರ್ಥಿಸಿ ಹೇಳಲು ಪ್ರಾಕೃತ ಗುಣಗಳುಳ್ಳ ನಮಗಂತೂ ಪ್ರತ್ಯಕ್ಷ ಗೋಚರವಾಗದೆ ಸಾಧ್ಯವಿಲ್ಲ

ಆನ ಪಿನ್ಬು ಭಗವದ್ವಿಷಯತ್ತಿಲ್ ಅನ್ತಿಮ ಸ್ಮೃತಿ ಮುಕ್ತರಾಗಿರ ವರ್ಕ್ಕುಮ್ ಮೋಕ್ಷಮ್ ಕೊಡುಕ್ಕಿರವರ್ಕ್ಕುಮ್ ತೆರಿಯುಮಿತ್ತನೈ.

ದುದರಿಂದಲೇ "ಇದು ಅರುಗಿರುಪ್ಪಾರ್ಕ್ಕು ತ್ತೆರಿಯಾದು" ಎಂದು ಹೇಳಿದರು. ಹಾಗಾದರೆ ಯಾರಿಗೆ ತಿಳಿಯುತ್ತದೆ, ಯಾರಿಗೆ ಪ್ರತ್ಯಕ್ಷವೆಂದರೆ ಮೋಕ್ಷ ಕೊಡುವ ಶ್ರಿಯಃಪತಿಗೂ, ಮೋಕ್ಷ ಹೊಂದಿದವರಿಗೂ ಪ್ರತ್ಯಕ್ಷವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:—ಆನ ಪಿನ್ಬು - ಹೀಗಾದ ನಂತರ, ಎಂದರೆ ಸಮೀಪಸ್ಥರಾದ ಪ್ರಾಕೃತ ಗುಣವುಳ್ಳವರಿಗೆ ಪ್ರತ್ಯಕ್ಷವಾಗಿ ಗ್ರಹಿಸಲು ಸಾಧ್ಯವಲ್ಲದುದರಿಂದ, **ಭಗವದ್ವಿಷಯತ್ತಿಲ್ ಅನ್ತಿಮಸ್ಮೃತಿ** - ಸರ್ವೇಶ್ವರನನ್ನು ಕುರಿತ ಅನ್ತಿಮ ಸ್ಮೃತಿಯು ಪ್ರಪನ್ನನಿಗೆ ದೇಹಾವಸಾನದಲ್ಲಿ ಉಂಟಾಗುತ್ತದೆಂಬುದು, **ಮುಕ್ತರಾಗಿರ ವರ್ಕ್ಕುಮ್** - ದೇಹಾವಸಾನಹೊಂದಿ ಮುಕ್ತಿಯನ್ನು ಹೊಂದುವವರಿಗೂ, **ಮೋಕ್ಷಮ್ ಕೊಡುಕ್ಕಿರವರ್ಕ್ಕುಮ್**-ಮೋಕ್ಷವನ್ನು ಕೊಡುವ ಶ್ರಿಯಃಪತಿಗೂ ಸಹ, **ತೆರಿಯುಮ್** ಪ್ರತ್ಯಕ್ಷವಾಗಿ ಗೊತ್ತಾಗುವದು, **ಇತ್ತನೈ** - ಇಷ್ಟು ಮಾತ್ರವೇ ಸರಿ, ಎಂದರೆ ಈ ಬದ್ಧಚೇತನರಿಗ್ಯಾರಿಗೂ ತಿಳಿಯುವದಿಲ್ಲವೆಂದೂ, ಮುಕ್ತರಾಗಿ ಸ್ವಸ್ವರೂಪಾವಿರ್ಭಾವ ಉಂಟಾದವರಿಗೆ ಮಾತ್ರ ತಿಳಿಯುವದೆಂಬ ಭಾವವು. ಇಲ್ಲಿ **ಸರ್ವೇಶ್ವರನುಕ್ಕುಮ್ ತೆರಿಯುಮ್** ಎಂದು ಹೇಳದೆ **ಮೋಕ್ಷಮ್ ಕೊಡುಕ್ಕಿರವರ್ಕ್ಕು** ಎಂದು ಏಕೆ ಹೇಳಲ್ಪಟ್ಟಿತೆಂದರೆ ಮೋಕ್ಷ ಕೊಡಲು ಸಾಮರ್ಥ್ಯವಿಲ್ಲದ ಬ್ರಹ್ಮರುದ್ರೇಂದ್ರಯಮಾದಿಗಳಿಗೂ ಮೋಕ್ಷಸೂಚಕವಾದ ಅನ್ತಿಮ ಸ್ಮೃತಿಯ ವಿಷಯವು ತಿಳಿಯಲಾರದೆಂಬ ಭಾವವು. "ದೃಶ್ಯತೇಹಿ" ಎಂಬ ಶ್ರೀ ಭಾಷ್ಯಕಾರರ ಸೂಕ್ತಿಗೆ ಎರಡು ವಿಧವಾಗಿ ಉಪಪತ್ತಿಯನ್ನು ತೋರಿಸುತ್ತಾರೆ. ವಾಗಾದಿ ಇಂದ್ರಿಯಗಳು ಮನಸ್ಸಿನಲ್ಲಿ ಹೋಗಿ ಸೇರುವದರಿಂದ ವಾಕ್ಕಿನ ಪ್ರವೃತ್ತಿ ನಿಂತುಹೋದರೂ ಅನ್ತಿಮ ಸ್ಮೃತಿಗೆ ಬೇಕಾದ ಮನಃಪ್ರವೃತ್ತಿಯು ಉಂಟೆಂದೂ ಹೇಳಬಹುದು; ಅಥವಾ ಕೆಲವು ವ್ಯಾಧಿಗಳು ಪ್ರಬಲವಾಗಿರುವ ಅವಸ್ಥೆಗಳಲ್ಲಿ ವಾಕ್ಕಿನ ವ್ಯಾಪಾರ ನಿಂತುಹೋಗಿ ಮನೋವ್ಯಾಪಾರವಿನ್ನೂ ಇರಬಹುದೆಂದಾದರೂ ಹೇಳಬಹುದು, ಎಂಬ ಭಾವವು. ಆದುದರಿಂದ ದೃಶ್ಯತೇಹಿ ಎಂಬ ವಾಕ್ಯವು ಅನ್ತಿಮ ಸ್ಮೃತಿಯ ವಿಷಯವಲ್ಲವು. ದೇಹಾವಸಾನ ಉಂಟಾಗುವ ಸಂಭವವಿದ್ದರೆ ಅನ್ತಿಮ ಸ್ಮೃತಿಗೆ ಪೂರ್ವಭಾವಿಯಾದ ಅವಸ್ಥೆಯು ಇಲ್ಲಿ ಹೇಳಲ್ಪಟ್ಟಿತೆಂದು ಭಾವಿಸಬಹುದು; ಅಥವಾ ದೇಹಾವಸಾನವಿಲ್ಲದೆ ಬದುಕಿಕೊಳ್ಳಬಹುದಾದ ಅವಸ್ಥೆಯನ್ನೂ ಸೂಚಿಸಬಹುದು; ಆಗ

ಅನ್ತಿಮ ಸ್ಮೃತ್ಯನಂತರಾವಸ್ಥಾಃ.

ಇದುಕ್ಕನನ್ತರಮ್ ಯೋಗಿಗಳೋಡುಮ್ (ಯೋಗಿಗಳಲ್ಲಾದಾರೋಡುಮ್) ಅಯೋಗಿಗಳೋಡುಮ್ ವಾಶಿಯುರ, ಹಾರ್ದನಾನ ಪರಮಾತ್ಮಾವಿನ್ ಪಕ್ಕಲಿಲೇ ವಿಶ್ರಮಿಕ್ಕ ಮಳವುಮ್ ಸುಷುಪ್ತಿ ತುಲ್ಯಮಾಯಿರುಕ್ಕುಮ್. ಇವ್ವವಸ್ಥೈಯೈಪ್ಪತ್ತ "ಕಾಷ್ಠಪಾಷಾಣ ಸನ್ನಿ

ಆತನು ನನಗೆ ಮಾತು ನಿಂತುಹೋಗಿದ್ದರೆ ಮನಸ್ಸಿನಲ್ಲಿ ಈ ವಿಧವಾಗಿ ಯೋಚಿಸುತ್ತಿದ್ದೆನು ಎಂದು ಹೇಳಬಹುದು. ಆದುದರಿಂದ ದೃಶ್ಯತೇಹಿ ಎಂದು ಇಷ್ಟುಮಾತ್ರವೇ ಹೇಳಿದರು. ಪೂರ್ವಯೋಜನೆ ಪ್ರಕಾರ ಹತ್ತಿರವಿರುವವರಿಂದ ತಿಳಿಯಲ್ಪಡಬಹುದು ಎಂದರ್ಥ ಮಾಡಬಹುದೆಂದು ಅರಿಗಿರವಳವೈ ಚೊಲ್ಲುಗಿರದು ಎಂದು ವ್ಯಾಖ್ಯಾನ ಮಾಡಿದರು. ತನಗೇನೆ ತಿಳಿಯಬಹುದೆಂದು "ತನಕ್ಕು" ಎಂದು ಪ್ರಾರಂಭಿಸಿ ಎರಡನೆಯ ಯೋಜನೆಯ ಪ್ರಕಾರ ವ್ಯಾಖ್ಯಾನ ಮಾಡಿದರು, ಎಂದು ತಿಳಿಯತಕ್ಕದ್ದು.

ಅನ್ತಿಮಸ್ಮೃತ್ಯನಂತರ ಉಂಟಾಗುವ ಅವಸ್ಥೆಗಳು.

ಮುಂದೆ ಈ ಅನ್ತಿಮ ಸ್ಮೃತ್ಯನಂತರ ಪ್ರಾಪ್ತವಾಗುವ ಅವಸ್ಥೆಗಳನ್ನು ಎರಡಾಗಿ ಭಾವಿಸಬಹುದು. ಒಂದು ಸುಷುಪ್ತ್ಯವಸ್ಥೆಯು, ಅನಂತರ ಇನ್ನು ಮುಂದೆ ಯಾವಾಗಲೂ ಎಂದರೆ ಕಾಲತತ್ವವಿರುವವರೆಗೂ ಎಚ್ಚರವಾಗಿರುವ ಜಾಗ್ರದವಸ್ಥೆಯು, ಎಂದು ಮುಂದಿನ ಮೂರು ವಾಕ್ಯದಿಂದ ತಿಳಿಸಿ ಆ ಅವಸ್ಥೆಗಳು ಎಂಥವು ಎಂದು ವ್ಯವಸ್ಥೆ ಮಾಡುತ್ತಾರೆ. ಹಿಂದೆ, ಇಂದ್ರಿಯಗಳು, ಮನಸ್ಸು, ಪ್ರಾಣ ಭೂತಸೂಕ್ಷ್ಮಗಳಿಂದ ಯುಕ್ತನಾದ ಜೀವಾತ್ಮನಿಗೆ ಪರಮಾತ್ಮನೊಂದಿಗೆ ಸಂಪತ್ತಿಯು ಪ್ರಪನ್ನ ಅಪ್ರಪನ್ನ ಸಾಧಾರಣವೆಂದು ಹೇಳಿ ಅದು ಸುಷುಪ್ತಿರೂಪವಾದುದೆಂದು ಹೇಳಲ್ಪಟ್ಟಿತು. ಈ ಅವಸ್ಥೆಯಲ್ಲಿ ಪ್ರಪನ್ನನ ವಿಷಯದಲ್ಲಿ ಏನಾದರೂ ವೈಲಕ್ಷಣ್ಯವುಂಟೋ ಎಂಬುದು ಚರ್ಚಿಸಲ್ಪಡುತ್ತದೆ. ಇದಕ್ಕನನ್ತರಮ್ - ಈ ಅನ್ತಿಮ ಸ್ಮೃತಿ ಕೇವಲ ಸರ್ವೇಶ್ವರನ ಕರುಣೆಯಿಂದಲೇ ಈ ಪ್ರಪನ್ನನಿಗೆ ಪ್ರಾಪ್ತವಾದ ನಂತರ, ಯೋಗಿಗಳೋಡುಮ್ - ಭಕ್ತಿ ನಿಷ್ಠರಾದ ಉಪಾಸಕರಿಗೂ, ಯೋಗಿಗಳಲ್ಲಾದಾರೋಡುಮ್- ಉಪಾಸಕರಲ್ಲದೆ ಸ್ವತಂತ್ರ ಪ್ರಪತ್ತಿನಿಷ್ಠರಿಗೂ ಮತ್ತು ಬುಬುಕ್ಷುಗಳಾದ ಇತರರಿಗೂ, ಅಯೋಗಿಗಳೋ

ಭನ್." "ನಷ್ಟಸ್ಮೃತಿರಪಿ" ಎನ್ರುಮ್ (೧) "ನಿನ್ನೈಕ್ಕಮಾಟ್ಟೇ" ಎನ್ರುಮ್ ಶೊಲ್ಲುಗಿರದೆನ್ರಾಲ್ ಪ್ರಪನ್ನಾಧಿಕಾರಿಕ್ಕು ವಿಶೇಷಿತ್ತು ಓರತಿ ಶಯಮ್ ಶೊಲ್ಲುತ್ತಾಗಾದು. ಇದುಕ್ಕು ಮೇಲ್ (೨) "ಮತ್ತಸ್ಸ್ಮೃತಿ

ಡುಮ್ ಎಂಬ ಪಾಠದಲ್ಲೂ ಅದೇ ಅರ್ಥವೇ, ಮಾಶಿಯುರ - ಏನೊಂದೂ ವ್ಯತ್ಯಾಸವಿಲ್ಲದ ಹಾಗೆ, **ಹಾರ್ದನಾನ** – ಹೃದಯದಲ್ಲಿ ಹಾರ್ದರೂಪಿಯಾದ, **ಪರಮಾತ್ಮಾವಿನ ಪಕ್ಕಲಿಲೇ** - ಪರಮಾತ್ಮನೊಂದಿಗೆ ಸೇರಿ, **ವಿಶ್ರಮಿಕ್ಕು ಮಳವುಮ್** - ವಿಶ್ರಮಿಸಿರುವವರೆಗೂ, **ಸುಷುಪ್ತಿ** - ಮಲಗಿರುವವಸ್ಥೆಗೆ, **ಶುಲ್ಯಮಾ ಯಿರುಕ್ಕುಮ್** - ಸಮಾನವಾಗಿರುತ್ತದೆ ಎಂದರೆ ಬುಬುಕ್ಷು ಮುಮುಕ್ಷುಗಳೆಲ್ಲರಿಗೂ ಸ್ಥಿತಿಯು ಸುಷುಪ್ತ್ಯವಸ್ಥೆಗೆ ಸಮಾನವಾದುದೆಂಬ **ಭಾವವು.** ಆದರೆ ಇವರುಗಳ ಧರ್ಮಭೂತಜ್ಞಾನ ವಿಕಾಸದಲ್ಲೇನಾದರೂ ವ್ಯತ್ಯಾಸವುಂಟೋ ಎಂದರೆ ಉಂಟೆಂದು ಮುಂದೆ ಹೇಳುತ್ತಾರೆ. ಕೆಲವರು ಧರ್ಮಭೂತಜ್ಞಾನ ವಿಕಾಸಕ್ಕೆ ಆಗ ಸಂಕೋಚ ಉಂಟೆಂದು ಹೇಳುವದು ಸರಿಯಲ್ಲವೆಂದೂ ಹಾಗೆ ಹೇಳಿದರೆ ಪ್ರಪನ್ನನಿಗೆ ಆಗ ಅತಿಶಯವೇನೂ ಹೇಳಿದಹಾಗಾಗುವದಿಲ್ಲವೆಂದೂ. ತಿಳಿಸುತ್ತಾರೆ :— **ಇನ್ನವಸ್ಥೈಪ್ಪತ್ತ**-ಈ ಪರಮಾತ್ಮಸಂಪತ್ತಿಯಿಂದುಂಟಾಗುವ ಸುಷುಪ್ತಿ ತುಲ್ಯಾವಸ್ಥೆಯನ್ನು ಕುರಿತು, **ಕಾಷ್ಠಪಾಷಾಣ ಸನ್ನಿಭನ್** - ಮರದ ತುಂಡು ಕಲ್ಲಿಗೂ ಸಮಾನನಾಗಿ ನಿಶ್ಚೇಷ್ಟಿತನಾಗಿರುವನೆಂದು ವರಾಹ ಪುರಾಣದಲ್ಲಿನ, **ನಷ್ಟಸ್ಮೃತಿರಪಿ** - ಈ ಪ್ರಮಾಣದಲ್ಲಿ ಸ್ಮೃತಿಯು ನಷ್ಟವಾಗುತ್ತದೆ, **ಎನ್ರುಮ್** - ಎಂಬುವ, **ನಿನ್ನೈಕ್ಕಮಾಟ್ಟೇ** - ಈ ಅವಸ್ಥೆಯಲ್ಲಿ ಸರ್ವೇಶ್ವರನಾದ ನಿನ್ನನ್ನು ನಾನು ಸ್ವಲ್ಪವೂ ಸ್ಮರಿಸಲಾರೆನೆಂದೂ, **ಎನ್ರುಮ್** - ಎಂದು ಶ್ರೀ ಪೆರಿಯಾಳ್ವಾರ್ರವರೂ, **ಶೊಲ್ಲುಗಿರದು** - ಹೇಳುವದು, **ಎನ್ರಾಲ್** - ಎಂದರೆ, ಆಗ ಪ್ರಪನ್ನಾಧಿಕಾರಿಗೆ, **ವಿಶೇಷಿತ್ತು** - ವೈಲಕ್ಷಣ್ಯವನ್ನುಂಟುಮಾಡಿ, **ಓರತಿಶಯಮ್** - ಏನೊಂದು ಮಾಹಾತ್ಮ್ಯೆಯನ್ನೂ, **ಶೊಲ್ಲಿತ್ತಾಗಾದು** - ಹೇಳಿದಂತಾಗುವದಿಲ್ಲವು; ಎಂದರೆ ಸರ್ವೇಶ್ವರನು ಕೇವಲ ತನ್ನ ಪರಿಪೂರ್ಣಾನುಗ್ರಹದಿಂದ ಈ ಪ್ರಪನ್ನನಿಗೆ ತನ್ನನ್ನು ಕುರಿತ ಅನ್ತಿಮ ಸ್ಮೃತಿಯನ್ನುಂಟುಮಾಡುತ್ತಾನೆಂದು ಹೇಳಿ, ಅನಂತರ ತನ್ನೊಂದಿಗೆ ಬಂದು ಸೇರಿ ಸುಷುಪ್ತ್ಯವಸ್ಥೆಯನ್ನು ಹೊಂದುವನೆಂದು ಹೇಳಿದಾಗ, ಪ್ರಾಪ್ತವಾದ ಜ್ಞಾನವಿಕಾಸವು ನಷ್ಟವಾಗಿಹೋಗುತ್ತದೆಂದು ಈ ಪ್ರಮಾಣಗಳಲ್ಲಿ ತೋರುವ ಹಾಗೆ ಭಾವಿಸಿದರೆ ಆಗ ಈ ಪ್ರಪನ್ನನ

---

(೧) ಪೆರಿ. ತಿರು. ೪. ೧೦. ೧. (೨) ಗೀ. ೧೫ ೧೫.

ಜ್ಞಾನಮಪೋಹನಂಚ" ಎಜ್ಞರ ಪ್ರಾಜ್ಞನುಣರ್ತ್ತ ತತ್ಪ್ರಕಾಶಿತ

ವಿಷಯದಲ್ಲಿ ಏನೊಂದು ಅತಿಶಯವನ್ನೂ ಹೇಳಿದ ಹಾಗೆ ಆಗುವದಿಲ್ಲವೆಂದಾಗುತ್ತದೆ. ಆದುದರಿಂದ ಆಗ ಜ್ಞಾನವಿಕಾಸವಿಲ್ಲವೆಂದು ಏತಕ್ಕೆ ಹೇಳಬೇಕು ಎಂಬಭಿಪ್ರಾಯವು. ಹಾಗೆ ಜ್ಞಾನವಿಕಾಸವು ನಷ್ಟವಾಯಿತೆಂದರೆ, ಅಲ್ಲಿಂದ ಇತರ ನೂರು ನಾಡಿಗಳನ್ನು ತ್ಯಜಿಸಿ, ಬ್ರಹ್ಮನಾಡಿಯಲ್ಲೇ ಈ ಪ್ರಪನ್ನನು ಪ್ರವೇಶಿಸುವಾಗ, ಜ್ಞಾನವಿಕಾಸವಿಲ್ಲದೇ ಪ್ರವೇಶಿಸುವನೇ? ಆಗ ಸರ್ವೇಶ್ವರನ ಕೃಪೆಯಿಂದ ಜ್ಞಾನೋತ್ಪತ್ತಿಯಾಗುತ್ತದೆ ಎಂದು ಹೇಳುತ್ತೀವೆ ಎಂದರೆ ಯಾವುದಕ್ಕೆ ಉತ್ಪತ್ತಿಯುಂಟೋ ಅದಕ್ಕೆ ನಾಶವುಂಟು. ಹಾಗಾದರೆ ಈ ಜ್ಞಾನಕ್ಕೆ ನಾಶವೇ? ಮುಕ್ತನ ಜ್ಞಾನಕ್ಕೆ ಸರ್ವಜ್ಞತೆಯನ್ನೂ, ಕಾಲವಿರುವ ಪರ್ಯಂತ ನಿತ್ಯತ್ವವನ್ನೂ, ಹೇಳುವ ಪ್ರಮಾಣಗಳಿಗೆ ವಿರೋಧವಾಗುತ್ತದೆಂದು ಮುಂದಿನ ವಾಕ್ಯದಿಂದ ತಿಳಿಸಿ, ಆ ಕಾರಣದಿಂದ ಈ ಸುಷುಪ್ತ್ಯವಸ್ಥೆಯಲ್ಲಿ ಚೇಷ್ಟಾರಹಿತನಾಗಿದ್ದರೂ ಜ್ಞಾನ ಸಂಕೋಚ ಅಥವಾ ನಾಶವನ್ನು ಹೇಳಬೇಕಾದ ಅವಶ್ಯಕತೆ ಏನೂ ಇಲ್ಲವೆಂಬ ಭಾವವು. "ನಿನ್ನೈಕ್ಕವಾಟ್ಟೇನ್" ಎಂಬುದು ಐಯ್ ಪ್ಪು ಎನ್ನೈ ವನ್ದು ನಲಿಯುಮ್ಪೋದು ಅಜ್ಞೇದುಮ್ ನಾನುನ್ನೈ ನಿನ್ನೈಕ್ಕವಾಟ್ಟೇನ್ - ವಾತ ಪಿತ್ತ ಶ್ಲೇಷ್ಮಾಧಿಕ್ಯದಿಂದ ರೋಗವು ಬಂದು ನನ್ನನ್ನು ಬಾಧಿಸುವಾಗ ಆ ಸಮಯದಲ್ಲಿ ನಿನ್ನನ್ನು ಸ್ಮರಿಸಲಾರೆನು ಎಂದು "ತುಪ್ಪುಡೈಯಾರೈ" ಎಂಬ ಪೆರಿಯಾಳ್ವಾರ್ ತಿರುಮೊಳಿ ಪಾಶುರದಲ್ಲಿ ಬರುತ್ತದೆ. ಇದೇ ಅಧಿಕಾರದಲ್ಲಿ ೧೭೩೩ನೆಯ ಪುಟ ನೋಡಿ

ಇದುಕ್ಕು ಮೇಲ್ - ಪರಮಾತ್ಮನಲ್ಲಿ ವಿಶ್ರಮಿಸಿಕೊಂಡ ನಂತರ, ಈ ಸುಷುಪ್ತ್ಯವಸ್ಥೆಯಾದ ನಂತರ "ಮತ್ತಃ - ಎಲ್ಲಾದಕ್ಕೂ ಆತ್ಮವಾಗಿ ಇರುವ ನನ್ನಿಂದ, ಸ್ಮೃತಿಃ - ಪೂರ್ವದಲ್ಲಿ ಅನುಭವಿಸಲ್ಪಟ್ಟದ್ದರ ವಿಷಯವಾಗಿ ಆ ಅನುಭವದಿಂದುಂಟಾದ ಸಂಸ್ಕಾರದಿಂದಲೇ ಉಂಟಾಗುವ ಜ್ಞಾನವೂ, ಜ್ಞಾನಂ - ಇಂದ್ರಿಯಗಳಿಂದಲೂ, ಲಿಂಗಗಳಿಂದಲೂ, ಆಗಮದಿಂದಲೂ, ಯೋಗದಿಂದಲೂ ಉಂಟಾಗುವ ವಸ್ತುನಿಶ್ಚಾಯಕ ಜ್ಞಾನವೂ, ಅಪೋಹನಂ ಚ - ಜ್ಞಾನಶೂನ್ಯತೆ ಅಥವಾ ಊಹಿಸೋಣವು, ಈ ಎರಡನೆಯ ಅರ್ಥವು ಉತ್ತಮವು, ಊಹನವೆಂದರೆ ಈ ಪ್ರಮಾಣವು ಹೀಗೆ ಉಪಯೋಗಿಸಲು ಯೋಗ್ಯವು ಎಂದು ಪ್ರಮಾಣ ಪ್ರವೃತ್ತಿಯ ಅರ್ಹತಾ ವಿಷಯವಾದ, ಸಾಮಗ್ರ್ಯಾದಿಗಳ ನಿರೂಪಣದಿಂದ ಹುಟ್ಟಿದ ಮತ್ತು ಪ್ರಮಾಣಕ್ಕೆ ಅನುಗ್ರಾಹಕವಾದ ಜ್ಞಾನವೂ ಸಹ, ಇವೆಲ್ಲಾ

ದ್ವಾರನಾಯರ್ ಕೊಣ್ಡು ಬ್ರಹ್ಮನಾಡಿಯಿಲೇ ಪ್ರವೇಶಿತ್ತಾಲ್ ಪಿನ್ಬು ಕಾಲತತ್ತ್ವಮುಳ್ಳದನೈಯುಂ ಒರುಪಗಲಾ ಯುಣರ್ತ್ತಿಯೇ ಯುಮಾಮ್.

ನನ್ನಿಂದಲೇ ಉಂಟಾಗುತ್ತವೆಂದು ತಿಳಿದುಕೊಳ್ಳಬೇಕು. "ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟೋ" ಎಂಬುದು ಮೊದಲಾದ ವಾದವು ಎಂದು - ಎಂದು ಗೀತೆಯಲ್ಲಿ ಹೇಳಲ್ಪಟ್ಟಿರುವ, ಹಾರ್ದ್ದನ್ - ಇದೆಲ್ಲವನ್ನು ಚೆನ್ನಾಗಿ ತಿಳಿದ ಸರ್ವಜ್ಞನಾದ ಸರ್ವೇಶ್ವರನು, ಉಣರ್ತ್ತ - ಜ್ಞಾನವಿಕಾಸದೊಂದಿಗೆ ಎಬ್ಬಿಸಲಾಗಿ, ಆ ಕಾರಣದಿಂದಲೇ, ತತ್ಪ್ರಕಾಶಿತ ದ್ವಾರನಾಯರ್ ಕೊಂಡು - ಆತನ ಕೃಪಾ ಪ್ರಭಾವದಿಂದ ಪ್ರಕಾಶಪಡಿಸಲ್ಪಟ್ಟ ಮಾರ್ಗವುಳ್ಳವನಾಗಿ, ಆತನಿಂದ ತೋರಿಸಲ್ಪಟ್ಟ ಮಾರ್ಗವುಳ್ಳವನಾಗಿ ಎಂಬರ್ಥವು. ಆ ಮಾರ್ಗವು ಯಾವುದೆಂದರೆ ಹೇಳುತ್ತಾರೆ:—ಬ್ರಹ್ಮನಾಡಿಯಿಲೇ ಪ್ರವೇಶಿತ್ತಾಲ್ - ೧೦೧ನೆಯದಾದ ಬ್ರಹ್ಮನಾಡಿಯಲ್ಲಿ ಪ್ರವೇಶಿಸಿದರೆ, ಪಿನ್ಬು - ಅನಂತರ, ಕಾಲತತ್ತ್ವಮುಳ್ಳದನೈಯುಮ್ - ಕಾಲತತ್ತ್ವವು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ, ಕಾಲತತ್ತ್ವವು ಸದಾ ಇರುವದರಿಂದ ನಿತ್ಯವಾಗಿ ಎಂಬ ಭಾವವು, ಒರುಪಗಲಾಯ್ - ಒಂದೇ ಹಗಲಾಗಿ, ರಾತ್ರಿಯೇ ಇಲ್ಲವೆನ್ನುವದರಿಂದ, ಆತನ ಜ್ಞಾನವಿಕಾಸಕ್ಕೆ ಆಮೇಲೆ ಎಂದಿಗೂ ಚ್ಯುತಿಯಿಲ್ಲವೆಂದು ಹೇಳಲ್ಪಟ್ಟಿತು; ಉಣರ್ತ್ತಿಯೇಯುಮಾಮ್ - ಆಮೇಲೆ ಸುಷುಪ್ತಿ ಏನಾದರೂ ಉಂಟೋ ಎಂದರೆ ಹಾಗೇನೂ ಇಲ್ಲವೆಂದು, ಉಣರ್ತ್ತಿಯೇಯುಮಾಮ್ - ಸರ್ವಪ್ರಕಾಶಕ ಸರ್ವಜ್ಞತೆಯೇ ಉಂಟಾಗುತ್ತದೆ. ಕರ್ಮಮೂಲಕವಾಗಿ ಈತನಿಗೆ ಪ್ರಕೃತಿ ಸಂಬಂಧವೂ ಅದರಿಂದ ಈತನ ಸರ್ವಜ್ಞತೆಗೆ ಕುಂದಕವೂ ಉಂಟಾಗಿತ್ತು. ಯಾವಾಗ ಸರ್ವೇಶ್ವರನ ಕೃಪೆಯು ಒದಗಿ ಅನ್ತಿಮಸ್ಮೃತಿ ಮೊದಲಾದವು ಉಂಟಾದವೋ, ಆಗ ಜ್ಞಾನಪ್ರಕಾಶ ಪ್ರತಿಬಂಧಕವು ತೊಲಗಿ ಸ್ವಸ್ವರೂಪಾವಿರ್ಭಾವದಿಂದ ಸರ್ವಜ್ಞತೆಯುಂಟಾಗುತ್ತದೆ. ಈ ಅಭಿಪ್ರಾಯವನ್ನೇ "ಏವ ಮೇವೈಷ ಸಮ್ಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿರುಪಸಮ್ಪದ್ಯ ಸ್ವೇನರೂಪೇಣಾಭಿ ನಿಷ್ಪದ್ಯತೇ" (ಛಾಂ. ೮. ೧೨. ೩) ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಇದರರ್ಥವು:— ಹಾಗೆಯೇ ಈ ಜೀವಾತ್ಮನು ಈ ಶರೀರದಿಂದ ಬಿಟ್ಟು ಹೊರಟವನಾಗಿ ಪರಂಜ್ಯೋತಿಸ್ಸಾದ ಪರಮಪುರುಷನನ್ನು ಸೇರಿ ತನ್ನ ಸ್ವಕೀಯವಾದ ಸ್ವರೂಪಾವಿರ್ಭಾವವನ್ನು ಹೊಂದುತ್ತಾನೆ. ಇಲ್ಲಿ ಸ್ವೇನ ಎಂದಿರುವದರಿಂದ, ಉತ್ಪತ್ತಿಯಾದುದಲ್ಲವು, ಆ ಸ್ವರೂಪವು ಸಹಜವಾದುದು ಎಂಬರ್ಥವು ಈ ಅಭಿಪ್ರಾಯವನ್ನೇ

"ಸಂಪದ್ಯಾವಿರ್ಭಾವ ಸ್ವೇನ ಶಬ್ದಾತ್" (೪. ೪. ೧) ಎಂಬ ಸೂತ್ರದಲ್ಲೂ ಉಪಪಾದಿತವಾಗಿದೆ. ಶೌನಕಮಹರ್ಷಿಗಳೂ ವಿಷ್ಣುಧರ್ಮದಲ್ಲೂ (೧೦೪-೫೫. ೭) ಹಾಗೆಯೇ ಉಪದೇಶಿಸುತ್ತಾರೆ. "ಯಥಾ ನ ಕ್ರಿಯತೇ ಜ್ಯೋತ್ಸ್ನಾ ಮಲಪ್ರಕ್ಷಾಳನಾನ್ಮಣೇಃ । ದೋಷಪ್ರಹಾಣಾನ್ನ ಜ್ಞಾನಮಾತ್ಮನಃ ಕ್ರಿಯತೇ ತಥಾ ॥" ಮಣೇಃ - ರತ್ನದ, ಮಲ ಪ್ರಕ್ಷಾಳನಾತ್ - ಕೊಳೆಯನ್ನು ತೊಳೆಯುವದರಿಂದ, ಜ್ಯೋತ್ಸ್ನಾ - ಪ್ರಕಾಶವು, ಯಥಾ ನ ಕ್ರಿಯತೇ - ಹೇಗೆ ಹೊಸದಾಗಿ ಉಂಟುಮಾಡಲ್ಪಡುವದಿಲ್ಲವೋ, ಹಾಗೆ, ಆತ್ಮನಃ ಜ್ಞಾನಂ - ಜೀವಾತ್ಮನ ಜ್ಞಾನವು, ದೋಷಪ್ರಹಾಣಾತ್ - ಕರ್ಮಕೃತ ದೋಷವು ಹೋಗುವದರಿಂದ, ನ ಕ್ರಿಯತೇ - ಹೊಸದಾಗಿ ಮಾಡಲ್ಪಡುವದಿಲ್ಲವು ; "ಯಥೋದಪಾನ ಕರಣಾತ್ಕ್ರಿಯತೇ ನ ಜಲಾಂಬರಂ । ಸದೇವ ನೀಯತೇ ವ್ಯಕ್ತಿಮಸತಸ್ಸಂಭವಃ ಕುತಃ ॥" ಉದಪಾನ ಕರಣಾತ್ - ಸ್ನಾನಾದಿಕಕ್ಕಾಗಿ ಕೊಳ, ಸರಸ್ಸುಗಳನ್ನು ಕಲ್ಪಿಸುವದರಿಂದ, ಜಲಾಂಬರಂ - ಹೊಸದಾಗಿ ನೀರೂ ಆಕಾಶವೂ, ಯಥಾ ನ ಕ್ರಿಯತೇ - ಹೇಗೆ ಹೊಸದಾಗಿ ಕಲ್ಪಿಸಲ್ಪಡುವದಿಲ್ಲವೋ, ಹಾಗೆಯೇ, ಸದೇವ - ಆತ್ಮನಲ್ಲಿ ಇರುವಂಥಾದ್ದೇ, ಎಂದರೆ ಮೊದಲಿನ ಜ್ಞಾನಸ್ವರೂಪವೇ, ವ್ಯಕ್ತಿಂ ನೀಯತೇ - ಪ್ರಕಾಶತೆಯನ್ನು ಹೊಂದುತ್ತದೆ, ಏಕೆಂದರೆ, ಅಸತ ಸ್ಸಂಭವಃ ಕುತಃ - ಇಲ್ಲದೇ ಇರುವದಕ್ಕೆ ಉತ್ಪತ್ತಿ ಎಲ್ಲಿಯದು ? "ತಥಾ ಹೇಯ ಗುಣಧ್ವಂಸಾದವಬೋಧಾದಯೋ ಗುಣಾಃ । ಪ್ರಕಾಶ್ಯಂತೇ ನ ಜನ್ಯಂತೇ ನಿತ್ಯಾ ಏವಾತ್ಮನೋ ಹಿ ತೇ ॥" ತಥಾ - ಹಾಗೆಯೇ, ಹೇಯಗುಣ ಧ್ವಂಸಾತ್ - ಹೇಯಗುಣಗಳ ನಾಶದಿಂದ, ಅವಬೋಧಾದಯೋ ಗುಣಾಃ - ಜ್ಞಾನವೇ ಮೊದಲಾದ ಗುಣಗಳು, ಆದಿ ಶಬ್ದದಿಂದ ಆನಂದತ್ವ, ಸತ್ಯಕಾಮ, ಸತ್ಯಸಂಕಲ್ಪಾದಿಗಳು ಹೇಳಲ್ಪಟ್ಟವು, ಪ್ರಕಾಶ್ಯಂತೇ - ಪ್ರಕಾಶವನ್ನು ಹೊಂದುತ್ತವೆ, ನ ಜನ್ಯಂತೇ - ಹೊಸದಾಗಿ ಏನೂ ಹುಟ್ಟುವದಿಲ್ಲವು, ನಿತ್ಯಾ ಏವಹಿ - ನಿತ್ಯವಾದವುಗಳೇಯಷ್ಟೇ. ಕರ್ಮ ಸಂಕುಚಿತವಾಗಿದ್ದುದು ಪರಮಾತ್ಮ ಸಂಪತ್ತಿಯಿಂದ ವಿಕಾಸವನ್ನು ಹೊಂದಿದವೆಂದು ಹೇಳತಕ್ಕದ್ದು. ಇಲ್ಲಿ ತತ್ಪ್ರಕಾಶಿತ ದ್ವಾರನಾಯ್ ಕೊಂಡು ಎಂಬಭಿಪ್ರಾಯವು "ತಸ್ಯ ಹೈತಸ್ಯ ಹೃದಯಸ್ಯಾಗ್ರಂ ಪ್ರದ್ಯೋತತೇ," "ತೇನ ಪ್ರದ್ಯೋತೇನೈಷ ಆತ್ಮಾ ನಿಷ್ಕ್ರಾಮತಿ" ಎಂಬ ಶ್ರುತಿವಾಕ್ಯಗಳಿಂದ ವ್ಯಕ್ತಪಡುತ್ತದೆ. ಹೀಗೆ ಜ್ಞಾನವಿಕಾಸವು ಯಾವಾಗ ಸ್ವಸ್ವರೂಪಾವಿರ್ಭಾವದಿಂದುಂಟಾಯಿತೋ, ಅನಂತರ ಆತ್ಮನಿಗೆ ಕರ್ಮಬಂಧವಿಲ್ಲವಾದ್ದರಿಂದ ಜ್ಞಾನಸಂಕೋಚ ರೂಪ ರಾತ್ರಿ ಎಂದಿಗೂ ಇಲ್ಲವು, ಜ್ಞಾನವಿಕಾಸವಾಗಿಯೇ ಇರುವದರಿಂದ ಯಾವಾಗಲೂ

ನನ್ನಿಲವಾ (ವದು) ಮದು ನರ್ಪ್ಪಕಲಾ (ವದು) ಮದು ನನ್ನಿಮಿತ್ತಮ್,
ಎನ್ನಲುವಾ (ವದು) ಮದು ಯಾದಾ (ನುಮಾಮಙ್ಕಡಿಯವರ್ಕ್ಕು)
ಮರಙ್ಗರಡಿಯವರ್ಕ್ಕು,

ಹಗಲೇ ಇರುತ್ತದೆಂದು "ಒರುಪಗಲಾಂಯ್ ಊಣರ್ತ್ತಿಯೋದನಾಮ್" ಎಂದು ಹೇಳಿರುತ್ತಾರೆ. ಈ ಅಭಿಪ್ರಾಯವನ್ನೇ ಹಿಂದೆ ಪುರುಷಾರ್ಥಕಾಷ್ಠಾಧಿಕಾರದ ಕೊನೆಯ ಶ್ಲೋಕದಲ್ಲಿ ಮುಕ್ತೈಶ್ವರ್ಯದಿನ ಎಂಬ ಪ್ರಯೋಗದಿಂದ ಮುಕ್ತದೆಶೆಯೆಲ್ಲಾ ಒಂದು ಹಗಲಾಗಿ ಹೇಳಿರುತ್ತಾರೆ. ಹೀಗೆಯೇ **"ತಸ್ಮಾದ್ವಾ ಏತಂ ಸೇತುಂ ತೀರ್ತ್ವಾ ಅಪಿನಕ್ತ ಮಹರೇವಾಭಿನಿಷ್ಪದ್ಯತೇ"** ಎಂಬ **"ಸಕೃದ್ವಿಭಾತೋಹ್ಯೇವೈಷ ಬ್ರಹ್ಮಲೋಕಃ" "ಜಾಗೃವಾಗ್ಂಸ್ಸ ಸ್ಸಮಿಂಧತೇ"** ಎಂಬ ಶ್ರುತಿಗಳಲ್ಲೂ ಉಪಪಾದಿತವಾಗಿದೆ

ಪ್ರಪನ್ನನು ದೇಹತ್ಯಾಗ ಮಾಡುವದಕ್ಕೆ ದೇಶಕಾಲಾವಸ್ಥಾದಿ ಯಾವ ನಿಯಮವೂ ಇಲ್ಲವು. ಎಂದು ಅಧಿಕಾರೋಪಪಾದನದಲ್ಲಿ ಹೇಳಲ್ಪಟ್ಟಿತು ಈ ಅಭಿಪ್ರಾಯವನ್ನೇ ಗರ್ಭೀಕರಿಸಿ, ಪರಮಾತ್ಮನು ಪರಮಕೃಪಯಾ ಸಂಕಲ್ಪಿಸಿದ ದೇಶಕಾಲಾದಿಗಳೇ, ಮೂರ್ಧನ್ಯನಾಡಿಯನ್ನು ಪ್ರವೇಶಿಸಿ ದೇಹವನ್ನು ಬಿಟ್ಟು ಅರ್ಚಿರಾದಿ ಗತಿಯಿಂದ ಪರಮಾತ್ಮನನ್ನು ಹೊಂದಲು ಪ್ರಶಸ್ತವಾದವೆಂದು ಮುಂದಿನ ಅಧಿಕಾರ ಸಂಗ್ರಹ ಶ್ಲೋಕದ ಮೂಲಕ ಉಪದೇಶಿಸುತ್ತಾರೆ:—

ಈ ಪಾಶುರದಲ್ಲಿ ಎರಡು ವಿಧ ಪಾಠವುಂಟು. ಸಾರದೀಪಿಕಾ ವ್ಯಾಖ್ಯಾತೃವು ಬ್ರಾಕೆಟ್ಟು ( ) ಗಳಲ್ಲಿರುವ ಪಾಠವನ್ನು ಅವಲಂಬಿಸುತ್ತಾರೆ. ಸಾರಪ್ರಕಾಶಿಕಾ, ಸಾರವಿವರಣೆ, ಸಾರಸಂಗ್ರಹ ವ್ಯಾಖ್ಯಾತೃಗಳು ಬ್ರಾಕೆಟ್ಟಿಗೆ ಹೊರಗಿನ ಪಾಠವನ್ನು ಸ್ವೀಕರಿಸಿರುತ್ತಾರೆ. ಸಾರಾಸ್ವಾದಿನಿಯವರು ಎರಡು ಪಾಠವನ್ನೂ ಅನುಮೋದಿಸಿ ಅರ್ಥವನ್ನು ದಯಪಾಲಿಸಿರುತ್ತಾರೆ. ಎರಡು ಪಾಠಕ್ಕೂ ತುಂಬಾ ಅರ್ಥಭೇದವಿಲ್ಲವು. ಸಾರದೀಪಿಕಾಯವರು **ಯಾದಾನುಮಾಮ್, ಅಙ್ಗ, ಅಡಿಯಾವರ್ಕ್ಕು** ಎಂದು ಪದಚ್ಛೇದ ಮಾಡಿದರು; ಇತರರು **ಯಾದಾಮ್, ಅರಙ್ಗರಡಿಯವರ್ಕ್ಕು** ಎಂದು ಪದಚ್ಛೇದ ಮಾಡಿದರು; ಇಷ್ಟುಮಾತ್ರವೇ ವ್ಯತ್ಯಾಸವು. ಮೊದಲು ಸಾರದೀಪಿಕಾ ಪಾಠಪ್ರಕಾರ ಅರ್ಥವು ಹೇಳಲ್ಪಡುತ್ತದೆ:—**ಅಡಿಯವರ್ಕ್ಕು** - ಪ್ರಪನ್ನರಾದ ಸರ್ವೇಶ್ವರನ ಪಾದಸೇವಕರಿಗೆ, **ಮಿನ್ನಿಲೈಮೇನಿ** - ಮಿಂಚಿನ ಹಾಗೆ ಅಸ್ಥಿರವಾದ ಸ್ಥಿತಿಯುಳ್ಳ ನಮ್ಮ ಶರೀರವನ್ನು, **ವಿಡುಮ್ಪಯಣತ್ತು** - ಬಿಡುವ ಪ್ರಯಾಣಕ್ಕೆ ಎಂದರೆ ನಿರ್ಯಾಣಕ್ಕೆ, ಇದರಿಂದ ಮುಂದಿನ ಅಧಿಕಾರವು ಸೂಚಿಸಲ್ಪಟ್ಟಿತು, **ವಿಲಕ್ಕಿಲದೋರ್** - ಪ್ರತಿಬಂಧಕ

ಮಿನ್ನಿಲೇಮೇನಿ ವಿಡುಮ್ಬಯಣತ್ತು ಎಲಕ್ಕಿಲದೋರ್,
ನನ್ನಿಲೈ ಯಾ ನಡು ನಾಡಿ ವಳಿಕ್ಕು ನಡೈ ಪೆರವೇ ॥೨೭॥

ಗಳೊಂದೂ ಇಲ್ಲದ ಅದ್ವಿತೀಯವಾದ, **ನನ್ನಿಲೈಯಾನ** - ಸಮೀಚೀನವಾದ ಸ್ಥಿತಿಯುಳ್ಳ ಎಂದರೆ ಭಗವತ್ಪ್ರಾಪ್ತಿಯನ್ನುಂಟುಮಾಡುವ ಸ್ಥಿತಿಯುಳ್ಳ, **ನಡು ನಾಡಿ ವಳಿಕ್ಕು** - ಮಧ್ಯದಲ್ಲಿರುವ ೧೦೧ನೆಯದಾದ ಸುಷುಮ್ನಾ ನಾಡಿ ರೂಪವಾದ ಮಾರ್ಗಕ್ಕೆ, ಇದಕ್ಕೆ ಬ್ರಹ್ಮನಾಡಿ, ಮೂರ್ಧನ್ಯನಾಡಿ ಮೊದಲಾದ ಹೆಸರುಗಳುಂಟು; **ನಡೈ ಪೆರವೇ** - ಸಂಚಾರವನ್ನು ಹೊಂದುವದಕ್ಕೆ, **ಅಙ್ಗು**-ಪ್ರದೇಶ ಕಾಲ ನಿಮಿತ್ತಗಳಲ್ಲಿ, **ಯಾದಾನುಮಾಮ್** - ಯಾವುವೇ ಆಗಲಿ, ಅದೇ, **ನನ್ನಿಲಮಾವದು** - ಒಳ್ಳೇ ಪ್ರದೇಶವಾಗುತ್ತದೆ; **ನಱ್ಪಗಲಾವದು** - ಒಳ್ಳೇ ದಿನವಾಗುತ್ತದೆ, **ನನ್ನಿಮಿತ್ತಮೆನ್ನಲಾವದು** - ನಿರ್ಯಾಣಕ್ಕೆ **ಒಳ್ಳೇ ನಿಮಿತ್ತ**ವೆಂದು ಹೇಳಲಾಗುತ್ತದೆ; ನಿಮಿತ್ತವೆಂದರೆ ಕಾರಣವಾಗಬಹುದು ಅಥವಾ ಲಗ್ನವಾಗಬಹುದು.

ಇನ್ನು ಮಿಕ್ಕ ವ್ಯಾಖ್ಯಾನ್ಯಗಳ ಪ್ರಕಾರ, **ಅರಙ್ಗರಡಿಯವರ್ಕ್ಕು - ಶ್ರೀ**ರಂಗನಾಥನ ಪಾದಕಮಲವನ್ನಾಶ್ರಯಿಸಿದ ದಾಸರಾದವರಿಗೆ, **ಮಿನ್ನಿಲೈ ಮೇನಿ ವಿಡುಮ್ಬಯಣತ್ತು** - ಮಿಂಚಿನ ಸ್ಥಿತಿಯನ್ನು ಹೊಂದಿರುವ ಶರೀರವನ್ನು ಬಿಡುವ ಪ್ರಯಾಣಕ್ಕೆ, **ಯಾದಾನುಮ್** - ಯಾವ ದೇಶ ಕಾಲ ನಿಮಿತ್ತಗಳು, **ಆಮ್**-ಆಗುವವೋ, ಅದು, **ಎಲಕ್ಕಿಲದೋರ್ ನನ್ನಿಲೈಯಾ ನಡುನಾಡಿವಳಿಕ್ಕು**-ಪ್ರತಿಬಂಧಕಗಳಿಲ್ಲದೆ ಅದ್ವಿತೀಯವಾದ ಒಳ್ಳೇ ಸ್ಥಿತಿಯುಳ್ಳ ಮಧ್ಯದಲ್ಲಿರುವ ಮೂರ್ಧನ್ಯನಾಡಿರೂಪವಾದ ಮಾರ್ಗದಲ್ಲಿ, **ನಡೈ ಪೆರವೇ** - ಸಂಚಾರವನ್ನು ಹೊಂದುವದಕ್ಕಾಗಿ, **ನನ್ನಿಲಮಾವದು** - ಶ್ರೇಷ್ಠವಾದ ಪ್ರದೇಶವಾಗುವದು, ಅಥವಾ, **ನನ್ನಿಲಮಾಮ್ ಅದು** - ಅದೇ ಸರ್ವೋತ್ಕೃಷ್ಟ ಪ್ರದೇಶವಾಗುತ್ತದೆ. ಹೀಗೆಯೇ ಮಿಕ್ಕ ಭಾಗಗಳಿಗೂ ಅನ್ವಯಿಸತಕ್ಕದ್ದು.

ತಾತ್ಪರ್ಯ :—ಮನುಷ್ಯರು ಸಾಧಾರಣವಾಗಿ ಪ್ರಯಾಣ ಬೆಳೆಸುವ ಸಂದರ್ಭದಲ್ಲಿ ಒಳ್ಳೇ ಲಗ್ನ ಮುಹೂರ್ತಾದಿಗಳನ್ನು ನೋಡಿ ಹೊರಡುವದಿರುವಾಗ ಇಂತಹ ಉತ್ಕೃಷ್ಟ ಪ್ರಯಾಣಕ್ಕೆ ಪ್ರಶಸ್ತ ದೇಶ ಕಾಲ ನಿಮಿತ್ತಗಳ ಆವಶ್ಯಕತೆ ಬೇಡವೋ ಎಂದರೆ ಪ್ರಪನ್ನನ ವಿಷಯದಲ್ಲಿ ಸರ್ವೇಶ್ವರನೇ ಸರ್ವವಿಧ ಭರವನ್ನೂ ವಹಿಸಿರುವದರಿಂದ ಈ ಚೇತನನ ಪ್ರಯತ್ನವೇನೂ ಬೇಕಾಗಿರುವದಿಲ್ಲವು. ಸರ್ವೇಶ್ವರನು ಯಾವುದೋ ಒಂದು ಪ್ರದೇಶ, ಕಾಲ ನಿಮಿತ್ತಗಳನ್ನುದ್ದೇಶಿಸಿ ನಿರ್ಯಾಣವನ್ನು

ಏರ್ಪಡಿಸಿರುವಾಗ ಅವುಗಳೇ ಪ್ರಶಸ್ತವಾದವುಗಳೆಂದು ಭಾವಿಸತಕ್ಕದ್ದು. ಪ್ರಶಸ್ತ ದೇಶ ಕಾಲಾದಿಗಳಪೇಕ್ಷೆಯು ಫಲಸಿದ್ಧಿಯಲ್ಲಿ ಸಂದೇಹವಿರುವಾಗ ಫಲಸಿದ್ಧಿಗಾಗಿ ಬೇಕಾದವು. ಸರ್ವೇಶ್ವರನೇ ಸಕಲ ಭರವನ್ನೂ ವಹಿಸಿ ಅನ್ತಿಮ ಸ್ಮೃತಿ ತನ್ನೊಂದಿಗೆ ಸಂಪತ್ತಿ, ಬ್ರಹ್ಮನಾಡೀ ಪ್ರವೇಶ, ಅರ್ಚಿರಾದಿಗತಿ, ಮೋಕ್ಷಪ್ರಾಪ್ತಿ ಎಲ್ಲವನ್ನೂ ತಾನೇ ಮಾಡಿಸಲು ಕಂಕಣಬದ್ಧನಾಗಿರುವದರಿಂದ ಫಲವು ನಿಸ್ಸಂದೇಹವಾಗಿರುರುವಾಗ ಇನ್ನು ಪ್ರಶಸ್ತ ದೇಶ ಕಾಲಾದಿಗಳ ಆವಶ್ಯಕತೆ ಏನು? ಆದುದರಿಂದ ಯಾವುದೂ ಬೇಕಿಲ್ಲವೆಂದು ತಿಳಿಸುತ್ತಾರೆ.

ಆದರೆ ಶಾನ್ತಿಪರ್ವದಲ್ಲಿ ಶ್ರೀ ಭೀಷ್ಮರು ಪ್ರಾಣತ್ಯಾಗ ಮಾಡಿದ ಪ್ರಕರಣದಲ್ಲಿ ಉತ್ತರಾಯಣ ಶುಕ್ಲಪಕ್ಷ ನಿರೀಕ್ಷಣೆ ಮಾಡಿ ದೇಹತ್ಯಾಗ ಮಾಡಿದುದಾಗಿ ತೋರಿಬರುತ್ತದೆ:—

"ಭೀಷ್ಮಸ್ಯ ಕುರುಶಾರ್ದೂಲ ದೇಹೋತ್ಸರ್ಗಂ ಮಹಾತ್ಮನಃ ।
ಪ್ರವೃತ್ತಮಾತ್ರೇ ತ್ವಯನ ಮುತ್ತರೇಣ ದಿವಾಕರೇ ॥
ಶುಕ್ಲಪಕ್ಷಸ್ಯ ಚಾಷ್ಟಮ್ಯಾಂ ಮಾಘಮಾಸಸ್ಯ ಪಾರ್ಥಿವ ।
ಪ್ರಾಜಾಪತ್ಯೇಚ ನಕ್ಷತ್ರೇ ಮಧ್ಯಂ ಪ್ರಾಪ್ತೇ ದಿವಾಕರೇ"

(೪೬. ೨. ೩.)

ಶೃಣುಷ್ವ - ಕೇಳು ಎಂಬ ಕ್ರಿಯಾಪದವು ಹಿಂದೆ ಇರುತ್ತದೆ. ಉತ್ತರಾಯಣ ಮಾಘಮಾಸ ಶುಕ್ಲಾಷ್ಟಮಿ ದಿವಸವನ್ನು ನಿರೀಕ್ಷಣೆ ಮಾಡಿ ದೇಹತ್ಯಾಗವನ್ನು ಮಾಡಿರುವದಾಗಿ ಹೇಳಿರುತ್ತಾರೆ. ಇದು ಹೇಗೆ ಎಂದರೆ, ಭೀಷ್ಮರು ಮಹಾಭಾಗವತಾಗ್ರೇಸರರಾಗಿ ಯೋಗಮಾಹಾತ್ಮ್ಯೆಯಿಂದ ಶರೀರ ವಿಶ್ಲೇಷ ಕಾಲವನ್ನು ಸ್ವೇಚ್ಛಾನುಸಾರವಾಗಿ ನಿಯಮಿಸಿಕೊಳ್ಳುವ ಶಕ್ತಿಯನ್ನು ಶ್ರೀಕೃಷ್ಣ ಕೃಪಾದಿಂದ ಹೊಂದಿದ್ದರಾದ ಪ್ರಯುಕ್ತ, ಅಂತಹ ಒಳ್ಳೇ ಕಾಲವನ್ನೇ ಯದ್ಯಪಿ ನಿರೀಕ್ಷಣೆಯನ್ನೇ ಮಾಡಿದರು. ಆದರೆ ದೇಶ ನಿಮಿತ್ತಗಳ ವಿಷಯದಲ್ಲಿ ಸ್ವಚ್ಛಂದತೆಯು ತೋರಲಿಲ್ಲವು. ಯುದ್ಧರಂಗದಲ್ಲಿ ಶರಶತೈಶ್ಚಿತಃ - ಶರತಲ್ಪ ಮೂಲಕ, ಮರಣವಾಗಿರುತ್ತದೆ. ಶ್ರೀ ಭಾಷ್ಯಕಾರರು ಶ್ರೀ ಭೀಷ್ಮರ ಉತ್ತರಾಯಣ ನಿರೀಕ್ಷಣೆಯ ವಿಷಯದಲ್ಲಿ ಅಪ್ಪಣೆ ಕೊಡಿಸಿರುವದೇನೆಂದರೆ:—"ಭೀಷ್ಮಾದೀನಾಂ ಯೋಗಪ್ರಭಾವಾತ್ ಸ್ವಚ್ಛಂದ ಮರಣಾನಾಂ ಧರ್ಮಪ್ರವರ್ತನಾಯೋತ್ತರಾಯಣ ಪ್ರಾಶಸ್ತ್ಯ ಪ್ರದರ್ಶನಾರ್ಥಸ್ತಥಾನಿಧಾಚಾರಃ" ಈ ಅಭಿಪ್ರಾಯವೇ ಮೇಲೆ ಹೇಳಲ್ಪಟ್ಟಿತು. ಆದರೆ "ದಿವಾಚ ಶುಕ್ಲಪಕ್ಷಶ್ಚ ಉತ್ತರಾಯಣ ಮೇವಚ । ಮುಮೂರ್ಷತಾಂ ಪ್ರಶಸ್ತಾನಿ ವಿಪರೀತಂತು ಗರ್ಹಿತಮ್ ॥" ಎಂದು ಇವುಗಳಲ್ಲಿ ಪ್ರಶಸ್ತಾನಿ ಎಂದು ಹೇಳಲ್ಪಟ್ಟಿದೆಯಲ್ಲಾ, ಎಂದರೆ ಈ

ವಾಕ್ಯವು ಪ್ರಪನ್ನನಲ್ಲದವನನ್ನು ಕುರಿತದ್ದೆಂದು ತಿಳಿಯತಕ್ಕದ್ದು. ಆಗಲಿ, ಗೀತೆಯ ೮ನೆಯ ಅಧ್ಯಾಯದಲ್ಲಿ :—

"ಅಗ್ನಿರ್ಜ್ಯೋತಿರಹಶ್ಶುಕ್ಲಃ ಷಣ್ಮಾಸಾ ಉತ್ತರಾಯಣಂ ।
ತತ್ರಪ್ರಯಾತಾ ಗಚ್ಛನ್ತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥೨೪॥
ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ ।
ತತ್ರ ಚಾನ್ದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ ॥೨೫॥
ಶುಕ್ಲಕೃಷ್ಣ ಗತೀಹ್ಯೇತೇ ಜಗತಶ್ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿ ಮನ್ಯಯಾಽವರ್ತತೇ ಪುನಃ" ॥೨೬॥

ಹಗಲಿನಲ್ಲೂ ಉತ್ತರಾಯಣದಲ್ಲೂ ಶುಕ್ಲಪಕ್ಷದಲ್ಲೂ ಹೋದ ಬ್ರಹ್ಮವಿತ್ತಿಗೆ ಪರಬ್ರಹ್ಮಪ್ರಾಪ್ತಿರೂಪವಾದ ಅಪುನರಾವೃತ್ತಿಯನ್ನೂ ರಾತ್ರಿಯಲ್ಲೂ, ದಕ್ಷಿಣಾಯನದಲ್ಲೂ ಕೃಷ್ಣಪಕ್ಷದಲ್ಲೂ ಹೋದ ಯೋಗಿಗೆ ಪುನಸ್ಸಂಸಾರ ರೂಪವಾದ ಆವೃತ್ತಿಯನ್ನೂ ಹೇಳಿದೆಯಲ್ಲಾ ಎಂದರೆ ಈ ಶ್ಲೋಕಗಳಭಿಪ್ರಾಯವು ಹಾಗಲ್ಲವೆಂದು ತಿಳಿಯತಕ್ಕದ್ದು. ಶುಕ್ಲ ಕೃಷ್ಣ ಗತೀಹ್ಯೇತೇ ಎಂಬುವದರಿಂದ ಆವು ಗತಿ ಎಂದರೆ ಮಾರ್ಗಗಳನ್ನು ಬೋಧಿಸುತ್ತವೆಯೇ ವಿನಾ, ಕಾಲವನ್ನು ಬೋಧಿಸುವದಿಲ್ಲವೆಂಬುವದು, ಗ್ರಂಥದಿಂದಲೇ ತೋರಬರುತ್ತದೆ. ಮತ್ತು ಅಹಃ, ಶುಕ್ಲ, ಉತ್ತರಾಯಣ ಶಬ್ದಗಳು, ಅಗ್ನಿ, ಜ್ಯೋತಿಸ್ಸು ಇವುಗಳೊಂದಿಗೆ ಹೇಳಲ್ಪಟ್ಟಿರುವದರಿಂದ ಅಗ್ನಿಯು ಕಾಲವಲ್ಲದುದರಿಂದ ಇವುಗಳು ಕಾಲವನ್ನು ಬೋಧಿಸಲಾರದೆಂದು ಭಾವಿಸತಕ್ಕದ್ದು. ಆದುದರಿಂದ ಇವುಗಳ ಅಭಿಮಾನ ದೇವತೆಗಳು ತೋರಿಸುವ ಮಾರ್ಗವೆಂದು ತಿಳಿಯತಕ್ಕದ್ದು. ಇದೂ ಅಲ್ಲದೆ ತತ್ರ ಪ್ರಯಾತಾ ಗಚ್ಛಂತಿ ಎಂಬಲ್ಲಿ ತದಾ ಎಂದು ಹೇಳದೆ ತತ್ರ ಎಂದಿರುವದರಿಂದ, ಕಾಲವಲ್ಲದೆ ಮಾರ್ಗಪ್ರದೇಶವೇ ಹೇಳಲ್ಪಟ್ಟತೆಂದು ಭಾವಿಸತಕ್ಕದ್ದು. ಆದರೆ ಯತ್ರ ಕಾಲೇ ತ್ವನಾವೃತ್ತಿಮಾವೃತ್ತಿಂಚೈವ ಯೋಗಿನಃ। ಪ್ರಯಾತಾಯಾಂತಿತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥ ಎಂದು ಕಾಲವನ್ನೇ ನಿರ್ದೇಶಿಸಿ ೨೩ನೆಯ ಶ್ಲೋಕದಲ್ಲಿ ಹೇಳಿ, ಅನಂತರ ಅಹಶ್ಶುಕ್ಲ ಎಂದು ಹೇಳಿರುವದರಿಂದ ಕಾಲವನ್ನಲ್ಲವೇ ಇಲ್ಲಿ ಬೋಧಿಸಿರುವದು ಎಂದಾಕ್ಷೇಪ ಹೊಂದರೆ, ಅರ್ಜುನನು ಈ ಅಧ್ಯಾಯದ ಒಂದು ಎರಡನೆಯ ಶ್ಲೋಕಗಳಲ್ಲಿ ಕೇಳಿರುವ ಏಳು ಪ್ರಶ್ನೆಗಳಲ್ಲೂ ಮರಣಕ್ಕೆ ಯಾವ ಕಾಲವು ಪ್ರಶಸ್ತವೆಂದು ಕೇಳಲಿಲ್ಲವು. ಮರಣಕಾಲದಲ್ಲಿ ಈ ಮೂರು ವಿಧ ಯೋಗಿಗಳಿಂದಲೂ ಹೇಗೆ ತಿಳಿಯಲ್ಪಡುವಿ ? ಎಂಬುವದು ಮಾತ್ರ ಪ್ರಶ್ನೆಯು. ಈ ಪ್ರಶ್ನೆಯಲ್ಲಿ ಮರಣಕಾಲದ ಅನ್ತಿಮಸ್ಮೃತಿಯೂ ಅದರ ಮೇಲೆ ಉಂಟಾಗುವ ಎರಡು ವಿಧ ಗತಿಗಳೂ ಅಂತರ್ಗತವಾದುದರಿಂದ, ಮೊದಲು ಅನ್ತಿಮ ಸ್ಮೃತಿ ವಿಷಯವನ್ನು

ತಿಳಿಸಿ, ಅನಂತರ ಈ ಎರಡು ವಿಧ ಗತಿಗಳನ್ನೂ ಶ್ರೀ ಗೀತಾಚಾರ್ಯರು ಉಪದೇಶಿಸುತ್ತಾರೆ. ಆದುದರಿಂದ ಈ ಶ್ಲೋಕದಲ್ಲಿ ಕಾಲಶಬ್ದದಿಂದ, ಅಹಸ್ಸು ಮೊದಲು ಸಂವತ್ಸರ ಪರ್ಯಂತವಿರುವ ಕಾಲಾಭಿಮಾನ ದೇವತೆಗಳು ತುಂಬಾ ಇರುವದರಿಂದ, ಕಾಲಾಭಿಮಾನ ದೇವತೆಗಳುಳ್ಳ ಮಾರ್ಗಕ್ಕೆ ಉಪಲಕ್ಷಣವಾಗಿ ಹೇಳಲ್ಪಟ್ಟಿತೆಂದು ತಿಳಿಯತಕ್ಕದ್ದು. ಆಗಲಿ, ಹಾಗೆ ಕಾಲವ್ಯತ್ಯಾಸಗಳನ್ನು ಈ ಶ್ಲೋಕಗಳು ಹೇಳದೇ ಇದ್ದ ಪಕ್ಷದಲ್ಲಿ ಕೆಲವು ಯೋಗಿಗಳಿಗೆ ಅಪುನರಾವರ್ತಿಯಿಲ್ಲದ ಮೋಕ್ಷವೂ, ಇನ್ನು ಕೆಲವರಿಗೆ ಆವರ್ತಿಯಿಂದ ಸಂಸಾರವು ಪ್ರಾಪ್ತವಾಗುತ್ತದೆಂದೂ. ವ್ಯತ್ಯಾಸ ಹೇಗೆ ಎಂದರೆ, ಶುಕ್ಲವೆಂದು ಹೇಳಲ್ಪಟ್ಟ ಅರ್ಚಿರಾದಿ ಗತಿಯು ಮೂಲಕ ಬ್ರಹ್ಮವಿತ್ತಾದ ಯೋಗಿಗೆ ಪ್ರಯಾಣವೆಂದೂ, ಇತರ ಪುರುಷಾರ್ಥಗಳನ್ನಪೇಕ್ಷಿಸುವ ಯೋಗಿಗಳಿಗೆ ಕೃಷ್ಣವೆಂದು ಹೇಳಲ್ಪಟ್ಟ ಧೂಮಾದಿಗತಿಯೆಂದೂ ತಿಳಿಯತಕ್ಕದ್ದು. ಇದಕ್ಕಾಗಿಯೇ ೨೪ನೆಯ ಶ್ಲೋಕದಲ್ಲಿ ಬ್ರಹ್ಮವಿದಃ ಎಂಬ ಪ್ರಯೋಗವೂ, ೨೫ನೆಯ ಶ್ಲೋಕದಲ್ಲಿ ಯೋಗಿನಃ ಎಂಬ ಪ್ರಯೋಗವೂ ಇರುತ್ತವೆ. ಈ ಅಭಿಪ್ರಾಯಗಳನ್ನೆಲ್ಲಾ ವಿಶದವಾಗಿ ಶ್ರೀ ಭಾಷ್ಯದಲ್ಲೂ, ತಾತ್ಪರ್ಯಚಂದ್ರಿಕೆಯಲ್ಲೂ ತಿಳಿಯಬಹುದು. ಆದುದರಿಂದ ಶ್ರೀ ದೇಶಿಕರು ಈ ವಿಶಿಷ್ಟವಿಷಯವನ್ನೂ ಪರಿಶೀಲಿಸಿ ನಮಗೆ ಉಪದೇಶಿಸುವ ಮಹಾ ಸುಜ್ಞಾನ ನಿಧಿಯಾಗಿರುವದರಿಂದ, **ಅದೇ ನನ್ನಿಲಂ, ಅದೇ ನಲ್ಪಗಲ್, ಅದೇ ನನ್ನಿಮಿತ್ತಂ** ಎಂದು ನಮಗೆ ಪರಮ ಕೃಪಯಾ ಬೋಧಿಸುತ್ತಾರೆ. ಯಾವ ಪ್ರದೇಶದಲ್ಲಿ, ಯಾವ ಕಾಲದಲ್ಲಿ, ಯಾವ ನಿಮಿತ್ತಗಳಿಂದ ದೇಹತ್ಯಾಗ ಉಂಟಾಯಿತೋ ಅದೇ ಪ್ರಶಸ್ತವಾದ ಪ್ರದೇಶವು ಅದೇ ಪ್ರಶಸ್ತವಾದ ಲಗ್ನವು, ಅದೇ ಪ್ರಾಣತ್ಯಾಗಕ್ಕೆ ಪ್ರಶಸ್ತ ಕಾರಣವೆಂಬ ಭಾವವು, ಏಕೆಂದರೆ ಅವುಗಳಿಂದಲೇ ಸರ್ವೇಶ್ವರನ ಮೂಲಕ ಅಪೇಕ್ಷಿತವಾದ ಮೋಕ್ಷಪ್ರಾಪ್ತಿಯುಂಟಾಗುವದರಿಂದ ಎಂಬ ತಾತ್ಪರ್ಯವು. ಹೀಗೆ ಸರ್ವೇಶ್ವರನ ಸಂಕಲ್ಪವಿರುವುದರಿಂದ ಯಾವುದೊಂದು ಪ್ರತಿಬಂಧಕಗಳೂ **ಆ ನಡುನಾಡಿ ವಳಿಕ್ಕು** ಎಂದರೆ ಬ್ರಹ್ಮನಾಡೀಪ್ರವೇಶರೂಪಮಾರ್ಗಕ್ಕೆ ಇಲ್ಲವೆಂದು ಹೇಳಿರುತ್ತಾರೆ. ಇತರ ನೂರು ನಾಡಿಗಳ ಮೂಲಕ ಪ್ರವೇಶವಾದರೆ ಪ್ರತಿಬಂಧಕವುಂಟೆಂಬುವದು ಇದರಿಂದ ವ್ಯಕ್ತವು. ಹೀಗೆ ಪ್ರತಿಬಂಧಕಗಳಿಲ್ಲದೆ ಮೋಕ್ಷಪ್ರಾಪ್ತಿಯು ಆ ಮಾರ್ಗ ಮೂಲಕ ಉಂಟಾಗುವದರಿಂದ ಅದು, **ನನ್ನಿಲೈಯಾನ ನಡುನಾಡಿವಳಿ**-ಸಮೀಚೀನವಾದ, ಮೂರ್ಧನ್ಯನಾಡಿಯ ಮಾರ್ಗವೆಂದು ಹೇಳಲ್ಪಟ್ಟಿತು. ಆಯುಸ್ಸು ನಿಯತವಾಗಿ ಅದು ಮುಗಿಯಿತೆಂದರೆ, **ಮಿನ್ನಿಲೈಯ** - ಹಾಗೆ **"ಝುಟಿತಿ"** ಒಂದು ಕ್ಷಣದಲ್ಲಿ ಎಲ್ಲವೂ ನಡೆದುಹೋಗುವದರಿಂದ, **ಮಿನ್ನಿಲೈಮೇನಿ ವಿಡುಮ್** ಎಂದು ಪ್ರಯೋಗಿಸಲ್ಪಟ್ಟಿತು. ಇದರಿಂದ ಪ್ರದೇಶ ಕಾಲಾದಿ ಗ್ರಹಣಗಳಿಗೆ ಸಾಧ್ಯವೇ ಇಲ್ಲವೆಂಬ

ಭಾವವು ತೋರಿಬರುತ್ತದೆ. ಅಥವಾ ಮಿನ್ನಿಲೈ ಎಂದು ಬೇರೆ ಪದವಾಗಿ ಭಾವಿಸಿ, ವಿಲಕ್ಕಿಲದೋರ್, ನನ್ನಿಲೈಯಾನ, ಇವೆಲ್ಲಾ ಹೇಗೆ ನಡುನಾಡಿ ವಳಿಕ್ಕು ಎಂಬುವದಕ್ಕೆ ವಿಶೇಷಣವೋ ಹಾಗೆಯೇ ಮಿನ್ನಿಲೈ ಎಂಬುದನ್ನೂ ವಿಶೇಷಣವಾಗಿ ಇಟ್ಟುಕೊಂಡರೆ ಆ ಮೂರ್ಧನ್ಯನಾಡಿಯು ಪರಮಾತ್ಮನ ಪ್ರಭಾವ ದಿಂದ ಮಿಂಚಿನಹಾಗೆ ಪ್ರಕಾಶಿಸುವದರಿಂದ ಮುಮುಕ್ಷಾವಸ್ಥೆಯಲ್ಲಿರುವ ಜೀವನ ನಡುನಾಡೀ ಪ್ರವೇಶಕ್ಕೆ ಅನುಕೂಲಿಸುತ್ತದೆಂಬರ್ಥವು ತೋರಿಬರುತ್ತದೆ. ಈ ಅಭಿಪ್ರಾಯವು "ತದೋಕೋಗ್ರಜ್ವಲನಂ ತತ್ಪ್ರಕಾಶಿತ ದ್ವಾರೋ ವಿದ್ಯಾ ಸಾಮರ್ಥ್ಯಾತ್ತಚ್ಛೇಷಗತ್ಯನುಸ್ಮೃತಿಯೋಗಾಚ್ಚ ಹಾರ್ದಾನುಗೃಹೀತಶ್ಶತಾ ಧಿಕಯಾ" ಎಂಬ (೪. ೨. ೧೬) ಬ್ರಹ್ಮಸೂತ್ರದಿಂದ ತೋರಿಬರುತ್ತದೆ. ಇದ ರರ್ಥವೇನೆಂದರೆ, ಬ್ರಹ್ಮವಿದ್ಯೆಯ ಸಾಮರ್ಥ್ಯದಿಂದ, ಆ ಬ್ರಹ್ಮವಿದ್ಯೆಗೆ ಅಂಗವಾಗಿ ಪ್ರತಿದಿನದಲ್ಲೂ ಅನುಷ್ಠಿಸುವ ಅರ್ಚಿರಾಗಿ ಗತಿಚಿಂತನದಿಂದಲೂ ಸುಪ್ರೀತನಾದ ಹೃದಯಾಂತರ್ವರ್ತಿಯಾದ ಪರಮಪುರುಷನಿಂದನುಗ್ರಹಿಸಲ್ಪಟ್ಟವನಾಗಿ, ತನಗೆ ಸ್ಥಾನವಾದ ಹೃದಯವು ಮೇಲುಭಾಗದಲ್ಲಿ ಪ್ರಕಾಶಿಸುತ್ತದೆ; ಹೀಗೆ ಪ್ರಕಾಶಿಸ ಲ್ಪಟ್ಟ ದ್ವಾರವುಳ್ಳವನಾಗಿ ೧೦೧ನೆಯದಾದ ಸುಷುಮ್ನಾನಾಡಿಯ ಮೂಲಕ ಅರ್ಚಿ ರಾದಿ ಗತಿಯನ್ನು ಹೊಂದುತ್ತಾನೆ. ಹೀಗೆ ಚೇತನನಿಗೆ ಪ್ರಕಾಶಿಸುವದರಿಂದ, ಮಿನ್ನಿಲೈ - ಮಿಂಚಿನ ಪ್ರಕಾಶವ ಹಾಗೆ ಪ್ರಕಾಶವುಳ್ಳ, ನಡುನಾಡಿ ವಳಿ ಎಂದು ಹೇಳಲ್ಪಟ್ಟಿರುತ್ತದೆಂದೂ ಭಾವಿಸಬಹುದು. ಹೀಗೆ ಸ್ವಾಮಿಯ ಅನುಗ್ರಹವು ಯಾವ ಪ್ರದೇಶ ಕಾಲ ನಿಮಿತ್ತಗಳಲ್ಲುಂಟಾಯಿತೋ ಅದೇ ಪ್ರಶಸ್ತ ದೇಶ ಕಾಲ ನಿಮಿತ್ತಗಳೆಂದು ಹೇಳಲ್ಪಟ್ಟಿತು.

ಅವತಾರಿಕೆ. ಹಿಂದೆ ಸರ್ವೇಶ್ವರನೇ ಪರಮ ಕೃಪಯಾ ಹಾರ್ದರೂಪಿ ಯಾಗಿ ಹೃದಯದಲ್ಲಿದ್ದುಕೊಂಡು ಅನ್ತಿಮ ಸ್ಮೃತಿ, ತನ್ನೊಂದಿಗೆ ಸಂಪತ್ತಿ, ಬ್ರಹ್ಮನಾಡೀ ಪ್ರವೇಶ, ಅರ್ಚಿರಾದಿ ಗತಿಗಳನ್ನುಂಟುಮಾಡಿ ಮುಕ್ತಿಯನ್ನು ಈ ಪ್ರಪನ್ನನಿಗೆ ದಯಪಾಲಿಸುವನೆಂದು ಹೇಳಲ್ಪಟ್ಟಿತು. ಈತನ ಶರೀರವು ಅತಿ ಹೇಯವು, ಅದರಲ್ಲಿದ್ದುಕೊಂಡು ಇಷ್ಟೆಲ್ಲಾ ಮಾಡುತ್ತಾನೆಯೇ? ಶಾಸ್ತ್ರಗಳಲ್ಲಿ ಹಾರ್ದನಾಗಿದ್ದು ಚೇತನನನ್ನು ನಿಯಮಿಸುವನೆಂದು ಹೇಳಲ್ಪಟ್ಟಿದೆಯಲ್ಲಾ ಎಂದರೆ ಸೃಷ್ಟಿ ಮೊದಲು ಇದುವರೆಗೂ ಹಾರ್ದನಾಗಿದ್ದರೂ ಕೂಡ ಈ ವಿಧ ಕೃಪೆಮಾಡದೆ ಈಗ ಮಾತ್ರ ಕೃಪೆ ಮಾಡುವನೆಂಬುದನ್ನು ನಂಬಬಹುದೇ? ಅದೂ ಅಲ್ಲದೆ ಸರ್ವೇಶ್ವರನಿಗೆ ಲೀಲಾವಿಭೂತಿಯಲ್ಲಿ ಅತಿ ಪ್ರೇಮವು, ಹೀಗಿರುವಾಗ ಅದಕ್ಕೆ ನ್ಯೂನತೆಯುಂಟಾಗುವ ಹಾಗೆ, ಈತನಿಗೆ ಪರಮ ಭೋಗ್ಯವಾದ ಶರೀರವಿಶ್ಲೇಷ ಮೂಲಕ ಲೀಲಾವಿಭೂತಿಯ ಸಂಬಂಧವನ್ನು ತಪ್ಪಿಸಿಬಿಡುವನೇ? ಇತ್ಯಾದಿ

ದಹರ (ಜಠರ) ಕುಹರೇ ದೇವಸ್ತಿಷ್ಠನ್ನಿಷದ್ವರ ದೀರ್ಘಿಕಾ ।
ನಿಪತಿತ ನಿಜಾಪತ್ಯಾದಿತ್ಸಾವತೀರ್ಣ ಪಿತೃಕ್ರಮಾತ್ ॥

ಶಂಕಾಗಳಿಗೆ ಸಮಾಧಾನವನ್ನು ಹೇಳುವದಕ್ಕಾಗಿ ಮುಂದಿನ ಶ್ಲೋಕವನ್ನನುಗ್ರಹಿಸುತ್ತಾರೆ. ಸರ್ವೇಶ್ವರನು ನಮಗೆ ಪಿತೃಸ್ಥಾನದಲ್ಲಿರುವನು, ನಾವೆಲ್ಲಾ ಅವನ ಪುತ್ರರು. ಈ ಲೀಲಾವಿಭೂತಿಯೂ ಸರ್ವೇಶ್ವರನದಾಗಿದ್ದರೂ ಇದು ಕರ್ಮಾನುಗುಣವಾಗಿ ಉಪಭೋಗವನ್ನು ಕೊಡುವದಾದುದರಿಂದ "ದುಃಖಾಲಯಮಶಾಶ್ವತಂ" ಎಂದು ಹೇಳಿಸಿಕೊಂಡಿರುತ್ತದೆ. ಇನ್ನೊಂದು ವಿಭೂತಿಯಾದ ನಿತ್ಯವಿಭೂತಿಯೂ ಹೀಗೆ ಸರ್ವವೂ ಆತನದೇ. ಅಲ್ಲಿನ ಸುಖಕ್ಕೆ ಇದು ಕೆಸರುಗುಂಡಿಯಲ್ಲಿ ಬಿದ್ದಹಾಗೆ. ಆದುದರಿಂದ ಆ ಮಹತ್ತಾದ ವಿಭೂತಿಯಲ್ಲಿರಲು ಈತನು ಯೋಗ್ಯತೆಯನ್ನು ಸಂಪಾದಿಸಿಕೊಂಡರೆ ಈ ಕೆಸರುಗುಂಡಿಯಿಂದ ತನ್ನ ಮಗುವನ್ನು ತಾನೇ ಎತ್ತಿ ಆ ಉತ್ತಮಪದವನ್ನು ಸೇರಿಸುವನೆಂಬುದರಲ್ಲಿ ಸಂದೇಹವೇನೂ ಇಲ್ಲವು, ಅಸಂಖ್ಯಾಕ ಜೀವರಾಶಿಯಲ್ಲಿ ಒಬ್ಬೊಬ್ಬರು ಮುಕ್ತಿಯನ್ನು ಹೊಂದುವದರಿಂದ ಲೀಲಾವಿಭೂತಿಗೇನೂ ಕುಂದಕವಿಲ್ಲವು. ಈ ಹೇಯಹೃದಯದಲ್ಲಿ ಹಾರ್ದನಾಗಿದ್ದುಕೊಂಡು ಇಷ್ಟೆಲ್ಲಾ ಮಾಡುವದರಿಂದ ಆತನಿಗೆ ಹೇಯಗುಣಸಂಬಂಧವು ಈಷದಪಿ ಇಲ್ಲವು ಎಂಬ ಭಾವವು.

ಅರ್ಥ :—**ದಹರ ಕುಹರೇ** - ಹೃದಯ ರಂಧ್ರದಲ್ಲಿ, **ದಹರಾಕಾಶ** ಶಬ್ದದಿಂದ ಹಾರ್ದಾವತಾರಿ ಪರಮಾತ್ಮನು ಬೋಧಿಸಲ್ಪಟ್ಟನು. ಆದುದರಿಂದ ಅವನಿರುವ ಸ್ಥಳವು **ದಹರ ಕುಹರವು.** ಸಾರಾಸ್ವಾದಿನಿಯವರು, **ಜಠರ ಕುಹರೇ** ಎಂಬ ಪಾಠವನ್ನು ಅಂಗೀಕರಿಸಿರುತ್ತಾರೆ. ಪರಮಾತ್ಮ ವಾಸಸ್ಥಾನವು ಜಠರವಲ್ಲವು, ದಹರವೇ. ಜಠರವು ದೇಹಕ್ಕೆ ಉಪಲಕ್ಷಣವು, ದೇಹದ ದಹರಭಾಗದಲ್ಲಿ ಹೃದಯದಲ್ಲಿರುವವನು ಎಂಬುದೇ ಆಗಲೂ ಅರ್ಥವು, **ತಿಷ್ಠನ್** - ಯಾವಾಗಲೂ ಇರುವವನಾಗಿ, **ದೇವಃ** - ಲೀಲಾರಸವನ್ನನುಭವಿಸುವವನಾದ, **ಪ್ರಭುಃ** - ಸ್ವಾಮಿಯಾದ ಶ್ರಿಯಃಪತಿಯು, **ನಿಷದ್ವರ**....... ....**ಪಿತೃಕ್ರಮಾತ್,** ನಿಷದ್ವರಕೆಸರಿನಿಂದ ತುಂಬಿದ, "ನಿಷದ್ವರಸ್ತು ಜಂಬಾಲಃ" ಎಂದು ಅಮರವಿರುವದರಿಂದ ಇವೆರಡು ಶಬ್ದಗಳು ಕೆಸರಿನ ಹೆಸರುಗಳು. **ದೀರ್ಘಿಕಾ** - ಭಾವಿಯಲ್ಲಿ, **ನಿಪತಿತ** - ಬಿದ್ದ, **ನಿಜಾಪತ್ಯ** - ತನ್ನ ಮಗನ, **ಆದಿತ್ಸಾ** - ಎತ್ತೋಣವೆಂಬಪೇಕ್ಷೆಯಿಂದ, **ಅವತೀರ್ಣ** - ಅವತರಿಸಿದ ಎಂದರೆ ಭಾವಿಯಲ್ಲಿ ಇಳಿದ, **ಪಿತೃಕ್ರಮಾತ್** - ತಂದೆಯ ಕ್ರಮದಿಂದ ಎಂದರೆ ಲೋಕತಂದೆಯೋ

ಧಮನಿ ಮಿಹನಸ್ತಸ್ಮಿನ್ಕಾಲೇ ಸ ಏವ ಶತಾಧಿಕಾ
ಮಕೃತಕ ಪುರ ಪ್ರಸ್ಥಾನಾರ್ಥಂ ಪ್ರವೇಶಯತಿ ಪ್ರಭುಃ ॥೪೫॥

ಪಾದಿಯಲ್ಲಿ, ಅಕೃತಕ ಪುರಪ್ರಸ್ಥಾನಾರ್ಥಂ - ಸೃಷ್ಟಿಸ್ಥಿತಿಲಯಾದಿಗಳಿಗೆ ವಶವಾದ ಈ ಪ್ರಾಕೃತಲೋಕದ ಹಾಗಲ್ಲದೆ ಅಪ್ರಾಕೃತವಾದ ನಿರುಪಾಧಿಕವಾದ ದಿವ್ಯ ವೈಕುಂಠಲೋಕದ ಪ್ರಯಾಣಕ್ಕಾಗಿ, ಇದರಿಂದ ಮುಂದೆ ಹೇಳಲ್ಪಡುವ ಗತಿಚಿಂತನಾಧಿಕಾರಾರ್ಥವು ಸೂಚಿಸಲ್ಪಟ್ಟಿತು, ತಸ್ಮಿನ್ ಕಾಲೇ – ಆ ಶರೀರವಿಶ್ಲೇಷವಾದ ಕಾಲದಲ್ಲೇ, ಅಥವಾ ತಂದೆಯು ಹಾಗೆ ರಕ್ಷಿಸಬೇಕೆಂಬಪೇಕ್ಷೆಯುಂಟಾದ ಕಾಲದಲ್ಲೇ, ಸ ಏವ - ಲೀಲಾ ಪ್ರವೃತ್ತನಾದ ಆತನೇನೇ, ನಃ - ಪ್ರಪನ್ನರಾದ ನಮಗೆ, ಇಹ- ಈ ದೇಹದಲ್ಲೇ, ಶತಾಧಿಕಾಂ ಧಮನಿಂ - ನೂರಕ್ಕಿಂತ ಹೆಚ್ಚಾದ ಎಂದರೆ ನೂರೊಂದನೆಯದಾದ ಮೂರ್ಧನ್ಯ ನಾಡಿಯನ್ನು, ಪ್ರವೇಶಯತಿ - ಪ್ರವೇಶಿಸುವ ಹಾಗೆ ಮಾಡುತ್ತಾನೆ.

ತಾತ್ಪರ್ಯ:—ಸರ್ವೇಶ್ವರನು ಹಾರ್ದಾವತಾರಿಯಾಗಿ ನಮ್ಮ ಹೃದಯಾಕಾಶದಲ್ಲೇ ದಿವ್ಯಮಂಗಳಯುಕ್ತನಾಗಿರುತ್ತಾನೆಂದು ಹೇಳಲ್ಪಟ್ಟಿರುತ್ತದೆ. (೫೬೬ನೆಯ ಪುಟ ನೋಡಿ) "ಅಙ್ಗುಷ್ಠಮಾತ್ರಃ ಪುರುಷೋಽಙ್ಗುಷ್ಠಂಚ ಸಮಾಶ್ರಿತಃ। ಈಶಸ್ಸರ್ವಸ್ಯ ಜಗತಃ ಪ್ರಭುಃ ಪ್ರೀಣಾತಿ ವಿಶ್ವಭುಕ್" "ಅಂಗುಷ್ಠ ಪರಿಮಾಣದ ಹೃದಯವನ್ನು ಆಶ್ರಯಿಸಿರುತ್ತಾನೆ ಸರ್ವೇಶ್ವರನು; ಆದುದರಿಂದಲೇ ಅಂಗುಷ್ಠ ಪರಿಮಾಣರೂಪವನ್ನು ಧರಿಸಿರುತ್ತಾನೆ; ಆತನೇ ಸಮಸ್ತ ಜಗತ್ತಿಗೂ ನಿಯಾಮಕನು, ಸ್ವಾಮಿಯು, ಯಾವ ಕಾರಣದಿಂದ ವಿಶ್ವವನ್ನೆಲ್ಲಾ ತಾನೇ ಅನುಭವಿಸುತ್ತಾನೋ, ಆದುದರಿಂದ ತನಗೇನೇ ಪ್ರಾಣಾದ್ಯಾಹುತಿಯ ಭೋಕ್ತೃತ್ವವಿರುವದರಿಂದ, ಆತನೇ ತೃಪ್ತಿಯನ್ನು ಹೊಂದಲಿ" (ತೈ. ೩೪) ಎಂಬ ಶ್ರುತಿಯು ಇದನ್ನು ಪಪಾದಿಸುತ್ತದೆ ಹಾಗೆಯೇ ಕಠವಲ್ಲಿಯಲ್ಲೂ "ಅಙ್ಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ । ಈಶಾನೋ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ" ಎಂದೂ, "ಅಙ್ಗುಷ್ಠ ಮಾತ್ರಃ ಪುರುಷೋಽನ್ತರಾತ್ಮಾ ಸದಾಜನಾನಾಂ ಹೃದಯೇ ಸನ್ನಿವಿಷ್ಟಃ" ಎಂದೂ ಇರುತ್ತದೆ ಛಾಂದೋಗ್ಯದಲ್ಲೂ "ಅಥ ಯದಿದಮಸ್ಮಿನ್ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ನನ್ತರ ಆಕಾಶಃ" ಈ ಚೇತನನ ಈ ಬ್ರಹ್ಮಪುರವೆಂಬ ದೇಹದಲ್ಲಿ ದಹರ ಶಬ್ದವಾಚ್ಯನಾದ ಹೃದಯಕಮಲವಿದೆಯೆಂದೂ ಆ ದಹರ ಪುಂಡರೀಕವೆಂಬ ಮನೆಯಲ್ಲಿ ದಹರಾಕಾಶ ಶಬ್ದವಾಚ್ಯನಾದ ಪರಮಾತ್ಮನಿರುವ

ನೆಂದೂ ಹೇಳಲ್ಪಟ್ಟಿರುತ್ತದೆ. ಹೀಗೆ ಸದಾ ಚೇತನನಿಗೆ ನಿಯಾಮಕನಾಗಿ ಹೃದಯಕುಹರದಲ್ಲಿರುತ್ತಾನೆಂದು ತಿಳಿಸುವದಕ್ಕಾಗಿ **ದಹರ ಕುಹರೇ ತಿಷ್ಠ** ಎಂಬ ಪ್ರಯೋಗವು. ಹೀಗೆ ನಿಯಾಮಕನಾಗಿ ಏಕೆ ಸರ್ವೇಶ್ವರನು ಎಲ್ಲರ ಹೃದಯದಲ್ಲೂ ಇರುತ್ತಾನೆಂದರೆ, ಆತನು **ದೇವಃ** - ಕ್ರೀಡಾಸಕ್ತನು. ಹಾಗೆ ಇರುವದರಿಂದ ನಾಲ್ಕು ಜನ ಭಕ್ತರನ್ನೂ ಅವರವರ ಇಷ್ಟಾನುಸಾರವಾಗಿರುವ ಪ್ರವೃತ್ತಿಗಳನ್ನುಂಟುಮಾಡುವನು. ಭಕ್ತನು ಈ ನಾಲ್ಕು ಜನರಲ್ಲೂ ಪರಮ ಪ್ರಿಯನಾದುದರಿಂದ ಆತನಿಗೆ ಯುಕ್ತವಾದ ಪ್ರವರ್ತನೆಯನ್ನುಂಟುಮಾಡುವದಕ್ಕಾಗಿಯೂ ಹೃದಯದಲ್ಲಿರುತ್ತಾನೆ. ಪ್ರಪನ್ನನು **"ಜ್ಞಾನೀತ್ವಾತ್ಮೈವ ಮೇಮತಂ"** (ಗೀತಾ) ಎಂದೂ, **"ಪ್ರಿಯೋಹಿ ಜ್ಞಾನಿನೋತ್ಯರ್ಥಂ"** (ಗೀ. ೭. ೧೭) ಎಂದೂ ಹೇಳಿರುವ ಹಾಗೆ, ಆತನು ಇಂತಹ ಹೇಯ ಪ್ರಕೃತಿ ಸಂಬಂಧವನ್ನು ಹೊಂದಿರುವದನ್ನು ಎಂದಿಗೂ ಸಹಿಸನು. ಪ್ರಿಯಪುತ್ರನು ಕೆಸರು ತುಂಬಿದ ಭಾವಿಯಲ್ಲಿ ಬಿದ್ದರೆ ಲೋಕಪಿತಾ ಹೇಗೆ ಸುಮ್ಮನಿರಲಾರನೋ, ಹಾಗೆಯೇ ಈತನೂ ಕೂಡ ಎಂದು ಹೇಳಿರುತ್ತಾರೆ. ಈ ಲೋಕದಲ್ಲಿರುವದು ಭೋಗವಿಭೂತಿಯಾದ ದಿವ್ಯವೈಕುಂಠದಲ್ಲಿ ಪ್ರಾಪ್ತವಾಗುವ ಐಶ್ವರ್ಯಕ್ಕೆ ಕೆಸರುಗುಂಡಿಯಲ್ಲಿ ಬಿದ್ದ ಹಾಗೆಂದು ಹೇಳುತ್ತಾರೆ. ಪ್ರಿಯಪುತ್ರನು ಕೆಸರಿನ ಭಾವಿಯಲ್ಲಿ ಬಿದ್ದರೆ, ತನ್ನ ದೇಹವೂ ಕೆಸರಾದೀತೆಂಬ ಯೋಚನೆಯಿಲ್ಲದೆ ಹೇಗೆ ಒಡನೆ ಧುಮುಕಿ ಮಗುವನ್ನು ಮೇಲಕ್ಕೆ ಎತ್ತುವನೋ, ಹಾಗೆಯೇ ಸರ್ವೇಶ್ವರನೂ ಕೂಡ ಈ ಹೇಯಸಂಸಾರ ದಲ್ಲಿ ಬಿದ್ದಿರುವವರನ್ನು ಮೇಲಕ್ಕೆ ಎತ್ತುವದಕ್ಕೋಸ್ಕರವಾಗಿ ತನ್ನ ನಿರ್ಹೇತುಕ ಕೃಪೆಯಿಂದ ಅವರೊಂದಿಗೇನೇ ಅವರ ಹೇಯಶರೀರದಲ್ಲೇ ವಸಿಸುತ್ತಾನೆ. ಹಾಗೆಯೇ ಶ್ರುತಿಯು **" ಅನಶ್ನ ಅನ್ಯೋ ಅಭಿಚಾಕಶೀತಿ "** ಎಂದು ಹೃದಯಕುಹರದಲ್ಲಿ ನಮ್ಮ ರಕ್ಷಣಾರ್ಥವಾಗಿ ವಸಿಸುತ್ತಾನೆಂದೂ, **"ನತತೋ ವಿಜುಗುಪ್ಸತೇ"** ಜುಗುಪ್ಸೆ ಇಲ್ಲದೆ ಅದೇ ಆ ಸರ್ವೇಶ್ವರನಿಗೆ ಆ ದಹರವೇ **" ಆಯತನಂ ಮಹತ್ "** ಉತ್ಕೃಷ್ಟವಾದ ದೇವಾಲಯವೆಂದು ಹೇಳಿರುತ್ತದೆ. ಹೀಗೆ ಪರಮಾತ್ಮನು ಹೇಯಶರೀರದಲ್ಲಿದ್ದರೆ ಹೇಯಸಂಬಂಧ ಉಂಟಾಗುವದಿಲ್ಲವೇ ? ಕೆಸರಿರುವ ಭಾವಿಯಲ್ಲಿ ಪಿತಾ ಧುಮುಕಿದರೆ ಕೆಸರು ಅಂಟುವದಿಲ್ಲವೋ ? ವಜ್ರವನ್ನು ಕೆಸರಿನಲ್ಲಿಟ್ಟರೆ, ಕೆಸರು ಅದಕ್ಕೆ ಅಂಟುವದಿಲ್ಲವೋ ? ಹಾಗೆಯೇ ಸರ್ವೇಶ್ವರನೂ ಅಲ್ಲವೋ ? ಎಂದರೆ ಪದ್ಮಪತ್ರವು ಜಲದಲ್ಲಿದ್ದರೂ ಹೇಗೆ ಅದಕ್ಕೆ ನೀರು ಅಂಟುವದಿಲ್ಲವೋ ಹಾಗೆಯೇ ಎಂದು ಭಾವಿಸತಕ್ಕದ್ದು. ಹೀಗೆ ದೋಷಯುಕ್ತಸ್ಥಾನದಲ್ಲಿ ಸರ್ವೇಶ್ವರನಿದ್ದರೂ ಅಲ್ಲಿನ ದೋಷಗಳಂಟುವ ದಿಲ್ಲವೆಂದು **"ನ ಸ್ಥಾನತೋಽಪಿ ಪರಸ್ಯ"** (೩. ೨. ೧೧) ಎಂಬ ಸೂತ್ರದಲ್ಲಿ ಉಪ

ಪಾದಿಸಲ್ಪಟ್ಟಿರುತ್ತದೆ. "ಅಪಹತ ಪಾಪ್ಮಾ" "ನಿರವದ್ಯಂ ನಿರಂಜನಂ" ಎಂಬ ಶ್ರುತಿಗಳೂ, "ಪರಃ ಪರಾಣಾಂ ಸಕಲಾ ನ ಯತ್ರ ಕ್ಲೇಶಾದಯಸ್ಸನ್ತಿ ಪರಾವರೇಶೇ" ಎಂಬ ವಿಷ್ಣು ಪುರಾಣ ಶ್ಲೋಕವೂ ಸಹ, ಪರಬ್ರಹ್ಮನು ಅಂತರ್ಯಾಮಿಯಾಗಿ ಎಲ್ಲಾದರಲ್ಲೂ ಇದ್ದರೂ "ನ ದೋಷಗನ್ಧಸ್ಸಮ್ಭವತಿ"- ದೋಷಗಂಧವುಂಟಾಗುವದಿಲ್ಲವು; ಹಾಗಾದರೆ ಮತ್ತೇನುಂಟಾಗುತ್ತದೆ ಎಂದರೆ:- "ಸರ್ವ ನಿಯಮನ ರೂಪ ಲೀಲಾರಸ ಏವ" - ಸಮಸ್ತರನ್ನೂ ನಿಯಮಿಸುವ ಲೀಲಾರಸ ಮಾತ್ರವೇ ಆತನಿಗುಂಟಾಗುತ್ತದೆ.

ಸರ್ವೇಶ್ವರನು ಹೇಗೆ ಕೆಸರಿನ ಕೂಪ ಸಂಬಂಧವಿದ್ದರೂ ಕೆಸರು ಅಂಟದ ಹಾಗೆ ಇರುತ್ತಾನೋ, ಹಾಗೆಯೇ ಈ ಮನುಷ್ಯನೂ ಕೂಡ ಈ ಸಂಸಾರವೆಂಬುವ ಕೆಸರಿನ ಕೂಪದಲ್ಲಿ ಬಿದ್ದರೂ ಕೆಸರು ಅಂಟದ ಹಾಗೆ ಮಾಡಿಕೊಳ್ಳಬೇಕು. ಅಂಟುವದಕ್ಕಾಗಲಿ ಅಂಟದೇ ಇರುವದಕ್ಕಾಗಲಿ ಮನಸ್ಸೇ ಕಾರಣವು. ಆದರಿಂದಲೇ "ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ । ಬಂಧಾಯ ವಿಷಯಾಸಙ್ಗಿ ಮುಕ್ತ್ಯೈ ನಿರ್ವಿಷಯಂ ಮನಃ" ಮನಸ್ಸು ವಿಷಯಾಸಕ್ತವಾದರೆ ಕೆಸರಂಟುತ್ತದೆ, ಹಾಗೆ ವಿಷಯಾಸಕ್ತಿಯಿಲ್ಲದಿದ್ದರೆ ಕೆಸರು ಅಂಟುವದಿಲ್ಲ. ಹಾಗಿದ್ದುಕೊಂಡು ತನ್ನ ಚರಣಾರವಿಂದವನ್ನಾಶ್ರಯಿಸಿದವನನ್ನು ಹಿಡಿದು ಎತ್ತುವದಕ್ಕಾಗಿಯೂ ಪ್ರಪನ್ನನ ಹೃದಯದಲ್ಲಿದ್ದಾನೆಂದು ಭಾವಿಸತಕ್ಕದ್ದು ಎಂದು ಹೇಳಿರುತ್ತದೆ. ಹೀಗೆ "ಸಂಸಾರ ಕೂಪ ಪತಿತಂ ವಿಷಯೈರ್ಮುಷಿತೇಕ್ಷಣಮ್ । ಗ್ರಸ್ತಂ ಕಾಲಾಹಿ ನಾತ್ಮಾನಂ ಕೋಽನ್ಯಸ್ತ್ರಾತು ಮಧೀಶ್ವರಃ" (ಭಾಗ. ೧೧. ೯. ೪೨) ಚೇತನನು ಹೀಗೆ ಸಂಸಾರವೆಂಬ ಕೆಸರು ಭಾವಿಯಲ್ಲಿ ಬಿದ್ದಿದ್ದಾನೆ; ಇಂದ್ರಿಯೋಪಭೋಗಗಳಿಗೆ ಶಿಕ್ಕಿ ಕಣ್ಣು ಮುಚ್ಚಿಹೋಗಿ ಅಂಧನಾಗಿದ್ದಾನೆ; ಹೀಗಿರುವಾಗ ಕಾಲಸರ್ಪದಿಂದ ಕಚ್ಚಲ್ಪಟ್ಟಿರುತ್ತಾನೆ; ಇಂತಹ ದುಸ್ಥಿತಿಯಲ್ಲಿ ಈ ಹಾರ್ದಾವತಾರನಾದ ಸರ್ವೇಶ್ವರನು ರಕ್ಷಿಸದಿದ್ದರೆ ಇನ್ನು ಯಾರು ತಾನೇ ರಕ್ಷಕರಿದ್ದಾರೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಸಙ್ಕಲ್ಪಸೂರ್ಯೋದಯದಲ್ಲೂ. ದುರ್ಲಂಘೇ ದುಃಖಸಿಂಧೌ ದುರನುಭವ ಮಹಾವ್ಯಾಧಿ ಭೇದೋತ್ತರಂಗೇ । ಸಮ್ಯಗ್ಮಗ್ನಾನ್ ವೀಕ್ಷ್ಯಜೀವಾನ್ ಸಹಜ ಕರುಣಯಾ ಪ್ರೇರಿತಾ ಲೋಕಮಾತುಃ । ಕೂಪಾನ್ತರ್ಮಗ್ನಪುತ್ರಂ ಪತಿತಮನುಪತನ್ಮಾತೃವಲ್ಲೋಕಮೇತಂ । ಎಂದು ಹೇಳಿರುತ್ತದೆ. ದಾಟಲಸಾಧ್ಯವಾದುದು ಒಂದು ದುಃಖಸಾಗರವು; ಅದರಲ್ಲಿ ಜೀವರುಗಳು ಅನುಭವಿಸುವ ವ್ಯಾಧಿ ಭೇದಗಳೇ ಅದರ ತರಂಗಗಳು, ಇಂತಹ ಸಮುದ್ರದಲ್ಲಿ ಮುಳುಗಿಹೋಗಿರುವ ಜೀವರಾಶಿಗಳನ್ನು ಕಂಡು, ಲೋಕಮಾತೆಯಾದ ಲಕ್ಷ್ಮಿಯು ಕಾರುಣ್ಯದಿಂದ ಪ್ರೇರಿತ

ನಾಗಿ, ಒಂದು ಭಾವಿಯೊಳಗೆ ಬಿದ್ದ ಮುಗ್ಧನಾದ ಪುತ್ರನನ್ನು ಹಿಂಬಾಲಿಸಿ ಬೀಳುವ ತಾಯಿಯ ಹಾಗೆ, ಎಂದು ಹೇಳಿರುತ್ತದೆ. ಈ ಪ್ರಕೃತ ವ್ಯಾಖ್ಯಾನ ಶ್ಲೋಕದಲ್ಲಿ **ಪಿತುಃ ಕೃಪಣಾತ್** ಎಂಬುದರಿಂದ ಮಗನು ಬಿದ್ದುದನ್ನು ಕಂಡ ಪಿತಾವಿನ ಹಾಗೆ ಎಂದು ಹೇಳಲ್ಪಟ್ಟಿರುತ್ತದೆ.

ಆದರೆ ಹೀಗೆ ವಿಷಯೋಪಭೋಗಗಳಿಂದ ಕಣ್ಣು ಕಾಣದೆ ಬಿದ್ದವರು ಅಸಂಖ್ಯಾಕರಾದ ಚೇತನರು. ಆದರೆ ಕೆಲವು ಜನ್ಮಗಳಲ್ಲಿ ದೇವಮನುಷ್ಯಾದಿ ರೂಪದಲ್ಲಿ ಜ್ಞಾನವನ್ನೂ ದಯಪಾಲಿಸುವದರಿಂದ ಅಂತವರಾಗಲಿ ತನ್ನನ್ನು ಕಣ್ಣು ಬಿಟ್ಟವಲೋಕಿಸಿ ಚರಣಾರವಿಂದವನ್ನು ಆಶ್ರಯಿಸಿದರೆ ರಕ್ಷಿಸಬೇಕೆಂದೇ ಕಾದು ಹೃದಯಗುಹೆಯಲ್ಲಿರುವನು. ಗೀತೆಯಲ್ಲಿ ಮೂರನೆಯ ಅಧ್ಯಾಯದಲ್ಲಿ **"ನಾನವಾಪ್ತ ಮವಾಪ್ತವ್ಯಂ ವರ್ತಯೇವ ಚ ಕರ್ಮಣಿ"** ತಾನು ಅವಾಪ್ತ ಸಮಸ್ತ ಕಾಮನಾಗಿ ತನಗೆ ಬೇಕಾದುದು ಯಾವುದೂ ಇಲ್ಲದಿದ್ದರೂ ತಾನು ಯಾವಾಗಲೂ ಲೋಕರಕ್ಷಣಾರ್ಥರೂಪ ಕರ್ಮದಲ್ಲೇ ಇರುತ್ತೇನೆಂದು ಹೇಳಿಕೊಂಡಿರುತ್ತಾನೆ. ಹಾಗೆ ಚೇತನ ರಕ್ಷಣಕ್ಕಾಗಿಯೇ ಹಾರ್ದಾವತಾರಿಯಾಗಿದ್ದಾನೆಂದು ಭಾವಿಸತಕ್ಕದ್ದು. ಆದರೆ ಅನೇಕರು ಅಂತಹ ಕೃಪಾಸಾಗರನ ಸುಸಂಕಲ್ಪವನ್ನು ಪಯೋಗಿಸಿಕೊಳ್ಳುವದಿಲ್ಲವು.

ಆದರೆ ಭರನ್ಯಾಸ ಮಾಡಿದವರು ಯಾವಾಗ ಪ್ರಾಪ್ತರಾದರೋ ಆಗ ತನ್ನ ಸುಸಂಕಲ್ಪಕ್ಕೆ ಅವಕಾಶ ದೊರೆಯಿತೆಂಬ ಸಂತೋಷದಿಂದ, **ಸ ಏವ** - ತಾನೇ, **ತಸ್ಮಿನ್ ಕಾಲೇ**-ಆ ಸುಸಮಯದಲ್ಲೇ ಜ್ಞಾನಾವಿರ್ಭಾವನ ಮೂಲಕ **ಶತಾಧಿಕಾಂ ಧಮನಿಂ** - ನೂರೊಂದನೆಯ. ನಾಡಿಯು ಪ್ರಕಾಶಿಸುವ ಹಾಗೆ ಮಾಡಿ ಅದನ್ನು **ಪ್ರವೇಶಯತಿ ಪ್ರಭುಃ**-ಈ ಪ್ರಪನ್ನನು ಪ್ರವೇಶಿಸುವ ಹಾಗೆ ಈ ಸರ್ವಶಕ್ತನು ಮಾಡುವನು ಎಂದು ಹೇಳುತ್ತಾರೆ. ಲೀಲೆಯಲ್ಲಿ ಈ ಸರ್ವೇಶ್ವರನು ಪ್ರವೃತ್ತನಾಗಿದ್ದರೂ, ಅಂತಹ ಲೀಲಾಸಕ್ತನೇ ಸ್ವಾಮಿಯಾಗಿ ರಕ್ಷಣದೀಕ್ಷೆಯನ್ನೂ ವಹಿಸಿರುವದರಿಂದ ರಕ್ಷಿಸುವದರಲ್ಲಿ ಸಂದೇಹವಿಲ್ಲವೆಂದು ತೋರಿಸುವದಕ್ಕಾಗಿ **"ಸ ಏವ"** ಎಂಬ ಪ್ರಯೋಗವು. ಈ ಲೀಲಾವಿಭೂತಿ ಮಾತ್ರವೇ ಸೃಷ್ಟಿಪ್ರಳಯಾದಿಗಳಿಗೆ ಗುರಿಯಾಗಿರುವದರಿಂದ ಈ ಚೇತನನು ಈ ಲೀಲಾವಿಭೂತಿಗೆ ಸೇರಿ ಈ **ಬ್ರಹ್ಮಪುರಿ** ಎಂಬ ದೇಹದಲ್ಲಿರುವದು ಕೃತಕಪುರವಾಸವು, ಈ ಹೇಯವಾದ ಪ್ರಕೃತಿ ಸಂಬಂಧವನ್ನು ತೊರೆದು ಹೇಯಸಂಬಂಧವಿಲ್ಲದೆ ಸೃಷ್ಟ್ಯಾದಿಗಳಿಗೆ ಸಿಕ್ಕದೇ ಇರುವ ನಿತ್ಯವಿಭೂತಿಯು ದಿವ್ಯವೈಕುಂಠಕ್ಕೆ ಹೋಗುವದು **ಅಕೃತಕ ಪುರ ಪ್ರಸ್ಥಾನ**ವೆಂದು ಹೇಳಲ್ಪಟ್ಟಿತು. ಹೀಗೆ ದಿವ್ಯ ವೈಕುಂಠಕ್ಕೆ ತೆರಳುವನು ಎಂಬುದರಿಂದ ಮುಂದಿನ ಅಧಿಕಾರದಲ್ಲಿ ಅರ್ಚಿರಾದಿ ಗತಿಯು ಉಪಪಾದಿಸಲ್ಪಡು

ತ್ತದೆಂಬ ಭಾವವೂ ತೋರಿಬರುತ್ತದೆ. ದೇಹವನ್ನು ಬಿಟ್ಟು ಹೇಗೆ ಅರ್ಚಿರಾದಿ ಗತಿಯನ್ನವಲಂಬಿಸುವನು ಎಂಬುದು ಸೂತ್ರದಲ್ಲಿ ರಶ್ಮ್ಯನುಸಾರೀ ಎಂಬ ಬ್ರಹ್ಮ ಸೂತ್ರಪ್ರಕಾರ ಸೂರ್ಯರಶ್ಮಿಗಳನ್ನವಲಂಬಿಸಿ ಹೋಗುವನೆಂದು ಹೇಳಲ್ಪಟ್ಟಿರುತ್ತದೆ. ಆದರೆ ರಾತ್ರಿಯಲ್ಲಾಗಲಿ, ದುರ್ದಿನದಲ್ಲಾಗಲಿ ಈ ಪ್ರಪನ್ನನಿಗೆ ಮರಣವಾದರೂ ಮೋಕ್ಷಪ್ರಾಪ್ತಿಯಲ್ಲೇನೂ ಸಂದೇಹವಿಲ್ಲವೆಂದು ಹೇಳಿದೆಯಲ್ಲಾ, ಆಗ ಹೇಗೆ ಎಂದರೆ, ಆಗಲೂ ಸೂರ್ಯನ ರಶ್ಮಿಗಳು ಉಂಟೆಂಬುದು ರಾತ್ರಿಯಲ್ಲೂ ಶೆಖೆಯಾಗುವದರಿಂದ ತಿಳಿಯಬಹುದು ಆದರೆ ಆಗ ಕಾಂತಿ ಇಲ್ಲವು ದುರ್ದಿನದಲ್ಲೂ ಆಕಾಶವು ಮೇಘಾವೃತವಾಗಿರುವದರಿಂದ ಸೂರ್ಯರಶ್ಮಿಗೆ ತೇಜಸ್ಸಿಲ್ಲವು. ಆದರೆ ಆಗಲೂ ಸೂರ್ಯರಶ್ಮಿಗಳುಂಟೆಂದೇ ನಂಬತಕ್ಕದ್ದು ಹೇಗೋ ಹಾಗೆ ಎಂಬ ಭಾವವು.

ಮುಂದಿನ ಅಧಿಕಾರದಲ್ಲಿ ಅರ್ಚಿರಾದಿ ಗತಿಯು ಚರ್ಚಿಸಲ್ಪಡುತ್ತದೆ.

ಇಂತು

ಶ್ರೀಮದ್ರಹಸ್ಯತ್ರಯಸಾರದ

ಇಪ್ಪತ್ತನೆಯ ನಿರ್ಯಾಣಾಧಿಕಾರಕ್ಕೆ

ತಿರುನಾರಾಯಣಪುರಂ ವಿಜಯರಾಘವಶರ್ಮನ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ.

ನಮ್ಮಲ್ಲಿ ದೊರೆಯುವ ಗ್ರಂಥಗಳು

೧ ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ

ಶ್ರೀಮನ್ನಿಗಮಾಂತ ಮಹಾದೇಶಿಕರವರ

೧. ಅಭೀತಿಸ್ತವವೆಂಬ ಶ್ರೀರಂಗನಾಥಸ್ತೋತ್ರವು	೦	೧೨	೦
೨. ಶ್ರೀಸ್ತುತಿ ಎಂಬ ಶ್ರೀ ರಂಗನಾಯಕೀಸ್ತೋತ್ರವು	೦	೧೨	೦
೩. ಶ್ರೀಮದ್ರಹಸ್ಯತ್ರಯಸಾರವು :—			
(೧) ಗುರುಪರಂಪರಾಸಾರವು	೦	೧೨	೦
(೨) ಉಪೋದ್ಘಾತಾಧಿಕಾರವು ಮತ್ತು ಸಾರನಿಷ್ಕರ್ಷಾಧಿಕಾರವು	೦	೯	೦
(೩) ಪ್ರಧಾನ ಪ್ರತಿತಂತ್ರಾಧಿಕಾರವು ಮತ್ತು ಅರ್ಥಪಂಚಕಾಧಿಕಾರವು	೦	೧೨	೦
(೪) ತತ್ವತ್ರಯಾಧಿಕಾರವು	೦	೧೨	೦
(೫) ಪರದೇವತಾ ಪಾರಮಾರ್ಥ್ಯಾಧಿಕಾರವು ಮತ್ತು ಮುಮುಕ್ಷುತ್ವಾಧಿಕಾರವು	೦	೧೦	೦
(೬) ಅಧಿಕಾರಿವಿಭಾಗಾಧಿಕಾರವು ಉಪಾಯವಿಭಾಗಾಧಿಕಾರವು ಮತ್ತು ಪ್ರಪತ್ತಿಯೋಗ್ಯಾಧಿಕಾರವು	೦	೯	೦
(೭) ಪರಿಕರವಿಭಾಗಾಧಿಕಾರವು ಮತ್ತು ಸಾಙ್ಗಪ್ರಪದನಾಧಿಕಾರವು	೦	೧೧	೦
(೮) ಕೃತಕೃತ್ಯಾಧಿಕಾರವು, ಸ್ವನಿಷ್ಠಾಭಿಜ್ಞಾನಾಧಿಕಾರವು ಮತ್ತು ಉತ್ತರಕೃತ್ಯಾಧಿಕಾರವು	೦	೧೨	೦
(೯) ಪುರುಷಾರ್ಥಕಾಷ್ಠಾಧಿಕಾರವು, ಶಾಸ್ತ್ರೀಯನಿಯಮನಾಧಿಕಾರವು ಮತ್ತು ಅಪರಾಧಪರಿಹಾರಾಧಿಕಾರವು	೧	೦	೦
(೧೦) ಸ್ಥಾನವಿಶೇಷಾಧಿಕಾರವು, ನಿರ್ಯಾಣಾಧಿಕಾರವು	೦	೧೦	೦
(೧೧) ಗತಿಚಿಂತನಾಧಿಕಾರವು ಪರಿಪೂರ್ಣಬ್ರಹ್ಮಾನುಭವಾಧಿಕಾರವು	೦	೧೨	೦
(೧೨) ಸಿದ್ಧೋಪಾಯಶೋಧನಾಧಿಕಾರವು	ಅಚ್ಚಾಗುತ್ತಲಿದೆ.		
೪. ಶ್ರೀ ಯಾಮುನೇಯರವರ ಚತುಶ್ಲೋಕೀ	೦	೮	೦
೫. ಶ್ರೀ ವಿಷ್ಣುಸಹಸ್ರನಾಮಾವಳಿ (ಅರ್ಥ ಸಹಿತ)	೦	೧೨	೦

ಸಿ. ಯಂ. ವಿಜಯರಾಘವಾಚಾರ್,

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್,

ಬಸವನಗುಡಿ, ಬೆಂಗಳೂರು ಸಿಟಿ.

ಬೆಂಗಳೂರು ಸಿಟಿ ಅ[illegible] [illegible]ಲ್ಲಿರುವ ಗಿರಿಜಾ ವಿಲಾಸ ಪ್ರೆಸ್ಸಿನಲ್ಲಿ ಪ್ರೊಪ್ರೈಟರಾದ ಕೆ. ವೆಂಕಟರಮಣಯ್ಯನವರಿಂದ ಮುದ್ರಿಸಲ್ಪಟ್ಟಿತು.